# ಪರಿವಿಡಿ

ಅಧ್ಯಕ್ಷರ ಮಾತು
ಪ್ರಸ್ತಾವನೆ

## ರಮ್ಯ ಕಥೆಗಳು

1. ಮುತುಗದ ಎಲೆ ಗೋತಾಯಿ 01
2. ಏಡಿಕುಮಾರನ ಕಥೆ 09
3. ಬಡ ಹುಡುಗಿಯ ಕಥೆ 22
4. ಜಂಬೂರು ನಾಗೇಗೌಡರು 28
5. ಗುಲಗಂಜಿ ಮಾದೇವಿ 39
6. ತಾಯಿಯ ಮಾತು 48
7. ನಾಗೇಂದ್ರ 49
8. ದೊರೆ ಕಥೆ 56
9. ಮಾಡಿದ್ದುಣ್ಣೋ ಮಾರಾಯ 63
10. ಅನ್ನದಾನದ ಫಲ 65
11. ಸಿರಿತನ ಬಡತನ 73
12. ಕಾಲಬಂದಾಗ ಬರೋಣ 79
13. ಬ್ರಹ್ಮಗಂಟು 82
14. ಅನಾಥ ಹೆಣ್ಣು 83
15. ಅಣ್ಣತಂಗಿ 86
16. ಮೂರುಜನ ಮುಂಡೇರು 89
17. ಹೆಂಡತಿಯ ಮಿಂಡ 95

## ಅತಿ ಮಾನುಷ ಕಥೆಗಳು

18. ಮರಗೋಟಿ 98
19. ಅಣ್ಣಂದಿರನ್ನು ಸಾಯಿಸಿದ ತಂಗಿ 113
20. ಗೌಡನ ಮಗ 115
21. ಸತ್ತ ಗಂಡನನ್ನು ಬದುಕಿಸಿಕೊಂಡಿದ್ದು 122
22. ಮಳೆ ದೇವೇಂದ್ರ 128
23. ಅದೃಷ್ಟದ ಆಟ 132

24. ಹೆಣ್ಣು ಹುಡುಕಲು ಹೋದದ್ದು 135
25. ಸತ್ತ ರಾಜಕುಮಾರನ ಕಥೆ 137
26. ಈ ಹೆಣ್ಣು ಯಾರಿಗಾಗಬೇಕು ? 139
27. ಮಗನನ್ನು ಕೊಂದವಳು 140
28. ಘನ ಪುಣ್ಯವತಿ 146

## ಬುದ್ಧಿವಂತಿಕೆ ಕಥೆಗಳು

29. ಜಾಣ ಸೊಸೆ 155
30. ಮನದಾಗಲ ಗುಟ್ಟ ಮಡದಿಗೆ ಹೇಳಬೇಡ 159
31. ಅವಳ ಗಂಡ 161
32. ಮೂರು ಕೋಟಿ ಸುಳ್ಳು ಹೇಳುವವನ ಕಥೆ 165
33. ಮುದ್ದೇಗೌಡನ ಮಗ 168
34. ಎಡವಟ್ಟ 175
35. ದಡ್ಡನ ಕಥೆ 177
36. ಗಂಡ ಹೆಂಡತಿ 184
37. ಚಾಲೋಕು ಹುಡುಗಿ 187

## ಪ್ರಾಣಿ ಪಕ್ಷಿ ಕಥೆ

38. ಆಮೆ ಕೊಕ್ಕರೆ 188

## ಹಾಸ್ಯ ಕಥೆಗಳು

39. ಪೂಜಾರಿ ಪುಟ್ಟಕ್ಕ 190
40. ಮೂಗಂಡುಗ ಎಳ್ಳಿನ ಕಥೆ 194
41. ಕುಟುಕಪ್ಪ ಲೊಟಕಪ್ಪನ ಕಥೆ 196
42. ದಡ್ಡ ಹುಡುಗಿ 198
43. ದಾಸಯ್ಯ 199
44. ಮುದುಕ ಯಜಮಾನನ ಚಪಲ 200
45. ಪಿಂಪಿಸ್ಗ 203
46. ಕಿವುಡರ ಕಥೆ 206
47. ಮೂರು ಜನ ಹೆಂಡರು 206
48. ಎಲ್ಲರೂ ಕಿವುಡರು 207
49. ಭಗವಂತ 209

## ಒಗಟು ಕಥೆಗಳು


| | | |
|---|---|---|
| 50. | ಉಪಾಯ | 213 |
| 51. | ಹೆಂಡತಿಯ ಒಗಟು | 215 |
| 52. | ತವರು ಮನೆಯ ಆಸೆ | 216 |
| 53. | ಹರಿಗೋಲು ಕಥೆ | 217 |


## ಐತಿಹ್ಯ ಕಥೆ


| | | |
|---|---|---|
| 54. | ಶೆಟವಿ ಕಥೆ | 219 |


## ಪೌರಾಣಿಕ ಕಥೆ


| | | |
|---|---|---|
| 55. | ಮೈದಾಳ ರಾಮಯ್ಯ | 222 |


## ಚಾರಿತ್ರಿಕ ಕಥೆ


| | | |
|---|---|---|
| 56. | ಹಾರುವರಿಗೆಲ್ಲ ಬರೆ | 239 |


## ಅನುಬಂಧ


| | | |
|---|---|---|
| | ಅರ್ಥಕೋಶ | 240 |

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ, ಭಾಷೆ, ಕಲೆ, ವಿಜ್ಞಾನ, ಆಚರಣೆ, ಆರಾಧನೆ, ಆಹಾರವಿಹಾರ, ವೇಷಭೂಷಣ, ಕಸಬು, ಐತಿಹ್ಯ, ಪುರಾಣ, ಸಂಸ್ಕೃತಿ, ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿದೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಆನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸುಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್.ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ ' ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ'ವನ್ನು ಪ್ರಾರಂಭಿಸಿದರು. ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ 'ಜಾನಪದ ಸಿರಿಭುವನ'ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು, ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು.

ಎಚ್. ಎಲ್. ನಾಗೇಗೌಡರ ಜಾನಪದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆಯೂ ಒಂದು. ತ್ರೈವಾರ್ಷಿಕ ಜಾನಪದ ಯೋಜನೆಯ ಪುಸ್ತಕ ಮಾಲೆಯ ನಾಲ್ಕನೆಯ ಕಸುಮವಾಗಿ 'ಕನ್ನಡ ಜನಪದ ಕಥೆಗಳು' ಗ್ರಂಥ ಪ್ರಕಟವಾಗುತ್ತಿದೆ.

ಪ್ರಸ್ತುತ ಗಂಥವನ್ನು ಪ್ರೊ. ಡಿ. ಲಿಂಗಯ್ಯನವರು ಎಂದಿನ ಮುತುವರ್ಜಿಯಿಂದ ಸಂಪಾದಿಸಿದ್ದಾರೆ. ಓದುಗರಿಗೆ ಅನುಕೂಲವಾಗುವಂತೆ ಪ್ರಸ್ತಾವನೆ ಬರೆದು, ಟಿಪ್ಪಣಿ ಒದಗಿಸಿ, ಅರ್ಥಕೋಶ ತಯಾರಿಸಿಕೊಟ್ಟಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಜಾನಪದ ಪರಿಷತ್ತಿನ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಪುಸ್ತಕ ಪ್ರಕಟಣೆಗೆ ನೆರವಾದ ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದಗಳು.

ಕನ್ನಡ ಜನಪದ ಸಾಹಾತ್ಯಾಭಿಮಾನಿಗಳು ಈ ಪುಸ್ತಕವನ್ನು ಸ್ವಾಗತಿಸಿ, ಸದುಪಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿಸುತ್ತೇನೆ.

**ಬೆಂಗಳೂರು**
**೧೪-೦೯-೨೦೦೭**

**ಜಿ. ನಾರಾಯಣ**
ಅಧ್ಯಕ್ಷ
ಕರ್ನಾಟಕ ಜಾನಪದ ಪರಿಷತ್ತು

# ಪ್ರಸ್ತಾವನೆ

೧

ಜನಪದ ಗೀತೆ ಮೊದಲು ಹುಟ್ಟಿತೋ ಅಥವಾ ಜನಪದ ಕಥೆ ಮೊದಲು ಹುಟ್ಟಿತೋ ಎಂದು ಪ್ರಶ್ನಿಸಿದರೆ ಉತ್ತರಿಸುವುದು ಕಷ್ಟ. ಆದರೆ ಊಹಿಸಬಹುದು. ಗೀತೆ ಹುಟ್ಟಲು, ಗುನುಗಿಕೊಳ್ಳಲು ಒಬ್ಬನೇ ಸಾಕು. ಕೇಳುವುದಕ್ಕೆ ಯಾರಿಲ್ಲದಿದ್ದರೂ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳಬಹುದು. ತನ್ನಷ್ಟಕ್ಕೆ ತಾನೇ ಹಾಡಿಕೊಂಡರೆ ಯಾರೂ ಅಪಹಾಸ್ಯ ಮಾಡುವುದಿಲ್ಲ. ಆದರೆ ಕಥೆಯ ವಿಷಯ ಹಾಗಲ್ಲ. ಯಾವುದಾದರೂ ಒಂದು ಅನುಭವವನ್ನು ಕಥೆಯಾಗಿ ನಿರೂಪಿಸಬೇಕಾದರೆ ಹೇಳುಗನ ಮುಂದೆ ಒಬ್ಬ ಕೇಳುಗನಿರಬೇಕು. ಕೇಳಿದವನು ಹ್ಞೂಂಗುಡುತ್ತಿದ್ದರೇನೇ ಕಥೆ ಹೇಳುವವನಿಗೆ ಉತ್ಸಾಹ. ಈ ಹಿನ್ನೆಯಲ್ಲಿ ಆಲೋಚಿಸಿದರೆ ಒಬ್ಬನಲ್ಲಿ ಏಕಾಂತದಲ್ಲಿ ಹುಟ್ಟಬಹುದಾದ ಗೀತೆ ಮೊದಲು ಹುಟ್ಟಿರಬಹುದೆಂದೂ ಒಬ್ಬನಿಗಿಂತ ಹೆಚ್ಚು ಜನರ ನಡುವೆ ಹುಟ್ಟಿ ಬೆಳೆಯುವ ಕಥೆ ಅನಂತರ ಹುಟ್ಟಿರಬಹುದೆಂದೂ ಹೇಳಬಹುದು. ಎರಡೂ ಸಂದರ್ಭದಲ್ಲೂ ಮೌಖಿಕ ಪರಂಪರೆ, ನವ ಮೌಖಿಕ ಪರಂಪರೆ ಪ್ರಧಾನವಾಗಿರುತ್ತದೆ. ಜನಪದ ಕಥೆ ಹಾಗೂ ಜನಪದ ಕಥನಕಾವ್ಯದ ಹುಟ್ಟು, ಬೆಳವಣಿಗೆ, ಪ್ರಸಾರ ಒಂದೇ ರೀತಿಯದಾಗಿರುತ್ತದೆ. ಜನಪದ ಕಥೆ ಅಂಕುರವಾಗಿ ಹುಟ್ಟಿ ಹಾಸುಬೀಸಾಗಿಯೋ ಅಕರಾಳ ವಿಕರಾಳವಾಗಿಯೋ ಬೆಳೆಯುವ ಕಥನಕ್ರಿಯೆ ವಿಸ್ಮಯಕಾರಿಯಾಗಿರುತ್ತದೆ. ಯಾವುದೇ ವ್ಯಕ್ತಿ ವಸ್ತು ವಿಶೇಷ ಕಥೆಯ ವಸ್ತುವಾಗಬಹುದು. ಎಲ್ಲಾ ಸಂದರ್ಭದಲ್ಲೂ ಬೆಳೆಯುವ ಕ್ರಿಯೆ ಕಥೆಯ ಮುಖ್ಯ ಹೂರಣವಾಗುತ್ತದೆ. ಕಥೆ ಕಟ್ಟುವ, ಕಥೆಹೇಳುವ ಕ್ರಿಯೆ, ಮನುಕುಲದಲ್ಲಿ ಪ್ರಾಚೀನ ಕಾಲದಿಂದ ರೂಢಿಯಲ್ಲಿದೆ. ಮನುಕುಲದಲ್ಲಿ ಕಲ್ಪನೆ ಅಂಕುರಗೊಂಡಾಗಲೇ ಕಥೆ ಹುಟ್ಟಿಕೊಂಡಿದೆ. ಜನಪದ ಕಥೆಯ ಹುಟ್ಟು ನೆನ್ನೆಮೊನ್ನೆಯದಲ್ಲ.

ವಾಸ್ತವಿಕ ಘಟನೆಯ ಪ್ರೇರಣೆಯಿಂದಲೋ ಕಲ್ಪನೆಯ ಹೊಳಹಿನಿಂದಲೋ ಸೃಜನಶೀಲತೆಯ ಕುತೂಹಲದಿಂದಲೋ ಕಲೆಗಾರಿಕೆಯ ಮೋಡಿಯಿಂದಲೋ ಕಥೆ ಹುಟ್ಟಬಹುದು. ಜನರಿಂದ, ಜನರ ನಡುವೆ, ಜನರಿಗೋಸ್ಕರ ಅಂಕುರಗೊಳ್ಳುವ ಕಥೆ ಮೌಖಿಕವಾಗಿ ಮುಂದುವರಿಯುತ್ತಿರುತ್ತದೆ. ಕಾಲಾಂತರದಲ್ಲಿ ರೂಪಾಂತರಗೊಂಡರೂ ಮೂಲ ಆಶಯ ಜೀವಂತವಾಗಿರುತ್ತದೆ; ಸಮೂಹದ ಸ್ವತ್ತಾಗಿ ಬೆಳೆಯುತ್ತಿರುತ್ತದೆ; ಸಾಮೂಹಿಕ ಒಪ್ಪಿಗೆಯೊಡನೆ ಊರ್ಜಿತವಾಗುತ್ತಿರುತ್ತದೆ; ಜಗತ್ತಿನಲ್ಲೆಲ್ಲಾ ಹರಡುತ್ತಿರುತ್ತಿದೆ. ನಿಜ ಹೇಳಬೇಕಾದರೆ ಜನಪದ ಕಥೆ ವಿಶ್ವಕುಟುಂಬಿ.

ಜನಪದರಿಂದ ಸೃಷ್ಟಿಯಾದದ್ದು ಜನಪದ ಕಥೆ. ಮೌಖಿಕ ಗ್ರಹಿಕೆ, ಸಾಹಿತ್ಯ ರೂಪವಾಗಿ, ಜನಪದಸಮೂಹದ ನಡುವೆ ಉಳಿದುಕೊಳ್ಳುವಂಥದ್ದು ಜನಪದ ಕಥೆ. ವಾಗ್ರೂಪದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವ ಕಥನಕ್ಕೆ ಜನಪದ ಕಥೆಯೆಂದು ಹೆಸರು. ಬಾಯಿಮಾತಿನ ಜನಪದ ಕಥೆ, ಜನಪದ ಬದುಕಿನ ಅಂಗವಾಗಿ ಉಳಿದುಕೊಂಡು ಬಂದಿದೆ. ಜಗತ್ತಿನಾದ್ಯಂತ ಹಲವು ವಿದ್ವಾಂಸರು ಜನಪದ ಕಥೆಯನ್ನು ಕುರಿತು ಆಳವಾಗಿ ಅಧ್ಯಯನ

ಮಾಡಿದ್ದಾರೆ; ಹಲವು ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಜನಪದಕಥೆಗಳ ಆಶಯ, ವರ್ಗ, ವರ್ಗೀಕರಣ, ರೂಪ, ಮೂಲ ಮೊದಲಾದವುಗಳ ಬಗೆಗೆ ಮೌಖಿಕ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ವಿದೇಶಿ ವಿದ್ವಾಂಸರಾದ ಸ್ಟಿತ್ ಥಾಂಸನ್, ರಾಲ್ಫ್ ಸ್ಟೀಲ್ ಬಾಗ್ಸ್, ಆಕ್ಸೆಲ್ ಒಲ್ರಿಕ್ ಮುಂತಾಂದವರು ಜನಪದ ಕಥಾ ಮೀಮಾಂಸೆಯ ಬಗಗೆ ಹೆಚ್ಚುಗಮನ ಸೆಳೆದಿದ್ದಾರೆ.

ಜೇಕಬ್ ಗ್ರಿಂ, ವಿಲ್ ಹೆಲ್ಮ್ ಗ್ರಿಂ (ಗ್ರಿಂ ಸೋದರರು), ಮ್ಯಾಕ್ಸ್ ಮುಲ್ಲರ್, ಜಾರ್ಜ್ ವಿಲಿಯಂ ಕಾಕ್ಸ್, ಗುಬರ್ ನಾಟಿನ್, ರೀಚ್, ಅಲ್ಬರ್ಟ್ ಕುನ್ನ, ವಿಲಿಯಂ ಶ್ವಾರ್ಜ್; ಥಿಯೋಡಾರ್ ಬೆನ್ಫೆ, ರೈನಾಲ್ಡ್ ಕೊಹ್ಲಾರ್, ಇಮ್ಯ್ಯಾನುಯಲ್ ಕಾಸ್ಕಿನ್; ಆಂಡ್ರೂಲ್ಯಾಂಗ್, ಸ್ಪೆನ್ಸರ್, ಅರ್ನಾಲ್ಡ್ ವ್ಯಾನ್ ಜೆನೆಪ್, ಹ್ಯಾನ್ಸ್ ನ್ಯೂಮನ್, ಜೇಮ್ಸ್ ಜಾರ್ಜ್ ಫ್ರೇಜರ್, ಪ್ರಾನ್ಸ್ ಬೊಯಾಸ್, ಮ್ಯಾಲಿನೋವ್‌ಸ್ಕಿ; ಸಿ.ಜಿ.ಯುಂಗ್; ರುತ್ ಬೆನೆಡಿಕ್ಟ, ವಿಲಿಯಂ ಬಾಸ್ಕಂ; ವ್ಲಾಡಿಮಿರ್ ಪ್ರಾಪ್ ಮೊದಲಾದ ಘನವಿದ್ವಾಂಸರು ಜನಪದ ಕಥೆಗಳ ಸಿದ್ಧಾಂತಗಳಿಗೆ ಕಾರಣರಾಗಿದ್ದಾರೆ. ಅಂಟಿ ಆರ್ನೆ ಮತ್ತು ಸ್ಟಿತ್‌ಥಾಂಸನ್, ಬ್ಯಾಲಿಸ್ ಜನಪದ ಕಥೆಗಳ ವರ್ಗ ನಿರ್ಣಯಕ್ಕೆ ಶ್ರಮಿಸಿದ್ದಾರೆ.

ಸ್ಟಿತ್‌ಥಾಂಸನ್ ಜನಪದ ವರ್ಗೀಕರಣಕ್ಕೆ ಸ್ಪಷ್ಟ ತಿರುವು ನೀಡಿದ್ದಾರೆ. ಅವರು ಕಥೆಯ ರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಕೀರ್ಣ ಕಥೆಗಳು ಮತ್ತು ಸರಳಕಥೆಗಳು ಎಂಬ ಎರಡು ದೊಡ್ಡ ಗುಂಪುಗಳಲ್ಲಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಹಲವು ಉಪವಿಭಾಗಗಳನ್ನು ಸೂಚಿಸಿದ್ದಾರೆ. ಕನ್ನಡದಲ್ಲಿ ಈ ವಿಭಾಗ ಕ್ರಮವನ್ನು ಚಚುತಪ್ಪದೆ ಅನುಸರಿಸುತ್ತಿಲ್ಲ. ಸ್ಥೂಲವಾದ ವರ್ಗೀಕರಣಕ್ಕೆ ಗಮನ ಕೊಟ್ಟಿರುವುದೇ ಹೆಚ್ಚು. ಪ್ರಪಂಚದ ವಿದ್ವಾಂಸರು ಸೂಚಿಸಿರುವ ಎಲ್ಲಾ ವಿಭಾಗಕ್ಕೂ ಉದಾಹರಣೆಗಳಾಗಿ ಕನ್ನಡ ಜನಪದ ಕಥೆಗಳು ದೊರೆಯುತ್ತವೆ. ವಿಶ್ವ ವರ್ಗೀಕರಣವನ್ನು ಮೀರಿದ ಹಾಗೂ ಹೊಸ ವಿಭಾಗ ಅನಿವಾರ್ಯವಾದ ಕನ್ನಡ ಕಥೆಗಳೂ ಇವೆ.

ಭಾರತ ಜನಪದ ಕಥೆಗಳ ತೌರು ಎಂದು ಪಾಶ್ಚಾತ್ಯ ವಿದ್ವಾಂಸರೇ ಹೇಳಿದ್ದಾರೆ. ಭಾರತದಲ್ಲಿ ಲಕ್ಷಾಂತರ ಜನಪದ ಕಥೆಗಳಿವೆ. ಕನ್ನಡದಲ್ಲೂ ಅಸಂಖ್ಯಾತ ಕಥೆಗಳಿವೆ. ಆದರೆ ಸಂಗ್ರಹವಾಗಿರುವುದು ಕಡಮೆ. ವಿದೇಶಗಳಲ್ಲಿ ಜನಪದ ಕಥೆಗಳ ಬಗೆಗೆ ವಿಪುಲವಾದ ಅಧ್ಯಯನ ನಡೆದಿದೆ; ನಮ್ಮಲ್ಲಿ ಏನೇನೂ ನಡೆದಿಲ್ಲ. ಮೊದಲಿಂದಲೂ ನಮ್ಮವರು ಜನಪದ ಗೀತ ಸಾಹಿತ್ಯ ಸಂಗ್ರಹಕ್ಕೆ ಹೆಚ್ಚು ಗಮನಕೊಟ್ಟರು; ಗದ್ಯಸಾಹಿತ್ಯ ಸಂಗ್ರಹಕ್ಕೆ ಅಷ್ಟಾಗಿ ಗಮನ ಕೊಡಲಿಲ್ಲ. ಜನಪದ ಗೀತ ಸಂಗ್ರಹಕ್ಕಿಂತ ಜನಪದ ಕಥಾ ಸಂಗ್ರಹ ಕಷ್ಟವೆಂಬುದು ಮುಖ್ಯ ಕಾರಣವಾಗಿರುವಂತಿದೆ. ಈಚೆಗೆ ಜನಪದ ಕಥೆಗಳ ಸಂಗ್ರಹ ಪ್ರಕಟಣೆ ಅಷ್ಟಿಷ್ಟು ನಡೆಯುತ್ತಿದೆ.

ಜನಪದ ಕಥೆಗಳ ವರ್ಗೀಕರಣ ಕಷ್ಟ. ಕನ್ನಡದಲ್ಲಿ ವಿದ್ವಾಂಸರು ತಮಗೆ ಇಷ್ಟವಾದ ರೀತಿಯಲ್ಲಿ ಜನಪದ ಕಥೆಗಳನ್ನು ವಿಂಗಡಿಸಿ ಪ್ರಕಟಿಸಿದ್ದಾರೆ. ಕನ್ನಡ ಜನಪದ ಕಥೆಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು.

1. **ಸಂಕೀರ್ಣ ಕಥೆಗಳು:** ಇವುಗಳಲ್ಲಿ ಕಟ್ಟು ಕಥೆಗಳು ಮತ್ತು ವಾಸ್ತವಿಕ ಕಥೆಗಳು ಎಂಬ ಪ್ರಧಾನ ಗುಂಪುಗಳನ್ನು ಕಾಣಬಹುದು.

ಕಟ್ಟು ಕಥೆಗಳಲ್ಲಿ ಹೀಗೆ ಒಳವಿಭಾಗಗಳನ್ನು ಮಾಡಿಕೊಳ್ಳಬಹುದು: ಅತಿಮಾನಷ ವಿರೋಧಿಗಳು, ಅತಿಮಾನುಷ ಸಹಾಯಕರು, ಮಾಟ ಮತ್ತು ಅದ್ಭುತಗಳು, ಪ್ರೇಮಿಗಳು ಮತ್ತು ದಂಪತಿಗಳು, ಪರೀಕ್ಷೆಗಳು ಮತ್ತು ಸಾಹಸಗಳು, ವಿಧೇಯತೆ, ಒಳ್ಳೆಯ ಹಾಗೂ ಕೆಟ್ಟ ಬಂಧುಗಳು, ಅತೀತ ಶಕ್ತಿಗಳು, ಮೂರು ಲೋಕಗಳು ಮತ್ತು ರಮ್ಯಕಥೆಗಳು. ವಾಸ್ತವಕಥೆಗಳ ಉಪ ವಿಭಾಗಗಳು: ಬುದ್ಧಿವಂತಿಕೆ ಕಥೆಗಳು, ವಂಚಕರ ಕಥೆಗಳು, ಕಳ್ಳರ ಕಥೆಗಳು.

2. ಸರಳ ಕಥೆಗಳಲ್ಲಿ ಉಪವಿಭಾಗಗಳನ್ನು ಹೀಗೆ ಗುರುತಿಸಬಹುದು: ಪ್ರಾಣಿಕಥೆಗಳು, ಪಕ್ಷಿಕಥೆಗಳು, ದೆವ್ವದ ಕಥೆಗಳು, ಕಾನೂನು (ನ್ಯಾಯ) ಕಥೆಗಳು, ಐತಿಹ್ಯ ಕಥೆಗಳು, ಒಗಟುಕಥೆಗಳು, ಗಾದೆ ಕಥೆಗಳು, ನೀತಿ ಕಥೆಗಳು, ಹಾಸ್ಯಕಥೆಗಳು, ಮಕ್ಕಳ ಕಥೆಗಳು, ಸೂತ್ರ ಕಥೆಗಳು, ಸರಪಳಿ ಕಥೆಗಳು, ಸಂಚಿತ ಕಥೆಗಳು ಮತ್ತು ಕೊನೆಯಿಲ್ಲದ ಕಥೆಗಳು.

ಇಷ್ಟೇ ಅಲ್ಲದೆ ಇನ್ನೂ ಬೇರೆ ಬೇರೆ ತರಹದ ಕಥೆಗಳಿದ್ದರೂ ಆಶ್ಚರ್ಯವಿಲ್ಲ. ಇವೆಲ್ಲ ಅಧ್ಯಯನದ ಅನುಕೂಲಕ್ಕೆ ಮಾಡಿಕೊಂಡಿರುವ ಸ್ಥೂಲ ವಿಭಾಗಗಳು ಅಷ್ಟೆ. ಈ ವಿಷಯದಲ್ಲಿ ತಿದ್ದುಪಡಿಗೆ ಅವಕಾಶ ಇದ್ದೇ ಇದೆ.

ಜನಪದ ಕಥೆಗಳಿಂದಾಗುವ ಪ್ರಯೋಜನ ನಾನಾ ರೀತಿಯಾಗಿದೆ. ಮನುಷ್ಯ ಲೋಕಾನುಭವವನ್ನು ಪಡೆದಿದ್ದು, ಇತರರಿಗೆ ತಿಳಿಸಿದ್ದು ಇಂಥ ಕಥೆಗಳಿಂದಲೇ. ಆದಿವಾಸಿಗಳಿಂದ ಆಧುನಿಕ ಮನುಷ್ಯನವರೆಗೆ ಜನಪದ ಕಥೆಗಳು ಸಾಮಾಜಿಕ ಸೌಹಾರ್ದವನ್ನು ವಿಸ್ತರಿಸಿವೆ, ಪಾರಂಪರಿಕ ಜ್ಞಾನವನ್ನು ಕಲಿಸಿವೆ, ಮನೋರಂಜನೆಯನ್ನು ಒದಗಿಸಿವೆ. ಮನುಕುಲದಲ್ಲಿ ಸೃಜನಶೀಲತೆಯನ್ನು ಕುದುರಿಸಿವೆ. ಜನಪದ ಕಥೆಗಳಿಗೆ ಮಾರುಹೋಗದವರಿಲ್ಲ. ಹಿರಿಯರಿಗೆ ಕಿರಿಯರಿಗೆ ಪ್ರಿಯವಾಗಬಹುದಾದ ಏಕೈಕ ಕಥಾ ಪ್ರಪಂಚವೆಂದರೆ ಜನಪದ ಕಥೆಗಳದೇ. ಮನುಕುಲದಲ್ಲಿ ಜನಪದ ಕಥೆಗಳನ್ನು ಕೇಳದ ಮನುಷ್ಯರೇ ಇಲ್ಲ.

ಕನ್ನಡದಲ್ಲಿ ಜನಪದ ಕಥೆಗಳನ್ನು ಅಜ್ಜಿಕಥೆ, ಅಡೂಗಲಜ್ಜಿ ಕಥೆ, ಕಟ್ಟು ಕಥೆ, ಕಾಗಕ್ಕ ಗುಬ್ಬಕ್ಕನ ಕಥೆ, ರಾಜರಾಣಿ ಕಥೆ, ಹಳ್ಳಿ ಕಥೆ, ಹಳೆ ಕಥೆ, ಪಾಮರ ಕಥೆ, ಅನಾಮಧೇಯ ಕಥೆ ಮೊದಲಾದ ಹೆಸರುಗಳಿಂದ ಕರೆಯುವುದು ರೂಢಿಯಾಗಿದೆ. ದೇವನೊಬ್ಬ ನಾಮ ಹಲವು ಎಂಬಂತೆ ಕಥೆ ಒಂದೇ, ಹೆಸರು ಬೇರೆ ಅಷ್ಟೆ. ಜನಪದ ಕಥೆಗಳು ಗದ್ಯಕಥೆಗಳ ಗುಂಪಿನಲ್ಲಿ ಒಂದು ಪ್ರಮುಖ ಪ್ರಕಾರ. ಜನಪದ ಕಥೆಗಳು ಯಾವುದಾದರೂ ಘಟನೆಗಳ ಸಂಕೀರ್ಣ ಅಥವಾ ಸರಳವಾದ ರಚನೆಗಳಾಗಿರುತ್ತವೆ. ಅಂದರೆ ಜನಪದ ಕಥೆಗಳಿಗೆ ಒಂದು ವಿಶಿಷ್ಟವಾದ, ರಚನೆ, ಲಕ್ಷಣ, ಶೈಲಿ ಇರುತ್ತದೆ. ಅವು ನಿರ್ದಿಷ್ಟವಾದ ವ್ಯಕ್ತಿ ಸ್ಥಳ ಕಾಲವನ್ನು ಅವಲಂಬಿಸಿರುವುದಿಲ್ಲ. ಎಲ್ಲವೂ ಮೌಖಿಕತೆ ಹಾಗೂ ಪಾರಂಪರಿಕತೆಯಿಂದ ಕೂಡಿರುತ್ತವೆ.

ಮೌಖಿಕ ಪರಂಪರೆಗೆ ಹೊರತಾದದ್ದು ಜನಪದ ಕಥೆ ಎನಿಸುವುದಿಲ್ಲ. ನವ ಮೌಖಿಕ ಪರಂಪರೆಯ ಜನಪದಕಥೆಗಳಿಗೂ ಈ ಮಾತು ಅನ್ವಯಿಸುತ್ತದೆ.

ಜನಪದ ಕಥೆಗಳಲ್ಲಿ ಕಲ್ಪನೆಗೆ ಪ್ರಮುಖ ಪಾತ್ರ. ಅವುಗಳಲ್ಲಿ ವಾಸ್ತವಾಂಶಗಳೊಡನೆ ಕಾಲ್ಪನಿಕಾಂಶಗಳು ಸಹಜವಾಗಿ ಸೇರುತ್ತವೆ. ಮನುಷ್ಯ ಪ್ರಾಣಿ ಪಕ್ಷಿ ಗಿಡ ಮರ ದೇವರು ದೆವ್ವ ಪೀಡೆ ಪಿಶಾಚಿ ರಾಕ್ಷಸ ಕಿನ್ನರ ಕಿಂಪುರುಷ ಯಕ್ಷಯಕ್ಷಿಣಿ ಮಾಟಗಾತಿ ಅತಿಮಾನುಷ ಜೀವಿ ಮೊದಲಾದವೆಲ್ಲ ಪಾತ್ರಗಳಾಗುತ್ತವೆ. ಪೌರಾಣಿಕ, ಚಾರಿತ್ರಿಕ, ಸಾಮಾಜಿಕ, ವಾಸ್ತವಿಕ, ಕಾಲ್ಪನಿಕ ಅಂಶಗಳೆಲ್ಲ ಸಮರಸವಾಗಿ ಬೆರೆತುಕೊಳ್ಳುತ್ತವೆ. ಜನಪದ ಕಲ್ಪನೆಗೆ ಅಸಂಭವವೆನ್ನುವುದು ಇಲ್ಲ. ಜಗತ್ತಿನ ಜನಪದ ಕಥೆಗಳಲ್ಲೆಲ್ಲಾ ಒಂದೇ ಲಕ್ಷಣ ಕಂಡುಬರುತ್ತದೆ. ಮನುಕುಲದ ಮೌಖಿಕ ಚಿಂತನೆ ಏಕಪ್ರಕಾರವಾಗಿರುವುದು ವಿಸ್ಮಯ ಹುಟ್ಟಿಸುತ್ತದೆ. ಭಾಷೆ ಬೇರೆ, ಅಭಿವ್ಯಕ್ತಿಯ ವ್ಯಕ್ತಿ ಬೇರೆ, ಅಭಿವ್ಯಕ್ತಿಯ ಸ್ಥಳ ಬೇರೆ, ಅಷ್ಟೆ.

ಜನಪದ ವಿದ್ವಾಂಸರು ಗುರುತಿಸಿರುವಂತೆ ಜನಪದ ಕಥೆಗಳ ಲಕ್ಷಣಗಳು ಹೀಗಿವೆ: ಜನಪದ ಕಥೆಗಳಲ್ಲಿ ಕಥಾಪ್ರವೇಶ ಸಾವಕಾಶವಾಗಿರುತ್ತವೆ. ಕಥೆಗಳು ಸುಖಾಂತವಾಗಿರುತ್ತದೆ. ಕಥೆಗಳಲ್ಲಿ ಪುನರಾವರ್ತನೆ ಸಾಮಾನ್ಯ. ಅವು ಸಾಮಾನ್ಯವಾಗಿ ಮೂರು ಪಟ್ಟು ಪುನರಾವರ್ತನೆಯಾಗುತ್ತವೆ. ಪಾತ್ರಗಳು ಸರಳ. ಅವು ಯಾವುದಾದರೂ ಗುಣದ ಪ್ರತೀಕವಾಗಿರುತ್ತವೆ. ಕುಟುಂಬದ ಕಿರಿಯ ವ್ಯಕ್ತಿ ಅಥವಾ ದುರ್ಬಲ ಅಂಗವಿಕಲ ಜಯ ಶಾಲಿಯಾಗುತ್ತಾನೆ. ಕಥೆಗಳ ತಂತ್ರ ಸರಳ, ನೇರ, ವೈವಿಧ್ಯತೆ ತರಲೇಬೇಕೆಂಬ ಹಂಬಲವಿಲ್ಲ. ಕಥೆಯಲ್ಲಿ ಉಪಕಥೆ ಇರುವುದಿಲ್ಲ. ಸಂಕೀರ್ಣ ಕಥೆಗಳಲ್ಲಿ ಮಾತ್ರ ಕ್ವಚಿತ್ತಾಗಿ ಉಪಕತೆಯಿರುತ್ತದೆ. ಕನ್ನಡ ಜನಪದ ಕಥೆಗಳಲ್ಲೂ ಇದೇ ಲಕ್ಷಣಗಳನ್ನು ಕಾಣಬಹುದು. ಜನಪದ ಕಥೆಗಳು ನಾಗರೀಕರ ನಡುವೆಯೂ ಪ್ರಚಾರದಲ್ಲಿರುತ್ತವೆ. ಎಲ್ಲಾ ಸಂದರ್ಭಗಳಲ್ಲೂ ಮೌಖಿಕತೆಯೇ ಪ್ರಧಾನ ಸಂವಹನ ಕ್ರಿಯೆಯಾಗಿರುತ್ತದೆ.

ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಜನಾಂಗಗಳಲ್ಲೂ ಜನಪದ ಕಥೆಗಳ ಸಂಖ್ಯೆ ಅಪಾರವಾಗಿದೆ. ಭಾರತ ಒಂದರಲ್ಲೇ ಲಕ್ಷಾಂತರ ಕಥೆಗಳು ದೊರೆಯುತ್ತವೆ. ಕರ್ನಾಟಕದಲ್ಲಿ ಎಷ್ಟು ಜನಪದ ಕಥೆಗಳಿರಬಹುದೆಂಬುದನ್ನು ಅಂದಾಜು ಮಾಡುವುದೂ ಸಾಧ್ಯವಿಲ್ಲ. ಸಂಗ್ರಹ ಮಾಡಿದಂತೆಲ್ಲಾ ಕಥೆಗಳು ಸಿಗುತ್ತಲೇ ಇವೆ. ಕನ್ನಡ ಜನಪದ ಕಥೆಗಳ ಸಂಗ್ರಹ ಸಂಪೂರ್ಣವಾಯಿತು ಎಂದು ಹೇಳುವ ಕಾಲ ಬಹುಶಃ ಬರುವುದಿಲ್ಲ.

ಜಾಗತಿಕ ಮಟ್ಟದಲ್ಲಿ ಜನಪದ ಕಥೆಗಳ ಆಶಯ, ವರ್ಗಸೂಚಿಯ ಬಗೆಗೂ ಸಾಕಷ್ಟು ಸಂಶೋಧನೆ ನಡೆದಿದೆ. ಕನ್ನಡದಲ್ಲಿ ಇಂಥ ಶೋಧನೆ, ಬಳಕೆ ಕಡಮೆ. ಜನಪದ ಕಥೆಗಳ ಮೂಲ ಸಿದ್ಧಾಂತದ ಬಗೆಗೂ ಪ್ರಪಂಚದ ವಿದ್ವಾಂಸರು ಪ್ರಯತ್ನಪಟ್ಟಿದ್ದಾರೆ. ಭಾರತದಲ್ಲಿ, ಕರ್ನಾಟಕದಲ್ಲಿ ವಿಶ್ವ ಮೂಲಸಿದ್ಧಾಂತಗಳನ್ನು ಒಪ್ಪಿಕೊಂಡಂತೆ ಆಲೋಚನೆಗಳು ಮಂಡಿತವಾಗುತ್ತಿದೆ. ಮುಂದೆ ಈ ಚಿಂತೆಯ ದಿಕ್ಕು ಬದಲಾಗಬಹುದು.

ಕನ್ನಡ ಜಾನಪದದ ಸಂದರ್ಭದಲ್ಲಿ ಜಾನಪದ ಪ್ರೇಮಿ ಎಚ್. ಎಲ್. ನಾಗೇಗೌಡರು

ಪ್ರಥಮ ದರ್ಜೆಯ ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಅಗ್ರಗಣ್ಯರಾಗಿದ್ದಾರೆ. ಜನಪದ ಸಾಹಿತ್ಯ ಸಂಗ್ರಹವನ್ನು ವ್ರತದಂತೆ ಕೈಗೊಂಡು ಸಾರ್ಥಕರಾದವರು ಅವರು. ಹೇಳಿ ಕೇಳಿ ನಾಗೇಗೌಡರು ಜನಪದ ಗೀತ ಪ್ರಿಯರು; ಜನಪದ ಗೀತ ಗಾಯನದ ಸೊಲ್ಲುರಾಗ ಧ್ವನಿ ಲಯಕ್ಕೆ ಮಾರುಹೋದವರು. ಅವರು ಸಂಗ್ರಹಸಿದ್ದೆಲ್ಲಾ ಪದ್ಯ ಸಾಹಿತ್ಯ. ಏಕೋ ಏನೊ ಗದ್ಯಸಾಹಿತ್ಯ ಸಂಗ್ರಕ್ಕೆ ಅವರು ಸಾಕಷ್ಟು ಗಮನ ಕೊಡಲಿಲ್ಲ.

ನಾಡೋಜ ನಾಗೇಗೌಡರು ಸಂಗ್ರಹಿಸಿರುವ ಜನಪದ ಗೀತ ಸಾಹಿತ್ಯದ ಧ್ವನಿಸುರುಳಿಗಳಲ್ಲಿ ಅಲ್ಲಲ್ಲಿ ನಿರೂಪಕರು ಆಕಸ್ಮಿಕವಾಗಿ ಹೇಳಿರುವ ಗದ್ಯ ಕಥೆಗಳಿವೆ. ಕೆಲವು ಅಪರೂಪದ ಕಥೆಗಳಿರುವುದು ವಿಶೇಷ. ಅವುಗಳನ್ನು ಲಿಪ್ಯಂತರ ಮಾಡಿಸಿ ಒಂದೆಡೆ ಕಲೆಹಾಕಿದಾಗ ಪ್ರಸ್ತುತ ಗ್ರಂಥವನ್ನು ಸಿದ್ಧಪಡಿಸಲು ಸಾಧ್ಯವಾಯಿತು. ನಾಗೇಗೌಡರು ಪ್ರಾರಂಭಿಸಿದ 'ಜಾನಪದ ಜಗತ್ತು' ತ್ರೈಮಾಸಿಕ ಪತ್ರಿಕೆಯಲ್ಲಿ, ಅವರೇ ಸಂಗ್ರಹಿಸಿದ ಕೆಲವು ಕಥೆಗಳು ಪ್ರಕಟವಾಗಿವೆ. ಅವುಗಳನ್ನು ಪ್ರಸ್ತುತ ಗ್ರಂಥಕ್ಕೆ ಬಳಸಿಕೊಂಡಿದೆ. ಕೆಲವು ಕಥೆಗಳಂತೂ ಸಂಗ್ರಹವಾಗಿ ಇಪ್ಪತ್ತೈದು ವರ್ಷಗಳ ಮೇಲೆ ಪ್ರಕಟವಾಗಿತ್ತಿವೆ.

ಪ್ರಸ್ತುತ ಸಂಗ್ರಹದಲ್ಲಿ ಹತ್ತಾರು ಮಂದಿ ಮೌಖಿಕ ಕಥೆಗಾರರು ಹೇಳಿರುವ ಐವತ್ತಾರು ಜನಪದ ಕಥೆಗಳಿವೆ. ಕಥಾ ವಕ್ತೃಗಳು ರಾಜ್ಯದ ಬೇರೆಬೇರೆ ಭಾಗಗಳಿಗೆ ಸೇರಿದವರು. ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ಹಿಂದುಳಿದವರು, ದಲಿತರು. ಕನ್ನಡ ಜಾನಪದದ ಬಹುಪಾಲು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರ ಸ್ವತ್ತು. ಕನ್ನಡ ಜನಪದ ಕಥೆಗಳು ಇದಕ್ಕೆ ಹೊರತಲ್ಲ. ಹಿಂದುಳಿದವರನ್ನು ಮರೆತರೆ ಕನ್ನಡ ಜಾನಪದದ ಅಧ್ಯಯನವೇ ನಿಂತುಹೋಗುತ್ತದೆ. ಭಾರತದ ಹಾಗೂ ಕರ್ನಾಟಕದ ಸಂಸ್ಕೃತಿ ನಿಂತಿರುವುದು ಇಂಥವರಿಂದಲೇ. ಭಾರತದ ಪ್ರಧಾನ ಸಂಸ್ಕೃತಿಗೆ ಜನಪದ ಸಂಸ್ಕೃತಿಯೇ ಮೂಲ. ಕರ್ನಾಟಕ ಸಂಸ್ಕೃತಿ ವಿಷಯವೂ ಬೇರೆಯಲ್ಲ.

ಕನ್ನಡ ಜನಪದ ಕಥೆಗಳು ಗ್ರಂಥದ ಸಂಗ್ರಹ ಕಥೆಗಳನ್ನು ಸ್ಥೂಲವಾಗಿ ವಿಂಗಡಿಸಿದೆ. ಅದನ್ನು ಪರಿವಿಡಿಯಲ್ಲಿ ಸೂಚಿಸಿದೆ. ಇದು ಒಂದೆರಡು ಓದಿನಲ್ಲಿ ಹೊಳೆದ ವಿಂಗಣೆ. ಮತ್ತಷ್ಟು ಮರುಓದಿಗೆ ಒಳಪಡಿಸಿದರೆ ಕಥೆಗಳ ವರ್ಗೀಕರಣ ವ್ಯತ್ಯಾಸವಾದರೂ ಆಶ್ಚರ್ಯವಲ್ಲ.

ಧ್ವನಿ ಸುರುಳಿಗಳಲ್ಲಿದ್ದ ಕಥೆಗಳನ್ನು ಲಿಪ್ಯಂತರ ಮಾಡಿಕೊಟ್ಟವರ ಹೆಸರುಗಳು ಹೀಗಿವೆ: ಶ್ರೀಮತಿ ಜಯಂತಿ ಪ್ರಕಾಶ, ರಾಮನಗರಂ, ಶ್ರೀಮತಿ ಎಚ್. ಎಸ್. ಅನ್ನಪೂರ್ಣಾದೇವಿ, ಡಾ. ಕುರುವ ಬಸವರಾಜ್, ಶ್ರೀಮತಿ ಎಂ. ಕುಸುಮ, ಶ್ರೀ ಕೆ. ರಾಮಯ್ಯ, ಚಿತ್ರದುರ್ಗ ಮತ್ತು ಶ್ರೀ ಕೂಡ್ಲೂರು ವೆಂಕಟಪ್ಪ.

## ಪ್ರಸ್ತುತ ಸಂಗ್ರಹದ ನಿರೂಪಕರು ಮತ್ತು ಅವರು ಹೇಳಿದ ಕಥೆಗಳು ಹೀಗಿವೆ:

**೧. ಸುಬ್ಬಹನುಮಮ್ಮ, ಬ್ಯಾಲದಕೆರೆ**

**ಹೇಳಿದ ಕಥೆ :** ಮುತುಗದ ಎಲೆ ಗೋತಾಯಿ.

ಜಾಗತಿಕ ಮಹಾನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್‌ನ ಕಿಂಗ್‌ಲಿಯರ್ ನಾಟಕ ಕಥೆಗೂ ಈ ಮುತುಗದ ಎಲೆ ಗೋತಾಯಿ ರಮ್ಯ ಕಥೆಗೂ ಸಾಮ್ಯವಿದೆ. ಈ ಕಥೆ ಜಗತ್ತಿನಲ್ಲೆಲ್ಲಾ ಇರುವಂತಿದೆ. ಬಹುಶಃ ಷೇಕ್ಸ್‌ಪಿಯರ್‌ನಿಗೂ ಅವನ ಪ್ರದೇಶದ ಜನಪದ ಕಥೆಯೇ ಸ್ಫೂರ್ತಿ ಇರಬಹುದು.

**೨. ಲಕ್ಷಮ್ಮ, ಸಂಪಿಗೆ ಹೊಸಳ್ಳಿ.**

**ಹೇಳಿದ ಕಥೆ :** ಏಡಿಕುಮಾರನ ಕಥೆ.

**೩. ನರಸಮ್ಮ, ತಿಮ್ಮಲಾಪುರ**

**ಹೇಳಿದ ಕಥೆ :** ಬಡಹುಡುಗಿಯ ಕಥೆ.

**೪. ರಂಗಮ್ಮ, ತಿಪ್ಪಶೆಟ್ಟಿಕೆರೆ.**

**ಹೇಳಿದ ಕಥೆ :** ಜಂಬೂರು ನಾಗೇಗೌಡರು, ಗೌಡನ ಮಗಳು.

ತಂದೆಯಿಂದ ಕಲಿತ ಕಥೆಗಳು. ತಂದೆಗೆ ಹಾಡುವುದಕ್ಕೂ ಬರುತ್ತಿತ್ತು. ಮೊಮ್ಮಕ್ಕಳು ಜನಪದ ಕಥೆಗಳನ್ನು ಕೇಳುವುದಿಲ್ಲ, ಕಲಿಯುವುದಿಲ್ಲವೆಂಬ ಕೊರಗು, ಈ ನಿರೂಪಕಿಗೆ.

**೫. ಸಂಗಮ್ಮ, ಕತ್ತಿಗೆ**

**ಹೇಳಿದ ಕಥೆ :** ಗುಲಗಂಜಿ ಮಾದೇವಿ.

**೬. ಮುನಿಯಕ್ಕಯ್ಯ, ಚೋಳೂರು**

**ಹೇಳಿದ ಕಥೆಗಳು:** ತಾಯಿಯ ಮಾತು, ಅದೃಷ್ಟದ ಆಟ, ಉಪಾಯ.

**೭. ಕರಿಯಮ್ಮ, ಯಲಿಯೂರು**

**ಹೇಳಿದ ಕಥೆಗಳು:** ನಾಗೇಂದ್ರ, ಸಿರಿತನ ಬಡತನ, ಮಗನನ್ನು ಕೊಂದವಳು.

**೮. ಬಸಮ್ಮ, ಜೋಗಳ್ಳಿ**

**ಹೇಳಿದ ಕಥೆ :** ದೊರೆ ಕಥೆ.

**೯. ನರಸಮ್ಮ, ತಿಮ್ಮಲಾಪುರ**

**ಹೇಳಿದ ಕಥೆ :** ಮಾಡಿದ್ದುಣ್ಣೋಮಾರಾಯ.

**೧೦. ಗಂಗುಚ್ಚಮ್ಮ, ಜಲದಿಗೆರೆ**

**ಹೇಳಿದ ಕಥೆ :** ಅನ್ನದಾನದ ಫಲ.

**೧೧. ಗಿರಿಯಮ್ಮ, ಕಾಡಸೂರು ಮುದಗೆರೆ**

**ಹೇಳಿದ ಕಥೆಗಳು:** ಕಾಲಬಂದಾಗ ಬರೋಣ, ಅಣ್ಣಂದಿರನ್ನು ಸಾಯಿಸಿದ ತಂಗಿ.

**೧೨. ತಿಮ್ಮಮ್ಮ, ಮುದುಗೆರೆ**

**ಹೇಳಿದ ಕಥೆಗಳು :** ಬ್ರಹ್ಮಗಂಟು, ಹೆಣ್ಣು ಹುಡುಕಲು ಹೋದದ್ದು, ಹೆಂಡತಿಯ ಒಗಟು.

**೧೩. ಅಕ್ಕಯ್ಯಮ್ಮ**

**ಹೇಳಿದ ಕಥೆಗಳು:** ಅನಾಥಹೆಣ್ಣು, ಗಂಡಹೆಂಡತಿ, ಚಾಲೋಕು ಹುಡುಗಿ.

**೧೪. ಪರಮೇಶಿ, ಹಿರೇಡೊಂಕೀಹಳ್ಳಿ**

**ಹೇಳಿದ ಕಥೆಗಳು :** ಅಣ್ಣತಂಗಿ, ಕುಟುಕಪ್ಪ ಲೊಟಕಪ್ಪನ ಕಥೆ.

**೧೫. ಸಾಕಮ್ಮ, ಬೆಟ್ಟದ ಬ್ಯಾಲದಕೆರೆ**

**ಹೇಳಿದ ಕಥೆಗಳು :** ಮೂರು ಜನ ಮುಂಡೇರು, ಸತ್ತ ರಾಜಕುಮಾರನ ಕಥೆ.

**೧೬. ಕೆಂಪಮ್ಮ, ಕಾಡಸೂರು ಮುದಗೆರೆ**

**ಹೇಳಿದ ಕಥೆ :** ಹೆಂಡತಿಯ ಮಿಂಡ.

**೧೭. ತಿಮ್ಮಮ್ಮ, ಕೋಳೋಘಟ್ಟ**

**ಹೇಳಿದ ಕಥೆ :** ಮರಗೋಟಿ .

ತಿಮ್ಮಮ್ಮ ಹವ್ಯಾಸಿ ಜನಪದ ಕಲಾವಿದೆ. ಯಾರಾದರೂ ಕಥೆ ಹೇಳಿದರೆ, ಹಾಡಿದರೆ, ಕೇಳಿ ಕಲಿತುಕೊಳ್ಳುವ ಸ್ವಭಾವ. ಲಕ್ಷ್ಮಮ್ಮ ಎಂಬ ಅಜ್ಜಿ ಹೇಳುತ್ತಿದ್ದ ಕಥೆಯನ್ನು ಕೇಳಿ ಕಲಿತುಕೊಂಡಿದ್ದು 'ಮರಗೋಟಿ' ಕಥೆ. ಈ ಕಥೆಯನ್ನು 'ಮರಗೋಪಿ' ಮತ್ತು 'ಮುದ್ರೆಕುಮಾರ ಬಳೆ ಬಂಗಾರ್ತಿ' ಎಂದೂ ಕರೆಯುವುದುಂಟು. ತಿಮ್ಮಮ್ಮ ಒಗಟುಗಳನ್ನು ಹೇಳುವುದರಲ್ಲೂ ಪರಿಣತೆ.

**೧೮. ರಾಜಮ್ಮ, ನೆಲಮಂಗಲ**

**ಹೇಳಿದ ಕಥೆ :** ಸತ್ತಗಂಡನನ್ನು ಬದುಕಿಸಿಕೊಂಡಿದ್ದು.

ಸ್ವಂತ ತಾಯಿಯಿಂದ ಕಥೆ ಕೇಳಿದ್ದು, ಕಲಿತುಕೊಂಡಿದ್ದು, ಹೇಳಿದ್ದು ' ಸತ್ತ ಗಂಡನನ್ನು ಬದುಕಿಸಿಕೊಂಡಿದ್ದು' ಕಥೆ. ಒಡಚು ಕಥೆ ಹೇಳುವುದರಲ್ಲಿ ನಿಷ್ಣಾತೆ.

**೧೯. ಯಶೋದಮ್ಮ, ತಿಪ್ಪಾಪುರ**

**ಹೇಳಿದ ಕಥೆ :** ಮಳೆದೇವೇಂದ್ರ

**೨೦. ತಿರುಮಲಯ್ಯ, ಹೆರಗನಹಳ್ಳಿ**

**ಹೇಳಿದ ಕಥೆಗಳು :** ಈ ಹೆಣ್ಣು ಯಾರಿಗಾಗಬೇಕು? ಘನ ಪುಣ್ಯವತಿ, ಅವಳಗಂಡ, ದಡ್ಡನ ಕಥೆ, ಎಲ್ಲರೂ ಕಿವುಡರು, ಭಗವಂತ, ತವರು ಮನೆಯ ಆಸೆ.

**೨೧. ಮಂಗಮ್ಮ, ಢಣಾಯಕನ ಪುರ**

**ಹೇಳಿದ ಕಥೆ :** ಜಾಣಸೊಸೆ.

**೨೨. ಲಕ್ಷಮ್ಮ, ಕತ್ತಿಗೆ.**

**ಹೇಳಿದ ಕಥೆ :** ಮನದಾಗಲ ಗುಟ್ಟ ಮಡದಿಗೆ ಹೇಳಬೇಡ.

**೨೩. ಅಕ್ಕಯ್ಯಮ್ಮ**

**ಹೇಳಿದ ಕಥೆ :** ಮೂರು ಕೋಟಿ ಸುಳ್ಳು ಹೇಳುವವನ ಕಥೆ.

**೨೪. ರಂಗಮ್ಮ, ಎಲೆಕೊಪ್ಪ**

**ಹೇಳಿದ ಕಥೆ :** ಮುದ್ದೇಗೌಡನ ಮಗ.

ನಾಗಮಂಗಲ ತಾಲ್ಲೂಕು ಎಲೆ ಕೊಪ್ಪದ ರಂಗಮ್ಮ ಅವಿದ್ಯಾವಂತೆ. ಸ್ವಂತ ತಾಯಿಯಿಂದ ಕಲಿತ ಕಥೆ ' ಮುದ್ದೇ ಗೌಡನ ಮಗ'.

**೨೫. ಲಕ್ಕವ್ವ, ಕತ್ತಿಗೆ**

**ಹೇಳಿದ ಕಥೆ :** ಎಡವಟ್ಟು.

**೨೬. ಕರಪಾಲ ಸಿದ್ಧಯ್ಯ**

**ಹೇಳಿದ ಕಥೆ :** ಪೂಜಾರಿ ಪುಟ್ಟಕ್ಕ.

ಪ್ರಖ್ಯಾತ ವೃತ್ತಿಗಾಯಕ. ದೀರ್ಘಕಾವ್ಯಗಳನ್ನೂ ಹಾಡಿದ್ದಾನೆ.

**೨೭. ಕೆಂಪಮ್ಮ, ಮುಗಳೂರು**

**ಹೇಳಿದ ಕಥೆ :** ಮೂಗಂಡುಗ ಎಳ್ಳಿನ ಕಥೆ.

**೨೮. ಲಕ್ಷಮ್ಮ, ದಂಡಿನ ಶಿವರ**

**ಹೇಳಿದ ಕಥೆ :** ದಡ್ಡಹುಡುಗಿ .

**೨೯. ಹುಚ್ಚಮ್ಮ, ಸೂಳೆಕೆರೆ**

**ಹೇಳಿದ ಕಥೆ :** ದಾಸಯ್ಯ.

ಹುಚ್ಚಮ್ಮ ಸೂಳೆಕೆರೆ ಅಥವಾ ದಡ್ಡೆಗಟ್ಟದ ಸೂಳೆಕೆರೆಯಾಕೆ. ಹವ್ಯಾಸಿ ಜನಪದ ಕಲಾವಿದೆ. ಊರಿನಲ್ಲಿ ಗದ್ದೆಯಲ್ಲಿ ಕಳೆಕೀಳಲು ಹೋಗಿದ್ದಾಗ ಜೊತೆಯ ಹೆಂಗಸು ಹೇಳಿದ ಕಥೆಯನ್ನು ನೆನಪಿಟ್ಟು ಕೊಂಡಿದ್ದು 'ದಾಸಯ್ಯ' ಕಥೆ. ನಿರೂಪಕಿ ಗದ್ಯಕಥೆಯನ್ನು ಹೇಳುವುದರ ಜೊತೆಗೆ

ಜನಪದ ಗೀತೆಗಳನ್ನೂ ಹಾಡಿದ್ದಾಳೆ.

**೩೦. ಕೆಂಪೇಗೌಡ, ಯಾಚೇನಹಳ್ಳಿ**

**ಹೇಳಿದ ಕಥೆಗಳು:** ಮುದುಕ ಯಜಮಾನನ ಚಪಲ, ಪಿಂಪಿಸ್ಗ

**೩೧. ಆಲಮ್ಮ, ದಂಡಿನ ಶಿವರ**

**ಹೇಳಿದ ಕಥೆ :** ಕಿವುಡರ ಕಥೆ.

**೩೨. ಸೋಬಾನೆ ಚಿಕ್ಕಮ್ಮ, ಹೆರಗನ ಹಳ್ಳಿ**

**ಹೇಳಿದ ಕಥೆಗಳು :** ಮೂರು ಜನ ಹೆಂಡರು, ಹಾರುವರಿಗೆಲ್ಲ ಬರೆ.

**೩೩. ಚೌಡಿಕೆ ಸುಬ್ಬಯ್ಯ**

**ಹೇಳಿದ ಕಥೆ :** ಹರಿಗೋಲು ಕಥೆ.

ಈತ ಸುಪ್ರಸಿದ್ಧ ವೃತ್ತಿಗಾಯಕ. ದೀರ್ಘಕಾವ್ಯಗಳ ನಡುವೆ ಉಪಕಥೆ ಹೇಳುವುದು ರೂಢಿ. ಪ್ರಸ್ತುತ ಕಥೆಯನ್ನು ಪದ್ಯದಲ್ಲೂ ಹಾಡಿದ್ದಾನೆ.

**೩೪. ನೀಲಮ್ಮ, ಬೇಲೂರು**

**ಹೇಳಿದ ಕಥೆ :** ಶೆಟವಿ ಕಥೆ.

**ಹೇಳಿದವರ ಹೆಸರು ಗೊತ್ತಿಲ್ಲದ ಕಥೆಗಳು**

ಜನಪದ ಮೇಳಗಳಲ್ಲಿ ನೇರವಾಗಿ ಸಂಗ್ರಹಿಸುವಾಗ, ಧ್ವನಿಮುದ್ರಿಸಿಕೊಂಡಾಗ ಆಕಸ್ಮಿಕವಾಗಿ ವಕ್ತೃಗಳ ಹೆಸರನ್ನು ದಾಖಲಿಸಿಕೊಂಡಿಲ್ಲ, ಅಂಥವರ ಕೆಲವು ಕಥೆಗಳು ಇಲ್ಲಿವೆ.

**ಆಮೆ ಕೊಕ್ಕರೆ. ಮೈದಾಳ ರಾಮ.**

ಪ್ರಸ್ತುತ ಸಂಗ್ರಹದ ಕಥೆಗಳು ಸಮಗ್ರ ಕನ್ನಡ ಜನಪದ ಕಥೆಗಳ ಆಶಯ ಅಧ್ಯಯನಕ್ಕೆ, ತೌಲನಿಕ ಅಧ್ಯಯನಕ್ಕೆ , ಸಾಂಸ್ಕೃತಿಕ ವಿಶ್ಲೇಷಣೆಗೆ ಉಪಯೋಗಕ್ಕೆ ಬರುತ್ತವೆ. ಜನಪದ ಸಾಹಿತ್ಯಾಸಕ್ತರು ಈ ಕಥೆಗಳನ್ನು ವಿವಿಧ ಅಧ್ಯಯನ ಶಿಸ್ತುಗಳಿಗೆ ದುಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ದಿವಂಗತ ಎಚ್. ಎಲ್. ನಾಗೇಗೌಡರು ಸಂಗ್ರಹಿಸಿದ್ದ ಪ್ರಸ್ತುತ ಕಥೆಗಳನ್ನು ಸಂಪಾದಿಸಿ, ಪ್ರಕಟಣೆಗೆ ಸಿದ್ಧಪಡಿಸುವ ಜವಾಬ್ದಾರಿಯನ್ನು ನನಗೆ ವಹಿಸಿದ ಕರ್ನಾಟಕ ಜಾನಪದ ಪರಿಷತ್ತಿನ ಪದಾಧಿಕಾರಿಗಳಿಗೆ ಆಭಾರಿಯಾಗಿದ್ದೇನೆ.

**ಬೆಂಗಳೂರು**
**10.09.2007**

**ಪ್ರೊ. ಡಿ.ಲಿಂಗಯ್ಯ**

# ೧. ಮುತುಗದ ಎಲೆ ಗೋತಾಯಿ

ಒಂದ್ ಪಟ್ಟಣ. ಒಬ್ಬ ದೊಡ್ಡ ದೊರೆ. ಆ ದೊಡ್ಡ ದೊರೆಗೆ ಏಳ್ ಜನ ಮಕ್ಕಳು. ಆ ಏಳ್ ಜನ ಮಕ್ಕಳಿಗೂ ಚೆನ್ನಾಗಿ ಓದ್ಸಿ, ಓದ್ ಬಂದೋರ್‌ಗೆ ಹಾಲು ತುಪ್ಪ ಅನ್ನ ಹಾಕಿ ಮಂಚದ ಮೇಲೆ ಕೂಡ್ರಿಸಿ ಚೆನ್ನಾಗಿ ಸಾಕೋರು. ಏಳು ಜನ ಮಕ್ಕಳೂವೆ ಹೆಣ್ ಮಕ್ಕಳೇ ಹುಟ್ಟಿದ್ದಾರಲ್ಲ ಅಂತ, ಆ ದೊರೆ ಒಂದಿನ ಹೆಣ್‌ಮಕ್ಕಳನ್ನೆಲ್ಲ ಕೇಳಿದನು, ನನ್ನಾರವ್ವ ಸಾಕೋರು ಅಂತ. ಆರು ಜನ ಮಕ್ಕಳೂವೆ ನಾನ್ ಸಾಕ್ತೀನಿ, ನಾನ್ ಸಾಕ್ತೀನಿಅಂತ ಅಂದ್ರು. ಆದರೆ ಕೊನೆ ಕಿರಿಮಗಳು ಮಾತ್ರ ನಾನ್ ಸಾಕಾಕಿಲ್ಲ ಅಂದ್ಲು. ಅಪ್ಪ ನಾವ್ ಸಾಕಾಕೆ ಆಗ್ತದ? ಭಗವಂತ ನಮ್ಮನ್ನೆಲ್ಲ ಸಾಕ್‌ಬೇಕು. ಈ ಮಾತನ್ನೆ ಹೇಳ್ಕೊಂಡು ಬಂದ್ಲು. ಆಗ ಆ ಮಂತ್ರಿನ, ರಾಜ ಕರೆದು ನನ್ನ ಎಲ್ಲಾ ಹೆಣ್ಣು ಮಕ್ಕಳು ನಾವ್ ಸಾಕ್ತೀವಿ ನಾವ್ ಸಾಕ್ತೀವಿ, ಅಂತ ಹೇಳ್ತಾರೆ - ಇವಳ್ ಮಾತ್ರ ನಾನ್ ಸಾಕಾಕಿಲ್ಲ ಅಂತಾಳೆ. ಇವಳ್‌ನ ಯಾವದಾದರೊಂದು ಅಡವಿಗೆ ಕರಕೊಂಡೋಗಿ, ಇವಳನ್ನ ಕಡಿದು, ಇವಳ ರಕ್ತಾನ ನನ್ನ ಹಣೆಗೆ ತಂದು ಹಚ್ಚು ಅಂತ ಮಂತ್ರೀನ ಕರೆದು ಹೇಳಿದ ರಾಜ. ಹಂಗಂತ ಅವನ ಕೂಡ ಕಿರಿಮಗಳನ್ನ ಕಳಿಸ್‌ಬಿಟ್ಟ. ಆಗ ಅವಳ ತಾಯಿಗೆ ತುಂಬ ದುಃಖವಾಯ್ತದೆ. ಎಲ್ಲಾ ಆರು ಜನ ಮಕ್ಕಳು ಮನೇಲೇ ಇದ್ದಾರೆ. ಇವಳನ್ನ ಮಾತ್ರ ಕಾಡಿಗೆ ಕಳಿಸ್ತಾ ಇದ್ದಾರಲ್ಲ ಅಂತ ಬಹಳ ಸಂಕಟ ಪಡ್ತಾಳೆ. ಮಂತ್ರಿ ಅಡವಿಗೆ ಕರೆದ್‌ಕೊಂಡ್ ಹೋಗ್ಬಿಟ್ಟ. ಆ ಅಡವಿಯಲ್ಲಿ ಏನ್ ಯಾವ ಮನುಷ್ಯರ ಮುಖ ಇಲ್ಲ; ಅಂಥ ಅಡವಿಗೆ ಕರೆಕೊಂಡು ಬಂದ.

ಆ ಹೆಣ್ಣು ಓದ್ಕೊಂಡ್ ಇದ್ದದ್ದು. ಅಲ್ಲೇ ನೆರೆದ್‌ಬಿಡ್ತು. ಸುಸ್ತಾಗಿ ಮಲಗಿಕೊಂಡ್ ಬಿಡ್ತು. ಮಲಿಕ್‌ಕೊಂಡ್ ಬಿಡ್ತಲೆ ಅಲ್ಲೆ ಇದ್ದ ''ಮುತುಗದ ಮರ'' ಕಡಿದು ತೊಪ್ಲ ತಗೊಂಡ್ ಬಂದು ಒಂದು ಗುಡ್ಲುಹಾಕಿ ಅವಳನ್ನ ಇರಿಸಿದ. ಆ ಮುತುಗದ ಮರ ಕಡಿದಾಗ ರಕ್ತದಾಗೆ ಬಂದ ಅಂಟನ್ನು ತೆಗೆದುಕೊಂಡು ಬಂದು ಆ ರಾಜನಿಗೆ ತೋರಿ ಅಡವಿಯೊಳಗೆ ಅವಳನ್ನ ಕಡಿದಾಕ್ ಬಿಟ್ಟು ಬಂದೆ ಅಂತ ಹೇಳಿದ. ಆ ಅಡವಿಯೊಳಗೆ ಸುಸ್ತಾಗಿದ್ದ ಹುಡುಗಿಗೆ ಎಚ್ಚರವಾಗಿ ಎದ್ದು ನೋಡಿದರೆ ಯಾರೂ ಇಲ್ಲ. ಅವಳಿಗೆ ಸಂಕಟವಾಯ್ತು. ಪರಮಾತ್ಮನಿಗೆ ಒಪ್ಪಿಸ್ಕೊಂಡು ಆ ಮುತುಗದ ಎಲೆ ಗುಡಿಸಿಲಲ್ಲೆ ವನವಾಸ ಮಾಡ್ಕೊಂಡು ಇದ್ಲು ಆ ಹುಡುಗಿ. ಆ ಅಡವಿಯಲ್ಲೇ ಸಿಗೋ ಗೆಡ್ಡೆ ಗೆಣಸು ತಿನ್ಕೊಂಡು ಆ ಗುಡ್ಲಲ್ಲಿ ವಾಸಮಾಡ್ಕೊಂಡು ಇದ್ಲು.

ಹೀಗೆ ಇದ್ದಂತ ಕಾಲದಲ್ಲಿ ಆ ಆರು ಜನ ಹೆಣ್ ಮಕ್ಕಳು ಇದ್ದರಲ್ಲ ಆ ದೊರೆಗೆ, ಆ ಆರೂಜನ ಹೆಣ್ ಮಕ್ಕಳೂ ಮದುವೆಗೆ ಬಂದ್‌ಬಿಟ್ಟಿದ್ದರು. ಆವಾಗ್ ಹೇಳ್ದ ಆ ದೊರೆ ಮಂತ್ರೀನ ಕರೆದು, ಹೇ ಮಂತ್ರಿ ಒಂದ್ ತಾಯಿಗೆ ಆರು ಜನ ಗಂಡ್ಮಕ್ಕಳು ಹುಟ್ಟಿರಬೇಕು. ನನ್ ಆರ್ ಜನ ಹೆಣ್ಮಕ್ಕಳಿಗೂ ಒಂದೇ ತಾಯಿಯ ಹೊಟ್ಟೇಲಿ ಹುಟ್ಟಿರೋ ಗಂಡ್‌ಮಕ್ಕಳಿಗೇ

ಮದುವೆ ಮಾಡಬೇಕು ಅಂತ. ನಿನಗ್ ಎಷ್ಟು ಹಣ ಬೇಕೊ ಅಷ್ಟು ತಗೊಂಡೋಗಿ ಆ ತರಹದವರನ್ನೇ ಹುಡ್ಕೊಂಡು ಬರಬೇಕು ಅಂತ ಮಂತ್ರಿಗೆ ಹೇಳಿದ. ಆಗ ಮಂತ್ರಿ ಹೊರಟ. '' ದೊರೆತನಕ್ಕೇನು ಕಮ್ಮಿ, ಬಡತನವ ?''. ಹಣ ಇಟ್ಕೊಂಡು ಆರ್ ಜನ ಗಂಡು ಮಕ್ಕಳು ಯಾರ್ ಮನೇಲಿ ಅವರೆ ಅಂತ ಹುಡ್ಕೊಂಡ್ ಹೊರಟ.

ಹೋಗ್ತಾ ಇರಬೇಕಾದರೆ ಅತ್ಲೊಂದ್ ಪಟ್ಟಣ. ಆ ಪಟ್ಟಣದ ರಾಜಂಗೆ ಆರು ಜನ ಗಂಡು ಮಕ್ಕಳು. ಹೆಣ್ ಮಕ್ಕಳಿರಲಿಲ್ಲ. ಈ ಕಡೆಯಿಂದ ಈ ಮಂತ್ರಿ ಆರು ಜನ ಗಂಡು ಮಕ್ಕಳಿರೋ ಮನೆ ಹುಡ್ಕೊಂಡ್ ಬರುತ್ತಿದ್ದ. ಅತ್ಲಿಂದ್ ಆ ರಾಜ ಆರ್ ಜನ ಹೆಣ್ ಮಕ್ಕಳಿರೋ ಮನೆ ಹುಡ್ಕೊಂಡ್ ಬರ್ತಿದ್ದ. ಅಲ್ಲಿ ಒಂದು ಬಾರೆ. ಬಾರೆಲಿ ಇಬ್ಬರೂನು ಒಟ್ಟಿಗೆ ಸೇರಿದ್ರು. ಆಗ ಮಂತ್ರಿ ನೀವ್ ಎಲ್ಲಿಗ್ ಹೋಯ್ತಾ ಇದ್ದೀರಪ್ಪ ಅಂತ ಕೇಳ್ದ. ಆಗ ಅವರು ನಾವು ಆರ್ ಜನ ಹೆಣ್ಮಕ್ಕಳಿರೋ ಮನೆ ಹುಡ್ಕೊಂಡ್ ಹೋಗ್ತಾ ಇದ್ದೀವಿ ಅಂತ ಅಂದ್ರು. ಮತ್ತೆ ಈ ಮಂತ್ರಿ ಕೇಳಿದರೆ ನಾನೂ ಆರು ಜನ ಗಂಡ್ ಮಕ್ಕಳಿರೋ ಮನೆಗೆ ಗಂಡು ಹುಡ್ಕೋಕೆ ಹೋಗ್ತಾ ಇದ್ದೀನಪ್ಪ ಅಂದ್ರು. ಹೆಣ್ಣೋರ ಫೋಟ ಗಂಡೋರು, ಗಂಡ್ಣೋರ ಫೋಟ ಹೆಣ್ಣೋರು ಈಸ್‌ಕೊಂಡು, ಇತ್ತಾಗ್ ಇವ್ರು ಅತ್ತಾಗ್ ಅವ್ರು ಹೋದರು. ಫೋಟೋ ತಗೊಂಡು ಎಲ್ಲಾರು ಇವ್ರ ಮನೆ ಅವ್ರು, ಅವ್ರಮನೆ ಇವರು ಒಪ್ಕೊಂಡು ಲಗ್ನವ ಫಿಕ್ಸ್ ಮಾಡೇಬಿಟ್ಟರು. ಆಗ ದೊರೆ ಮಂತ್ರಿಗೆ ಹೇಳಿ ಆರ್ ಮಕ್ಕಳಿಗೂ ಏನೇನ್ ಸೀರೆ ಬಟ್ಟೆ, ಒಡವೆ ಬೇಕು ಅಂತ ಕೇಳಿ ತಗೊಂಡ್ ಬಾವೋಗು ಅಂತ ಹೇಳಿದ. ಆಗ ಮಂತ್ರಿ ಹೊರಟ. ಹೋಗ್‌ಬೇಕಾದರೆ ಎಲ್ಲಾನು ಸರಿ ಮುತ್ತುಗದ ಎಲೆ ಸೊಪ್ಪಾಕಿ ಬಂದಿದ್ನಲ್ಲ ಆ ಹುಡುಗಿ ಬದುಕಿದಾಳೋ ಸತ್ತೋದಳೋ ಅಂತ, ಎಲ್ಲಾದರೂ ಇದ್ದರೆ ತಿಳ್ಕೊಳ್ಳಾನ ಅಂತ, ಕಾಡಿಗೆ ಬಂದು ''ಮುತುಗದ ಎಲೆ ಗೋತಾಯಿ, ಮುತುಗದ ಎಲೆ ಗೋತಾಯಿ'' ಅಂತ ಮೂರ್ ಸಲ ಕೂಗಿದ. ಎಲ್ಲೋ ಒಂದ್ ಮೈಲೀಲಿ ಈ ಹುಡ್ಗಿ ''ತಾಳ್ ಮಾವ ಬತ್ತೀನಿ, ತಾಳ್ ಮಾವ ಬತ್ತೀನಿ'' ಅಂದ್ಲು. ತಾಳ್ ಮಾವ ಬತ್ತೀನಿ ಅಂದ್ರೆ ಇವನಿಗೆ (ಮಂತ್ರಿ) ಸೋದರಮಾವುನಗೆ ಏನ್ ಕೇಳಿಸ್ತು. ತಾಳೇ ವೂ ತಗೊಂಡ್ ಬಾ ಅಂತ ಕೇಳಿಸ್ತು. ಅವರೆಲ್ಲ (ಆರುಜನ ಮಕ್ಕಳೆಲ್ಲ) ಸೀರೆ, ಬಟ್ಟೆ, ಒಡವೆ ತಗೊಂಡ್ ಬಾ ಅಂದ್ರೆ ಇವಳು ತಾಳೆವೂ ತಗೊಂಡ್ ಬಾ ಅಂದ್ಲಲ್ಲ ಅಂತ ಮುಂದೊಂದು ಪಟ್ಟಣಕ್ಕೆ ಹೋಗಿಬಿಟ್ಟ.

ಆ ಪಟ್ಟಣದೊಳಗೆ ಒಬ್ಬ ರಾಜ. ಅವನಿಗೆ ಒಬ್ಬನೇ ಮಗ. ಹೆಣ್ಮಕ್ಕಳಿಲ್ಲ. ಆ ರಾಜನಿಗೆ ಒಂದು ಸುರಹೊನ್ನೆ ಮರದ ತೋಟ. ಆ ತೋಟದೊಳಗೆ ಒಂದು ಹಾಲ್ ಬಾವಿ, ಒಂದ್ ನೀರ್ ಬಾವಿ, ಒಂದ್ ಅರಿಶಿಣ ಕುಂಕುಮದ್ ಬಾವಿ ತೆಗಿಸಿ ಬಿಟ್ಟಾವ್ನೆ. ಆ ತೋಟದೊಳಗೆ ಒಂದೆ ಒಂದು ತಾಳೆ ಮಾತೆ ಬಿಟ್ಟದೆ. ಆ ತಾಳೆ ಮ್ವಾತೆ ಕಾವಲು ಕಾಯಕ್ಕೆ ಹಗಲು ಮೂರು ಜನ, ರಾತ್ರಿ ಮೂರು ಜನ ಆಳುಗೋಳು. ಆ ತಾಳೆ ಮ್ವಾತೆನ ಅಂಗೆ ಕುಯ್ಕೊಂಡ್ ಬರುವಂಗಿಲ್ಲ. ನೀರು ಬಾವಿಗ್ ಹೋಗಿ ಕೈಕಾಲು ತೊಳ್ಕೊಂಡು, ಹಾಲ್ ಬಾವಿಗೆ ಹೋಗಿ , ಹಾಲು ಕುಡಿದು, ಅರಿಶಿಣ ಕುಂಕುಮದ ಬಾವಿಗೋಗಿ ಕುಂಕುಮ ಅರಿಶಿಣ ಅಚ್‌ಕ್ಕೊಂಡು,

ಆ ತಾಳೆ ಮ್ವಾತೆ ಕುಯ್ಕೊಂಡ್ ಬರಬೇಕು. ಅಂತವರ್ಗೂ ಮುಟ್ಟೋಹಂಗಿಲ್ಲ ಅದನ್ನ. ಆ ತೋಟ ಕಾಯೋ ಆಳ್‌ಗಳ ಹೆಂಡ್ತಿರು ಒಬ್ಬರಿಗೊಬ್ಬರು ಹಂಗಂತ ಮಾತಾಡಕೊಂತ ''ಅಯ್ಯೋ ಅಕ್ಕ ಬನ್ನಿರಕ್ಕ ನಮ್ ಯಜಮಾನ್ರಿಗೆ ಅಡಿಗೆ ಮಾಡ್ಬೇಕು ಹೊತ್ತಾಯ್ತು'' ಅಂತ ಒಬ್ಬರಿಗೊಬ್ಬರು ನೀರು ತರಕ್ಕೆ ಇತರೆ ಕೆಲಸಕ್ಕೆ ಹೋಗ್ತಾರೆ.

ಆವಾಗ ಆ ಮಂತ್ರಿ ಅಲ್ಲೇ ಪಕ್ಕದಲ್ಲಿ ಕುಂತಿದ್ನೋನು, ಎಲ್ಲಾನು ಇವರು ಮಾತಾಡೋದ್ನ ಕೇಳಿಸಿಕ್ಕೊಂಡು ಕೂತಿದ್ದ. ಒಂದ್ ಚಾವಣಿ ಕೆಳಗೋಗಿ ಮಲಗ್‌ಕೊಂಡ. ಕೊಕ್ಕೊ ಅಂತ ಕೋಳಿ ಕೂಗೋ ಹೊತ್ತಿಗೆ ಎದ್ದೋಗಿ ತೋಟದೊಳಗೆ, ನೀರ್ ಬಾವಿಗೆ ಹೋಗಿ ಕೈಕಾಲು ತೊಳೆದುಕೊಂಡು, ಹಾಲ್‌ಬಾವಿಗೆ ಹೋಗಿ ಹಾಲ್ ಕುಡಿದು, ಅರಿಶಿಣ ಕುಂಕುಮದ್ ಬಾವಿಗ್ ಹೋಗಿ ಅರಿಶಿಣ, ಕುಂಕುಮ ಹಚ್ಕೊಂಡು, ತಾಳೆ ಮರಕ್ಕೆಹತ್ತಕ್ಕೆ ನೋಡ್ತಿದ್ದ. ಅದೇ ವೇಳೆಗೆ ಈ ಕಾವಲು ಕಾಯುವವರು ಕೋಳಿ ಕೂಗ್ತು ಎದ್ದೇಳ್ರಲೋ ಹೋಗಾನ ಅಂತ ಎದ್ದರು. ಇದನ್ನ ಕೇಳಿಸ್ಕೊಂಡು ಮಂತ್ರಿ, ನನ್ನ ನೋಡಿದ್ರೆ ಬಿಟ್ಟಾರ ಇವರು ಅಂತ, ಓಡಿ ಬಂದ್ ಅದೇ ಚಾವಣಿ ಕೆಳಗೆ ಮಲಕ್ಕೊಂಡ್‌ಬಿಟ್ಟ. ಬೆಳಿಗ್ಗೆ ಮಾಮೂಲಿನಂತೆ ರಾಜನ ಮಗ ತೋಟದೊಳಗಿದ್ದ ನೀರ್ ಬಾವಿ, ಹಾಲ್ ಬಾವಿಗೆ ಹೋಗಿ ನೋಡಿ ಯಾರೋ ಬಂದ್ ಕೈಕಾಲು ತೊಳ್ಕೊಂಡ್ ಹೋಗಾವರಲ್ಲ ಅಂತ ಆ ಆಳುಗಳಿಗೆ ಕರೆದು 'ಯಾಕ್ರೋ ಬೋಳಿ ಮಕ್ಕಳ ನಿಮ್ಗೆ ಸಂಬಳ ಕೊಡೋದಿಲ್ವಾ ನಾನು ? ಸರಿಯಾಗಿ ತೋಟ ಕಾಯಕ್ಕಾಗಲ್ವ' ಅಂತ ಆಳುಗಳಿಗೆ ಕೇಳ್ತಾನೆ. ಏನೇಳ್ತಾರೆ ಅವರು ? ಅವರಿಗೆ ಗೊತ್ತಿಲ್ಲ. ಹೇಳಾಕಾಗಲ್ಲ ಸ್ವಾಮಿ, ನಾವ್ ಬೆಳಗಾನ ಇಲ್ಲೇ ಮಲಗಿದ್ದೊ. ಯಾರ್ ಬಂದ್ ಹೋದ್ರೋ ಗೊತ್ತಿಲ್ಲ ಅಂದ್ರು. ಅಂಗಾದ್ರೆ ನೀವ್ ಇವತ್ ರಾತ್ರಿ ಕಾವಲು ಕಾಯಕ್ಕೆ ಬರಬ್ಯಾಡಿ. ನಿಮ್ಗೆ ಬಿಟ್ಟಿ ಸಂಬಳನ ಕೊಡೋದು ? ಯಾಕ್ ಬರ್ತೀರ ? ಬರ್‌ಬ್ಯಾಡಿ ಅಂತ ಹೇಳ್ಬಿಟ್ಟ.

ಮಾರನೆ ದಿನಕ್ಕೆ ಆ ರಾಜನ ಮಗನೇ ಬಂದು ಆ ತಾಳೆಮರದ ಕೆಳಗೆ ಒಂದು ಮಡಿಬಟ್ಟೆನ ಮೈ ಮುಖದ ಮೇಲೆ ಹಾಕ್ಕೊಂಡು ಮಲಗಿಬಿಟ್ಟ. ಮಲಗಿಕೊಂಡಾಗ ಈವಯ್ಯ ಕೋಳಿಕೂಗ್ಲಿಲ್ಲ, ನಾಯಿ ಬೊಗಳಿಲ್ಲ, ಇನ್ ಇತ್ಕಡಿಕೆ ಜೀವ ಹೊಡ್ಕೋತದಲ್ಲಿ, ಮದ್ವೆಗೆ ಸೀರೆ, ರವಿಕೆ, ಒಡವೆ ತಗೊಂಡ್ ಹೋಗ್ಬೇಕಲ್ಲ ಅಂತ. ಯೋಚನೆ ಮಾಡ್ಕೊಂಡ್ ಇವನು ಕೋಳ್ ಕೂಗ್ಲಿಲ್ಲ, ಏನಿಲ್ಲ ಎದ್ದು ತೋಟುಕ್ ಹೋಗಿ, ಬಾವಿಗೆ ಹೋಗಿ, ಕೈಕಾಲು ತೊಳ್ಕೊಂಡ್, ಹಾಲ್ಕುಡಿದು, ಕುಂಕುಮ ಇಟ್ಕೊಂಡೋನು, ಶರಣುಮಾಡಿ ತಾಳೆಮರಕ್ಕೆ ಹತ್ತಿದ. ಹತ್ತಿದ ಮೇಲೆ, ತಾಳೆ ಹೂ ಮುರುಕೊಂಡೇ ಬಿಟ್ಟ. ಆ ತಾಳೆ ಹೂವಿನೊಳಗೆ ಬರೀ ಏಳೇ ತಾಳೆ ಗರಿ ಇದ್ದೋವು. ಈ ಮ್ವಾತೆ ಮುರ್ಕೊಂಡ್ ಮರ ಇಳಿಯೊತ್ತಿಗೆ, ಈ ರಾಜನ ಮಗ ಹೋಗಿ ಪಂಚೆ ಇಡ್ಕೊಂಡ್ ಬಿಟ್ಟ. ಆಗ ಆ ಮಂತ್ರಿ ಸ್ವಾಮಿ ಇಲ್ಲಿಂದ್ ಬಿದ್ ಬಿಡ್ತೀನಿ, ನನ್ ಪ್ರಾಣ ಕಳ್ಕೊಂಡ್ ಬಿಡ್ತೀನಿ ಅಂದ. ಅಯ್ಯಾ ನಿನ್ನ ಪ್ರಾಣ ಕಳಕೊಬ್ಯಾಡ. ಮೆತ್ತಗೆ ಇಳಿಯಯ್ಯಾ ಕೆಳಗೆ ನೀನು ಅಂತ ಹೇಳಿದ. ಮಂತ್ರಿ ಕೆಳಕ್ಕಿಳಿದ. ಈ ತಾಳೆ ಹೂನ ಕದ್ದು

ತಗೊಂಡೋಗ್ತಾ ಇದೀಯ, ಇದ್ಯಾವ ಬಗೇಲಿ ನೀನ್ ಮಾರ್‍ತೀಯ ಅಂತ ಕೇಳಿದ ರಾಜ. ಸ್ವಾಮಿ ನನಗ್ ಗೊತ್ತಿಲ್ಲ ಅಂದ ಮಂತ್ರಿ. ನೋಡಯ್ಯ ತಾಳೆಗರಿಯಲ್ಲಿ ಅಕ್ಷರ ಇದೆ. ಈ ತಾಳೆಗರಿನ ದಿನಕ್ಕೊಂದರಂತೆ ನೆಲ, ಮನೆ ಸಾರಿಸಿ, ಮಡಿ ಉಟ್ಕೊಂಡು ಏಳ್ ರಾತ್ರಿ ಓದ್ಬೇಕಣಯ್ಯ. ಆಮೇಲೆ ಇದನ್ನ ಮುಟ್ಟಬೇಕು ಕಣಯ್ಯ ಅಂದ. ಮುಟ್ಟಿದನಲ್ಲ ಇನ್ನೇನ್ ಮಾಡೋದು ಅಂದ. ಕಿತ್ತುಬಿಟ್ಟು ಆಗಿದೆ; ಏನಂದ್ರು ತಲೆಬಗ್ಗಿಸ್ಕೊಂಡು ಹೋಗ್ಬೇಕಲ್ಲ ಅಂತ ಹೇಳಿದ್ದಕ್ಕೆಲ್ಲ ಹೂ ಅಂತ ಬಂದ್‌ಬಿಟ್ಟ.

ಬಂದೋನೆ ಆ ತಾಳೆ ಗರಿ ಮಡಿಕೊಂಡು ಮದ್ವೆಗೆ ವಡವೆ, ವಸ್ತ್ರ ಎಲ್ಲಾ ತಗೊಂಡ್ ಬಂದ. ಈಯಮ್ಮ ಮುತುಗದ ಎಲೆ ಗುಡ್ಲಲ್ಲಿದ್ದವಳ ಹತ್ತಿರ ಬಂದು ಮುತುಗದ ಎಲೆ ಗೋತಾಯಿ ಅಂತ ಕೂಗಿಕೊಂಡ. ಕೂಗಿದಾಗ ತಾಳ್ ಮಾವ ಬರ್‍ತೀನಿ ಅಂತ ಅಂದ್ಲು ಆಯಮ್ಮ. ಇವನು ತಗೊಂಡೋದ. ''ನೋಡಮ್ಮ ಎಲ್ಲಾರು, ಸೀರೆ, ರವಿಕೆ, ಒಡವೆ ಕೇಳುದ್ರೆ, ನೀನು 'ತಾಳೆ ಹೂ' ತಗೊಂಡ್ ಬಾ ಮಾವ ಅಂತ ಹೇಳ್ದಲ್ಲ ತಗೊಳ್ಳವ್ವ 'ತಾಳೆ ಹೂವು' ತಂದಿದ್ದೀನಿ ಅಂತ ಕೊಟ್ಟ. ಇದೇನ್ ಮಾಡಾನ ಮಾವ ಅಂತ ಕೇಳಿದಳು. ''ನೀನಿರೋ ನೆಲ ಮನೆ ಸಾರಿಸ್ಕೊಂಡು ಈ ತಾಳೆ ಗರಿಯಲಿರೋ ಅಕ್ಷರಾನ ಏಳ್ ರಾತ್ರಿ ಓದ್ಕೊಂಡು ಈ ಹೂ ಮುಡ್ಕೋಬೇಕಂತೆ ಕಣವ್ವ'' ಅಂತ ಹೇಳಿದ.

ಸೋದರ ಮಾವ ಮಂತ್ರಿ ಹೇಳ್ಬಿಟ್ಟು ಊರಿಗೆ ಬಂದ್‌ಬಿಟ್ಟ, ಇವಳು ವಿದ್ಯಾವಂತೆ. ಆದ್ದರಿಂದ ಆ ಹೂವನ್ನು ಮಡಗಿಬಿಟ್ಟು ಇರೋ ನೆಲ ಮನೆ ಸಾರಿಸಿ, ಒಂದ್‌ಸೆರಗು ಕುಕ್ಕಿದಳು. ಒಂದೆ ಸೆರಗನ್ನ ಉಟ್ಕೊಂಡಳು. ದೀಪಕ್ಕೆ ಎಣ್ಣೆ ಹೊಂಚಬೇಕಲ್ಲ ಅಂತ ಬೆಳ್ಳೂರ ಅಂತ ಒಂದು ಪಟ್ಟಣಕ್ಕೆ ಬಂದ್ಲು. ಹೋದರೆ ಅಲ್ಲೊಬ್ಬಳು ಎಣ್ಣೆ ಮಾರ್‍ಕೊಂಡ್ ಹೋಯ್ತಿದ್ದ ಮುದುಕಿ ಏನ್ಮಾಡಿದ್ಲು, " ಅಯ್ಯೋ ತಾಯಿ ಯಾವ ರಾಜನ ಮಗಳವ್ವ ನೀನು ಇಂಗೋಯ್ತಾ ಇದ್ದಿ? ಯಾರಾದರು ನಿನ್ನ ಕಂಡರೆ ಬಿಡ್ತಾರೇನವ್ವ? ಎಲ್ಲಿಗೋಯ್ತಿಯವ್ವ ಕಂದ" ಅಂದ್ಲು. ಆಗ ಈ ಏಳ್ ಜನ ಹುಟ್ಟಿದ್ದರಿಂದ ಹಿಡಿದು ಕಡೆಯವರೆಗೂ ಇವಳ ಕಥೆ ಹೇಳಿದಳು ಮುದುಕಿಗೆ. ಹೇಳ್ದಾಗ ಅಯ್ಯೋ ಬಾರವ್ವ ಅಂತ ಕರ್‍ಕೊಂಡೋಗಿ ಒಂದ್ ಬಟ್ಲು ಎಣ್ಣೆ, ಸ್ವಲ್ಪ ಹತ್ತಿ ಕೊಟ್ಟು ಕಳಿಸಿದ್ಲು ಮುದುಕಿ. ಈ ಹುಡುಗಿ ಹೋಗಿ ಆ ತಾಳೆ ಮ್ಯಾತೆಯೊಳಗಿದ್ದ ಏಳೂ ಗರಿಗಳನ್ನ ದಿನಕ್ಕೆ ಒಂದರಂತೆ ಓದಿ ಕೊನೆಗೆ ಹೂ ಮುಡಿದುಕೊಂಡಳು.

ಪ್ರತಿದಿನದ ಹಾಗೆ ಹೊಟ್ಟೆಗೆ ಗೆಡ್ಡೆ ಗೆಣಸು ಹುಡ್ಕೊಂಡ್ ಬರೋದರೊಳಗೆ ಈ ಮುತುಗದ ಗುಡಿಸಲು ''ಅರಮನೆ ಗುರುಮನೆ'' ಆಗಿದೆ. ಮನೇಲಿ ಸಣ್ಣಕ್ಕಿ, ತೊಗರಿಬೇಳೆ ಕೇಳ್ತೀಯ? ಹಾಲ್‌ಬಾವಿ, ನೀರ್‌ಬಾವಿ, ಸುರಹೊನ್ನೆ ಮರದ ತೋಟವೇ ಆಗಿದೆ ಅವಳಿರೊ ತಾವು. ಇನ್ನೇನ್ ಮಾಡ್ತಾಳೆ ? ಏನಪ್ಪ ಪರಮಾತ್ಮ ಇಂಗಾಯ್ತಲ್ಲ ? ನಾನ್ ಬಂದಿದ್ದು ಮುತುಗದ ಎಲೆ ಗುಡಿಸಿಲಿಗೆ, ನನಗ್ ಇಂಗಾಯ್ತಲ್ಲ? ಏನೋ ಗುರುಬಲ ಇದೆ. ಆ

ಪರಮಾತ್ಮ ಕೊಟ್ಟವ್ನೆ ಅಂತ, ಬಂದು ಆ ಅಡವಿಗೆ ಹೋಗ್ಬಿಟ್ಟಳು. ಹೋಗಿ ನೀರ್ ತೊಗೊಂಡು, ಕೈಕಾಲು ತೊಳೆದು, ಬಾಗಿಲು ಸಾರಿಸಿ, ಚಂಬಲ್ಲಿ ನೀರ್ ಹಿಡ್ಕೊಂಡ್ ನಿಂತಿದ್ಳು. ಆಗ ಈ ರಾಜನ ಮಗ ಇದ್ದನಲ್ಲ ಕುದುರೆ ಹತ್ಕೊಂಡ್ ಬಂದ್‌ಬಿಟ್ಟ. ರಾಜನ ಮಗ ಬಂದ ತಕ್ಷಣ ಗ್ರಾಜಿನ ಕಂಬಕ್ಕೆ ಕುದುರೆ ಕಟ್ಟಿಹಾಕಿದ ಕೈಕಾಲಿಗೆ ನೀರು ಕೊಟ್ಟಳು. ಒಳಗಡೆ ಹೋದ. ಹೋಗಿ ಮಂಚದ ಮೇಲೆ ಕೂತ್ಕೊಂಡು ಪಗಡೆ ಆಡಿ ಆವಾಗ ಏನಂತ ಕೇಳ್ದ ? ''ನೀನೆ ಹೆಂಡ್ತಿ ನಾನೇ ಗಂಡ. ಇದರೊಳಗೆ ಏನೂ ಅನುಮನಸ್ಸು ಆಡಬ್ಯಾಡ'' ಅಂತ ಹೇಳಿದ. ಆಗ ಆ ರಾಜನ ಮಗನು ಈ ಹುಡ್ಗೀನು ಜೊತೆಯಾಗ್ಬಿಟ್ಟರು. ಹೀಗೆ ಇವರು ಕಾಲ ಕಳಿಬೇಕಾದರೆ ಅವಳ ಆರುಜನ ಅಕ್ಕಂದಿರಿಗೂ ಲಗ್ನವಾಗಿತ್ತು. ಲಗ್ನವಾಗೋ ಮುಂಚೆ ಆರೂ ಜನ ನಾವ್ ಸಾಕ್ತೀವಿ, ನಾವ್ ಸಾಕ್ತೀವಿ ಅಂತ ಹೇಳ್ತಿದ್ದೋರು ಲಗ್ನವಾದ ಮೇಲೆ ಗಂಡ ಹೆಂಡ್ತಿದೀರು ಅವರ ಅವರೇ ಆಗಿ, ತಂದೆ ತಾಯಿನೇನು ಇವರು ಸಾಕ್ತಾ ಇರ್ಲಿಲ್ಲ.

ರಾಜ ರಾಣಿಗೆ ತಿನ್ನಕ್ಕೆ ಹಿಟ್ಟಿಲ್ಲ. ಕುಡಿಯಕ್ಕೆ ನೀರಿಲ್ಲ. ಇವರು ಯಾವಾಗ್ಲೋ ಕೊಟ್ಟಾಗ ತಿನ್ನಬೇಕು. ರಾಣಿ ಈ ಯೋಚನೆಯಲ್ಲೆ ಬೆವಾಜಿ ಮರಿಯಾಗಿಬಿಟ್ಟಳು. ಕಾಯಿಲೆ ಅತ್ಕೊಂಡ್ ಬಿಡ್ತು. ಖಾಯಿಲೆಯಿಂದ ರಾಜ, ಮಂತ್ರಿಯನ್ನು ಕರೆದು (ಹೆಂಡ್ತಿ ತಮ್ಮ) ಹಿಂಗೇ ಇದ್ದರೆ ನನ್ನ ಹೆಂಡ್ತಿ ಸತ್ಹೋಗಿಬಿಡುತ್ತಾಳೆ. ನನ್ನ ಆರು ಜನ ಮಕ್ಕಳೂ ಸಾಕ್ತೀವಿ ಅಂತ ಹೇಳಿ ಹಿಂಗ್‌ಮಾಡಿದರು. ನಾನು ಸುಮ್ನೆ ನನ್ನ ಕಿರಿಮಗಳನ್ನ ಅಡವಿಗೆ ಕಳಿಸಿ ತಲೆ ಹೊಡಿಸ್ದೆ. ಯಾವುದಾದ್ರು ಆಸ್ಪತ್ರೆಗೆ ಕರ್‍ಕೊಂಡೋಗಿ ನಿಮ್ಮಕ್ಕನಿಗೆ ಇಲಾಜ್ ಮಾಡಿಸ್ಕೊಂಡು ಬಾರಪ್ಪ ಖಾಯಿಲೆನ ಅಂತ ಹೇಳಿದರು. ಹೇಳಿ ಜೊತೆ ಮಾಡಿ ಕಳಿಸಿದ್ರು. ಅವನೇನ್ಮಾಡಿದ ಮಂತ್ರಿ ? ''ಮುತುಗದ ಎಲೆ ಹೂಮ್ವಾತೆ'' ಇದ್ದಳಲ್ಲ (ಮಗಳ ಮನೆಗೆ), ಅವಳ ಮನೆಗೆ ಕರ್‍ಕೊಂಡು ಬಂದ. ಬಂದಾಗ, ಮನೇಲಿದ್ದೋನು ರಾಜನ ಮಗನಿಗೆ ,ಇವರು ನಮ್ಮ ತಾಯಿ, ಇವರು ನನ್ನ ಸೋದರ ಮಾವ ಅಂತ ಹೇಳಿದ್ಳು. ಹಾಲು, ತುಪ್ಪ, ಬೆಣ್ಣೆ ಹಾಕಿ ತಾಯಿ, ಸೋದರಮಾವನನ್ನು ಸುಖವಾಗಿ ಸಾಕಿದಳು. ಹೀಗೇ ಮೂರು ತಿಂಗಳು ಕಳೀತು. (ತಾಯಿಗೆ ಮಗಳು ಅಂತ ಗೊತ್ತಿಲ್ಲ). ತಾಯಿಗೆ ಖಾಯಿಲೆ ವಾಸಿಯಾಗಿ ತಯಾರಾಗಿಬಿಟ್ಟಳು. ಮೂರು ತಿಂಗಳು ಕಳಿತಾ ಬಂತಲೆ ತಾಯಿ ಏನಂದ್ಳು, ಅಯ್ಯೋ ಯಾವ ತಾಯಿ ಹಡದಳೋ ಈ ಮಗಳ್ನ? ಯಾವ ನನ್ನಪ್ಪ ಹುಟ್ಟಿಸಿದನೋ ಇವಳ್ನ ? ಈವತ್ತು ನನ್ನ ಉಪಚಾರ ಮಾಡಿದ್ಳು. ''ನನ್ನ ಆರು ಜನ ಹೆಣ್ ಮಕ್ಕಳು ನನ್ ಕಷ್ಟ ಸುಖ ನೋಡ್ಲಿಲ್ಲ''. ಈಗ ಖಾಯಿಲೆ ಗುಣವಾಯ್ತು ನಡಿಯಪ್ಪ ಊರಿಗೋಗೋಣ ಅಂತ ಅಂದ್ಲು ಮಂತ್ರಿಗೆ.

ಆಗ ಮಗಳು ಒಳ್ಳೆ ಸೀರೆ ರವಿಕೆ ತಂದು ತಾಯಿಗೆ ಉಡ್ಸಿ ಕಳಿಸಿಕೊಟ್ಟಳು. ಆಗಲು ಮಗಳು ಅಂತ ಹೇಳ್ಳಿಲ್ಲ. ಬಾರೆಮ್ಯಾಕ ಬಂದ್ ಅಕ್ಕಾ ನಿನ್ ಖಾಯಿಲೆ ಎಲ್ಲಾ ವಾಸಿ ಆಯ್ತೆ ಅಂದ. ವಾಸಿ ಆಯ್ತು ಅಂದ್ಳು. ಆಯ್ತು ನಡೀ ಅಂತ ಮನೆಗೆ ಕರ್‍ಕೊಂಡ್ ಬಂದ. ಬಂದ ಮೇಲೆ ಅಕ್ಕನಿಗ್ಹೇಳಿದ. ಅವಳ್ಯಾರು ಬೇರೆ ಅಲ್ಲ ನಿನ್ನ ಕಿರಿಮಗಳು. ಅಡವಿಗ್ ಕಳಿಸಿದ್ದರಲ್ಲ ಅವಳೇ ಅವಳು. ನಾನ್ ಅಡವಿಗೆ ಕರ್‍ಕೊಂಡೋಗಿ ಅವಳನ್ನ ಕಡಿದಾಕ್ಲಿಲ್ಲ. ಒಂದು

ಮುತುಗದ ಎಲೆ ಗುಡ್ಲಲಿ ಕೂಡಿಹಾಕಿ ಬಂದೆ ಅಂತ ಅಂದ. ಅಯ್ಯಾ ಅಲ್ಲೆಯಾದರು ಹೇಳ್‌ಬ್ಯಾಡವೇನಪ್ಪ? ನನ್ನ ಆಸೆ ಆದರೂ ಕಳಕೊಳ್ಳುವೆ ಅಂತ ಹೇಳಿದಳು. ಮನೇಲಿ ಯಾರುಗೂ ಹೇಳೋದ್ ಬ್ಯಾಡ ಅಂತ ಅಂದ ಮಂತ್ರಿ. ಬಂದರೆ ಅಷ್ಟೊತ್ತಿಗೆ ಕಷ್ಟ ಸುಖ ನೋಡೋರಿಲ್ಲದೆ ಮಂಚದ ಕೆಳಗೆ ಬಿದ್ದವನೆ ಈ ದೊರೆ. ಆವಾಗ ಈಯಮ್ಮ ಅಯ್ಯೋ ನಿಮ್ಮ ಮಾವ ಇಂಗಾಗ್‌ಬಿಟ್ಟಿದ್ದಾರೆ, ನನ್ನ ಕರ್ಕೊಂಡೋಗಿದ್ದಲ್ಲಪ್ಪ ಆಸ್ಪತ್ರೆ, ಆ ಆಸ್ಪತ್ರೆಗೆ ಇವರನ್ನೂ ಕರ್ಕೊಂಡೋಗಪ್ಪ ಅಂತ ಹೇಳಿದ್ಳು ಆಯಮ್ಮ. ಮಂತ್ರಿ ರಾಜನ ಕರ್ಕೊಂಡು ವಾಪಸ್ ಮತ್ತೆ ಕಿರಿಮಗಳ ಮನೆಗೆ ತಂದೆನ ಕರ್ಕೊಂಡು ಬಂದ. ಆಗ ರಾಜನ ಮಗ ಇವರ್ಯಾರು ಅಂತ ಕೇಳಿದ. ಇವರು ನಮ್ಮ ತಂದೆ ಅಂದಾಗ ಅವರಿಗೂ ಸಹ ಅದೇ ರೀತಿ ಊಟ ಉಪಚಾರ ಮಾಡಿದರು. ಅವರೂ ಚೆಂದಾಗಾಗಿ ನಡಿಯಪ್ಪ ಹೋಗಾನ ಅಂತ ಮಂತ್ರಿಗೆ ಹೇಳಿದ. ಮಂತ್ರಿ ಕರ್ಕೊಂಡ್ ವಾಪಾಸ್ ಬಂದ್‌ಬಿಟ್ಟ.

ಹೀಗೇ ಇರೋವಾಗ ಒಬ್ಬ ಗೋಸಾಯಿ ಬೀದಿ ಬೀದಿಯಲ್ಲಿ ಸಾರ್ಕೊಂಡ್ ಬರ್‍ತಾ ಇದ್ದ. ಏನಂದರೆ ''ಒಂದು ಪಟ್ಟಣವಂತೆ. ಆ ಪಟ್ಟಣದೊಳಗೆ ಒಬ್ಬ ರಾಜ. ರಾಜನಿಗೆ ಏಳು ಮಕ್ಕಳಂತೆ. ಓದ್ಕೊಂಡ್ ಬರೋ ಮಕ್ಕಳಿಗೆ ತುಪ್ಪ ಅನ್ನಾನೇ ಹಾಕಿ ಚೆನ್ನಾಗಿ ಸಾಕ್ತಾ ಇದ್ದನಂತೆ. ಎಲ್ಲಾ ಹೆಣ್‌ಮಕ್ಕಳೇ ಆದ್ದರಿಂದ ಯಾರವ್ವ ನನ್ನ ಸಾಕೋರು ಅಂತ ಮಕ್ಕಳನ್ನೆಲ್ಲ ಕೇಳ್ದನಂತೆ. ಆಗ ಅವನ ಆರು ಜನ ಹೆಣ್‌ಮಕ್ಕಳು ನಾವ್ ಸಾಕ್ತೀವಿ, ನಾವ್ ಸಾಕ್ತೀವಿ ಅಂತ ಹೇಳಿದರೆ, ಕಿರಿಮಗಳು ಮಾತ್ರ ನಾನ್ ಸಾಕಾಕಿಲ್ಲ. ಎಲ್ಲಾ ಭಗವಂತನ ಇಚ್ಛೆ ಅಂತ ಹೇಳಿದ್ದಕ್ಕೆ ಅಡವಿಗೆ ಕಣ್‌ಕಟ್ಟಿ ಕಳಿಸಿ ಕಡಿದ್‌ಹಾಕಿಬಿಡಿ ಅಂತ ಕಳಿಸಿದ್ರಂತೆ. ಮಂತ್ರಿ ಕಡಿದಾಕದೆ ಬಿಟ್ಟುಹೋದ. ಅವಳು ಅಷ್ಟೈಶ್ವರ್ಯದಲ್ಲಿ ಬದುಕ್ತಾವಳೆ'' ಅಂತ ಈ ಗೋಸಾಯಿ ಸಾರ್ಕೊಂಡ್ ಬಂದ್‌ಬಿಟ್ಟ.

ಆವಾಗ ಈ ಆರುಜನ ಹೆಣ್‌ಮಕ್ಕಳು ಏನೋ ಗೋಸಾಯಿ ಸಾರ್ಕೊಂಡು ಬರ್‍ತಾವ್ನೆ ಅದೇನು ಕೇಳಿಕೊಂಡು ಬಾ ಅಂತ ಮನೇಲಿದ್ದ ಆಳಿಗೆ ಹೇಳಿದರು. ಆಗ ಅವನು ಹೋಗಿ ಕೇಳ್ಕೊಂಡು ಬಂದು ಮೇಲಿನಂತೆ ಹೇಳಿದ. ಅಂಗಾದರೆ ನಾವೇ ಅಲ್ವ ಏಳ್ ಜನ ಮಕ್ಕಳು? ಇದು ನಮ್ಮನೆ ಕಥೆನೆ ಅಂತ ತಿಳಿದು, ಏನಾದರು ಮಾಡಿ ಅವಳಿಲ್ಲದಂಗೆನೆ ಮಾಡಿಬಿಡಬೇಕು ಅಂತ, ಆ ಗೋಸಾಯಿಗೆ ಉಪಾಯ ಕೇಳಿದರು. ನಿನಗೆ ಏನ್ ಬೇಕಾದರು ಕೊಡ್ತೀವಿ, ಏನ್ಮಾಡಬೇಕು ಅಂತ ಕೇಳಿದರು. ಆವಾಗ ಅವನು ನಾನ್ ಒಂದ್ ಮಂತ್ರ ಹೇಳಿಕೊಡ್ತೀನಿ, ಅದನ್ನ ತಗೊಂಡೋಗಿ ಮಡಗಿ ಬಿಟ್ಟರೆ ಮೊದಲ್ನಂಗೆ ಆಗ್ಬಿಡ್ತಾಳೆ ಅಂತ ಹೇಳಿದ. ''ಒಂದು ಇಜ್ಜಲು ಉಂಡೆ, ಒಂದು ಮರಳುಂಡೆ, ಒಂದು ಅರಿಶಿಣದುಂಡೆ'' ಮೂರು ಉಂಡೆಗಳನ್ನ ಕೊಟ್ಟ. ಈ ಮೂರು ಉಂಡೆ ಕೊಟ್ಟಾಗ, ಒಬ್ಬಳು ಮುದುಕಿ ಇರ್‍ತಾಳೆ ಆ ಪಟ್ಟಣದಾಗೆ ಎಮ್ಮೆ ಕಾಯ್ಕೊಂಡು, ಅವುಳಗೆ ''ನಿನಗೇನ್ ಬೇಕಾದರು ವಜ್ರ ವೈಡೂರ್ಯ ಕೊಡ್ತೀವಿ ಅಂತ ಹೇಳಿ, ಒಂದು ಮಂಕ್ರಿಗೆ ಈ ಮೂರು ಉಂಡೆಗಳನ್ನ ಹಾಕಿ ಅಲ್ಲೋಗಿ ಒಂದು ಹಾಲ್‌ಬಾವಿಗೆ, ಒಂದುಂಡೆ ನೀರ್‌ಬಾವಿಗೆ, ಒಂದು ಉಂಡೆ ಅರಿಶಿಣ ಕುಂಕುಮದ ಬಾವಿಗೆ

ಹಾಕು ಅಂತ ಹೇಳಿ ಅಜ್ಜಿ ಕೈಲಿ ಕೊಟ್ಟು ಕಳಿಸಿದರು. ಆವಾಗ ಈ ಅಜ್ಜಿ ಮಂಕ್ರಿಗೆ ಹಾಕ್ಕೊಂಡು ಕಿರಿಮಗಳು ಇರೊ ಕಡೆಗೆ ಹೊರಟಳು. ಅದು ಕಾಡಾದ್ದರಿಂದ ಅಲ್ಲಿ ಜನ ಜಾತ್ರೆ ಯಾರು ಇರ್ಲಿಲ್ಲ. ಆವಾಗ ಈ ಹುಡ್ಗಿ ಅಜ್ಜಿ ನೋಡಿ ಬಾರಜ್ಜಿ ಅಂತ ಕರೆದು ನಮ್ಮನೆಗೆ ಬಾ ಊಟ ಕೊಡ್ತೀನಿ ಅಂದ್ಳು. ಹೋದಳು ಅಜ್ಜಿ. ಹೋಗೋವಾಗ ದಾರಿಯಲ್ಲಿ ಈ ಮೂರು ಉಂಡೆಗಳನ್ನು ಒಂದ್ ಹಾಲ್‌ಬಾವಿಗೆ, ಒಂದು ನೀರ್‌ಬಾವಿಗೆ, ಒಂದು ಅರಿಶಿಣ ಕುಂಕುಮದ ಬಾವಿಗೆ ಹಾಕಿ ಬಂದ್ಳು. ಆಮೇಲೆ.ಮನೆಗೆ ಬಂದು ನೀರ್ ಕೊಡವ್ವ ಅಂದ್ಳು. ನೀರ್ ಕೊಡಾಕೆ ಒಳಗಡೆ ಹೋದಮೇಲೆ ಇಜ್ಜಲು ಉಂಡೆ ತಗೊಂಡೋಗಿ ಹೊಸಲಿನ ಉತ್ತರಾಸಿನ ಮೇಲಿಟ್ಟಳು. ಈ ಹುಡ್ಗಿ ಹಿಟ್ಟು ಮಿದ್ದು ಕೊಟ್ಟಳು. ಊಟ ಮಾಡಿದ ಅಜ್ಜಿ, ''ಅವ್ವ ಮನೇಲಿ ಒಂದೇ ಒಂದು ಮಗ ಅದೆ. ಅದರ ಕಷ್ಟ ನೋಡೋರಿಲ್ಲ. ಹೊಯ್ತೀನಿ ಕಣವ್ವ'' ಅಂದ್ಳು. ಬೇಕಾದಂಗ್ ಕೊಟ್ಟು ಹೋಗ್ತೀಯ ಅಜ್ಜಿ ಅಂತ ಕಳಿಸ್‌ಕೊಟ್ಟಳು.

ಇವಳು ಹೊರಟ ನಂತರ ಅದೇ ಸಮಯಕ್ಕೆ ಈ ರಾಜನ ಮಗ (ಗಂಡ) ಕುದುರೆ ಮೇಲೆ ಬಂದಿಳಿದು ಅದೇ ಕಂಬಕ್ಕೆ ಕಟ್ಟಾಕಿ, ನೀರ್‌ಬಾವಿಗೋಗಿ ಕೈಕಾಲು ತೊಳೆದ. ಹಾಲ್‌ಬಾವಿಗೆ ಬಂದು ಹಾಲು ಕುಡಿದ. ಆಗ ಕೈಕಾಲ್ಗೆ ಹಾವು ಚೇಳುಗಳ ವಿಷವೇರಿಬಿಡ್ತು. ಆಗ ರಾಜ ಅದೇ ಕುದುರೆ ಏರಿ ವಾಪಸ್ ಪಟ್ಟಣಕ್ಕೆ ಬಂದ. ಹಾವಿನ ವಿಷ, ಚೇಳಿನ ವಿಷ, ಜಾಸ್ತಿಯಾಗಿ ಮನೆಯಲ್ಲೇ ಸತ್ತೋದ. ಯಾವ ಪಂಡಿತರು ಬಂದರೂ ಇವ್ನ ಉಳಿಸೋಕಾಗಲಿಲ್ಲ. ಇವನು (ರಾಜನಮಗ) ಯಾವಾಗ ಸತ್ತುಹೋದ ಈ ಮುತುಗದ ಎಲೆ ಗೋತಾಯಿ ಎಲ್ಲ ಕಳಕೊಂಡು ಏನೂ ಇಲ್ಲದಂತಾಗ್ಬಿಟ್ಟಳು.

''ಅಯ್ಯೋ ಪರಮಾತ್ಮ, ಎಲ್ಲೀತನಕ ನನ್ನ ಯೋಗ ಇತ್ತೋ ಅಲ್ಲೀತನಕ ಆಯ್ತು'' ಅಂತ ಯೋಚನೆ ಮಾಡಿ, ಸನ್ಯಾಸಿ ವೇಷ ಹಾಕ್ಕೊಂಡ್‌ಬಿಡಾನ ಅಂತ ಹೇಳಿ ಬೆಳ್ಳೂರ್‌ನಂತ ಪಟ್ಟಣಕ್ ಬಂದು, ನಿಲುವಂಗಿ ವೇಷ ಹೊಲಿಸ್ಕೊಂಡ್‌ಬಿಟ್ಟಳು. ಹೊಲಿಸ್ಕೊಂಡು ಬರ್‍ತಾ ಇದ್ದರೆ ಎಲ್ಲಾದರು ಹೋಗ್ಬಿಡನ ಅಂತ ಯೋಚನೆಮಾಡ್ತಾಳೆ. ಆವಾಗ ಹೊತ್ತು ಮುಳುಗಿತು. ಒಂದು ಕಾಡು. ಕಾಡಿನಲ್ಲಿ ಒಂದು ಆಲದ ಮರ. ಆ ಮರದ ಕೆಳಗೆ ಮಲಗಿಬಿಟ್ಟಳು. ಈ ಮರಕ್ಕೊಂದು ''ಗಂಡುಭೇರುಂಡ ಒಂದು ಹೆಣ್ಣು ಬೇರುಂಡ'' ಎರಡು ಪಕ್ಷಿಗಳು ಅಲ್ಲಿಗೆ ಬರೋವು. ಬಂದ್ ಉಳ್ಕೊಂಡಾಗ ಅವುಗಳಲ್ಲಿ ಒಂದ್ ಹೆಣ್ ಭೇರುಂಡ, ಗಂಡ್ ಭೇರುಂಡಕ್ಕೆ ಕೇಳಿತು: ಸ್ವಾಮಿ ಪ್ರತಿದಿನ ಬೆಳಿಗ್ಗೆಯಿಂದ ಸಂಜೆತನಕ ಆಹಾರಕ್ಕಾಗಿ ತಿರುಗಿ ತಿರುಗಿ ಸಾಕಾಯ್ತದೆ, ಬೇಜಾರಾಗ್ತಾ ಇದೆ, ಒಂದ್ ಕಥೆ ಹೇಳಿ ಅಂತ. ಆಗ ಗಂಡು ಭೇರುಂಡ ಹಿಂದೆ ನಡೆದಿದೇಳ್ಳೋ, ಮುಂದೆ ಆಗೋದೇಳ್ಳೋ ಅಂತ ಯಾವ್ ಕಥೆ ಹೇಳ್ಲಿ ಅಂತ ಕೇಳ್ತದೆ. ಆಗ ಈ ಹೆಣ್ ಭೇರುಂಡ, ಸ್ವಾಮಿ ಮುಂದೆ ಆಗೋದು ಯಾರಿಗ್ಗೊತ್ತು. ಹಿಂದೆ ನಡೆದಿದ್ದನ್ನೇ ಹೇಳಿ ಅಂತ ಹೇಳ್ತದೆ. ಅಂದಾಗ ಅದೆಲ್ಲಿತ್ತೋ ? ಒಂದು ಸರ್ಪ ಬಂದು ಆ ಹೆಣ್ ಭೇರುಂಡನಿಗೆ ಕಚ್ಚಿಬಿಡ್ತದೆ. ಹಾವ್ ಕಚ್ಚಿಬಿಡ್ತು, ಹಾವ್ ಕಚ್ಚಿಬಿಡ್ತು ಅಂತ ಹೆಣ್ ಭೇರುಂಡ ಕೂಕ್ಕೊತ್ತದೆ. ಆಗ ಗಂಡುಬೇರುಂಡ ಔಷಧಿ ತಂದು ಗಸಗಸನೆ ಅಗಿದು

ಮೈತಲೆಗೆಲ್ಲ ನೇಪಹಾಕ್ತು. ಅಗಿದು ಹಚ್ಕೋವಾಗ ಹೆಚ್ಚಾಗಿದ್ದ ಔಷಧ ಈ ಮರದ ಕೆಳಗೆ ಮಲಗಿದ್ದಳಲ್ಲ ಅವಳ ಮೇಲೆ ಬೀಳ್ತಾ ಇರ್ತದೆ. ಆಗ ಅವಳು ಅದನ್ನೆಲ್ಲ ಆಯ್ಕೊಂಡು ಸೆರಗ್‌ಗೆ ಕಟ್ಕೊಂಡು, ಬೀದಿ ಬೀದಿ ಮೇಲೆ ರಾಜನಾಗಿದ್ದ ಗಂಡನ ಪಟ್ಟಣಕ್ಕೇ ಬರ್‍ತಾಳೆ.

ಆ ರಾಜನ ಮನೆ ಮುಂದೆ ಬೇಕಾದಷ್ಟು ಪ್ರಜೆಗಳೆಲ್ಲ ನಿಂತಿರ್‍ತಾರೆ. ಆ ರಾಜನ ತಂದೆ ನನ್ನ ಸತ್ತುಹೋಗಿರುವ ಮಗನ ಉಳಿಸ್ಕೊಟ್ಟೋರಿಗೆ ನನ್ನ ದಂಡು ದಾಳಿ ಎಲ್ಲಾನು ಕೊಡ್ತೀನಿ ಅಂತ ಹೇಳ್ತಾ ಇರಬೇಕಾದರೆ ಬೇಕಾದಷ್ಟು ಪ್ರಜೆಗಳೆಲ್ಲ ನಿಂತವ್ರೆ. ಬಂದುಹೋಗೋರ್‍ಗೆಲ್ಲ ರಾಜನ ಮನೆಯವರು ಎಲೆಅಡಿಕೆ ಕೊಡ್ತಾ ಇರ್‍ತಾರೆ. ನೋಡೋದಿಕ್ಕೆ ಬನ್ನಿ, ಎಲೆಅಡಿಕೆ ತಗೊಳ್ಳಿ. ನನ್ನ ಮಗನ ಯಾರಾದರು ಉಳಿಸಿಕೊಡಿ ಅಂತ ಬಂದೋರ್‍ಗೆಲ್ಲ ಎಲೆಅಡಿಕೆ ಕೊಡ್ತಾ ಇರ್‍ತಾರೆ. ಆಗ ಈ ಮುತುಗದ ಎಲೆ ಗೋತಾಯಿ ಸನ್ಯಾಸಿ ಗಂಡಿನವೇಷದಲ್ಲಿ ಬರ್‍ತಾಳೆ. ಅಯ್ಯೋ ಎಂತೆಂತೋರ್ ಕೈಲೇ ಆಗ್ಲಿಲ್ಲ, ಇವನ್ಯಾರೋ ಸನ್ಯಾಸಿ ಬಂದವನಲ್ಲ. ಇವನ ಕೈಯಲ್ಲಿ ಆಗ್ತಾದ ಅಂತ ಅವರು ಅವರೇ ಮಾತಾಡ್ಕೋತಾರೆ. ಅಯ್ಯೋ ಹೋಗಯ್ಯ ನೀನು ಅಂತಾರೆ. ಆಗ ಒಬ್ಬಳು ಅಜ್ಜಿ, ಅಂಗ್ ಅನ್ನಬ್ಯಾಡ್ರಿ, ಎಂತೆಂತೋರೋ ಇರ್‍ತಾರೆ. ಒಂದು ಹುಲ್ಲು ಕಡ್ಡಿನೂ ಒಂದೊಂದ್ ಸಾರಿ ಕೆಲಸಕ್ಕೆ ಬರ್‍ತದೆ. ಎಂತದೋ ಒಂದ್ ಗೋಟ್ ಅಡಿಕೆ, ಎಲೆ, ಕೊಡ್ರಮ್ಮ ಅಂದ್ಳು. ಆಗ ಯಾರೋ ಒಬ್ಬರು ಎಲೆಅಡಿಕೆ ಕೊಟ್ರು ಇವಳಿಗೆ. ಆಗ ಆ ರಾಜನ ಮಗ ಸತ್ತು ಮಲಗಿರೋ ಕಡೆಗೆ ಹೋಗಿ, ಒಂದ್ ಚಂಬಿನಲ್ಲಿ ನೀರು, ಒಂದು ಗುಂಡ್‌ಕಲ್ಲು ಈಸ್ಕೊಂಡಳು. ಒಂದ್ ಬಟ್ಲು ಈಸ್ಕೊಂಡು ಆ ರಾಜನ ಮಗ ಮಲಗಿರೋ ಹತ್ರ ಹೋಗಿ ಅವಳ ಹತ್ತಿರ ಇದ್ದ ಔಷಧಿಯನ್ನ ಚೆನ್ನಾಗಿ ಅರದು, ಮೈಕೈಗೆಲ್ಲ ಚೆನ್ನಾಗಿ ತೀಡಿದ್ಳು. ಈ ಹಾವು, ಚೇಳು ಕಡಿದು ವಿಷ ಹೇರಿತ್ತಲ್ಲ ಅದೆಲ್ಲಾ ಇಳಿದೋಯ್ತು. ಯಾವಾಗ ವಿಷ ಇಳಿದೋಯ್ತು, ಪರಮಾತ್ಮ ಎಷ್ಟೊಂತನಕ ಮಲಗಿದ್ದೀಯ ಅಂತ ಎಬ್ಬಿರಿಸಿಬಿಟ್ಟ. ಈ ಜನ ಹೊರಗಡೆ ಇದ್ದೋರೆಲ್ಲ ಮರಳಾಗಿಬಿಟ್ಟರು.

ಆಗ ಸತ್ತು ಬದುಕಿನ ರಾಜನ ಮಗ ಆ ಸನ್ಯಾಸಿಗೆ ನನ್ನ ಪ್ರಾಣ ಉಳಿಸಿದವರು ನೀವು, ತಗೊಳ್ಳಿ ಈ ವಜ್ರದ ಉಂಗುರ ಅಂತ ಗೋತಾಯಿ ಕೈಗೆ ತೊಡಿಸಿದ. ಸನ್ಯಾಸಿ ಹೊರಗಡೆ ಬಂದಾಗ ಎಲ್ಲರೂ ಆಶ್ಚರ್ಯಪಡ್ತಾರೆ. ಎಂತೆಂತೋರ್ ಬಂದ್ರು ಯಾರು ಉಳಿಸಲಿಕ್ಕಾಗಿಲ್ಲ, ನೀನ್ ಹೆಂಗ್ ಉಳಿಸ್ದೆ ? ಅಂತ ಕೇಳ್ತಾರೆ. ಆಗ ಈ ರಾಜನ ತಂದೆ ತಾಯಿ ಬಂದು ಸ್ವಾಮಿ ನೀವು ನನ್ನ ಒಬ್ಬನೇ ಮಗನ್ನ ಉಳಿಸಿದ್ದೀರಿ. ನೀವು ನಮ್ಮ ರಾಜ್ಯದಲ್ಲೆ ಇರಿ. ನಿಮಗೆ ಏನ್ ಬೇಕಾದರು ಕೊಡ್ತೀವಿ ಅಂತ ಹೇಳ್ತಾರೆ. ಆಗ ಇವಳು ಅಯ್ಯೋ ಸ್ವಾಮಿ, ಈ ಸನ್ಯಾಸಿಗೆ ಒಂದ್ ಪಟ್ಟಣವಾ, ಒಂದ್ ಊರ ? ಊರೂರು ಸುತ್ತೋರು ನಾವು, ಅಂತ ಹೇಳಿ ಮಿಕ್ಕ ಔಷಧಿ ತಗೊಂಡ್ ವಾಪಸ್ ಬಂದ್‌ಬಿಟ್ಟಳು. ಹಿಂದೆ ಇದ್ದ ಹಾಲ್‌ಬಾವಿ, ನೀರ್‌ಬಾವಿಗೆ ಔಷಧಿಹಾಕಿ ಚೆನ್ನಾಗಿ ತೊಳೆಸಿದ್ಳು. ಉತ್ತರಾಸಿನ ಮೇಲೆ ಇದ್ದ ಇಜ್ಜಲು ಎಲ್ಲಾನು ಚೆನ್ನಾಗಿ ಗುಡಿಸಿದ್ಳು. ಆ ಸಂಜೆ ಹೊತ್ತಿಗೆ ರಾಜನ ಮಗ ಅಲ್ಲಿಗೆ ಬರ್‍ತಾನೆ. ಬಂದಾಗ ಅದೇ ತರಹ ಅರಮನೆ, ಮನೇಲಿ ಅಕ್ಕಿ, ಕಾಳು ಕಡ್ಡಿ ರಾಶಿ ರಾಶಿನೇ ಇರ್‍ತದೆ ಅರಮನೇಲಿ. ಆಗ ರಾಜನ

ಮಗ ಬಂದು ಅದೇ ಕಂಬಕ್ಕೆ ಕುದುರೆ ಕಟ್ಟಾಕಿ, ಹಾಲ್‌ಬಾವಿಗೋಗಿ ಹಾಲ್‌ಕುಡಿದು, ನೀರ್‌ಬಾವಿಗೋಗಿ ಕೈಕಾಲು ತೊಳೆದುಕೊಂಡು ಸೀದ ಮನೆಗೆ ಬರ್‍ತಾನೆ. ಆಗ ಅವಳು ಒಂದ್ ಚಂಬ್ನಲ್ಲಿ ನೀರಿಡ್ಕೊಂಡು ನಿಂತಿರ್‍ತಾಳೆ. ಇವನು ಸೀದಾ ಒಳಗಡೆ ಹೋಗ್ತಾನೆ. ಆಗ ಅವಳು ಏನ್ ಸ್ವಾಮಿ ಯಾವಾಗ್ಲು ನೀವು ನೀರೀಸ್ಕೊಂಡ್ ಒಳಗಡೆ ಹೋಗ್ತಾ ಇದ್ದೋರು ಇವತ್ತು ಹಾಗೆ ಹೋಗ್ತಾ ಇದ್ದೀರಲ್ಲ ಅಂತ ಕೇಳ್ತಾಳೆ. ಅದಕ್ಕೆ ಅವನು ಯಾಕೆ ? ನೀನು ವಿಷಹಾಕಿ ಸಾಯಿಸ್‌ಬೇಕು ಅಂತಾನ ? ಅಂತಾನೆ.

ಹಾಗಾದರೆ ನೀವು ಸತ್ತೋಗಿದ್ದೋರು ಹೆಂಗ್ ಬದುಕಿದಿರಿ ಅಂತ ಕೇಳ್ತಾಳೆ ಅವಳು. ಯಾರೋ ಒಬ್ಬ ಸನ್ಯಾಸಿ ಬಂದ್ ನನ್ನನ್ನ ಬದುಕಿಸಿದ ಅಂತಾನೆ. ಹಾಗಾದರೆ ಅವನಿಗೇನು ಕೊಟ್ಟಿರಿ ನೀವು ಅಂತಾಳೆ. ಅಯ್ಯೋ ನಮ್ಮ ತಂದೆ ತಾಯಿ ಏನ್‌ಬೇಕಾದ್ರು ಕೊಡ್ತೀವಿ ಅಂದ್ರು. ಅದಕ್ಕೆ ಅವನು ಬ್ಯಾಡ ಅಂದ. ಆಗ ನಾನು ನನ್ನ ಕೈಯಲ್ಲಿದ್ದ ವಜ್ರದ ಮುದ್ರೆ ಉಂಗುರಾನೇ ಕೊಟ್ಟೆ ಅಂದ. ಹಾಗಾದರೆ ತಗೊಳ್ಳಿ ಈ ವಜ್ರದ ಉಂಗುರನ, ಯಾರದು ನೋಡಿ ಅಂತ ವಾಪಸ್ ಕೊಟ್ಟಳು. ಆಗ ಇದು ನಂದೆಯಾ ಅಂತ ಅವಳನ್ನು ಜೊತೆಯಲ್ಲಿ ಕರ್‍ಕೊಂಡ್ ವಾಪಸ್ ಪಟ್ಟಣಕ್ಕೆ ಬಂದ. ಬಂದು ಇವಳ ತಂದೆ ತಾಯಿ ಮತ್ತು ಅವನ ತಂದೆ ತಾಯಿನ ಕರ್‍ಕೊಂಡ್ ಬಂದು ಮದ್ವೆಮಾಡಿಕೊಂಡು ಸುಖವಾಗಿ ಬಾಳ್ತಾರೆ.

ಹೇಳಿದವರು : **ಸುಬ್ಬಹನುಮಮ್ಮ**, ಬ್ಯಾಲದಕೆರೆ, ನಾಗಮಂಗಲ ತಾಲ್ಲೂಕು.
ನಲವತ್ತನೇ ವಯಸ್ಸಿನಲ್ಲಿ ಹೇಳಿದ ಕಥೆ

# ೨. ಏಡಿಕುಮಾರನ ಕಥೆ

ಚುಂಚನಗಿರಿ ಅಂತ ಒಂದು ಪಟ್ಟಣ. ಪಟ್ಟಣದೊಳಗೆ ಒಬ್ಬ ದೊರೆ. ಆ ದೊರೆಗೆ ಲಗ್ನವಾಗಿ ಹನ್ನೆರೆಡು ವರ್ಷ ಆಗಿತ್ತು. ಹನ್ನೆರಡು ವರ್ಷ ಆದ್ರೂ, ಆಯಪ್ಪನಿಗೆ ಒಂದೂನೂ ಮಕ್ಕಿರಲಿಲ್ಲ. ಮಕ್ಕಳಿಲ್ಲದಿದ್ದಾಗ, ಪಟ್ಣದ ಜನಗಳೆಲ್ಲ ಆ ದೊರೇನ ಆಡ್ಕೊಳ್ಳೋರು: ''ಅಯ್ಯೋ ಈ ದೇಶಕ್ಕೆಲ್ಲಾನೂ ದೊರೆ. ಆದ್ರೆ ಮದ್ವೆ ಆಗಿ ಹನ್ನೆರಡು ವರ್ಷ ಆಯ್ತು. ಇನ್ನೂನು ಮಕ್ಕಳೇ ಆಗ್ಲಿಲ್ಲವಲ್ಲ'' ಅಂತ ಎಲ್ಲಾ ತಾತ್ಸಾರ ಮಾಡೋರು. ಆದ್ರೆ ಆಯಪ್ಪ ಮನೆಗೆ ಬಂದು ಹೆಂಡ್ತಿ ಹತ್ತಿರ ಚಿಂತೆಮಾಡ್ಕೊಂಡು ಹೇಳಿದ್ರು: ''ನಾವು ಈ ಪಟ್ಣಕ್ಕೆಲ್ಲ ದೊರೆ ಅನ್ಸುಕೊಂಡ್ಬಿಟ್ಟು ಲಗ್ನವಾಗಿ ಹನ್ನೆರಡು ವರ್ಷ ಆಯ್ತು. ಹನ್ನೆರಡು ವರ್ಷದಿಂದಾನೂ ನಮ್ಗೆ ಮಕ್ಳು ಸಂತಾನ ಇಲ್ಲವಲ್ಲ. ಇದಕ್ಕೆ ಏನ್ ದಾರಿ ಮಾಡುವಾ'' ಅಂತ ಹೇಳದ್ರು. ಹೇಳಿದ್ರೆ ಆಯಮ್ಮ ಏನಂತು, ''ನಾವು ಇಂಗೇನೇ ಇದ್ರೆ ಸರಿಹೋಗೋದಿಲ್ಲ.

ಯಾವುದಾದ್ರೂ ಒಂದು ಧರ್ಮಾತ್ಮ ಮಾಡಿ ನಾವ್ ಮಕ್ಕಳ ಫಲ ಪಡೀಬೇಕು ಕಣ್ರೀ'' ಅಂತ ಆಯಮ್ಮ ಕೇಳಿಕೊಂಡ್ಳು. ಇದಕ್ಕೆ ನಾವು ಏನು ಧರ್ಮಾತ್ಮ ಪಡೀಬೇಕೊ ಅಂತ ಆ ರಾಜ ಕೇಳಿದ. ''ಈ ಚುಂಚನಗಿರಿ ಮಠದೊಳಗೆ ಒಂದು ಆಳುದ್ದ ದೊಡ್ಡದಾಗಿರೋ ಕೆರೆ ಕಟ್ಟಿಸಿಬಿಡಾನ. ಕೆರೆ ಕಟ್ಟಿಸ್ಬಿಟ್ಟು ಈ ಸುತ್ತಾ್ಲೂ ಏಳು ಹಳ್ಳಿ ದನ ಕರುಗಳೆಲ್ಲ ನೀರು ಕುಡೀತವೆ. ಆ ಗೋವ್‌ಗೊಳೆಲ್ಲ ನೀರು ಕುಡಿದು ಪುಣ್ಯ ಬಂದಾಗ, ಏನಾದರೂ ಭಗವಂತ, ಮಕ್ಕಳು ಸಂತಾನ ಕೊಡಬೋದು, ಒಂದು ಕೆರೆ ಕಟ್ಟಿಸ್‌ಬುಡ್ರಿ'' ಅಂತ ಹೆಂಡ್ತಿ ಹೇಳಿದ್ಳು.

ಈ ರೀತಿ ಹೇಳಿದಾಗ ಆಯಪ್ಪ ಎಲ್ಲಾ ಕೂಲಿ ಜನಗಳಿಗೆ ಕಂಟ್ರಾಕ್ಟ್ ಕೊಟ್ಟುಬುಟ್ಟು ದೊಡ್ಡದಾಗಿ ಕೆರೆ ಕಟ್ಟಿಸ್‌ಬುಟ್ರು. ದೊಡ್ಡದೊಂದು ಕೆರೆ ಕಟ್ಟಿಸಿದ್ಮೇಲೆ ಅದಕ್ಕೆ ಪುಣ್ಯಮಾಡ್ಸಿ ಗಂಗಮ್ಮನಮಾಡಿಸಿಬಿಟ್ರು. ಗಂಗಮ್ಮನ ಮಾಡಿದ್ಮೇಲೆ ನಮ್ ಯಜಮಾನ್ರು ಯಾವ್ ರೀತಿ ಕೆರೆಕಟ್ಸಿದ್ದಾರೆ ಏನ್ಮಾಡಿದಾರೆ ಅಂತ ಆಯಮ್ಮ ಹೋಗಿ ನೋಡ್ಲೇ ಇಲ್ಲ. ಆದರೆ ಒಂದಾನೊಂದಿನದಲ್ಲಿ ಯೋಚನೆಮಾಡಿ 'ನಮ್ ಯಜಮಾನರು ಇಷ್ಟು ದೊಡ್ಡ ಕೆರೆ ಕಟ್ಟಿಸಿದೀನಿ ಅಂತ ಹೇಳ್ತಾ ಇದ್ದಾರೆ; ನಾನ್ ಒಂದು ದಿನವಾದ್ರೂ ಹೋಗ್ ನೋಡ್ಕೊಂಡ್ ಬರಲಿಲ್ಲವಲ್ಲ. ಇನ್ನು ನನ್ನ ಮೈಮೇಗಳ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಆ ಕೆರೆಯಾಗ್ ಒಕ್ಕೊಂಡು ಕೆರೆಯಾದ್ರೂ ನೋಡ್ಕೊಂಡ್ ಬರೋಣ' ಅಂತ ಆಯಮ್ಮ ಬಟ್ಟೆಗಳನ್ನು ತುಂಬ್ಕೊಂಡು ಕೆರೆಯತ್ರ ಹೋಯ್ತು.

ಕೆರೆಯತ್ರ ಹೋಗ್ತಾ ಇರಬೇಕಾದ್ರೆ, ಕೆರೆ ತುಂಬ ಗಂಗಮ್ಮ ತುಂಬಿ ತುಳುಕಾಡ್ತಾ ಇರುತ್ತಾಳೆ. ಈಯಮ್ಮ ಕೆರೆ ಏರಿ ಮೇಲೆ ಹೋಗ್ತಾ ಇರ್ತಾಳೆ. ಹೋಗ್ತಾ ಇರಬೇಕಾದ್ರೆ ಆ ಕೆರೆ ಒಳಗೆ ಇದ್ದುದೊಂದು ಗರ್ಭಿಣಿ ಏಡಿಗಾಯಿ, ಆ ಕೆರೆ ಏರಿಮ್ಯಾಲೆ ಒಂದು ಕಲ್ಲಿನಮ್ಯಾಲೆ ಬಂದು ಕುಂತಿರುತ್ತೆ. ಆ ಏಡಿಕಾಯಿ ಕೆರೆಏರಿಮ್ಯಾಲೆ ಕುಳಿತಿರಬೇಕಾದ್ರೆ, ಆಯಮ್ಮ ಕಂಕ್ಳಲ್ಲಿ ಬಟ್ಟೆ ಇರಿಕೊಂಡು ಚಿಂತೆಮಾಡ್ಕೊಂಡು ಹೋಗ್ತಾ ಇರುತ್ತೆ. '' ಅಯ್ಯೋ; ಪರಮಾತ್ಮ ನಮ್ಮ ಯಜಮಾನ್ರು ಈ ಕೆರೆ ಕಟ್ಟಿಸಿದ್ರು. ಈಗ್ಲಾದ್ರೂ ನಮಗೆ ಮಕ್ಳುಸಂತಾನ ಕೊಡ್ತೀಯಾ ಗಂಗಮ್ಮ ನೀನು? '' ಅಂತ ಚಿಂತೆ ಮಾಡ್ಕೊಂಡು ಕೆರೆ ಏರಿಮ್ಯಾಲೆ ಹೋಗಬೇಕಾದ್ರೆ, ಆ ಏಡಿಕಾಯ್‌ಗೆ ಈಯಮ್ಮನ್ ಚಿಂತೆ ಪ್ರೀತಿ ಆಯ್ತು. ಆ ಗರ್ಭಿಣಿ ಏಡಿಗಾಯಿ ಕಲ್ಲಿನಮೇಲ್ ಕುತ್ಕೊಂಡು, ಏನು ಹೇಳುತ್ತಪ್ಪ ಅಂದ್ರೆ, ''ಪರಮಾತ್ಮ ನನಗೆ ಕೊಟ್ಟಿರೋ ಸಂತಾನ, ಆಯಮ್ಮ ಚಿಂತೆ ಮಾಡ್ಕೊಂಡ್ ಹೋಗ್ತಾ ಇರೋಳಗಾದ್ರೂ ಕೊಡೋದ್‌ಬೇಡ್ವೆ ಪರಮಾತ್ಮ'' ಅಂತ ಆ ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತೆ ಏಡಿಗಾಯಿ. ಪ್ರಾರ್ಥನೆ ಮಾಡಬೇಕಾದ್ರೆ ಆ ಏಡಿಗಾಯಿ ಒಳಗಿರೋ ಗರ್ಭ ಹೋಗಿ ಆಯಮ್ಮನಿಗೆ ಗರ್ಭ ಆಗ್ಬಿಡುತ್ತೆ. ಆಯಮ್ಮ ಬಟ್ಟೆಗಳನ್ನು ಒಕ್ಕೊಂಡು ಮನೆಗೆ ಹೋದಳು, ಮನೆಗೆ ಹೋದ್ಮೇಲೆ ಆಯಮ್ಮನಿಗೆ ಅದೆ ಆಗಿ ನೀರು ನಿಂತು ನವನಾರು ಒಂಬತ್ತು ತಿಂಗಳು ತುಂಬಿದಾಗ ದೊರೆ ಬಹಳ ಸಂತೋಷವಾಗ್ತಾನೆ. 'ಅಯ್ಯೋ ಹನ್ನೆರಡು ವರ್ಷವಾಯ್ತು ನಾನು ಲಗ್ನವಾಗಿ, ಈಗ ಕೆರೆಕಟ್ಸಿ ಗಂಗಮ್ಮನ ಮಾಡಿದ್ಮೇಲೆ ದೇವರು ಕಣ್ಬಿಟ್ಟಿದ್ದಾನೆ. ಪರಮಾತ್ಮ, ಒಂದು ಸಂತಾನ

ಕೊಟ್ಟು ನನಗೆ ಮುಂದಕ್ಕೆ ಸಂತಾನ ಬೆಳಸಲಪ್ಪ'' ಅಂತ ದೊರೆ ಹೆಂಡ್ತಿ ಸುಖ ಸಂತೋಷದೊಳಗಿರ್ತಾಳೆ.

ಇರಬೇಕಾದ್ರೆ, ಆಯಮ್ಮನಿಗೆ ನವನಾರ ಒಂಬತ್ತು ತಿಂಗಳು ತುಂಬಿ ಹೆರಿಗೆ ಆಗುತ್ತೆ. ಹೆರಿಗೆ ಆದಾಗ ಏಡಿಗಾಯಿ ಜನನವಾಗುತ್ತೆ. ಏಡಿಗಾಯಿ ಜನನವಾದಾಗ ''ಅಯ್ಯೋ, ಪರಮಾತ್ಮ ಹನ್ನೆರಡು ವರ್ಷದಿಂದ ನಾನು ಮಕ್ಕಳಿಲ್ಲದೆ ಬೇಡಿದ್ದು, ಇಂತಾ ಪಟ್ಣಕೆಲ್ಲ ಅಪಕೀರ್ತಿ ಬರುವಂತ ಹೆಸರುವಾಸಿಕೆ ಕೊಟ್ಟುಬಿಟ್ಟೆ. ಅದೇರೀತಿ ಇದ್ದರೂನೂ, ಆ ದೂರು ಒಪ್ಕೊಂಡಿದ್ರೂನೂ ಪರವಾಗಿರಲಿಲ್ಲ. ಈಗ ಈ ಕೆಟ್ಟ ಅಪಕೀರ್ತಿ ಹೊತ್ಕೊಂಡು ನಾನು ಹೇಗಪ್ಪ ಈ ಧರೆಮೇಲೆ ಇರೋದು ?'' ಅಂತ ಆ ದೊರೆಗೆ ಬಹಳ ಚಿಂತೆ ಬಂದ್ ಮಂಚದ ಮೇಲೆ ಮಕ್ಕಡೆ ಮಲಗಿರ್ತಾನೆ.

ಮಲಗಿರ್ಬೇಕಾದ್ರೆ, ಆ ದೊರೆಗೆ ಒಬ್ಬ ಆಳ್ ಇರ್ತಾನೆ. ಆಳ್ ಇರ್ಬೇಕಾದ್ರೆ 'ಅಯ್ಯಾ ದೊರೆ ಆ ಪರಮಾತ್ಮ ಕೊಟ್ಟಿರೋದು. ಮುಂದೆ ಏನಾಗುತ್ತೆ ನೋಡಾನ. ನೀನ್ ಯಾಕಪ್ಪ ಚಿಂತೆ ಮಾಡ್ಕೊಂಡ್ ಮಲಗಿದ್ದೀಯ ಎದ್ದೇಳು. ಮುಂದೆ ಏನ್ ನಡೀತದೊ ನೋಡ್ಕೊಳನಾ' ಅಂತ ಹೇಳಿ, ಆಳು ದೊರೆಗೆ ಬುದ್ಧಿ ಹೇಳ್ತಾನೆ. ಹೇಳಬೇಕಾದ್ರೆ ಕೆಲವಾರು ದಿವ್ಸ ಅಂಗೇ ಇರ್ತಾರೆ. ಇದ್ದಾಗ ಈ ಏಡ್‌ಗಾಯ್ ಹುಟ್ಟಿದ ಮಗೀಗೆ ನಾಮಕರಣ ಮಾಡಬೇಕು. ನಾಮಕರಣ ಮಾಡಬೇಕಾದ್ರೆ, 'ಪರಮಾತ್ಮ ನಾನ್ ಯಾವ ರೀತಿ ದೇಶಕ್ಕೆ, ಜನಕ್ಕೆ ತಿಳಿಸೋದೂ ? ಯಾವ ರೀತಿ ನಾವ್ ನಾಮಕರಣ ಮಾಡೋದು?'' ಅಂತ ಹೇಳಿ ಚಿಂತೆ ಮಾಡಿ, ಆದರೂ ಆಗ್ಲಿ, ಇದೂ ಒಂದು ನಮ್ಮ ಹಣೇಬರಹ ಅಂದಿದ್ದೇ ದೇಶಕ್ಕೆಲ್ಲ ಟಾಂ ಟಾಂ ಹಾಕಿಸಿಬಿಟ್ರು. ದೊರೆ ಹೆಂಡ್ತೀಗೆ, ಹೊಟ್ಟೆ ಒಳಗೆ ಏಡಿಗಾಯಿ ಹುಟ್ಟಯ್ತೆ ನಾಮಕರಣ ಮಾಡ್ಸಿ ಅಂತ ಎಲ್ಲಾರಿಗೂ ಹೇಳಿಬಿಟ್ರು. ಅವರಿಗೆ ಬೇಕು ಬೇಕಾದವ್ರು ಬಂದು ''ಏಡ್‌ಗಾಯ್'' ಅಂತ ಹೆಸರಿಟ್ಟುಬಿಟ್ರು. ಹೆಸರು ಇಟ್ಟುಬಿಟ್ಟು ಕೆಲವಾರು ದಿವಸ ಒಂದು ಸಪರೇಟು ರೂಮ್ನೊಳಗೆ ಏಡಿಗಾಯಿ ಮಡಗಿದ್ದರು. ಮಡಗಿರಬೇಕಾದ್ರೆ, ಆ ಏಡಿಗಾಯಿ ಸಪ್ಲಾಯ್‌ಗೆ ಒಂದ್ ಆಳ್ ಇಟ್ಕೊಂಡಿರ್ತಾರೆ. ಬೆಳಗ್ಗೆ, ಸಾಯಂಕಾಲ ತಿಂಡಿ ತೊಗೊಂಡ್ಹೋಗಿ ಆ ಏಡಿಗಾಯ್‌ಗೆ ಕೊಡೋದು. ಇಂಗೇ ಇರತಾ ಹನ್ನೆರುಡು ವರ್ಷ, ಹದಿನಾರು ವರ್ಷ ತುಂಬುತ್ತೆ. ಏಡಿಗಾಯಿಗೆ ಮದುವೆ ವಯಸ್ಸು ಬಂದ್ಬಿಡುತ್ತೆ.

ಆ ರೂಮ್‌ನೊಳಗೆ ರೂಮ್‌ನ ತುಂಬಾನೂ ಆಗಿರುತ್ತದೆ. ರೂಮುನ ತುಂಬಾನೂ ಆಗಿರುತ್ತಲೆ, ಅಕ್ಕಪಕ್ಕದ ದನಕರುನ ಹುಡುಗರು ದಿವಸಾ ಬಂದು ಆ ಏಡಿಗಾಯಿ ನೋಡಿ ನೋಡಿ ಹೋಗ್ತಾ ಇರೋರು. ಇಂಗೇ ಹೋಗ್ತಾ ಇರಬೇಕಾದ್ರೆ, ಕೆಲವಾರು ದಿವ್ಸದ ಮೇಲೆ ಈ ಹುಡುಗರು ಏನಂದೊ ''ಅಯ್ಯೋ ಏಡ್‌ರಾಜ, ನೀನ್ ಒಬ್ಬ ಮನ್ಸಾ ಅಂತ ಹುಟ್ಟಿದ್ದೀಯ. ನೀನು ಹದಿನಾರು ವರ್ಷದ ಮಗನಾದರೂ ಸಹಿತ ನೀನ್ ಇಂಗೇ ಇದ್ದೀಯಲ್ಲಯ್ಯ; ನಿಮ್ ದೊರೆಗೆ ಏನಯ್ಯ ಕಮ್ಮಿ ಇರೋದು. ಎಲ್ಲಾದ್ರು ಒಂದು ಹೆಣ್ ತೊಗೊಂಡ್ಬಂದು ಲಗ್ನಮಾಡು ಅಂತ ಹೇಳಯ್ಯ'' ಅಂತ ಈ ದನಕರಿನ ಹುಡುಗರೆಲ್ಲಾ

ಹೇಳಿದ್ರು. ಈ ಏಡಿಗೆ ಮನಸ್ಸಿಗೆ ಅದೇ ನಾಟಿಕೊಂಡ್ಬಿಟ್ತು. ''ಅಯ್ಯೋ ಇರ್ಲಿ, ನಮ್ಮಪ್ಪಂಗೆ ಏನ್ ಕಮ್ಮಿ ಇರೋದು, ಹೇಳಾನ ಎಲ್ಲಾರೂ ಒಂದು ಹೆಣ್ನೋಡಿ ನನಗೆ ಲಗ್ನ ಮಾಡಿಸಿ ಅಂತ.'' ಈ ಏಡಿರಾಜ ಮನಸ್ಸಿಗೆ ತೊಗೊಂಡು, ಸಾಯಂಕಾಲ ಊಟ ತೊಗೊಂಡ್ ಬರೋದರೊಳಗಾಗಿ ಯೋಚನೆಮಾಡ್ಕೊಂಡು ಕುಂತಿತ್ತು.

ಆಳು ಊಟ ತಕ್ಕೊಂಡ್ ಬಂದ ರೂಮ್‌ಗೆ. ''ಅಯ್ಯಾ ನಮ್ಮನೇಲಿ ಇರೋ ಆಳೆ, ನಾನ್ ಊಟ ಮಾಡೋದಿಲ್ಲಪ್ಪ. ನಾನು ಹದಿನಾರು ವರ್ಷದ ಮಗನಾದೆ. ನನಗೆ ಲಗ್ನ ಬೇಕಯ್ಯ. ನಮ್ಮಪ್ಪಂಗೆ ಏನ್ ಕಮ್ಮಿ ಆಗಿರೋದು? ನಮ್ಮಪ್ಪಂಗೆ ಹೇಳಿ ಎಲ್ಲಾದ್ರೂ ಒಂದು ಹೆಣ್ ನೋಡಿ ಮದ್ವೆಮಾಡು ಅಂತ ಹೇಳಯ್ಯಾ''. ''ಆಯ್ತಪ್ಪ ಏಡ್‌ರಾಜು, ಊಟ ಮಾಡು. ನಾನ್ ಹೇಳ್ತೀನಿ. ನೀನ್ ಊಟ ಮಾಡಯ್ಯಾ.'' ''ಇಲ್ಲಯ್ಯ ನಾನ್ ಊಟ ಮಾಡಲ್ಲ, ನನಗೆ ಲಗ್ನ ಮಾಡ್ತೀನಿ ಅಂತ ನಮ್ ತಂದೆ ಭರವಸೆ ನೀಡೋವರ್ಗೂ ನಾನ್ ಊಟ ಮಾಡಲ್ಲಯ್ಯ'' ಅಂತ ಊಟ ಮಾಡ್ಲೇ ಇಲ್ಲ. ಆಳು ವಾಪಸು ದೊರೆ ಹತ್ರ ಹೋದ. ''ಅಯ್ಯಾ ದೊರೆ ನಿನ್ನ ಮಗನಾದಂತ ಏಡ್‌ರಾಜ ಊಟ ಮಾಡೋದಿಲ್ಲಂತಯ್ಯ. ಒಂದು ಹೆಣ್ ನೋಡಿ ಮದ್ವೆ ಮಾಡ್ಬೇಕಂತೆ ಆಯಪ್ಪಂಗೆ. ಅಲ್ಲೀವರ್ಗೂ ಊಟ ಮಾಡಲ್ವಂತೆ'' ಅಂತು ಆಳು ಹೇಳ್ಬಿಟ್ಟ.'' ಅಯ್ಯೋ ಇದರೊಳಗು ನಾನ್ ಕೆಟ್ಟನೇ. ಇಂಥಾ ದೊರೆ ಹೊಟ್ಟೆ ಒಳಗೆ ಇಂಥಾ ಮಗ ಹುಟ್ಟಿ, ಯಾರೂ ಇಂಥೋನಿಗೆ ಹೆಣ್‌ಕೊಡ್ತಾರೆ ಹೇಳ್ರಿ ಈ ಏಡಿಗೆ? ನಾನು ಹೆಣ್ಣು ನೋಡೋಕೆ ಸಾಧ್ಯವಿಲ್ಲಯ್ಯ. ನನ್ ಕೈಲಾಗೋದಿಲ್ಲ.'' ''ಅಯ್ಯಾ ದೊರೆ ಅದಕ್ಯಾಕೆ ನೀನ್ ಚಿಂತೆ ಮಾಡ್ತೀಯ ? ಒಂದು ಮೊರ ಹೊನ್ನು ತುಂಬ್ಕೊಡಯ್ಯ. ನಾನ್ ಎಲ್ಲಾದ್ರೂ ನಿನ್ನ ಮಗಂಗೆ ಹೆಣ್ ನೋಡ್ಕೊಂಬತ್ತೀನಿ. ಲಗ್ನ ಮಾಡಾನ'' ಅಂತ ಈ ಆಳು ಹೇಳಿದ. ''ಆಯ್ತಯ್ಯ ಒಂದು ಮೊರ ಇಲ್ಲದಿದ್ರೆ ಎರಡು ಮೊರ ಹೊನ್ನು ತುಂಬ್ಕೊಡ್ತೀನಿ, ನೀನು ಎಲ್ಲಾದ್ರೂ ನನ್ ಮಗಂಗೆ ಹೆಣ್ಣು ಪತ್ತೆಮಾಡ್ಕೊಂಡು ಬರ್ಬೇಕು'' ಅಂತ ಹೇಳ್‌ಬಿಟ್ಟ. ಒಂದು ಮೊರ ಹೊನ್ನು ತುಂಬ್ಕೊಟ್ಟ ದೊರೆ.

ಹೊನ್ನು ತುಂಬ್ಕೊಂಡು ಈ ಪಟ್ಣ ಪಟ್ಣಗಳಲ್ಲೆಲ್ಲ ಸಾರಿಕೊಂಡು ಹೊತ್ಕೊಂಡು ಹೋಗ್ತಾ ಇದ್ದಾನೆ ಅರ್ಮನೆ ಆಳು. ಹೋಗ್ತಾ ಇರಬೇಕಾದ್ರೆ ಮುಂದಿನ ಪಟ್ಣದೊಳಗೆ ಒಬ್ಬ ಬಾಳ ಬಡಸ್ತನ. ಆದ್ರೆ ಅವನಿಗೆ ಇಬ್ಬರು ಹೆಂಡ್ತಿದೀರು. ಮೊದಲ್ನೇ ಹೆಂಡ್ತಿಗೆ ಇಬ್ಬರು ಮಕ್ಕಳಿದ್ದಾರೆ. ಎರಡು ಹೆಣ್ಮು ಮಕ್ಕಳನ್ನುಬಿಟ್ಬಿಟ್ಟು ಮೊದಲ್ನೇ ಹೆಂಡ್ತಿ ತೀರಿ ಹೋಗ್ಬಿಟ್ಬಿರ್‍ತಾಳೆ. ಇನ್ನೊಬ್ಬಮ್ಮನ ಮದ್ವೆ ಆಗಿ ಆಯಮ್ಮಂಗೂ ಒಂದು ಮಗಾ ಇರ್‍ತದೆ. ಈ ಮೂರು ಜನ ಮಕ್ಕು, ಒಬ್ಳು ಹೆಂಡ್ತಿನ ಸಾಕ್ಕೊಂಡು ಆ ಪಟ್ಟಣದಲ್ಲಿ ಒಬ್ಬ ಬಡವ ಇರ್‍ತಾನೆ. ಬೀದಿಬೀದಿ ಮುತ್ತುರತ್ನ ಹೊತ್ಕೊಂಡು ಸಾರ್ಕೊಂಡು ಹೋಗ್ತಾ ಇರಬೇಕಾದ್ರೆ, ಆಯಮ್ಮ ಇರ್‍ತಾಳಲ್ಲ, ಆಯಪ್ಪನ ಕಿರೇಹೆಂಡ್ತಿ, ಆಯಮ್ಮ ಏನ್ ಹೇಳ್ತಾಳೆ ಒಳಗಡೆ ಯಜಮಾನ್ರಿಗೆ ''ರೀ, ರೀ ನಿಮ್ಮ ಹಿರೇ ಹೆಂಡ್ತಿ ಮಕ್ಕಳು ಎರಡೂ ಹೆಣ್ಣಾಗ್ಬಿಟ್ಟವೆ. ನಮ್ಕೈಲಿ ಮಧ್ವೆ ಮಾಡೋಕೆ ಸಾಧ್ಯ ಇಲ್ಲ. ಸಾಕೋಕು ನಮಗೆ ಸಾಧ್ಯ ಇಲ್ಲ. ಯಾರೋ ಮಾರಾಯ ಒಂದು

ಮೊರ ಹೊನ್ನು ತುಂಬ್ಕೊಂಡು ಬಂದಿದಾನೆ, ಮಾರ್‍ತೀರ ಅಂತ. ಆ ಹೊನ್ನು ಈಸ್ಕೊಂಬಿಟ್ಟು ಒಂದು ಮಗಾ ಕಳಿಸಿಬಿಡ್ರಿ'' ಅಂತಾ ಆಯಮ್ಮ ಕಿರೇಹೆಂಡ್ತಿ ಹೇಳಿದ್ಲು. ಹೇಳಿದಾಗ '' ಆಯ್ತು ಕಣೇ ಅದೂ ಒಳ್ಳೇದೇ. ಬೆಳಿಗ್ಗೆ ಎದ್ರೆ ನಮಗೆ ತಿನ್ನಾಕೆ ಅನ್ನ ಇಲ್ಲ, ಉಡೋಕೆ ಬಟ್ಟೆ ಇಲ್ಲ, ಒಂದು ಮಗ ಕಳಿಸಿಬಿಟ್ಟು, ಒಂದು ಮೊರ ಹೊನ್ನು ಈಸಿಕೊಂಡುಬಿಡಾನ ಕಣೇ. ಹೆಂಗೋ ನಾವ್ ತಿಂದ್ಕೊಂಡು ಜೀವನ ಮಾಡಾನ ಅಂತ ಹೇಳಿ, ಸಾರಿಕೊಂಡು ಹೋಗ್ತಿದ್ದ ಆಳನ್ನು ಕರ್‍ದು ಈ ಹೆಣ್ ಮಗಾನ ಅಯಪ್ಪಂಗೆ ಕೊಟ್ಟು ಒಂದು ಮೊರ ಹೊನ್ನು ಈಸ್ಕೊಂಡುಬಿಟ್ರು.

ಆಳುನ ಕೂಡ ಈ ಹೆಣ್ಣು ಮಗಾನ ಕಳಿಸಿಬಿಟ್ರು. ಆಳು ಕರ್‍ಕೊಂಡು ರಾಜನ ಪಟ್ಟಣಕ್ಕೆ ಬಂದ. ಬಂದ್ರೆ ಏಡ್‌ರಾಜಕುಮಾರ ರೂಮ್‌ನೊಳಗಿದ್ದಾನೆ. ''ಆಯ್ತಯ್ಯ ಇರ್‍ಲಿ, ಹೆಣ್ಣುಮಗು. ನಾವ್ ಕಾಲದಿಂದ ಮಕ್ಳು ಕಂಡೋರಲ್ಲ. ನಮ್ತಾವು ಇರ್‍ಲಿ. ಹಲವಾರ ದಿವ್ಸ ಆ ಮಗೂನ ದೊರೆನೂ ದೊರೆ ಹೆಂಡ್ತೀನೂ, ಸಾಕ್ತಾ ಇರಬೇಕಾದ್ರೆ, ಅಕ್ಕಪಕ್ಕದೋರ್‍ಗೆ ಈ ಮಗ ಕರ್‍ಕೊಂಡು ಬಂದಿರಾದು ಗೊತ್ತಿರ್‍ತದೆ. ಅಕ್ಕಪಕ್ಕದೋರು ಹೋಗಿ ಏನ್ ಹೇಳ್ತಾರೆ ಅಂದ್ರೆ ''ಏಡ್‌ಕುಮಾರ. ನಿಮ್ಮ ತಂದೆ ನಿಮ್ಮ ಆಳ್ ಕಳಿಸಿ ಹೆಣ್ಣು ಹುಡುಕಿ ತಂದಿದಾನೆ ಕಣಯ್ಯ. ಯಾಕಯ್ಯಾ ಹೆಣ್ಣು ತಗೊಂಬಂದಿರಾದು ? ನಿಮ್ಮಪ್ಪ ಮದ್ವೆ ಆಗಾಕೆ ತಂದವ್ನಾ? ಮುಂಚೆ ಮದ್ವೆಮಾಡು ಅಂತ ಹೇಳಯ್ಯ'' ಅಂತ ಅಕ್ಕಪಕ್ಕದವ್ರು ಹೇಳ್ಬಿಟ್ರು. ಆಳು ಊಟ ತಗೊಂಡ್ ಹೋದ ಏಡ್‌ರಾಜಂಗೆ. ''ಅಯ್ಯಾ ನೀನ್ ಹೆಣ್ ತೊಗೊಂಡ್ಬಂದು ಎಷ್ಟು ದಿವ್ಸ ಆಯ್ತು. ನಮ್ಮಪ್ಪನೇ ಮದ್ವೆ ಮಾಡಿಕೊಳ್ಳಾಕೆ ಮಡಿಕ್ಕಂಡವ್ನಂತ ? ನನಗೆ ಲಗ್ನಮಾಡು ಅಂತ ಹೇಳಯ್ಯಾ. ನನಗೆ ಲಗ್ನ ಮಾಡ್ದೇ ಇದ್ರೆ ನಾನ್ ಊಟಮಾಡಲ್ಲ ಅಂತ ಹೇಳಯ್ಯ'' ಅಂದ್ಬಿಟ್ಟ. ''ಆಯ್ತಯ್ಯ ಏಡ್‌ರಾಜ, ಊಟಮಾಡು; ತಂದೆಯವ್ರಿಗೆ ಹೇಳಿ ಲಗ್ನಮಾಡ್ತೀವಯ್ಯ. ಹೆಣ್ ತಂದಿರೋದು ನಿನಗೇನೆ, ಊಟ ಮಾಡಯ್ಯಾ.'' ''ನನಗೆ ಸಾಯಂಕಾಲ ಮದುವೆ ಆಗ್‌ಬುಡ್ಬೇಕಪ್ಪ. ಅಲ್ಲೀವರ್ಗೂ ನಾನು ಊಟ ಮಾಡಲ್ಲ''. ಸರಿ, ಅವತ್ತು ಯಾರಿಗೂ ಜನಕ್ಕೆ ಹೇಳಕ್ಕೆ ಸಾಧ್ಯ ಇಲ್ಲ. ಏನಂತ ಹೇಳ್ತಾರೆ ? ಆಯಪ್ಪಂಗೆ ಏಡ್‌ರಾಜಂಗೆ ಮದ್ವೆ ಅಂತ ಹೇಳ್ತಾರೆ? ಸರಿ ಅರ್‍ಮನೆ ಕ್ಲೀನ್ ಮಾಡ್ಕೊಂಡು ಅರ್‍ಮನೆಯಾಗಿದ್ದುದೆ ಅಡುಗೂಟ ಮಾಡ್ಕಂಡ್ರು. ಅಡಗೂಟ ಮಾಡ್ಕೊಂಡು ಆಯಮ್ಮಂಗೆ ಸ್ನಾನ ಮಾಡಿಸಿದ್ರು, ಪಡವೆ ವಸ್ತ್ರ ಧರಿಸಿದ್ರು. ಒಳ್ಳೆ ಬಟ್ಟೆ ಹೊಲಿಸಿದ್ರು. ಒಳ್ಳೊಳ್ಳೆ ಊಟ ಮಾಡಿಸಿದ್ರು. ಊಟಮಾಡ್ಬುಟ್ಟು ಸಾಯಂಕಾಲ ಆರು ಗಂಟೆ ಆಯ್ತು. ಏಳುಗಂಟೆ ಆಯ್ತು. ಆಮೇಲೆ ಆಯಮ್ಮನಗೆ ನೀನ್ ಅಚ್ಚುಕಟ್ಟಾಗಿ ಊಟಮಾಡಿಬಿಟ್ಟು, ನಿನ್ ಕೈಯಾಗ ಒಂದು ಚೊಂಬು ನೀರ್ ತಗೊಂಡು, ನೀನ್ ಆ ರೂಮ್ ಹತ್ತಿರ ನಡೆಯಮ್ಮ ಅಂತ ಹೇಳ್ಬಿಟ್ಟು ಕರಕೊಂಡು ಹೊರಟ. ಆಯಪ್ಪ ಕರಕೊಂಡು ಹೋಗಿ ಆಯಮ್ಮನ್ ಒಳಗಡೆ ತಳ್ಬಿಟ್ಟು ಬಾಗ್ಲುಹಾಕ್ಕೊಂಡು ಬಂದ್ಮೇಲೆ, ಆ ಏಡಿರಾಜ ಈಯಮ್ಮನ್ನ 'ಅ' ಅಂತ ನುಂಗ್ಬಿಟ್ಟ. ಸರಿ ನುಂಗಿದ್ದು ಆ ರೂಮಿನ ತುಂಬಕ್ಕೂನೂ ದಪ್ಪ ಆಗ್ಬಿಟ್ತು. ಆ ರೂಮಿನ ತುಂಬಕ್ಕೂನೂ ಅಂಗೇ ಮಲಗೇ ಇತ್ತು. ಇನ್ನು ಕೆಲವಾರು ದಿವ್ಸ ಕಳೀತಾ ಬಂತು. ಆಮೇಲೆ ಅಕ್ಕಪಕ್ಕದವ್ರು ''ಏನಯ್ಯಾ ಏಡಿರಾಜ ಏನೋ ಒಂದು ಮುಂಚೆ ತಗೋ ಬಂದು ಮಾಡಿದ್ರು, ಅದೇನೋ

ಅಣೇಬರಹ, ಎಲ್ಲಾ ಹೋಯ್ತು. ನಿಮ್ಮಪ್ಪಂಗೆ ಏನಯ್ಯಾ ಕಮ್ಮಿ ಆಗಿರೋದು ? ಇನ್ನೊಂದು ಹೆಣ್ಣು ತೊಗೊಬಂದು ಮದುವೆ ಮಾಡು ಅಂತ ಹೇಳಯ್ಯ'' ಅಂದ್ರು. ಸರಿ, ಇನ್ನ ಮೂರು ದಿವಸಕ್ಕೆಲ್ಲ, ''ಅಯ್ಯಾ ಆಳೀ ನನಗೆ ಊಟ ನೀನ್ಯಾಕಯ್ಯ ತಗೊಂಡ್ಬಂದೆ ? ನಾನ ಊಟ ಮಾಡೋದಿಲ್ಲ. ಮತ್ತೆ ಏನ್ ನಮ್ಮಪ್ಪಂಗೆನು ಕಮ್ಮಿ ಆಗಿರೋದು ? ಇನ್ನೊಂದ್ ಹೆಣ್ ತೊಗೊಂಬಂದು ಮದ್ವೆಮಾಡು ಅಂತ ಹೇಳಯ್ಯಾ'' ಅಂತ ಏಡಿರಾಜ ಹೇಳ್ದ.

ಅದನ್ನ ಆಳ್ ತಗೊಂಡು ಹೋಗಿ ದೊರೆಗೆ ಹೇಳ್ದ. ದೊರೆ ''ಅಯ್ಯೋ ಪರಮಾತ್ಮ ಈಗೊಂದು ಮೊರ ಹೊನ್ನು ಕಳಕೊಂಡುದ್ದು ಅಲ್ಲದಲೆ ಮತ್ತೆ ಇನ್ಯಾರಪ್ಪ ಹೆಣ್ಣು ಕೊಡ್ತಾರೆ ನಮಗೆ. ಏನಪ್ಪ ಮಾಡೋದು ?'' ಅಂತ ಹೇಳಿ ಬಾಳ ಯೋಚನೆಮಾಡಿ ಮಂಚದ ಮೇಲೆ ಮಲಗಿದ್ದ. ಅಂಗಿರಬೇಕಾದ್ರೆ, ಈ ಆಳು ''ಅಯ್ಯಾ ದೊರೆ ನೀನ್ ಮಲಗೋದುಬ್ಯಾಡ. ಮತ್ತಿನ್ನೊಂದ್ ಮೊರ ಹೊನ್ನುತುಂಬ್ಕೊಡಯ್ಯ. ನಾನ್ ನೋಡ್ಕಂಡು ಇನ್ನ ಒಂದ್ ಹೆಣ್ ತಗೊಂಡು ಬರ್‍ತೀನಿ. ಆಮೇಲೆ ಮುಂದೆ ಏನಾಗುತ್ತೆ ನೋಡುವ'' ಅಂತ ಹೇಳಿ ಇನ್ನೊಂದು ಮೊರ ಹೊನ್ನು ತುಂಬಿಸ್ಕೊಂಡು ಅದೇ ಊರಿನ ಮೇಲೆ ಸಾರಿಕೊಂಡು ಹೋಗ್ತಾ ಇದ್ದನು. ಹೋಗ್ತಾ ಇರಬೇಕಾದ್ರೆ ಆಯಮ್ಮ ಇನ್ನೊಂದು ಮಗು ಮಡಿಕ್ಕಂಡಿದ್ಳಲ್ಲ ಹಿರೇಹೆಂಡ್ತಿ ಮಗೂನ ಆಯಮ್ಮನೆಯೇ ''ರೀ ರೀ ಇನ್ನೊಂದು ಸಲಿ ಇನ್ನೊಂದು ಮೊರ ಹೊನ್ ಕೊಡ್ತೀನಿ ಅಂತ ಸಾರ್‍ಕೊಂಡ್ ಬರ್‍ತಾ ಅವ್ರೆ. ಈ ನಿಮ್ ಹಿರೇ ಹೆಂಡ್ತಿ ಮಗು ಇದೆಯಲ್ಲ ಅದ್ನೇ ಕೊಟ್ಟು ಬೆಡಾನ ಕಣ್ರೀ. ಮತ್ತೆ ಇನ್ನೊಂದ್ ಮೊರ ಹೊನ್ ಈಸಕೊಂಡು ಇನ್ನೊಂದಷ್ಟು ದಿವ್ಸ ಹೊಟ್ಟೆ ತುಂಬಿಸ್ಕೊಳ್ಳಣ'' ಅಂತ ಗಂಡ ಹೆಂಡ್ತಿ ಇಬ್ರೂ ಮಾತಾಡ್ಕೆಂಡ್ರು. ಆ ಇನ್ನೊಂದು ಮೊರ ಹೊನ್ನು ಈಸ್ಕೊಂಡು ಬಂದು ಮಗು ಕೊಟ್ಟಿಟ್ರು. ಕೊಟ್ಬುಬಿಟ್ರೆ, ಆ ಮಗೂನು ಕರ್‍ಕೊಂಡು ಈ ಆಳು ದೊರೆ ಮನೆಗೆ ಬರ್‍ತಾನೆ. ಬಂದ್ರೆ, ಆ ಮಗೂನೂ ಒಂದು ರಾತ್ರಿ ಮಡಕೋತಾರೆ. ಮತ್ತೆ ಆ ವಿಷಯ ಏಡಿರಾಜನಿಗೆ ಗೊತ್ತಾಗಿ, ಆ ಏಡಿರಾಜ 'ನಮಪ್ಪ ಮತ್ತಿನೊಂದ್ ಹೆಣ್ ತಗೊಂಡ್ ಬಂದ್ ಏನಕ್ ಮಡಗ್‌ಕೊಂಡವ್ನೆ? ಅಂತ ಆಳ್ ಕೈಲಿ ಹೇಳಿ ಕಳಿಸ್ತಾನೆ. '' ಆಯ್ತಯ್ಯ ನಾಳೆ ಸಾಯಂಕಾಲ ನಾವ್ ಮದುವೆ ಮಾಡ್ಬಿಡ್ತೀವಿ. ನೀನ್‌ಏನು ಯೋಚ್ನೆ ಮಾಡ್ಬೇಡ ಏಡ್‌ರಾಜು. ಊಟಮಾಡಯ್ಯ.'' ಊಟ ಮಾಡಿಸ್ಬಿಟ್ಟು ಹೋಗ್ತಾನೆ. ನಾಳೆ ರಾತ್ರೀಕೆ ಮತ್ತೆ ಅದೇನೇ ಅಡಿಗೂಟ ಏನ್ ಬೇಕ್‌ಬೇಕಾದ್ದು ಮಾಡ್ಕೊಂಡು ಆಯಮ್ಮಂಗೆ ''ಹೋಗವ್ವ ನೀನು, ಒಂದು ಚೊಂಬು ನೀರು ಹಿಡ್ಕೊಂಡು ಆ ರೂಮ್‌ಗೆ ಹೋಗ್ಬಿಡವ್ವ'' ಅಂತ ಕಳ್ಸಿಕೊಡ್ತಾರೆ. ಕಳಿಸಿಕೊಟ್ರೆ, ಆಯಮ್ಮ ಒಂದು ಚೊಂಬು ಕೈಯೊಳಗೆ ನೀರು ಹಿಡ್ಕೊಂಡ್ ಆ ಏಡಿರಾಜ ಇರೋ ಬಾಗಿಲರೂಮಿಗೆ ಬಂದು ಬಾಳ ಚಿಂತೆ ಮಾಡ್ತಾಳೆ. ''ಅಯ್ಯೋ ಈಯಪ್ಪಂಗೇ ನಮ್ಮಕ್ಕನ್ ತೊಗೊಂಡ್ಬಂದಿದ್ದು. ಏನ್ ಮೃತ್ಯು ಹೊಂದಿದ್ದೋ ಗೊತ್ತಿಲ್ಲ. ಇದರೊಳಗೇನಿದೆಯೋ ಗೊತ್ತಿಲ್ಲ. ಇದರೊಳಗಡೆ ಹೋದ್ರೆ ಏನಾಗ್ತೀನೋ ಎತ್ತಾಗ್ತೀನೋ. ನಾನ್ ಹೋಗದ್ ಬೇಕಿಲ್ಲ. ಪರಮಾತ್ಮ,ನೀನ್ ಬೇಕಾದ್‌ಮಾಡ್ಬಿಡು''ಅಂತ ಕಲ್ಲುನೀರು ಕರಗೋಹೊತ್ನಲ್ಲಿ

ದೊಡ್ಡದೊಂದು ಕಾಡಿರುತ್ತೆ. ''ಆ ಕಾಡಿನೊಳಗೆ ಚುಂಚನಗಿರಿ ಬೆಟ್ಟದೊಳಗೆ ಹೋಗ್ತಾ ಇರುಬೇಕಾದ್ರೆ, ಚುಂಚನಗಿರಿ ಬೆಟ್ಟಕ್ಕೆ ಬಂದು ಒಂದು ನಡುಬೆಟ್ಟದೊಳ್ಗೆ ಕುಂತವ್ಳೆ. ಒಬ್ಳೇನೇ ಕುಂತ್ಕಂಡಿದ್ರೆ, ಶಿವನಗೋಳ್ ಸೀತೆಗೋಳ್ ಮಾಡ್ತಾಇರ್ತಾಳೆ.' ''ಅಯ್ಯೋ ಪರಮಾತ್ಮ ನಾವು ನಮ್ ತಾಯಿಗೆ ಹುಟ್ಟಿದಾಗಲೆ ನಮ್ ತಾಯಿ ಮೃತವಾದಳು. ನಂ ಬಲತಾಯಿ ಈ ರೀತಿ ನಮಗೆ ಮಾಡಿದ್ಳು. ನಮ್ಮಕ್ಕ ಏನಾದಳು.? ಇವತ್ತು ನನಗೆ ಈ ಕಾಡಿನಲ್ಲಿ ವನವಾಸ ಮಾಡೋದು ಸ್ಥಿತಿ ಬಂದೈತಲ್ಲ ಪರಮಾತ್ಮ'' ಅಂತ ದಃಖಮಾಡ್ತಾ ಇರಬೇಕಾದ್ರೆ, ಪಾರ್ವತಿ ಪರಮೇಶ್ವರ ಇರವೆಂಬತ್ತು ಕೋಟಿಗೂ ಪಡಿಅಳ್ಕೊಂಡು ಮೇಲಿನ ಲೋಕದಲ್ಲಿ ಹೋಗ್ತಾಇರ್ತಾರೆ. ಹೋಗ್ತಾ ಇರಬೇಕಾದ್ರೆ ಪಾರ್ವತಿಗೆ ಈಯಮ್ಮನ ಶೋಕ ಕೇಳಿಸ್ಬಿಡುತ್ತೆ. ''ಪರಮಾತ್ಮ, ಈ ನರಲೋಕದಲ್ಲಿ ಏನೋ ನರಸದ್ದು ಬರ್ತಾ ಇದೆ. ಹೋಗಿ ಇದೇನು ಅಂತ ತಿಳ್ಕೊಂಡು ಮುಂದೋಗನ ನಡೀರಿ ಸ್ವಾಮಿ'' ಅಂತ ಪಾರ್ವತಿ ಈಶ್ವರನಿಗೆ ಹೇಳ್ತಾಳೆ. ಹೇಳ್ಬೇಕಾದ್ರೆ '' ಅಯ್ಯೋ ಹುಚ್ಚುಮುಂಡೆ ಹೆಂಗಸ್ರನ್ನ ಎಲ್ಲೂ ನಾವು ಕರ್ಕೊಂಡು ಹೋಗ್ಬಾರದು. ಗಾಳಿನೊ, ಪೀಡೆನೊ, ಪಿಶಾಚಿನೊ. ಈ ನಡುರಾತ್ರಿಯೊಳಗೆ ಹೋಗೋದು ಸರಿಯಲ್ಲ. ನಡಿ, ನಾವು ಬಂದಿರೊ ಕಾರ್ಯ ಮುಗಿಸ್ಕೊಂಡ್ ಹೋಗಾನ'' ಅಂತ ಈಶ್ವರ ಹೇಳಿದಾಗ, ''ಸ್ವಾಮಿ ನೀವು ಬಂದ್ರೆ ಬನ್ನಿ, ಬರದಿದ್ರೆ ನಿಮ್ಮಪಾದದ ಮೇಲೆ ನನ್ನ ನಾಲಗೆ ಇಟ್ಕೊಂಡು ನನ್‌ಪ್ರಾಣ ಹತ ಮಾಡ್ಕೋತೀನಿ'' ಅಂತ ಪಾರ್ವತಿ ಹೇಳಿದ್ಳು. '' ಥೀ, ಹೆಂಗಸ್ರನ್ನ ಎಲ್ಲೂನೂ ಕರ್ಕೊಂಡುಹೋಗಬಾರದ್ದು.'' ಪಾರ್ವತಿ ಪರಮೇಶ್ವರ, ಆಯಮ್ಮ ಶೋಕ ಮಾಡ್ತಿರೋ ಹತ್ತಿರ ಬಂದ್ರೆ, ''ಅಮ್ಮಾ, ಏನಮ್ಮಾ ನಿನ್ ಕಷ್ಟ? ಯಾಕಮ್ಮ ಇಷ್ಟೊಂದ್ ಶೋಕ ಮಾಡ್ತೀಯ,? ಯಾವೂರಮ್ಮ ? ಯಾವ ಪಟ್ಟಣವಮ್ಮ? ಅಂತ ಕೇಳ್ಬೇಕಾದ್ರೆ, ''ಅಪ್ಪ ನಾನು ಯಾರೂ ಇಲ್ಲದ ಪಾಪಿ ಪರದೇಶಿ. ಈ ರೀತಿ ನಂಗೆಲ್ಲ ಮಾಡಿಬಿಟ್ರು. ಈವತ್ತು ನಾನಿಲ್ಲಿ ಯಾವ ರೀತಿ ಏನಾಗೋದು ಅಂತ ನನಗೊಂದು ತಿಳುವಳಿಕೆ ಇಲ್ಲ. ಇಲ್ಲಿ ಬಂದು ಸೇರಿಬಿಟ್ಟಿದ್ದೀನಿ ಸ್ವಾಮಿ'' ಅಂತ ಆಯಮ್ಮ ಹೇಳಿದಾಗ, ಏನಮ್ಮ ಆಯ್ತು ಅಂತ ಎಲ್ಲಾ ವಿಚಾರಣೆ ಮಾಡ್ತಾರೆ. ವಿಚಾರಣೆ ಮಾಡಿದಾಗ ಈರೀತಿ ''ನಂ ತಾಯಿ ಇರಲಿಲ್ಲ, ನಮ್ ತಂದೆ ಇಂಗ್‌ಮಾಡ್ಬಿಟ್ರು. ಇಂಗ್ ತೊಗೊಂಬಂದು ನನ್ನ ಇಂಗೊಂದು ರೂಮಿಗೆ ಕಳಿಸಾಕೆ ಮಾಡಿದ್ರು. ನಮ್ಮಕ್ಕ ಒಬ್ಳಿಗೆ ಇಂಗೇ ಹತವಾಗೋಯ್ತು. ಈಗ ನಾನ್ ಏನಾಗ್ತೀನಿ ಅಂತ ನನಗೊತ್ತಿಲ್ಲ ಸ್ವಾಮಿ. ಭಯಮಾಡ್ಕೊಂಡು ನಾನ್ ಇಲ್ಲಿಗೆ ಬಂದ್ಬಿಟ್ಟಿದ್ದೀನಿ'' ಅಂತ ಹೇಳಿದಾಗ, ''ಅಮ್ಮಾ , ಏನೂ ಇಲ್ಲ ಅದು. ಮುಂದೆ ನಿನಗೆ ಒಳ್ಳೇದೇ ಆಗುತ್ತೆ. ನೀನ್ ಆ ರೂಮಿಗೋಗಿ ಬಾಗ್ಲು ತೆಗೆದಾಗ 'ಆ' ಅಂತ ಬಂದ್ಬಿಡುತ್ತೆ. ಒಂದ್ಬಿಡಿ ಮರಳು ಎರಚಿಬಿಡು. ಆ ಮರಳು ಎರಚಿದೇಟಿಗೆ ಒಂದು ನಾಯಿಯಾಗಿ ತಕತಕ ಅಂತ ಕುಣಿದುಬಿಡುತ್ತೆ. ಈ ಇಜ್ಜಲು ಎಸೆದ್ಬಿಡು. ಇಜ್ಜಲು ಎಸೆದಾಗ ಹದಿನಾರು ವರ್ಷ ಮಗಾ ಆಗ್ತಾನೆ. ಆವಾಗ ನೀವು ಕ್ಲೀನಾಗಿ ಬಾಳ್ಕೊಂಡ್ ಹೋಗ್ರಮ್ಮ''ಅಂತ ಹೇಳಿಬಿಟ್ಟು ಒಂದು ವರ ಇಟ್ಕಟ್‌ಬಿಟ್ಟು ಪಾರ್ವತಿ ಪರಮೇಶ್ವರ ಮಾಯವಾಗಿಬಿಟ್ರು.

ಆ ಮಾತು ಕೇಳಿದ ಮ್ಯಾಲೆ ಮತ್ತೆ ಆ ರೂಮಿನತ್ರಕ್ಕೆ ಬಂದ್ಳು. ಆ ರೂಮಿನತ್ರ ಬಂದಾಗ ಬಾಗ್ಲು ತೆಗೀತಾಳೆ. ಬಾಗ್ಲು ತೆಗೆದಾಗ 'ಆ' ಅಂತ ಬಂದ್ಬಿಡ್ತದೆ, ಏಡಿಗಾಯಿ ನುಂಗಕೆ ಆಯಮ್ಮನ್ನ. ಅವಾಗ ಒಂದ್ಹಿಡಿ ಮರಳ ಎಸೆದ್‌ಬಿಡ್ತಾಳೆ. ಒಂದ್ಹಿಡಿ ಮರಳು ಎಸೆದಾಗ ಒಂದು ನಾಯಾಗಿ ಕುಣೀತಾ ಇರ್ತದೆ. ಕುಣೀತಾ ಇರಬೇಕಾದ್ರೆ, ಒಂದ್ಹಿಡಿ ಇಜ್ಜಲು ಎಸೀತಾಳೆ. ಇಜ್ಜಲು ಎಸೆದಾಗ ಹದಿನಾರು ವರ್ಷದ ಮಗ ಆಗ್ತಾನೆ. ಹದಿನಾರು ವರ್ಷದ ಮಗ ಆದ್ರೆ, ಆಯಪ್ಪ ಹುಟ್ಟಿದ ನಿರ್ವಾಣಕ್ಕೆ ಇರುತ್ತಾರೆ. ಒಂದು ಮೂಲೇಲಿ ಆಯಮ್ಮ ಕುಳಿತಿರ್‍ತಾಳೆ. ಇನ್ನೊಂದು ಮೂಲೇಲಿ ಈಯಪ್ಪ ಕುಂತಿರ್‍ತಾನೆ.

ಸೂರ್ಯೋದಯ ಆಗೋವರ್ಗೂ ಇಬ್ಬರೂನೂ ಹಂಗೇ ಕುಂತಿರ್‍ತಾರೆ. ಕುಂತಿರಬೇಕಾದ್ರೆ ಈ ದೊರೆಗು, ದೊರೆ ಹೆಂಡ್ತಿಗೂ ಬೆಳಗಾನ ನಿದ್ದೆ ಬರೋದಿಲ್ಲ. ಬಾಳ ಚಿಂತೆ ಬಂದ್ಬಿಡುತ್ತೆ ಅವ್ರಿಗೆ. ''ಅಯ್ಯೋ ಪರಮಾತ್ಮ. ಮೊದಲನೇ ಒಂದು ಮಗು ತಂದು ಆ ರೀತಿ ಆಯ್ತು. ಈ ಮಗು ತಂದು ಏನಾಗಿದ್ಯೋ ಗೊತ್ತಿಲ್ಲ ಅಂತ. ಅಯ್ಯಾ ನಮ್ಮ ಮನೇಲಿರೋ ಆಳೇ, ಬಾರಪ್ಪ ಇಲ್ಲಿ. ಹೋಗಿ, ಆ ಮಗು ಏನಾಗಿದ್ಯೋ ನೋಡ್ಕೊಂಡ್ ಬಾ'' ಅಂತ ಐದು ಗಂಟೆಗೆ ಎಬ್ಬರಿಸಿ ಆಯಪ್ಪನ ರೂಮಿನ ಹತ್ರ ಕಳಿಸ್ತಾನೆ. ಕಳಿಸ್ದಾಗ ಆಯಪ್ಪ ಬಂದು ಬಾಗ್ಲು ತೆಗೆಯೋದಿಲ್ಲ. ಭಯಮಾಡ್ಕೊಂಡು ಒಂದು ಸೈಡನಲ್ಲಿ ಕಿಟಕಿ ಇರುತ್ತೆ. ಆ ಕಿಟಕಿಯಲ್ಲಿ ನೋಡ್ತಾನೆ. ಈಯಪ್ಪ ಹುಟ್ಟಿದ್ ನಿರ್ವಾಣ ಒಂದ್ ಮೂಲೇಲಿ ಕುಳಿತಿರ್‍ತಾನೆ. ಈರಮ್ಮ ಒಂದ್ ಮೂಲೇಲಿ ಕುಳಿತಿರ್‍ತಾಳೆ. ಆಯಪ್ಪ ಓಡಿ ಓಡಿ ಹೋಗ್ತಾ ಇರ್‍ತಾನೆ ದೊರೆ ಮನೆ ಹತ್ರುಕೆ. ಹೋಗಿ ''ಅಯ್ಯಾ ದೊರೆ, ಒಳ್ಳೇ ಸುದ್ದಿ ಬಂತು, ನಿನಿಗೆ. ಹದಿನಾರು ವರ್ಷದ ಮಗ ಸುಂದರವಾದಂತ ಗಂಡಸಾಗ್ಬುಟವ್ನೆ ಅಂತ ನನಗೆ ಮೋರ್ಚೆ ಬಡಿದ್ಬಿಟ್ಟಿತ್ತು, ಕಿಟಕಿ ಒಳಗೆ ನೋಡಿ. ನಡೀರಿ ಸ್ವಾಮಿ. ಹೋಗಿ ಕರ್‍ಕೊಂಡ್ ಬರಾನ ಅಂತ ಹೇಳಿ, ಆವಾಗ ಆ ದೊರೆ, ದೊರೆಹೆಂಡ್ತಿ, ಎಲ್ಲಾರು ಹೋಗಿ ಆ ರೂಮ್ ಬಾಗ್ಲು ತೆಗೆದು ನೋಡ್ದಾಗ ಸುಂದರವಾದಂತ ಗಂಡಾಗಿರ್‍ತಾನೆ. ಆವಾಗ ಆ ಮಗುನ್ನೂವೆ ಆಯಮ್ಮನ್ನೂವೆ ಮನೆಗೆ ಕರ್‍ಕೊಂಡು ಬರ್‍ತಾರೆ. ಕರ್‍ಕೊಂಡು ಬಂದಾಗ ಸುತ್ತಲ ದೇಶಕ್ಕೆಲ್ಲ ಟಾಂ ಟಾಂ ಹಾಕಿಸ್ತಾರೆ. ಈ ದೊರೆಗೆ ಹದಿನಾರು ವರ್ಷದ ಮಗ ಪ್ರತ್ಯಕ್ಷವಾಗಿದ್ದಾನೆ. ಈಗ ನಾಮಕರಣ ಮಾಡ್ತೀವಿ ಎಲ್ಲಾರು ಬನ್ನಿ ಅಂತ. ಸುತ್ತಮುತ್ತಲ ದೇಶಕ್ಕೆಲ್ಲ ಹೇಳಿ ಕರೆಸ್ಕೊಂಡು ದೊಡ್ಡದಾಗಿ ನಾಮಕರಣ ಮಾಡ್ತಾರೆ. ನಾಮಕರಣ ಮಾಡಿ ''ಏಡಿಕುಮಾರ'' ಅಂತ ಹೆಸರಿಟ್ಟು, ಆಯಮ್ಮನ್ನ ಆಯಪ್ಪನಿಗೆ ಲಗ್ನ ಮಾಡ್ಬಿಡ್ತಾರೆ.

ಲಗ್ನ ಮಾಡಿದ ಕೆಲವಾರು ದಿವ್ಸ ಹಿಂಗೇ ಕಾಲ ಕಳೀತಾ ಇರ್‍ತಾರೆ. ಕೆಲವಾರು ದಿವ್ಸ ಕಾಲ ಮಾಡಿದ್ಮೇಲೆ ಈ ಬಲತಾಯಿ, ತಂದೆ ಇರ್‍ತಾರಲ್ಲ ಊರ್‍ನಲ್ಲಿ, ಆಯಪ್ಪಂಗೂ ಆಯಮ್ಮಂಗೂ ಗೊತ್ತಾಗ್ಬಿಡ್ತದೆ. ನನ್ ಮಗಳು ಬದುಕಿದಾಳೆ, ಅಚ್ಚುಕಟ್ಟಾಗಿದಾಳೆ ಅನ್ನೋದು. ಅಕ್ಕಪಕ್ಕದವ್ರು ಹೇಳಿ, ಇರಲಿ ನನ್ ಮಗಳ್ನ ಎಷ್ಟು ದಿವ್ಸ ಆಯ್ತು ಅವ್ರ ಮನೆಗೆ ಕಳ್ಸಿ, ಇವತ್ತಾದ್ರೂ ಹೋಗಿ ನನ್ ಮಗಳ್ನ ನೋಡ್ಕೊಂಬರಾನ ಅಂತೇಳಿ ಅವಳ ಬಲತಾಯಿ,

ಮಗಳ್ನ ನೋಡಕೆ ಬರ್ತಾಳೆ. ಎಷ್ಟು ದಿವ್ಸ ಆಯ್ತು, ನಂ ತಾಯಿ ಬಂದ್ಳು ಅಂತ ಇವ್ರಗೂನೂ ಒಂದು ಕರುಣ ಉಂಟಾಗ್ತದೆ. ಸುಖ ಸಂತೋಷದೊಳ್ಗೆ ಬಂದಂತಾ ಈಯಮ್ಮಂಗೆ ಬೇಕ್‌ಬೇಕಾದಂಥ ಅಡಿಗೂಟ ಮಾಡಿ, ಬಟ್ಟೆಬರೆ ತೊಗೊಬಂದು ಕೆಲವಾರು ದಿವ್ಸ ಆಯಮ್ಮನ್ನ ಇಟ್ಕಂತಾರೆ, ಮನೇನಲ್ಲಿ. ಕೆಲವಾರು ದಿವ್ಸ ಇಟ್ಕಂಡ್ರೆ ಈಯಮ್ಮಂಗೆ ಒಂತರಾ ಕುತಾ ಬಂದ್ಬಿಡ್ತದೆ. ಎಲೆ ಎಲೆ, ನಾನ್ ಒಂದು ಮೊರ ಹೊನ್ನ ಈಸ್ಕೊಂಡು ಈ ಮನೆಗೆ ನನ್ ಸವತಿ ಮಗ್ಳನ್ ಕಳ್ಸಿ, ಎಷ್ಟು ಚೆನ್ನಾಗಿ ಬದಿಕ್ಕೊಂಡ್ಬಿಟ್ಟಳು. ನನ್‌ಮಗಳನ್ ಕೊಟ್ಟಿದ್ರೆ ಹಿಂಗೇ ಬದ್ಕಿರೋಳೇನೋ, ಇವಳ್ನ ಕೊಟ್ಟಬಿಟ್‌ವಲ್ಲ, ಅಂದಿದ್ದೇ ಆಯಮ್ಮಂಗೆ ಬಾಳ ಚಿಂತೆಗೆ ಬಂದ್ಬಿಡ್ತು. ಚಿಂತೆ ಬಂದ್ರೆ, ಇರಲಿ ಇದಕ್ಕೂ ಒಂದು ಯೋಚನೆ ಮಾಡಾನ ಅಂದ್‌ಕಂಡ್ಳು.

ಯೋಚ್ನೆ ಮಾಡ್ಕೊಂಡು ಆಯಮ್ಮ ಮನೇಗ್ ಬಂದ್ಬಿಟ್ಟಳು. ಇತ್ಲಾಗಿ ಏಡ್‌ಕುಮಾರನ ಹೆಂಡ್ತಿ ಗರ್ಭಿಣಿ ಆದ್ಳು. ಗರ್ಭಿಣಿ ಆದಾಗ, ನವನಾರು ಒಂಬತ್ತು ತಿಂಗಳು ತುಂಬ್ತಾ ಬಂತು. ಈಯಮ್ಮಂಗೆ ಯಾರೋ ತಿಳುವಳಿಕೆ ಹೇಳಿದ್ರು. ಯಾರಿಗೆ? ಈ ಬಲತಾಯಿಗೆ. ಬಲತಾಯಿ ಮಕ್ಳು ಕರ್ಕೊಂಡು ಬಂದು ಬಾಣಂತನ ಮಾಡ್ಬೇಕು ಅಂತ ಹೇಳಿ ಆಯಮ್ಮ ಮಗಳನ್ ಕರಿಯೋಕ್ ಹೊಂಟ್ಳು. ''ಏನಮ್ಮಾ, ನಿಂ ತಾಯಿ ಕರೆಯೋಕೆ ಬಂದಿದಾರೆ. ಹೋಗೋ ಇಷ್ಟ ಇದ್ರೆ ಹೋಗಮ್ಮ. ನಿನಗೆ ಹೋಗೋ ಇಷ್ಟ ಇಲ್ಲದಿದ್ರೆ ಹೋಗ್ಬೇಡಮ್ಮ, ನಾವೇ ಮಾಡ್ತೀವಿ'' ಅಂತ ದೊರೆ, ದೊರೆಹೆಂಡ್ತಿ ಕುಂಡ್ರಿಸ್ಕೊಂಡು ಹೇಳಿದ್ರು. ''ಅಯ್ಯೋ ನಾನು ಹೋಗ್ದಿದ್ರೆ, ನನ್ ಮಗಳಾಗಿದ್ರೆ ಬರ್ತಿರಲಿಲ್ವಾ, ಬೇರೆಯವ್ರ ಮಗಳಾಗಿದ್ದಿಕ್ಕೆ ನಾನು ಕರೆದ್ರೂ ಬರ್ಲಿಲ್ಲ ಅಂತ ಬೇಜಾರು ಮಾಡ್ಕೋತಾಳೆ ನಂ ತಾಯಿ. ಏನೇ ಕಷ್ಟ ಬರಲಪ್ಪ ನನಗೆ. ನಗ್ತಾ ನಗ್ತಾ ಕಳಿಸಿಕೊಡಿ. ಹೋಗ್ಬಿಟ್‌ಬರ್ತೀನಿ ಬಾಣಂತನ ತೀರಿಸ್ಕೊಂಡು'' ಅಂತ ಅತ್ತೆಮಾವಂಗೇಳಿದಳು. ಬೆಳಗ್ಗೆ ಅವಳಿಗೆ ಏನೇನು ಮಾಡ್ಬೇಕೋ ಎಲ್ಲಾನೂ ಮಾಡಿ, ಬಟ್ಟೆಬರೆ ತಂದಿಟ್ಟು, ಅವರಿಗೆ ಅಡಿಗೂಟ ಮಾಡಿಕ್ಕಿ, ಕಳಿಸಿಕೊಟ್ರು.

ಕಳಿಸಿಕೊಟ್ರೆ, ಕರ್ಕೊಂಡ್ಹೋಗಿ ಕೆಲವಾರು ದಿವ್ಸ ಮಡಿಕ್ಕಂಡಿರ್ತಾಳೆ. ಮಡಿಕ್ಕಂಡಿರಬೇಕಾದ್ರೆ, ಈಯಮ್ಮ ಯೋಚ್ನೆಮಾಡ್ತಾಳೆ. ಅಯ್ಯೋ ನನ್ ಮಗಳ್ನ ಕೊಟ್ಟಿದ್ರೆ ಹಿಂಗೇ ಬದ್ಕಿರೋಳಲ್ಲ ? ಇವಾಗ ಇದ್ಕೇನಾರ ಒಂದು ಐಡಿಯಾ ಮಾಡಿ ಇವಳ್ನ ತೀರಿಸ್ಲೇಬೇಕು ಅನ್ನೋದೊಂದು ದುರ್ಯೋಚನೆ ಮಾಡ್ಬಿಟ್ಟಳು. ಆಯಮ್ಮಂಗೊಬ್ಳು ಮಗಳಿರ್ತಾಳಲ್ಲ? ಆ ಮಗಳಿಗೆ ಹೇಳಿಕೊಡ್ತಾಳೆ. ಏನಂತ ಹೇಳ್ತಾಳಪ್ಪ ಅಂದ್ರೆ. ''ಒಂದುಪಾಯ ಹೇಳು ನಿಮ್ಮಕ್ಕಂಗೆ. ಅಕ್ಕ ನಿನ್ ಮೈಮೇಲಿರೋ ಬಟ್ಟೆ, ಒಡ್ವೆನೆಲ್ಲ ಕೊಡಕ್ಕಾ, ನಾನ್ ಹಾಕ್ಕಂತೀನಿ ಒಂದಿನ. ನನ್ ಮೈ ಮೇಲಿರೋ ಬಟ್ಟೆ ನೀನ್ ಹಾಕ್ಕಳಕ್ಕ. ನಾನೂ ಒಂದಿನ ಶೋಕಿಮಾಡ್ತೀನಿ ಅಂತ ಹೇಳಿ ಅವಳ ಬಟ್ಟೇನೆಲ್ಲ ನೀನ್ ಈಸಿ ಹಾಕ್ಕೊಂಡು ನೀರಿಗೋಗಾನ ನಡಿಯಕ್ಕಾ ಅಂತ ಒಂದು ಕಲ್ಯಾಣಿ ಹತ್ರಕ್ಕೆ ನೀರಿಗೆ ಕರ್ಕೊಂಡು ಹೋಗಿ, ಆಯಮ್ಮನ್ನ ಕಲ್ಯಾಣಿ ಒಳಕ್ಕೆ ನೂಕ್ಬಿಟ್ಟು ನೀನು ಬಂದ್ಬಿಡು'' ಅಂತ ಮಗಳಿಗೆ ಹೇಳ್ಕೊಡ್ತಾಳೆ.

ಹೇಳಿಕೊಟ್ರೆ, ಈಯಮ್ಮ ಅದೇ ರೀತಿ "ಅಕ್ಕಾ ನಿನ್ ಮೈಮೇಲೆ ಎಷ್ಟು ಚೆನ್ನಾಗಿದೆಯಕ್ಕಾ ಒಡವೆಗಳು. ನಿನ್ ಬಟ್ಟೆ ಒಡವೆನೆಲ್ಲ ನನಗೆ ಧರಿಸಕ್ಕ. ನನ್ ಬಟ್ಟೆ ನೀನ್ ಧರಿಸ್ಕೊಳಕ್ಕ. ನೋಡಕ್ಕ" ನಾನು ಎಷ್ಟು ಚೆನ್ನಾಗಿ ಕಾಣಿಸ್ತೀನಿ ಆವಾಗ ಅಂತ ಹೇಳಿ ಆಯಮ್ಮನ ಮೈಮೇಗಲ ಬಟ್ಟೆ, ಒಡ್ವೆನೆಲ್ಲ ಇವ್ಳು ತೊಟ್ಕೊಂಡು, ಅಕ್ಕಾ ಬೇಜಾರಾಗುತ್ತೆ ನೀನ್ ಬಂದ್ ದಿವ್ಸದಿಂದಲೂ ಎಲ್ಲೂ ಹೊರಗಡೆ ತಿರುಗಾಡಕ್ಕಿಲ್ಲ. ಕಲ್ಯಾಣಿ ತಾಕ್ಕ ತಿರುಗಾಡ್ಕೊಂಡು ನೀರ ತಗೊಂಡು ಬರಾನ ನಡಿಯಕ್ಕಾ ಅಂತ ಹೇಳಿ, ಆಯಮ್ಮನ್ ಜೊತೆಯಲ್ಲಿ ಕರ್ಕೊಂಡು ಹೋಗ್ತಾ ಇರ್ತಾಳೆ. ಹೋಗ್ತಾ ಇರಬೇಕಾದ್ರೆ, ಒಂದು ಕಲ್ಯಾಣಿ ತುಂಬಿರುತ್ತೆ. ಕಲ್ಯಾಣಿ ಹತ್ರಕ್ಕೆ ಹೋಗಿ, "ಅಕ್ಕಾ ನನ್ನ ಸೀರೆಯೆಲ್ಲ ನೀರಾಗ್ಬಿಡ್ತದೆ, ನೀನ್ ನೀರು ಮಗದ್‌ಕೊಡಕ್ಕ, ನಾನ್ ಮ್ಯಾಲಕ್ಕೆ ತಗೊಂಡು ಹೋಗ್ತೀನಿ" ಅಂತ ಹೇಳಿ ಆ ಬಿಮ್ಮನ್ನ ಕಳಿಸಿ, ನೀರ್ ಮೊಗಿವಾಗ ನೂಕ್ಬಿಟ್ ಒಳಕ್ಕೆ, ಈಯಮ್ಮ ಬಿಂದಿಗೆ ತೊಗೊಂಡ್ ಬಂದ್ಬಿಡ್ತಾಳೆ.

ಮನಗೆ ಬಂದ್ರೆ, ಅಲ್ಲಿಗೆ ಆಯಮ್ಮಂಗೆ ಹೆರಿಗೆ ಟೈಂ ತುಂಬಿರುತ್ತೆ. ಕಲ್ಯಾಣಿ ಒಳಗಡೆ ಹೋಗ್ತಿದ್ದಂಗೆ, ಒಳಗಡೆ ಎರಡು ಸರ್ಪಗಳಿರುತ್ತವೆ. ಸರ್ಪಗಳಿದ್ರೆ, ಈಯಮ್ಮನ್ ಅಂಗೆ ಕೈಲಿಡ್ಕೊಂಡು ಹೋಗ್ಬಿಟ್ಟುವು. ಒಳಗಡೆ ಸರ್ಪಗಳಿಗೆ ಒಂದು ಮನೆ ಇರುತ್ತೆ. ಆ ಮನೆ ಒಳಗಡೆ ನಾವ್ಯಾತರ ನರ ಮನುಷ್ಯರ ವಾಸಮಾಡ್ಕೊಂಡಿರ್ತೀವಿ ಅದೇ ತರ ಆ ಸರ್ಪಗಳು ಆಯಮ್ಮನ್ ಇಟ್ಕೊಂಡಿರ್ತವೆ. ಇಟ್ಕಂಡಿರಬೇಕಾದ್ರೆ, ಈಯಮ್ಮ ಬಿಂದಿಗೆ ಎತ್ಕೊಂಡ್ ಮನೆಗೆ ಬರ್ತಾಳೆ.

ಮನೆಗೆ ಬರೋದ್ಕು ಅಲ್ಲಿಗೆ ಹೆರಿಗೆ ಟೈಂ ತಿಂಗಳು ಮುಗೀತಾ ಬಂತು. ಹೆರಿಗೆ ಟೈಂ ಮುಗಿದೋಯ್ತು. ಈ ತಿಂಗಳೇನೇ ಹೆರಿಗೆ ಆಗೋಗದೆ. ನಾವ್ ಹೋಗ್ಬಿಟ್ಟು ಮಗ ಬಾಣಂತಿ ನೋಡ್ಕಂಡ್ ಬರಾನ, ಅಂತ ಹೇಳ್ಬಿಟ್ಟು ಅತ್ತೆ ಮಾವ ಮಗನನ್ನ ಕಳಿಸಿಕೊಡ್ತಾರೆ. ಬಂದ್ರೆ ಈಯಮ್ಮ ತೊಟ್ಟಲಿಗೆ ಗುಂಡಕಲ್ಲು ಹಾಕಿಬಿಟ್ಟು, ಮೇಲ್ ಬಟ್ಟೆ ಹೊದಿಸ್ಬಿಟ್ಟು, ತಲೆಗೆ ಬಟ್ಟೆ ಕಟ್ಟಿಬಿಟ್ಟು ಹಿಂದಗಡೆ ಕುಂಡರಿಸಿದ್ದಾಳೆ. ಕುಂಡ್ರಿಸಿರಬೇಕಾದ್ರೆ ಯಜಮಾನ ಬರ್ತಾನೆ. ಬಂದ್ರೆ ಅತ್ತೆ ನೀರ್ ಕೊಡ್ತಾಳೆ. ಒಳಗಡೆ ಬಂದು ತೊಟ್ಟಿಲತ್ರ ಕೂತ್ಕತಾನೆ. ಕುಂತ್ಕಂಡಿರಬೇಕಾದ್ರೆ ಇವ್ಳು ಮಾತಾಡ್ಸದಿಲ್ಲ. ಸುಮ್ನೆ ಮಲಗಿರ್ತಾಳೆ. ಇವ್ನು ಕುಂತ್ಕಂಡು ತುಂಬಾ ಯೋಚನೆಮಾಡ್ತಾನೆ. ಅಯ್ಯೋ ನನ್ ಹೆಂಡ್ತಿ ಅಷ್ಟು ಪ್ರೀತಿಯೊಳಗೆ ಇದ್ದೋಳ್, ಈವತ್ತು ನಾನ್ ಇಷ್ಟು ದಿವ್ಸಕ್ ಬಂದರೂನೂ ಏನು ಎಂತನೂ ಮಾತಾಡ್ಸಿಲ್ಲವಲ್ಲ ಏನಿರಬಹುದು? ಏನೋ ಅಚಾತುರ್ಯ ಆಗಿದೆ ? ಇವಳ್ ನನ್ಹೆಂಡ್ತಿ ಅಲ್ಲ. ಹೆಂಡ್ತಿಯಾಗಿದ್ರೆ, ನನ್ ಮಾತಾಡ್ಸಿರೋಳು ಅಂದಿದ್ದೇ, ಕೂತ್ಕೊಂಡು ಯೋಚನೆ ಮಾಡಿದ. ಸರಿ, ಊಟಾನೂ ಮಾಡಲ್ಲ. ಏನು ಮಾಡಲ್ಲ. ಏನೋ ಅಚಾತುರ್ಯ ಆಗಿದೆ. ನಾನ್ ವಾಪಾಸ್ ಹಿಂತಿರುಗಿ ಹೋಗ್ಬಿಡೋಣ ಅಂತ ಹೇಳಿಬಿಟ್ಟು ಹೆಚ್ಚುಕಮ್ಮಿ ಏನು ಮಾತಾಡೋದಿಲ್ಲ ಊರಿಗೆ ಹೊಂಟ್ಬಿಡ್ತಾನೆ. ಊರಿಗೆ ಹೋದ್ರೆ ಅಲ್ಲವರ ತಾಯಿ ತಂದೆ 'ಏಕಪ್ಪ ಇಷ್ಟು ಬೇಗ ಬಂದೆ? ಹೆರಿಗೆ ಆಗಿದೆಯೇನೋ ? ಚೆನ್ನಾಗಿದ್ದಾಳೇನೋ ? ನಿನ್ನ ಹೆಂಡತಿ ಹೆಂಗಿದ್ದಾಳೋ ? ಮಗು

ಚೆನ್ನಾಗಿದೆಯೇನೋ ? ಅಂತ ಅಪೇಕ್ಷೆಪಟ್ಟು ಕೇಳ್ತಾ ಇದ್ದರೆ ಇವ್ನೇನೂ ಮಾತಾಡ್ದೇ ಮಂಚದ ಮೇಲೆ ಮಕ್ಕಡೆಯಾಗಿ ಮಲಗಿಬಿಡ್ತಾನೆ. ಏನೋ ಹೆಚ್ಚುಕಮ್ಮಿ ಆಗ್ಬಿಟ್ಟಿದೆ, ನಮ್ ಸೊಸೆಗೆ. ನನ್ಮಗ ಏನೂ ಹೇಳಿಲ್ವಲ್ಲ, ನಾವಿಬ್ರೂ ಹೋಗ್ ನೋಡ್ಕೊಂಡು ಬಂದ್‌ಬುಡಾನ ನಡೀರಿ ಅಂತ ದೊರೆನೂ, ದೊರೆ ಹೆಂಡ್ತಿನೂ ಸೊಸೆ ಮನೆಗೆ ಬಂದ್ರೆ, ಅಷ್ಟೋತ್ಗಾಗ್ಲೇ ಇವುಳು ತೊಟ್ಲೊಳಗೆ ಇದ್ದ ಗುಂಡುಕಲ್ಲು ತಗದ್‌ಹಾಕಬುಟ್ಟು, ಮಗು ತೀರಿಹೋಗಿ ಬಿಟ್ಟಿದೆ, ಬಾಣಂತಿಗೆ ಅಮ್ಮ ಎದ್ದು ಒಂದು ಕಣ್ಣುಹೋಗ್ಬಿಟ್ಟಿದೆ ಅಂತ ಹೇಳಿಬಿಟ್ಟು ತೊಟ್ಲು ತಗದು ಮಡಗಿಬಿಟ್ಟು ಕದೀನ್ಹಿಂದೆ ಕುಂಡಿರಿಸಿದ್ದಾರೆ ಮಗಳ್ನ. ಸೊಸೇನ ನೋಡಾಕೆ ಅತ್ತೆ ಮಾವ ಬಂದ್ರು. ಬಂದ್ರೆ ಅತ್ತೇನೂ ಮಾತಾಡ್ಸಲಿಲ್ಲ, ಮಾವನ್ನೂ ಮಾತಾಡಿಸಲಿಲ್ಲ. ''ಅಯ್ಯೋ ನಮ್ ಸೊಸೆ ಅಷ್ಟು ಪ್ರೀತಿಲಿ ಇದ್ಲಲ್ಲ. ಏನ್ ನಮ್ಮನ್ ಮಾತಾಡ್ಸಲಿಲ್ಲವಲ್ಲ. ಕದೀನ್ಹಿಂದಗಡೆನೇ ಮಲಗಿದ್ದಾಳಲ್ಲ, ಏನಿರಬಹುದು ? ಅಮ್ಮಾ ಏನಮ್ಮ, ಮಗು ಚೆನ್ನಾಗಿದ್ಯ, ನೀನ್ ಚೆನ್ನಾಗಿದ್ದೀಯೇನಮ್ಮ. ಅತ್ತೇ, ಮಗು ತೀರಿಹೋಗ್ಬಿಡ್ತು ಮೂರುದಿವ್ಸ ಆಯ್ತು ಹೆರಿಗೆ ಆಗಿ. ನಿಮ್ ಮಗ ಬಂದಾಗ್ಲೂ ಮಗು ಇತ್ತು. ಆಮೇಲ್ ಮಗು ತೀರ್‌ಹೋಗ್ಬಿಡ್ತು. ನನಗೆ ಅಮ್ಮ ಎದ್ಬಿಟ್ಟಿದ್ದಾವೆ. ಕಣ್ಣು ಕಾಣಿಸೋದಿಲ್ಲ, ಮಲಗ್ಬಿಟ್ಟಿದೀನಿ ಕಣತ್ತೆ ಅಂತ ಸೊಸೆ ಹೇಳ್ತಾಳೆ. ಆದರೆ ದನಿ ವಾತಾವರಣ ಅವರಿಗೆ ಗೊತ್ತಾಗ್ಬಿಡುತ್ತೆ. ಇವ್ಳು ಬ್ಯಾರೆಯೋಳು. ಏನೋ ಮಾಡಿಬಿಟ್ರು ಅಂದ್ಕಂಡು ''ನಾವು ಊರಿಗೆ ಹೋಗ್ತೀವಿ. ನಮ್ಮ ಸೊಸೇನ ನಮ್ಮ ಮನೆಗೆ ಕರ್ಕೊಂಡು ಬಿಟ್ಟಿಟ್ಟು ಬರಬೇಕು ಕಣಮ್ಮ'' ಅಂತ ಹೇಳ್ಬಿಟ್ಟು ಅತ್ತೆ ಮಾವ ವಾಪಾಸ್ ಊರಿಗೆ ಹೋಗಿಬಿಟ್ರು.

ಬೆಳಗ್ಗೇಗೆ ಒಡವೆ ಹಾಕ್ಕೊಂಡು ಅದೇ ಸೀರೆ ಉಟ್ಕೊಂಡು ಮತ್ತೆ ಅವ್ರ ಮನೆಗೆ ಸೊಸೆ ಕರ್ಕೊಂಡ್ ಹೋಗ್ತಾ ಇದ್ದಾಳೆ, ಅವ್ರತಾಯಿ. ಕರ್ಕೊಂಡ್ ಹೋಗ್ತಾ ಇದ್ರೆ, ಮನೆಗೆ ಹೋದ್ ತಕ್ಷಣ ಅಯ್ಯೋ ಪರಮಾತ್ಮ ನನ್ ಸೊಸೆ ಅಲ್ಲ ಇವ್ಳು. ಈ ನನ್ನ ಸೊಸೆ ಹೋಗಬೇಕಾದ್ರೆ ಕೈಗಳಿಗೆಲ್ಲ ಒಂದೊಂದು ಗುರ್ತು ಕೊಟ್‌ಬಿಟ್ಟು ಹೋಗಿದ್ಲು. ಗಂಡನ ಕೈಗೆ ಒಂದು ಗುರುತು ಕೊಟ್ಟುಹೋಗಿದ್ಲು. ಸೊಸೆಯಾಗಿದ್ರೆ ಈವಾಗ ಕೊಟ್ಟಿರೋ ಗುರುತನ್ನ ಹೇಳ್ತಾಳೆ. ಇವಳ್ನ ಪರೀಕ್ಷೆ ಮಾಡಬೇಕು ಅಂತ ಹೇಳಿ ಇವ್ರ ಮೂರು ಜನಾನೂ ಮಾತಾಡ್ಕೊತಾರೆ. ಈಯಮ್ಮ ಹೋಗ್ತಿದ್ದಂಗೇನೇ ಅಡಿಗೆಮನೆ ಯಾವುದು ಅಂತ ಗೊತ್ತಿಲ್ಲ, ಬಚ್ಚಲುಮನೆ ಯಾವುದು ಅಂತಾನೂ ಗೊತ್ತಿಲ್ಲ. ಮಲಗೋ ಮನೆ ಯಾವುದು ಅನ್ನೋದು ಗೊತ್ತಿಲ್ಲ. ಸರಿ ,ಹೋದ್ಲು, ಎಲ್ಲೋ ಒಂತಾವು ಕುಂತ್ಕೊಂಡ್ಲು. ಅಮ್ಮ ನೀನು ನಮ್ಮ ಸೊಸೆ ಆದ್ರೆ ಅಡಿಗೆಮನೆ ಯಾವುದು ? ಅಡಿಗೆ ಮಾಡ್ ಹೋಗಮ್ಮಅಂದರು. ಇವಳ್ ಹೋಗ್ ಮಾಡಿದ್ ಜ್ಞಾಪಕ ಇದ್ದರಲ್ವೇ ಹೋಗ್ ಮಾಡೋದು? ಹೋಗ್ಲಿಲ್ಲ. ಅಮ್ಮ ಸ್ನಾನದ್ ಮನೆ ಎಲ್ಲಮ್ಮಾ? ನನಗೆ ಗೊತ್ತಿಲ್ಲ. ಆಯ್ತಮ್ಮ. ನೀನ್ ನಮ್ಮನೆ ಬಿಟ್ಟು ಬಾಣಂತನಕ್ಕೆ ನಿಮ್ಮನೆಗೆ ಹೋಗುವಾಗ ನನ್ ಕೈಯಲ್ಲಿ ನೀನೇನಮ್ಮ ಗುರ್ತು ಕೊಟ್‌ಹೋಗಿದ್ದೆ ? ನಾನೇನೂ ಕೊಟ್ಟಿಲ್ಲ. ಸರಿ. ಅಮ್ಮ ನಮ್ಮಗನ ಕೈಯಲ್ಲೇನಮ್ಮ ಗುರ್ತು ಕೊಟ್ ಹೋಗಿದ್ದೆ ? ಅವರ ಕೈಗೂ ನಾನ್ ಏನು ಕೊಟ್ಟಿಲ್ಲ. ಹೌದೇನಮ್ಮಾ, ನೀನಿರು. ಸರಿ. ನೀವ್ ಕರ್ಕೊಂಡು

ಬಂದಿರೋರು ಬಿಟ್ಬಿಟ್ಟು ನಿಮ್ಮನೆಗೆ ನೀವು ಹೋಗ್ರವ್ವ. ನಮ್ಮ ಸೊಸೆ ನಾವು ಬಾಳಿಸ್ಕೋತೀವಿ ಅಂತ ಹೇಳಿಬಿಟ್ರು. ಅವ್ರ ತಂದೆ ತಾಯಿ ಅವರ ಮನೆಗೋದ್ರು. ಸೊಸೆ ಇವ್ರ ಮನೆಯೊಳಗೆ ಬಾಳ್ತಾ ಇರ್ತಾಳೆ.

ಬಾಳ್ತಾ ಇರಬೇಕಾದ್ರೆ, ಗಂಡನಿಗೆ ಚಿಂತೆ ಬಂದ್ಬಿಡ್ತು, ಪರಮಾತ್ಮ, ನನ್ ಹೆಂಡ್ತಿ ಎಲ್ಲವಳೇ ಅಂತ ಪತ್ತೆ ಮಾಡ್ಲೇಬೇಕು ನಾನು ಅಂದು. ಚುಂಚನಗಿರಿ ಪಟ್ಟಣದೊಳಗೆ ಒಬ್ಬ ಬಳೆಶೆಟ್ಟಿ. ಆ ಬಳೆಶೆಟ್ಟೀನ ಮನೆ ಹತ್ರಕ್ಕೆ ಕರೆಸ್ಕೊಂತಾನೆ. ಕರೆಸಿಕೊಂಡ್ರೆ "ಅಯ್ಯಾ ಬಳೆಶೆಟ್ಟಿ ನೀನ್ ಈ ಸುತ್ತಲು ದೇಶಕ್ಕೆಲ್ಲ ಬಳೆ ತಗೊಂಡು ಹೋಗ್ತೀಯ ಮನೆಮನೆಗೆಲ್ಲ. ನನ್ನ ಹೆಂಡತಿ ನೀನ್ ನೋಡಿದ್ದೀಯ ಮುಂಚೇನೆ. ಎಲ್ಲಾದ್ರೂ ನನ್ ಹೆಂಡ್ತಿ ಇದ್ರೆ ವಸಿ ಪತ್ತೆಮಾಡ್ಕೊಂಡು ಬಾರಯ್ಯ" ಅಂತ ಆ ಬಳೆಶೆಟ್ಟಿಗ್ಹೇಳಿದ. "ಆಯ್ತಯ್ಯ, ನಿನ್ ಹೆಂಡ್ತೀನ ಪತ್ತೆಮಾಡ್ಕೊಂಡ್ ಬಂದರೆ ನನಗೆ ಏನಯ್ಯಾ ಕೊಡ್ತೀಯ ನೀನು ?" 'ಅಯ್ಯಾ ನೀನೇನಾದರೂ ಕೇಳು, ನಾನ್ ನಿನಗೆ ಕೊಡ್ತೀನಿ. ಆದ್ರೆ ನನ್ ಹೆಂಡ್ತೀನ ನೀನ್ ಪತ್ತೆಮಾಡ್ಕೊಂಡು ಬಾರಯ್ಯ" ಅಂತ ಹೇಳಿ ಆ ಬಳೆಶೆಟ್ಟಿಯನ್ನು ಕಳಿಸಿಕೊಟ್ಟ.

ಆಗ ಆ ಬಳೆಶೆಟ್ಟಿ ಹೊಸಳ್ಳಿ, ಚುಂಚನಕಪ್ಪೆ ಊರನಾಗೆ ಸಾರಿಕೊಂಡು ಹೋಗ್ತಾ ಇರ್ತಾನೆ. ಹೋಗ್ತಾ ಇರಬೇಕಾದ್ರೆ, ಈ ಬಳೆಗಳೆಲ್ಲ ತೊಡಿಸ್ಬಿಟ್ಟು, ಲಾಸ್ಟ್‌ಗೆ ಈ ಕಲ್ಯಾಣಿ ಏರಿಮ್ಯಾಗೆ 'ಬಳೆ ಬಳೆ' ಅಂದ್ಕೊಂಡು ಸಾರ್ಕೊಂಡು ಹೋಗ್ತಾ ಇರ್ತಾನೆ. 'ಬಳೆ ಬಳೆ' ಅಂದ್ಕೊಂಡು ಹೋಗ್ತಾ ಇರಬೇಕಾದ್ರೆ ಈ ನಾಗರ್ಹಾವು ಹೆಂಡ್ತೀಗೆ ಈ ಬಳೆಸಬ್ದ ಕೇಳಿಸಿಬಿಡುತ್ತೆ. "ಅಯ್ಯೋ ಪರಮಾತ್ಮ ನಮ್ಮಕ್ಕನ ಹೆರಿಗೆ ಆಗಿ ಮೂರು ತಿಂಗಳಾಯ್ತು. ಸೂತಕದ ಬಳೇ ತೆಗಿಸಿಲ್ಲವಲ್ಲ? ಬಳೆಶೆಟ್ಟಿ ಬಾರಯ್ಯ ಇಲ್ಲಿ. ಏನಾದ್ರೂ ಬಾಣಂತಿ ಬಳೆ ಇದ್ರೆ ತಾರಪ್ಪ ಬಳೆ ತೊಡಿಸ್ಬಿಟ್ಟು ಹೋಗು" ಅಂತ ಆ ನಾಗರಾಜ ಬಳೆಶೆಟ್ಟೀನ ಕೂಗ್ತಾ ಇದ್ದಾನೆ. ಈ ಬಳೆಶೆಟ್ಟಿ "ಅಯ್ಯೋ, ಪರಮಾತ್ಮ; ಈ ಕಲ್ಯಾಣಿ ತುಂಬಿದೆ. ಕಲ್ಯಾಣಿ ಒಳಗ್ಹಾಸಿ ನಾನು ಹೆಂಗಯ್ಯಾ ಬರುವುದು ? ಸಾಧ್ಯವಿಲ್ಲಯ್ಯ. ಈಚೆ ಕಡೇಕೆ ಕರ್ಕೊಂಡು ಬಂದ್ರೆ ನಾನು ಬಳೆಗಳ ತೊಡಿಸ್ತೀನಯ್ಯ. ಒಳಗಡೆ ನನಗೆ ಹೋಗಾಕೆ ಸಾಧ್ಯವಿಲ್ಲಯ್ಯ" ಅಂತ ಬಳೆಶೆಟ್ಟಿ ಹೇಳ್ತಾ ಇದ್ದಾನೆ. "ಅಯ್ಯಾ, ಈ ಕಲ್ಯಾಣಿ ಒಳಗೆ ನಿಂತ್ಕೊಂಡು ತಾಯಿತಂದೆಗೆ ಹುಟ್ಟಿದ್ರೆ ಈ ನೀರು ಎರಡು ಭಾಗವಾಗ್ಲಿ ಅಂತ ಶಾಪ ಇಟ್ಬಿಟ್ಟು ಒಳಗಡೆ ಬಾರಯ್ಯ ಬಳೆಶೆಟ್ಟಿ" ಅಂತ ನಾಗರಾಜ ಕರೀತಾ ಇರ್ತಾನೆ. ಆಗ ಈ ಬಳೆಶೆಟ್ಟಿ "ಅಯ್ಯಾ ಪರಮಾತ್ಮ ತಾಯಿತಂದೆಗೆ ನಾನು ಹುಟ್ಟಿದ್ರೆ ಈ ಕಲ್ಯಾಣಿ ನೀರು ಎರಡು ಭಾಗವಾಗ್ಲಿ" ಅಂತ ಕೈ ಮುಗ್ದುಬಿಟ್ಟು ಒಳಗಡೆ ಇಳೀತಾನೆ ಬಳೆಶೆಟ್ಟಿ. ನೀರು ಎರಡು ಭಾಗವಾಗಿ ನಾಗರಾಜನ ಮನೆಹತ್ರಕ್ಕೆ ಹೋದಾಗ, ಬಾಣಂತಿ ಸುತ್ತಾನೂ ಈ ಏಳುಕೆರೆ ಕಟ್ಸಿ, ಆ ಏಳುಕೆರೆಯಿಂದೀಚೆ ಕಡೀಕೆ ಬಾಣಂತಿ ಕೈ ಕೊಡ್ತಾಳೆ, ಬಳೆ ತೊಡಿಸೋಕೆ. ಅವ್ನು ಬಳೆಶೆಟ್ಟಿ ಆಗ ಬಳೆ ಇದ್ದಾವೆ, ಇದ್ರೂನು ನಾನು ಆ ಏಡಿಕುಮಾರನ್ನ ಕರ್ಕೊಂಡ್ ಬರಬೇಕಲ್ಲ ಇಲ್ಲಿಗೆ ಅಂತ ಒಂದು ಐಡಿಯಾ ಮಾಡ್ಕಂಡು, "ಅಮ್ಮಾ ನಿನ್ನ ಈಡ್ ನಾನ್ ತಂದಿಲ್ಲಮ್ಮ. ಮುಗಿದ್ಹೋಗ್ಬಿಟ್ಟಿದೆ. ನಾಳೆ ನಾನ್ ಈಡ್ ತಗೊಂಡ್ಬರ್ತೀನಮ್ಮ. ಈಗ

ತೊಡಿಸಕ್ಕಾಗಲ್ಲ'' ಅಂತ ಹೇಳ್ತಾ ಇದ್ದಾನೆ ಬಳೆಶೆಟ್ಟಿ. ನಾಗರಾಜ ಏನು ಹೇಳುತ್ತಾನೆ? ಅಪ್ಪಾ ನಾಳೆ ನೀನು ಬಳೆ ತೊಗೊಂಡ್‌ಬಾ. ಮುಂಚೆ ಬಂದು ನಮ್ಮಕ್ಕಯ್ಯಂಗೆ ಬಳೆ ತೊಡಿಸಿಬಿಟ್ಟು ನೀನು ಇನ್ನ ಮುಂದಕ್ಕೋಗಯ್ಯ ಅಂತ ಹೇಳಿ ನಾಗರಾಜ ಆಚೆ ಕಡೀಕೆ ಬಳೆಶೆಟ್ಟೀನ ಕಳಿಸಿಕೊಟ್ಟಿದ್ದಾನೆ.

ಕಳಿಸಿಕೊಟ್ಟಿದ್ರೆ ಬಳೆಶೆಟ್ಟಿ ಓಡಿ ಓಡಿ ಬರ್‍ತಾ ಇದ್ದಾನೆ, ಏಡಿಕುಮಾರ ಮನೆಹತ್ರಕ್ಕೆ. ಏಡಿಕುಮಾರ ಮಂಚದ ಮೇಲೆ ಮಕ್ಕಡೆ ಚಿಂತೆಮಾಡ್ಕೊಂಡ್ ಮಲಿಗಿರ್‍ತಾನೆ. ''ಅಯ್ಯಾ ಏಡ್‌ಕುಮಾರ, ಏನಯ್ಯ, ಯಾವದೇಶ ಸುತ್ತಿದ್ರೂ ನಿನ್ ಹೆಂಡ್ತಿ ಸಿಗಲಿಲ್ಲಯ್ಯ. ನಾನು ತಿರುಗಿ ತಿರುಗಿ ಸಾಕಾಯ್ತು ಕಣಯ್ಯಾ. ನಿನ್ ಹೆಂಡ್ತೀನೆ ನನಗೆ ಎಲ್ಲೂ ಸಿಗಲಿಲ್ಲಯ್ಯ. ಈಗ ಎಲ್ಲಾದ್ರೂವೆ ಹೋಗಿ ನೀನ್ ಬಳೆ ತಗೊಳ್ಳಯ್ಯ, ನಾನು ತಗೊಳ್ತೀನಿ, ಇಬ್ಬರೂನು ಹೋಗಾನ ನಡಿಯಯ್ಯಾ, ಅನ್ನೋದೊಂದು ಉಪಾಯ ಹೇಳ್ಕೊಂಡು ಏಡಿಕುಮಾರನೂ ಬಳೆ ತಗುದ್ಕೊಂಡು, ಇವನೂ ಬಳೆ ತೆಗೆದುಕೊಂಡು ಹೊರಟ್ರು. ಬಳೆಶೆಟ್ಟಿ, ಈ ಕಲ್ಯಾಣಿ ಏರಿಮ್ಯಾಲೆ ಹೋಗಿ 'ಬಳೆ ಬಳೆ' ಅಂತ ಸಾರ್‍ತಾ ಇರ್‍ತಾನೆ. ಸಾರ್‍ತಾ ಇರಬೇಕಾದ್ರೆ. 'ಅಯ್ಯಾ ಬಾರಯ್ಯ ಬಳೆಶೆಟ್ಟಿ, ಬಾರಯ್ಯ ಬಾಣಂತಿಗೆ ಬಳೆತೊಡ್ಸು' ಅಂತ ಕೂಗ್ತಾ ಇದಾರೆ. ಇಬ್ಬರೂನೂ ಹೋಗ್ತಾರೆ. ಹೋದರೆ ''ಅಯ್ಯಾ ಬಳೆಶೆಟ್ಟಿ ನಿನ್ನೆ ನೀನೊಬ್ನೆ ಬಂದಿದ್ದೆ. ಇವತ್ತು ನಿನ್ ಜೊತೆಗೆ ಒಬ್ಬರನ್ನು ಕರ್‍ಕೊಂಡು ಬಂದಿದ್ದೀಯಲ್ಲ ಏನಯ್ಯ ಇದು?'' ''ಅಯ್ಯ ನಮ್ ಸಂಗದೋರಯ್ಯ, ನಾವಿಬ್ರೂನೂ ಎಲ್ಲೋದ್ರು ಜೊತೇನಯ್ಯ. ನೆನ್ನೆ ಏನೋ ಹುಷಾರಿಲ್ಲ ಅಂತ ಬಂದಿರ್‍ಲಿಲ್ಲ. ಇವತ್ತು ಕರ್‍ಕೊಂಡು ಬಂದಿದೀನಪ್ಪ'' ಅಂತ ಹೇಳ್ತಾ ಇದ್ದಾನೆ, ಬಳೆಶೆಟ್ಟಿ. ಅದೇ ಟೈಂಗೆ ಈ ಮಗು ಅಳ್ತಾ ಇದೆ ತೊಟ್ಟಿಲ್‌ನಲ್ಲಿರೋದು. ತೊಟ್ಟಿಲ್ ಮಗು ಅಳಬೇಕಾದ್ರೆ, ಆಯಮ್ಮ ಏನ್ ಹಾಡು ಹೇಳ್ಕೊಂಡು ಮಗಾ ತೂಗ್ತಾ ಇದ್ದಾಳಂದ್ರೆ '' ಅಯ್ಯಾ ದೊರೆ ಮೊಮ್ಮಗನೆ, ಏಡಿಕುಮಾರನ ಮಗನೇ, ನಾಗರಾಜನ ಭಾವಮೈದನ, ನೀನು ಮಲಿಕ್ಕಳ್ಳಯ್ಯ'' ಅಂತ ಹಾಡೇಳ್ಕೊಂಡು ತೊಟ್ಟಿಲು ತೂಗ್ತಾ ಇದ್ದಾಳೆ.

ತೊಟ್ಟಿಲ್ ತೂಗ್ತಾ ಇರಬೇಕಾದ್ರೆ. ಈಯಮ್ಮ ಹಾಡೋ ಹಾಡು ಈ ಏಡಿಕುಮಾರನಿಗೆ ಕೇಳಿಸಿ ಬಿಡ್ತು. ''ಅಯ್ಯಾ ಪರಮಾತ್ಮ, ಇವ್ಳೇ ನನ್ ಹೆಂಡ್ತಿ. ಇನ್ನೆಲ್ಲೂ ಇಲ್ಲ. ನಾನೇ ಏಡಿಕುಮಾರ, ದೊರೆ ಮಗ. ನಾಗರಾಜನ ಭಾವಮೈದನ ಅಂದ್ರೆ ಈಯಪ್ಪ ಸಾಕ್ಕೊಂಡಿರೋದ್ಕೆ ಈ ರೀತಿ ಹೇಳ್ತಾ ಇರೋದು. ಇಲ್ಲೇ ನನ್ ಹೆಂಡ್ತಿ ಇರೋದು. ಈ ಜಾಗಬಿಟ್ಟು ನಾನ್ ಎಲ್ಲೂ ಹೋಗಾಕೆ ಸಾಧ್ಯವಿಲ್ಲ'' ಅಂತ ಕುಳ್ತಿದ್ದಾಗ ಅದೇ ಮತ್ತೆ ಏಳ್‌ಕೆರೆ ಬಿಟ್ಟು ಏಳುಕೆರೆಯಿಂದೀಚೆಗೆ ಕೈ ಕೊಟ್ಟಿದ್ದಾಳೆ ಬಾಣ್ತಿ. ಕೊಟ್ಟಿರಬೇಕಾದ್ರೆ, ಈಯಪ್ಪನ್ನೆ ಕುಂಡ್ರಿಸಿದ್ದಾನೆ ಬಳೆಶೆಟ್ಟಿ, ಗಂಡನ್ನ. ಗಂಡನೇ ಬಳೆ ತೊಡಿಸ್ತಾ ಇದ್ದಾನೆ. ಬಳೆ ತೊಡ್ಸಿ ಆದ ಮೇಲೆ ಏಳ್‌ಕೆರೆಯಿಂದೀಚೆ ಕಡೀಕೆ ಅವ್ಳ ಕೊರಳೊಳಗೆ ಇರೋ ಮಾಂಗಲ್ಯ ಈ ವೇಳೆಗೆ ಪ್ರಕಾಶಮಾನವಾಗಿ ಹೊಳೀತಾ ಇದೆ. ಹೊಳೀತಾ ಇರಬೇಕಾದ್ರೆ ದುಃಖ ಮಾಡ್ತಾ ಇರ್‍ತಾನೆ.

ದುಃಖ ಮಾಡ್ಕೊಂಡ್ ಬಳೆ ತೊಡಿಸಬೇಕಾದ್ರೆ, ಈ ನಾಗರಾಜ ಎರಡೂವೆ ನಿಂತಿದ್ದರಲ್ಲ, "ಅಯ್ಯಾ ಬಳೆಶೆಟ್ಟಿ, ಏನಿದ್ರೂ ಹೇಳಯ್ಯ ನಮ್ ಹತ್ರ, ನಾವ್ ನಿವಾರಣೆ ಮಾಡ್ತೀವಿ" ಅಂತ ಕೇಳ್ತಾ ಇದಾರೆ. "ಅಯ್ಯೋ ಏನೂ ಇಲ್ರಪ್ಪ. ಈಯಮ್ಮ ನನ್ ಹೆಂಡ್ತಿ. ಇವಳ್ ಬಲತಾಯಿ ನನಗೆ ಮೋಸಮಾಡ್ಬಿಟ್ಳು. ಆದರೆ ಇಲ್ಲಿ ಬಂದ್ ಯಾವ ರೀತಿ ಸೇರಿದ್ಳು ಅಂತ ನನಗೊಂದು ವಿಚಾರಣೆ ಕೊಡಬೇಕಪ್ಪ" ಅಂತ ಕೇಳ್ದಾಗ, "ಅಯ್ಯಾ ಅದಕ್ಕೆ ನೀನ್ ಯಾಕೆ ಚಿಂತೆಮಾಡ್ತೀಯ,? ನಿನ್ ಹೆಂಡ್ತಿನ ನಿನ್ ಮನೆಗೆ ಕರ್ಕೊಂಡು ಹೋಗಿ ನೀನ್ ವಿಚಾರಣೆ ಮಾಡಿಕೊಳ್ಳಿವಂತೆ. ಈಗಾದ್ರೆ ನಮ್ಮ ತಂಗಿ ಕಣಯ್ಯ ಅವ್ಳು. ಇಲ್ಲೀವಗರ್ೂನೂ ಸಾಕಿದೀವಿ. ಮೂರು ತಿಂಗಳು ಬಾಣಂತನ ಮಾಡಿದೀವಿ. ಆದ್ರೆ ನಿಮ್ಮ ಮಗು ತಗೊಂಡೋಗಿ ನಾಮಕರಣ ಮಾಡಿ ಮತ್ತೆ ನೀವ್ ಬದಿಕೋ ಹೋಗ್ರಪ್ಪ, ಮತ್ತೆ ನಾವ್ ಯಾವದೂ ಇದನ್ನ ವಿಚಾರಣೆ ಮಾಡಲ್ಲಯ್ಯ" ಅಂತ ಹೇಳಿಬಿಟ್ಟು ಆಯಮ್ಮಂಗೆ ಏಳ್ ದೇವಗನ್ನೇರಿಗೆ ಕರ್ಸಿ ಬೇಕ್‌ಬೇಕಾದಂಥ ಅಡಿಗೆ ಊಟ ಮಾಡ್ಸಿ, ಬಟ್ಟೆ ತಂದುಡ್ಸಿ, ಮಗೀಗೆ ಏನೇನೊ ತಂದಿಟ್ಟು ಆಯಪ್ಪನ್ ಜೊತೆ ಕಳಿಸಿಕೊಡ್ತಾರೆ.

ಕಳಿಸಿಕೊಟ್ರೆ ಆಯಪ್ಪ ಮಗ ಹೆಂಡ್ತಿ ಕರ್ಕೊಂಡು ಮನೆಗೆ ಬರ್ತಾನೆ. ಮನೆಗೆ ಬಂದಾಗ ಅತ್ತೆ ಮಾವನ ಎರಡ್ ಕಣ್ಣು ಕಾಣಿಸದಂಗೆ ಆಗಿರ್ತಾವೆ. ಅವರಿಬ್ರುಗೂನೂ ಕಾಣದಂಗಾಗಿದ್ದಾಗ, ಸೊಸೆ ಮನೆಗೆ ಹೋಗಿದ್ದಕ್ಕೆ ಎಲ್ಲಾರಿಗೂ ಕಣ್ ಬರ್ತವೆ. ಕಣ್ ಬಂದಾಗ ಅಪ್ಪ ನಮ್ ಸೊಸೆ ಕರ್ಕೊಂಡ್ ಬಂದ್ ಬಿಟ್ಟೇನಪ್ಪ. ಇವಳು ಯಾರೋ ನಾವ್ ಪರೀಕ್ಷೆ ಮಾಡಬೇಕ್ಕಣಪ್ಪ ಅಂತ ಹೇಳಿ, ಅಯಮ್ಮನಿಗೆ "ಅಮ್ಮಾ ನೀನು ಹೋಗಬೇಕಾದ್ರೆ ನಿನ್ ಗಂಡನಿಗೆ ಏನಮ್ಮಾ ಕೊಟ್ಟು ಹೋಗಿದ್ದೆ ಗುರುತು?" ಅಂದಾಗ, ನಾನ್ ಬಾಣಂತನಕ್ಕೆ ಹೋಗಬೇಕಾದ್ರೆ ನನ್ ಯಜಮಾನ್ರಿಗೆ "ಮುದ್ರೆಉಂಗುರ" ಕೊಟ್ಟು ಹೋಗಿದ್ದೆ ಅತ್ತೆ. ಅದು ಸರಿ. ನನಗೇನಮ್ಮ ನೀನ್ ಕೊಟ್ಟುಹೋಗಿದ್ದೆ ಗುರ್ತು ? ಅತ್ತೆ, ನಿಮಗೆ ಒಂದ್ ಬಾಚಣಿಗೆ, ಸೀರಣಿಗೆ ಗುರ್ತು ಕೊಟ್ಟೋಗಿದ್ದೆ ಅತ್ತೆ. ಇನ್ನೇನಿಲ್ಲ. ಆಯ್ತಮ್ಮ. ನೀನ್ ನಮ್ ಸೊಸೆ ಹೊರತು ಬೇರೆಯವಳೇನಲ್ಲ ಅಂತ ಹೇಳಿಬಿಟ್ಟು, ಈಯಮ್ಮ ಇರ್ತಾಳಲ್ಲ ಸುಳ್ ಹೇಳ್ಕೊಂಡು ಬಂದವ್ಳು, ಅವ್ಳನ ಸಿಗದು ಊರ್ ಮುಂದಕ್ಕೆ ತೋರಣ ಕಟ್ಸಿ, ಮತ್ತೆ ಈ ಹುಟ್ಟಿದ ಮಗೀಗೆ ನಾಮಕರಣ ಮಾಡಿ ಅಚ್ಚುಕಟ್ಟಾಗಿ ಬಾಳ್‌ಕೊಂಡು ಹೋಗ್ತಾ ಇದ್ದಾರಪ್ಪ.

ಹೇಳಿದವರು : **ಲಕ್ಷಮ್ಮ,** ಸಂಪಿಗೆ ಹೊಸಳ್ಳಿ, ತುರುವೇಕೆರೆ ತಾಲ್ಲೂಕು.

# ೩. ಬಡ ಹುಡುಗಿಯ ಕಥೆ

ಒಂದು ಪಟ್ಣದಾಗೆ ಒಬ್ಬ ದೊರೆಯಂತೆ. ದೊರೀಗೆ ಯೋಳ್ಜನ ಹೆಂಡ್ತಿದೀರು. ಇವ್ರ ಯೋಳ್ ಜನಕ್ಕು ಮಕ್ಳಿಲ್ಲ. ಮಕ್ಳಿಲ್ಲದ್ದೊರೆ ಒಂದ್ ಪಟ್ಣಕ್ ಹೋಗ್ಬೇಕು ರೊಟ್ಟಿ ಬುತ್ತಿ ಕಟ್ರಿ ಅಂತ ಹೇಳ್ದ. ಇವ್ರೇನ್ಮಾಡಿದ್ರು? ರೊಟ್ಟಿ ಬುತ್ತಿ ಕಟ್ಟಿಕೊಟ್ರು. ಅವ್ನು ಕುದ್ರೆಮ್ಯಾಗೆ ಹತ್ಕಂದುದ್ದೆ ಹೋಗಿಬಿಟ್ಟ ಆ ಪಟ್ಣಕ್ಕೆ.

ಅವಾಗ ಆ ಪಟ್ಣದಾಗೆ ಹುಡುಗ್ರೆಲ್ಲಾವ ಚಂಡು ಬುಗರಿ ಗೋಲಿ ಎಲ್ಲ ಆಡ್ತಿದ್ರು. ಒಂದು ಬಡವ್ರ ಮನೆ ಮುಂದೆ ಒಬ್ಬ ಹುಡುಗಿ ಒಂದಾಳ ಗಾತ್ರ ಹೊಟ್ಟೆ ಬಿಟ್ಕಂದು ಗೊಣ್ಣೆ ಸುರಿಸ್ಕೆಂದು ನಿಂತಿತ್ತು, ಒಂದ್ ಕಂಬ ಒರಿಕ್ಕಂಡು. ಈ ಹುಡುಗ್ರುನೆಲ್ಲ ಬಿಟ್‌ಬಿಟ್ಟ. ಗೊಣ್ಣೆ ಸುರುಸ್ಕೊಂದ್ ಇತ್ತಲ್ಲ ಹೊಟ್ಟೆ ಬಿಟ್ಕಂದು ಅದುನ್ ನೋಡ್ದೋನೆ ಕೆಳಾಕಿಳ್ದು ಆ ಹುಡ್ಗಿ ಹತ್ರಹೋಗಿ ಇಗಾ ಹಿಂಗೆ ಚುಟುಕೆ ಹಾಕ್ದ ಹೊಟ್ಟೆಮ್ಯಾಲೆ. "ಯೋಯ್ ಇಪ್ಪತ್ತೈದು ಮಕ್ಳು ಸಾಯ್ಲಿ ನೋಡು. ನಮ್ಮಪ್ಪ ನಮ್ಮವ್ವನ ಕೂಟೆ ಹೇಳಿಬಿಡ್ತೀನಿ" ಅಂತು. "ಮತ್ತೆ ನಿಮ್ಮನೆ ಎಲ್ಲೈತೆ ತೋರುಸ್ನಡಿ" ಅಂದ. ಆಮ್ಯಾಲೆ ಮನಿಗೆ ಕರಕಂಡ್ ಹೋಯ್ತು.

ಒಂದ್ ಸ್ವಾಗೆ ಗುಡುಸ್ಲು. ಒಂದು ಮೂಲೇಲಿ ತಂದೆ ಮಲಗಿದ್ದ. ಒಂದ್ ಮೂಲೇಲಿ ತಾಯಿ ಮಲಗಿದ್ಲು. ಇವ್ನು ಹೋಗಿ ಕೇಳ್ದ :

"ಮತ್ತೆ ಈ ಹುಡ್ಗಿ ಕೊಡ್ತೀರಾ?" "ಅಯ್ಯೋ ಯಪ್ಪಾ ನಮಿಗೆ ಬಿಸ್ನೀರ್ ಕಾಸಿ ಕೊಡೋರಿಲ್ಲ, ಸೌದೆ ತರೋರಿಲ್ಲ. ಅಡ್ಗೆ ಊಟ ಮಾಡಿ ಇಕ್ಕೋರಿಲ್ಲ. ನಾವ್ ಕೊಡೋದಿಲ್ಲ ಕಣಪ್ಪಾ, ನಾವ್ ಕೊಡೋದಿಲ್ಲ, ಒಂದೇ ಮಗ" ಅಂದ್ರು.

"ಇರ್ಲಿ. ಏನಾರ ಆಗ್ಲಿ ಈ ಮಗ ಕೊಟ್ಟೇ ಕೊಡ್ಬೇಕು" ಅಂದ.

"ಹೂಹುಂ ಆಗದುಲ್ಲ" ಅಂತಂದ್ರು.

"ಏನ್ ಕೊಡ್ಬೇಕು ?" ಅಂದ.

"ಹಂಗಾರೆ ಅಳಿದೆಲೆ ಒಂದ್ ಸೇರು ಹೊನ್‌ಕೊಡ್ಬೇಕು. ಅಳ್ದು ಒಂದ್ ಸೇರು ಹೊನ್ ಕೊಡ್ಬೇಕು".

ಹುಂ ತಗ ಅಂದುದ್ದೇಯ, ಕೊಟ್ಬುದ್ದೇಯ, ಆ ಹುಡ್ಗಿ ಕುದ್ರೆ ಮ್ಯಾಲೆ ಕುಂದರ್ಸೆಗೆಂದುದ್ದೇಯ, ಒಂದ್ ಪಟ್ಣಕ್ ಬಂದ್ಬುಟ್ಟ. ಅಲ್ಲಿ ಒಂದ್ ಪಟ್ಣದಾಗೆ ಒಬ್ ಅಜ್ಜಿ ತಾಕೆ ಹೋದ. ಆ ಅಜ್ಜಿ ಮನಿಗೋಗಿ "ಅಜ್ಜಿ ಅಜ್ಜಿ ಏನಾರ ಆಗ್ಲಿ ಈ ಹುಡ್ಗೀಯ ಸಾಕಿಕೊಟ್ರೆ

ನಿಂಗೆ ನನ್ನ ರಾಜ್ಯದಾಗೆ ಅರ್ಧರಾಜ್ಯ ಕೊಡ್ತೇನಿ'' ಅಂದ ದೊರೆ. ''ಅಪ್ಪಾ ಆಗೋದಿಲ್ಲ, ಮತ್ತೆ ಮಾಡೋರಿಲ್ಲ, ಮಟ್ಟೋರಿಲ್ಲ, ಕಿವಿಕೇಳಾಕಿಲ್ಲ. ಕಣ್‌ಕಾಣಾಕಿಲ್ಲ. ನಾನೇನ್ಮಾಡ್ಲಪ್ಪ? ಅದ್ಕೆ ಆರೈಕೆ ಮಾಡಾಕೆ ಆಗತದೇನಪ್ಪಾ ನನ್‌ಕೈಲಿ'' ಅಂದ್ಲು. ''ಏನಾರ ಆಗ್ಲಿ ಹೋಗ್ಲಿ ಒಂದ್ ಆಳ್ನು ತಂದ್ ಕೊಡ್ತೇನಿ ನಿನಿಗೆ. ಆಕೇನ್ ಸಾಕಾಕೆ ಏನೇನ್ ಬೇಕೊ ತಂದ್ ಕೊಡ್ತೇನೆ ಪಾಡಾಗೆ ಮಾಡ್ಬೇಕು'' ಅಂದ. ''ಹುಂ ಆಗ್ಲಿ ಹೋಗಪ್ಪ'' ಅಂದ್ಲು ಆಯಮ್ಮ. ನಾಳೀಕ್ ಬಾ ಅಂದ್ರೆ, ಇವತ್ತೇ ಬಂದು ಆಕೆಗೆ ನೀಡಿದ್ಲು ನೀವಿದ್ಲು ಬೇಕಾದಂಗೆ ಮಾಡಿದ್ಲು. ಅದು ಚಿಕ್ಕೆ ಆದಂಗ್ ಆಗಿಬಿಡ್ತು. ಹನ್ನೆಲ್ಡ್ ವರ್ಷದ ಹುಡಿಗ್ಯಾದ್ಲು. ಋತುಮತಿಯಾಯ್ತು, ಅದುಕೆ ಆರೈಕೆ ಮಾಡಿದ್ರು. ಮತ್ತೆ ರಾಜನ್ ಕೂಟೆ ಮದುವೆ ಮಾಡಿದ್ರು. ಎಲ್ಲ ಸುಖ ಆಗೋಯ್ತು. ಇನ್ನು ಬಸುರಿ ಆದ್ಳಲ್ಲ?. ಆಗಾಕುಲ್ಲ ಮಾಡಿಹಾಕದು ಆಗಾಕುಲ್ಲ, ನಿನ್ ಯೋಳ್ಜನ ಹೆಂಡ್ತೀರೆದುರು ನಿಮ್ಮ ತಾಯಿ ಆದಾಳೆ ಅಂದೆಲ್ಲ ಅಲ್ಲಿಗೆ ಕರಕಂಡೋಗು ಅಂದ್ಲು ಅಜ್ಜಿ. ಅವ್ಳಗೇಳ್ದಂಗೆ ಅರ್ಧ ರಾಜ್ಯ ಕೊಟ್ಟ. ಬೇಕಾದ್ದೆಲ್ಲ ಕೊಟ್ಟ ಆ ಮುದ್ಕಿಗೆ. ಆಮ್ಯಾಲೆ ಬಂದ್ರು.

ಬಂದೋನು ಯೋಳ್ ಅಂತಸ್ತಿನ ಮ್ಯಾಲೋಗಿ ಮನಿಕ್ಕಂದ. ಯೋಳ್ ಜನಾನು ಬಂದ್ರು. ಅಯ್ಯೊ ಬಸುರಿ, ನಮಿಗೆ ಯೋಳ್‌ಜನಕ್ಕು ಮಕ್ಕಿಲ್ಲ. ಏನರ ಆಗ್ಲಿ ಸಾಕ್ಬೇಕು ಮಕ್ಕಿಲ್ಲಾಂತ ಆಸ್ಯಾಗಿದ್ದೀವಿ ಅಂತ ಯೋಳ್ ಜನಾನು ಪ್ರೇಮಾಗಿದ್ರು. ಇಂತ ಹೊತ್ನಾಗ ದೊರಿಗೇನೊ ಡ್ಯೂಟಿ ಬಂದ್ಬುಡ್ತು. ಡ್ಯೂಟಿಗೆ ಹೋಗಾಕೆ ಶುರುಮಾಡಿದ್ರು. ಹೋಗಾದು ಹೋಕೀರ ಇವತ್‌ರಾತ್ರಿ ಇದ್ದು ಅದೇನ್ ಹೇಳ್ತೀರ ಹೇಳಿ ಹೋಗ್ರಿಂತ ಆಯಮ್ಮ ಕೇಳಿದ್ಲು ಚಿಕ್ಕಂಡ್ತಿ. ಆಮ್ಯಾಲೆ ಏನ್ಮಾಡಿಬಿಟ್ರು? ಇವತ್ ರಾತ್ರಿಗೆ ಹೂವಿನವನಕ್ಕೆ ಹೋಗಾನ ನಿನಿಗೆ ಕಣ್ಣಿಗೆ ಬೇಕಾದ ಹೂವನ್ನು ನೀ ಕಿತ್ಕೆ. ನನಿಗೆ ಕಣ್ಣಿಗೆ ಬೇಕಾದ ಹೂವನ್ನು ನಾ ಕಿತ್ಕಂತೀನಿ. ಈ ಹೂವ್ನೆಲ್ಲ ನೀನು ಭರಣಿಗೆ ಹಕ್ಕಂದು ಮಡಿಕ್ಕೊ. ನಾನು ಭರಣಿಗೆ ಹಕ್ಕಂದು ಮಡಿಕ್ಕಂತೀನಿ. ನಾಳೆದಿನ ನಿಂತಾವಿರೋ ಹೂವೇನಾರ ಒಣಗಿ ಹೋಗಿ ಬಿಡ್ತಾ ನಾನು ಏನೋ ಆದಂಗೆ. ನಂತಾವಿರೋ ಹೂವೇನಾರ ಒಣಗಿ ಹೋಗಿ ಬಿಡ್ತಾ ನಾನು ಏನೋ ಆದಂಗೆ. ನಂತಾವಿರೋ ಹೂವೇನಾರ ಒಣಗಿ ಹೋಗಿ ಬಿಟ್ರೆ ನೀ ಏನಾರ ಆದಂಗೇಂತ ಲೆಕ್ಕ ಬಿಟ್ರೆ ನೀ ಏನಾರ ಆದಂಗೇಂತ ಲೆಕ್ಕ ಮಡಿಕ್ಕ. ಹೂಂ...... ಆಗಲಿ ಹೋಗ್ರಿ. ಇಕೇನ್ ಮಾಡಿದ್ಲು? ಇದುನ್ನ ಬಿಟ್‌ಕೊಡ್ಲಿಲ್ಲ ಒಬ್ರಿಗು, ಪಕ್ಕು ಕೊಡಿಲ್ಲಲ್ಲ. ಇವ್ನು ಮಡಿಕ್ಕಂದ. ಅವರವ್ರ ತಾವಿದ್ದುದ್ ಅವ್ರೆ ಮಡಿಕ್ಕಂಬುಟ್ರು. ಇವ್ರು ಹೊತಾರೆ ಎದ್ದುದ್ದೆ ಹೊಂಟೋಗಿ ಬಿಟ್ರು. ಹೋದ ಒಂದ್ ತಿಂಗಳಾಗೆ ಆ ದೊರೆತಾವಿದ್ದ ಹೂವು ಬತ್ತಿ ಒಣಗಿ ಹೋಗಿಬಿಟ್ಟುವು. ಓ ಏನೋ ಆಗಿ ಹೋಗಿಬಿಟ್ತು. ನನ್ನೆಂಡ್ರು ಭೂಮಿಮ್ಯಾಗೆ ಇಲ್ಲ. ಏನೋ ಮಾಡಿಬುಟ್ರು. ನನ್ನೆಂಡ್ರಿಗೆ ಏನೋ ಮಾಡಿಬಿಟ್ರು. ಅನ್ಕಂಡ.

ರಾಜರು ಹೋಗಿಬಿಟ್ರಲ್ಲ? ಕಳಸಿ ಸವತೇರು ಬಂದ್ರು. ಬಂದುದ್ದೆಯ ಯಾವಳೆ ಒಳಗೆ ಅಲ್ಲಿ ಮ್ಯಾಲಿರೋಳು? ಕೆಳಗಿಳೀಯೆ ಕೆಳೀಕೆ. ಮಾಡಿ ಮ್ಯಾಲೋಗಿ ಕೂತವಳಲ್ಲ.? ಇವಳಿಗೆ ಒಳ್ಳೊಳ್ಳೇದು, ಬೇಕ್‌ಬೇಕಾದ್ದು ಮಾಡಿ ಇಕ್ಕಕ್ಕೆ ಇವಳು ದೊರೆಸಾನಿ. ಆಳಲ್ವಾ ನಾವು?

ಇಳಿಯೆ ಕೆಳೀಕೆ. ಇಳ್ದು ಕುದ್ರೆ ಕೆಲ್ಸ, ದನಿನ ಕೆಲ್ಸ, ಅಂತ ಕೆಲ್ಸ, ಇಂತ ಕೆಲಸ, ಗುಡ್ಸಾದು ಅದು ಇದು ಅಂತೇಳಿದ್ರು. ಈ ಕಸರಾದ ಹುಳ್ಳಿಕಾಳು ತರದು ಮಾಡದು ಇಕ್ಕದು. ಆ ಕಸ ಈ ಕಸ ಗುಡ್ಸದು. ಅದು ಇದು ಶುರುಮಾಡಿದ್ಲು. ಶುರುಮಾಡತ್ಗೆ ಆಯಮ್ಮ ದಿನದ ಬಸುರಿ ಅಲ್ವಾ? ಅಕ್ಕ ನನ್‌ಕೈಲಿ ಆಗಾಕಿಲ್ಲ ಕಣಕ್ಕ. ನನಗಿಂಗಾತದೆ. ಮತ್ತೆ ನನ್ ಕೈಲಿ ಆಗಾಕಿಲ್ಲ ಅಂದ್ಲು.

ಆಮ್ಯಾಲೆ 'ನಿಮ್ಮ ಕಡೆ ಹೆರಿಗೆ ಮಾಡ್ಬಕೊ ನಮ್ಮ ಕಡೆ ಹೆರಿಗೆ ಮಾಡ್ಬಕೊ' ಅಂದರವ್ರು. ನಿಮ್ಮ ಕಡೆ ಇದ್ರೆ ನಿಮ್ಮ ಕಡೆ ಹೆರಿಗೆ ಮಾಡೋದು. ನಮ್ಮ ಕಡೆ ಇದ್ರೆ ನಮ್ಮ ಕಡೆ ಹೆರಿಗೆ ಮಾಡೋದು. ನಿಮಿಗೆ ಕಂಡಂಗ್ ಮಾಡ್ರಕ್ಕ. ಇವ್ರೇನು ಮಾಡಿದ್ರು? ಓಟ್ ಬಟ್ಟೆ ಸುತ್ಕಂಡ್ ಬುಟ್ರು. ಓಟ್ ಎಣ್ಣೆ ಸವ್ರಿಬಿಟ್ಬುರು. ಕಣ್ಣಿಗೆ ಕಟ್ಟಿಬಿಟ್ರು. ಹನ್ನೆಲ್ಡ್ ಕಾಲಿನ ಏಣಿ ಅಟ್ಟಕಾಕಿದ್ರು. ಹತ್ತದು ಇಳ್ಸದು, ಹತ್ತದು ಇಳ್ಸದು. ಹಿಂಗ್ ಮಾಡಿ ಬಿಟ್ರು. ಆಯಮ್ಮ ಏನ್ಮಾಡಿದ್ಲು? ಇಪ್ಪತ್ತೈದು ಮಕ್ಳುನ್ನ ಹೆತ್ ಬಿಟ್ಲು. ಒಂದೇ ಒಂದು ಹೆಣ್ ಮಗ ಮುಂಚೆ ಹುಟ್ಟಿದ್ದು. ಆಮ್ಯಾಲೆ ಇನ್ನಿದ್ದೋವೆಲ್ಲ ಗಂಡು ಹುಡುಗ್ರು. ಅವುನ್ ತಗಂಡೋಗಿ ಬಿಟ್ಬುದ್ದೆ ಯಕ್ಕಾ ಈ ಮಕ್ಳೆಲ್ಲ ಮನೆವಳಗೆ ಬ್ಯಾರೆ ಇದ್ರೆ ನಮ್ಮುನೇನಾರ ರಾಜ ಕಣ್ಣಿಂದ ನೋಡ್ಯಾರ ? ಅವರು ಬರೋವತ್ಗೆ ಇವರ್ನ ಏನಾರ ಮಾಡಿಬಿಟ್ಟು ತಿಪ್ಪ್ಯಾಗೆ ತುಳುದ್‌ಬಿಟ್ ಬಂಧ್ಬಿಡ್ಬೇಕು. ತಗಂದೋಗಿದ್ದೆಯ, ತಿಪ್ಪಿಗೆ ಹಾಕಿಬಿಟ್ಟಿದ್ದೆಯ, ತುಳ್ದ್ ಬುಟ್ಟುದ್ದೇಯ ಮನಿಗೆ ಬಂದ್ರು.

ಮನೇಲಿ ಇವ್ರೇನ್ಮಾಡಿದ್ರು? ಹಿಂಗೇ ಇದ್ರು. ಇನ್ನೇನಕ್ಕ ಭಯ.? ಇನ್ಯಾತಕ್ಕೆ ಮಕ್ಳುಮರಿ ಎಲ್ಲ ಹೊಂಟೋಗಿಬಿಟ್ರು. ಇನ್ಯಾತಕ್ಕೆ ಭಯ ಅಂತೇಳಿ ಇವ್ರು ಮುಗ್ಗುಲರಾಗಿ ಹಿಟ್ಟು ಹುಳ್ಳಿಕಾಳು ಇವಳಿಗೆ ಹಾಕಾಕ್ ಶುರುಮಾಡಿಬಿಟ್ರು. ಯಾರಿಗೆ ? ಸವ್ತಿಗೆ. ಹಿಂಗೇ ಇದ್ಲು. ಅಷ್ಟತ್ಗೆ ಏನ್ಮಾಡಿಬಿಟ್ರು? ಏ ನಡಿಯೇ ಅಸ್ಲ್ ಹೊಲ ಕೊಯ್ದ್‌ಬಿಟ್ ಬರಾನ. ಅಂತಾವ ಕರ್ಕಂದ್ ಹೊಂಟೋಗಿಬಿಟ್ರು. ಹರಿತಾಗಿರೋವಂತ ಕುಡ್ಲು ಇವ್ರ್ ತಗಂದ್ರು. ಮೊಂಡಾಗಿರೋವು, ಸತ್ತೋರ ಮೂಗು ಕೊಯ್ಯಾಂಗಿಲ್ಲ ಅಂತ ಕುಡ್ಲು ಕೊಟ್ರು ಇವಳಿಗೆ. ಅದ್ರಾಗೆ ಕೊಯ್ಯಾಕ್ ಹೋದ್ಲು, ಬೇರ್ ಬೇರೆ ಕಿತ್ಕೊಂಡ್ ಬರ್ತದೆ. ಒಂದ್ಸಾಲ್ ಕೊಯ್ದ್ ಮಡಗಿದ್ಲು. ಹಂಚಾಗಿಬಿಟ್ರು. ಇವಳು ಕೊಯ್ತಾಳ್ ನೋಡು ಅಷ್ಟ್ ಸಾಲು ಹಂಚಾಕಿ ಬಿಟ್ರು. ಇಗೋ ಈ ಸಾಲ್ ಕೊಯ್ದಾಕಿ ಬಂದ್ರೆ ನಿನಿಗೆ ಮುದ್ದೆ ಇಲ್ದಿದ್ರೆ ಮುದ್ದಿಲ್ಲ. ಮುದ್ದೆ ಕಾಣುಸ್ತೇವಿ ಕೊಯ್ದಾಕಿ ಬರ್ಬೇಕು ಅಷ್ಟತ್ಗೆ. ಹೂಂ ನಡೀರಿ ಅಂದ್ರು. ಸಂಜೆ ಆಗಿ ಕಲ್ಲು ನೀರು ಕರಗೋ ಹೊತ್ತು. ಮುಕ್ಕಾಲು ರಾತ್ರಿ ಆಯ್ತು. ಅಷ್ಟತ್ಗೆ ರಾಜರ ಹತ್ರಿದ್ದ ಹೂವ ವಣಗೆಹೋಯ್ತು. ಏನೋ ಆಗೋಯ್ತು ಅಂದುದ್ದೆಯ ಹಿಂದಿರಿಕ್ಕೊಂದು ಬಂದೇ ಬಿಟ್ರು. ಬಂದುದ್ದೆ ಏನಾಯ್ತೂಂದ್ರೆ, ಏನ್ ಬಡ್ಕಂತಾಳೆ ಅವ್ಳ ಹೊಲದ ತಾವ. ಆಕೆ ಗೋಳು ಶಿವನಗೋಳು ಆಗೋಯ್ತು. ಈ ಸಬ್ದ ಕೇಳಿಬಿಟ್ರು ದೊರೆ. ಏನೋ ಸಬ್ದ ಆಗ್ತಾ ಐತೆ. ನೋಡ್ಕಂಡೇ ಬರ್ಬೇಕು ಅಂತ ಹೋದ್ರು. ಬದಿನಾಗೆ ನಿಂತ್ಕಂಡು 'ಅವ್ವಾ ನೀನಾರು ? ದೆವ್ವ, ಪೀಡ್ಯಾ, ಪಿಚಾಚ್ಯ? ನೀನಾರು ಹೇಳ್ಬೇಕು ಅಂದ್ರು. ಅಪ್ಪಾ ನಾನು ದೆವ್ವ ಅಲ್ಲ, ಪೀಡ್ಯಾ ಅಲ್ಲ. ಪಿಶಾಚಿನು ಅಲ್ಲ. ನಾನಾದ್ರು ನರಮನ್ಸಿ. ನಂದು ಹಿಂಗೇಂತೆಲ್ಲ ಹೇಳಿದ್ಲು.

ಹೇಳಿದಾದಮ್ಯಾಲೆ ದೊರೆ ಬಂದು ಕರಕಂದ್ ಬಂದ. ಕರಕಂದ್ ಬಂದು ಮಾಡಿಮ್ಯಾಲೆ ಇರಿಸ್ಗಂದ. ಇವ್ರುನ್ನ ಕೇಳ್ಳುಲ್ಲ. ಅವ್ರುನ್ನ ಕೇಳ್ಳುಲ್ಲ. ಏನು ಮಾತು ಪಟ್ಯಾಯಿಸ್ಲಿಲ್ಲ. ಇವರು ಮುಂಚೆ ಮಾಡ್ತುದ್ರೊ ಹಂಗ್ ಮಾಡಾಕ್ ನಿಂತಕಂಡ್ರು.

ಅಲ್ಲಿಗೆ ಮೂರ್ತಿಂಗ್ಳಾಗೋಯ್ತು. ಇವ್ರೇನ್ಮಾಡಿಬಿಟ್ರು? ಕಸಹಾಕಾಕೆ ಅಂತ ಹೋಗಿ ನೋಡ್ತಾರೆ ಅಲ್ಲಿ ಪಿಳಿ ಪಿಳೀಂತಾವೆ ಆ ತಿಪ್ಪೆ ಒಳಗೆ. ದೊರೆ ಬಂದು ನೋಡಿಬಿಟ್ರೆ ತಿಪ್ಪೆ ಒಳಾಗೆ, ಸುಮ್ನೇ ಬಿಡ್ತಾನ? ಏನಾರ ಮಾಡಿ ಬೆಳಕು ಹರಿಯತ್ಗೆ ಬೆಂಕಿ ಇಕ್ಕೆ ಬಿಡ್ಬೇಕು ಅಂದು ಸೌದೆ ಸೊಪ್ಪು ತಂದುಹಾಕಿ ಬೆಂಕಿ ಇಕ್ಕೇಬಿಟ್ರು. ಬೆಂಕಿ ಇಕ್ಕಿದ್ರೆ ಅವೇನ್ಮಾಡಿಬಿಟ್ವು, ?ಅಂಗ್ ಅಂಗುಳಸ್ತಾನಕ್ಕೆ ಹೋಗಿ ಬಿಟ್ಟುವು . ಅಲ್ಲೋಗಿ ಬಿಟ್ಟುದ್ದೆಯ ಇವರು ಮುಖ ಕಂಡಾಗ ಈಚೆ ಕಡೀಕ್ ಬರೋವು. ಅವ್ರು ಹತ್ರುಕ್ ಬಂದಾಗ ಭಾವ್ಯಾಗೆ ಬಳುಬಳು ಬಿದ್‌ಬಿಡೋವು. ಯಕ್ಕಾ ನನ್ ಸವ್ತಿ ಮಕ್ಳು ಸಾಯ್ಲಿಲ್ಲ. ಇವು ಇಲ್ಲಿ ಬಂದ್ಬುಟ್ಟವೆ. ಇವನ್ ಏನಾರ ಮಾಡಿ ಬೆಳಕು ಹರಿಯೋತ್ಗೆ ಈ ಭಾವಿ ತುಂಬಿಸಿ ಬಿಡಾನ. ಹಂಗಂದದ್ದೆಯ ಆರು ಗಾಡಿ ಕಟ್ಟಿದ್ದೆಯ ಬೆಳಕರಿಯೋ ತನಕ ಹೇರಿ ತುಂಬಿಸಿಬಿಟ್ರು. ಇನ್ನೇನಕ್ಕ ಭಯ? ಸತ್ತೋಗಿಬಿಟ್ಟುವು. ಮಕ್ಳು, ಇಲ್ಲ ಇನ್ನ ಅಂದುದ್ದೆ ಬಂದ್ಬುಟ್ಟುರು.

ಈ ಭಾವಿ ತುಂಬಿಸಿ ಬಿಟ್ರಲ್ಲ! ಅವು ಕುಂಬಾರಣ್ಣನ ಮನಿಗೋಗಿದ್ದುವು. ಆ ಕುಂಬಾರಣ್ಣಗೆ ಮಕ್ಳಿದ್ದುಲ್ಲ. ಅವ್ನು ಚಂದಾಗೆ ಸೇರಿಸ್ಗಂಬುಟ್ಟ, ಮಕ್ಳಿಗೆಲ್ಲ ಏನೇನ್ ಬೇಕೊ, ಎಂತೆಂತಾದ್ ಆಗ್ಬಕೋ ಎಲ್ಲ ವಿಚಾರಿಸ್ಗಂದ ಚಂದಾಗಿ. ಆಮ್ಯಾಲೆ ಈ ಮುಂಡೇರು ಮಡಕೆಗೆ ಬಂದ್ರು. ಮಡಕೆ ತಗನಾಕೇಂತ. ಬಂದ್ರಲ್ಲ ನೋಡಿಬಿಟ್ರು. ಮುಸ್ಡಿ ತಿರುವ್ಗೋವಾಗ ಮೋರೆ ತಿರೊವೋವಾಗ ಇವ್ರ ಮುಖ ಕಂಡುದ್ದೆ ಅಷ್ಟು ಗಿಂಜಾಡವು ಆ ಹುಡುಗ್ರು. ಆಮ್ಯಾಲೆ ಏನ್ಮಾಡಿಬಿಟ್ರು? 'ಅಕ್ಕ ಇದ್ಯಾವೆ ಇವು? ಇವು ನಮ್ಮ ಮಕಗೋಳ ಕಂಡು ಇಷ್ಟು ಗಿಂಜಾಡ್ತಾವೆ. ದೊರೆ ಏನಾರ ಕಂಡ್ರೆ ನಮ್ಮ ಜೀವ ಬಿಟ್ಟಾನ ? ಮುಂಬಾಕಲಿಗೆ ನಮ್ಮ ತ್ವಾರಣ ಕಟ್ಟೋವರ್ಗು ಅಂದುದ್ದೆ ಮಡ್ಕೆ ತಗಂದು ಮಾತಾಡ್ಕೆಂದ್ರು. ಎಲ್ಲ ಮಕ್ಕಂದಿದ್ದ ಟೈಮ್ನಾಗ, ಆ ಹುಲ್ಲು ಗುಡುಸ್ಲಿಗೆ ಬೆಂಕಿ ಇಕ್ಕಿಬಿಡಾನ ಅಂದುದ್ದೆ, ಮಾತಾಡ್ಕಂಡಿದ್ದೆ,ಬೆಂಕಿ ಕಡ್ಡಿ ತಂದುದ್ದೆ, ಅರ್ಧ ಹೊತ್ನ್ಯಾಗೆ ಬೆಂಕಿಗೀರಿ ಹಚ್ಚೇಬಿಟ್ರು ಕುಂಬಾರ್ರ ಮನಿಗೆ. ಕುಂಬಾರ್ರ ಗಂಡ ಹೆಂಡ್ರು ಮನೆಮಠ ಎಲ್ಲ ಸುಟ್ಟೋಯ್ತು. ಈ ಹುಡುಗೇನ್ಮಾಡಿ ಬುಟ್ಟುವು? ಇವರ್ನ ಕರ್ಕಂದುದ್ದೆಯ ಹಿಪ್ಪೆತೋಪಿಗೆ ಹೊಂಟೋಗಿಬಿಟ್ಲು. ಹಿಪ್ಪೆ ತೋಪಿನಾಗೆ ಮೂರ್ ತಿಂಗ್ಳು ಹಿಂಗೇ ಏನೋ ಕಾಲಹಕ್ಕೆಂದ್ ಇದ್ರು.

ಅಲ್ಲಿಗೇನಾಯ್ತು? ಈ ಮುಂಡೇರು ಅಲ್ಲಿಗೆ ಸೌದಿಗೆ ಹೊಂಟೋಗಿಬಿಟ್ರು. ನೋಡಿಬಿಟ್ರು ಮಕ್ಳನ್ನ. ಏನ್ ಚಂಡು ಬುಗುರಿ ಗೋಲಿಯೆಲ್ಲ ಬೇಕಾದಂಗೆ ಆಡ್ತಾವೆ. ಇವ್ರ ಮುಖ ಕಂಡು ಮುಸುಡಿ ತಿರುವ್ಗೋವೆಲ್ಲ. ಮೋರಿ ತಿರುವ್ಗೋವೆಲ್ಲ. ''ಯಕ್ಕಾ ನನ್ ಸವತೇರ ಮಕ್ಳು ಇವ್ರು ಎಷ್ಟಮಾಡಿದ್ರು ಸಾಯಾಕಿಲ್ಲ. ಏನಾರ ಮಾಡಿಬಿಟ್ಟು ಬೆಳಕರಿಯೋ ಹೊತ್ತಿಗೆ

ಇವರ್ಗೆ ವಿಷಕೊಟ್ಟು ಸಾಯಿಗೊನ್ನಿಬಿಡ್ಬೇಕು''ಏನ್ಹೇಳ್ತೀರಾಂತ ಒಬ್ರಿಗೊಬ್ರು ಮಾತಾಡ್ಕಂಡ್ರು. ಆಮ್ಯಾಲೆ ಬಂದಿದ್ದೆಯ ರಾಮಲಕ್ಷ್ಮಣನ ಕಣಜ ಕೀಳ್ಸಿದ್ದೆಯ ಡಂಗೂರ ಬಾರ್ಸಿಬಿಟ್ರು. 'ಇಂತಾ ಹೊತ್ತಿಗೆ ಇಂತಾ ಊಟ. ಎಲ್ಲ ಬಂದ್ಬುಡ್ಬೇಕು' ಅಂತ ಸಾರ್ಸಿದ್ರು. ಇವ್ರೇನ್ ಮಾಡಿಬಿಟ್ರು? ಈ ಹುಡ್ಗ್ರನ್ನ ಎಲ್ಲಾರ್ಕಿಂತ ಮುಂಚೆ ಕರಿಯಾಕ್ ಹೋಗಿದ್ದು 'ಬಂದ್‌ಬುಡ್ರಲೆ ಊಟ ಮಾಡೊಂತ್ರಿ' ಅಂತ. 'ಯಕ್ಕ ಹೋಗಾನ' ಅಂದ್ವು. ''ಏ ವಿಷದ ಅಡ್ಗೆ ಮಾಡವ್ರೆ. ಬಂದೋರ್ನೆಲ್ಲ ಒಂದ್ಕಡೆ ಕುಂದ್ರುಸ್ತಾರೆ. ನಮ್ಮುನ್ನೆ ಒಂದ್ಕಡೆ ಕುಂದ್ರುಸ್ತಾರೆ. ಈಗ ಹೆಂಗ್ ಮಾಡ್ಬೇಕು? ನೀವು ಹೋಗಿ ಸಾಲು ಹಿಡ್ದು ಕುತಗಳಿ. ಊಟ ಇಕ್ಕತನಕ ಏನೂ ಮಾತಾಡಬ್ಯಾಡ್ರಿ. ಈ ಕುಂಬಾರ್ನ ಮನೆವಳಗಿತ್ತಲ್ಲ ನಾಯಿ ಅದ್ನ ಕರ್‌ಕಂದ್‌ಹೋಗ್ರಿ. ಅನ್ನನೀಡಿ ಆದಮ್ಯಾಲೆ ಎಲ್ಲಾರು ತಲಾಗೊಂದೊಂದ್ ಮಿದ್ಕೆ ಮಿದ್‌ಬಿಟ್ಟು ಆ ನಾಯಿಗೆ ಹಾಕಿಬಿಡ್ರಿ. ಆ ನಾಯಿ ಏನಾರ ಸತ್ತೋಯ್ತು ಅನ್ನ ತಿನ್ನಬ್ಯಾಡಿ. ಆ ನಾಯಿ ಸಾಯ್ದೆ ಇತ್ತೆ, ನೀವೆಲ್ಲ ಊಟ ಮಾಡಿಬಿಟ್ಟು ಸಂತೋಸ್ವಾಗಿ ಬಾ ಹೋಗಿ ಅಂತ ಹೇಳಿ ಕಳಿಸಿದ್ಲು ಅವರಕ್ಕ.

ಆವಾಗ ಏನ್ಮಾಡಿದ್ರು? ಈ ಹುಡುಗ್ರು ಬಂದ್ಬುಟ್ಟುವು. ಬಂದ್‌ಬುಟ್ಟುದ್ದೆ ಸಾಲಿಗೆ ಕುಂತ್ಕಂಡ್ವು. ಇವ್ಕೆ ಬ್ಯಾರೆ ಅಡ್ಗೆ ಮಾಡಿದ್ರು. ಬ್ಯಾರೇರ್ಗೆ ಬ್ಯಾರೆ ಅಡ್ಗೆ ಮಾಡಿದ್ರು. ಊಟುಕ್ ಕುಂತ್ಕಂಡ್ರು. ಊಟುಕ್ ಇಕ್ಕಿದ್ರು. ಇವರು ಮೊದ್ಲು ಊಟಮಾಡ್ಲಿಲ್ಲ. ಆ ನಾಯಿತ್ತಲ್ಲ ಅದುಕ್ಕೆ ಎಲ್ಲಾರು ಒಂದೊಂದ್ ಮಿದ್ಕ ಮಿದ್ ಹಾಕಿದ್ರು. ಹಾಕಿದಕೂಡ್ಲೆ ನಾಯಿ ಹಂಗೆ ನೆಗ್ದ್‌ಬಿದ್ದೋಯ್ತು. ಯಕ್ಕ ನಾ ಉಣ್ಣಲ್ಲಕಣೇಂತ ಎದ್ ಬಂದೇಬಿಟ್ವು. ಯಕ್ಕ ಇಷ್ಟೆಲ್ಲ ಖರ್ಚುಮಾಡಿದ್ರು ಸಾಯ್ಲಿಲ್ಲಲ್ಲ ಇವ್ರು, ಇನ್ನೇನ್ ಮಾಡಿದ್ರೆ ಸಾಯ್ತಾವೆ? ನಮ್ ಜೀವಕೆ ಸಂಚಕಾರ ತರ್ತಾವೋ ಏನೋ. ಇವರ್ದು ಸೈ ಅಷ್ಟುಕ್ ಮುಗ್ದೋಗಿ ಬಿಡ್ತು. ಮನೆವಳಗೆ ಇದ್ರು.

ಇನ್ನು ಹೊತಾರಿಕೆ ದೊರೆ ಎಲ್ಲೋ ಹೋಗಾಕ್ ಹೊರಟ್ರು. ಹೋಗವತ್ಗೆ ಅದೇ ತೋಪುನ ದಾರಿ. ಆ ತೋಪ್ನಾಗೆ ಹೋಗ್ಬೇಕು. ಆ ಹುಡುಗಿ ಅಲ್ಲೆ ಕುಂತಿತ್ತು. ಆಗ ಯಾರಮ್ಮ ನೀನು ? ಯಾವೂರು ? ಯಾವ ದೇಶ ? ಏನು ಎತ್ತಾಂತ ಕೇಳಿಬಿಟ್ರು ದೊರೆ. ಇವ್ರೇನ್ಮಾಡಿಬಿಟ್ರು? ಅಪ್ಪಾ ... ನಾವು ಯಾವ ಸೀಮಿಯೋರು ಅಲ್ಲ. ಯಾವ ದೇಶದೋರು ಅಲ್ಲ.... ಯಾ ಕಾಡೂ ಅಲ್ಲ. ಈ ಕಾಡ್ನಾಗೆ ಹುಟ್ಟಿ ಈ ಕಾಡ್ನಾಗೆ ಬೆಳ್ದಿದ್ದೀವಿ. ಇಂತಾ ದೊರೆ ಮತ್ತೆ ಹಿಂಗೇ ಬಿಚ್ಚಿ ಹೇಳ್ಳುಲ್ಲ. ಇಂತ ಪಟ್ನುದ ದೊರೆ ಹೋಗಿ ಯೋಳ್ಜನ ಮದುವ್ಯಾಗಿ ಮಕ್ಕಿಲ್ದಿರೊವತ್ಗೆ. ರೊಟ್ಟಿಬುತ್ತಿ ಕಟ್ಟಿಸ್ಗೆಂದ್ ಆ ಪಟ್ನುಕ್ಕೋಗಿ ಚೆಂಡು ಬುಗ್ರಿ ಗೋಲಿ, ಆಡ್ತಿದ್ದ ಹುಡುಗ್ರು, ಹೊಟ್ಟೆ ಬಿಟ್‌ಗಂಡ್ ಸಿಂಬಳ ಸುರಿಸ್ಗೆಂತಾ ನಿಂತಗಂದ ಹುಡ್ಗಿತಾಗ ಬಂದು ಒಂದು ಚುಟುಕಿ ಹಾಕಿಬಿಟ್ಟೆ. ಅದು ಇಪ್ಪತ್ತೈದು ಮಕ್ಳು ಸಾಯ್ಲಿ. ನಮ್ಮಪ್ಪ ನಮ್ಮವ್ವಾರ ಕೂಟೆ ಹೇಳ್ತೇನೆಂತು. ಇವ್ಳು ಅವ್ರು ಅಪ್ಪಂತಾಕೋಗಿ, ಅಳದ್ ಒಂದ್ ಸೇರ್

ಹೊನ್ ಕೊಟ್ಟು, ಅಳಿದೆಲೆ ಒಂದ್ ಸೇರು ಹೊನ್ನು ಕೊಟ್ಟು ಆ ಹುಡ್ಗಿ ಕರಕಂದೋಗಿ ಒಂದಜ್ಜಿ ಮನಿಗೆ ಬಿಟ್ಟ. ಅಲ್ಲಿ ಅವಜ್ಜಿ ಸಾಕ್ತು. ಹಿಂಗಿಂಗಾತೂಂತ ಹೇಳಿದ್ಲು. ಅವಾಗ ಆಯಪ್ಪನಿಗೆ ಗುರ್ತಾಯ್ತು. ಓ ಇವು ಯಾರವು ಅಲ್ಲ ಇಪ್ಪತ್ತೈದು ಮಕ್ಳು ಹೇಳಿದ್ದು ಖರೆ. ಇಲ್ಲಿರದು ಸರಿ, ಇಷ್ಟು ಕೆಲ್ಸ ಆಗಿರದು ಸರಿ.

ಈಗ ಇವ್ರು ನನ್ನ ಮಕ್ಕಳು. ಆದ್ರೆ, ಏಳ್ ತೆರೆವಳಗೆ ಈ ಮಕ್ಳು ನಿಲ್ಸಾನ. ಏಳ್‌ತೆರೆ ಆಚೆ ತಾಯಿ ನಿಲ್ಸಾನ. ನಿಲ್ಸಿಬುಟ್ಟು ಹಾಲ ಕರ್‍ಸಾನ. ಹಾಲು ಮಕ್ಳಿಗೆಲ್ಲ ಹೊಟ್ಟೆ ತುಂಬಿಬಿಟ್ಟು, ಬಾಯಿ ತುಂಬಿ ತುಂಬಿ ಹರುದ್ರೆ ನನ್ಮಕ್ಳು, ಇನ್ಯಾರ್ ಮಕ್ಳು ಅಲ್ಲಾಂತೇಳಿ, ಮಕ್ಳುನ್ ಕರಕಂದ್ ಹೋದ. ಏಳ್ ತೆರೆ ಕಟ್ಟಿ, ಏಳ್ ತೆರೆವಳಗೆ ನಿಲ್ಸಿ ಹಾಲ್ ಕರಿಸ್ದಾಗ, ಮಕ್ಳಿಗೆ ಸಮುದ್ರ ಆದಂಗಾಯ್ತು. ಹಾಲು ಕುಡ್ದು ಬಾಯ್ತುಂಬ, ಹೊಟ್ಟೆ ತುಂಬಿ ಸಮುದ್ರಾಯ್ತು. ಆವಾಗ ಏನ್ಮಾಡಿದ್ರು.? ಇವು ನನ್ ಮಕ್ಳೇ ಸರಿ. ಇನ್ಯಾರ ಮಕ್ಳು ಅಲ್ಲ ಅಂತೇಳಿ ತಗಂದೋಗಿ ಮನೀಲಿ ಮಡಿಕ್ಕಂಡು, ಚಂದಾಗಿ ಸಾಕ್ಕಂಡ್ರು. ಅವರು ಏಳ್‌ಜನ ಹಿಡ್ದು ಸಿಗದುಬುಟ್ಟು, ಊರ ಬಾಕ್ಲಿಗೆ ತ್ವಾರಣ ಕಟ್ಟಿ, ಈ ಹೋಗೋ ಬರೋರಿಗೆ ಅಡ್ಕೆ ಎಲೆಕೊಟ್ಟು ಉಗಿಸಿದ್ರು. ಅವರು ಅಲ್ಲವರೆ, ನಾವು ಇಲ್ಲಿವಿ.

**ಹೇಳಿದವರು : ನರಸಮ್ಮ,** ದೊಂಬಿದಾಸರು, ತಿಮ್ಮಲಾಪುರ, ಚನ್ನರಾಯಪಟ್ಟಣ ತಾಲ್ಲೂಕು

# ೪. ಜಂಬೂರು ನಾಗೇಗೌಡರು

ಒಂದ್ ಪಟ್ಣುದಲ್ಲಿ ಜಂಬೂರ್ ನಾಗೇಗೌಡ್ರು. ಅವ್‌ರ್ಗೆ ಏಳ್ ಜನ ಗಂಡ್‌ಮಕ್ಳು. ಏಳ್ ಜನ ಗಂಡ್ಮಕ್ಳಾದ್ರೆ, ಅವ್ರು ಬಾಳ ಅನ್ಕೂಲ್ವಸ್ತ ಆ ಮನಿಯವ್ರು. ಏಳ್ ಕೊಪ್ಪರ್ಗೆ ಹಾಲ್ಕರಿಯೋರಂತೆ ಅವ್ರ ಮನೇಲಿ. ಆರ್ ಜನ ಮಕ್ಳುಗುಳೂ ಗದ್ದೆಗಳು, ತೆಂಗು, ಬಾಳೆ, ಬದನೆ ಬೇಕಾದಷ್ಟು ಯಾಸಾಯ್‌ಗಳು ಮಾಡ್ಕಂಡು ಅನ್ಕೂಲಾಗಿದಾರೆ. ಎಲ್ಲಿ? ಜಂಬೂರ್ ನಾಗೇಗೌಡ್ರ ಮನೇಲಿ. ಇನ್ನೊಬ್ಬ ಕಿರಿಮಗ್ನು ಅವ್ರ ಮನೇಗೆ ಕೆಲ್ಸ ಮಾಡಂಗಿಲ್ಲ. ಬಂದು ಪದ್ಮಾವತಿ ಮನೇಲಿ ಸೇರಿದಾನೆ. ಪದ್ಮಾವತಿ ಮನೇಲಿ ಸೇರಿದ್ರೆ ಇವ್ರು ಆರ್ ಜನ್ರೂವು ಬಾಳ ಒಳ್ಳೇವುರು. ಇವ್ನು ಕೆಟ್ಟವ್ನು. ಲಗ್ನ ಮಾಡ್ಲಿಲ್ಲ, ಮನೆ ಸೇರ್‍ಲಿಲ್ಲ. ಆವಾಗ ಅಣ್ಣಂದ್ರು ಆರ್‌ಜನ್ರೂ ಏನಂದ್ರೂ, ಜಂಬೂರ್ ನಾಗೇಗೌಡ್ರುನ - ಅಪ್ಪಾಜಿಯವ್ರೇ ನಂ ತಮ್ಮಾವ್ರು ಹೀಗ್ ಮಾಡ್ತಾವ್ರೆ, ಏನ್ ಮಾಡದು ? ಅಪ್ಪಾ, ಐದು ಬೆಳ್ಳು ಸಮಾಕಿರ್‍ತದೇನ್ ಬಿಡಪ್ಪ, ಅವುನ ಸುದ್ದಿ ಬೇಡ ನಿಮ್ಗೆ ಅಂದ್ಬುಟ್ರು ತಂದೆವ್ರು, ಜಂಬೂರ್ ನಾಗೇಗೌಡ್ರು. ಸರಿ, ಇದೇ ರೀತಿಯಾಗಿ ಇದ್ಬುಟ್ರು.

ಒಂದಲ್ಲಾ ಒಂದಿನ್ ಏನ್ ಮಾಡುದ್ರು? ಅವ್ರ ಸ್ನೇಹಿತ್ರೆಲ್ಲಾ ಬಂದು ಇವುರ್ಗೆ ಹೇಳ್ಬುಟ್ರು. ಮದ್ವೆಮಾಡ್ಬುಡ್ರಿ ನೀವು ನಾಗೇಗೌಡ್ರೆ ಅಂತ ಹೇಳ್ಬುಟ್ರು. ಅಪ್ಪಾ ನೀವೇ ಮಾಡ್ಬುಡ್ರಪ್ಪಾ ಲಗ್ನಾವಾ. ನಮ್ಕೈಲಿ ಸಾಧ್ಯವಿಲ್ಲ ಇದು ಅಂದ್ಬುಟ್ರು ನಾಗೇಗೌಡ್ರು. ಆ ಸ್ನೇಹಿತ್ರ ಮೇಲಾಕ್ಬುಟ್ರು. ಈ ಸ್ನೇಹಿತ್ರೋಗಿ, ಪದ್ಮಾವತಿ ಮನೇಲಿದ್ರಲ್ಲ "ಅಪ್ಪಾ ನೀನು ಲಗ್ನವಾ ಆಗ್ಬುಡಪ್ಪಾ. ಸರಿ. ಅಲ್ಲ, ನಿಮ್ಮ ಮನ್ತನ ದೊಡ್ಡು, ನಾಗೇಗೌಡ್ರು ಅಂದ್ರೆ ಸುತ್ತಾರ್ ಹದ್ನಾರ್ ಹಳ್ಳಿಗೆಲ್ಲಾ ಮಾನ್ಯೇವ್ರು" ಅಂತ ಹೇಳ್ಬುಟ್ರು. ಆಗೇಅಗ್ಲಿ ನಾನ್ ಲಗ್ನಆಗ್ತೀನಿ ಅಂತ ಹೇಳ್ಬುಟ್ಟ ಸ್ನೇಹಿತ್ರು ಕೈಲಿ. ಸರಿ, ಅವ್ರೇನ್ ಮಾಡ್ಬುಟ್ರು? ಬಂದ್ಬುಟ್ಟು ಹೇಮಾವತಿ ಪಟ್ಣಕ್ಕೆ ಹೆಣ್ಣ್ಗೊಂಟ್ಬುಟ್ರು. ಇವ್ರ್‌ದೆಯಾ, ಏನು ? ಜೊತೆಗಾರ್ರೆ ಮಾಡ್ಬೇಕು ಮದ್ವೆಯಾ. ಮನೆಗೆ ಬಂದೇ ಇಲ್ಲ. ಅಣ್ದೀರ್‌ತಕೆ, ತಂದೆತಕೆ. ಓಗ್ಬುಟ್ಟು ಈವ್ರೆನ್ ಮಾಡ್ಬುಟ್ರು? ಅವ್ನು ಒಪ್‌ಸ್ಗಂಡ್ ಕುಂತ್ಕತರೆ. ಈಯಪ್ಪ ಹೇಳ್ಬುಟ್‌ದೇಟ್ಕೆಯ ಇವ್ರೆನ್ಮಾಡ್ಬುಟ್ರು? ಅಮರಾವತಿ ಪಟ್ಣಕ್ಕೆ ಇವ್ರು ಗಂಡಿನ್ ಪೋಟ ತಗಂಡ್ರು, ನಾಗೇಗೌಡ್ರ ಕಿರೆಮಗ್ನ ಪೋಟ ತಗಂಡ್ರು. ಉಡಿಕಂಡೋದ್ರು.

ಅಮರಾವತಿ ಪಟ್ಣದಿಂದ ಹೆಣ್ಣಾವ್ರು ಪೋಟ ತಗಂಡುಬತ್ತಾ ಇದ್ರು. ಸರಿ, ಇವುರು ಅವ್ರಿಗ್ ಸಿಕ್ಕಿದ್ರು, ಅವ್ರು ಇವ್ರಿಗ್ ಸಿಕ್ಕಿದ್ರು. ನಮ್ಗು ಗಂಡ್‌ಬೇಕು. ನಮ್ಗು ಹೆಣ್‌ಬೇಕು ಅಂದ್ರು. ಈ ಗಂಡಿನ್ ಪೋಟ ಹೆಣ್ಣಿಕ್ಕೊಟ್ರು, ಹೆಣ್ಣಿನ್ ಪೋಟ ಗಂಡ್ನವ್ರಿಕ್ಕೊಟ್ರು. ತಗಂಡ್ ಬಂದ್ಬುಟ್ಟು, ಜಂಬೂರ್ ನಾಗೇಗೌಡ್ರ ಕಿರೇ ಮಗುನ್ ಕೈಗೆಕೊಟ್ಬುಟ್ರು. ಅವುನ್ ಸ್ನೇಹಿತ್ರು, ಕೊಟ್ ಏಟ್ಗೆಯಾ, ಈಯಪ್ಪ ಕೋಟಿನ್ ಜೇಬ್ನಲ್ಲಿ ಇಟ್ಕಂಡು ಪದ್ಮಾವತಿ ಸೂಳೆ ಮನೇಲಿ ಇದಾನೆ. ತಂದೆ ಮನ್ಗೆ ಓಗೇ ಇಲ್ಲ. ಸರಿ, ಮಲಗ್ಬುಟ್ಟ ಮಂಚದ್ಮೇಲೆ. ಇವ್ನಿಗೆ ಆಲೆ ವೊಟ್ಟೆ ಉರಿ ಬಂದ್ಬುಡ್ತು. ಯಾರ್ಗೆ ? ಈ ಪದ್ಮಾವತಿ ಮುಂಡೆಗೆ, ಸೂಳೆಗೆ. ಆಹಾ! ಇಂತಾ ರೂಪ್‌ಸುಂದ್ರಿ ತಗಂಡೋಗಿ ಲಗ್ನವಾಗೋರು ನಮ್ಗೆ ಕಣ್ಣಿಗ್ನೋಡ್ತಾರಾ, ಕೈಯಗ್ಮಾಡ್ತಾರಾ, ಅಂದಿದ್ದೆ ಪೋಟ ತಗಂಡಿದ್ದೆಯಾ, ಒಂದ್ ಸುಣ್ಣದ್‌ಪೆಟ್ಗೆ ಒಳಿಕೆ ಅಂಚಿಕಡ್ಡಿ ಇಟ್ಟು ಕಣ್ಣಿಗಿಟ್ಬುಟ್ಳು, ಊ ಬಂದಿದೆ ಕಣ್ಗೆ ಅನ್ನಂಗೆ. ಪೋಟ್ದೊಳಿಕೆ ಇಟ್ಬುಟ್ಟು ಮಡೂಗ್‌ಬುಟ್ಳು. ಊಟಾಆಯ್ತು, ಅಡ್ಗೆ ಆಯ್ತು, ಎದ್ದೇಳ್ರಿ ಸ್ನಾನಾಮಾಡಿ ಅಂತ ಕೇಳಿದ್ಲು. ಊಟ, ಸ್ನಾನಾ ಅಂದೇಟ್ಗೆ ಎದ್ದು ಕೂತ್ಕಂಡ ಆಯಪ್ಪ. ಎಲ್ಲ ಹೆಣ್ನೋಡಕೋಗಿದ್ರಂತೆ ಹ್ಯಾಗಿದೆ ತೋರಿಸ್ರಿ ಪೋಟಾನ ಅಂದ್ಲು. ಅಲ್ಲಿದೆ ನೋಡೆ, ಮುಟ್ಬೇಲ್ರ ನಾನು (ಆಲೆ ಮಾಡಿದಾರೆ ಮಾಟಾನಾ). ಸರಿ. ತಕ್ಕೊಟ್ಟ ಆಯಪ್ಪ. ಅಲ್ಲಾ ಎಣ್ಣೇನೊ ಅಸ್ನಾಗದೆ, ಕಣ್ಣೇಕುಲ್ದು ಅಂದ್ಬುಟ್ಲು.

ಎಲ್ಲೇ? ನೋಡಿ ಕಣ್ಣಾಲ್ಹೂವ ಬಂದದೆ ಅಂದ್ಬುಟ್ಲು ಸುಮ್‌ಸುಮ್ಕೆ. ಪರಪರ್ನ ಇಸ್ದುಬುಟ್ಟ, ಅರ್‌ದ್ಬುಟ್ಟ, ಒಲೆವಳ್ಗೆ ಎಸ್ದ್‌ಬುಟ್ಟ. ಆಯ್ತಾ? ಸಂಸಾರ ಓದಂಗಾಯ್ತು ? ಆಗಬೇಕಿಲ್ಲ ನನ್ಗ್ ಮದ್ವೆ ಅಂದ್ಬುಟ್ರು. ಆವಾಗೇನ್ಮಾಡ್ಬುಟ್ಬುರು? ಬಂದ್ಬುಟ್ರು ಸ್ನೇಹಿತ್ರು. ಬಂದು "ಅಪ್ಪಾ ನಾವ್ ಮಾತ್ಕೊಟ್ಬಿದ್ದೀವಪ್ಪಾ. ನಮ್ಮನ್ನೇನಂತಾರಪ್ಪ? ಜಂಬೂರ್ ನಾಗೇಗೌಡ್ರು ಬೇಕಾದಂತ ಏಳ್ ಕೊಪ್ಪುಗೆ ಹಾಲ್ಕರಿಯೋಂತ ಮಾನ್ಯೇವ್ರು, ಅಂತಾವ್ರ

ಮಗುನ್ಗೆಣ್ಣು.'' ನಾನ್ ಬರೊಲ್ಲ. ಆದಾತೋಗು. ಆಗೋಗ್ಬುಡುತ್ತಪ್ಪ. ವೋಗ್ಲೇಬೇಕು ಮದ್ವೆಗೆ. ನಾನ್ ಬರಲ್ಲಪ್ಪ. ನನ್ ಚಂದ್ರಾಯ್ದ ಕೊಡ್ತೀನಿ. ಮದ್ವೆ ಮಾಡ್ಕಂಬಾ ಅಂದ್ಬುಟ್ಟ. ಅವ್ರು ಒಳ್ಳೆ ಮಾನ್ಯೇವ್ರು, ಪುಣ್ಯಾತ್ಮರು, ಅಮರಾವತಿಪಟ್ಣದವ್ರು, ಹೆಣ್ಕೊಡವ್ರು. ಆದ್ರೂ. ಆಗ್ಲಿ ಅಂದ್ಬುಟ್ರು. ಸರಿ. ಗಂಡಿನ್ ವೋಟ ತಗಂಬುಟ್ರು, ಚಂದ್ರಾಯ್ದ ಇಸ್ಕಂಬುಟ್ರು. ಮಂದಿಮಾರ್ಗ ದಂಡು ದಳ ಎಲ್ಲಾ ವೋಗ್ಬುಟ್ರು, ಲಗ್ನಮಾಡ್ಬುಟ್ರು ಕೊಟ್ಬುಟ್ರು. ಪಾಪ, ಚಂದ್ರಾಯ್ಕೆ ಲಗ್ನ ಮಾಡ್ಕಳುಸ್ಬುಟ್ರು. ಬಂದ್ಬುಟ್ರು, ಮದ್ವೆಮಾಡ್ಕಂಡು. ಕಿರಿಗಂಚಿ ಮರಿಗಂಚಿ ಕರ್ಕಂಬಂದ್ರು. ಕರ್ಕಂಬಂದೇಟ್ಗೆ ಅರ್ಮನೇಲಿ ಬಿಟ್ಬುಟ್ರು. ಅರ್ಮನೇಗ್ ಬಿಟ್ಬುಟ್ರೆ, ಈಯಮ್ಮ ಬಾಳ ರೂಪಸುಂದರಿ. ಯಾರು ? ಕಿರೇಮಗ್ನೆಂಡ್ತಿ. ಜಂಬೂರ್ ನಾಗೇಗೌಡ್ರು, ತಾಯೀಬನ್ನಿ ಅಮ್ಮಾ, ಅಂತ ಕರುದ್ರು ಆರ್ ಮಂದಿ ಸೊಸೆದೀರ್ನೂವ. ಏನ್ ಮಾವಾವ್ರೆ? ಏನೂ ಇಲ್ಲಮ್ಮಾ, 'ನನ್ಗೆಳ್ಕೆಂತೆ ಇರ್ತೀರೆ ತಾಯಿ ನೀವು', ಅಂದ್ರು. ಆರ್ ಜನ ಸೊಸೆದೀರ್ನೂವೆ, ಹೇಳಿ ಮಾವಾವ್ರೆ, ಅಗತ್ಯವಾಗಿ ಇರ್ತೀವಿ ನಾವು. ''ನಮ್ ಸೊಸೆ ಬಾಳ ರೂಪ್‌ಸುಂದ್ರಿ. ಆಚೆ ಕಳಿಸ್‌ಬ್ಯಾಡಿಮ್ಮ, ನೀರಿಗ್ ಕಳಿಸ್‌ಬ್ಯಾಡಿ ನೀವು. ತೂಗ್ ಮಂಚದ್ಮೇಲೆ ತೂಕ್ಕಂಡು ಅವ್‌ರ್ಗೆ ಸೌಕರ್ಯ ಮಾಡ್ತೀರಾ ತಾಯಿ'' ಅಂದ್ರು. ಅಗತ್ಯವಾಗಿ ಮಾಡ್ತೀವಿ ಮಾವಾವ್ರೆ ನಾವು ಅಂತ ಕೈ ಮುಗದ್ ಬೇಡ್ಕಂಡ್ರು. ಆಗ ಪಟ್ಟೆ ಮಂಚದ್ಮೇಲೆ ಮಲ್ಗುಸ್ಬುಟ್ರು. ನಾಲ್ಕ್ ಮೂಲೆಗೆ ನಾಕ್ ನಂದಾದೀಪ ಹಚ್ಬುಟ್ರು. ಸರಿ. ಅವಳ್ನ ತೂಗ್ ಮಂಚದ್ಮೇಲೆ ಮಲ್ಗುಸ್ಬುಟ್ರು. ಯಾರನ್ನಾ ? ನಾಗೇಗೌಡ್ರಕಿರೇ ಮಗವ್ನಲ್ಲ ಸೂಳೇ ಮನೇಲಿ ಅವ್ನೆಂಡ್ತೀನಾ. ಗಂಡಿಲ್ದೆ ಮದ್ವೆ ಮಾಡ್ಕಂಬಂದೌಳ್ನ.

ಸರಿ, ಮಂಚುದ್ಮೇಲಿಟ್ಬುಟ್ರು. ಆಗ ಆಯಮ್ಮ ಅವಳ ಮನಸ್ನಲ್ಲಿ ಅವಳು ಏಚ್ನೆ ಮಾಡ್ಕಂಡ್ಲು. ನೋಡಿ ಇದ್ರಲ್ಲಿ ಬರ್ಬೇಕು ನೋಡಿ. ಆಹಾ, ಪರಮಾತ್ಮಾ ನನ್ ಅಕ್ದೀರು ಬಂದಿದಾರೆ ಮುಂದೆ. ಅವ್ರಿಗೆ ದಾಸಿಯಾಗಿ ನಾನು ಅವ್ರ ಸೌಕರ್ಯ ಮಾಡ್ಬೇಕು. ಅಂಥೋಗ್ಬುಟ್ರೆ, ನನ್ಗೆ ಸೌಕರ್ಯ ಮಾಡೋದು ದೇವ್ರು, ಗುರುವು, ಮೆಚ್ಚಲ್ಲ ನನ್ಗೆ. ಗಂಡನ್ ಸುಖ ಇದ್ರೆ ಒಳ್ಳೇದಾಯ್ತು. ಪರಮಾತ್ಮ ಕೊಟ್ಟಿದ್ದಿನ್ಕೆ ಆಗಲಿ ಅಂದ್ಬುಟ್ಟು, ಅಕ್ಕಯ್ಯಾ, ಅಂದ್ಲು ಹಿರೇ ಸೊಸೆಯಾ. ಏನಮ್ಮಾ ? ''ನನ್ನ ಪತಿವ್ರತಾ ಧರ್ಮ ನನ್ನಲ್ಲಿದ್ರೆ ಯಾರೇನು ಮಾಡಲ್ಲ, ಅಕ್ಕಯ್ಯ. ನೀರ್ ತಗಂಡ್ಬನ್ನಿ, ಕಸಹಾಕ್ಬುಟ್ ಬನ್ರಿ, ಅರ್ಮನೇಲಿ ಎಲ್ಲಾ ಜೋಡುಸ್ಬುಟ್ಟು ಹೋಗಿ, ಏಳ್ ಕೊಪ್ರಿಕೆ ಹಾಲ್ಕರಿಯವ್ಕೆ ಹುಲ್ಲು ಎಷ್ಟಾಗ್ಬೇಕು? ವೋಗಿ ನೀವು ಹುಲ್ಲು ಕಿತ್ಕಂಬರಿ. ನಾನು ಅರಮನೇಗೆ ಅಡ್ಗೆಮಾಡ್ತಾ ಇರ್ತೀನಿ'' ಅಂದ್ಲಾಯಮ್ಮ. ಆಗ್ಲಿತಾಯಿ ಅಕ್ಕದೀರ್ಗೆಲ್ಲಾ ರೊಟ್ಟಿ ಹಾಕ್ಕೊಟ್ಲು. ಮಾವ್ದೀರ್ಗೆಲ್ಲಾ ಅನ್ನ ಮಾಡ್ಕೊಟ್ಲು. ಸರಿ, ಅರ್ಮನೇ ಒಳ್ಗೆ ಕಸಮುಸ್ರೆ ಮಾಡಿದ್ಲು. ಏಳ್ ಮಾರುದ್ದ ಮಂಡೆ ವದರ್ಕಂಡು, ಚಿನ್ನದ ಸೀರಣ್ಗೆ ತಗಂಡು, ರನ್ನದ ಬಾಚಣ್ಗೆ ತಗಂಡು, ಸಿಕ್ಕೊಡಿತಾ ಇದ್ಲು. ಏಳ್ ಮಾರುದ್ದಮಂಡೆ ಆಯಮ್ಮನಿಗೆ.

ಆ ಪಟ್ಣದಲ್ಲಿ ಈ ರಾಜ ಸತ್ತೋಗ್ಬುಟ್ಟಿದ್ದ. ಆ ರಾಜನ್ ಮಗನ್ಗೆ ಮದ್ವಿಲ್ಲ. ಅವ್ನು ಬಿಸ್ಲು ಮಾಡೀ ಮೇಲ್ ಕೂತಿದ್ದ. ಆ ಸೂಳೇಮಗ ಬಿಸ್ಲು ಮಾಡೀಮ್ಯಾಲ್ ಕೂತಿರ್ವಾಗ,

ಈಯಮ್ಮ ಮಂಡೆ ಬಿಚ್ಕಂಡು ಬಾಚ್ಕಂತಿದ್ಲಲ್ಲ, ಹತ್ತೂಡಿನ ಕರುಗಳಿದ್ದೊ ನೋಡಿ, ಏಳ್ ಕೊಪ್ರಿಕೆ ಹಾಲ್ ಕರಿಬೇಕಾರೆ, ಜಂಬೂರ್ ನಾಗೇಗೌಡ್ರು ಮನೇಲಿ ಏಳ್ ಕೊಪ್ರಿಕೆ ಹಾಲ್ ಕರಿಯೋ, ಕರಿಯೋವು ಕರ ಏಸಿರ್ತವೆ? ಹತ್ತೂಡಿನ, ಕರುಗಳು ಬಿಚ್ಕೊಂಡ್, ಬಿಚ್ಕೊಂಡು ರಾಜನ್ ಮನೆ ಮುಂದೆ ಹೋಗ್ತಾ ಇದ್ದೋ. ಆಗೇನ್ಮಾಡಿದ್ಲು? ಆಹಾ ನನ್ನ ಅಕ್ಕದ್ದೀರ್ಗೆ ಮಕ್ಕಳಿಗೆಲ್ಲಾ ಆಲಿಲ್ದೆ ಹೋದ್ರೆ, ನನ್ ಅಕ್ಕೀರ್ ಏನಂದಾರಮ್ಮೋ. ನನ್ ಪತಿವ್ರತೆ ಧರ್ಮ ನನ್ನಲ್ಲಿದ್ರೆ, ಯಾರೇನ್ಮಾಡ್ತಾರೆ ಬುಡು ಅಂತ ಹೋಗ್ತಾ ಇದ್ಲು, ಹತ್ತೂಡಿನ ಕರಗಳ್ನ ವಡ್ಕಂಬರಕೆ. ಇವ್ನು ಬಿಸ್ಲು ಮಾಡಿ ಮೇಲ್ ಕೂತ್ಕಂಡು ನೋಡ್ಬುಟ್ಟ ಆ ರಾಜನ್ಮಗ. ಏ ಮಂತ್ರಿ ಇವ್ಯಾರೊ ? ಜಂಬೂರ್ ನಾಗೇಗೌಡ್ರು ಸೊಸೆ ಸ್ವಾಮಿ. ಅವ್ಳ್ ಮಂಚುಕ್ ನಾನೋಗ್ಬೇಕಲ್ಲೋ. ಆಹಾ ಏನ್‌ಸ್ವಾಮಿ! ಅಷ್ಟು ಸುಲಭವಾಗ್ ಮಾತ್ನಾಡ್ತೀರಿ? ಯಾರ್ದೆಂಡ್ರು ಯಾರಿಗ್ ಆಗುತ್ತೇ ಸ್ವಾಮಿ? ಏನಾರಾ ಆಗ್ಲಿ ಅವ್ಳ್ ಮಂಚಕ್ ವೋಗ್ಬೇಕಣೋ ಅಂದ. ಆ ಬಡ್ವರ್ ಆಸೆ ಅಲ್ಲಾ. ಬಲ್ಗಾರನ ಹೆಂಡ್ರುದೀರ್ ಬಂದ್ರೆ ಔಷ್ಧಿಗ್ ಬಂದಿದ್ದು ಅಂತಾರೆ. ಬಡುವ್ರೋದ್ರೆ ಅದ್ಯೋಗಿದ್ರು ಅಂತಾರೆ ಇಲ್ವುರಾ? ಆಗೇನ್ಮಾಡುದ್ರು? ಏನಾದ್ರೂ ಆಗ್ಲಿ ನಾನು ಅವ್ಳ ಮಂಚಕ್ಕೆವೋಗ್ಲೇ ಬೇಕ್ಕಣೋ ಅಂದ, ಮಂತ್ರಿಯಾ. ಸ್ವಾಮಿ ಆಗನ್ಬಾರ್ದು. ಇಲ್ಲ, ಇಲ್ಲ ಅವ್ಳು ಮಹಾಪತುವ್ರತೆ ಶಿರೋಮಣಿ ಸ್ವಾಮಿ ಅವ್ಳು, ಅಂದು, ಬ್ಯಾಡಪ್ಪಾ ಆ ಮಾತ ಆಡ್‌ಬ್ಯಾಡ ಅಂದ. ಇವ್ಳು ವೋಗ್ತಾ ಇದ್ಲಲ್ಲ ಏಳ್ ಮಾರುದ್ದಮಂಡೆ ಬಾಚ್ಕಂಡು, ಒಂದ್ಕಡೆ ಕೂದ್ಲು ಕಂಕ್ಳುಗಿಕ್ಕಂಡ್ಲು, ಇನ್ನೊಂದ್ಕಡೆ ಕೂದ್ಲುನೊಳ್ಗೆ ದಾವಣಿ ಹಾಕ್ಕಂಡು, ಎಳ್ಕಬಂದ್ಲು ಹತ್ತೂಡಿನ ಕರುಗಳ್ನೂವ.

ಆವಳಮ್ಯಾಕ್ ಕಣ್ಣಿಟ್ಬುಟ್ಟ. ಅವ್ಳು ರೂಪಸುಂದ್ರಿ. ಕಣ್ಣಿಟ್ಬು ಅಂಗಂದ. ಅವ್ಗೆಮದ್ವೆ ಇಲ್ಲ, ಅವ್ಗೆ ರಾಜನ ಮಗನ್ಗೆ. ಹೂಂ ಆದ್ರೂ ಆಗ್ಲಿ ಅಂದ್ಬುಟ್ಬು ಬಂದ್ಬುಟ್ರು ಅರ್ಮನ್ಗೆ. ಏನೋ ಅಂಗಾರೆ ಕರ್ಕಂಬರಲ್ವೇನೊ ಮಂಚ್‌ಕೆ ಅಂದ. ಅಬ್ಬಬ್ಬಾ ಶಿವಶಿವಾ ನಮ್ಗೆನ್ ಉಳಿಗಾಲ ಇದ್ಯೇನಪ್ಪಾ ಬಾಳ ದೊಡ್ಡಮನ್ಸ್ಯಷ ನಾಗೇಗೌಡ್ರೂ. ಒಬ್ರು ಸುದ್ದಿಗೋದವ್ರಲ್ಲಾ. ಅಷ್ಟು ಅನ್ಕೂಲ ಇದ್ರೂ ಭಯ ಭಕ್ತಿ ತುಂಬಿ ತುಳುಕ್ತಾ ಇತ್ತು ಅವ್ರಲ್ಲಿ. ಆಮೇಲೇನ್ಮಾಡ್ಬುಟ್ಟ. ಕರುಸ್ದ, ಕಳಿಸ್ದ, ಅವ್ವಾ ಬನ್ರಿ ಅಂದ. ಮಾರಾಣಿಯವ್ರು ಇದ್ರು. ಅವ್ರು ತಾಯಿ, ಬಂದ್ರು. ಅವ್ವಾ ಏನಾರ ಆಗ್ಲಿ ಗೌಡನ್ ಸೊಸೆ ಕರ್ಕಂಬಾರವ್ವಾ ನನ್ ಮಂಚ್ಚಕ್ಕೆ ಅಂದ. ಏನಪ್ಪಾ "ಅವ್ಳುಗಿಂತಾ ರೂಪ್‌ಸುಂದ್ರಿನ್ ತಂದು ಲಗ್ನಮಾಡ್ತೀನಿ ನಮ್ಮನ್‌ಗ ಬಿಟ್ಟಾರೆ ಮಗೂ?" ಅಂದ್ಲು. ಇಲ್ಲ ತಾಯಿ ನಿನ್ ಪಾದುದ್ ಮ್ಯಾಲೆ ನಾಲ್ಗೆ ಕಿತ್ಕಂಡು ಪರಾಣ ಬಿಟ್ಬುಡ್ತೀನಿ. ಅವ್ಳ್ನ ನನ್ ಮಂಚಕ್ ಕರ್‌ಕಂಡ್ ಬರಲೇಬೇಕು ಅಂದ ಇವ್ನು.

ಈ ದಡಿಯಾ. ಅಂಗಂದೇಟ್ಕೆಯಾ ಈಯಮ್ಮ ಬಂದ್ಲು, ಜಂಬೂರ್ ನಾಗೇಗೌಡ್ರು ಮನೇಗೆ. ಅನ್ಕೂಲ್ವಸ್ತು ಬಂದ್ರೆ ಬಡವ್ರ ಮನೆಗೆ ಭಾಗ್ಯ ಬಂದಂಗಾತ್ತು. ಬನ್ನಿ ತಾಯಿ ಅಂತ ಚಾಪೆ ಮೇಲೆ ಕೂತ್ಕಳಿ, ಮಂಚುದ್ಮೇಲೆ ಕೂತ್ಕಳಿ, ಬೆಂಚಿನ್ಮೇಲೆ ಕೂತ್ಕಳಿ ಅಂದ್ರು ನಾಗೇಗೌಡ್ರು. ನಾಗೇಗೌಡ್ರೆ, ನಿಮ್ಮರಮನೆ ನೋಡುದ್ರೆ ಬಾಳ ಸಂತೋಷವಾಗುತ್ತೆ.

ಏಳ್‌ಜನ ಗಂಡ್‌ಮಕ್ಳು, ಏಳ್‌ಜನ ಸೊಸೆದೀರು, ಬಾಳ ಅನ್ಕೂಲ್ವಾಗ್ ನೆಡೆತಿದೆ. ಯಾವ್ ಕೆಲ್ಸಇದ್ರೂ, ಇಲ್ಲಂತೆ ಆಯ್ತದೆ. ಸ್ವಾಮಿ ನಮ್ಮಲ್ಲಿ ಆರ್‌ತ್ಯಾಅಕ್ಷತೆ ಮಾಡ್ಬೇಕಾಗಿದೆ. ನಿಮ್ ಸೊಸೆದೀರ್ ಕರ್‍ಕೊಂಡೋಗಕೋಸ್ಕರ ಬಂದಿದ್ದೀನಿ ಸ್ವಾಮಿ ಅಂದ್ಲು ಮಾರಾಣಿ. ಇವ್ಳ್ನ ಬರ್‌ಮಾಡ್ಕಳಕೋಸ್ಕರವಾಗಿ. ನಾನು ಕಿರೀಸೊಸೆ ಕಳ್ಸೊದಿಲ್ಲಮ್ಮಾ, ಆರುಜನ ಸೊಸೆದೀರ್‍ನ ಕಳುಸ್ತೀನಿ ಅಂದ್ರು ನಾಗೇಗೌಡ್ರು. ಅವ್ಳುಗ್ ಬೇಕಾಗಿರದು ಕಿರಿಸೊಸೆನೆಯಾ. ಅವ್ಳುಗ್ ಗೊತ್ತು ಆಯಮ್ಮನ್ಗೆ. ಆ ಪತುವ್ರತೆಗೆ ಗೊತ್ತು ನಾಗೇಗೌಡ್ರ ಆ ಕಿರೇಸೊಸ್ಗೆ. 'ಮಾವಾವ್ರೆ ಬನ್ನಿ ಇಲ್ಲಿ, ''ನಮ್ ಸೊಸೆದೀರ ಆರ್ ಜನ್ನೂವೆ ಈವಾಗ ಕಳಿಸ್ಕೊಡ್ತೀನಿ ನಮ್ಮ ಕಿರೀಸೊಸೆಯ ಸಂಜೆ ಐದ್ಗಂಟೆಗೆ ಕಳಿಸ್ಕೊಡ್ತೀನಿ'' ಅಂತ ಹೇಳ್ಬುಡಿ ಅಂದ್ಬುಟ್ಲು. ಅವ್ಳುಗ್ಗೊತ್ತು, ಇದುಕ್ಕೆ ಕಳ್ಸಿದಾರೆ, ಅಂತ ಗೊತ್ಮಾಡ್ಕಂಡಿದ್ಲು. ಆಗ್ಲಿತಾಯಿ ನನ್ನ ಆರ್ ಜನ ಸೊಸೆದೀರ್‍ನ ಅಡ್ಗೀಗ್ ಕಳಿಸ್ತೀನಿ. ನನ್ ಕಿರೀಸೊಸೆಯ ಸಾಯ್‌ಂಕಾಲ್ದ ಐದ್ಗಂಟೆಗೆ ಕಳಿಸ್ತೀನಿ ಅಂದ್ರು. ಓಹೋ ಅನ್ಕೂಲ್ವೆ ಆಯ್ತು ನನ್ಗೆ ಅಂದ್ಬುಟ್ಲು ಮಾರಾಣಿ.

ಆವಾಗ್ ಆರ್‌ಜನ್ನೂವೆ ವೋದ್ರು. ಅಡ್ಗೆ, ಊಟಾ, ಮಾಡುದ್ರು. ಇವ್ರು ಕರ್‍ಕಂಡೋಗಕೆ ಅಡ್ಗೆವೂಟಾ ಸ್ವಾಮಿ, ಅದುಕೋಸ್ಕರ, ಏನೂ ಇಲ್ಲ, ಆರ್‌ತ್ಯೂ ಇಲ್ಲ, ಅಕ್ಷತೆಯೂ ಇಲ್ಲ. ಸುಮ್ನೆ ಬತ್ತಳಾ ಕಂಡೋರ್ಮನೆ ಸೊಸೆ? ಅಂದ್ಬುಟ್ ಅದುಕ್ ಮಾಡಿದ್ರು. ಈವಮ್ಮನ್ಗೆ ಉಡುಗರೆ ಕೊಟ್ರು. ಇವ್ರಾರ್ ಜನಕ್ಕೂ ಕೊಟ್‌ಬ್ಯುಟ್ರು, ಕಳುಸ್ಬುಟ್ರು. ಯಾರು ? ರಾಜವ್ರ ತಾಯಿ ಮಾರಾಣಿ ಕಳ್‌ಸ್ಬುಟ್ಲು. ಇನ್ನು ಈಯಮ್ಮ ವೋಗ್ಬೇಕಲ್ಲಾ, ಐದ್ಗಂಟ್ಗೆ.?

ಇವ್ಳೋಗೋವಷ್ಟಕ್ಕೆ ಮಂಚುದ್ಮೇಲೆ ಮೂರ್‌ಗಾಡಿ ಊವು ಮುಚ್ಚುಬುಟ್ಟಿ ಆ ರಾಜನ್ ಕವುಚ್ಬುಟ್ಟವ್ರೆ. ಮೂರ್ ಗಾಡಿ ಊವ ಮುಚ್ಬುಟವ್ರೆ ಆ ರಾಜನ್ ಮ್ಯಾಲೆ. ಆ ರಾಕ್ಷನ್ಮ್ಯಾಲೆ. ಅಲ್ಲೊಂದು ಪೋಟ ಪೂಜಸ್ಬುಟ್ಟವ್ರೆ. ಇಲ್ಲೆ ಆರ್‍ತ್ಯಾಕ್ಷತೆ ಪೂಜೆ ಮಾಡದು ಅಂತ. ಇವ್ರಾರ್‌ಜನ್ನೂನು ಉಡಗರೆ ಕೊಟ್ಬುಟ್ರು ಬೋಮಾನ್‌ಗಳ ಕೊಟ್ಬುಟ್ರು ಕಳುಸ್ಬುಟ್ಲು ಮಾರಾಣಿ. ಇನ್ನೀಯಮ್ಮ ಐದ್ಗಂಟೆಗೆ ಬರ್ಬೇಕಲ್ಲಾ? ಎರಡು ಸೀರೆ ಉಟ್ಕಂಡ್ಬುಟ್ಳು. ಸೀರೆ ಉಟ್ಕಂಡು, ಮಾವುನ್ಗೇನಂತ ಏಳುದ್ಲು, ''ಮಾವಾವ್ರೆ ಬೆಳಗಿನ ಐದ್ಗಂಟ್ಗೆ ನೀವು ರಾಜನ್ಮರ್ಮನೆ ಇಂದೆಗಡೆ ರಥ ಸಿದ್ಧಪಡಿಸಿಕ್ಕಂಡ್ ನಿಂತಿರ್‌ಬೇಕು ಮಾವಾವ್ರೆ'' ಅಂತ ಜಂಬೂರ್ ನಾಗೇಗೌಡ್ರಿಗೆ ಹೇಳ್ಬುಟ್ಲು ಈವಮ್ಮ. ಆಗ್ಲಿ ತಾಯಿ ಅಂದ್ರು.

ಅವ್ಳೇನ್ಮಾಡುದ್ಲು? ಸೀರೆ ಮೇಲ್ ಸೀರೆ ಉಟ್ಕಂಬುಟ್ಲು. ಅವ್ರು ತಂದೆ ಅರ್ಮನೇವ್ರ ಕೊಟ್ಟಿದ್ ಲಕ್ಕುಸ್ ರೂಪಾಯ್ ಒಂದೇ ಹಾರ ಒಂದ್ನೇ ಹಾಕ್ಕಂಡಿದ್ಲು ಕೊಳ್‌ಗೆ. ಕೈಗೆ ವಾಚ್ ಕಟ್ಕಂಡಿದ್ಲು.

ಸರಿ, ಐದ್ಗಂಟೆಗೆ ಬಂದ್ರು. ಇವ್ನ್ ಅಷ್ಟುತ್ತಾಗ್ಲೇಯಾ ಕದ ಹಾಕ್ಬುಟ್ಟು, ಮಲಗ್ಸು ಬಿಟ್ಟವ್ನೆ, ಮಾರಾಣಿ ಮಗುನ್ನ.

ಆಮೇಲೆ ಎಲ್ಲಮ್ಮಾ ಯಾತವಮ್ಮಾ ಅಂತ ಬಂದ್ಲು. ಬನ್ನಿ ತಾಯಿ ಬನ್ನಿ ಅಂತ ಕದನೂಕಿದ್ಲು ಈಯಮ್ಮ, ಎಲ್ಲಿ ಅರತ್ಯಾಕ್ಷದಿ? ಆ ನೋಡಿ ದೇವಾಧಿ ಫೋಟ. ಅವುನ್ನ ಮೂರ್ಗ್ಗಾಡಿ ಊವ್ದಗೆ ಮುಚ್ಚುಟ್ಬಿದ್ಲು. ಆಗೇನ್ಮಾಡ್ಬುಟ್ಟು? ಈವಮ್ಮ ವಳೀಕ್ ವೋಗಿದ್ದ ಕಂಡಿದ್ದೇ ಬರ್‍ರ್ಂತ ಬಾಗ್ಲಾ ಎಳ್ಕಂಬುಟ್ಲು. ಆ ರಾಜನ ತಾಯಿ ಬಾಗ್ಲೆಳಕ್ಕಂಡೇಟ್ಗೆಯಾ, ಆ ಪತಿವ್ರತೆ ಶಿರೋಮಣಿ ಅವ್ಳ್ಗೇನ್ ಭಯ? ಪರಮಾತ್ಮ ಇಗ್ಲೂ ಇಲ್ದಂಗೆ ಕಾಪಾಡ್ತನೆ ಸ್ವಾಮಿ. ಅವ್ಳ ಪತಿಧರ್ಮ ಇದ್ದರೆ ಮಾತ್ರ. ಆಗ ಆರ್ತಿ ತಗಂಡ್ಳು ಕೈಲಿ. ಸುತ್ತ ಮಂಚದ್‌ಸುತ್ಲೂ ಸುತ್ತ್ತಾ ಇದ್ಲಲ್ಲಾ? ಇವ್ನು ರಾಕ್ಷ ಎದ್ದಂಗೆದ್ದ. ಅವ್ನುಗ್ಗೊತ್ತು, ಗೋತ್ತಾಯ್ತಮ್ಮುನ್ಗೆ. ಎದ್ದ. ಅಷ್ಟು ಸುಲ್ಭವಾಗಿ ಇನ್ನೊಬ್ರು ಸೀರೆ ಹಿಡಿಯಕ್ಕಾಗುತ್ತೇ ಗುರ್ವೇ. ಗಂಡುನ ಸೆರ್‍ಗಿಡಿಬೇಕಾದ್ರೆ ಹೆಂಡ್ತಿದು ಕಷ್ಟಿದೆ. ಅವ್ಳ ಸೆರ್‍ಗಿಡ್ದಿದ್ರೆ ಸುಟ್ಹೋಗವ್ನು. ಆವಾಗ ಮಂಚ ಸುತ್ಕೊಂಡ್, ಸುತ್ಕೊಂಡ್ ಆಯಮ್ಮ ಆರ್ತಿ ಎತ್ಕಂಡು ಬಲಗೈಲಿ. ಇವ್ನು ಇಂದೆಗಡೆ ಸುತ್ಕೊಂಡು ಸುತ್ಕೊಂಡು ಬರ್‍ತಾ ಇದ್ದ. ಬರೋ ಟೈಮ್ನಲ್ಲಿ ಇವ್ರ್ ತಂದೆ ಮನೇಲಿ ಕೊಟ್ಟಿದ್ರಲ್ಲ ಲಕ್ಸು ರುಪಾಯಿ ಮುತ್ತಿನ ಸರನ ಕಿತ್ತಿದ್ದೆ ಎಸ್ದುಬುಟ್ಲು, ಆ ಮೂರ್ಗ್ಗಾಡಿ ಊವಿನೊಳಿಕೆ. ಆಗ ''ಅಯ್ಯೊ ನನ್ನ ತಂದೆ ಮನೇಲಿ ಲಕ್ಸುರುಪಾಯಿ ಹಾರ ಕೊಟ್ಟಿದ್ರು, ನಮ್ಮ್ ತಂದೇವ್ರು ಕೊಟ್ಟಿದ್ರು ಎಲ್ಲೊ ಕಳ್ದೋಗಿದೆ, ಹ್ಯಾಗಿದ್ರೂ ನಿನ್ನೊಳೆಯಾ, ನಿನಗಾಗಿ ಬಂದಿದೀನಿ, ಅದುನ್ನೆಲ್ಲಾ ಉಡುಕ್ಕೊಡಿ, ನನ್ ಕೊಳ್ಳುಗ್ ಪೋಣುಸ್ಕಂಡು ಹಾಕ್ಕಂಬೇಕು'' ಅಂದ್ಲು.

ಆ ಊವಿನೊಳ್ಗೆ ಮೂರು ಉಡ್ಕೋನು, ಮೂರ್ನು ಕೈಯಿಗ್ ಕೊಡೋವ್ನು. ಎರ್ಡು ಪೋಣುಸ್ಕಳವ್ಳು. ಇನ್ನೊಂದು ಎಸೆಯೋಳು. ಟೇಮ್ ಬರ್ಬೇಕಲ್ರ? ಸರಿ ಅದೇ ರೀತಿ ಮಾಡಿ ಎಲ್ಲಾ ಪೋಣುಸ್ಕಂಡ್ಳು ಎಲ್ಲಾ ಪೋಣುಸ್ಕಂಡ್ಳು. ಕೊಳ್ಳಗ್ ಹಾಕ್ಕಂಡು, ನಾನು ಎಲ್ಡಾಕ್ ಮಾಡ್ಬೇಕು, ಬಾತುರೂಮು ತೋರುಸ್ರಿ ಅಂದ್ಲು. ಹೋಗೆ ಇಲ್ಲಿದೆ ವೋಗ್ಬಾ ಅಂತ ಆಯಪ್ಪ ತೋರುಸ್ದ. ತೋರುಸ್ದೇಟ್ಗೆ ನೀನ್ ನಂಗೆ ಮೋಸ ಮಾಡ್ಬುಡ್ತಿಯಲ್ಲ ಅಂದ. ಇಲ್ಲ, ನಿಮ್ಗೆ ಮೋಸ ಮಾಡಲ್ಲತಗಳ್ರಿ. ನನ್ನ್ ಸೆರಗ್ ಇಡ್ಕಂಡಿರ್‍ರಿ ಅಂದ್ಬುಟ್ಳು. ಸೆರ್‍ಗ ಆಯಪ್ಪನ್ಕೈಗೆ ಕೊಟ್ಬುಟ್ಳು. ಬಂದ್ಲು. ಆಯಮ್ಮ ಬಂದು ಇನ್ನೊಂದು ಸೆರಗ್ನಲ್ಲಿ ಚಂಬುಗೆ ಕಟ್‌ಬುಟ್ಟು ಕಡಾಯದೊಳ್ಗೆ ಬಿಟ್ಬುಬಿಟ್ಲು, ಅಲ್ ಅವ್ನೆ ಅನ್ನಂಗೆ, ಕಡಾಯ್‌ದೊಳಗೆ ಬಿಟ್‌ಬುಟ್ಟು ಆವಾಗ ಮಾವಾವ್ರು ರಥ ಸಿದ್ಧಡುಸ್ಕಂಡು ನಿಂತಿದ್ರಲ್ಲ? ಆ ರಥುದ್ಮೇಲೆ ಕುಂತ್ಕಂಡು ಆಯಮ್ಮ ಅರ್‍ಮನೇಗೆವೋಗ್ಬುಟ್ಳು.

ಒದ್ಮೇಲೆ ಈಯಪ್ಪ ಏ, ಎಷ್ಟೊತ್ತಾಯ್ತು ಬರ್‍ಲೇ ಇಲ್ವಲ್ಲೆ ಅಂತ ಚಂಬಿಟ್ಕಂಡು ಹಿಂಗೆಳ್ದ, ಎಳ್ದ. ಆ ಚಂಬಿಟ್ಕಂಡು ಎಳದೇಟ್ಗೆ ಗುಡುಗುಡಗುಡ ಅಂತು ಕಡಾಯ್ದೊಳ್ಗೆ.

ರಾಜನ್ಮನೆಗ್ ತಿಂದು ಬಡಾಬಡಾಂತ ಉಚ್ಚೆಳೆ ನೋಡು ಅಂದ. ಅಪ್ಪಾಸಿನ್ ಮನ್ಗೋಗೆ ಇಲ್ಲ, ನೀರ್ ಕುಡ್ದೇ ಇಲ್ಲ ಅಂದ. 'ನಿನ್ನಕ್ಕನ್ ಚಿಟ್ನಾಕುಟ್ಟಾ ಬಾ' ಎಷ್ಟು ಹೊತ್ತು ಅಂದ. ಜಡ್ಡಿದ್ದೆ ಎಳೆದ. ಬಂದು ಲಟ್ನ ತಗುಲ್‌ಬುಡ್ತುಚುಂಬು. ಓಹೋ, ನನ್ಗೆ ಕೈಕೊಟ್ಬುಟ್ಲು, ಮೋಸಮಾಡ್ಬುಟ್ಲು ಅಂದು ಮಂಚುದ್ಮೇಲೆ ಮಕಡೆ ಮನಿಕಂಡ. ಅವ್ರುತಾಯಿ ಬಂದು, ಯಾಕೋ? ಏನೋ ನಿನ್ಗೆ ಬರಸಿಡ್ಲು ಅಂತ ಕೇಳಿದ್ಲು ಮಾರಾಣಿ. ನನ್ಗಾಸಾಗ್ಲಿಲ್ಲಮ್ಮ ಏನಮ್ಮ ಮಾಡದು, ಇನ್ನೊಂದ್ಸಲ ಕರಿಯಮ್ಮ ಅಂದ ನೀನಿಲ್ಲೇ ವರ್ಗ್ಗೋಗ್ಬುಟ್ರು ನಾನಿನ್ ಕರಿಯಲ್ಲ ಕಣೋ, ಮಾನರಕ್ಷಣೆ ಮಾಡ್ಕಳಕೋಸ್ಕರ ನಾನ್ ಹಾಗ್ ಮಾಡಿದ್ದೆ. ಇನ್ನೊಂದ್ಸಲ ಕರಿ ಅಂತಿ! ಸೂಳೆಮಗನೆ, ನೀನೆಲ್ಲಾರ ಹೋಗು ನಾನ್ ಕರಿಯಲ್ಲ ಅಂದ್ಲು. ಆಗ, ಆಡಿದ್ದಾಟಲ್ಲ ಅಂದ್ಬುಟ್ಟ. ಐದ್ ಜನ ವಾಲೇಕಾರ್ನ ಕರುಸ್ಬುಟ್ಟ. ವಾಲೇಕಾರ್ರು ಅಂದ್ರೆ ಪೋಲೀಸ್‌ವಾಲಾ. ವಾಲೇಕಾರ್ನ ಕರ್ಸಿದ್ದೆಯಾ, ಏ ಹೋಗಿ ಜಂಬೂರ್ ನಾಗೇಗೌಡ್ರು ಮನೆಗೋಗಿ ಬೆಳಕರಿಯೋವತ್ಗೆ ಕೋಣುನ್ ಬೆಣ್ಣೆ, ಕೋಣುನ್ ಮೊಸರು ಕೊಟ್ರೆ ಸಮ್ನಾಯ್ತು, ಇಲ್ದಿದ್ರೆ ನಿಮ್ ಕಿರೀಸೊಸೆ ದೊರೆಪಾಲು' ಅಂತ ಹೇಳ್ಬುಟ್ಬು ಬಾವೋಗು ಅಂದ. ಬಂದ್ಬುಟ್ರು. ಅವ್ರು ಗಡಗಡಗಡ್ನ ನಡುಗ್ತರೆ, ಜಂಬೂರ್ ನಾಗೇಗೌಡ್ರು. ಪಾಪ ಬಾಳ ಒಳ್ಳೇವ್ರು, ಒಬ್ಬರ ಸುದ್ದಿಗೋದವ್ರಲ್ಲ.

ಮಾವಾವ್ರೆ ನೀವ್ ಹೆದರ್‌ಕೋಬೇಡ್ರಿ. ಆಯ್ತುವೋಗಪ್ಪ ನಾನ್ ಕೊಡ್ತೀನಿ ಅಂದ್ಲು, ಆಯಮ್ಮ ಕಿರೇಸೊಸೆ. ವೋಗಪ್ಪ ನಾನ್‌ಕೊಡ್ತೀನಿ ಅಂದ್ಬುಟ್ಬು, ಅವಾಗೇನ್ಮಾಡ್ಬುಟ್ಳು? ಒಂದ್ ಗುಡ್ಲಾಕ್ಬುಟ್ಳು. ಒಂದ್ ತೆಂಗಿನ್‌ಗರಿ ತಂದ್ಬುಟ್ಲು. ಮಾವುನ್ಗೊಂದು ಪತ್ಲ ಉಡುಸ್ಬುಟ್ಲು. ಒಂದಿಷ್ಟು ನೆಲ್ಲುಲ್ಲಾಕ್ಬುಟ್ಲು. ಗುಡ್ಲಾಕಿ ಗುಡ್ಲಗೆ ಕುಂಡುಸ್ಬಟ್ಲು, ಜಂಬೂರ್ ನಾಗೇಗೌಡ್ರನ್ನ. ಆಮೇಲ್ ಬಂದ್ರು. 'ಜಂಬೂರ್ ನಾಗೇಗೌಡ್ರೆ ಅಂದ್ರು. ಇಲ್ಲಪ್ಪಾ. ಎಲ್ಲೋಗಿದಾರಮ್ಮಾ ?

ನಮ್ಮಾವಾವ್ರು ನೆರ್ದಿದ್ದಾರಪ್ಪಾ. ಏನಮ್ಮ ? ಆಹಾ ಏನನ್‌ಕಂಡಿದಿರ್ರಾ ತಾಯಿ. 'ಯಾರಾರು ಲೋಕ್ದಗೆ ಗಂಡುಸ್ರು ಮೈನೆರಿತರೇ ತಾಯಿ'? ಹಾಗೇಳು! ಹೇಲ್‌ತಿನ್ನ ಸೂಳೇಮಗನ್ಗೆ ಹೇಳೋಗಪ್ಪಾ ಹಸು ಹಾಲ್ ಕೊಡುತ್ತೆ, ಎಮ್ಮೆ ಹಾಲ್ ಕೊಡುತ್ತೆ, ಕೋಣನ ಮೊಸ್ರು, ಬೆಣ್ಣೆ ಆಗುತ್ತಾ ಹೇಲ್ ತಿನ್ನ ಹೆಡ್‌ದೊರ್ಗೆ ಹೇಳೋಗಪ್ಪ ಅಂದ್ಲು. ಅಂಗಂತಲೇ ಓಗಿ ಹೇಳುದ್ರವ್ರು.

ಆಹಾ ಇನ್ನೆಂಥಾ ಪ್ರಾಕರ್ಣೆ ಅವ್ಳು ಅಂದ್ಬುಟ್ಟಿದ್ದೇ ಓಗು ನೋಡು ಗುಂಬ್ದಾಗೆ ಅವಾಗ್ ಹುಟ್ಟಿ ಅವಾಗ್ ಬೆಳ್ದು ಉದ್ದವುಸ್ಬೇಕು, ಕುಂಬ್ಳಣ್ಣು, ನಮ್ ಊಟ್‌ದೊತ್ಕೆ ಕೊಟ್ರೆ ಸಮಾ. ಕೊಡ್ದಲೇ ಇದ್ರೆ, 'ನಿಮ್ ಕಿರೇಸೊಸೆ ದೊರೆಪಾಲು' ಎಳೋಗಂಗಂತನೆ ಅದ್ನೆ ಹೇಳಿ ಕಳಿಸ್ತಾನೆ. ಊಂ ಅಂತಳೆ ಅವ್ಳು. ಆ ಪತುರತಿ ಆಗೇನ್ಮಾಡ್ಬುಟ್ಲು? ಆ ಆರ್‌ಜನ ಮಾವ್ದೀರು ಆರ್‌ರೂಮ್‌ನಲ್ಲಿ ಮನ್ಗಿದಾರೆ ಗಂಡ ಹೆಂಡ್ತಿ, ಇವ್ಳ್‌ಗಂಡ ವೋಗ್ಬುಟ್ಬು ಪದ್ಮಾವತಿ ಸೂಳೆ

ಮನೇಲಿ ಬಿದ್ದಿದಾನೆ. ಆಯಮ್ಮಂಗೆ ಮೊದ್ಲೇ ಗಂಡನ್ ಸುಖನೂ ಇಲ್ಲ. ಆಗೇನ್ಮಾಡ್ಬುಟ್ಳು? ತಣ್ಣೀರುಯ್ಕಂಡು ಸ್ನಾನಾ ಮಾಡಕಂಡು ಮನೆ ಪ್ರದಕ್ಷಿಣೆ ಬಂದು ತನ್ನ ಪತಿ ಪಾದ ನೆನ್ಕಂಡು ಒಂದ್ ಗಡ್ಗೆ ಒಳೀಕ್ ಒಂದ್ ಕುಂಬ್ಳು ಬೀಜ ಹಾಕಿ, ಗೊಬ್ರ ಹಾಕಿ ನೀರುಯ್ದು ನಾನ್ ಒಬ್‌ತಾಯಿ, ಒಬ್ಬ್ ತಂದ್ಗೆ ಹುಟ್ಟಿ, ಒಬ್ಬುನ್ಗೆ ಸೆರ್ಗಾಕೋ ಶರಣೆ ಆದ್ರೆ, ಗಿಡವಾಗಿ, ಹೂವಾಗಿ, ಕಾಯಾಗಿ, ಒಂದ್ ಕುಂಬ್ಳಣ್ಣು ಇದ್ರು ತುಂಬಾ ಉದ್ಭವಿಸ್ಲಿ ಪರಮಾತ್ಮಾ ಅಂದ್ಲು. ಹಾಕ್ಬುಟ್ಲು. ಅದು ಕಾಯಾಯ್ತು, ಹೂವಾಯ್ತು, ಹಣ್ಣಾಯ್ತು, ಗಡ್ಗೆ ತುಂಬ ಉದ್ಭವುಸ್ತು. ಬೆಳ್‌ಕ್ಹಾದ್ದಾಗ ಬಂದ್ರು. ಜಂಬೂರ್ ನಾಗೇಗೌಡ್ರೆ ಅಂದ್ರು. ಏನಯ್ಯಾ ಕೇಳ್ಬೇಕಾದ್ದಿಲ್ಲ, ನಾವುಂಟು ನೀವುಂಟು ನಮ್ಮಾವವ್ರುನ್ನ ಮಾತ್ನಾಡಿಸ್ಲೇಬ್ಯಾಡಿ ನೀವು. ಊ, ತಗಳಿ. ಕೊಡಿ ಕುಂಬ್ಳಣ್ಣು. ತಗೋ, ಗುಂಬ ಒಡಿಬೇಡ, ತೊಟ್‌ಮುರಿಬೇಡ, ಯಾವ್ ರೀತಿ ಕುಂಬ್ಳಣ್ಣಿದೆ. ಆ ರೀತಿ ತಗಂಡು ನನ್ ಮನೆ ನ್ಯಾಸ್ತ್ರಕ್ಕೆ ಗುಂಬ ಕೊಟ್ರೆ ಸಮಾಯಿ. ಇಲ್ದಿದ್ರೆ ದಂಡಕ್‌ಗುರಿಮಾಡ್ತೀನಿ ಅಂದ್ಲು. ಏನ್ತಾಯಿ ಗುಂಬ ' ಒಡೀದೆಲೆ ಬದ್ಲಿಸಕ್ಕೆ ಆಯ್ತದ ತಾಯಿ? ಆ ಹೇಲ್ ತಿನ್ನ ನನಮಗುನ್ಗೆ ಹೇಳೋಗಯ್ಯ ಅಂದ್ಲು. ಅದ್ನೂ ಗೆದ್ಲು.

ಆಮೇಲ್ ತಿರ್ಗ ಹೇಳ್ಕಳುಸ್ದ ಹೆಡ್ಡದೊರೆ. ಏಳ್ ಮಾರುದ್ದ ಕೀರೇಸೊಪ್ಪು, ಏಳ್ ಬಂಡಿ, ಬಂಡಿ ಅಂದ್ರೆ ಗಾಡಿ, ಏಳ್ ಗಾಡಿ ಮೇಲೆ ಏಳ್ ಮಾರುದ್ದ ಕೀರೇಸೊಪ್ಪು ಉದ್ಬುವಿಸ್ಬೇಕು. ಅದುನ್ನ ನಮ್ಮ ಊಟ್ಗೊತ್ಕೆ ಕಳ್ಸುದ್ರೆ ಸರೋಯ್ತು, ಇಲ್ದಿದ್ರೆ ನಿಮ್ 'ಕಿರೇ ಸೂಸೆ ದೊರೆಪಾಲು' ಅಂತ ಹೇಳೋಗು. ಬಂದವ್ಕೆ ಅದೇಕೆಲ್ಸ, ಅವ್ಕೆ ಅದೇ ಕೇವು. ಬಂದ್ರು ಹೇಳುದ್ರು. ಊಂ, ಆಗ್ಲಪ್ಪಾ ಅಂತ ಕಳುಸುದ್ಲು. ಮಾವ್ದೀರ್ಗೆಲ್ಲ ಅಡ್ಗೆ ಊಟ ಮಾಡಿಕ್ಕಿ, ಸ್ನಾನಾ ಮಾಡ್ಕಂಡು ಏಳ್ ಇಡಿಗೊಬ್ರ ಹಾಕಿ, ಏಳ್ ಚಂಬು ನೀರ್ಹಾಕಿ, ಏಳ್ ಬೀಜ ತಾಂಡೋಗಿ ಬಿತ್ತಿದ್ಲು. ಬೆಳ್ಕರಿಯೋವತ್ಗೆ ಏಳ್ ಮಾರುದ್ದ ಏಳ್ ಬಂಡಿವಳ್ಗೆ ಉದ್ಭವಿಸ್ಬುಟ್ತು. ಬಂದ್ರು ತಗಂಡೋಗಿ, ಬಂಡುಗ ಮಡುಕ್ಸಕ್ಕಾಗ್ದು, ತಿಳಿಗ್ ಜಂಕ್ಸಕಾಗ್ದು, ಬಡ್ಡೆ ಮುಟುಕ್ಸಕಾಗ್ದು, ಯಾವ್ ರೀತಿ ಬೆಳ್ಕರಿಯೋವತ್ಗೆ ಏಳ್ ಮಾರುದ್ದ ಏಳ್ ಬಂಡಿವಳ್ಗೆ ಉದ್ಭವಿಸ್ಬುಟ್ತು. ಬಂದ್ರು. ತಗಂಡೋಗಿ, ಬಂಡುಗ ಮಡುಕ್ಸಕ್ಕಾಗ್ದು, ತಿಳಿಗ್ ಜಂಕ್ಸಕಾಗ್ದು, ಬಡ್ಡೆ ಮುಟುಕ್ಸಕಾಗ್ದು, ಯಾವ್ ರೀತಿ ಅವಿತ್ತೊ ಆ ರೀತಿ ಇರ್ಕಂಡು ನಮ್ಮರ್ಮನೆತಾವ ಬಂಡಿ ಒಡುದ್ರೆ ಸಮ್ನ. ಒಂದೇ ಒಂದು ಬಂಡೀನಾದ್ರೂ ಮೋಟಮಾಡುದ್ರೆ ದಂಡಕ್ ಗುರಿಯಾಗ್ತದಂತೆ ಅಂತ ಹೇಳ್ಬುಡ್ರಿ ಹೆಡ್‌ದೊರೆಗೆ. ನಮ್ಕೈಲಾಗಲ್ಲ ತಾಯಿ. ಇರ್ಕಳಕೆ ಅಂದ್ರು. ಓಗ್ ಮತ್ತೆ ಏಳವ್‌ನ್ಗೆ ಅಂದ್ಲು. ಅದ್ರಲ್ಲೂ ಗೆದ್ಬುಟ್ಲು. ಅಂದ್ಬುಟ್ಟು ನಮ್ಮನೆ ಊಟ್ಗೊತ್ಗೆ ಅವ್‌ರ್ಮನೆ ಎಳ್ಳಿ ಗಿಡುದ್ದೇಲೆ, ಕಾಯುಟ್ಟಿ ಗಿಡ್ದಾಗೆ ಉಪ್ಪಿನ್ಕಾಯಾಗಿ ನಮ್ಮರ್ಮನೆ ಊಟ್ಗೊತ್ಗೆ ಬಂದ್ರೆ ಸರಿಯಾಯ್ತು. ಇಲ್ದಿದ್ರೆ ಕಿರೇಸೊಸೆ ದೊರೆಪಾಲು ಅಂದ್ಬುಟ್ರು.

ಹೂಂ, ಆಗ್ಲಪ್ಪ ಕಳುಸ್ತೀನಿ. ಆಗೇನ್ಮಾಡ್ಬುಟ್ಲು? ಕೋಳಿ ಕೂಗವತ್ಗೆ ಎದ್ಬುಟ್ಟು ತಣ್ಣೀರ್ ಸ್ನಾನಾ ಮಾಡ್ಕಂಡು, ಮಡಿ ಬಟ್ಟೆ ಉಟ್ಕಂಡು, ಎಳ್ಳಿ ಮರ ಸುತ್ತ ಸುತ್ತಿದ್ಲು. ನಾನ್ ಒಬ್ತಾಯಿ, ಒಬ್ತಂದೆಗೆ ಹುಟ್ಟಿ, ಒಬ್ಬುನ್ಗೆ ಸೆರ್ಗಾಸೋ ಶರಣೆ ಆದ್ರೆ, ಆ ದುಷ್ಮಾನ್

ನನ್‌ಮಗ್ಗೆ, ಅರ‍್ಮನ್ಗೆ ಎಷ್ಟು ಉಪ್ಪಿನ್ಕಾಯಾಗ್ಬೇಕೋ ಅಷ್ಟು ಮರುದ್ಮೇಲೆ ಉಪ್ಪಿನ್ಕಾಯಿ ಆಗ್ಲಿ ಅಂದ್ಲು. ಆ ರಾಜು ನಮನ್ಗೆ ಆಗೋವಷ್ಟು ಗಿಡುದ್ಮೇಲೆ ಉಪ್ಪಿನ್ಕಾಯಿ ಆಗಿತ್ತು. ಬಂದ್ರು. ಒಡ್ಕೊಂಡೋಗಿ, ಗಿಡ ಒಡ್ಕೊಂಡೋಗಿ, ನಿಂ ಊಟುಕ್ ಎಷ್ಟು ಬೇಕು ಅಷ್ಟು ಉಪ್ಕೋಗಿಸ್ಕಂಡು ನಮ್ಮರ‍್ಮನೆತಾವ್ ವಡಿವೋಗಿ ಗಿಡನ ಅಂದ್ಲು. ತಾಯಿ, ಗಿಡವಡ್ಕಂಡೋಗಕ್ಕೆ ಸಾಧ್ಯವೇ ತಾಯಿ ? ಹೇಲ್ ತಿನ್ನ ನನ್‌ಮಗುನ್ಗೆ ಏಳೋಗು ಅಂದ್ಲು. ನಾಳೇ ದಿಸ ಊಟ ಮಾಡ್ತರಂತೆ. ನಮ್ಮನೆ ನೀರ್ ಸಾಲಕಿಲ್ಲ. ಬಾವಿ ವಡ್ಕೊಡ್‌ಬೇಕಂತೆ ನಮ್ಮರ‍್ಮನೆತಕೆ ಅಂದ್ರು. ಆಗ್ಲಿ ವಡ್ಕೊಡ್ತೀನಿವೋಗಿ. ಅಂದ್ಲು. ಸರಿ, ವಡ್ಕೊಡ್ಬೇಕಂತೆ ಅಂದ್ರು. ನಮ್ದು ಉಪ್ನೀರ್ ಬಾವಿ, ಬಾಳ ಹಗ್ಡಾಗಿದೆ. ನಿಂ ಸೀನೀರ್ ಬಾವಿ ವಡ್ಕಂಬಾವೋಗಿ. ಇಬ್ರೂನೂ, ತಕ್ಕೆ ಹಾಕಿ ವಡ್ಕಳುಸ್ತೀನಿ ಅಂದ್ಲು. ಆಗ ಹಾ ಹಾ! ತಾಯಿ ಬಾವಿನ್ ಎಳುಸ್ಕಂಡೋಗುಕಾತ್ತ ತಾಯಿ? ಹೇಲ್ ತಿನ್ನೊ ನನ್ ಮಗುನ್ಗೆ ಹೇಳೋಗ್ರಪ್ಪಾ. ಗೆದ್ದಂಗಾಗೋತ್ರಾ ಎಲ್ಲಾದ್ರಗೂವ ?

ಆಕ್ಲ ಇವ್ಳಕ್ಕುನ್ ಜುಟ್ನಾಕುಟ್ಟಾ ಅಂದಿದ್ದೆ, ಇದ್ರೊಳ್ಗೂ ನನುಗ್ ಕೊಟ್ಲಿಲ್ಲಾ ಅಂದ್ಬುಟ್ಟಿದ್ದೆ, ಅಂದ್ಬುಟ್ಟು (ಐದಕ್ಷರ ಸ್ವಾಮಿ ಏನೂ ತಿಳ್ಕಬ್ಯಾಡ್ರಿ ನೀವು) ಜಂಬೂರ್ ನಾಗೇಗೌಡ್ರುನ್ನ ಕರುಸ್ಬುಟ್ಟು ''ನೋಡು ಇದೈದ (ಐದು ವಡ್ಚಕತೆ) ವಡ್ಚ್ಕಂಬಂದ್ರೆ ಸರಿ, ಇಲ್ದಿದ್ರೆ ನಿನ್ ಕಿರೆಸೊಸೆ ನನ್‌ಪಾಲು ಅಂದ್ಬುಟ್ಟ. ಆ ಸೊಸೆಗ್ ಕೊಟ್ಬಿದ್ರೆ ಆ ತಾಯಿ ಗೆದ್ದ್‌ಬಿಡೋಳು. ಪಾಪ, ಗೊತ್ತಿಲ್ಲ ಜಂಬೂರ್ ನಾಗೇಗೌಡ್ರುಗೆ. ಒಂದು ಜೋಳ್ಗೆ ಹಣ ತುಂಬ್ಕಂಬುಟ್ಟು, ಏನ್ ಗತಿ ಮಾಡ್ಲಪ್ಪಾ ಅಂತ ಸೀಂಸೀಮೆ ಮೇಲ್ ಓಗ್ಬುಟ್ರು.

ಈವಮುನ್ಗೆ ವಡ್ಕತಾದೆ. ಶಿವ್‌ಶಿವ ಗಂಡುನ್ ಸುಖಾನೂ ನನ್ಗಿಲ್ದೆವೋಯ್ತು. ನಾನ್ ಕೆಡದೂ ಅಲ್ದೆ ನಮ್ಮಾವಪ್ರಿಗೆ ಇಂತ ಕಷ್ಟ ಕೊಟ್ನಿಲ್ಲ ಅಂದ್ಬುಟ್ಟು ಶಿವಶೋಕ ಮಾಡ್ತಾ ಇದಾಳೆ.

ಇವರು ಜೋಳ್ಗೆ ಹಣ ತುಂಬ್ಕಂಡು ಹೊಂಟೋಗ್ಬುಟ್ರಲ್ಲ? ಹೇಳಿರಲ್ಲ ಈವಮ್ಮನ್ಗೆ ಕತೆವಡ್ಚಾದ. ಆಗ ಕಣ್ಣು ಬಾಯಿ ಬಿಡ್ತಾ ಇದಾಳೆ. ಮೂರ್ ದಿಸ, ಎಂಟ್ ದಿಸ ಕಳ್ಕಂಡು ಹಣನ್ನೆಲ್ಲಾಕಳ್ಕಂಡು ಅರ‍್ಮನೇಗ ಬಂದ್ರು. ಅರ‍್ಮನೆಗೆ ಬಂದಾಗ ಮಾವಾವ್ರೆ, ನೀವ್ ಎಲ್ಲಿಗೋಗಿದ್ರಿ? ನಮ್ಗೆಷ್ಟು ಕಷ್ಟಕೊಟ್ರಿ ಮಾವಾವ್ರೆ ನೀವು? ಶಿವ ಶಿವ, ಅಮ್ಮ ಒಂದು ಜೋಳ್ಗೆ ಹಣ ತಗಂಡೋಗಿದ್ದೆ ತಾಯಿ. ಸೀಮ್‌ಸೀಮ್ ತಿರುಗ್ದೆ ತಾಯಿ. ಯಾತುಕ್ಕಾಗಿ ವೋಗಿದ್ರಿ? ಐದ್‌ಕತೆ ವಡ್ಚ್‌ಕೊಡು ಅಂತ ಹೇಳಿದ್ದ. ತಾಯಿಯೆಲ್ಲಾರ್ಗೂ ಕೇಳ್ದೆ. ಯಾರೂ ನಮ್ಗೆ ಒಡ್ಚಕಾಗಲ್ಲ ಅಂದ್ಬುಟ್ಬುರು ಅಂದ್ರು. ಬನ್ನಿ ಸ್ನಾನಾ ಮಾಡಿ. ನೀವು ಸ್ನಾನಾ ಮಾಡ್ಬುಟ್ಟು ಮುಂಚೆ ನೀವ್ ಊಟಾ ಮಾಡ್ಬುಡಿ. ಊಟಾ ಮಾಡ್ಬುಟ್ಟು ಏನಿದ್ರೂ ನಿಂಕಷ್ಟಸುಖ ಹೇಳ್ತೀನಿ ಅಂದ್ಬುಟ್ಲು. ಮಾವುನ್ಗೆ ಸ್ನಾನಾ ಮಾಡುಸ್ಬುಟ್ಟು, ಊಟುಕ್ಕಿಕ್ಬುಟ್ಟು, ಜಂಬೂರ್ ನಾಗೇಗೌಡ್ರಿಗೆ. ಊಟ ಮಾಡಿದ್ಮೇಲೆ, ಕತ್ರುಸ್ದ ಕಳಿಯಡ್ಕೆ, ಉತ್ರುಸ್ದ ಬಿಳಿಯಲೆ,

ನಾಗ್ಮಂಗಲ್ದ ಕೆನೆಸುಣ್ಣ ತಗಂಡೋಗಿ ವೀಳ್ಯ ಕೊಟ್ಲು. ಆ ವೀಳ್ಯ ಆಕ್ಕಂಡಾದ್ಮೇಲೆ, ಏನೇಳುದ್ರು, ಮಾವಾವ್ರೆ ? ಅರಗಿಣಿ, ಮರಗಿಣಿ ಅಂತ ಹೇಳಿದ್ರು ತಾಯಿ. ಮರ್ತ್ಬಿಟ್ಟಿದ್ದೀನಿ ಕಣವ್ವಾ ಅಂದ್ರು. ಈಗ ಹ್ಯಾಗೆ ಮಾಡ್ಬೇಕು? ನಡಿ, ಗಾಜಿನ್ ಕಂಬ ಮರೆಮಾಡ್ಕಂಡ್ ನಾನ್ ಬತ್ತೀನಿ. ಬಿಸ್ಲು ಮಾಡಿಮೇಲೆ ಕೂತಿದ್ದಾನೆ ರಾಜ. ಕಾಣುಸ್ಕಂಡದಂತೆ ಬತ್ತೀನಿ. ಯಾವ್ ವಡ್ಚ್ಕತೆ ವಡ್ಚುಕೊಟ್ಟಿದ್ದಿ ಹೇಳಪ್ಪಾ ಇನ್ನೊಂದ್ಸಾರಿಯಾ ಅನ್ನು ನಾನ್ ಕೇಳುಸ್ಕಂತ್ತೀನಿ ಅಂದ್ಲು. ಬಂದ, ಸ್ವಾಮಿ ಅಂದ. ಬಂದ ಯಾರೂ? ಜಂಬೂರ್ ನಾಗೇಗೌಡ್ರು. ಏನ್‌ಸ್ವಾಮಿ, ವಡ್ಚುಸ್ಕಂಬಂದ್ರಿ ನೀವು? ನಿಮ್ ಸೊಸೆ ನನ್ ಪಾಲೆ ಯಾವಾಗಿದ್ರು ಅಂತ ಅಂದ. ಅವಾಗ್ಲೂನೂ. ಈಯಮ್ಮ ಗಾಜಿನ್ಕಂಬ ಮರೆ ಮಾಡ್ಕಂಡೋದ್ಲು. ಅವ್ನು ಬಿಸ್ಲು ಮಾಡೀಮ್ಯಾಕೆ ಹತ್ತ್ಹೋದ. ಅವುರು ಮಾವಾವ್ರು, ವಡ್ಚುಸ್ಕಂಬರಕಾಗ್ಲಿಲ್ಲ ಸ್ವಾಮಿ, ಇನ್ನೊಂದ್ಸಾರಿ ಹೇಳಿ ನನ್ಗೆ ಗೊತ್ತಾಗ್ಲಿಲ್ಲ ಸ್ವಾಮಿ, ಇನ್ನೊಂದ್ಸಾರಿ ಹೇಳಿ ಅಂದ. ಅರಗಿಣಿ, ಮರಗಿಣಿ, ಬೂದ್‌ಗಿಣಿ, ಇಂತಗಿಣಿ, ಅಂಥಗಿಣಿ, ಅಂತ ಏಳ್ದ ವಡ್ಚ್ ಕೊಟ್ಬುಟ್ರು. ಅವ್ಳು ಅರ್ಥ ಮಾಡ್ಕಂಬುಟ್ಳು ಕತೆಯಾ. ಈವಮ್ಮ ಕಲ್ಕಂಬುಟ್ಲು, ಮಾವಾವ್ರಲ್ಲಿದ್ದಂಗೆಯಾ ಗಾಜಿನ್‌ಕಂಬ ಮರೆ ಮಾಡ್ಕಂಡೆಯಾ ಪಟ್ಟಂತ ಅರ್ಮನೆಗೆ ಬಂದು ಸೇರ್ಕಂಬುಟ್ಲು. ''ನೋಡಯ್ಯಾ, ಇಲ್ಲಿ ಮೂರ್ ದಿಸುಕ್ಕೆ ನೀನು ಈ ಕತೆ ವಡ್ಚ್ಕೊಟ್ರೆ ಸಮ್ನಾಯ್ತು, ಇಲ್ದಲೆ ಇದ್ರೆ ನಿನ್ ಸೊಸೆ ನನ್‌ಪಾಲು''.

ಓಣ್ ಓಣಿ ರಾಜರಾಜರ್ನೆಲ್ಲಾ ಕರುಸ್ತೀನಿ ನಾನೂ ಅಂದ. ಅವ್ರ್ ಸೊಸೆ ಇವ್ನ ಪಾಲ್ ಮಾಡ್ಕಂಬೇಕಾರೆ ಅಷ್ಟು ಸುಲ್‌ಭಾಗಿ ಮಾಡ್ಕಳಕಾಯ್ತದ್ರ? ಒಂದಳ್ಳಿಗ್ ಒಬ್‌ರಾಜ ಬರ್ಬೇಕು. ಹದ್ನಾರ್ ಪಟ್ಣುಕ್ಕೂ ಹದ್ನಾರ್ ರಾಜುರ್ಗೆ ವಾಲೆ ಬರ್ದುಬುಟ್ಟ. ಬರ್ಬೇಕ್ ನೀವು, ಇಂತ ಜಂಬೂರ್‌ನಾಗೇಗೌಡ್ರ ಕಿರೇಸೊಸೆ ನನ್ನ ವಸಮಾಡ್ಕಂತಿನಿ. ನೀವು ದಯ್ವಿಟ್ಟುಬರ್ಬೇಕು ಅಂತ ಕರುಸ್ಬುಟ್ಟ.

ನೀನು ಇನ್ ಮೂರು ದಿಸ್ದಟ್ಗೆ ವಡುಚ್‌ಕೊಟ್ರೆ ಸಮ್ನಾಯ್ತು, ಇಲ್ದಿದ್ರೆ ನಿನ್ ಸೊಸೆ ನನ್ ಪಾಲು ಕಣಯ್ಯ ಜಂಬೂರ್ ನಾಗೇಗೌಡ್ರೆ ಅಂತ ಹೇಳ್ಬುಟ್ರು. ಆಗಲಪ್ಪಾ ಅಂತ ಹೇಳ್ಬುಟ್ರು, ಬಂದ್ಬುಟ್ರು ಇವ್ರು.

ಹದ್ನಾರಳ್ಳಿ ರಾಜರಾಜರ್ಗೆಲ್ಲಾ ಕಾಗ್ದ ಕಳುಸ್ಬುಟ್ರು. ಅವ್ರು ಹದ್ನಾರ್ ಪಟ್ಣದಲ್ಲಿ ಹದ್ನಾರ್ ರಾಜ್ರು ಬಂದ್ಬುಟ್ರು. ಈ ಊರ್ ಬಾಕ್ಲನಲ್ಲಿ ರಾಡ್‌ಬಾಕ್ಲು ಹಾಕುಸ್ಬುಟ್ರು ತಗಿಯವಷ್ಟಿಲ್ಲ ಅವ್ರು ವಡ್ಚತಕನೂ. ಆ ರೀತಿಯಾಗಿ ಹದ್ನಾರಳ್ಳಿ ರಾಜರ್ನೆಲ್ಲಾ ಕರುಸ್ಬುಟ್ರು. ಕರುಸ್ಬುಟ್ರು ರಾಡ್ ಬಾಗ್ಲುಹಾಕುಸ್ಬುಟ್ರು.

ಇಂದ್ಲು ಕಾಲ್ದಲ್ಲಿ ರಾಡ್ ಬಾಗ್ಲು ಅಂತ ಇರದು. ರಾಡ್ ಬಾಕ್ಲು ಹಾಕುಸ್ಬುಟ್ಬು ಬೆಳ್ಕರುದ್ರೆ ರಾಡ್ ಬಾಕ್ಲು ತೆಗೀಬೇಕು ನೋಡಿ. ಅಲ್ಲೇ ಎರ್ಡಾವಂದಾ ಎಲ್ಲಾ ಇಂದ್ಲು

ಕಾಲ್ದಗಿತ್ತು. ಕೋಟೆ, ಕೋಟೆ ಸುತ್ತ ರಾಡ್ ಬಾಕ್ಲ ಮಾಡಿ, ರಾತಿನಾಗ ಪಟೇಲ ಬಂದು ಬಾಗ್ಲಾಕ್ಬುಟ್ರೆ, ಇನ್ನ ಬೆಳ್ಕರ್ದಗ್ಲೆಯಾ ರಾಡ್ ಬಾಕ್ಲು ತೆಗಿಯದು. ಎಲ್ಲಾ ವಳ್ಗಡೇಲೆ ಆಗದು, ಕೋಟೆ ಒಳ್ಗೆ ಇರದು ಆ ರಾಜನ್ ಕಾಲ್ದಗೆ. ಆ ರೀತಿಯಾಗೇನ್ಮಾಡ್ಬುಟ್ರು ಕ್ವಾಟೆ ರಾಡ್‌ಬಾಕ್ಲ ಹಾಕುಸ್ಬುಟ್ರು. ಇವ್ರು ಏನ್ ಬೇಕ್‌ಬೇಕಾದಂತ ರಾಜ ರಾಜರ್ನೆಲ್ಲಾ ಕರ್ಸಿ, ಬೆಂಚು ಕುರ್ಚಿ ಹಾಕ್ಸಿ ಎಲ್ಲಾ ಬಾಕುನ್ಲಲ್ಲಿ, ಬಾಕ್ಲುತಗ್ದು ಬರ್ಬೇಕಲ್ಲ? ಆಯಮ್ಮ ಕತೆ ವಡೊಚ್ಕಂಡು ಈ ಬೇಕ್‌ಬೇಕಾದವ್ನೆಲ್ಲಾ ಕರ್‌ಸ್ಕಂಡವ್ರೆ? ಪಾಲಮಾಡ್ಕಂಬೇಕಲ್ಲ? ಅವ್ನು ಪಾಲ ಮಾಡ್ಕಂಬೇಕಾದ್ರೆ ವಸ ಮಾಡ್ಕಂಬೇಕಲ್ಲ? ಅಷ್ಟು ಸುಲಬ್‌ನಾ ಸೊಸೆಯ ಮಾಡ್ಕಂಬೇಕಾದ್ರೆ ಅಂದ್ಬುಟ್ಟು, ಕೂತಿದಾರೆ ರಾಡ್ ಬಾಕ್ಲುನೆಲ್ಲ ಹಾಕ್ಕಂಡು. ಬಂದ್ರು ಇವ್ರು.

ಈಯಮ್ಮ ಏನ್ ಮಾಡುದ್ಲು? ಎಂಟುಗಂಟೆ ಹೊತ್ತಾಯ್ತು. ಕುರುಡ್ರು, ಕುಂಟ್ರು, ಏಸ್ ಜನ ಇದರೊ ಶಿವ್ನೆ, ನನ್ನಿಂದ ಅವ್‌ರ್ಗೆ ಊಟ ಇಲ್ದಂಗಾಯ್ತಲ್ಲಾ ಪರಮಾತ್ಮಾ, ಗೊತ್ತಾಗ್ಲಿಲ್ಲ ನಾನ್ ಮೊದ್ಲೇ ಕಂಡಿಲ್ಲ. ನಾನ್ ಕೆಡದೂ ಅಲ್ದೆ ಈ ಪಟ್ಣದ್ ಜನ್ರೂ ಇಂಗಾದ್ರಲ್ಲಪ್ಪಾ ಅಂದ್ಬುಟ್ಟು ಆಗೇನ್ಮಾಡಿದ್ಲು? ಎರಡು ಅಕ್ಕಿ ರೊಟ್ಟಿ ಹಾಕಂಡ್ಲು, ಎರಡು ನಿಂಬೆಹಣ್ಣು ತಗಂಡ್ಲು. ಸರಿ ಒಂದು ಕೊಡೆ ತಗಂಡ್ಲು, ಒಂದು ರುಮಾಲ ತಗಂಡ್ಲು, ಒಂದ್ಜೊತೆ ಚಪ್ಲಿ ತಗುಂಡ್ಲು, ಈ ನೀರ್ ತತ್ತರಲ್ಲ ಗುಂಡಿಗಳು? ನೀರ್ ತರಗುಂಡಿವಳೀಕ್ ಎರಡ್ ರೊಟ್ಟಿಹಾಕ್ಕಂಡ್ಲು, ಎರಡು ನಿಂಬೆ ಹಾಕ್ಕಂಡ್ಲು.

ಕಾಲ್ಗಾಕ್ಕಳ ಚಪ್ಲಿ ಹಾಕ್ಕಂಡ್ಲು, ಕೊಡೆ ಹಾಕ್ಕಂಡ್ಲು, ರುಮಾಲ ಹಾಕ್ಕಂಡು ತಲೆತುಂಬಾ ಸೆರಗಾಕ್ಕೊಂಡು ಬಂದ್ಲು. ಓಣಿ ಓಣಿ ರಾಜ ರಾಜ್ರೆಲ್ಲಾ ಕೂತಿದ್ದಾರೆ. ಎಲ್ಲಿ ? ಬಾಗ್ಲಲ್ಲಿ ಮೇಜಾಕವ್ರೆ, ಟೇಬಲಾಕವ್ರೆ. ಕೂತವ್ರೆ. ಕೂತಿರ್ವಾಗ, ಬಂದ್ಲು ಈಯಮ್ಮ ಕಂಕ್ಳಗೆ ಗುಂಡಿ ಇರಿಕ್ಕಂಡು, ತಲೆತುಂಬಾ ಸೆರಗಾಕ್ಕೊಂಡು, ಮಾನವಸ್ಥೆ ಬಂದಳು. ಬಂದು ರಾಡ್ ಬಾಕ್ಲು ತಗುದ್ರು. "ಬಂದ್ಲುಕಾಣಣ್ಣಾ, ಬಂದ್ಲುಕಾಣಣ್ಣಾ" ಅಂತ ಚಪ್ಪಾಳೆ ಹೊಡ್ದ ಇವ್ನು. ಯಾರು? ಈ ರಾಜನ್ ಮಗ. ಏ, ಬರೆ ಚಪ್ಪಾಳೆ ಯಾಕೊಡಿತೀಯೋ ತಗೊಳೋ ರೊಟ್ಟಿಯಾ, ಅಂತ ಎಸುದ್ಲು. ಗುಂಡಿ ಒಳೀಕಾಕ್ಕಂಬಂದಿದ್ಲಲ್ಲ ಎರಡಕ್ಕಿರೊಟ್ಟಿ ಎಸುದ್ಲು. ಬೇಷ್ ಅಂತ ಮೀಸೆ ತಿರುವ್ದ. ಏ, ಬರೆ ಮೀಸೆ ಯಾಕ್ ತಿರುವ್‌ತ್ತೀಯ ತಗಳೋ ನಿಂಬೆಹಣ್ಣ ಅಂತ ಕೊಟ್ಲು. ಭಲಾ, ಭಲಾ, ಅಂತ ತಲೆ ಬಡ್ಕಂಡ. ಬರೆತಲೆ ಯಾಕ್ ಬಡ್ಕಂತೀಯಾ ತಗಳೊ ರುಮಾಲಸುತ್ಕೊ ಅಂತ ಕೊಟ್ಲು. ಕೂತ್ತಿತವ್ನೆ ಕಾಲ್ಡಿಂಗ್ ಬಡ್ದ. ಬರೇ ಕಾಲ್ಯಾಕ್ ಬಡೀತಿಯಾ ತಗೋ ಚಪ್ಲಿ ಹಾಕ್ಕೊ ಅಂತ ಕೊಟ್ಲು. ತಲೆ ಮೇಲೆ ಕೈ ಮುಗುದ. ಬರೆ ಕೈ ಯಾಕ್ ಮುಗಿತಿ ತಗೋ ಕೊಡೆ ತಗೊ ಅಂದಳು. ಆಗ ತಾಯಿ, ಮಹಾಪತಿವ್ರತೆ ಶಿರೋಮಣಿ ತಾಯಿ ನೀನು. ನಮ್ಮಂಥೋರ್ಗೆ ಬುದ್ಧಿ ಕಲ್ಸಿದ್ದೀಯಾ. ಈ ಪಟ್ಣಕ್ಕೆ ನೀನ್ ಅಕ್ಕ ಆಗು, ನಿನ್ ತಮ್ಮ ಆಗ್ತೀನಿ. ನನಗ್ಗೆ ಇದ್ದಿಬುದ್ಧಿ ಹೇಳ್ಕಂಡು ನಾನೂ ನೀನು ಅಕ್ಕ ತಮ್ಮಂದಿರಾಗಿ ಸುಖ್ದಿಂದಾ ಬಾಳನ. ನೀವು ನನ್ಗೆ ಆಶ್ರಯಿಸಬೇಕು ಅಂತ ನಮಸ್ಕಾರ ಹೊಡ್ದು ಕೈ ಮುಗ್ದು, ಬಂದಂತಾ ಮಾನ್ಯೇವ್ರೆಲ್ಲಾ ತಾಯಿ ನಿನ್ನಂಥ ಮಾ

ಪತುವ್ರತೆಯಿಂದ ಸ್ವಾಮಿ ಹುಟ್ತನೆ, ಸ್ವಾಮಿ ಮುಳುಗ್ತನೆ ತಾಯಿ, ಅಂತ ಬಂದಂತ ಪುಣ್ಯಾತ್ಮರೆಲ್ಲಾ ಆಶ್ರಯಿಸಿ, ಅವ್ರುಗೆ ಏನೇನು ಬಹುಮಾನಗೂಳ ಕೊಡ್ಬೇಕೋ ಕೊಟ್ಟು, ಇವ್ನು, ಯಾರು ? ರಾಜುನ್‌ಮಗ, ಕೊಟ್ಟ್ ಕಳುಸ್ಬುಟ್ಟ.

ಇನ್ನು ಅರ್ಮನೆ ಒಳ್ಗೆ ಈಯಮ್ಮ ಎಲ್ಲಾ ಮುಗಿತೆಲ್ಲ ತಂಗಿ, ಅಕ್ಕ ಅಂತ ದಮ್ಮಯ್ಯ ಗುಡ್ಡೆ ಇಕ್ಬುಟ್ನಲ್ಲಾ, ನನುಗ್ ಬುದ್ಧಿ ಕಲ್ಸಕ್ಕ ಅಂತ ಹೇಳ್ಬುಟ್ನಲ್ಲ ?ಆವಾಗ ಮನೆ ಸೇರ್ಕಂಡಾಗ ಇವ್ಳೂ ಎಲ್ಲಾ ಗೊತ್ತಾಗಿ ಪದ್ಮಾವತಿ ಸೂಳೆ ಮನೇ ಬಿಟ್ಟು ಬಂದು ನಂದು ತಪ್ಪಾಯ್ತು ಅಂದು ಅವುಳ್ನ ಸುಖ್ವಾಗಿಟ್ಕಂಡ.

ಹೇಳಿದವರು : **ರಂಗಮ್ಮ,** 60ವರ್ಷ, ಒಕ್ಕಲಿಗರು, ತಿಪ್ಪಶೆಟ್ಟಿಕೆರೆ, ತುರುವೇಕೆರೆ ತಾಲ್ಲೂಕು.

# ೫. ಗುಲಗಂಜಿ ಮಾದೇವಿ

ಸಿಮೊಗ್ಗದಂತದೊಂದು ಪಟ್ನ. ಆ ಪಟ್ನದಾಗೊಬ್ಬ ರಾಜ. ಆ ರಾಜಗೆ ಇಬ್ಬಾರು ಗಂಡ್ಮಕ್ಳಿದ್ರು. ಹೆಣ್ಮಕ್ಳಿಲ್ಲ. ಗಂಡ್ಮಕ್ಳಿಬ್ರು ಪ್ರಾಬಲ್ಯಕ್ಕೆ ಬಂದ್ರು. ಸಾಲಿಗೆ ಹಾಕಿದ್ರು. ಸಾಲಿಗೆ ಹಾಕಿದಾಗ ಭರ್ತಿ ವಿದ್ಯಾ ಹತ್ತಿಬಿಡ್ತು ಇವ್ರಿಗೆ. ಆವಾಗ ಅವರ್ನ ಹೊಡಿಯೋದು ಇವರ್ನ ಹೊಡಿಯೋದು, ಕಿತಾಪತಿ ಮಾಡೋರು. ಕೇಳಿದ ಪ್ರಶ್ನೆಗೆ ಉತ್ರ ಹೇಳೋರು. ಬರ್ಲ್ಲದ್ದೊವ್ಕೆ ಮೂಗುಹಿಡ್ದು ಕಪಾಳಕ್ಕೆ ಹೊಡ್ಯೋರು ಮೇಷ್ಟ್ರು. ಆವಾಗ ಹುಡುಗ್ರು ಒಂದಿನ ಹೊಡಿಸ್ಗಂದ್ರು, ಎಲ್ಡ್ ದಿನ ಹೊಡಿಸ್ಗಂದ್ರು, ಮೂರ್ನೆ ದಿನಕ್ಕೆ ತಿರುಗಿ ಬಿದ್ರು. 'ಏ ಅಕ್ಕತಂಗೇರಿಲ್ಲದ ಹಾಟ್‌ಕಳ್ಳ ನನ್ ಮಕ್ಳ. ಅಕ್ಕ ತಂಗೇರಿಲ್ಲದ ಸೂಳೆಮಕ್ಳ. ನಿಮ್ಮ ಹೊಟ್ಟ್ಯಾಗು ಅಕ್ಕ ತಂಗೆರಿದ್ದುದ್ರೆ ನನ್ಯಾಕ್ ಹೊಡಿತಿದ್ರಿ' ಅಂತ ಬೈದುವು.

ಆವಾಗ ಅವ್ರೇನ್ಮಾಡಿದ್ರು? ಬಂದ್ರು ಮನಿಗೆ ಪಿರ್ಯಾದಿ ತಗಂದು. 'ಅಪಾ... ನನಿಗೆ ಹಿಂಗ್ ಬೈದ್ರು, ಹಂಗ್ ಬೈದ್ರು. ನಾನು ಸಾಲೆ ಓದದುಲ್ಲ. ಬೈಯಿಸ್ಗಂದ್ ಸಾಲೆ ಓದ್ಬಕ? 'ಅಂತ ಅವ್ರಪ್ಪಂತಾಕೆ. 'ಅಯ್ಯೋ ನನ್ಮಕ್ಳ ನಮಿಗೆ ಹೆಣ್ಮಕ್ಳಿಲ್ದುದ್ದು ಖರೆ. ಅವ್ರು ಅನ್ನದು ಖರೆ. ಮತ್ತೆ ನಿಮಗೆ ಬ್ಯಾರೆ ಸಾಲೆಗುಡೆ ಕಟ್ಸಿ, ಬ್ಯಾರೆ ಮೇಸ್ಟ್ರು ತಂದು ಓದುಸ್ತೇನಿ, ಬಿಡದುಲ್ಲ. ರಾಜ ನಾನು. ನನ್ನ ಮಕ್ಳನ್ನ ದಡ್ರನ್ ಮಾಡದುಲ್ಲ, ಅಂತಂದು ಬ್ಯಾರೆ ಮೇಸ್ಟ್ರುನ್ ತಂದು, ಸಾಲೆಗುಡೆ ಕಟ್ಸಿ ಇಬ್ರನ್ನು ಬೇರೆನೆ ಓದ್ಸಿದ.

ಇದ್ದ ಬುದ್ಧಿ ಎಲ್ಲ ಕಲ್ತು. 'ಅಪ್ಪಾ ಯಾಕೊ ನನಿಗೆ ಓದಂಗಾಗಿಲ್ಲ. ಓದಿ ಓದಿ ಯಾಕೊ ಬೇಜಾರಾಗಿಬಿಡ್ತು. ನಮಿಗೆ ಮನುಷ್ಯಾಗೊಂದೊಂದ್ ಸಾವ್ರ ದುಡ್ಡು ಕೊಡು. ನಾವು

ಮೂಡ ಮಲ್ಲಾಡಕೆ ಯಾಪಾರ್ಕೆ ಹೊಗ್ತೇವಿ' ಅಂದ್ರು. ಅಯ್ಯೋ ನನ್ಮಕ್ಳ ನಿಮಗೆ ಯಾಪಾರ ಮಾಡೋದು ಗೊತ್ತಾ ? ಯಾತುಗೆ ಬೇಕು ನಿಮಗೆ? ಇನ್ನೊಂದಿಷ್ಟು ಓದಿ ನೀವೇನಾರ ಒಂದ್ ನೌಕ್ರಿ ತಗಂದ್ರೆ, ನಮ್ಮ ಕಣ್ಣೆದ್ರಿಗೆ ಇರ್ತಿರ್ರಪಾ.... ಯಾಪಾರ ಸಾಪಾರ ಬ್ಯಾಡ' - ಅಂತ ತಂದೆ ತಾಯಿ ಬಾಳ ಹೇಳಿದ್ರು. ಅವ್ರು ಕೇಳ್ಳಿಲ್ಲ. ಅಮ್ಯಾಗೆ 'ನಿಮಿಗಿಷ್ಟ ತಿಳ್ದಂಗ್ ಮಾಡ್ಕಳ್ರಪ' ಅಂದು ಒಂದ್ ಸೆರಗಿನಾಗೆ ರೊಟ್ಟಿ, ಒಂದ್ ಸೆರಗಿನಾಗೆ ಮುತ್ತು, ಒಂದ್ ಸೆರಗಿನಾಗೆ ಎಲೆ ಅಡಿಕೆ ಕಟ್ಟಿದ್ರು - ಹೆಂಗುಸ್ರು. ತಮ್ಮ ಪದ್ಧತಿ ಇರ್ತತಲ ಹಂಗೆ ಎಲ್ಲ ಮಾಡಿ ಆಶಿರ್ವಾದ ಮಾಡಿದ್ರು. ಮನುಷ್ಯಾಗೊಂದೊಂದ್ ಸಾವ್ರ ರೂಪಾಯಿ ಕೊಟ್ರು. ಮನುಷ್ಯಾಗೊಂದೊಂದ್ ಕುದ್ರೆ ಕೊಟ್ರು. ಬಟ್ಟೆ, ಬರೆ ಹಕ್ಕೆಂದ್ರು. ಹೋದ್ರು ಮೂಡ ಮಲ್ಲಾಡ ಯಾಪಾರ್ಕೆ.

ಮಾರ್ತ ಮಾರ್ತ ಕೊಡ್ತ ತಗಂತ ಒಬ್ಬೊಬ್ರಿಗೊಂದೊಂದ್ ಸಾವ್ರ ರೂಪಾಯಿ ಉಳೀತು. ಅಷ್ಟತ್ಗೆ ಒಂದ್ ವಾರಾಗಿತ್ತು. ತಿರುಗಿ ಬಂದ್ರು. ಬಂದು 'ಅಪ್ಪಾ ನಿನ್ ರೂಪಾಯಿ ನೀನ್ ತಗಳಪ್ಪಾ, ನೀನ್ ಕೊಟ್ಟೋವ' - ಅಂತ ತಲಾಗೊಂದೊಂದ್ ಸಾವ್ರ ತಂದು ತಂದೆ ಕೈಯಾಗೆ ಕೊಟ್ರು. ಲಾಭ ತಾವಿಟ್ಕಂದ್ರು. ಒಂದ್ ವಾರಿದ್ರು. ಆಮ್ಯಾಲೆ 'ಅಪ್ಪಾ ನಾವ್ ಮತ್ತೆ ಹೋಗ್ತೇವಿ ಯಾಪಾರಕ್ಕೆ, ನಮಗೆ ಆಶಿರ್ವಾದ ಮಾಡ್ರಪಾ' ಅಂದ್ರು. ತಂದೆ ತಾಯಿ ಆಶಿರ್ವಾದ ತಗಂದ್ರು. ಮತ್ತೆ ಹೋಗಿ ಬಿಟ್ರು ಯಾಪಾರ್ಕೆ.

ಮತ್ತೆ ಹಿಂದೆ ಹೆಂಗೆ ಯಾಪಾರ ಮಾಡ್ಕೆಂತ ಮಾಡ್ಕೆಂತ ಹೋಗಿದ್ರೊ, ಹಂಗೆ ಮಾಡ್ಕೆಂತ ಮಾಡ್ಕೆಂತ ಹೋದ್ರು. ಹೋದಾಗ ಮತ್ತು ಹಂಗೆ ಲಾಭಾ ಬಂತು. ಸಾವ್ರ ಸಾವ್ರ ರೂಪಾಯಿ ಉಳೀತು. ಅಪಟಿಗಂತ್ಕು ತಮ್ಮ ಅಪ್ಪ ಕೊಟ್ಟಿದ್ದ ಹಂಗೆ ಓಯ್ದ್‌ಕೊಟ್ಟಿವಿ, ಇಪಟಗೇನ್ಮಾಡನ ? ನಮಿಗೆನ್ ಮನಿಯಾಗೆ ಬೇಕಾದೋಟ್ ಬಿದ್ದತೆ. ಬಾ ಅಂತಂದು ಶಿಕಾರಿಪುರದಂತ ಪ್ಯಾಟಿಗೋಗಿ, ತಮ್ಮ ನೀ ಆಚೆ ಪೇಟ್ಯಾಗೆ ಬಾ, ನಾ ಈಚೆ ಪ್ಯಾಟ್ಯಾಗೆ ಬರ್ತೇನಿ. ನನಿಗೆ ಕಣ್ಣಿಗೆ ನೆಟ್ಟಿದ್ದ ನಾ ತಗಂತೀನಿ ಅವ್ಗೆ. ನಿನಗೆ ಕಣ್ಣಿಗೆ ನೆಟ್ಟಿದ್ದು ನೀತಗ ಹೋಗಾನ ಮನಿಗೆ ಅಂತಂದು ಬಂದ್ರು. ತಮ್ಮ ಆಚೇಲಿ ಪ್ಯಾಟ್ಯಾಗೆ ಬಂದ. ಅಣ್ಣ ಈಚೇಲಿ ಈ ಪ್ಯಾಟ್ಯಾಗೆ ಬಂದ. ತಮ್ಮ ಹೂವ್ ತಗಂದ, ಹಣ್ ತಗಂದ, ಸೀರೆ ತಗಂದ. ಕುಬುಸ ತಗಂದ. ಎಲ್ಲ ತಗಂದ, ಅಣ್ಣ ಈ ಪ್ಯಾಟ್ಯಾಗೆ ಬರ್ತುದ್ನಲ್ಲ ಅಲ್ಲಿ ಒಂದು ಮುದ್ಕಿ ಪುಟ್ಯಾಗೆ ಗುಲಗಂಜಿ ಇಟ್ಕಂಡ್ ಕುಂತುತ್ತು. ಆವಾಗ ಇವ್ನು - 'ಅಜ್ಜಿ ಅವು ಯಾತುಗೆ ಬರ್ತಾವಜ್ಜಿ ಗುಲಗಂಜಿ ? ' ಅಂತ ಕೇಳ್ದ. ಅದ್ಕೆ ಆ ಅಜ್ಜಿ

'ಇವ ಹೆಣ್ಮಕ್ಕಿಲ್ದೋರು ತಗಂದೋಗಿ ಇದುನ್ನ ಒಪ್ಪು ನಡೆ-ನುಡಿಯಿಂದಾನ ಮನೆ ಮಾರು ಬಳ್ಕಂದು, ಇವುನ್ನ ಸಲ್ಲಿಸಿದ್ರೆ ಗುಲಗಂಜಿ ಮಾದೇವಿಯಂತ ಹೆಣ್ಮಗಳು ಹುಟ್ತಳಪ್ಪ. ಅದಕಾಗಿ ಎಲ್ಲಾರು ತಗಂದೋಕ್ತಾರೆ. ಅದ್ಕೆ ಇಟ್ಕಂದು ಮಾರ್ತಾಯಿದೇನಿ, ಅಂತು ಮುದ್ಕಿ.

'ನನಿಗು ಅಕ್ಕ ತಂಗೇರಿಲ್ಲಲ ಏನ್ಮಾಡದು? ಏನರ ಹಣ್ಣು ಹಂಪ್ಲು ಒಯ್ದ್ರೆ, ತಿಂದ್ ಹಾಕ್ತೇವಿ. ಸೀರೆ ಕುಬಸ ಒಯ್ದ್ರೆ ಹರ್ದೋಕ್ತಾವೆ. ತಂಗಿದ್ರೊಂದ್ ಬೆಲೆ ಉಳಿತತೀಂದು

''ಏನಾಕತಜ್ಜಿ ಇದಕ್ಕೆ ಬೆಲೆ ?'' ಅಂದ.

'ತಮ್ಮ ಇದುಕೊಂದ್ ಸಾವ್ರ ರೂಪಾಯಿ ಆಕತೆ ನೋಡು' ಅಂತು ಅಜ್ಜಿ. ಸಾವ್ರ ರೂಪಾಯಿ ಲಾಭ ಬಂದುದ್ದಿತ್ತಲ್ಲ? ಅದುನ್ ಕೊಟ್ಟು ತಗಂದ ಗುಲಗಂಜೀನ. ತಗಂದ್ ಬಂದು, ಬಸ್‌ಸ್ಟಾಂಡಿಗೆ ಕೂಡ್ಕೆಂದ್ರು. ನೀನೇನ್ ತಂದೆ ತಮ ಅಂತ ಇವ್ನ ಕೇಳ್ದ. ನೀನೇನ್ ತಂದೆ ಅಣ್ಣ ಅಂತ ಅವ್ನ ಕೇಳ್ದ. ಹಿಂಗಿಂಗೇಂತ ಮಾತಾಡ್ಕೆಂದ್ರು. 'ನಡಿ ಹೋಗಾನ. ಮನಿಗೋಗಿ ಅವ್ವಗೆ ಕೊಟ್‌ಬಿಡಾನ. ನಮಿಗೆ ಗುಲಗಂಜಿ ಮಾದೇವಿ ತಂಗಿ ಹುಟ್ತಾಳಂತೆ, ಹೋಗಾನ ನಡಿ' ಅಂದು ಕುದ್ರೆ ಹತ್ಕೆಂದು ಬಂದ್ರು.

ಕುದ್ರೆ ಹತ್ಗೆಂದ್ ಬರತ್ಗೆ ಅಯ್ಯೋ ನನ್ ಮಕ್ಳು ಬಂದ್ರೂಂತ ಕುಷಿಯಾತು ತಂದೆ ತಾಯಿಗೆ. ಅವರ್ನ ಆನಂದೈಶ್ವರ್ಯದಿಂದ ಬರಮಾಡ್ಕೊಂಡ್ರು. ಆವಾಗ ಅಣ್ಣ ಅವರವ್ವಗೆ 'ಅವ್ವಾ ಈತರ ಹಿಂಗ್ ಗುಲಗಂಜಿ ತಂದುದೇವಿ. ನೀ ಈ ಈ ತರ ಮಾಡ್ಬೇಕೂಂತ ಹೇಳಿದ. ಆವಾಗ ಗೌಡೇರ್ನ ಹಚ್ಚಿ ಮನೆಮಾರು ಬಳ್ಸಿ ಎಲ್ಲ ಮಾಡಿದ್ರು. ಎಲ್ಲ ಆದಮ್ಯಾಲೆ ಅವರವ್ವ ಸಲ್ಲಿಸಿದ್ಲು. ಇವ್ರು ತಾಯಿಗೆ ಗುಲಗಂಜಿ ಕೊಟ್ಬೋರೆ ಹೋಗಿಬಿಟ್ರು ಮತ್ತೆ ಮಾಡ ಮಲ್ಲಾಡ ಯಾಪಾರ್ಕೆ - ಕುದ್ರೆ ಹತ್ಗೆಂದು.

ಈಕೆ ಇಲ್ಲಿ ಸಲ್ಲಿಸಿದ್ದೆ ಸೈ ನೀರ್‌ನಿಂತ್ವು, ಅವ್ವಗೆ. ನೀರ್‌ನಿಂತು, ಒಂದಿನ ಅನ್ನೋದು ಒಂತಿಂಗ್ಳು, ಎಲ್ಡ್ ದಿನ ಅನ್ನೋದು ಎಲ್ಡ್ ತಿಂಗ್ಳು, ಹಿಂಗ್ ಒಂಬತ್ ದಿನ ಅನ್ನೋದು ಒಂಬತ್ ತಿಂಗಳು ತುಂಬಿ- ಈಕೆ ಜನಕಲ್ಲಾದ್ಲು ಹೆಣ್‌ಮಗಳ. ಮತ್ತೆ 'ಗುಲಗಂಜಿ ಮಾದೇವಿ' ಅಂತಲೆ ಹೆಸ್ರಿಡಬೇಕಾತು. ಆವಾಗ ಬಾಳ ದೊಡ್ನಕೆ ಖರ್ಚಿಟ್ಕಂದು, ನನ್‌ಮಕ್ಳು ಬರ್ಲಿಲ್ಲಲಾ, ಈಗ ಇಲ್ಲಿದ್ದುದ್ರೆ ಎಷ್ಟ್ ಹರುಷ ಪಡ್ತಿದ್ರೊ ಎನೊ ಅಂದ್ಕಂದ್ರು. ಎಲ್ಲಜನ ಕೂಡಿಸ್ಗೆಂದು ದೊಡ್ನಕಿಟಗಂದು ನಾಮಕರಣ ಮಾಡಿದ್ರು. ಚಂದಾಗ ಸಾಕಾಕತ್ತಿದ್ರು.

ಆಕಿ ಐದಾರು ವರ್ಷದಕಿ ಆದ್ಲು. ಸಾಲಿಗಾಕಿದ್ರು. ಸಾಲಿಗಾಕಿದ್ರೆ, ಇಕೆನು ಹಂಗೆ ಮಾಡಾಕತ್ತಿದ್ಲು, ಹೆಣ್‌ಹುಡ್ರಿಗೆ ಬಂಧಾನನ. ಹೊಡಿಯದು, ಜಿಗಟದು, ಮೂಗಿಡ್ದು ಕಪಾಳಕೆ ಹೊಡಿಯದು ಹಿಂಗೆ ಮಾಡ್ತಾಯಿದ್ಲು. ಹೆಣ್ಣು ಹುಡ್ರು ನೋಡಮುಟ ನೋಡಿ 'ಏ ಕರಿಗ್ಯಾಲ ಲೌಡಿ-ಅಣ್ಣಾರು ಇಬ್ರಾರು ಕಾಮಣ್ಣ ಭೀಮಣ್ಣ ಆಗಿದ್ರು. ಕರಿಗ್ಯಾಲ ಲೌಡಿ ಹೊಟ್ಯಾಗೆ ಮೂಡಿದ್ದೆ ಸೈ ಎತ್ಲಾಗೆ ಹೋದ್ರೊ ಏನೊ ದಿಕ್ಕತ್ತೆಹೋದ್ರು. ಇವ್ಳು ಹಂಗ್ ಹೊಡಿಯಾಕ್ ಬಂದಾಳೆ-ಹಿಂಗ್ ಹೊಡಿಯಾಕ್ ಬಂದಾಳೆ. ಹೋಗ್ ಹೋಗ್ ನೀ ನಮ್ಮ ಸಾಲಿಗೆ ಬರಬ್ಯಾಡ. ನಮ್ಮಣ್ಣಾರು ನಿಮ್ಮಣ್ಣಾರಂಗೆ ಹೋದಾರು ಅಂದ್ರು. ಒಂದಿನ ಬೈಸ್ಗೆಂದೂ ಎಲ್ಡ್‌ದಿನ ಬೈಸ್ಗೆಂದೂ ಮೂರ್ನೆ ದಿನ ಪಿರ್ಯಾದಿ ತಂದ್ಲು ಅವ್ರಪ್ಪಂತಾಕೆ. ಆವಾಗ ಅವ್ರಪ್ಪ 'ಅವ್ವ ತಾಯಿ ಹಾಗಿರದು ಖರೆ, ಅವರು ಬೈಯದು ಕರೆ. ಬೈದ್ರು ಬೈಯ್ಲವ್ವ, ಬಾ. ನಿಮ್ಮ ಅಣ್ಣಾರಿಗೆ ಕಟ್ಟಿದ ಸಾಲೆ ಗುಡಿ ಐತಲ ಅಲ್ಲಿ, ನಿಮ್ಮಣ್ಣಾರಿಗೆ ಓದ್ಸಿದ ಮೇಸ್ಟ್ರು ಅದಾರೆ.

ಓದಕಾದ್ರೆ ಓದು, ಓದಲುದ್ರೆ ಇರುವಂತೆ ಬಾ' ಅಂತಂದು ಮತ್ತೆ ಆಕೆನ್ನ ಅವರ ಅಣ್ಣಾರಂಗ ಆಕೆನ್ನು ಓದ್ಸಾಕ್ ಹಾಕಿದ್ರು.

ಒಂದೀಟ್ ಹಿಂಗೆ ತಿಳಿಯಂಗಾಗಮುಟ ಓದಿದ್ಲು. ಆಕಿಗೇನ್ ದೇವ್ರು ಬುದ್ದಿಕೊಟ್ನೊ ಏನೊ ಅವರಪ್ಪಗೆ ಕೇಳಿದ್ಲು -

'ಅಪ್ಪಾ ನಮ್ಮ ಅಣ್ಣಾರ್ನ ತರ್ಲುದ್ರೆ ನಾನು ಹುಟ್ಟಿದ ಫಲ ಏನು ? ನಾನು ಹೋಕೇನಿ ನನಿಗೆ ಗಂಡ್ಸಿನ ಡ್ರಸ್ ಕೊಟ್ಬಿಡು. ನಾ ಹೋಗಿ ಬರ್ತೇನಿ'- ಅನ್ನತ್ಗೆ,

'ಅವ್ವಾ ಬ್ಯಾಡ ನನ್ಮಗಳೇ. ಅಲ್ಲಿ ಹೆಣ್ ಮಕ್ಳೊಂದ್ರೆ ಭಾಗ್ಯೇವು, ನಿನ್ ಬಿಡದುಲ್ಲ. ನೀನ್ ಬೇಕಾದಂತ ಗಂಡು ರೂಪೀಲಿ ಹೋಗು. ನಿನ್ನ ಏನಾರ ಮಾಡಿಬಿಡ್ತಾರೆ. ಬ್ಯಾಡವ್ವಾ'' ಅಂತ ಭಾರಿ ತರವಾಗಿ ಹೇಳಿದ್ರು ಕೇಳ್ಳಿಲ್ಲ.

ಅವಾಗ ಅವರಪ್ಪನ ಡ್ರೆಸ್ ಹಕ್ಕಿಂದೂ, ಅವ್ರ ಅಣ್ಣಾರಂಗೆ ಕುದ್ರೆ ಹತ್ಗಿಂದೂ ಪೇಟ ಕಟ್ಗಿಂದ್ ಹೊಂಟ್ಲು, ಅವರಣ್ಣಾರು ಹೋದ ದಿಕ್ಕ ಹಿಡಿದು.

ಹೋದ್ಲು ಹೋದ್ಲು ಹೋದ್ಲು. ಹೋಗಿ ಅವರಣ್ಣಾರು ಹೋಗಿದ್ದ ಅಡಗೋಲಜ್ಜಿ ಮನಿಗೆ ಇಕೆನು ಹೋದ್ಲು. ಹೋದ್ರೆ ಅಲ್ಲಿ ಏನಾಗೇತಪಾಂದ್ರೆ, ಅಲ್ಲೊಬ್ಬ ಪದ್ಮಾವತಿ ಸೂಳಿದ್ಲು ಆ ಪಟ್ಣದಾಗೆ. ಆ ಪದ್ಮಾವತಿ ಸೂಳೆ ಏನ್ಮಾಡಿದಾಳೆ? ಬಾಗಲಾಗೊಂದ್ ನಗಾರಿ ಇಟ್ಟುದ್ಲು. ಯಾಕೊ ನಗಾರಿ ಐತಿ, ಅಂದು ಹುಡ್ರು ಇರ್ತಾವಲ ಕಿತಾಪತಿವು ಆ ನಗಾರಿಗೆ ಹೊಡ್ಡ್‌ಬಿಡೋವು. ಹಂಗ್ ಹೊಡ್ದ್‌ಕೂಡ್ಲೆ ಅವರ್ನ ಹಿಡ್ಸದು, ಪಗಡಿ ಆಡಾಕ್ ಕುಂದರ್ಸಿಗೆನದು ಸೋಲ್ಸದು, ಹೂವಿನ ಗಿಡುಕೆ ನೀರ್ ಹೊಯ್ಯಕ್ ಹಚ್ಚೋದು, ಈ ತರ ಮಾಡಾಕ್ ಹತ್ತಿದ್ಲು. ಹಿಂಗೆ ಸೋತ ಎಷ್ಟೋ ಸಾವ್ರಾರು ಜನ ಮೂಗಿಗೆ ಕವಡೆ ಕಟ್ಗಿಂದ್ ಹೂವಿನ ಗಿಡಕೆ ನೀರು ಹೊಯ್ಕರು ಹಿತ್ಲಾಗೆ. ಆಕೆ ಹಂಗೆ ಮಾಡ್ಕೆಂತ ಇದ್ಲು. ಆ ಕುದ್ರೆ ಅವ್ರ ಅಣ್ಣಾರೋವು. ಆ ಅಡುಗೋಲಜ್ಜಿ ಮನಿ ಯಾಗೆ ಇದ್ದು ಅವ್ರಣ್ಣಾರು ಸೋತು ಹೂವಿನ ಗಿಡುಕೆ ನೀರು ಹೊಯ್ತಾರೆ. ಎಲ್ಲಿಂದ ಬರ್ತಾರೆ ?

'ಅಜ್ಜಿ ನಿಮ್ಮನ್ಯಾಗೆ ಒಂದೆಂಟ್ ದಿವ್ಸ ಇರ್ತೇನಿ ಇಲ್ಲೇಯ. ನನಿಗೊಂದಿಷ್ಟ್ ಅನ್ನ ಅದು ಮಾಡಿ ಇಕ್ಕಜ್ಜಿ. ನಾನು ಬಾಳ ದೂರ್ದಿಂದ ಬಂದೇನಿ. ಇವು ಯಾರವಜ್ಜಿ ಕುದ್ರಿ ?'

'ಅಯ್ಯೊ, ಯಾವ ದೊರೆ ಮಕ್ಳೋ, ಯಾವ ಪರ್ಧಾನಿ ಮಕ್ಳೋ ಏನೊ. ಎಷ್ಟ್ ಚನ್ನಗಿದ್ರು. ನಾನು ಹೇಳ್ದೆ. ಆ ಕರಿಗ್ಯಾಲ ಲೌಡಿ ಮನಿಗೆ ಹೋಗಬ್ಯಾಡೀಂತ. ಇವ್ರು ಹೋಗಿ ಸೋತು ಮೂಗಿಗೆ ಕವಡೆ ಕಟ್ಗಿಂದ್ ನೀರು ಹೊಯ್ತಾರೆ. ಅವಳ ಸುದ್ದಿ ತಗಿಬ್ಯಾಡ ಬಾ ನನ ಮಗನೆ ಅನ್ನಮಾಡಿ ನೀಡ್ತೇನಿ ಸುಖವಾಗಿ ಉಂಡ್ಕಂಡಿರು, ನಿನಿಗೆ ಬೇಜಾರಾದಮ್ಯಾಲೆ

ಹೊಗಿವಂತಿ' ಅಂತ ಬಾರಿ ತರವಾಗಿ ಹೇಳ್ತು ಅವಜ್ಜಿ, 'ಅಲ್ಲಜ್ಜಿ! ಹೇಳು ಏನ್ ಮಾಡ್ತಾಳೆ ಆಕಿ ನೋಡಾನ? ಅಲ್ಲ ಆಕೆ ಹೆಂಗ ಸೋಲ್ತಾಳಜ್ಜಿ-' ಅಂತ ಎಲ್ಲ ಕೇಳಿದ್ಲು. ಆಕೆಎಲ್ಡ್ ಇಲಿ ಹಿಡ್ಕಂಡು ವಡ್ಲಾಗ ಕಟಿಗೆಂದಾಳೆ. ಒಂದ್ ಬೆಕ್ಕ ಸಾಕೆಂದಾಳೆ. ಸೋತ್ಲು ಅಂದಾಗ ಇಲಿ ಕೊಳ್ಳರ್ದು ಬಿಡ್ತಾಳೆ. ತಲೆಮ್ಯಾಗೆ ದೀಪ ಇಟ್ಟಿರ್ತಾಳೆ. ಬೆಕ್ಕಿನ ಕೊಳ್ಳರ್ದಾಗ ಬೆಕ್ಕು ಹಣತೆ ಕೆಡವಿ ಇಲಿ ಹಿಡಿಲಿಕ್ ಹೋಗಿಬಿಡ್ತತೆ. ಹೋತಲೆ ಈಕೆ ಏನೇನೋ ಮಾಡಿ ತಿರುವಿ ಹೊಳ್ಸಿ ಗೆದ್ದೆ ಗೆದ್ದೆ ಅನ್ನಂಗ್ ಮಾಡಿ ಹಿಂಗ್ಮಾಡ್ತಾಳ್ ನನ್ ಮಗನೆ' ಅಂತ ಎಲ್ಲ ಹೇಳ್ತು. ''ನನಿಗು ಒಂದ್ ಬೆಕ್ ಇಡ್ಕೊಡು. ನಾನು ಹೋಕೇನಿ ನೋಡಾನ ಎನ್ಮಾಡ್ತಾಳೆ ಆಕೆ'' ಅಂದು ಅವಜ್ಜಿಯಿಂದ ಎಲ್ಲ ಕೇಳ್ಕಂದ್ಲು, ಬಂದ್ಲು.

ಬಂದು ನಗಾರೆ ಒಡಕನಮುಟ ಹಕ್ಕಿದ್ಲು. ಪದ್ಮಾವತಿ ಸೂಳೆ ಹಿಡಿಸಿದ್ಲು ಆಳಮಕ್ಳ ಕೂಟೆ.

'ಯಾಕೆ ಹಿಡಿತೀರಿ ನಾನೇನು ಎಲ್ಲು ಹೋಗದುಲ್ಲ. ಎಲ್ಯರ ಹಾರಿ ಹೋಕೇನ ? ಸುತ್ತ ಮುತ್ತ ಮುಗಲೈತೆ. ಹಾರಿ ಹೋಗದುಲ್ಲ. ಕುಂತ್ಗಂತೇನಿ ಇಲ್ಲೇಯ, ಅಂದಳು

ಈ ಊರ ರಾಜ, ಪರ್ದಾನಿ ಊರಗೌಡ್ರು, ಬುದ್ವಂತ್ರು, ಎಲ್ಲರು ನಾಕ್ ಜನ ಸೇರ್ಬೆಕು. ಅದ್ರುಮ್ಯಾಗೆ ನಾನು ಕುಂದ್ರುತೆನಿ ಪಗಡೆ ಆಡಾಕೆ ಅಂದ್ಲು. ಅವಾಗ ಕರ್ಸಿದ್ಲು ಸೂಳೆ ನಾನೆಂಗಿದ್ರು ಗೆಲ್ತೇನಿ, ಏನರ ಮಾಡ್ಲಿ ಇವ್ಳು ಅಂತ ಆಕಿಗೆ ಗೊತ್ತು. ಈಕೆ ಹೆಂಗ್ಸನ್ನ ಗೆಂಡ್ಸು ಅಂತಲೆ ಮಾಡ್ಕೆಂದಾಳೆ. ಆಮ್ಯಾಗೆ ರಾಜ, ಪರ್ದಾನಿ, ಗೌಡ್ರು, ಬುದ್ವಂತ್ರು ನಾಕ್ ಜನ ಸೇರ್ಸಿದ್ರು; 'ಒಂದಾಟ್ಕೆ ಎಲ್ಡಾಟ್ಕೆ ಗೆದ್ದೆ ಅಂದ್ರೆ ನಾನು ಕೇಳಕಿ ಅಲ್ಲ. ಆಕಿನು ಹತ್ತಾಟ ಆಡ್ಲಿ. ನಾನು ಹತ್ತಾಟ ಆಡ್ತೇನಿ. ಆಕೆ ಸೋತರೆ ಹಂಗೆ ಉಟ್ಟ ಬಟ್ಯಾಗೆ ಮನೆಬಿಟ್ಟು ಹೋಗಬೇಕು. ನಾನು ಸೋತೇಂದ್ರೆ ಮೂಗಿಗೆ ಕಾವಡೆ ಕಟ್ಕೊಂಡು ನೀರು ಹೊಯ್ತೇನಿ - ಸಾಯೋತನಕ. ಅಂತಂದು ಓಪ್ಪು ಮಾತು ಮುಗಿಸ್ಕೆಂದ್ಲು ನಾಕ್ ಜನದಾಗೆ. ಆಮ್ಯಾಲೆ ಆಡಾಕೆ ಕುತ್ಕಂದ್ರು. ಈಕೆ ಮುಂದೆ ಬಿಟ್ಕೊಟ್ಲು, ನೋಡ್ಕೆಂದೊ ಆಕೆ ಆಡೋ ಆಟನ. ಆದ್ರುಮ್ಯಾಗೆ ಇಕೆನ್ಮಾಡೆದ್ಲು ಗುಲಗಂಜಿ ಮಾದೇವಿ? ಈಕೆ ಆಟ ಈಕೆ ಬಿಟ್ ಕೊಡ್ಲಿಲ್ಲ. ಈಕೆನೆ ಗೆದ್ಲು ಗೆದ್ಲು ಗೆದ್ಲು ಮುಂದುವರ್ಸ್ದಬಿಟ್ಲು. ಈ ಪದ್ಮಾವತಿ ಸೂಳೆ ಆಟ ಮುಂದುವರಿಯದೆ ಆಗ್ದಾಗ ಓಪ್ಪು ಇದ್ರುಲ ರಾಜ ಪರ್ದಾನಿ, ಗೌಡ್ರು ಬುದ್ವಂತ್ರು? ಆಕೆನ್ನ ಹಂಗೆ ಉಟ್ಟ ಬಟ್ಯಾಗೆ ಮನೆ ಬಿಟ್ ಕಳ್ಸಿದ್ರು.

ಆಮ್ಯಾಲೆ ಮೂಗಿಗೆ ಕವಡೆ ಕಟ್ಗೆಂದ್ ನೀರು ಹೊಯೋರ್ನೆಲ್ಲ ಸೆರ್ಮನಿಂದ ಬಿಡ್ಸಿದ್ಲು. ಬಿಡ್ಸಿ ಒಪ್ಪರ್ನು ಅವರವರ ಮನಿಗವರ್ನ ಕಳ್ಸಿದ್ಲು. ಈಕೆ ಸೂಳೆ ಎಲ್ಲ ಬಾಳ ಮುರ್ದು ಹಕ್ಕೆಂದುದ್ಲು. ಮನೆ ತುಂಬಿ ಗಿಜಿ ಗಿಜಿ ಅನ್ನೋದು.

ಇವ್ರು ಪರ್ಧಾನಿ ರಾಜ ಇಕೆನ್ನೋಡಿ ಪರ್ಧಾನಿ ಈಕೆ ಹೆಂಗ್ಸು ಅಂತನ್ನನು. ರಾಜ 'ಏ ನಮ್ಮಂಗೆ ಬಟ್ಟೆ ಹಕ್ಕೆಂದ್ ಓಡ್ತಾಡ್ತಾನೆ, ಹೆಂಗ್ಸಾಗಿದ್ರೆ ಹಿಂಗ್ ಓಡಾಡ್ತುದ್ಲ ಗಂಡ್ಸು ಬಿಡಲೇ' ಅಂತ ಇಬ್ರಾಳಿಗು ವಾದಾಟ ಬಿತ್ತು. ಹೆಂಗ್ಸೊಂತ ಪರ್ಧಾನಿ. ಗಂಡ್ಸೂಂತ ರಾಜ. ಕೊನಿಗೆ ಪರ್ಧಾನಿ 'ಒಂದ್ ಕೆಲ್ಸ ಮಾಡಾನ. ಆಕೆ ಮನಿಗೆ ಊಟುಕೆ ಹೋಗಾನ. ಗಂಡ್ಸಿನ ಕೈಯಾಳ ಅಡಿಗೆ ಹೆಂಗಿರ್ತತೆ. ಹೆಂಗ್ಸಿನ ಕೈಯಾಳ ಅಡಿಗೆ ಹೆಂಗಿರ್ತತೆ ಗೊತ್ತಾಕತಲ್ಲ. ಊಟುಕೆ ಬರ್ತೇವೀಂತ ಹೇಳಾನ. ಹೆಂಗ್ಮಾಡ್ತಾಳೊ ನೋಡಾನ'- ಅಂದ್ಕಂದ್ರು.

ಗುಲಗಂಜಿ ಮಾದೇವಿ ಒಂದ್ ಗಿಣಿ ಸಾಕ್ಕೆಂದ್ಲು. ಅದು ರಾಜ ಪರ್ಧಾನಿ ಮಾತಾಡಿದ್ದ ಕೇಳಿಬಂದು ಅಕ್ಕ ಹಿಂಗೇ ಮಾತಾಡಿದ್ರು ಕಣೆ. ಹಿಂಗೇ ಬಿಟ್ರು ಹ್ಯಾಂಗ್ ಮಾಡಾನೆ ಅಂತ ಎಲ್ಲ ತಂದ್ ಹೇಳದು. ಹೂಂ ಬರ್ಲಿ ಬಿಡು ಅಂದು ಗೌಡೇರಕೂಟೆ ಮನೆಮಾರು ಎಲ್ಲ ಬಳಸಿ ಬೆಳ್ಳಾನ್ ಬೆಳಕತನಕ ಎಲ್ಲ ಅಡಿಗೆ ಮಾಡಿದ್ಲು. ನಾನಾ ಚಂದವಾದ ಅಡಿಗೆ ಮಾಡಿ ಅವರ್ನ ಕರೆಕಳ್ಸಿದ್ಲು. ಬಂದು ಕುತಗಂದ್ರು. ಅವಾಗ ಈಕೇನಾಡಿದ್ಲು - ಒಂದ್ ಅಡ್ಡೊಲ್ಲಿ ಹಕ್ಕೆಂದು ಗಂಡ್ಸಾಗಿದ್ದಲ - 'ನನಿಗೆ ಯೋಳ್ಜನ ಹೆಂಡ್ರದಾರ್ರಿ. ಅವರೆಲ್ಲ ನಿಮ್ಮ ಉಪಚಾರ ಮಾಡ್ತಾರ್ರಿ. ನನಿಗೆ ಬಾಳ ನಿಸ್ತುಕಾಗಿ ಬಿಟ್ಟತೆ ನೀರ್ಕಡೀಕೆ. ಭಾರಿ ಭೇದಿ ಆಗಾಕತ್ತೇತಿ ಬೆಳತನಕ. ನಿಮಕೂಟೆ ಮಾತಾಡಾಕು ಶಕ್ತಿಲ್ಲ. ನಾನು ಹೊರಗಡೆ ಹೋಗಿ ಬರ್ತೇನ್ರಿ. ನಮ್ಮ ಹೆಂಡ್ರದಾರೆ ಯೋಳ್ಜನ ಅವರೆಲ್ಲ ಮಾಡ್ತಾರೆ. ನೀವೇನ್‌ಬೇಜಾರ ತಿಳ್ಕಬೇಡ್ರಿ. ಅಂದು ಬಾಗಲಾಗಾಸಿಹೋಗಿ ಹಿತ್ಲಗಾಸಿ ಒಳ್ಳೆ ಸೀರೆ ಉಟ್ಟು ಬಂದ್ಲು. ಬಂದು ಯೋಳ್ ತರದ ಅಡಿಗೆ ಮಾಡಿದ್ಲು. ಎಲ್ಲಾರಿಗು ಊಟುಕ್ ನೀಡಿದ್ಲು. ತೀರ್ಸಿದ್ಲು. ಇವ್ರು ಊಟ ಮುಗಿಯತ್ಗೆ ಹೆಂಗೋಗಾದ್ಲೊ ಅಡ್ಡೋಲ್ಲಿ ಹಕ್ಕೆಂದು ಚೆಂಬ್ ತಗಂದು ಹಂಗೆ ಬಾಗಲಾಗಾಸಿ ಬಂದುಬಂದ್ಲು. ಅಯ್ಯೊ ನನಿಗೆ ಬಾಳ ನಿಸ್ತುಕಾಗಿ ಬಿಟ್ಟುತ್ರಿ. ನಮ್ಮ ಹೆಂಡ್ರು ಚನ್ನಾಗೆ ಮಾಡಿದ್ರೇನ್ರಿ ಅಡಿಗೆನ ? ಅಡಿಗೆಂಗಿತ್ರಿ ಪಾಡಿತ್ತಾ ? ನಿಮ್ಮ ಸಹಬಾಜಿ ಕುತಗಂದ್ ಊಟ ಮಾಡಾಕ್ ಆಗ್ಲಿಲ್ಲ ನೋಡು ನನಕೈಲಿ. ನನಿಗೆ ದೇವ್ರು ಎಷ್ಟತೊಂದರೆ ಕೊಟ್‌ಬಿಟ್ಟ - ಅಂತವ ಬಂದು ಕುತಗಂದೊ ಅವರ್ತಾಕೆ. ಆಕೆ ಮಾಡಿದ್ದೆಲ್ಲ ಪರ್ಧಾನಿಗೆ ಗೊತ್ತು. ರಾಜುಗೆ ಗ್ನೊತ್ತಿಲ್ಲ. ಪರ್ಧಾನಿ ಹಲ್‌ಮಸಿತಾನೆ ಹೆಂಗ್ಸೂಂತ. ಒಪ್ಪಕೊಲ್ಲ ರಾಜ.

ಆವಾಗ ಮನಿಗೆ ಬಂದ್ರು. ಏನಂತಾನೆ ಪರ್ಧಾನಿ? 'ಏ ಹೆಂಗ್ಸಾದ್ರೆ ಅಂಜ್ತಾಳೆ, ಗಂಡ್ಸಾದ್ರೆ ನಮ್ಮ ಸಹಬಾಜಿ ಕುತಗಂದ್ ಊಟ ಮಾಡ್ತಾಳೆ. ನಮ್ಮನಿಗೆ ಕರಸಾನ ಹೆಂಗ್ ಮೈ ತೊಳಿತಾಳೆ, ಹೆಂಗ್ ಇರ್ತಾಳೆ ನೋಡಾನ'. ಪರ್ಧಾನಿ ಹಿಂಗ್ ಕುಳಿವಿಟ್ಟ.

ಇದ್ನೆಲ್ಲ ಆ ಗಿಣಿ ಕೇಳ್ಕೆಂದು ಗುಲಗಂಜಿ ಮಾದೇವಿತಾಕೆ ಬಂದು ಹೇಳ್ತು, ಅಕ್ಕ ಹಿಂಗಿಗ್ ಮಾತಾಡಿದ್ರು ಕಣೆ. ಹೆಂಗ್ ಮಾಡಾನೆ ನಾವೂಂತ. ಅವಾಗ ಈಕೆ 'ಹೋಗಾನ ಸುಮ್ಕಿರು ನಾನೇನರ ಪ್ಲಾನ್ ಹಾಕ್ತೀನಿ' ಅಂದ್ಲು.

ಆವಾಗ ಒಂಡೆಲ್ಡ್ ದಿವಸ ಬಿಟ್ಟು ಕರೆಕಳ್ಸಿದ್ರು. 'ಆಗ್ಲಿ ಬರ್ತೇವಿ' ಅಂತ ಹೋದ್ಲು. ಅಯ್ಯೋ ಇಲ್ರಿ ಹೊಟ್ನುವು ಸತಿಯಾಗೇಲ. ನಿಮ್ಮ ಸಹಬಾಜಿನೆ ಕುಂತಗಂದ್ ಊಟ ಮಾಡ್ತೇನಿ. ಆದ್ರೆ ಮೈಮಾತ್ರ ತೊಳೆಯೋದಿಲ್ಲ' ಅಂತಂದು ತಪ್ಪಿಸ್ಗೆಂದೊ. ಅವಾಗ ಅವರ ಸಹಬಾಜಿ ಕುತಗಂದ್ ಊಟ ಮಾಡಿದ್ಲು, ಎದ್‌ಬಂದ್ಲು ಮನಿಗೆ. ಇವ್ರು ಕಳಿಸ್ಗೆಂತಬಂದ್ರು. ಆಕೆ ಹೋದಮ್ಯಾಗೆ ಪರ್ಧಾನಿ ಏನಂದ 'ಏ ಮಳ್‌ರಾಜ ಮಳ್‌ರಾಜ ನೀನು ಆಕೆ ಗಂಡ್‌ರೂಪ ಹಕ್ಕೆಂದ್ ಹೀಗ್ಮಾಡ್ತಾಳೆ. ಈಕೇನ್ನ ಏನರ ಮಾಡಿ ನೀನು ಲಗ್ನಾಗ್ಲೆ ಬೇಕು' ಅಂತಂದ. ಹಿಂಗೆ ಕಣ್ಣಿಟ್‌ಬಿಟ್ರು. ಪರ್ಧಾನಿ ಮತ್ತೊಂದು ಪ್ಲಾನ್‌ಹಾಕ್ದ.

ಈ ಗಿಣಿ ಅದ್ನೆಲ್ಲ ಕೇಳ್ಕೊಂದ್ ಬಂದು ಗುಲಗಂಜಿ ಮಾದೇವಿತಾಕೆ ಹೇಳ್ತು. 'ಅಕ್ಕಾ ಹಿಂಗ್ ಮಾತಾಡ್ತಿದ್ರು ಕಣೇ, ಈ ಊರ್ಮುಂದ ಕೆರೆ ಐತಲ? ಆ ಕೆರಿಗೆ ಕರಕಂದ್‌ಹೋಕಾರಂತೆ. ಕೆರಿಗೆ ಕರಕಂದೋಗಿ ಕುದುರೆ ಮ್ಯಾಲೆ ಕೂರ್ಸಿ ಮೂರ್‌ಸುತ್ತು ಕೆರೆ ಸುತ್ತಿಸಿ ಬಿಟ್ರೆ ಸುಖವಾಗಿ ಯೋಳ್ ವರ್ಷದ್ದಾದ್ರು ಮೈನೆರಿತತೆ. ಹನ್ನೆಲ್ಡ್ ವರ್ಷದ್ದಾದ್ರು ಮೈನೆರಿತತೆ, ಆವಾಗ ಗೊತ್ತಾಕತೆ. 'ಹಂಗ್ಮಾಡನೆ ನಡಿಅಂತ ರಾಜ ಪರ್ಧಾನಿ, ಇಬ್ಬಾರು ಮಾತಾಡ್ತಿದ್ರು. ಹೆಂಗ್ಮಾಡಾನಕ್ಕ?' ಅಂತ ಗಿಣಿ ಕೇಳ್ತು. 'ಹೆಂಗ್ಮಾಡನೆ?' ಅಂತ ಈಕೆನೆ ಕೇಳಿದ್ಲು. 'ಅಕ್ಕ ನನಿಗೆ ಹಣ್ಣು ಹಂಪ್ಲು ಎಲ್ಲ ತಿನಿಸ್ಬಿಡು ಭರ್ತಿ. ಇಸ್ತ್ರಿ ಮಾಡಿದ ಬಟ್ಟೆ ಹಕ್ಕೆಂದ್ ನೀ ಕುದ್ರೆಮ್ಯಾಲೆ ಕುತಗಂದ್ ಮುಂದೆ ಬರ್ತಿಯಲ ನಿನ್ ಬಟ್ಟೆ ಮ್ಯಾಲೆ ಸ್ವಲ್ಪ ಹೇತಂಗ್ಮಾಡಿ ರಾಜ ಪರ್ಧಾನಿ ಬಟ್ಟೆ ಪೂರಾ ಮುಳುಗಿಸಿ ಬಿಡ್ತೇನಿ, ಮುಂದುಕ್ ಹೋಗುಲ್ದಂಗೆ. ಹಂಗೆ ಹಿಂದುಕ್ ತಿರುಗಿ ಬರಂಗ್ಮಾಡಿ ಬಡ್ತೀನಿ'' - ಅಂತ ಹೇಳ್ತು ಗಿಣಿ.

ಅವಾಗ ಮೂವರು ಜತಿಯಾಗಿ ಹೊಂಟ್ರಲ್ಲ ಬಟ್ಟೆ ಹಕ್ಕೆಂದು, ಹೊಕುದ್ದಂಗೆ ಏನ್ಮಾಡ್ತೇಗಿಣಿ? ಕೆರೆ ಇನ್ನೊಂದು ಸ್ವಲ್ಪ ದೂರ ಐತಿ ಅಂದಾಗ ಆಕೆ ಮೈಮ್ಯಾಲೆ ಸ್ವಲ್ಪ ಹೇಲ್ತು. ಅವರಿಗೆ ಬ್ರಾಳ ಮುಖಮುಸ್ಣಿ ಬಟ್ಟೆ ಎಲ್ಲ ನೆನೆಸ್ಬಿಡ್ತು. 'ತೂ...., ಎಂತಾ ಅನಿಷ್ಟದ ಕೇರಿಗೆ ಕರಕಂದ್ ಬಂದ್ರಿ ನನ್ನ ? ಇಸ್ತ್ರಿ ಮಾಡಿದ ಬಟ್ಟೆ ಹಕ್ಕೆಂದ್ ಬಂದುದ್ದೆ. ತೂ... ತೂ.. ಎಷ್ಟ್ ಅಪಮಾನ ಮಾಡಿದ್ರಿ. ತಗಿ ನಾ ಬರದುಲ್ಲ ಈ ಕೇರಿಗೆ, ಅಂತಂದು ಹಿಂದುಕ್ ತಿರುಗಿಸಿ ಬಿಟ್ಲು ಕುದುರೇನ. ಅವರು ನರಿನಾತಾಕ್ಕಿ ಎಷ್ಟೊತ್ತಿಗೆ ಮನಿಗೋಗಿ ಬಟ್ಟೆ ಬಿಚ್ಚೆನೊ ಅನ್ನಂಗಾಗಿ ಬಿಟ್ಟಿತ್ತು.

ಆವಾಗ ಬಂದು ಬಟ್ಟೆ ಬಿಟ್ಟುಳು. 'ಅಕ್ಕಾ ಈ ಊರು ಸವಾಸ ಸಾಕು. ಏನರ ಪ್ಲಾನಾಕಿ ಜಾಗ ಬಿಟ್‌ಬಿಡಾನ. ಹೋಗಿಬಿಡಾನ. ಊರಾಗಿರೋರು ಎಷ್ಟ್ ನೆಲಹತ್ತಿದಾರೊ ಏನ್ನತಿಯೋ, ನಾವು ಇತ್ಲಾಗೆ ಬಂದೋರು ಇತ್ಲಾಗೆ ಆಗಿಬಿಟ್ಟಿವಿ. ಇನ್ನ ಸಾಕು. ಈ ಪರ್ಧಾನಿ ಕಣ್ಣಿಟ್‌ಬಿಟ್ಟ. ಬಿಡದುಲ್ಲ. 'ಬ್ಯಾಡ ಜಾಗ ಬಿಡಾನ' ಅಂತ ಗಿಣಿ ಹೇಳಿಕೊಡ್ತು. ಆಗ್ಲೀಂತ ಹೊಂಡ್ತಾಳೆ.

ಬೆಳ್ಳನ ಬೆಳತನಕ ಹೊಳೆ ಅನ್ನದು ತುಂಬಿ ಹರಿತಿದೆ. ಆಚೆಕೆ ಹೋಗಂಗಿಲ್ಲ. ಏನ್ಮಾಡ ಕಾತು ಅಂತ ಚಿಂತೆ ಮಾಡಿದ್ಲು. ಕೊನಿಗೆ ಗಂಗಾದೇವಿ ಬೇಡ್ಕೆಂದೂ 'ಅತ್ಲೋಳೆ ಅತ್ತಾಗಿ ಇಗ್ಲೋಳೆ ಇತ್ತಾಗಿ ದಾರಿ ಬಿಡು. ನಾನು ಆಚೆ ಕಡಿಕೆ ಹೋಗುಮುಟ' ಅಂತ ಬೇಡ್ಕಂದ್ಲು. ನೆನೆಅಕ್ಕಿ, ನೆನೆಗಡಲೆ, ಬಾಳೆಹಣ್ಣು, ಕಾಯಿ, ಹೊಸಬಟ್ಟೆ, ನಾನಾ ಚಂದದ ಅಡಿಗೆ ಮಾಡ್ಕೆಂದ್ ಬಿದ್‌ಬೇಡ್ಕೆಂದ್ಲು ಗಂಗವ್ವಗೆ ಬೆಳತನಕ.

'ನಾ ಬಂದ್ ಬಾಳಾಂದ್ರೆ, ಬಾಳ ದಿವ್ಸಾತು. ನಮ್ಮ ತಂದೆ ತಾಯಿ ಎಷ್ಟು ನಮ್ಕಡೆ ಯೋಚನೆ ಹಚ್ಕೆಂದಾರೊ ಏನೊ. ನಾವು ಮತ್ ಬರ್‍ತೇವ್ರಿ ಊರಕಡೀಕ್ ಹೋಗಿ - ಅಂತ. ಹೋಗೋದು ಎಲ್ಡ್ ದಿನ ಇದ್ದಂಗೆ ರಾಜ ಪರ್ಧಾನಿಗೆ ಹೇಳಾಕ್ ಹತ್ತಿದ್ಲು. ಅವಾಗ ಪರ್ಧಾನಿ ಕಣ್ ಕುಕ್ಕನು ಹೂಕಾಳೆ ಕಣ್‌ತಪ್ಪಿಸ್ಗೆಂದೂಂತ. 'ಹೋಗಿ ಬರ್‍ಲಿ ಬಿಡೊ ಹೋಗಿಬರ್‍ಲಿ ನಮ್ಮ ಮಕ್ಳಿಂದ್ದಂಗೆ'' ಅಂತೇಳಿ ರಾಜ.

ಇವರು ಎಲ್ಲ ಕೆಲಸ ಮಾಡ್ಕೆಂದ್ ಬೆಳತನಕಾನ ಹೊಸಬಟ್ಟೆ ಎಲ್ಲ ತಗಂದ್ ಹೊಂಟ್ರು. ಕಳಿಸ್ಗೆಂತ ಹೋಗ ಬೇಕಾತಲ ಗೆಣಕಾರ್ರು ಅಂದಾಗ, ರಾಜ ಪರ್ಧಾನಿ ಬಂದ್ರು. ಇಕೆ ಹೊಂಟು ಮುಂದೆ ಅವರಣ್ಣಾರ ಕುದ್ರೆ ಬಿಟ್ಲು. ಕುದ್ರೆ ಓಡಿದ್ವು. ಅವಳಣ್ಣಾರು ಅಷ್ಟತ್ಗೆ ಉಸೂರಂದ್ಕಂತ ಅವ್ರಲ್ಲೆ ಮದುವ್ಯಾಗಿದ್ದು. ಇಕೆ ನಮ ತಂಗಿ ಬಿಡಿಸಿದ್ಲೂಂತ ಅಣ್ಣಾರಿಗೆ ಗೊತ್ತಿಲ್ಲ. ಇವ್ರೆ ನಮ್ಮಣ್ಣಾರು ಅನ್ನೋದು ಇಕಿಗು ಗೊತ್ತಿಲ್ಲ. ಅವ್ರು ಯಾಪಾರಕ್ಕೆ ಹೋದಾಗ ಇಕಿ ಇನ್ನು ಹುಟ್ಟಿದ್ದೆಯಿಲ್ಲ.

ಇವ್ರು ರಾಜ ಪರ್ಧಾನಿ ಗುಲಗಂಜಿ ಮಾದೇವಿನ ಕಳಿಸ್ಗೆಂತ ಹೊಳೆ ತನಕಬಂದ್ರು. ಅತ್ತ ಹೊಳೆ ಅತ್ತಾತು. ಇತ್ತ ಹೊಳೆ ಇತ್ತಾತು. ಆಕೆ ಆಚೆಕಡೆ ಹೋಗತ್ಲು ಕೂಡಿಕೆಂದ್‌ಬಿಡ್ತು ಹೊಳೆ. ಅವ್ರಿಗೆ ಬರಾಕೆ ದಾರಿಲ್ದೋತು. ಆಕೆ ಪೀತಾಂಬ್ರ ಸೀರೆ ಉಟಗಂದ್ ಹೊಳೆ ಪೂಜ್ತಾಳೆ ಆಚೇಲಿ. ಇವ್ರು ಇಚೇಲಿಂದ ನೋಡ್ತಾರೆ. 'ಅಯ್ಯೋ ಮಳ್‌ರಾಜ ನೋಡು. ಎಷ್ಟ್ ಪ್ಲಾನಾಕಿದ್ಲು. ಗಣ್ಸು ಗಣ್ಸು ಅಂತಿದ್ಯಲ್ಲ ನೋಡು ಮಳ್‌ರಾಜ'. ಅಂತ ಇಬ್ರಾರು ಜಗಳ ಮಾಡ್ತಾರೆ. ಅವಾಗ ಏನಂದ ರಾಜ ಇಚೇಲಿಂದ 'ಏ ನಿನ್ನ ಊರಿಗೆ ಬಂದು ನಿನ್ನೆ ಮದುವ್ಯಾಗಿ ನಿನ್ನ ಇಡುವರ್ಸೆ ತಿನ್ದುದ್ರೆ ಪದ್ಮಾವತಿ ಸೂಳೆ ಪಟ್ಣದ ರಾಜಾಂತ ನನ್ನ ಕರಿಬ್ಯಾಡ್' ಅಂತಂದ. 'ಹಂಗೆ ಆಗ್ಲಿ ಬರ್‍ರಿ. ನನ್ನ ಇಡುವರ್ಸೆ ತಿನ್ವಂತ್ರಿ. ಇವತ್ರಿಗೆಂಟ್ ದಿನಕೆ ಹೊಳೆ ಇಳಿತತೆ ಬರ್‍ರಿ ಮದುವ್ಯಾಗುಂತ್ರಿ' ಅಂತಂದ್ಲು. 'ಆಗಲಿ ನನಿಗು ನಿನಿಗು ಮಾಲಿದ್ರೆ, ಯಾಕಾಗ್‌ಬಾರದು ಅಂದು ಹೋದ್ರು - ಹಿಂದುಕ್ ತಿರುಗಿ. ಇಕೆ ಹಾದ್ಯಾಗೆ ಯಾರ್‍ಯಾರ ತೊಂದ್ರೆ ಮಾಡ್ಯಾರು ಅಂದು ಮೊದ್ಲು ಹೆಂಗ್ ಗಂಡುಸ್ರ ಡ್ರಸ್ ಹಕ್ಕೆಂದುದ್ಲೊ ಹಂಗೆ ಹಕ್ಕೆಂದ್ ಪೇಟ ಕಟಿಗೆಂದ್ ಬಂದ್ಲು ಅವ್ರಪ್ಪನೂರಿಗೆ.

ಅಯ್ಯೊ ಗುಲಗಂಜಿ ಮಾದೇವಕ್ಕ ಬಂದಾತೇಂತ ಜನ ಕೂಡಿಬಿಡ್ತು. ಅಪರೂಪಕೇಂದ್ರ ಜನ ಸೇರದು ಜಾಸ್ತಿಯಲ ಹಂಗೆ. ಹನ್ನೆಲ್ಡ್ ವರ್ಷಾಗೇತಿ ತಂದೆ ತಾಯಿ ಎಲ್ಲಾರ್ದು ಮುಖ ನೋಡ್ಲಿತಿ ಹಂಗೆ ಮನಿಗೆ ಹೋಗ್ಬಾರ್ದ್ದೂಂದು ಇಕೆ ಗುಡಿಯಾಗದಾಳೆ. ಆವಾಗ ಅಕೆ ಅಣ್ಣಾರು ಅಣ್ಣಾರ ಹೆಂಡ್ರು ಎಲ್ರು ಆರತಿ ಅಕ್ಕಸ್ತಿ ಎಲ್ಲ ತಂಗದು, ಎಣ್ಣೆ ತಗಂದು ಬಂದ್ರು.

ಹನ್ನೆಲ್ಡ್ ವರ್ಷಾಗೇತಿ ಮುಖ ನೋಡಿ, ಈಗ ಹಂಗೆ ನೋಡ್ಬಾರ್ದು ಅಂದು ಮೊದ್ಲು ಎಣ್ಯಾಗೆ ಮುಖ ನೋಡಿ ಆಮ್ಯಾಲೆ ಆಕೆನ್ನ ಕರಕಂದು ಅನಂದೈಶ್ವರ್ಯದಿಂದ ಬಂದ್ರು ಅಪ್ಪನ ಮನಿಗೆ. ಬಂದು ಎಂಟ್ ದಿನಾತು ಅವಾಗೊಂದಿನ ಅವ್ರಪ್ಪಗೆ ಹೇಳ್ತಾಳೆ : 'ಹೀಗೆ ಪದ್ಮಾವತಿ ಸೂಳೆ ಪಟ್ಟದ ರಾಜ ನನ್ ಮದುವ್ಯಾಗಾಕೆ ಬರ್‍ತಾನೆ. ಕೊಡದುಲ್ಲ ಅನಬ್ಯಾಡ .ಕೊಟ್ಟು ನನ್ನು ಮದುವೆ ಮಾಡ್ರಿ ಅಂತ ಹೇಳಿದ್ಲು.

ಆವಾಗ ಹೊಳೆ ಇಳೀತು. ಪರ್‍ದಾನಿ ರಾಜನ್ನ ಕರಕಂಡ್‌ಬಂದ. 'ಅಯ್ಯೊ ಯಾಕ್ರಿ ಅತ್ಲು ಸೀಮಿಂದ ಇತ್ಲು ಸೀಮಿಗೆ ಬಂದ್‌ಬಿಟ್ರಿ ಬರ್‍ರೀ ಕುತಗಳ್ರಿ' ಅಂತಂದು ಮನ್ನಣೆ ಮಾಡಿದ್ರು. ಎಲ್ಲ ಊಟ ಉಪ್ಚಾರ ತೀರಿಸ್ಗೆಂಡ್ರು. ವಿಚಾರ ತಕ್ಕಂದ್ರು. ನಿಮ್ಮನ್ಯಾಗೆ ಕನ್ಯ ಐತಿ. ಕನ್ನಿಗೆ ಹಿಂಗ್ ಗಂಡ್ಯೆತೇಂತ. ಹಂಗೆ ಆಗ್ಲಪಾ ನಿಮ್ಮಂತೋರು ಬಂದ್ರೆ ನಾವ್ಯಾಕ್ ಕೊಡ್ಬಾರ್ದು? ನಿಮ್ಮಂತ ರಾಜ್ರಗೆ ಇಲ್ಲ ಅನ್ನಕ್ಕಾದೀತ? ಕೊಟ್ ಮಾಡ್ತೇವೀಂತ ಮಾತುಕತೆ ಮುಗಸಿದ್ರು. ಎಲ್ಲಾ ಆತು. ಇವತ್ತಿಗೆ ಎಂಟ್ ದಿವಸಕೆ ಲಗ್ನ ಅನ್ನಂಗೆ ಮಾಡ್ಕೆಂಡ್ರು. ಅವಾ ಅಲ್ಲಿ ಅಷ್ಟಮಿತಿ ಮೀರ್‍ಸಿ ಬಂದುದೇವಿ ನಾನು, ಅವ್ರು ಹಿಂಗಾಂಗೆಲ್ಲ ಅಂದದಾರೆ. ನಾನು ಮಾತು ಕೊಡೋದೇನೊ ಕೊಟ್ಟೆ. ಅತು. ಈಗ ಇಷ್ಟು ಒಷ್ಟು ಕರಿಯೊ ಸಾಮಾನನ ತರಬೇಕ್ ನೀನು ಅಂದ್ಲು. ಕಡ್ಲೆ, ಹಸೆಕಡ್ಲೆ ಹಿಟ್ಟು, ಉದ್ದಿನ ಹಿಟ್ಟು ಎಲ್ಲ ತರಿಸಿದ್ಲು. ತರ್‍ಸಿ ಆಕೆ ಎಷ್ಟದಾಳೊ ಅಷ್ಟು ಎತ್ರದ ಒಂದ್ ಗೊಂಬೆ ಮಾಡಿದ್ಲು. ಗೊಂಬೆ ಮಾಡಿ ಎಣ್ಯಾಗೆ ಹಾಕಿ ಕರುದ್ಲು.

ಅನಂದೈಶ್ವರ್ಯದಿಂದ ಬರ್‍ತಾನೆ ಗಂಡು, ದಾಳುದಂಡು ಹೊಡಕಂಡು ಮದುವೀಗೆ. ಇವರು ಒಬ್ಬ ಮಗಳು ಅಪರೂಪಕೆ ಹುಟ್ಟಿದಾಳೆ ಅಂದು ಬಾಳ ದೊಡ್ಡಾಕ್ ಖರ್ಚಿಟ್ಟು ಮದುವೆ ಮಾಡಿದ್ರು. ಮದುವೆ ಮಾಡಿ ಎಲ್ಲ ಆತು. ಕರ್‍ದ್ ಕಳ್ಸಿದ್ರು ಕಾರ್ಯ ಮಾಡಿ ಕೊಡ್ಬಕಾತಲ ಹದ್ನಾರು ದಿವ್ಸಕ್ಕೆ? ಎಲ್ಲ ಓಜೆ ಮಾಡ್ಕೆಂದ್ರು. ಅವ್ನಿಗೇನು ಎನರ ಮಾಡಿ ಆಕೆನ್ನ ತಿನ್ನಬೇಕೂಂತ. ಕಾರ್ಯಮಾಡಿ ಕೊಡುವಾಗ ಮತ್ತೆ ದೊಡ್ಡಕಿಟ್ಟು ಜನಜಾತ್ರಿಗೆಲ್ಲ ಉಣಿಸಿದ್ರು. ಆಮ್ಯಾಲೆ ಇಕೆ ಕೈಯಾಗೆ ಎಲೆ ಅಡಿಕೆ ಕೊಟ್ಟು ಕಳಿಸಿದ್ರು. ಹೋಗವ್ವ ಮಂಚದ ಮ್ಯಾಗೆ ಮನಗೂಂತ ಕ್ವಾಣೇಗೆ. ಆಕಿಗೆ ಗೊತ್ತಿತ್ತಲ್ಲ - ಇಡುವರ್‍ಸೆ ತಿಂತಾನೆ ನನ್ನಾಂತ. ಆಕೆ ಆ ತರ್‍ದ ಗೊಂಬೆಯ ಮಂಚದ ಮ್ಯಾಗಿಟ್ಟು ಶಾಲುಹೊದಿಸಿ ತಾನು ಮಂಚದಡೇಲಿ ಕುತಗಂದ್ಲು ನೋಡಾನ ಏನ್ಮಾಡ್ತಾನೇಂತ. ಆವಾಗ ಇವ್ನು ಹೋದ್ಲೋನೆ ಎಲೆ ಅಡಿಕೆನು ನೋಡ್ಲಿಲ್ಲ

ಗೊಂಬೆ ಅನ್ನದು ನೋಡ್ಲಿಲ್ಲ ಮನಸ್ಸು ಅನ್ನದು ನೋಡಿಲ್ಲ. ಕಾಲಕಡಿಂದ ಕರಂಕುರುಂ ತಿನ್ನಾಕ್ ಹತ್ತಿದ. ಪಾಡಾಗೆ ಕರ್ರುದ್ದ್ಲ ರುಚಿಯಾತು. ಅಯ್ಯೋ ಇದು ಹೆಣ್ಣ ಇಷ್ಟು ರುಚಿ, ಇದ್ರು ಕುಟಾಗೆ ಬಾಳೇವ್ ಮಾಡಿದ್ರೆ ಇನ್ನೆಷ್ಟು ನನಿಗೆ ಹಿತ ಇತ್ತೊ. ಆಗ್ಲೆ ಮೊಣಕಾಲ ಮುಟ ತಿಂದ್ಕಂತ ತಿಂದ್ಕಂತ ಬಂದಾನೆ. ಆವಾಗ ಯೋಚನೆ ಮಾಡ್ತಾನೆ ಕುತಗಂದು. ಆಗ ಈಕೆ 'ಮಳ್‌ರಾಜ್ರೆ ಮನಸ್ಸು ಮನಸ್ರ ತಿನ್ನದು ಬದ್ದ. ನೀನು ಹೇಳಿದ್ದೆಲ ನಿನ್ ತಿಂತೇನೀಂತ ಅದ್ಕೆ ಹಿಂಗ್ ಮಾಡಿದ್ದೆ. ಮನಸ್ಸಿಗೆ ಮನುಸ್ರು ತಿಂದ್ರೆ ಪ್ರಪಂಚ ಉಳಿಯದುಂಟಾ' ಅಂದು ಗಂಡ ಹೇಂಡ್ತಿ ಒಂದಾದ್ರು.

ಬೆಳಕರಿಯತ್ಲು ಇವ್ರು ಬೇಕಾದ್ನೆ ಕೊಟ್ಟು ಆನಂದೈಶ್ವರ್ಯದಿಂದ ಗಂಡನ ಮನಿಗೆ ಕಳಿಸಿ ಕೊಟ್ರು ಗುಲಗಂಜಿ ಮಾದೇವಿನ. ಇವರು ಗಂಡ್ಮಕ್ಕಿಟ್ಗಂಡು ಸೊಸೇರು ಮಕ್ಕಳ್ನ ಇಟ್ಕಂಡು ಅವರು ಸುಖ್ವಾಗಿ ಅಲ್ಲಿ ಐದಾರಪ ಸಿಮೊಗ್ಗದ ಪ್ಯಾಟ್ಯಾಗೆ. ನಾವಿಲ್ಲದೇವಿ.

ಹೇಳಿದವರು : **ಸಂಗಮ್ಮ**, ಲಿಂಗಾಯಿತರು ಕತ್ತಿಗೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

# ೬. ತಾಯಿಯ ಮಾತು

ಒಂದೂರ್ನಲ್ಲಿ ಒಂದ್ ಅಜ್ಜಿಗೊಬ್ಬ ಮಗಾ ಇರ್‍ತಾನೆ. ಒಬ್ಬ ಮಗ ಇರ್‍ತೊನೊವೆ ಅಜ್ಜಿ ಏನಂತ ಆಶೀರ್ವಾದ ಮಾಡ್ತಾಳೆ ಅಂತ ಅಂದ್ರೆ, 'ನೋಡಪ್ಪ ನಾನ್ ನಿಂಗ್ ಹಣ, ಐಶ್ವರ್ಯ ಏನು ಕೊಡಾಕೆ ಸಾದ್ಯವಿಲ್ಲ. ಈ ನಾನ್ ಕೊಡ ಮಾತೇ ನಿನಗೆ ಭಾಗ್ಯ, ಅಂತ ಅಂತಾಳೆ. ಅಂಗ್ ಏಳಲು ಅವಳು, ಇವನು ಅದೇ ರೀತಿಯಾಗಿ ನಡೆಕೋತಾನೆ. ಏನಂತ ಹೇಳ್ತಾಳೆ ಅಂದ್ರೆ: ''ನೀನ್ ಎಲ್ಲೇ ವೋಗು, ಯಾವುದೇ ದೇವಸ್ಥಾನ ಆಗಲಿ, ಮಂಗಳಾರತಿ ಆಗೋವರ್‍ಗೂ ಬಿಟ್ ಎದ್ದೋಗ್ ಬೇಡಪ್ಪ'' ಅಂತ ಹೇಳ್ತಾಳೆ.

ಇವನು ಮಹಾರಾಜರ ಮನೇಲಿ ಒಂದಲ್ಲ ಒಂದ್ ದಿವ್ಸ ದೊರೆಗೆ ಮಂತ್ರಿ ಆಗ್ತಾನೆ. ಮಂತ್ರಿ ಆಗಿ, ರಾಜರಿಗೆ ಮಂತ್ರಿ ಆಗಿ ನಡೀತಿರ್‍ತಾನಲ್ಲ ? ಅವತ್ತು ದೊರೆ ಬೇಟೆಗೆ ಹೋಗಬೇಕಾಗಿ ಬರುತ್ತೆ. ಬೇಟೆಗೋಗಬೇಕಾಗಿದ್ರೆ ಕತ್ತಿ ಬಿಟ್ಟೋಗಿರ್‍ತಾರೆ. ಕತ್ತಿ ತಕ್ಕೊಂಬಾ ಹೋಗು ಅಂತ ಮಂತ್ರಿನ ಕಳಿಸ್ತಾರೆ. ಮಂತ್ರಿ ಕತ್ತಿ ತಗೋಂಬರಕ್ಕೆ ಅಂತ ಅರಮನೆಗೆ ಬಂದಾಗ ಅರಮನೇಲಿ ಇರ್‍ತಕ್ಕಂತ ರಾಜನ ಹೆಂಡ್ತಿ ಬೇರೆ ಪುರುಷನ ಕೂಡ ವಿನೋದ ಮಾಡ್ತಾ ಇರ್‍ತಾಳೆ; ಆವಾಗ ಅದನ್ನ ಮಂತ್ರಿ ನೋಡ್ತಾನೆ. ವಿನೋದ ಆಡಿದ್ದು ಕಣ್ಣಾರೆ ನೋಡಿದ ಮಂತ್ರಿ 'ಏನೋ ಅವರ ಮಾಡಿದ ಪಾಪ ಅವರ್‍ದು, ನಾವ್ ಮಾಡಿದ್ದು ನಮ್ದು, ಅಂತ ಹೇಳಿ ದೊರೆ ಕೂಡ ಹೇಳೋಲ್ಲ. ಮತ್ತೆ ದೊರೆ ಮಂತ್ರಿ ಸೇರಿ ಬೇಟೆಗೆ ಹೋಗ್ತಾರೆ.

ಬೇಟೆ ಆಡ್ಕೊಂಡು ಬರ್ತಾರೆ. ಬರೋದ್‌ರೊಳಗಾಗಿ ರಾಜನ ಹೆಂಡ್ತಿ ಮಂತ್ರಿ ಏನಾದ್ರು ನಮ್ ದೊರೆ ಕೂಟ ಹೇಳಿದ್ರೆ ದೊರೆ ಬಂದು ನನ್ನ ಸಿಗಿದು ತೋರಣಕಟ್ತಾರೆ. ಅಷ್ಟರೊಳಗಾಗಿ ಮಂತ್ರಿ ಮೇಲೆ ದೂರು ಹೊರಸಬೇಕು, ಅಂತ ಹೇಳಿ ದೊರೆ ಹೆಂಡ್ತಿ ಉಟ್ಟಿರೋ ಬಟ್ಟೇನೆಲ್ಲಾ ಹರಿದು, ಮಾನಭಂಗ ಮಾಡಿದಂತೆ ವಿಕಾರರೂಪ ತಾಳಿ ಮಲಗಿರ್ತಾಳೆ ಮಂಚದ ಮೇಲೆ. ದೊರೆ ಬಂದು, ನಾನು ಹಿಂದೆ ಬೇಟೆಗೋಗಿ ಬರೋವಾಗೆಲ್ಲ ನನ್ನ ಹೆಂಡ್ತಿ ಅಷ್ಟು ನಗು ಮುಖವಾಗಿ ಈಚೆ ಬರ್ತಿದ್ದೋಳು ಈ ರೀತಿಯಾಗಿ ನನ್ನ ಅರಮನೆ ನಿಶ್ಶಬ್ದವಾಯ್ತಲ್ಲ ಅಂತ ಹೇಳಿ ಬಂದು ಒಳಗೆ ನೋಡ್ತಾನೆ. ಇವಳು ಮಾನಭಂಗ ಮಾಡ್ದಂಗೆ ಮಲಗಿರ್ತಾಳೆ. ಅವಾಗ ಏನ್ ನಡೀತು ಅಂತ ಕೇಳಿದಾಗ, ನಿಮ್ ಮಂತ್ರಿ ಕತ್ತಿಯನ್ನು ತರಲು ಕಳಿಸಿದ್ದಾಗ ನನ್ನ ಮಾನಭಂಗ ಮಾಡಿದನೆಂದು ಚಾಡಿಹೇಳ್ತಾಳೆ. ಅವಾಗ ರಾಜ ದೊರೆ ಆಗಿರತಕ್ಕಂತವನು ತಪ್ಪು ಸರಿ ವಿಚಾರ ತಿಳಿದಲೇ ಅವನ್ನ ಶೂಲಕ್ಕೆ ಏರಿಸೋಕೆ ಆರ್ಡರ್ ಮಾಡ್ತಾನೆ. ಆವಾಗ ಶೂಲದ ಕಂಬ ರೆಡಿಯಾಗ್ತ ಐತೆ. ದೊರೆಯು ಮಂತ್ರಿಯನ್ನು ಶೂಲಕ್ಕೆ ಏರಿಸ್ತಾರೆ ಇವತ್ತು ಅಂತ ಜನ ಎಲ್ಲಾ ಮಾತಾಡ್ತಾ ಇದ್ದಾರೆ.

ಅಂಥವೇಳೆಯಲ್ಲಿ ರಾಜ ಇನ್ನೊಂದು ಆಜ್ಞೆ ಏನ್ ಮಾಡಿರ್ತಾನೆ ಅಂದ್ರೆ, ಶೂಲದ ಕಂಬದ ಹತ್ರ ಮೊದ್ಲು ಯಾರು ಬರ್ತಾರೋ, ಅವರ್ನ ಹಿಡಿದು ಶೂಲಕ್ಕೆ ಏರಿಸಿ ಅಂತ ಹೇಳಿ ಡಂಗುರ ಮೂಲಕವಾಗಿ ತಿಳಿಸಿರ್ತಾನೆ. ಆ ದಿವ್ಸ ವಿಘ್ನೇಶ್ವರನ ದೇವಸ್ಥಾನದಲ್ಲಿ ಮಂಗಳಾರತಿ ನಡೀತಾ ಇರ್ತದೆ. ಮಂತ್ರಿ ಏನ್ ಮಾಡ್ತಾನೆ ಅಂತ ಅಂದ್ರೆ ಅವರ ತಾಯಿ ಹೇಳಿದ ವಾಕ್ಯದಂತೆ ಗಣಪತಿ ದೇವಸ್ಥಾನದ ಹತ್ರ ಹೋಗಿ ಮಂಗಳಾರತಿ ಮುಗಿಯವರ್ಗೂ ಲೇಟ್ ಮಾಡ್ಕೊಂಡು ಮಂಗಳಾರತಿ ತಗೊಂಡು ಹೋಗ್ತಾನೆ; ಅವರ ತಾಯಿ ಹೇಳ್ದಂತೆ.

ಇವ್ನು ದೊರೆ ಹೆಂಡತಿ ಜೊತೇಲಿ ವಿನೋದ ಆಡ್ತಿದ್ದೋನು; ದೊರೆ ಹೆಂಡ್ತಿ ಹತ್ರ ಬಂದು ಕೇಳ್ತಾನೆ. ಮಂತ್ರೀನಾ ಶೂಲಕೆ, ಹಾಕಿದ್ರು, ಅಂತ ಕೇಳ್ತಾನೆ. ಆಕಿದಾರೋ ಇಲ್ಲೋ ವೋಗಿ ನೋಡ್ಕೊಂಬಾ ಅಂತ ಹೇಳಿ ದೊರೆ ಹೆಂಡ್ತಿ ಕಳಿಸ್ತಾಳೆ. ಮಂತ್ರಿನ್ನ ಶೂಲಕ್ಕೆ ಹಾಕಿದ್ದಾರೊ ಇಲ್ಲೋ ಅಂತ ನೋಡೋಕೋದಾಗ ಮೊದಲು ಬಂದೋರನ್ನ ಶೂಲಕ್ಕೆ ಏರಿಸಬೇಕು ಅನ್ನು ರಾಜಾಜ್ಞೆಯಂತೆ ಫಸ್ಟು ವೋದವನ್ಯಾರು ? ದೊರೆ ಹೆಂಡ್ತಿ ಕೈಯಲ್ಲಿ ವಿನೋದ ಆಡ್‌ತಕ್ಕವನೇ ಹೋದ. ಅವನ್ನ ಹಿಡಿದು ಶೂಲಕ್ಕೆ ಏರಿಸಿದ್ರು. ಮಂತ್ರಿ ಮಂಗಳಾರತಿಯನ್ನು ತಕ್ಕೊಂಡು, ಅವರ ತಾಯಿ ಮಾತ್ನಂತೆ ಹೋಗಿ ನೋಡಿದಾಗ, ತಪ್ಪು ಮಾಡಿದವರು ಶಿಕ್ಷೆ ಅನುಭವಿಸುತಿದ್ರು. ಅದಕ್ಕೆ ತಾಯಿ ಹೇಳಿದ ಮಾತ್ನಂತೆ ತನ್ನ ಮಗ ನಡೆಕ್ಕೊಂಡು ಧರ್ಮ ಮಾಡಿದ್ದು ! ಕರ್ಮ ಕರ್ಮ ಮಾಡಿದ್ದು.

ಹೇಳಿದವರು : **ಮುನಿಯಕ್ಕಯ್ಯ,** ಚೋಳೂರು, ದೊಡ್ಡಬಳ್ಳಾಪುರ ತಾಲ್ಲೂಕು.

# ೭. ನಾಗೇಂದ್ರ

ಒಂದೂರಲ್ಲಿ ಎಡೆಯೂರು ಅಂತ ಊರಲ್ಲಿ ಒಬ್ಬ ರಾಜ್ನಂತೆ. ಅವನಿಗೆ ಇಬ್ಬರು ಹೆಂಡ್ತೀದಿರು. ಹಿರೇ ಹೆಂಡ್ತಿಗೆ ಎರಡು ಮಕ್ಕಳು ಇರ್ತವಂತೆ. ಕಿರೇ ಹೆಂಡ್ತಿಗೆ ಮಕ್ಕಳೇ ಇಲ್ಲವಂತೆ. ಹಿರೇ ಹೆಂಡ್ತಿ ಎಸ್ರು ಗಂಗಮ್ಮ. ಕಿರೇ ಎಂಡ್ತಿ ಎಸ್ರು ತಿಮ್ಮಮ್ಮ. ವಾರೆಗಿತ್ತಿರ್ಗೆ, ಸವತೀರಿಗೆ ಹೊಡೆದಾಟ ಆಗ್ತದೆ ಅಂತ ಕಿರೇ ಹೆಂಡ್ತೀನ ತಕ್ಕೋಡ್ಹೋಗಿ ತೋಟದಾಗೆ ಗುಡಿಸ್ಲು ಹಾಕಿ ಗುಡಿಸ್ಲಾಗೆ ಇಟ್ಟವನ್ನಂತೆ. ಹಿರೇ ಹೆಂಡ್ತಿಗೆ ಮನೆ ಕಟ್ಟುಬಿಟ್ಟು, ಮನೇಲಿ ಮಕ್ಳು ಆಡಿಸಿಕೊಂಡು ಇರೊಕೆ ಇಟಕೊಂಡ್ ಬಿಟ್ಟ. ರಾಜ ಕಿರೇಹೆಂಡ್ತೀನ ಕಣ್ ಎತ್ತಿ ನೋಡಾಕಿಲ್ಲ. ಅವಳು ನನ್ನಂಗೆ ತಂಟ್ರುಪಂತ್ರಂಗೆ ಇದ್ಲು. ಕಣ್ಣೆತ್ತಿ ನೋಡಾಕಿಲ್ಲ. ಹಿರೇ ಹೆಂಡ್ತಿ ಅತ್ರಾನೇ ಸೇರೋಗ್ ಬಿಟ್ರು ರಾಜ. ಆಮೇಲೆ ಇವರು ಹಿರೇ ಹೆಂಡ್ತಿ ತವಾನೇ ಇದ್ರು.

ಆಮೇಲೆ ಈಯಮ್ಮ ಈ ಹೂವಾಡಗಿತ್ತಿ, ಹೂವ ತಕೊಂಡು ಈ ತಿಮ್ಮಕ್ಕ ಬಂದ್ಲು. ಕಿರೇ ಎಂಡ್ತಿ ನೀರು ಕಾಫಿ ಎಲ್ಲಾ ಸಪ್ಲೈ ಮಾಡ್ತಾ ಇದ್ಲು. ಕಿರೇ ಹೆಂಡ್ತಿಗೇ ಮಕ್ಕಳು ಇರಲಿಲ್ಲವಲ್ಲ ? ಈಯಮ್ಮ ಏನ್ ಮಾಡಿದ್ಲು? ''ಅಕ್ಕ ಅಕ್ಕ ಹಿರೇ ಹೆಂಡ್ತಿ ಮನೇಲಿಇರ್ತಾನಲ್ಲ. ನಿಮ ಮನೆಗೆ ಯಾಕಕ್ಕ ಬರಬಾರ್ದು ರಾಜ'' ಅಂತ ಅಂದ್ಲು.

''ನೋಡಮ್ಮ ಅವರಂದ್ರೆ ಚೆನ್ನಾಗಿದ್ದಾರೆ. ನಾನಂತೂ ಚೆನ್ನಾಗಿಲ್ಲ. ಎಂಗೂ ನಾನ್ ತಂತ್ರುಪಂತ್ರನಂಗಿದ್ದೀನಿ. ಅದಕ್ಕೇ ನನ್ ಹತ್ರ ಬರಲ್ಲ ಕಣವ್ವ'' ಅಂತ ತಿಮ್ಮಕ್ಕನೊಂದಿಗೆ ಹೇಳಿದ್ಲು.

ತಿಮ್ಮಕ್ಕನೊಂದಿಗೆ ಹೇಳ್ತಾಲೂವೆ 'ಅಲ್ಲ ಇವತ್ತು ರಾಜಂಗೆ ಒಂದು ಕತೆಮಾಡ್ತೀನಿ ನಾನು. ಇವತ್ತು ನಿಮ್ಮನೆಗೆ ರಾಜ ಬರಂಗೆ ಮಾಡ್ತೀನಿ. ರಾಜಂಗೆ ನೀನುಅಡಿಗೆಮಾಡಿ ಊಟಮಾಡ್ಸು, ಸ್ನಾನಮಾಡ್ಸು, ಮಂಚ ಹಾಕ್ಸು. ಮಂಚದ ಮ್ಯಾಲೇಅಚ್ಚುಕಟ್ಟಾಗಿ ಮಲಗ್ಸು ಅಂತ ಹೇಳಬಿಟ್ಟು ತಿಮ್ಮಕ್ಕಂಗೆ ಒಂದು ಐಡಿಯಾ ಹೇಳಕೊಟ್ಲು: 'ಏನಕ್ಕ ನೀನು ಮೂರು ಕಾಸು ಕೊಡು. ನೀನು ಮೂರು ಕಾಸು ಕೊಟ್ರೆ ನಾನುಅಂಗಡಿಗ್ಹೋಗ್ತೀನಿ, ಅಂಗ್ಡಿನಾಗೆ ಮೂರು ಡಬ್ಬಿ ತಗೋತೀನಿ, ಮೂರು ಡಿಬ್ಬಿಗೂನೆ ಕಡ್ಲೆತಕ್ಕೊಂತೀನಿ, ಮೂರು ಡಬ್ಬಿ ಕಡ್ಲೆ ತಕ್ಕೊಂಡು ಮೂರು ಡಬ್ಬಿಗೂ ಅಯ್‌ಕೊಂಡು ಬಂದು ಹಿರೇ ಎಂಡ್ತಿ ಇರೋತಕೆ ಹೋಯ್ತೀನಿ. ಹಿರೇ ಎಂಡ್ತಿ ಮನೆತಕೆ ಹೋದಾಗ, ಹಿರೇ ಹೆಂಡ್ತಿ ಪಕ್ಕದಲ್ಲಿ ನಾನು ಕೂತಕ್ಕೋತ್ತೀನಿ. ರಾಜನೂ ಬಂದು ಕೂತ್ಕೊಂಡಿರ್ತಾನೆ. ಕುತ್ಕೊಂಡಿದ್ದಾಗ ಇಂಗೆ ಮಾತಾಡಕೊಂಡು, ಕತೆ ಅಡ್ಕೊಂಡು ರಾಜನ ಹೆಂಡ್ತಿ, ರಾಜ ಇಬ್ಬರೂ ಮಾತಾಡ್ತಿರ್ತಾರೆ, ನಾನು ಈತರಕ್ಕೆ ಈತರ ಅಂತ.

''ಏನ್ರೀ ಬರಲಿಲ್ಲವಲ್ರೀ ? ನಿಮ ಚಿಕ್ಕ ಎಂಡ್ತಿನ ವಿಚಾರ್ರೋದಿಲ್ಲವಲ್ರೀ ? ಇಂಗೇ ಬರ್ತಿದ್ರೆ ಗೊತ್ತಿರ್ತದಲ್ಲ್ರೀ ? ಯಾವಾಗ್ಲೂ ಇಲ್ಲೇ ಇರ್ತೀರಲ್ಲ್ರೀ ? ಪಾಪ ಆಯಮ್ಮನ ಪ್ರೀತಿ ಏನ್ರೀ'' ಅಂತ ಹೇಳ್‌ಬಿಟ್ಟು ಕೇಳ್ತಿನಿ. ಇಲ್ಲ ಬರ್ತೀನಿ, ಏನು ಇಲ್ಲ. ಆಯಮ್ಮಂಗೇ ಊಟದ ಸಪ್ಲೈ ತಿಂಡಿ ತೀರ್ಥ ಬಟ್ಟೆ ಬರೇ ಒಕ್ಕೊಡೋದು ಸ್ನಾನ ಮಾಡ್ಸೋದು ನಿನ ಜವಾಬ್ದಾರಿ. ಬರ್ತೀನಮ್ಮ ಅಂತ ಹೇಳ್‌ಬಿಟ್ಟು ರಾಜ ಆಯ್ತು ಅಂತ ಹೇಳ್‌ಬಿಟ್ಟಾನೆ. ಆಮೇಕೆ ನಾನು ಸರಿಯಾಗಿ ಮಾಡಿಸ್ತೀನಿ ಅಂದಳು.

ಮೂರು ಡಬ್ಬಿಗೂನೇ ಕಡ್ಲೆ ಅಂಗಡಿ ಅಂಗಡಿಗೂ ಹೋಗಿ ಕಡ್ಲೆ ತಿಂದುಬಿಟ್ಟು ಬಂದುಬಿಡ್ತು. ಯಾರು? ತಿಮ್ಮಣ್ಣ. ಅಂಗ್ಡಿ, ಅಂಗಡಿಗೂ ಹೋಗಿ ಕಡ್ಲೇ ತಿಂದುಬಿಟ್ಟು ಆ ಡಬ್ಬೀಗೇ ಎಲ್ಲಾ ಊಸಿ ಊಸಿ ಮಡಗ್‌ಬಿಡ್ತು. ಮೊಹರ್ ಮಾಡಿಬಿಡ್ತು. ಊಸು ಹಾಕಿ ಮೊಹರ್ ಮಾಡಿಬುಡ್ತು ತಿಮ್ಮಣ್ಣ. ಇದೇನ ಮಾಡಿಬಿಟ್ಲು? ಹಿರೇ ಹೆಂಡ್ತಿ ಪಕ್ಕದಾಗೆ ಕೂತು ಮಾತಾಡತಿರೋವಾಗ ನಾನು ಹೀಂಗ ಕೂತಕೊಂಡೆ ಹಿರೇ ಹೆಂಡ್ತಿ ಪಕ್ಕದಲ್ಲಿ ಮೆತ್ತಗೆ ಮುಸುಕು ತೆಗೆದು ಬಿಡ್ತೇನೆ ಅಕ್ಕ ಅಂದಳು ಹೂವಾಡಗಿತ್ತಿ.

ಆ ಮುಸುಕ್ ತೆರೆದಾಗ ವಾಸನೆ ಬಡೀತದೆ. ಥೋ ಥೋ ಈ ಮುಂಡೆ ಚೆನ್ನಾಗಿ ತಿಂದು ಬಿಟ್ಟು ಗಬ್ಬುನಾತದ್ಹಂಗೆ ಊಸ್ತಾಳೆ ಅಂತ ಅಂದ್ಬುಟ್ಟು, ಇತ್ಲಾಗೇ ಓಡಿಬರೋ ಹಂಗೆ ಮಾಡ್ತೀನಿ ಅಂತ ಐಡಿಯಾ ಕಣಕ್ಕ. ಕೊಡಕ್ಕ ಕಾಸು ಅಂತ ಹೇಳಿಬಿಟ್ಟು, ಕಾಸು ಇಸಕ್ಕೊಂಡು ಒಂದು ಚಿಕ್ ಚಿಕ್‌ದಾಗೇ ಡಬ್ಬಗೋಳ ತಗೊಂಡುವ್ಹೋದ್ಲು. ಆ ಡಬ್ಬಗಳ ತುಂಬ ಅಂಗ್ಡಿ ಅಂಗ್ಡಿಗೂ ವ್ಹೋಯ್ತು ತಿಮ್ಮಣ್ಣ. ಕಡ್ಲೆ ಎಲ್ಲ ಈಸ್‌ಕೊಂಡು ಚೆನ್ನಾಗ ತಿಂದಬಿಟ್ತು. ಅಲ್ಹೋಗಿ ಡಬ್ಬಿಗೇ ಮೊಹರ ಮಾಡ್ತು. ಅವರಿಬ್ರೂ ಗಂಡ ಹೆಂಡ್ತಿ ಚೆನ್ನಾಗಿದ್ರಲ್ಲ ? ಹಿರೇ ಹೆಂಡ್ತೀನ ಗಂಡ ಅವರತ್ರ ಕೂತುಕ್ಕೊಂಡು ಈ ಡಬ್ಬಿ ಮುಸಕೆ ತೆಗೆದುಬಿಡ್ತು. 'ಆಯ್ಯೊಯ್ಯೋ ರಾಮ ರಾಮ ತಡೆಯೋಕಾಗಲ್ಲ. ಈ ಮುಂಡೆ ಹತ್ರ ನಾನು ಇರಾಕಾಗಲ್ಲ. ಈ ಊಸು ಗಬ್ಬುನಾತ. ನಾನು ತಡೆಯೋಕಾಗೊಲ್ಲ. ನಾನು ಇರಲ್ಲ. ನಾನು ನನ್ ಚಿಕ್ ಹೆಂಡ್ತಿ ಎಂತವಳು ಆದ್ರೂ ಆಗ್ಲೀ ಚಿಕ್ಕ ಹೆಂಡ್ತಿತಕ್ಕೇ ಓಯ್ತೀನಿ. ಈ ಮನೀಗೆ ಬರದಂಗೆ ಮಾಡ್ತೀನಕ್ಕ.

ನೀನು ಚೆನ್ನಾಗಿ ನೀರ ಕಾಯೆಸ್ಕೋ, ಅಡಿಗೆ ಮಾಡಿರು. ಅವರು ದೊರೆ ಇವತ್ತು ಮನೆಗೆ ಬರ್ತಾನೆ. ಇವತ್ತು ರಾತ್ರೇ ಇಲ್ಲಿ ಮಲಗ್ಸಿ ಬಿಡೋಣ ಅಂತ ಹೇಳಬಿಟ್ತು. ಹಾಗೆ ಹೇಳಿದ್ದ ಯಾರು ? ತಿಮ್ಮಣ್ಣ. ತಿಮ್ಮಣ್ಣ ಆಗಂತ ಹೇಳೂತ್ಲೂವೇ ಈ ತಿಮ್ಮಣ್ಣ ಏನ್ ಮಾಡಿಬಿಟ್ಟ ಥೂ ಥೂ ಬೇಡಪ್ಪ ಆ ಮನೇಗೆ ಹೋಗೋದು. ನಾನು ಚಿಕ್ ಎಂಡ್ತಿ ಮನೇಲೇ ಮಲಗಿರ್ತೀನಿ ಇವತ್ತು ಅಂತ ಚಿಕ್ಕ ಹೆಂಡ್ತಿ ಮನೇಗೇ ಗುಡಿಸ್ಲಿಗೇ ಬಂದ್‌ಬಿಟ್ಟ. ತೋಟದಾಗೆ ಚಿಕ್ ಎಂಡ್ತಿ ಮನೆಗೆ ಬಂದು ಮಲಗ್ಬಿಟ್ಟ. ಮಲಗ್ತುಲೂವೇ ಇವರು ಅವರು ಚಿಕ್ ಎಂಡ್ತಿ ಮನೇಲಿ ಮಲಕ್ಕೊಂಡಿದ್ದು ಎದ್ಹೋಗ್ ಬಿಟ್ರು. ಅವತ್ತು ರಾತ್ರಿ ಏನ್ ಮಾಡಿದ್ಲೂ ಅಕ್ಕ ಅಕ್ಕ ಯಜಮಾನ್ರು ಬಂದಿದ್ರ ? ಅಂತ ಕೇಳ್ತು.

'ಹೂಂ ಬಂದಿದ್ರು' ''ಮನಗಿದ್ರಾ ?'' '' ಉಂ ಮನಗಿದ್ರು'' 'ಸರಿಯಕ್ಕ'. ಈ ಸಲೀ ನಿಂಗೇನಕ್ಕ ಭಯ ಅಂತ ಹೇಳ್‌ಬಿಟ್ಟು ತಿಮ್ಮಣ್ಣ. ಆ ರೀತಿ ಅನ್ನೋವಾಗ ಅಕ್ಕ ಈಗ ಒಂದ್ ಕೆಲಸ. ಎರಡು ಮಕ್ಕಳವೇ ನಿನ್ ಸವತೀಗೆ. ನಿಂಗೆ ಮಕ್ಕಳಿಲ್ಲ.

ನಾನ್ನೊಂದು ಐಡಿಯಾ ಮಾಡ್ತೀನಿ. ಈಗ ನಾನೊಂದು ಐಡಿಯಾ ಮಾಡೋವಾಗ ನೀನು ಸುಮ್ನೇನೇ ಇರಬೇಕು. ಏನು ಮಾತಾಡ್‌ಕೂಡದು. ಈಗ ರಾಜ ಎಂಗೂ ಬಂದೋಗವ್ನೇ, ಮತ್ತೇ ನಿನ್ಗೇನಕ್ಕ ಭಯ ? ಅಂತ ಹೇಳ್‌ಬಿಟ್ಟು ಅವಳಿಗೆ. ರಾಜ ಅತ್ಲಾಗೆ ವೋಯ್ತುಲೂವೇ. ಇವಳು ಏನ್ ಮಾಡಿದ್ಲು? ಒಂದೊಂದು ಬಟ್ಟೇನೆ ಒಂದೊಂದು ಬಟ್ಟೆನೇ ಹೊಟ್ಟೆಗೆ ಚೆನ್ನಾಗಿ ಸುತ್ತಿ ಬಿಟ್ಲು. ಹೊಟ್ಟೆ ಮುಂದಕೆ ಬಂದುಬಿಟ್ತು. ಒಂಬತ್ತು ತಿಂಗ್ಳು ಗರ್ಭಿಣಿ ಕಿರೇಹೆಂಡ್ತಿ ಅಂತ ಹೇಳಿ ಊರೆಲ್ಲ ಟಾಮ್ ಟಾಮ್ ಮಾಡ್ದ ತಿಮ್ಮಣ್ಣ. ಸಾರೆಕ್ಕೊಂಬಂದ. ಸಾರಕ್ಕೊಂಬುತ್ಲೂವೇ ರಾಜ ಚಿಕ್ ಹೆಂಡ್ತಿ ಮನೆ ಹತ್ರಾನೇ ಓಯ್ತಿರಲಿಲ್ಲ. ಈಗ ಚಿಕ್ ಎಂಡ್ತಿಮನೆಗೆ ಹೋಗಿದ್ನ? ಬಿಡುಬಿಡು ಅವಳು ತೋಟುದಾಗ ಅವಳೆ. ಇವನು ಇಲ್ಲವಳೆ. ಹಿರೇ ಹೆಂಡ್ತಿ ಮನೇಲಿ ಇರವ್ನು ರಾಜ. ಈಗ ಅಲ್ಲಿಗ್ಹೋಗಿ ಬಿಡ್ ಬಿಡು. ಯಾರಿಗೋ ಬಸುರಿ ಆಗೋಗವಳೇ ಅಂತ ಹೇಳ್‌ಬಿಟ್ಟು, ಇವರು ದೂರಕ್ಕೆ ಶುರುಮಾಡಿಬಿಟ್ರು. ''ಇಲ್ಲ ಇಲ್ಲ ಚಿಕ್ ಹೆಂಡ್ತಿ ಮನೆಗೆ ಹೋಗಿದ್ದ. ಮೊನ್ನೆ ರಾತ್ರಿ ನಮ್ಮನೇಲಿ ಇರಲಿಲ್ಲ, ನಮ್ಮೆಜಮಾನ್ರು '' ಅಂತ ಹಿರೇ ಹೆಂಡ್ತಿ ಹೇಳ್‌ಬಿಟ್ಲು. ಆಮೇಲೆ ಇವ್ರು ಏನ್ ಮಾಡಿಬಿಟ್ರು.?

ಒಂಬತ್ತು ತಿಂಗಳೀಗೆ ಅಕ್ಕ ಏನು ಮಾಡಬೇಕು ? ನಾನ್ ನಿನಗೇ ಮುಸಕೆ ಹಾಕ್ತೀನಿ. ಮೈ ತುಂಬಾ ಬಟ್ಟೆ ಹಾಕ್ತೀನಿ, ಮೈ ತುಂಬಾ ಬಟ್ಟೆ ಅಕ್‌ಬಿಟ್ಟು ನಿಂಗ್ ಕಪ್ಪು ಇಟ್‌ಬಿಟ್ಟು ಕರೇ ಕಪ್ಪು ಮಡಗ್ಸಿತ್ತೀನಿ. ನೀನು ಮಲಿಕ್ಕೋ ಅಂತ ಹೇಳ್‌ಬಿಟ್ತು. ಒಂದು ಕೆ.ಜಿ. ಗೋದಿ ಹಸಿಟ್ಟು ತಂದ್ಲು. ಒಂದು ಕೆ.ಜಿ. ಸಕ್ಕರೆ ತಂದು ಅದನ್ನು ಈ ತಿಮ್ಮಣ್ಣ ಚೆನ್ನಾಗಿ ಮೆದ್ದುಬಿಟ್ಟು ಗೊಂಬೆಮಾಡಿ ಮನಸನ ತರಾನೇ ಮಗ ಮಾಡಿ ಇಟ್‌ಬಿಡ್ತು.

ಬಂದ ರಾಜ. 'ಎಂತಾ ಮಗ' ? 'ಗಂಡು ಮಗ'. 'ಚೆನ್ನಾಗದ ?' 'ಊಂ ಚೆನ್ನಾಗದೆ'. 'ನಾಮಕರಣ ಎಷ್ಟ್ ದಿನಕ್ಕೆ ಇಟ್‌ಕೊಳ್ಳೋಣ'? ಒಂಬತ್ತು ದಿವ್ಸಕ್ಕೆ ಇಟ್ಕೋಳೋಣ ಅಂದ ಬಿಟ್ಟು ಈಯಪ್ಪ ಒಂಟೋಗ್‌ಬಿಟ್ ತಿರ್ಗಾ.

ಈ ಮಗ ಸ್ನಾನ ಮಾಡ್ಸೋದು, ತೊಟ್ಲಲ್ಲಿ ಮಲಗ್ಸೋದು, ಎರಡು ದಿನ ಆ ರೀತಿ ಮಾಡ್ದ. ಮೂರನೇ ದಿವ್ಸ ಏನ್ ಮಾಡ್ದ ತಿಮ್ಮಣ್ಣ ? ಆ ಮಗಾನ ಎತ್ತಕೊಂಡುವೋದ. ಒಳ್ಳೆ ಬೆಳಕ್ ಹರಿಯೋ ಜಾವ ನಾಲ್ಕು ಗಂಟೆ. ಸ್ನಾನಕೆ ಬತ್ತಾರಲ್ಲ ದೇವಗನ್ನೇರೇರು? ನಾಗಲೋಕದಿಂದ ದೇವಗನ್ನೀಕೆರು ಸ್ನಾನಕೆ ಬರ್ತಾರೆ. ಆ ಬಾವಿ ದಟಕ್ಕೆ ಹತ್ರ ತಕ್ಕೋಡ್ಹೋಗಿ ಈ ಗೊಂಬೇನ ಇಟ್ಟ. ಈ ಗೊಂಬೆ ತಕ್ಕೋಂಡ್ಹೋಗಿ ಆ ಬಾವಿ ದಟದಲ್ಲಿ

ಇಡ್ತೆಲೂವೇ ಈ ದೇವಗನ್ನೇರು ನಾಗಲೋಕದಿಂದ ಸ್ನಾನಕ್ ಬರಬೇಕಲ್ಲ ? ಆ ಸಮಯದಲ್ಲಿ ಆ ಮಗನ್ನ ಅಲ್ಲಿ ಇಟ್ರು. ಅವರು ಮರ ಹತ್ತಿಕೊಂಡ್ರು. ಇವರು 'ಏನ್ ಮಾಡಿದ್ರು ? ಆ ಗೊಂಬೆ ನೋಡಿರ್‍ಲಿಲ್ಲ. ದಡ್‌ದಡ್‌ನೇ ಬಟ್ಟೆ ಬರೇನೆಲ್ಲ ಬಿಚ್ಚ್‌ಬಿಟ್ರು. ನೀರಿಗೆ ಬಿದ್‌ಬಿಟ್ರು. ದಡಬದ್‌ನೇ ಯಾವಾಗ ಬಾವೀಲಿ ದುಮುಕತ್ಲೂವೇ ಈ ಬಟ್ಟೇನೆಲ್ಲ ಮೆತ್ತಗೆ ಗಂಟು ಕಟ್‌ಕೊಂಡಿದ್ದೇನೆ ವೋಗಿ ಮರದ ಮ್ಯಾಲೆ ಕೂತ್ಕೋಂಬಿಟ್ಟ. ಯಾರು? ತಿಮ್ಮಣ್ಣ. ತಿಮ್ಮಣ್ಣ ಮರದ ಮೇಲೆ ಕೂತ್ಕೋತ್ಲೂವೇ ಇವ್ರು ಸ್ನಾನಮಾಡಿ ಆಗೋಯ್ತು. ಸ್ನಾನಮಾಡಿ ಆಯ್ತಾಲೂವೇ ಮ್ಯಾಲಕ್ ಬಂದ್ರು. 'ಯಕ್ಕಾ ನನ್ ಬಟ್ಟೆ ಇಲ್ಲ. ಯಕ್ಕಾ ನನ್ ಬಟ್ಟೆ ಇಲ್ಲ. ಮ್ಯಾಕು ಕೆಳಕ್ಕೂ ನೋಡಿದ್ರು. ಅಕ್ಕ ಯಾವುದೋ ಒಂದು ಮಗ ಐತೇ ಕಣಕ್ಕ ಅಂದಿದ್ದೆ ಅದಕೆ ಮುತ್ತಿಕ್ಕಿದ್ದುರು. ಆದರೆ ಕೈ ಹಿಂಗ್ ಕಿತ್ಕೋಳ್ಳೋದು, ತಿಂದ್‌ಬಿಡೋದು, ಅದರ ಕೈ ಕಿತ್ತುಕೊಳ್ಳೊದು ತಿಂದುಬಿಡೋದು.

ಅಕ್ಕ ಭಾರಿ ರುಚಿಯಾಗ್ಯೆತೆ ಕಣಕ್ಕೆ ಮಗ ಅಂತ ಹೇಳ್‌ಬಿಟ್ ಪೂರ್ತಿ ತಿಂದ್ಕೋಂ-ಬಿಡೋರು. ಮಗಾನೇ ಪೂರ್ತಿ ದೇವಗನ್ನೇರು ತಿಂದ್‌ಬಿಟ್ರು. ಈ ಬೊಂಬೆಮಾಡಿ ಮಡಗಿದ್ರೆ ತಿಂದಕೊಳ್ದಂಗೆ ಅಂಗೇ ಇರ್‍ತಾರ ? ಪೂರ್ತಿ ತಿಂದೇ ಬಿಟ್ರು.

ಇವ್ರು ನಾಕು ಜನಾನು ದೇವಗನ್ನೇರು. ನಾಕು ಜನ ದೇವಗನ್ನೇರು ತಿಂದುಬಿಟ್ಬುರು. ಈಗ ಇವರು ಮ್ಯಾಕು ಕೆಳಕ್ಕೂ ನೋಡ್ತಾರೆ. ಬಟ್ಟೆ ಮ್ಯಾಲೇ ಐತೆ. ಮಂಗಣ್ಣ ತಂಗಡ್ಹೋಗ್ಯೆತೆ ತಿಮ್ಮಣ್ಣ.

'ಏ ಮಂಗಣ್ಣ ನನ್ ಬಟ್ಟೆ ಕೊಡು ಅಂತ ಈ ನಾಕು ಜನ ಕೇಳಿದ್ರು. ಆಗ ತಿಮ್ಮಣ್ಣ ನಿಮ್ ಬಟ್ಟೆ ನಾನ್ಹೆಂಗೆ ಕೊಡ್ಲಿ ? ನನ್ ಮಗ ಅಲ್ಲಿತ್ತು. ನೀವು ತಿಂದುಕೊಂಡಿದ್ದೀರಾ. ನನ್ ಮಗ ಕೊಡ್ರಿ ಅಂತ ಇದು ಕೇಳ್ತು. ಆ ನಿನ್ ಮಗ? 'ಆ' ನಿಮ್ದಾ ಮಗ ? ಅಂ ನಮ್ದು ಮಗ. ಅಲ್ಲಿ ಮಡಗಿದ್ದೆ. ನೀವ್ ತಿಂದ್‌ಕೊಂಡಿದ್ದೀರಾ. ನನ್ ಮಗ ಕೊಡ್ರಿ. ಅದುವರೆಗೂ ನಿಮ್ ಬಟ್ಟೆ ಮಾತ್ರ ಕೊಡಗಿಡಲ್ಲಮ್ಮ. ಅಂಗಿರೋದೇ ನೀವು. ಅಂಗೇ ನಾಗಲೋಕಕ್ಕೆ ವೋಗದೆ. ಅಂತ ತಿಮ್ಮಣ್ಣ ಹೇಳ್ದಾ.

ಆ ಮೇಲೆ ಇವನೇನ್ ಮಾಡಿಬಿಟ್ಟ? ಆಯ್ತು ನಿನ್ ಮಗಾನ ಕೊಡ್ತೀನಿ. ಬಟ್ಟೇನಾ ಎಸೆದುಬಿಡಪ್ಪ. ನಮ್ಮ ಮಾನ ಮರ್‍ಯಾದೆ ಒಂಟೋಗ್‌ಬಿಡುತ್ತೆ ಅಂತ ಹೇಳ್‌ಬಿಟ್ಬು ಈ ನಾಗಕನ್ನೇರು ಎಲ್ಲಾ ಕೇಳ್‌ಬಿಟ್ರು. ಆಯ್ತು ಬಟ್ಟೆ ಎಸಿತ್ತೀನಿ. ನೀವು ಯಾವಾಗ ಮಗ ತಂದು ಕೊಡ್ತೀರಾ ಅಂತು. ಮತ್ತೆ ನೀನ್ ಮಗ ತಂದುಕೊಡದು ನಮ್ಮಿಂದ ಸಾಧ್ಯವಿಲ್ಲ. ಈತವಲ್ಲಿಂದ ದೊಡ್ಡ ಬಾಗ್ಲೀಗೋದ್ರೆ ದೊಡ್ಡ ರಾಕ್ಷಸ ಐತೆ. ಆದ್ರಿಂದ ಆಚೆವೋದ್ರೆ ಇನ್ನಾ ದೊಡ್ಡ ರಾಕ್ಷಸ ಐತೆ. ಅದರೊಳಗಾಡಿ ದೊಡ್ಡ ರಾಕ್ಷಸಕ್ಕಿಂತ ದೊಡ್ಡ ರಾಕ್ಷಸ ಅವ್ರೇ. ನೀನು ಒಳಗಡೆ ಮಾತ್ರ ಬರಬೇಡ. ನೀನು ಈ ಬಾಗಿಲಲ್ಲೇ ಇರಬೇಕು. ನೀನು ಬಂದ್ರೆ

ನಾಗಕನ್ನೀರು ಅಂತ ಕೇಳ್ಕೊಂಬಂದ್ರೆ ಅಲ್ಲಿ ದೊಡ್ಡ ರಾಕ್ಷಸನ್ನ ಪಸ್ಪು ಕೇಳದ್ರೆ ನಿನ್ನ ನುಂಕ್ಕೊಂಬಿಡ್ತಾನೆ. ಒಂದು ಕೆಲಸ ಮಾಡು.ನಾನು ಅಲ್ಲಿಂದ ಒಂದು ಐಡಿಯಾ ಮಾಡಿಕ್ಕೊಂಬತ್ತೀನಿ. ನಿನ್ಗೆ ಮಗ ಕೊಡಬೇಕಾದ್ರೆ, ನೀನು ಈ ಬಾಗಲಾಗೇ ಇರಬೇಕು. ನಾವು ವೋಯ್ತಿವಿ. ಒಳಗಡೇ ಹೋಗಬಿಟ್ಟು ನಾಗರ್ಹಾವಾಗಿ ಆಯ್ತೀವಿ. ಅದನ್ನ ಸೀಳ್ ಬಿಟ್ಟು ನಾಗರವು ಮಧ್ಯೆ ಬಾಲದೊಳಕ್ಕೆ ಮಗನ್ನ ಮಡಿಕ್ಕೊಂಡು ತಂದು ಮಗನ್ನ ನಿಂಗ್ ಕೊಡ್ತೀವಿ. ಅದರವರೆಗೂ ನೀನು ಒಳಕೆ ಬಂದ್‌ಗಿಂದಿಯೇ. ಇಲ್ಲಾಂದ್ರೆ ನಿನ್ ತಿಂದ್ಕೋಬಿಡ್ತದೆ. ನಮುಗಲ್ಲಿ ಸುಮ್ಕೇ ಬಿಡ್ತಾರ ?

ಇವರೆಲ್ಲಾ ವೋಗಿ ನರಮಾನವ್ರನ ತಿಂದವ್ರೆ ಅಂತ ನಮುಗೆಷ್ಟು ತೆಗಳ್ತಾರೆ. ನಾಗನ್ನೇರು. ಅಂತ ಹೇಳಬಿಟ್ ಸ್ನಾನಕ್ಕೋಗಿ ಮಕ್ಕಳನ್ನ ತಿಂದ್‌ಬಿಟ್ಟು ಬಂದವ್ರೇ ಅಂತ ನಮ್ಮನ್ನು ನಾಗಲೋಕದಾಗೆ ಎಷ್ಟು ತೆಗೆಳ್ತಾರೆ. ನೀನು ನಾನು ಹೇಳ್‌ದಂಗೇ ನೀನು ಇಲ್ಲೇ ಇರಬೇಕು; ಅಂತ ಹೇಳಿಬಿಟ್ಟು ಇವರು ಒಂಟೋಗಬಿಟ್ರು. ಯಾರು ? ನಾಗನ್ನೇರು. ನಾಲ್ಕು ಜನ ಒಂಟೋಗ್ಬಿಟ್ಟು ಒಳಕ್ಕೋದ್ರು. ಇವನು ಇಲ್ಲಿ ಮಿಣುಕು ಮಿಣುಕು ನೋಡಕೊಂಡೆ ಕುಂತವ್ನೆ. ಬಾಕಲಲ್ಲೇ ಕುಂತವ್ನೆ. ಹೋಗ್ತಾ ಈತರ ಭಾಷೆಕೊಟ್ಟು ಬಂದಿದ್ರಲ್ಲ? ತಿಮ್ಮಣ್ಣಂಗೆ? ಅವರಿಗೆ ಒಂದು ಮಗ ತಕ್ಕೋಡ್ಹೋಗಿ ಕೊಟ್‌ಬಿಡಬೇಕು ಅಂತ ನಾಗಕನ್ನೇರು ಉತ್ಪತ್ತಿಮಾಡಿ, ಪಾಪ ಅವತ್ತು ಮಗ ತಿಂದಕ್ಕೊಂಬಿಟ್ಟಿದ್ದೀವಿ ಅಂತ ಬಂದ್ ಹೇಳಿದ್ರು. ಉಳಿದ ದೇವಗನ್ನೇರ ಮುಂದೆಗಡೇ ಹೇಳ್‌ಬಿಟ್ರೆ ನಮ್ಗೆ ಈ ತರ ಮಗ ತಿಂದ್ಕೊಂಡವರೆ ಅಂತ ಹೇಳಬಿಟ್ರೆ ಅವರ ಮನುಷ್ಯಾನ ತಿನ್ನೋ ನರ ಪೀಡೆ ಅಂತಾರೆ.

ನಾವು ದೇವಗನ್ನೇರಾಗಿ ನರಮಾನವರನ್ನು ತಿನ್ನೋದುಂಟ ? ಬಂದೆಬಿಡ್ತಾನೆ, ಒಳಗಡೆಗೆ ಅಂತ ಹೇಳಬಿಟ್ಟು ಇವ್ರು ಬುದ್ಧಿವಂತಿಕೆಮಾಡಿಬಿಟ್ಟು ಆ ಮಗೂನ ಯಾವ ರೀತಿ ತಂದ್ರು ಅಂತ ಅಂದ್ರೆ

ಆ ಮಗನ ಈತರ ನಾಗರ ಹಾವಿನ ಬಾಲ ಸಿಗಳುಬಿಟ್ರು. ಸಿಗಳುಬಿಟ್ಟು ನಾಗರಹಾವಿನ ಬಾಲದೊಳಕ್ಕೆ ಮಗ ಮಡಿಕ್ಕೊಂಬಿಟ್ಟು ತಿರುಗ್ ಅಂಗೆ ಮುಚ್ಚಿಕ್ಕೊಂಬಿಟ್ರು; ನಾಗರಹಾವಿನ ತರ. ಈ ನಾಗಕನ್ನಿಕೆರು ಬಂದ್ಬಿಟ್ಟರು. ಈಚೆಗೆ ಬಂದ್ರು. ನಾಗಕನ್ನೀಕೆ ಈಚೆಗೆ ಬರ್ತಲೂನೇ ಆ ಮಗನಾ ಈಯಪ್ಪ ಅಲ್ಲೇ ಕಾಯ್ಕೊಂಡು ಕೂತಿದ್ದಾರೆ. ತಿಮ್ಮಣ್ಣ ಆ ಮಗಾನ ನೋಡುಅಂತ ಆ ಬಾಲ ಬಿಚ್ಚುಬಿಟ್ರು. ಆ ಮಗ ಕೊಟ್ಟುಬಿಟ್ಟು ಒಂಟ್ಹೋಗಿ ಬಿಡ್ತು.

ನಾಗನ್ನಿಕೇರು ಏನು ಹೇಳಿದ್ರೂ ವೋಗುವಾಗ 'ನೋಡು ನಿನ್ನ ಹತ್ತಿರ ಹನ್ನೆರಡು ವರ್ಷ ಮಗ ವಾಸ ಇರೋದು. ಹನ್ನೆರಡು ವರ್ಷದ ಮ್ಯಾಗೆ ಅವನು ಎಲ್ಲಿದ್ರೂ ನಾನ್ ಬಿಡತಕ್ಕದ್ದಲ್ಲ. ಆ ಮಗ ನಮ್ಮ ವಸ ಆಗ್ಲೇಬೇಕು, ಯಾವತ್ ಇದ್ರೂನೂವೇ. ಆ ಮಗ ಮಾತ್ರ ನಿಮ್ಹತ್ರ ಹನ್ನೆರಡು ವರ್ಷನೇ ಇರೋದು. ಹನ್ನೆರಡು ವರ್ಷದ ಮ್ಯಾಲೆ ನಾವೆ

ಕರಕ್ಕೋತೀವಿ ಅಂತ, ಇವನ್ಗೆ ಹೇಳ್‌ಬಿಟ್ಟು ವೊಂಟೋದ್ರಾ? ಯಾರು? ನಾಗಕನ್ನಿಕೇರು. ಹೇಳಿಬಿಟ್ಟು ವೊಂಟೋದ್ರು. ಈ ತಿಮ್ಮಣ್ಣ ಮಗ ಎತ್ಕೊಂಡು ಬಂದ. ಬಂದೇಟಿಗೆ ಏನ್ ಮಾಡ್ದ 'ಅಕ್ಕಾ ಮಗ ತಗೋ. ಇಲ್ಲಿ ಅಚ್ಚುಕಟ್ಟಾಗಿ ಮಗೀಗೇ ಸ್ನಾನ ಮಾಡಿ, ಊಟ ತಿಂಡಿ ಎಲ್ಲ ಕಿಲೀನಾಗಿ ನೋಡ್‌ಕೋಬೇಕು ನೀನು. ನಮ್ ದೊರೆನ ನಮ್ಮನೆಗೆ ಕರ್ಕೋ ಬತ್ತೀನಿ. ದೊರೇ ದೊರೇ ಇವತ್ತು ನಮ್ಮ ಮನೆ ನಾಮಕರಣಕ್ಕೆ ನಾನು ಎಲ್ಲ ಸಪ್ಲೈ ಮಾಡಬೇಕು ಅಂತ ಹೇಳ್‌ಬಿಟ್ಟು, ಆ ದೊರೆಗೆ ಹೇಳ್‌ಬಿಟ್‌ಬತ್ತೀನಿ ಅಂತ ಹೇಳಿ ತಿಮ್ಮಣ್ಣ, ಮಗ ಇಲ್ಲಿ ಬಿಟ್ಟುಬಿಟ್ಟು ಅಲ್ಲಿಗ್ಹೋದ. ದೊರೆ ಮನೆಗೇ. ಆ ರಾಜನ್ನ ಮನೆಗೋಗುತ್ಲೂವೇ ಆ ರಾಜ ಏನ್ ಮಾಡ್‌ಬಿಟ್ಟ? ಪ್ರತಿಯೊಂದು ತಕ್ಕೊಂಡು, ನಾಮಕರಣಕೆ ತಕ್ಕೊಂಡಿದ್ದೆಯಾ, ಚಿಕ್ ಹೆಂಡ್ತಿ ಮನೆಗೆ ಊರಾಗೂ ನಾಡಾಗೂ ಎಲ್ಲ ಟಾಮ್ ಟಾಮ್ ಒಡಿಸಿಬಿಟ್ಟ. ನನ್ ಚಿಕ್ಕ ಹೆಂಡ್ತಿಗೆ ಮಗೀಗೆ ನಾಮಕರಣ ಅಂತ ಹೇಳ್‌ಬಿಟ್ಟ. ಎಲ್ಲರಿಗೂ ಹೇಳ್‌ಬಿಟ್ ಬಂದ್‌ಬಿಟ್ಟ. ಆ ಮ್ಯಾಲೆ ಇವರೆಲ್ಲ ಬರೋ ಹೊತ್ಗೆ ಎಲ್ಲಾ ರೆಡಿಯಾಗಿತ್ತು.

ನಾಮಕರಣ ಮಾಡಕೇ, ಹೆಸರಿಡಕೇ ಎಲ್ಲಾ ಬಂದ್ರು. ಬಂದ್ ಕೂತ್‌ಕೊಂಡ್ರು. ಇವರೆಲ್ಲ ಅಚ್ಚುಕಟ್ಟಾಗಿ ನಾಮಕರಣ ಮಾಡಿದ್ ಮ್ಯಾಗೇ ಏನ್ ಹೆಸ್ರು ಕಟ್ಟಬೇಕು ಅಂತ ಕೇಳಿದ್ರು. ಇಲ್ಲಪ್ಪ ನನಗೊತ್ತಿಲ್ಲ. ನಿಮ್ಗೇ ಗೊತ್ತು. ನೀನು ಹೇಳು ಅಂತ ಗಂಗಮ್ಮನ ಕೇಳಿದ್ರು. ಗಂಗಮ್ಮ ಹಿರೇ ಹೆಂಡ್ತಿ. ಇಲ್ಲಪ್ಪ ನಿಮ್ಮ ಹೆಂಡ್ತಿ ಮಕ್ಳು ನಿಮಗೇ ಗೊತ್ತು. ನನ್ಗೇನು ಗೊತ್ತು? ಗೊತ್ತಾಗಲ್ಲ ಏನ್ ಹೆಸ್ರು ಕಟ್ಟೀರೋ ನಿಮಗೇ ಗೊತ್ತು. ರಾಜ ನೀವೇನು ಹೆಸ್ರು ಕಟ್ಟಿಯಪ್ಪ ಮಗೀಗೇ ? 'ನಮ್ಗೂ ಗೊತ್ತಿಲ್ಲಾರೀ. ನೀವೇ ಕಟ್ಟಬೇಕು. ರಾಜ ಮತ್ತೇ ತಿಮ್ಮಣ್ಣ ನನಗೂ ಬರಲ್ಲ ನನ್ ದೊಡ್ಡ ಹೆಂಡ್ತಿಗೂ ಬರಲ್ಲ, ನನ್ ಚಿಕ್ ಹೆಂಡ್ತಿಗೂ ಬರಲ್ಲ, ನೀನೇ ಏನ್ ಹೆಸರು ಇಟ್ಟುಕೋಬೇಕೋ ಹೇಳು ಅಂದ. ಆಗ ತಿಮ್ಮಣ್ಣ ಏನ್ ಮಾಡಿಬಿಟ್ಟ ? ಆ ಮಗೇನ ಹೆಸ್ರು ಏನಂತ ಕಟ್ಟಬೇಕು ಅಂದ್ರೆ 'ನಾಗೇಂದ್ರ ಅಂತ ಕಟ್ಟಬೇಕು ಅಂದ.

ನಾಗಲೋಕದಿಂದ ಕಳ್ಸಿದ್ರಲ್ಲ ? ಅದಕ್ಕೆ ನಾಗೇಂದ್ರ ಅಂತ ಕಟ್ಟಬೇಕು ಅಂದ. ನಾಮಕರಣ ಇಟ್ಟುಬಿಟ್ಟು ಜನರು ಒಂಟೋದ್ರು. ದೊಡ್ಡ ಹೆಂಡ್ತಿ ಮನೇಗೆ ಗಂಡ ಹೆಂಡ್ತಿ ಇಬ್ಬರೂ ಒಂಟೋದ್ರು.

ಚಿಕ್ಕ ಹೆಂಡ್ತಿ ಮನೇಲೀ ಈ ತಿಮ್ಮಣ್ಣ, ನಾಗರಾಜ, ತಿಮ್ಮಮ್ಮ ಮೂರು ಜನ ಅವ್ರೆ. ಇವ್ರು ಮೂರು ಜನ ಇಲ್ಲಿ ಮೂರು ಜನ ಅಲ್ಲಿ ಈಂಗೆ ದೊಡ್ಡವ್ರು, ಚಿಕ್ಕವ್ರು ಆಗ್ತಾ ಬಂದ್ರು. ಇವ್ರೀಗೆ ದಿನ ತುಂಬ್ತಾ ಬಂತು. ಯಾರಿಗೆ ? ನಾಗರಾಜರಿಗೆ. ನಾಗರಾಜರಿಗೆ ಯಾವಾಗ ದಿನ ತುಂಬಾತಾ ಬರ್ತಾಲೂವೇ ಇನ್ನು ಹೆನ್ನೆರಡು ವರ್ಷ ತುಂಬ್ತಾ ಬಂತು. ಈ ಮಗ ನನ್ನವಶ ಆಗ್ಲೇಬೇಕು ಅಂತ ಎಳ್‌ಬಿಟ್ಟು ನಾಗರಾಜ ಬತ್ತಾನೆ. ಅವಾಗ ಕರ್ಕೋಡ್ಹೋಗಕ್ಕೆ ಬಂದಾಗ ಈ ತಿಮ್ಮಣ್ಣ ಏನ್ ಹೇಳ್ತಾನೆ : ಹನ್ನೆರಡು ವರ್ಷ ಅಲ್ಲ ಹನ್ನೆರಡು ಗಳಿಗೇನೂ ಇನ್ನ ನಾನು

ಕಳಿಸಲಾರೆ. ನನ್ ಮಗ ನನ್ ಹತ್ರ ಇರಬೇಕು. ನೀವು ಅವತ್ತು ನನ್ ಮಗ ತಿಂದ್ರಿ. ಇವತ್ತು ನಮ್ಮ ಮಗೂನಾ ಕೊಟ್ಟಿದ್ದೀರಾ. ಈಗ ನಿಮ್ ಮಗಾನ ಕಳ್ಸೋಕೆ ಸಾಧ್ಯವಿಲ್ಲ ಅಂತ ಕಣ್ಣೀರ ಹಾಕ್ತ ಅವ್ರೆ. ಯಾರು ? ಅವರ ತಾಯಿ, ತಿಮ್ಮಣ್ಣ. 'ಈಗ ನನಗೆ ಸಾಧ್ಯವೇ ಇಲ್ಲ ಮಗ ಕಳ್ಸೋಕೆ ಅಂತ ಎಳೆಬಿಟ್ಟು ಕಳ್ಸಲ್ಲ. ಅಂತ ಹೇಳಬಿಟ್ಟು, ವಾಪಸ್ಸು ಕಳ್ಸಿಬಿಟ್ರು.

ಈಗ ಏನ್ ಮಾಡಿದ್ರು ? ವೋಗಾ ದಾರೀಲಿ ಅರವಂಟಿಗೆ ಇಟ್‌ಬಿಟ್ಟು ನನ್ ಮಗೀಗೆ ನಾಗಲೋಕದ ಮುಖ ತೋರಿಸದ್ಹಂಗೆ ನನ್ ಮಗ ಇಲ್ಲೇ ಶಾಶ್ವತವಾಗಿ ಇರಬೇಕು ಅಂತ ಈ ತಿಮ್ಮಣ್ಣಬಂದ. ಬಂದವ್ರೆಲ್ಲ ಅರವಂಟಿಗೆ ಊಟ ಮಾಡ್ಕೊಂಡು, ಅನ್ನ ನೀರು ತಿನಕ್ಕೊಂಡು ಹೋಗಲು ಅರವಂಟಿಗೆ ಹಾಕ್‌ಬಿಟ್ಟ. ಅರವಂಟಿಗೆ ಹಾಕಿದ್ರೂವೇ ಈ ಮಗಾನ ಯಾವ ರೀತಿ ತಗೋಬೇಕು ಅವರಿಗೊತ್ತಿಲ್ಲ, ನಾಗಾಲೋಕದವರ್ಗೇ. ಆ ನಾಗಲೋಕದಲ್ಲಿ ಇವರೆಲ್ಲ ಅರವಂಟಿಗೆ ಇಟ್‌ಕೊಂಡ್ರು. ಊಟದ ಸಮಯ ಕುಂತೆಕೊಂಡ್ರು, ಮಗನೂ ಊಟ ಬಡಿಸ್ತಾ ಇದ್ದ. ಆ ಸಮಯದಲ್ಲಿ ವೋಗಿ ಅರವಂಟಿಗೆ ಮುಂದೆ ನಿಂತ್‌ಕೊಂಡ. ಅರವಂಟಿಗೆಯ ಮುಂದೆ ಯಾವಾಗ ನಿಂತ್‌ಕೊಂಡ, ಒಂದು ಕಡ್ಡಿತರ ಆಗಿ ಬಂದಿದ್ದೆ ಕಚ್‌ಬಿಟ್ಟ. ಯಾರಿಗೆ ? ನಾಗೇಂದ್ರಂಗೆ. ಅವರ ಮಗ ಅವ್ರು ಕರಕ್ಕೋಬೇಕಲ್ಲ ? ಬಂದಿದ್ದೆ ಕಚ್‌ಬಿಟ್ಟ. ಏನೋ ಕಚ್‌ಬಿಟ್ತು ಅಂದಿದ್ದೆ ಸುಮ್ನೆ ಆಗಬಿಟ್ರು. ಜೀವ ವೊಂಟೋಯ್ತು.

ಹದಿನಾರು ಹಳ್ಳಿಗೂ ನಾನೆ ಅರವಂಟಿಗೆ ಇರಿಸಿದ್ದೆ. ಅರವುಂಟೆಗೆ ಇರಿಸಿದ್ರು ನಂಗೇನೂ ಸುಖ ಇಲ್ಲದೇ ವೋಯ್ತು. ಮಗ ತೀರೋಯ್ತು ಅಂತ ಹೇಳ್‌ಬಿಟ್ಟು ಅವರು ಅತ್ತುಕೊಂಡ್ ಕರ್‌ಕೊಂಡ್ ಮನೆಗೆ ಬಂದೆ ಬಿಟ್ರು.

ಈ ರಾಜ, ಈ ರಾಜನ್ನ ಮನೇಲೇ ಇದ್ದ. ಇದ್ರೇ ಆಗ ಗಂಡ ಬರ್ತಾನೆ, ಮಗ ಏನಾಯ್ತು ಅಂತ ಗಂಡ ಬರ್ತಾನೆ. ನೋಡ್ತಾನೆ ಗಂಡ ಇಂಗಿಂಗೆ ಏನೋ ಮುಟ್‌ಬಿಟ್ಟು ಮಗ ಸತ್ತೋಗ್‌ಬಿಡ್ತು. ಅದರ ಆಸೆ ಬಿಟ್‌ಬಿಡಿ. ಅದರ ಆಸೆ ತೀರೋಯ್ತು. ಇನ್ಯಾಕೆ ಅದರ ನೆನಕೋಬೇಕು ಅಂತ ಹೇಳಿಬಿಟ್ರು. ಆಮೇಲೆ ಗಂಡ ಹೆಂಡತಿ ಚಿಕ್ಕ ಹೆಂಡ್ತಿ ಎಲ್ಲಾ ಒಂದ್ ಕಡೆ ಸೇರ್‌ಕ್ಕೊಂಡು ಕ್ಲೀನಾಗೀ ಅಚ್ಚುಕಟ್ಟಾಗಿ ಇದ್ರು.

ಹೇಳಿದವರು : **ಕರಿಯಮ್ಮ,** ಯಲಿಯೂರು, ಕುಣಿಗಲ್ ತಾಲ್ಲೂಕು.

# ೮. ದೊರೆ ಕಥೆ

ಒಬ್ಬ ದೊರೆ ಅಂತೆ. ಒಬ್ಬದೊರೆಗೆ ಐದು ಜನ ಗಂಡ್ಮಕ್ಕಳಂತೆ. ಐದು ಜನ ಗಂಡ್ಮಕಳಾದ್ರೆ ಐದು ಜನದಲ್ಲಿ ನಾಲ್ಕು ಜನಕ್ಕೆ ಮದ್ವೆ ಮಾಡಿದ್ರಂತೆ. ಈ ಕಡೆ ಹುಟ್ಟಿದ ಮಗನಿಗೆ ಎಲ್ಲೆಲ್ಲೋ ಹೆಣ್ಣು ನೋಡಿದ್ರಂತೆ; ಎಲ್ಲಿ ಹೆಣ್ಣು ನೋಡಿದ್ರು, ನನಗೆಲ್ಲೂ ಇಷ್ಟವಿಲ್ಲ, ನನಗೆ ಬೇಕಿಲ್ಲ ಅಂತ ಹೇಳಿದ್ನಂತೆ ದೊರೆಮಗ ಚಿಕ್ಕವ್ನು. 'ಸರಿ' ಆಯ್ತಪ್ಪಾ ನೀನು ಎಲ್ಲಿ ಬೇಕೋ ಅಲ್ಲಿ ಹೆಣ್ಣು ನೋಡ್ಕೊಂಬಾ. ನೀನು ನೋಡ್ಕೊಂಬಂದು ನಮಗೆ ಹೇಳಿಕಳಿಸಿದ್ರೇ ನಾವು ಬಂದು ಅವಾಗ, ನಿನಗೆ ಮದ್ವೆ ಲಗ್ನ ಮಾಡ್ತೀನಿ ಅಂತ ಹೇಳಿದ್ರಂತೆ, ಅವ್ರ ತಂದೆ ಆದವರು. ಅವಾಗ ಅವರ ತಂದೆ ವೋಗಿ, ಕುದುರೆ ಲಾಯಕ್ಕೋಗಿ, ಒಂದು ಕುದುರೆ ಹಿಡಕೋಟ್ರಂತೆ. ಒಂದು ಕುದುರೆ ಹಿಡಕ್ಕೊಟ್ಟು, ಒಂದು ಜೋಳಿಗೆ ಹಣ ಕೊಟ್ಟಂತೆ, ''ಹೋಗಪ್ಪ ನೀನು ಎಲ್ಲಿ ಬೇಕೋ ಅಲ್ಲಿ ಹೆಣ್ಣು ನೋಡ್ಕೊಂಡು ಬಾ ಮಗನೇ'' ಅಂತ ಹೇಳೀ ಕಳಿಸಿದ್ರಂತೆ.

ಆವಾಗ ಅವ್ನು ಈ ಕುದುರೆ ಹಾಕ್ಕೊಂಡು ಜೋಳಿಗೆಗೆ ಹಣನೂ ಹಾಕ್ಕೊಂಡು ಹೋದ. ಇಂಗೇ, ಒಂದು ಯೋಜನಾ ಹೋದ. ಅಲ್ಲಿ ಒಂದು ಯೋಜನಾ ಓತಾ ಇದ್ದಂಗೇನೆ ಅಲ್ಲಿ ಒಬ್ಬ ಗುರು ತಪಸ್ಸಿಗೆ ಕೂತಿದ್ದ. ತಪ್ಸಗೆ ಕೂತಿದ್ರೇ ಏನ್ಮಾಡೋದು ಇಲ್ಲಿ? ? ಈವಾಗ ಅವ್ರನ್ನ ಮಾತಾಡ್ಸಿದ್ರೇ ಇವ್ರು ಯೋಗ ಭಂಗವಾಗ್ತೈತೆ. ಯಾ ತರ ಮಾಡ್ಬೇಕು ಈವಾಗ ನಾನು ? ಅಂತ ಯೋಚ್ನೆ ಮಾಡ್ದ. ಅವಗೊಂದು ಮಡಿಕೇ ತಂದ. ಒಂದು ಗಡಿಗೆ ತಂದ. ಒಂದು ಒಲೆ ಇಟ್ಟು, ಆ ನೀರನ್ನುಯ್ದು, ಆ ಮಡಿಕೆಗೆ ಮೂರು ತೂತ್ಕುಯ್ದ. ಈ ಅಕ್ಕಿ ಹಾಕ್ದ. ಅದರೊಳಕ್ಕೆ ಅಕ್ಕಿ ಹಾಕಿ, ಅನ್ನ ಮಾಡಿ, ಊಟ ಮಾಡಾನಾ ಅಂತೇಳಿ ಅದೇಮ್ಯಾಲೆ ನೀರುಯ್ಯುತಾನೆ. ಅಡೇ ಒಲೇ ಉರಿಸ್ತಾನೆ. ಈ ಒಲೆ ಹತ್ತಲಿಲ್ಲ, ಅಡಿಗೆ ಅನ್ನ ಮಾಡ್ಲಿಲ್ಲ, ಊಟ ಮಾಡ್ಲಿಲ್ಲ ಅವ್ನು. ಬೇಜಾನೂ ಹೊತ್ತಾಯ್ತು.

ಈ ಗುರು ಹಂಗೇ ದೃಷ್ಟಿಸಿ ನೋಡ್ದಾ. ಯಾ ರಾಜನ್ನ ಮಗನಿರ್ಬೋದಾ? ಏನಕ್ಕಿಲ್ಲಿ ಬಂದ ? ನರಮನಸ್ರು ಇಲ್ಲಿ ಯಾರೂ ಬರಲ್ಲ. ಇವ್ನು ಯಾರೋ ಇಲ್ಲಿ ಬಂದಿದ್ದಾನಲ್ಲ. ಏನು ತಿಳಿತೋದೊ, ತಿಳಿಯದೇಲ್ವೊ ಇಷ್ಟೋತ್ತಾಗೀನೂ ಅಡ್ಗೇ ಮಾಡ್ಕೊಂಡು ಊಟ ಮಾಡ್ಲಿಲ್ಲ. ತಡೀ ಹೋಗೆ ಬಿಡೋಣ, ನೋಡೇ ಬೀಡೋಣ ಅಂತಂದು, ಆಗ ಗುರುಗಳು ತಪಿಸ್ಸಿಂದ ಎದ್ದು ಆತನ್ನ ನೋಡಿದ್ರು.

'ಏನಪ್ಪಾ ಎಷ್ಟೊತ್ತಾಯ್ತು ನೀನು ಅಡಿಗೆ ಮಾಡ್ಬೇಕು, ಊಟ ಮಾಡ್ಬೇಕು ಅಂತ ಒಲೆ ಹಚ್ಚಿ ಇಷ್ಟೊತ್ತು ನೀನು ಅಡಿಗೆ ಮಾಡಿ, ಊಟ ಮಾಡಿಲ್ಲವಲ್ಲ. ಇದು ಇಂಗೇ ತೂತು ಉಯ್ದುಬಿಟ್ಟು, ನೀನು ಮೇಲೆ ಇಂಗೇ ಒಲೇ ಉರಿಸಿದ್ರೆ ಅನ್ನ ಆಕ್ಕೈತಾ ? ಜೋಡಿಮಣ್ಣು ತಂದು, ಆ ತೂತಿಗೆ ಮೆತ್ತೀ, ಒಲೇ ಉರಿಸಿ, ಅನ್ನ ಮಾಡಿ, ಊಟ ಮಾಡಯ್ಯ ಅಂದರು.

"ಸ್ವಾಮಿ ನಾನು ಊಟ ಮಾಡೋಕೆ ಬರ್ಲಿಲ್ಲ. ನಾನು ನಿಮ್ಮನ್ನ ಮಾತಾಡಿಸಿದ್ರೇ, ಏನೂ ಭಂಗವಾಗ್ತೆತೋ ಏನೋ ಉರಿಗಣ್ಣು ಬಿಡ್ತಿರೋ ಅನ್ನೋ ಇದ್ರ ಮೇಲೆ ನಾನು ಈ ರೀತಿ ಮಾಡ್ದೆ ಸ್ವಾಮಿ. ಅದಕ್ಕೋಸ್ಕರ ಈ ಭಯದಿಂದ, ಈ ರೀತೀ ಮಾಡ್ದೆ ನಾನು. "ಆಗ್ಬೇಕಾದ್ದು ಏನಪ್ಪಾ ನನ್ನಿಂದ" ಅಂದ್ರು. 'ಸ್ವಾಮಿ ನನಗೆ ಒಂದು ಹೆಣ್ಣಾಗಬೇಕು. ಅಡಕರಾಯನ ಮಗ್ಳು ಹೆಣ್ಣಾಗಬೇಕು; 'ಏನಯ್ಯಾ ನೀನೂ ಅಂದ್ರೇನು? ಅಡಕರಾಯನ ಮಗ್ಳು ಅಂದ್ರೇನು? ನಿನ್ನಿಂದ ಅತ್ಯೆತಾ ದೇವಲೋಕದ ಹೆಣ್ಣು ತರಕ್ಕೆ?' 'ಇಲ್ಲಾ ಸ್ವಾಮಿ ನಿಮ್ಮ ದಯಾ ಒಂದಿದ್ರೇ ನಾನು ತರಬೇಕು ಅಂತ ಬಂದ್ದೀನಿ' ಅಂತ ಹೇಳ್ದಾ. 'ಆಯ್ತಪ್ಪಾ ಇನ್ನಾ ಮುಂದೇ ಹೋಗು. ಅಲ್ಲಿಂಗೇ ನಮ್ಮಣ್ಣ ತಪ್ಪಸಿಗೆ ಕುಳಿತವನ್ನೆ. ಮುಂದೆ ಅವ್ರ ಇದೇ ರೀತಿ ಮಾಡು. ಅವ್ನ ಬಂದು ಅದೇ ರೀತಿ ಕೇಳ್ತಾರೆ. ಅವ್ರಿಂದ ನೀನು ಕೇಳಿದ್ದು ಆಗತತೆ ಹೋಗೋ' ಅಚಿತ ಇವ್ರು ಇಲ್ಲಿ ಹೇಳಿ ಕಳಿಸಿದ್ರು.

ಇನ್ನ ಅಂಗೇ ಒಂದು ಯೋಜನೆ ಮುಂದೇ ಹೋದ. ಒಂದು ಯೋಜನಾ ಹೋಗಿ ಅಲ್ಲಿಗೆ ಸಾಯಂಕಾಲ ಅಲ್ಲಾಯ್ತು. ಅಲ್ಲೂ ಇಂಗೇ ಇದೇ ರೀತಿ ತೂತು ಮಡಕೆ ಇಕ್ಕಿದ. ಅಕ್ಕಿ ಹಾಕ್ದ. ನೀರು ಉಯ್ಕದ. ಒಲೆ ಉರಿಸ್ತಾನೆ. ಅಲ್ಲೂ ಇಂಗೇ ಮಾಡ್ದ.

ಇಂಗೇ ಇವ್ರು, ತಪ್ಪಸಿಗೆ ಕೂತಿದ್ದೋರು ''ಏನೂ ಈ ರಾಜ್ಯಕ್ಕೆ ಯಾರೂ ಬರಲ್ಲ ನರಮನಸ. ಈ ನರಮನಸ್ಸ ಇಲ್ಲಿ ಬಂದವನ್ನಲ್ಲ? ಯಾ ದೊರೆ ಮಗನೋ ? ಯಾ ಪಟ್ಣದ ರಾಜನ ಮಗನೋ ? ಎಷ್ಟೋತ್ತಾಯ್ತು ಅಡ್ಗೇ ಮಾಡಿ, ಊಟ ಮಾಡ್ಲಿಲ್ಲ, ಏನಿರ್ಬೋದು ?'' ಅಂತೇಳಿ ಆಗ ಇವ್ರು ತಪಸ್ಸನ್ನ ಇದು ಮಾಡೀ ಹೋಗಿ ನೋಡಿದ್ರು.

"ಏನಪ್ಪಾ ನೀನು ಯಾವೂರು? ನೀನು ಯಾ ದೊರೆಮಗ? ನೀನು ಇಲ್ಲಿ ಬಂದಿದ್ದ ಕಾರಣ ಏನು? ಎಷ್ಟೊತ್ತಾಯ್ತು ನೀನು ಒಲೆ ಹಚ್ಚಿ, ಅಡಿಗಿ ಮಾಡ್ಲಿಲ್ಲ, ಅನ್ನ ಊಟ ಮಾಡ್ಲಿಲ್ಲ. ಏನೇ ಕಷ್ಟಪಟ್ರೂ ಇಂಗೇ ಮಾಡಿದ್ರೆ ನೀನು ಊಟ ಮಾಡ್ತೀಯ? ಈ ತೂಗುಗಳಿಗೆ ಜೋಡು ಮಣ್ಣು ತಂದು ಮೆತ್ತಿ ಒಲೇ ಉರಿಸಿ ಊಟ ಮಾಡಯ್ಯಾ". "ಸ್ವಾಮಿ ನಾನು ಅಡ್ಗೆ ಊಟ ಮಾಡೋಕೆ ಬರ್ಲಿಲ್ಲ. ನಾನು ಇಲ್ಲಿ ನಿಮ್ಮಿಂದ ಒಂದು ಕಾರ್ಯ ಆಗ್ಬೇಕು ಅದಕ್ಕೋಸ್ಕರ ನಾನು ಎಂಗೇ ಮಾತಾಡ್ಲೋದು, ನಾನು ಎಂಗೇ ಭಂಗ ಮಾಡೋದು ನಿಮ್ಮ ಯೋಗನಾ ಅಂತೇಳಿ. ನಾನು ಈ ರೀತಿ ಮಾಡ್ದೇ ಸ್ವಾಮಿ" ಅಂದ.

'ಅಂಗಿದ್ಮೇಲೆ ನನ್ನಿಂದ ಏನಯ್ಯ ಆಗ್ಬೇಕಾದ್ದು?' 'ಸ್ವಾಮಿ ನನಗೊಂದು ಹೆಣ್ಣಾಗ್ಬೇಕು. ನನಗೆ ಅಡಕರಾಯನ ಮಗ್ಳು, ಅಡಕರಂಭೇ ಆಗ್ಬೇಕು ಅಂದ.

''ಏನಯ್ಯಾ ನೀನು ಅಂದ್ರೇನು ? ಅಡಕರಾಯನ ಮಗ್ಳು ಅಂದ್ರೇನು ? ನಿನ್ನಿಂದ ಸಾಧ್ಯವಾತದ ? ಆ ದೇವಲೋಕದ ಹೆಣ್ಣು ತರಕ್ಕೆ'' ಅಂದ. ಇಲ್ಲ ಸ್ವಾಮಿ ನಿಮ್ಮ ದಯಾ ಒಂದಿದ್ರೆ ನಾನು ವೋಗೀ ಅವಳ ತಂದೇ ತತ್ತೀನಿ ಅಂತ ಹೇಳಿದ. ನಿಮ್ಮ ಭಯಕ್ಕೊಸ್ಕರ ಇಂಗ್ಮಾಡ್ದೇ ಅಂತ ಹೇಳ್ದಾ.

ಆಯ್ತಪ್ಪಾ ನೀನು ಮುಂದೇ ವೋಗು. ಅಲ್ಲಿಂಗೇ ನಮ್ಮಣ್ಣ ಒಬ್ರು ಕೂತವ್ರೆ. ಅವ್ರಿಂದ ನಿನಗೆ ಆತದೇ ಹೋಗು ಅಂತ ಹೇಳಿ ಕಳಿಸಿದ್ರೂ. ಅಂಗೇ ಮುಂದೇ ಹೋದ. ಇವನು ಇನ್ನೊಂದು ಯೋಜ್ನ ವೋದಾಗ ಅಲ್ಲಿ ಸಾಯಂಕಾಲ ಆಯ್ತು. ಅದೇ ಒಲೆ ಊಡೀ ಅದೇ ಗಡಿಗೆ ಮಡಿಗೀ, ನೀರು ತಂದು, ಅಡ್ಗೆ ಮಾಡೋಕ್ಕೆ ಈಯಪ್ಪ ಪ್ರಯತ್ನಮಾಡ್ದ.

ಇವ್ರು ತಪಸ್ಸಿಗೆ ಕೂತಿದ್ದೋರು, ಎಷ್ಟೋತಾದ್ರೂ ಇವ್ನು ಅಡ್ಗೆ ಮಾಡಿಲಿಲ್ಲ. ಊಟ ಮಾಡಿಲ್ಲವಲ್ಲ. ಈ ಲೋಕಕ್ಕೆ ಯಾರೂ ಬರಲ್ಲ. ಈ ಪ್ರಪಂಚಕ್ಕೆ ಯಾರೂ ನರಮನಸ್ನೇ ಇಲ್ಲಿ ಅಡ್ರೆಸ್ಸಿಗಿಲ್ಲ. ಇವ್ನು ಯಾರೋ ನರಮನಸ ಇಲ್ಲಿ ಬಂದಿದ್ದಾನಲ್ಲ. ಎಂಗೇ ಬಂದಾ ಇವ್ನು ದೇವಲೋಕಕ್ಕೆ? ಇವ್ನು ಯಾ ರಾಜನ ಮಗ ಇರ್‍ಬೋದು ? ಯಾ ಪಟ್ಣದ ದೊರೆಮಗ ಇರ್‍ಬೋಕು ? ಅಂತ ಇವ್ರು ಯೋಚ್ನೆ ಮಾಡೀ ಎದ್ದು ಬಂದ್ರು. ತಪಸ್ಸಿನಿಂದ ಎಚ್ಚರಿಕೆ ಆಗೀ ಎದ್ದು ಬಂದು ಅವಾಗ ಏನೇಳಿದ್ರು? ''ಏನಯ್ಯ ಎಷ್ಟೋತ್ತಿನಿಂದ ನೀನು ಅಡಿಗೆ ಮಾಡ್ತಿದ್ದೀಯಾ, ಈ ತೂತು ಮಡಿಕೆ ಇಕ್ಕಿದ್ರೇ ನಿನ್ಗೆ ಅನ್ನ ಅಗ್ತೈತಾ ? ಈ ತೂತಿಗೆ ಜೋಡಿಮಣ್ಣು ತಂದು ಮೆತ್ಬಿಟ್ಟು, ಅಕ್ಕಿ ಅಕೀ ಅನ್ನ ಮಾಡೀ ಊಟ ಮಾಡಪ್ಪ. ತಿಳಿತದೋ ತಿಳಿಯಲ್ವೋ ನಿನಗೇ? ಬತ್ತೈತೊ ಬರೋದೆ ಇಲ್ಲೋ, ಈ ರೀತಿ ಮಾಡಿದ್ದೀಯಾ. ನಿನ್ಗೆ ಗೊತ್ತಾಗ್ಲಿಲ್ಲ. ಈತರ ಮಾಡಯ್ಯ ನೀನು ಅಂತ ಹೇಳಿದ್ರು.

''ಸ್ವಾಮಿ ನಾನು ಅಡಿಗೆ ಮಾಡಕ್ಕೂ ಬರ್‍ಲಿಲ್ಲ. ಊಟ ಮಾಡಕ್ಕೂ ಬರ್‍ಲಿಲ್ಲ. ನಿಮ್ಮಿಂದ ನನಗೊಂದು ಕಾರ್‍ಯ ಆಗ್ಬೇಕು. ಈ ಭಯಕ್ಕೋಸ್ಕರ ನಿಮ್ಮ ಭಂಗವಾಗ್ತೈತೆ. ನೀವು ಯೋಗಕ್ಕೆ ಕೂತಿರೋರು ಅಂತ ಹೇಳಿ, ನಾನು ಈ ರೀತಿ ಮಾಡ್ದೇ ಸ್ವಾಮೀ ಅಂತ ಹೇಳ್ತಾನೆ.

''ಏನಪ್ಪಾ ಅಂತದ್ದು ನನ್ನಿಂದ ಏನಾಗ್ಬೇಕು ? ಅಲ್ಲಿ ದೂರದಿಂದ ಒಬ್ಬ ನರಮನಸ್ನೇ ಬರಲ್ಲ. ನೀನು ಇಷ್ಟು ದೂರದಿಂದ ಬಂದಿದ್ದೀಯಲ್ಲ. ನಿನ್ನಿಂದ ಅತ್ತೈತೇನಯ್ಯ ಇದನ್ನ ತರೋದಿಕ್ಕೆ ಅಷ್ಟೊಂದು ಸುಲಬ್ನಾಗದಾ'' ಅಂದ್ರು.

'ಇಲ್ಲ ಸ್ವಾಮಿ ನಿಮ್ಮ ಸೇವೆ ಒಂದಿದ್ರೇ ನಾನು ತಂದೇ ತತ್ತೀನಿ ಸ್ವಾಮಿ. ನಿಮ್ಮ ಇದು ನನಗ್ಬೇಕಾದ್ದು'' ಅಂದ. ಸರಿ ಆಮೇಲೆ ಮೂರು ಹಿಡಿ ಮಳ್ಳು (ಮರಳು) ಮಂತ್ರಿಸಿಕೊಡ್ತೀನಿ. ಮೂರು ಇಜ್ಜಿಲು ಕರಿ ಮಂತ್ರಿಸಿಕೊಡ್ತೀನಿ. ಮೂರು ನಿಂಬೆಹಣ್ಣು ಮಂತ್ರಿಸಿಕೊಡ್ತೀನಿ. ಈ ಮೂರು ತಗೊಂಡೋಗು. ಈ ಮೂರು ತಗೊಂಡೋಗಿ ಒಂದು ಗಿಡದಡೇ ಮರೇಒಳಗೆ ಕೂತ್ಕೋ. ಮರೇ ಒಳಗೇ ಕೂತ್ಕೊಂಡು ದೇವಲೋಕದೊರೆಲ್ಲ ನಾಟ್ಯ ಆಡಾಕೇ ಬತ್ತಾರೆ. ನೀರಿನೊಳಕ್ಕ ಇಳಿದು ನಾಟ್ಯ ಆಡ್ದಾಗ, ಒಂದು ಮರಾದೆ ಅಡಿಕೆಮರ. ಬಗ್ಗುತ್ತೈತೆ ಜಲಕ್ರೀಡೆ ಆಡೋವಾಗ, ದೇವಗನ್ನಿಕೆರೆಲ್ಲ ಬಂದು ಜಲಕ್ರೀಡೆ ಅಡೋವಾಗ, ಆ ಅಡಕೆಮರ ಬಗುತ್ತೈತೆ. ಆ ಬಗ್ಗದಾಗ ನೀನು ಹೋಗಿ ಒಂದೇ ಅಡಕೇಕಾಯದೇ ಅದರೊಳಗೆ. ಆ ಅಡಿಕೆಕಾಯಿ ಕಿತ್ತು ಜೋಬಿಗಾಕ್ಕೊಂಡು, ನೀನು

ತಿನ್ಬೇಕು ಅಂತ ಹೇಳಿದರು. ನೀನು ಇನ್ನೇನು ಅತ್ರಕ್ಕೆ ಬರೋವಾಗ್ಗೆ ಈ ನಿಂಬೆಹಣ್ಣು ಅಕ್ಕು. ನಿಂಬೆಹಣ್ಣು ಪೊದೆ ಆತದೇ. ಅದನ್ನ ಆಕಾಶದವರ್ಗೂ ಹೆಣಕ್ಕೊಂಬಿಡ್ತದೆ. ಅದನ್ನ ತಪ್ಪಿಸ್ಕೊ ಬರೋವಾಗ್ಗೆ ಇನ್ನೊಂದು ಯೋಜ್ನ ಬತ್ತೀಯಾ. ಇನ್ನೊಂದು ಯೋಜ್ನ ಬಂದಾಗ ಈ ಇಜ್ಜಲು ಕರಿ ಹಾಕು. ಇಜ್ಜಲುಕರಿ ಹಾಕಿ, ಅದು ಬೇಕಾದಷ್ಟು ಆಕಾಶಕ್ಕೂ ಮುಗಿಲಿಗೂ ಒಂದೇ ಬೆಂಕಿ ಆತದೇ. ಆ ಬೆಂಕಿ ಒಳಗೆ ತಪ್ಪಿಸ್ಕೊಂಬರೋವಾಗ್ಗೆ ಇನ್ನೊಂದು ಯೋಜ್ನ ಬಂದ್ಬೀಡ್ತಿಯಾ ಅಂತ ಹೇಳುದ್ರು.

ಆಮೇಲೆ ಇನ್ನೇನು ಹತ್ರಕ್ಕೆ ಬಂದೋ ಅನ್ನೋವಾಗ್ಗೆ ಇದಾಕಿದ ಮಳ್ಳು. ಮಳ್ಳು ಏನೋ ತೊರೆ ಆಯ್ತು. ನೀರು ಆ ತೊರೆ ಆಗೋವಾಗ್ಗೆ ಈ ಗುರುಗಳ ತವ್ಕೇ ಬಂದ್ಬಿಟ್ಟ. ಗುರುಗಳ ತಂಕೆ ಬಂದ್ಬಿಟ್ರೇ, ಈ ಗುರುಗಳೇನು ಮಾಡಿದ್ರು? ಒಂದು ಹಲ್ಲಿ ಮಾಡಿ, ಗೋಡೆ ಮೇಲೆ ಬಿಟ್ಬಿಟ್ರು. ಹಲ್ಲಿ ಮಾಡಿ ಗೋಡೆ ಮೇಲೆ ಬಿಟ್ಬಿಟ್ರೆ, ಆ ರಾಕ್ಷಸಗೊಂಟೆಗಳೆಲ್ಲ ಬಂದ್ರು, ದೇವಗನ್ನೇರು ಬಂದ್ರು.

ಸ್ವಾಮಿ ಇಲ್ಯಾರೋ ಒಬ್ಬ ನರಮನಸ ಬಂದವ್ನೆ. ನಮ್ಮ ಸೀರೆಗಳನ್ನೆಲ್ಲಾ, ನಮ್ಮ ಉಡುಪನ್ನೆಲ್ಲಾ ಎತ್ತಿಕೊಂಡು ಬಂದ್ಬಿಟ್ಟವ್ನೇ. ಅವ್ನೆಲ್ಲವ್ನೇ ತೋರ್ಸಿ. ಇಲ್ಲೇ ಬಂದ, ಇಲ್ಲೇ ಮಾಯ ಆಗವ್ನೆ ಅಂತ ಕೇಳಿದರು

ಯಾವ ನರಮನಸ್ನ ಬಂದಿದವ್ನು ? ಅವ್ನು ಯಾರೋ ಬಂದವ್ನೇ. ನೀವು ತೋರಿಸ್ಲೇ ಬೇಕು ಅಂದ್ರು. ಇಲ್ಲಾ ಸ್ವಾಮಿ ಎಲ್ಲಿದ್ರೂ ನೋಡ್ಕೊಳಿ ಇಲ್ಲಿ ಯಾರೂ ಬರ್ಲಿಲ್ಲ. ಇಲ್ಲಿ ಯಾವ ನರಮನಸ್ರು ನಮ್ಮತ್ರ ಉಳಿತಾನಾ? ಅಂಗೇ ಉರಿದೋಗ್ಬಿಡ್ತಾನೆ; ಅಂತ ಆ ಗುರುಗಳು ಹೇಳಿದ್ರು. ಇಲ್ಲ ಇಲ್ಲ ಬಂದವ್ನೇ. ಇಲ್ಲ ಸ್ವಾಮಿ ಎಲ್ಲಾದ್ರೂ ನೋಡ್ಕೊಂಡೋಗಿ. ಹುಡುಕ್ರಿ ನೋಡಿದ್ರು. ಎಲ್ಲೂ ಸಿಕ್ಕಿಲ್ಲ. ಅವ್ರು ಹೋಗ್ಬಿಟ್ರು ಹಿಂದಕ್ಕೆ ವಾಪಸ್ಸು. ಆಮೇಲೆ ಹೋಗ್ಬಿಟ್ರೆ ಅವಾಗ ಅವರು ಹೇಳಿದ್ರೂ ಆ ಗುರುಗಳು ನೋಡಯ್ಯಾ ಇದನ್ನ ತಗೊಂಡೋಗಿ ಎಲ್ಲಾನೂ ದಾರೀ ಒಳಗೇ ನೀನು ಇದನ್ನ ಎಲ್ಲಾದ್ರೂ ಕೆಳಗೇ ಬಿದ್ರೆ ಕೆಟ್ಟೆ. ಎಲ್ಲೂ ನೀನು ತೆಗಿಬೇಡ. ಹೋಗಿ ನೀನು ಮಲ್ಗೊ ರೂಮನಾಗೇ ತೆಗಿಬೇಕು ಅಂತ ಅವ್ರು ಹೇಳಿ ಕಳಿಸಿದ್ರು. ಏನನ್ನು ? ಆ ಅಡಿಕೆಕಾಯನ್ನ. ಜೋಬಿಗೆ ಹಾಕ್ಕೊಂಡಿದ್ರಲ್ಲ ಅಕಸ್ಮಾತ್ ನಿದ್ದೆಗೆಟ್ಟು ಊಟ ಇಲ್ದೀರಾ ಎಲ್ಲಾನಾ ಮಲಕ್ಕೊಂಬಿಟ್ರೆ, ಅಡಿಕೆಕಾಯಿ ಬಿದ್ದೋಗ್ಬಿಟ್ರೆ, ಅವಾಗ ಇಂಗೇ ಏನಾರೂ ಅನಾಹುತ ಆದ್ರೇ, ನಾವು ಜವಾಬ್ದಾರರಲ್ಲ ಅಂತ ಹೇಳಿ ಕಳಿಸಿದ್ರು ಅವ್ರು.

'ಸರಿ ಅಂಗೇ ಆಗ್ಲಿ ಸ್ವಾಮಿ ನಾನೇನು ಮಾಡಲ್ಲ. ನೀವೇಳಿದಂತೆ ನಡ್ಕೋತೀನಿ ಅಂತ ಬಂದ. ಬರೋವಾಗ್ಗೆ ಈ ಅಲ್ಲಿಂದ ಅವ್ರು ಅಷ್ಟು ಹೇಳಿದ್ರು. ಈ ಗುರುಗಳಿಗೆ ಒಂದು ಅರ್ಧ ಹಣ ಕೊಟ್ಟ. ಅಲ್ಲಿಂದ ಈ ಗುರುಗಳ ತಕ್ಕೆ ಬಂದ. ಅಯ್ತೇನಪ್ಪಾ ನಿನ್ನ ಕಾರ್ಯ ? ಹ್ಞೂಂ

ಆಯ್ತು ಸ್ವಾಮಿ, ನಿಮ್ಮಿಂದ ಆಯ್ತು. ಆಯಪ್ಪನಿಗೆ ಕಾಲುಭಾಗ ಹಣ ಕೊಟ್ಬಿಟ್ಟ. ಆಮೇಲೆ ತಿರ್‍ಗಾ ಈ ಕಡೇ ಗುರುಗಳ ತವ ಬಂದ ಕಡೇ ಗುರುಗಳ ತವ. "ಏನಾಪ್ಪಾ ಆಯ್ತು ನಿನ್ನ ಕಾರ್ಯ? " ಆಯ್ತು ಸ್ವಾಮಿ ನಿಮ್ಮ ದಯದಿಂದ. ಆಯ್ತುಪ್ಪಾ, ಒಳ್ಳೇದು ನೀನು ಮಲಗೋ ಮನೆಗೆ ಹೋಗಿ ನೀನು ತೆಗಿಬೇಕು. ಎಲ್ಲಿ ಮಧ್ಯೆ ದಾರೀ ಒಳಗೇ ನೀನು ತೆಗೀಬೇಡ. ಏಕೆ? ಇದು ಹೋದ್ರೆ ನಮ್ಮ ಜವಾಬ್ದಾರಿ ಅಲ್ಲ ಅಂತ ಅವ್ರು ಹೇಳಿದ್ರು. ಆಯ್ತು ಶರಣು ಎಂದಿದ್ದು ಅವರಿಗೂ ಕಾಲುಭಾಗ ಹಣ ಕೊಟ್ಬಿಟ್ಟ ಈಯಪ್ಪಾ ಬಂದ. ಬಂದ್ರೆ ಅಷ್ಟೊತ್ತಿಗೆ ಇಷ್ಟೆಲ್ಲಾ ದೇವಲೋಕದ ಹೆಣ್ಣು ತರೋವಾಗ್ಗೆ ಊಟವಿಲ್ಲ ಉಪಚಾರವಿಲ್ಲ ಆಗಿ, ನಿದ್ದೆ ಇಲ್ಲ ಆಹಾರ ಇಲ್ಲ ಸಾಕಾಗಿ, ಬಳಲಿ ಬಾಯಾರಿ ಅವರೂರ ಮಗ್ಗಲಿಗೆ ಬಂದ. ಆ ದೊರೆ ಊರು ಮಗ್ಗಿಲಿಗೆ ಬಂದು ಅಲ್ಲೊಂದು ಸೀನೀರು ಬಾವಿ. ಆ ಬಾವಿ ಮಗ್ಗುಲಿಗೆ ಕೂತ್ಕೊಂಡು ನಾನು ಹೆಣ್ಣು ತಂದ್ದೀನಿ. ನಮ್ಮ ತಂದೆ ಅವರ್ಗೆ ಹೇಳಿ ಕಳ್ಸಿ, ಕಳಸ ಕನ್ನಡಿಯಿಂದ ಕರ್‍ಕೊಂಡೋಗಿ ಅಂತ ಹೇಳಿ ಕಳಿಸ್ದಾ ಆಳುಗಳ ಕೈಯಾಗಿ.

ಸರಿ ಅವ್ರು ವೋಗಿ ತಿಳಿಸಿದ್ರೂ. ಓ ಏನೋ ನ್ನಮ್ಮ ಮೈದಯ್ಯ ಎಂಥ ಹೆಣ್ಣು ತಂದವ್ನೋ? ಓ ನಮ್ಮೂರು ಕುಳ್ಳಗುಂಬಾರ್ತೀನೇ ತಂದವ್ನೋ? ಇಲ್ಲ ಬಿದರಾಗಲೂ ಚೆಲುವೇನೆ ತಂದವ್ನೋ? ಎಲ್ಲಿ ಹೆಣ್ಣು ನೋಡಿದ್ರು ಒಪ್ಪಲಿಲ್ಲ. ಇನ್ನೆಂಥ ಹೆಣ್ಣು ತಂದ? ಅಂಥ ನಾಕುಜನ ಅತ್ಗೇದೀರು ಮಾತ್ತಾಡ್ಕೊಂಡು ಬಂದ್ರು.

ಸರಿ ನಮ್ಮೂರು ಈ ಕುಳ್ಳ ಕುಂಬಾರಗಿತ್ತಿತಾಕೆ ಆಯಪ್ಪಾ ಮೊದಲು ಹೋಗೋದು ಬರೋದು ಮಾಡ್ಕೊಂಡಿದ್ದ. ಇವ್ಳು ಕುಳ್ಳಕುಂಬಾರಗಿತ್ತಿ. ಈ ಮಾತು ಕೇಳಿ ಇನ್ನ ಯಾರ್‍ನೊ ತಂದ್ಬಿಟವ್ನೆ. ನಮ್ಮನೆಗೆ ಬರೋಲ್ಲ ಹೋಗೊಲ್ಲಲ್ಲ? ನನ್ನ ಕಡೆ ಇವ್ನ ಆಸೆಯಿಲ್ಲ ಅಂದ್ಬಿಟ್ಟು ಇವ್ಳು ನೀರಿಗೋದೋಳಂಗೇ ಒಂದು ಹಣ್ಣು ತಗೊಂಡು ಆ ಸೀನೀರು ಬಾವಿತಕ್ಕೆ ಹೋದ್ಲು.

ಸೀನೀರ ಬಾವಿತಕ್ಕೆ ವೋಗಿ ಆ ಗಡಿಗೆ ಬಿಟ್ಲು. ನೀರು ಎಳೀಲಾರದೆ ಅಯ್ಯೊ ನನ್ನ ಕೈಲಿ ಆಗಲ್ಲ ಅಂದಳು. ಆಮೇಲೆ ಅಯಪ್ಪ ಹೇಳಿ ಕಳಿಸ್ಬಿಟ್ಟು ಏನ್ಮಾಡ್ದ ದೊರೆಮಗ? ಅಲ್ಲಿ ಸಾಕಾಗ್ಬಿಟ್ಟು ನಿದ್ದೆ ಓಗೀ ಮಲ್ಗಿಬಿಟ್ಟ. ಮಲಗಿದಾಗ ಏನಾಯ್ತು? ಈ ಜೋಬಲೊಳಗಿದ್ದದ್ದು ಕೆಳಗೆ ಬಿದ್ದೋಯ್ತು ಅಡಿಕೆಕಾಯಿ. ಸರಿ ಒಳ್ಳೆ ಅಡಿಕೆರಂಭೆ ಆಗಿ ದೇವಲೋಕದ ಹೆಣ್ಣಾಗಿ ಒಳ್ಳೆ ಸುಂದರಕಾಂತೆ ಆಗ್ಯೇವಳೆ.

ಸರಿ ಮಲಗವ್ರಲ್ಲ ಸ್ವಾಮಿ ಅಂತ ಅಂದ್ಬಿಟ್ಟು ಈಯಮ್ಮ ಆ ತೊಡೆವ ತೊಡೆ ಮೇಲೆ ಹಾಕ್ಕೊಂಡು ಕೂತಿದ್ಲು. ಇವ್ಳು ನೋಡ್ಬಿಟ್ಲಲ್ಲ ಈ ಕುಳ್ಳು ಕುಂಬಾರಗಿತ್ತಿ. ಓ ಇಂಥಾ ಹೆಣ್ಣು ಬಿಟ್ಟು ನನ್ನನ್ನು ನೋಡ್ತಾನ ಅಂದ್ಬಿಟ್ಟು, ಈ ಬಾವಿ ಒಳಗೆ ಸೇದೋ ಹಗ್ಗ ಬಿಟ್ಟು 'ತಾಯಿ ನನ ಕೈಯಲ್ಲಿ ಎಳೆಯೋಕಾಗಲ್ಲ. ಎತ್ತೋದ್ರು ಯತ್ನ ತಪ್ಪತದೆ. ನಾನು ಅವರ ಅತ್ತಿಗೇನೆ. ಒಂದ್ಸಲ ಎಳಕ್ಕೊಡು ಬಾರಮ್ಮಾ" ಅಂದ್ಲು.

ಇಲ್ಲ ತಾಯಿ ನನಗೆ ನಮ್ಮ ದೊರೆ ಅವ್ರು. ನಿದ್ದೇ ಹೋತಾವ್ರೆ. ನಿದ್ದೆ ಭಂಗ ಮಾಡ್ದಂಗೆ ಆತದೆ. ನಾನು ಬರೋಕಾಗಲ್ಲ. ಇಲ್ಲ ಬರ್‍ರೀತಾಯಿ. ಎಂತಾರಿಗೂ ಯತ್ನ ತಪ್ಪತದೆ ನಾವು ಅವರಿಗೆ ಸಂಬಂಧಿಕರೇ. ಬರ್‍ರೀ ತಾಯಿ ಅಂದಳು.

ಹೌದೇನೋ ಇವ್ರು ನಮ್ಮ ಸಂಬಂಧಾನೇನೆ ಇರಬೇಕು. ಇನ್ನು ಎಂಗೇ ಇಲ್ಲ ಅನ್ನೋದು ಅಂತ, ಅವಾಗ ಮೆಲ್ಲಗೆ ತಲೆ ದಿಂಬು ಕೊಟ್ಟಿಟ್ಟು ಅಲ್ಲಿ ಮಲಿಗಿಸಿ ದಿಂಬಿನಮೇಲೆ, ಈಯಮ್ಮ ನೀರು ಸೇದ್ತಾಳೆ. ನೀರು ಸೇದ್ಕೊಟ್ಟು ಆ ನೀರಿನಲ್ಲಿ ಇಂಗೇ ಬಗ್ಗಿ ಎತ್ತೂ ತಾಯಿ ಅಂತಾಳೆ. ಎತ್ತಿದಾಗ ಇವ್ರು ಒಳ್ಳೆ ಸುಂದರಕಾಂತೆ ಇದ್ದಂಗವ್ರೆ. ಇವ್ನು ಏನೂ ಇಲ್ಲ. ತಾಯಿ ಚೆಂದಾಗಿ ಕಾಣ್ತೀಯಮ್ಮಾ ನೀನು. ನಿನ್ನುಡುಪೆಲ್ಲ ನನ್ಗೆ ಕೊಡು. ನನ್ನುಡುಪೆಲ್ಲಾ ನೀನು ಇಕ್ಕ್ಯೋ ಅಂತ ಕೇಳ್ತಾಳೆ.

ಹೌದೇನೊ ಅಂದ್ಬಿಟ್ಟು ಈಯಮ್ಮ ತನ್ನ ಬಟ್ಟೆ ಉಡುಪೆಲ್ಲ ಅಯಮ್ಮಂಗೆ ಕೊಡ್ತಾಳೆ. ನಾನು ಚೆನ್ನಾಗಿದ್ದೇನೋ ನೀನು ಚೆನ್ನಾಗಿದ್ದಿಯೋ ನೀರಲ್ಲಿ ನೋಡ್ಕೋ ಅಂತಾಳೆ. ಇವ್ರು ಬಗ್ಗಿ ನೋಡೋ ಹೊತ್ಗೆ ನೀರಲ್ಲಿ ಆ ಬಾವಿಗೆ ತಳ್ಬಿಡ್ತಾಳೆ. ಅಯಮ್ಮನ್ನ. ದೇವಲೋಕದ ಹೆಣ್ಣನ್ನ. ಬಾವಿಗೆ ತಳ್ಬಿಟ್ಟು ಇವಳೇನು ಮಾಡ್ತಾಳೆ? ಗಡಿಗೆ ಅತ್ಲಾಗೇ ಬಿಸಾಕ್ ಬಿಡ್ತಾಳೆ ಬೇಲಿ ಕಡೆ. ತೊಡೆ ಹಾಕ್ಕೊಂಡು ಈಯಮ್ಮ ತಲೆದೊಸೇ ಕೂತವ್ರೆ.

ಓಹೋಹೋ ನಾವು ಇಂಗೇ ಮಾತಾಡ್ಕೊಂಡು ಬಂದ್ರೆ ಇವ್ರು ಕಲಸ ಕನ್ನಡಿ ತಗೊಂಬರ್‍ತಾರೆ ಕರಕಂಡೋಗಕ್ಕೆ. ಏನೇ ನಾನಿಗಂದಂಗೆ ಅದಂಗೇ ಇದ್ದಂಗದೇ. ಓ ನಮ್ಮೂರು ಕುಳ್ಳ ಕುಂಬಾರಿಗಿತ್ತಿ ಅಂಗೆ ಅವಳೆ. ಇಂಥಾ ಹೆಣ್ಣು ತರಕ್ಕೆ ಎಲ್ಲೂ ಒಪ್ಪಲಿಲ್ಲ, ಈ ಚೆಲುವಾದ ನಮ್ಮ ಮೈದಪ್ಪಾ. ಅಂತ ಇವ್ರು ಇಂಗೇ ಮಾತಾಡ್ಕೊಂಬಂದ್ರು. ಸರಿ ಕಲಸ ಕನ್ನಡಿಯಿಂದಾನೇ ತಗೊಂಡೋದ್ರು.

ಸರಿ. ಯಾವಾಗ ಬೆಳಿಗ್ಗೆ ತಿರ್‍ಗಾ ಬೇಟೆಗೆ ಬಂದ್ರು. ಬಾಗ್ಲು ತೆಕ್ಕಂತೂ. ಬಾಗ್ಲು ತೆಕ್ಕೊಂತು. ಇವ್ರನ್ನ ಒಳಕ್ಕೆ ಬಿಟ್ಕೊಂತೂ. ಬಾಗಿಲಾಕ್ಕೊಂಬಿಡ್ತು. ಸೀಲು ಮಾಡ್ಕೊಂತೂ. ''ಏನೋ ಅವನಿಗಾಯ್ತು, ಏನೋ ಬರೋ ನಾವು ಹೋಗೋಣ. ಅವನ ಅಣೇಬರಾ ಅಂತ ಅಂದ್ಬಿಟ್ರು ಇವ್ರು. ಮನೇ ಕಡೆ ಬಂದ್ಬಿಟ್ರು.

ಅವಾಗ ಈ ಕೈ ಎರಡು ಬಾಳೆದಿಂಡಾಗಿದುವು. ಕಾಲೆರಡು ಕಂಬಾಗಿದವು. ಈ ಕಣ್ಣೆರಡು ಗಿಣೆ ಅದುವು. ಈ ಹೊಟ್ಟೆ ಹಾಳುಬಾವಿ ನೀರುಬಾವಿ ಆಗಿತ್ತು. ಆ ಗಿಣೆ ಬಂದು ಕೂತ್ಕೊಂಡು ಅಕ್ಕಾ ಅಕ್ಕಾ ಒಂದು ಕಥೇ ಹೇಳಕ್ಕ ಅಂತು. ಅಮ್ಮಾ ಯಾವ ಕಥೆ ಹೇಳ್ಲಿ. ಹಿಂದೇ ಹೋದ್ದು ಹೇಳ್ಲೋ? ಮುಂದೇ ಬರೋದೇಳ್ಲೊ? ಅಮ್ಮಾ ಮುಂದೆ ಬರೋದು ಯಾರ್‍ಕಂಡವ್ರೆ? ಹಿಂದೇ ಬರೋ ಕಥೇ ಹೇಳು. ಅದೇ ಈವಾಗ ಮೊದ್ಲಿಂದ ನಾವು ಎಂಗೇಳಿದ್ದೋ ಅದೇ ರೀತಿ ಹೇಳ್ಬೇಕು. ಅಂಗೇಳಿದ್ಮೇಲೆ, ಅವಾಗ ಇದೇನು ನಂದೆ ಕಥೆ ಅದೇ. ಅಂದ್ಬಿಟ್ಟು ಇದೇ ನಂದೇ

ಇದ್ದಾಗಂದಲ್ಲ ಸ್ಟೋರಿ ಅಂದ್ಬಿಟ್ಟು, ಅವತ್ತು ಅಲ್ಲೇ ನಿಂತ್ಬಿಟ್ಟ. ಅಲ್ಲೇ ನಿಂತ್ರೆ ಇದೆಲ್ಲಾ ಪೂರ್ತಿ ನಡೆದಿದ್ದ ವಿಚಾರ ಎಲ್ಲಾ ಕಥೆ ಹೇಳಿದ್ಲು. ಓ ಇವ್ಳು ಕುಳ್ಳಕುಂಬಾರಗಿತ್ತೀನೇ. ಈ ದೇವಲೋಕದ ತಾಯಿ ಇವ್ಳೆ ಅಂದ್ಬಿಟ್ಟು ಅವಾಗ ಅವ್ನು ತಿಳ್ಕೊಂಡು ಹೋದ. ಊರುತಕ್ಕೆ ಓಗಿ "ಏನು ಇದಿಂಗೆ ಆಗದೇ. ಇವಳಲ್ಲ ನನ್ನೆಂಡ್ರು ಅಂತ ಒಂದು ಗಾಡೀ ಸುಣ್ಣಕಲ್ಲು ತರ್ಸಿದ. ಆ ಸುಣ್ಣಕಲ್ಲು ಬಿರೇಉಯ್ದು ಇವಳೆನೆತ್ತಿ ಸುಣ್ಣ ಕಲ್ಲಿಗಾಕಿದ. ಇವ್ಳಲ್ಲ ಹೆಣ್ಣು ದೇವಲೋಕದ ಹೆಣ್ಣು ಈಯಮ್ಮ. ನನ್ನ ಕಲಸ ಕನ್ನಡಿಯಿಂದ ಕರ್ಕೊಂಡೋಗ್ರೀ ಅಂತ ಅವಾಗ ತಿರ್ಗ್ಾ ಹೇಳಿ ಕಳಿಸಿದ. ಅವಾಗ ಸೊಳ್ಳೆ ಬಂದು ಸೋಬಾನ ಹೇಳಿದುವು, ಚಿಟ್ಟೆ ಬಂದು ಚಿತ್ತಾರ ಬರುದುವು. ಆವಾಗ ಅದ್ದೂರಿಯಾಗಿ ಮದ್ವೆ ಮಾಡಿ, ಅವರು ಆನಂದವಾಗಿ ಅಲ್ಲೇ ಅವ್ರೆ. ಇಷ್ಟೆ.

ಹೇಳಿದವರು : **ಬಸಮ್ಮ,** 35 ವರ್ಷ. ಜೋಗಳ್ಳಿ (ದುರ್ಗ ಜೋಗಳ್ಳಿ)

# ೯. ಮಾಡಿದ್ದುಣ್ಣೋ ಮಾರಾಯ

ಒಂದು ಪಟ್ಟಣದಾಗೆ ಒಬ್ಬ ತಾಯಿಗೆ ಒಬ್ನೆ ಮಗ. ನನ್ ತಗಂಡೋಗಿ ಅವನ್ಗೆ ಮದುವೆ ಮಾಡಿಬಿಟ್ರು. ಮದುವೆ ಮಾಡಿಬಿಟ್ರೆ, ನಾ ಏನ್ಮಾಡಿಬಿಟ್ಟೆ? ಇನ್ನು ಈ ಅತ್ತಿದ್ರೆ ಇಕ್ಕಟ್ಟಲ್ಲ ನನಿಗೆ ಅಂದು, "ಏನು.... ಏನು ಈಯಮ್ಮನ್ನ ಯಾಕ ಮಡಿಗಿದ್ದಿ ? ಈ ನಮ್ಮತ್ತೆನ ತಗಂದೋಗಿ ಒಂದೆ ಕಾಡ್ನಾಗೆ ತಲಿಗೀಲಿಗೆ ಹಾಕಿಬಿಟ್ಟು... ಇಲ್ಲಾ ಯಾವ್ದರ ಪ್ಯಾಟ್ಯಾಗೊ ಗೀಟ್ಯಾಗೊ ಕರ್ಕಂಡೋಗಿ ಬಿಟ್‌ಬಿಟ್ ಬಂದ್ಬಿಡೋಗು. ಇಲ್ದಿದ್ರೆ ನಾನ್ ವಕ್ಕಲ್ತನ ಮಾಡಾಕಿಲ್ಲ. ನಾನ್ ನನ್ ತವ್ರ ಮನಿಗ್ಹೋಗಿ ಸೇರ್ಕಂಬುಡ್ತೇನಿ" ಹಿಂಗಂದ್ಬುಟ್ಟೆ.

ಆಮ್ಯಾಲೆ ಏನ್ಮಾಡಿಬುಟ್ರು? ಇವತ್ ನೋಡಾನ ನಾಳೀಕ್ ನೋಡಾನ ಅಂತ, ಮಗ, ಹಿಂದಕ್ಕೆ ಮುಂದ್ಕೆ ಯಸ್ಡಾಡಿದ್ರು. ನಾನಿದ್ಕೋಳು ಕಟ್‌ನಿಟ್ಟಾಗಿ ಕುಂತ್ಕಂದೆಬಿಟ್ಟೆ. ಆಮ್ಯಾಲೆ ನನಿಗೆ ಒಂದು ಮಗು ನೋಡ್ಬಕೂಂತವ ಆಯಮ್ಮ ಅಂದ್ಲು "ಯಪ್ಪಾ ಇರೋದೊಂದೆ ಮಗ ನೀನು. ಮದುವೆ ಮಾಡಿಬಿಟ್ಟೆ. ಮಗ್ನ ಹೊಟ್ಟೆವಳಗೆ ಮಕ್ಳು ನೋಡ್ಲಿಲ್ಲಪ್ಪ.... ನೋಡಿದ್ ತಕ್ಷಣನೆ ಎಲ್ಯಾರ ಹೋಗಿ ಸೇರಿಕೊಂಡು ಬಿಡ್ತೀನಿ" ಅಂತೇಳಿ ಮಗನಕೊಟೆ ಹೇಳಿದ್ಲು ನಮ್ಮತ್ತೆ.

ಆಮ್ಯಾಲೆ ಒಂದ್ ಮಗು ಆಯ್ತು; ಮರ್ಡಾಗೆ ಮನಗ್ಸಿದ್ರು, "ಏನು ಎಷ್ಟ್ ದಿನ ಹೇಳೋದು ನಿಮಿಗೆ? ಮುಖತೋರ್ಸಿಬಿಟ್ಟು ತಗಂದೋಗಿ ಎಲ್ಯಾರ ಬಿಟ್‌ಬರ್ಹೋಗ್ರಿ" ಅಂತ

ನಾನಂದ್‌ಬಿಟ್ಟೆ. ತಗಂದ್ಹೋಗಿ ತಕ್ಷಣ ಬಿಟ್‌ಬುಟ್ಟೆ ಬರ್ಬೇಕು. ಆವಾಗ ಕರ್ಕಂದ್ ಬಂದ. ಮಗ ಮುಖ ತೋರ್ಸಿದ್ರು. ''ಹುಂ..... ನಡಿಮ್ಮ ಅತ್ಲಾಗೆ ಕರ್ಕಂದೋಗಿ ಬಿಟ್‌ಬರ್ತೇನಿ'' ಅಂದ ಮಗ. ''ಅಪ್ಪಾ ನನ್ ಮಗನೆ, ಈ ಮಗ ಅಪ್ಪಾ ಅಮ್ಮಾಂತನ್ಲಿ. ಅವತ್ ಹೋಗ್ತೀನಿ ಕಣೊ ಮಗನೆ'' ಅಂದ್ಲು. ನಂದು ಭಜಂತ್ರಿ ಶಾನೆ ಆಗಿಬಿಡ್ತು. ಕರ್ಕಂಡೋಗಿ ಬಿಡ್ಬೆಕು, ಹೆಂಗರ ಆಗ್ಲಿ, ತಗಂದೋಗಿ ತಕ್ಷಣ ಬಿಡ್ಲೇಬೇಕು ಅನ್ನೋದು ನನ್ನೆದೆವಳಗೆ. ಅವ್ರು ಇನ್ನು ಏಳ್ಡ್ ದಿನ ಇದ್ರು ಸಾಕಾಲ್ಲಾಂತ ಅವುರ್ದು. ''ನಾನು ಹಿಟ್ಟಾಕ್ನಾರೆ' ಅಂದೆ.

ಆಮ್ಯಾಲೆ ಅವ್ವಾ ಅನ್ನಾಕೆ ಶುರುವಾಯ್ತು ಮಗ. '' ಹಾ ಕರ್ಕಂಡೋಗಿ ತೋರ್ಸು ಮಗ ಅವ್ವಾಂತದೆ, ಆಮ್ಯಾಲೆ ಕರ್ಕಂಡೋಗಿ ಎಲ್ಯಾರ ಬಿಟ್‌ಬುಟ್ ಬಾ ಹೋಗು'' ಅಂದೆ. ''ಅಮ್ಮಾ ಅಮ್ಮ'' ಅಂತು ಮಗು. ಓ ಓ ಅಂತಂದ್ಲು ನಮ್ಮತ್ತೆ. ಬಿರ್ರನೆ ತಕ್ಷಣ ಕರ್ಕಂದೋಗು ಅಂತ ಹೇಳಿಬಿಟ್ಟೆ. ಆ ಹುಡ್ಗುನ ಕರ್ಕಂಡು ಏನಾರ ಒಂದ್ ಬಟ್ಟೆ, ಚಿಪ್ಪು, ಕೋಲು, ಏನಾರ ಕೊಡಪ ಅಂದ್ರು ನಮ್ಮತ್ತೆ. ಆ ಮಗ ಸೀತಿದ್ದೆ ಇತ್ತಲ ಆ ಅರಬೆ ಕೊಟ್ಟೆ. ಒಂದು ಚಿಪ್ಪು ಕೊಟ್ಟೆ. ಒಂದ್ ಕೋಲ್ ಕೊಟ್ಟೆ. ಕೋಲ್ ಕೊಟ್ಟು ಕಳಿಸ್ದೆ. ಇವ್ರೇನ್ಮಾಡಿದ್ರು? ಕೋಲು ಹಿಡ್ಕಂದುದ್ದೆ ಹಿಂದ್ಗೊಟೆ ಒಂದ್ ಶಾನೆ ದೂರ ಕರ್ಕಂದೋಗಿ ಬಿಟ್ಟು ಬಂದ್ರು. ಅಜ್ಜಿ ತಲೆ ನಡಗದು. ಆವಾಗ ಅವಳೇನ್ಮಾಡಿಬಿಟ್ಲು? ''ಮಗು ಎಲ್ಲಿಗೆ ಕರಕಂದ್ ಹೋಗ್ತೀಯ, ಕಣ್ ಕಾಣದ ಅಜ್ಜೀಯ ? ಎಲ್ಲಿಗೆ ಕರ್ಕಂದ್ ಹೋಗ್ತಿಯಪ್ಪಾ....'' ಅಂತು ಅಜ್ಜಿ. 'ಎಲ್ಯಾರ ಒಂದ್ ಪ್ಯಾಟ್ಗೋ ಒಂದ್ ಗಿಡ್ಕೋ ಕರ್ಕಂದೋಗಿ ಬಿಟ್‌ಬಿಟ್ ಬರ್ತೇನಿ ಕಣಜ್ಜಿ' ಅಂತವ ನನ್ಮಗ ಅಂದ. ''ಮರೀ ಎಲ್ಲಾರ ಕರ್ಕಂದೋಗಿ ಬಿಡಬ್ಯಾಡ. ತಗಂದೋಗಿ ಒಂದು ಪಟ್ಣಕ್ಕೆ ಜಾತ್ರಿಯೊಳಗೆ ಬಿಟ್ ಬಾಹೋಗು ಅಂತು. ಆಮ್ಯಾಲೆ ಇವ್ನೇನ್ ಮಾಡ್ದ? ಇಂತದೊಂದ್ ಪಟ್ಣಕೆ ಬಂದ. ಜಗ್ತಿಮ್ಯಾಲೆ ಇರಿಸ್ದಾ. ಆ ಅರಬೆ ಕೊಟ್ಟಿದ್ನಲ್ಲ? ಆ ಅರಬೆ ಇಸ್ಕಂಡ. ಚಿಪ್ ಕೊಟ್ಟಿದ್ನಲ್ಲ ಆ ಚಿಪ್ಪ ಇಸ್ಕಂದ. ಆ ಕೋಲ್ನು ತಗಂದೋಗದು ನಾಯಿ ಕಡಿತಾವೇಂತ. ಈ ಊರಾಗೆಲ್ಲ ಹೋಗದು ಹಿಟ್ಟುಗಿಟ್ಟು ಅದು ಇದು ಇಸ್ಕಂಡ್ ಬಂದು, ಈ ಬಟ್ಯಾಗೆ ಇರ್ತಾವಲ ನೀರು ಆ ನೀರ ತಗಂಡ್ ಕೊಡದು ಅಜ್ಜಿಗೆ. ಮೈತೊಳ್ಸದು ತಿನ್ಸದು ಹೀಗೆ ಮಾಡಿಬಿಟ್ಟ. ಅಲ್ಲಿಗೇನಾಗೋದ್ಲು ಈಯಮ್ಮ ಒಳ್ಳೆ ಹುಲಿ, ಹುಲಿಯಾಗಂಗಾಗಿ ಹೋದ್ಲು, ಕಣ್ಣು ಬಂದ್ಬುಟ್ಟುವು.

ನಾವಿಲ್ಲಿ ಗಂಡ ಹೆಂಡ್ರುನು ಚೆನ್ನಾಗೆ ಆವಿ. ಅವ್ರಲ್ಲಿ ವನವಾಸ ಮಾಡ್ತವ್ರೆ. ನನ್ ಮಗನ್ನ ನಾನು ಮರ್ತೆಬಿಟ್ಟೆ. ನಾವಿಲ್ಲಿ ಜೋಕಾಗಿ ಇದ್ದೇಬಿಟ್ವಿ. ಆಮೇಲೆ ಅಜ್ಜಿಗೆ ಕಣ್ ಬಂತ? ಆ ಪಟ್ಣದಲ್ಲಿ ಒಂದ್ ಮನೆ ಕಟ್ಸಿದ್ಲು. ಮೊಮ್ಮಗನ್ನು ಮದುವೆ ಮಾಡಿದ್ಲು. ಮಾಡಿದ್ದೆಯ ಅಲ್ಲಿಗೆ ಕಾಲ ತೀರ್ಕೊಂಡೊಯ್ತು. ಮನೆಕಟ್ಸಿದ್ಲು ಮದುವ್ಯಾತು. ಈಯಮ್ಮ ಬಸುರಿಯಾದ್ಲು. ಯಾರು? ನನ್ ಸೊಸೆ. ಆದ್ರೆ ಅಜ್ಜಿಗೆ ಕಣ್ ಕಾಣಾಕಿಲ್ಲ. ಶಾನೆ ಮುಂಬಾರಾಗಿ ಹೋಗಿಬಿಡ್ತು. ಅಪ್ಪಾ... ಅಪ್ಪಾ... ನಾನು ಏಸ್ದಿನ ಇದ್ದೇನು? ನಿಮ್ಮವ್ವ ನಿಮ್ಮಪ್ಪ ಅವ್ರಲ್ಲ, ಅಲ್ಲಿಗೆ ಒಂಟೋಗು. ಮತ್ತೆ ನನ್ ಕೈಲಿ ಆಗಾಕಿಲ್ಲ ಮಾಡಾಕೆ

ಅಂದ್ಬುಟ್ಟಿದ್ದೇಯ ಕಳಿಸಿಬಿಟ್ಲು. ಯಾರನ್ನ ಮೊಮ್ಮಗ, ಮೊಮ್ಮಗಳನ್ನ. ಅವ್ರು ಬಂದ್ರು. ಬಂದ ತಕ್ಷಣ ಅಯಮ್ಮ ಏನ್ಮಾಡಿಬಿಟ್ಲು

ಈಯಮ್ಮನ್ನ ತಗಂದೋಗಿ ಕಳಿಸ್ಬಿಟ್ರೆ ನಾನು ಒಕ್ಕಲ್ತನ ಮಾಡೋದು. ಇಲ್ದಿದ್ರೆ ನಾನು ಇಲ್ಲಿರಾಕಿಲ್ಲ. ನನ್ ತವ್ರಮನಿಗೋಗಿ ನಾನು ಸೇರ್ಕಂತೀನಿ. ನನಗು ಬಂದ್ಬುಡ್ತು. ಇವುಳ್ದಂತ ಭಜಂತ್ರಿ ಆಗೋಗಿಬಿಡ್ತು. ಆಮ್ಯಾಲೆ ನನ್ ಕರ್ಕಂದೋದ್ರು. ಅವಾಗ ಇವಳೇನ್ ಮಾಡಿಬಿಟ್ಳು? ನಾನ್ ಕೊಟ್ ಕಳ್ಸಿದ್ನೆಲ್ಲ ಜಿಪ್ಪು, ಮಗ ಸೀತಿದ್ ಬಟ್ಟೆ, ಮತ್ತೆ ಕೋಲು ಇತ್ತಲ್ಲ ಅವುನ್ ಕೊಟ್ರು. ಆಮ್ಯಾಲೆ ಏನ್ಮಾಡಿದೆ? ತಡಿಯಪ ನನ ಮಗನೆ, ಮೊಮ್ಮಗ ಹುಟ್ಟಿದ್ನಲ ಮಗನ್ನೋಡಿ ಹೋಯ್ತೇನಿ ಅಂದೆ. ಮಗ ತೋರ್ಸಿದ್ರು. 'ಐ ಇವುತ್ತಿದ್ದು ನಾಳೀಕೆ ಹೋಯ್ತೀನ್ ನಾನು ಅಂದೆ. ಆಮ್ಯಾಲೆ ಮತ್ತೆ ಆ ಮಗ ಅಪ್ಪಾ ಅನ್ನೋತನಕಾವ ನಾ ಹೋಗಾಕಿಲ್ಲ, ಆಮ್ಯಾಲೆ ಹೋಯ್ತೇನಿ'' ಅಂದೆ.

ಅಲ್ಲಿಗೆ ಮೂರ್ದಿನ ಆರ್ದಿನ ಇದ್ಲು. ಮಗು ಅಪ್ಪಾಂತು. ಹೋದ್ಲು. ಕರ್ಕಂದು ಚಿಪ್ ಕೊಟ್ಲು, ಅರಬೆ ಕೊಟ್ಲು, ಕಣ್ ಕಾಣಾಕಿಲ್ಲ, ಕೋಲೂರ್ಕೆಂದ್ ಕರ್ಕಂದೋಯ್ತು ಮೊಮ್ಮಗ. ಆ ಹುಡುಗ. ನನ್ ಗಂಡನ್ ಕರ್ಕಂದ್ ಹೋಗ್ಲಿಲ್ಲ. ನಾನೇ ಅಲ್ವ ಅತ್ತೆಗೆ ಅಷ್ಟೆಲ್ಲ ಮಾಡಿದ್ದು? ಆಮ್ಯಾಲೆ ಕರ್ಕಾಂದೋದ. ಒಳ್ಳೆ ಭಯಂಕರ ಹಳ್ಳ. ತಲೆ ಕತ್ತುರ್‍ರೊ್ಸ ಹಳ್ಳ ಅದು. ಆವ ಹಳ್ಳುಕ್ಕೆ ತಗಂಬುಟ್ ಹೋಗಿ ಬಿಟ್ಟುದ್ದೇಯ ನನ್ನ ಮೊಮ್ಮಗ, ಅಲ್ಲೊಂದ್ ಗಡಿಗೆ ನೀರ್ ಇಟ್‌ಬುಟ್ಟುದ್ದೆಯ, ಆವಾಗ ಬಂದ್ಬುಟ್ಟ ಮನಿಗೆ. ಅವ್ರಲ್ಲಿ ಸಂತೋಷ್ದಿಂದ ಅವರೆ.

ಹೇಳಿದವರು : **ನರಸಮ್ಮ** , ತಿಮ್ಮಲಾಪುರ, ಕಿರಿಸಾವೆ ಅಂಚೆ, ಚನ್ನರಾಯಪಟ್ಟಣ ತಾಲ್ಲೂಕು.

# ೧೦. ಅನ್ನದಾನದ ಫಲ

ಒಂದೂರಿನಲ್ಲಿ ಒಬ್ಬ ಬಡವ ಬಡವಿ ಇದ್ರಂತೆ. ಬಡವಂಗೆ ಒಬ್ಬನೇ ಒಬ್ಬ ಮಗ. ಒಬ್ಬ ಮಗ ಇದ್ರೇ ಚಿಕ್ಕವಯಸ್ಸಿನಲ್ಲೇ ಆಕೆಗೆ ಗಂಡ ತಿರೋದ. ಗಂಡ ತೀರೋದ್ರೆ, ಒಬ್ನೇ ಮಗ. ಆ ಮಗನಿಗೆ ಇಷ್ಟು ಅಂಬ್ಲಿ ಬಿಡಕ್ಕೂ ಸಹ ಅವಳಿಗೆ ಸಾಧ್ಯ ಇಲ್ಲ ಆ ತಾಯಿಗೇ. ಅದೇನು ಮಾಡೋಳು? ಆ ಸಣ್ಣ ಮಗೂನ ಕರ್ಕೊಂಡು ಕೈಯಲ್ಲಿ ಜೋಳಿಗೆ ಇಡ್ಕೊಂಡೂ ಮನೆ ಮನೆಗೂ ಭಿಕ್ಷಕ್ಕೆ ಹೋಗವ್ಳು. ಭಿಕ್ಷೆಕ್ಕೋಗಿ ಸಿಕ್ಕಿದ ದವಸಗಳನ್ನ ತಗೊಂಬಂದು ಪೂರ್ತಿ ತಾವು ಊಟ ಮಾಡ್ತಿರಲಿಲ್ಲ ಅಂಬ್ಲಿ ಕಾಯ್ಸೀ ಬಂದವ್ರಿಗೆಲ್ಲ ಕೊಟ್ಬಡೋದು. ಅನ್ನ ಮಾಡ್ಲೀ ಬಂದೋರಿಗೆಲ್ಲ ಕೊಟ್‌ಬಿಡೋದು. ಇದ್ರೆ ಕುಡಿಯೋದು ಇಲ್ಲಾಂದ್ರೆ ಉಪವಾಸ ಇರೋದು. ಆ ಮಗೀಗಿಷ್ಟು ಕೊಟ್ಟುಬೀಡೋದು. ಅವಳು ಇಂಗೆ ಉಪವಾಸವೇ ಮಲಿಕ್ಕೋಳೊಳು.

ಏನಮ್ಮಾ ದಿನೇ ದಿನೇ ಇಂಗೆ ನೀನು ಉಪವಾಸ ಇದ್ರೇ ನೀನು ಮನಸೇ ಆಗೋಕೆ ಆಯ್ತದ? ಡೈಲಿ ನಂಗೊಂದು ಚೂರು ಕೊಡ್ತೀಯಾ, ಮಿಕ್ಕಿದ್ದೆಲ್ಲಾ ಪರರಿಗೇ ದಾನ ಮಾಡ್ಬಿಡ್ತಿಯಲ್ಲಾ. ಅಮ್ಮಾ ಯಾತಕ್ಕಾದ್ರೂ ಇಂಗೇ ಮಾಡ್ತೀಯಮ್ಮಾ? ನಾವು ನೋಡಿದ್ರೆ ಭಿಕ್ಷಕ್ರು. ಅಂತ ಆ ಮಗು ಕೇಳ್ತಂತೆ ಮಾತು ಬಂದ್ಮೇಲೆ. ಕೇಳಿದ್ರೆ ಆಯಮ್ಮ ದಿವ್ಸ ಅದೇ ಹೇಳೊಳು. ಆ ಮಗು ಅದನ್ನೇ ಕೇಳೊದು. ಅದೇ ರೀತಿ ಯಥಾರೀತಿ ಡೈಲಿ ಎದ್ದು ಅವರ ಜೋಳಿಗೆ ಇಡಕ್ಕೊಂಡು ಭಿಕ್ಷಕ್ಕೆ ಹೊಂಟ್ರು. ನೀನು ದಿವ್ಸ ಇಂಗೇ ದಾನ ಮಾಡ್ಬಿಡ್ತಿಯಲ್ಲ, ನಾವು ಭಿಕ್ಷ ಮಾಡ್ಕೊಂಡು ಬಂದಿದ್ದ ? ನಾವೇನು ಊಟ ಮಾಡೋದು ? ಯಾತಕ್ಕಾಗಿ ಇಂಗೇ ದಾನಮಾಡ್ತೀಯ? ಅಂತ ಆ ಮಗು ಕೇಳ್ತಿತ್ತು ತಾಯೀನ. ಆ ತಾಯಿ ಏನು ಹೇಳಿದ್ಲು ಶಿವ ಇದಾನಪ್ಪ, ಶಿವ ಇದಾನೇ ಅಂತ ಆ ತಾಯಿ ಹೇಳಿದ್ಲು. ಇಂಗೇ ದಿವ್ಸ ಹೇಳ್ಕೊಂಬಂದ್ಳು.

ಆ ಮಗ ಒಂದು ಹತ್ತು ವರ್ಷ ವಯಸ್ಸಿನ ಹುಡುಗ ಆಯ್ತು. ಹತ್ತು ವರ್ಷ ತುಂಬಿದ ಮೇಲೆ ಏನಮ್ಮಾ ನಾನು ಸುಮಾರು ಇಷ್ಟು ಚಿಕ್ಕವಯಸ್ಸಿನಿಂದ್ಲೂ ನನಗೆ ಮಾತು ಬಂದು ಐದು ವರ್ಷದಿಂದಲೂ ಇದೇ ಹೇಳ್ತಿಯಲ್ಲ? ಎಲ್ಲಿದ್ದನಮ್ಮಾ ಶಿವ? ನಾನು ನೋಡ್ಲೇಬೇಕು ಕಣಮ್ಮಾ ಅಂತ ಹಟ ಹಿಡಿದ್ಬಿಟ್ಟಾ. ಅವತ್ತು ನಾನು ನೋಡ್ಲೇಬೇಕು ಕಣಮ್ಮ ನೋಡ್ಲೆಬೇಕಮ್ಮಾ ಅಂತ ಆ ಮಗು ಹೇಳ್ತು. ''ಏನಪ್ಪಾ ನೀನು ಹತ್ತು ವರ್ಷ ವಯಸ್ಸಿನ ಮಗನಾಗಿ, ನಿನಗೆ ಹೊಟ್ಟೆ ತುಂಬಾ ಊಟ ನೀಡ್ತೀನಿ. ನೀನೇನು ಭಯ ಪಡ್ಬೇಡ. ನನಗಾಗಿ ನೀನು ಏನೂ ಯೋಚ್ನೆಮಾಡ್ಬೇಡ. ನಾನು ಮಿಕ್ಕಿದ್ನ ದಾನಮಾಡ್ತೀನಿ ಅಂತ ಆ ತಾಯಿ ಹೇಳ್ತಾಲೇ ಬರೋಳು. ದಿವ್ಸ ಅದನ್ನೇ ಹೇಳೋಳು ಅವ್ಳು, ದಿವ್ಸ ಅದನ್ನೆ ಕೇಳೋನು ಅವ್ನು.

ನೀನು ದಿವ್ಸಾ ಇದನ್ನೇ ಹೇಳ್ತಿಯಲ್ಲಮ್ಮಾ. ಅಂಗಾಂದ್ರೆ ಶಿವನ್ನ ನೋಡ್ಲೆಬೇಕು ಕಣಮ್ಮ ಅಂದ್ಬಿಟ್ಟು, ಒಂದಾನೊಂದು ದಿವ್ಸ ಹೊರಟ್ಬಿಟ್ಟ. ತಾಯಿ ಕಾಲಿಗೆ ಶರಣು ಮಾಡಿ ಅಮ್ಮಾ ನಾನು ಶಿವನ್ನ ನೋಡ್ಕೊಂಡೇ ಬರ್ತೀನಿ ಅಂದ. ಅಪ್ಪಾ ಅವನಿರೋದು ಕೈಲಾಸಗಿರಿಯೊಳಗೆ. ನಿನಗೆ ಸಿಕ್ತಾನೇನಪ್ಪಾ ? ನರಮನಸ್ರಲ್ಲಿ ಸಾಧ್ಯ ಇಲ್ಲಪ್ಪಾ ಅವನ್ನ ನೋಡಕ್ಕೆ ಅಂದ್ಳು.

ಇಲ್ಲಾ ಅಮ್ಮ ನಿನ್ನ ಆಶೀರ್ವಾದ ಇದ್ರೆ ನಾನು ಕಂಡೇಬರ್ತೀನಿ. ನಿನ್ನ ಆಶೀರ್ವಾದ ಒಂದಿದ್ರೆ ನಾನು ಶಿವನ್ನ ನೋಡೇ ಬರ್ತೀನಿ ಅಂದ್ಬಿಟ್ಟು, ತಾಯಿ ಹತ್ರ ಆಶೀರ್ವಾದ ಮಾಡಿಸ್ಕೊಂಡು, ಹೊರಟೇಬಿಟ್ಟ. ಆ ಮಗ ಹೊರಟ್ಬಿಟ್ಟಾಗ ಓಗೋಂದೋಗೊಂದು ಒಂದು ಅಡವಿಲಿ ಹೋಗ್ತಾ ಇದ್ದ. ಹೊಟ್ಟೆಗೆ ಊಟಾ ಇಲ್ಲ. ಕುಡಿಯಾಕೇ ನೀರಿಲ್ಲ. ಬಹಳ ಬಳಲಿ ಬಾಯಾರಿ ಹೋಗ್ತಾ ಇದ್ದ. ಹೋಗ್ತಾ ಇದ್ದ, ದಾರೀಲಿ ಶಿವಾ ಶಿವಾ ಶಿವಾ ಅನ್ನೋದೆ. ಅನ್ಕೊಂಡು ಹೋಗ್ತಾ ಇರೋದು ಆ ಮಗು. ಯಾರೋ ಒಬ್ಬ ಮಾವಿನ ಮರ ಕಾಯೋನು ಗೌಡ, ''ಅಪ್ಪಾ ಮಗು ಇಂಥ ಕಾಡ್ನಲ್ಲಿ ನಾವು ತೋಟ ಮಾಡಿದ್ದೀವಿ. ಇಲ್ಲಿ ಹುಲಿ, ಕರಡಿ

ಜಾಸ್ತಿ ಇದ್ದಾವೆ. ನಾವು ಕಾವಲು ಇಟ್ಟಿದ್ದೀವಿ. ಆ ಕಾವಲುಗಾರು, ಇಲ್ಲಿ ಯಾರಾದ್ರೂ ಕಂಡ್ರೇ, ಇಲ್ಲಿ ಏನಾದ್ರೂ ಹಣ್ಣು ಹಂಪಲು ಕದಿಯಾಕೇ ಬರ್ತಾರೆ. ಅಂತ ಅವ್ರು ತಂಟೆ ಮಾಡ್ತಾರೆ. ನೀನು ಯಾತಕಪ್ಪಾ ಈ ಕಾಡು ದಾರಿ ಒಳಗೆ ಬಂದೇ ? ಮಗು ಇನ್ನು ಚಿಕ್ಕವಯಸ್ನವ್ನು. ನೀನು ಯಾತಕಪ್ಪ ಇಲ್ಲಿಗೇ ಬಂದೆ ? ನೀನು ಬರ್ಬೇಡ ಹೋಗಪ್ಪಾ'' ಅಂದ. ಇಲ್ಲಾ ತಾತ ನಾನು ಶಿವನ್ನ ನೋಡಕ್ಕೆ ಹೋಗ್ತಾ ಇದ್ದೀನಿ. ನಾನು ಕಳ್ಳತನಕ್ಕೆ ಬಂದಿರೋನಲ್ಲ. ನನ್ನ ದಾರೀಲಿ ನಾನು ಹೋಗ್ತಾ ಇದ್ದೀನಿ. ಶಿವ ಎಲ್ಲಿದ್ದಾನೇಳು ತಾತ? ಅಂದ. ಅಪ್ಪಾ ನಮ್ಮಿಂದ ಸಾಧ್ಯ ಇಲ್ಲ. ಮಗು ಶಿವಾ ಎಲ್ಲಿದ್ದಾನೆ ಅಂತ ನಾವು ನೋಡಾಕೇ ಸಾಧ್ಯವಾ ? ನಿನ್ನ ಕೈಯಲ್ಲಿ ಆಯ್ತದೇನೋ ಮಗು? ಸುಮ್ಮನೆ ಮನೆಗೋಗಪ್ಪಾ. ಈ ಕಾಡ್ನಲ್ಲಿ ಯಾಕಪ್ಪಾ ಒಬ್ನೇ ಹೋಗ್ತಾ ಇದ್ದೀಯಾ. ಇಲ್ಲಿ ಹುಲಿ ಕರಡಿ ಜಾಸ್ತಿ ಇದ್ದಾವೆ ಕಣಪ್ಪ ಅಂತ ಆ ಗೌಡ ಆ ಮಗೂಗೆ ಹೇಳ್ತಾ ಇದ್ದ. ಆ ಹುಡುಗ ಇಲ್ಲಾ ತಾತ ನಾನು ನೋಡ್ಲೇಬೇಕು ಶಿವನ್ನ, ನಮ್ಮ ತಾಯಿ ಹತ್ರ ನಾನು ಆಜ್ಞೆ ಮಾಡೇ ಬಂದಿದ್ದೀನಿ ಅಂತ ವೋಗ್ತಾಲೇ ಇದ್ದ.

ಅಂಗಾಂದ್ರೆ ಅಪ್ಪಾ ನಿನ್ನ ಶಿವನ್ನ ನೋಡ್ಕೊಂಬರೋರಾದ್ರೆ ಏನೋ ನಿನ್ನ ಪುಣ್ಯ. ಆದ್ರೇ ನಾನೊಂದು ಮಾತ್ನ ಹೇಳ್ತೀನಿ ಕೇಳ್ಕೊಂಬರ್ತೀಯಾಪ್ಪ ಅಂದ. 'ಅದೇನೇಳಿ ತಾತ' ಅಂತ ಕೇಳಿದ. ನೋಡಪ್ಪ ಇಷ್ಟೊಂದು ಮಾವಿನ ಮರಗಳಿದೆ, ಅದರ ತುಂಬಾ ಹಣ್ಣುಗಳಿವೇ. ಕೊಳ್ತುಕೊಳ್ತ ಉದರ್ತವೇ ಹೊರತು, ಒಂದು ಹಕ್ಕಿ ಪಕ್ಷಿ ತಿನ್ನೋದಿಲ್ಲ, ಕಾಯನ್ನೂ ಮುಟ್ಟಲ್ಲ. ಹಣ್ಣನ್ನೂ ಮುಟ್ಟಲ್ಲ. ಅದೇನು ಕೇಳ್ಕೊಂಬಾರಪ್ಪಾ ಶಿವನ್ನ. ಆಯ್ತು ತಾತ. ಅದನ್ನು ಬರಕ್ಕೊಂಡ. ಆಮೇಲೆ, ಅವನ್ನ ಬಿಟ್ಟ. ಇನ್ನೂ ಮುಂದಾಕೋಗ್ತಾ ಇದ್ದ. ಅಂಗೆ ವಾಗೋದೋಗೊಂದ ವೋಗ್ತಾ, ಸಾಕಾದ್ದತವ ಕೂತ್ಕೋಳೋದು ಇಂಗೇ ನಡಕೊಂಡು, ನಡಕೊಂಡು ತುಂಬಾ ದಿವ್ಸಾ ಆಯ್ತು. ಅಲ್ಲಿಗವ್ನು ಮನೆಬಿಟ್ಟು ಮೂರು ತಿಂಗ್ಳು ದಿವ್ಸಾ ಆಯ್ತು.

ಆ ಮಾವಿನ ಮರ ಬಿಟ್ಟು ಬೇಕಾದಷ್ಟು ಯೋಜನಾ ಮುಂದೆಕ್ಕೋಗ್ತಾ ಇದ್ದ. ಮುಂದ ಕೋಯ್ತಾ ಓಯ್ತಾ, ಅಲ್ಲೊಬ್ಬ ಕೆರೆ ಕಟ್ಟಿಸ್ತಾ ಇದ್ದ. ಕೆರೆ ಕಟ್ಟಿಸಿದ್ರೆ ಡೈಲಿ ಒಡ್ಡರನ್ನು ಕರ್ಕೊಂಬಂದು ಕೆಲ್ಸ ಮಾಡ್ಸೋನಂತೇ. ಏರೀ ಆಕ್ಕೋನಂತೆ. ಡೈಲೀ ಒಡ್ಕೊಂಡೆ ಹೋಗೊದಂತೆ. ಡೈಲೀ ಕೆರೆ ಕಟ್ಟೋನಂತೆ, ಡೈಲೀ ಒಡ್ಕೊಂದೆ ಹೋಗದಂತೆ. 'ಅಪ್ಪಾ ಮಗು ಇಂಥ ಕಾಡ್ನಲ್ಲಿ ಕುಡಿಯಕ್ಕೆ ದನಕರುಗಳಿಗೆ ನೀರಿಲ್ಲ ಅಂದ್ಬಿಟ್ಟು ಇದೊಂದು ಕೆರೆ ಹಿಡಿದ್ಬಿಟ್ಟೇ. ಯಾವ ಗಳಿಗೇಲಿ ಈ ಕೆರೆ ಹಿಡಿದ್ನೋ ದೇವೇಂದ್ರರಾಯ ಉಯ್ಯುತಾನೆ ಇದಾನೆ. ಅದು ತುಂಬ್ತಾನೇ ಇದೆ. ಒಡಕೊತ್ಲೇ ಇದೆ. ಈ ಕೆರೆ ನಿಲ್ಬೇಕಾದ್ರೆ ಏನ್ಮಾಡೋದಪ್ಪ ಅಂದ್ನಂತೆ. ತಾತ ನಾನು ಸಿಕ್ಕಿದ ತವ ಎಲ್ಲಾ ಎಲ್ಲರೂ ಇದನ್ನೇ ಕೇಳ್ತಾರೆ. ನೀನು ಎಲ್ಲಿಗೋಗ್ತಿಯಪ್ಪಾ, ಏನಪ್ಪಾ ಎತ್ತೂ ಅಂತ. ನಾನು ಶಿವನ್ನ ನೋಡಕ್ಕೆ ಓಗ್ತಾ ಇದ್ದೀನಿ ಅಂತ ನಾನು ಹೇಳ್ತಾ ಇದ್ದೀನಿ. ನೀನ್ಯಾಂತರ ಕೇಳ್ಲಿಲವಲ್ಲ ತಾತ ಅದ್ನಂತೇ. ಅಲ್ಲಪ್ಪ ನೀನು

ತುಂಬ ನಡೆದು ಮುಖ ಬಾಳ ಸುಸ್ತಾಗಾಗಿರೊಂಗದೆ. ಅದಕ್ಕೋಸ್ಕರ ಎಲ್ಲೋ ತೀರ್ಥಯಾತ್ರೆಗೆ ಹೋಗ್ತಾನೋ ಕೈಲಾಸಕ್ಕೆ ಹೋಗ್ತಾನೋ ವೈಕುಂಠಕ್ಕೆ ಹೋಗ್ತಾನೋ ಯಾವ ಲೋಕಕ್ಕೆ ಹೋಗ್ತಾನೆ ಈ ಮಗು ಅಂತ ನಿನ್ನ ಮುಖದ ಕಳೆ ನೋಡೋ ಹೊತ್ಗೆ ಒಂದು ತರ ಏನೋ ಒಂದು ಹೊಳಿತಪ್ಪಾ. ಅದಕ್ಕೋಸ್ಕರ ನಾನು ಕೇಳಿಲಿಲ್ಲಪ್ಪ. ನಿನ್ನ ಬಾಯ್ಬಿಟ್ಟು ಏನೋ ಒಂದು, ಯಾವದೋ ದೇವ್ರು ನೋಡಕ್ಕೆ, ನಾನು ಈ ಮಾತನ್ನು ನಿನ್ನಲ್ಲಿ ಕೇಳೊಣ ಅಂತ ಇದ್ದೀನಿ. ಏನು ಅಂತ ಅಂದ. ನೋಡಪ್ಪ ನನ್ನ ಕೆರೆ ನಿಲ್ಬೇಕಾದ್ರೆ ಅದೇನು ? ನೀನು ಹೋಗೋ ಸ್ಥಳದಲ್ಲಿ ಅದೇನು ನೀನು ಕೇಳ್ಕೊಬರ್ಬೇಕು. ತಾತ ನಾನು ಶಿವನ್ನ ನೋಡಕ್ಕೆ ಅಂತ ವೋಗ್ತಾ ಇದ್ದೀನಿ. ಯಾರಾದ್ರೂ ನೋಡಾಕೆ ಸಾಧ್ಯ ಏನಪ್ಪಾ? ನೀನು, ಚಿಕ್ಕುಡುಗ ಅಂತ ಎಲ್ಲಾರೂ ಕೇಳ್ತಾ ಇದ್ದಾರೆ. ಆದ್ರೆ ಏನೋ ನೊಡ್ಲೇಬೇಕು ಅಂದ್ಬಿಟ್ಟು ನಾನು ಹೋಗ್ತಾ ಇದ್ದೀನಿ ತಾತ. ಶಿವನ್ನ ಕಂಡು ಬರ್ಬೇಕಾದ್ರೆ. ನಿಂದು ಒಂದ್ಮಾತು ನಾನು ಕೇಳ್ತಿನಿ ತಾತ, ಅಂದ್ಬಿಟ್ಟು ಅದನ್ನು ಬರಕ್ಕೊಂಡ.

ಆಮೇಲೆ ಅಂಗೇ ಹೋಗೊಂದೊಂಗೊಂದು ಇನ್ನೊಂದು ಸ್ವಪ್ಲ ದಿವ್ಸ ಹೋದ ಇಂಗೇ. ಮರದ ಸ್ಥಳ ಸಿಕ್ಕಿದಾಗ ಮಲಗದು. ಎಲ್ಲೀ ಕತ್ತಲ ಆಗ್ತದೋ ಅಲ್ಲಿ ಮಲಗದು. ನೀರು ಸಿಕ್ಕಿದ ತವ ಕುಡಿಯಾದು. ಹೊಟ್ಟೆಗೆ ಊಟ ಇಲ್ಲ, ಕಣ್ಣಿಗೆ ನಿದ್ರೆ ಇಲ್ಲ. ಎಲ್ಲೀ ಕೂತ್ಕೊತಾನೆ ಅಲ್ಲಿ ಶಿವನ್ನ ತಪಸ್ಸು ಅಲ್ಲಿ ಶಿವನ ಗ್ಯಾನ. ಹುಲಿ ಕರಡಿ ಯಾವ ಕಳ್ಳರು ಕಾಕರು ಯಾರು ಬಂದ್ರು ದೂರ ವೋಗೊದು, ಆ ಮಗುನತ್ರಕ್ಕೆ ಬರೋದಿಲ್ಲ. ಒಬ್ಬನೆ ಮುತ್ತುಗದ ಎಲೆ ತರೋದು, ಹಾಸಿಗೆ ಹಾಕೋದು. ತರಗೆಲೆ ತರೋದು, ಹಾಸಿಕೊಳ್ಳೊದು ಮಲಿಕ್ಕೊಳೋದು. ನಿದ್ರೆ ಬಂದುತವ ನಿದ್ರೆ ಬತ್ತ ಮಾಡೋದು. ನಿದ್ರೆ ಬರ್ಲಿಲ್ಲ, ಕುಂತ್ಕೊಳ್ಳೊದು ಶಿವನ ತಪಸ್ಸು ಮಾಡ್ಕೊಂಡು. ಇಂಗೇ ಮಾಡ್ಕೊಂಡು ಇಂಗೇ ಮಾಡ್ಕೊಂಡು ವೋಗೊಂದಗೋದ. ಇನ್ನು ಮುಂದಕ್ಕೆ ಹೋಗ್ತಾ ಇದ್ದ.

ಹೋಗ್ತಾ ಇದ್ರೆ, ಅಲ್ಲಿ ಎಳೆಡೆ ಸರ್ಪ ಅಪಾರ ವಯಸ್ಸಾಗಿ ಅಜ್ಜಜ್ಜ ಮುದುಕನಾಗಿ ಮುಂದಕ್ಕೇ ಅದುಕಂದೇ ಹೋಗಕ್ಕೆ ಸಾಧ್ಯವಾಗದೆ ವಜ್ರಕುಂಡಲ ಬೆಳಕೊಂಡು ಅಲ್ಲಿ ತಪಸ್ಸು ಮಾಡ್ತಾ ಇತ್ತು. ಯಾರಾನ ಅವಾಗ ದಾರೀಲಿ ಹೋಗ್ಬೆಕಾದ್ರೆ ನನ್ನನ್ನ ನೋಡಿ ಆ ಮಗು ಹೆದುರ್ತದಲ್ಲ ಏನ್ಮಾಡೋದು ಅಂತ ಅಂದ್ಬಿಟ್ಟು ಸ್ವಲ್ಪ ದೂರದಲ್ಲೇ ಹೇಳ್ತು ಆ ಸರ್ಪ: ಅಪ್ಪಾ ನರಮನಸ, ನೀನು ಯಾರು ಮಗು ? ನೀನು ಎಲ್ಲಿಗೋಗ್ತಾ ಇದ್ದೀಯಪ್ಪಾ? ನೀನು ಹೆದ್ರುಬೇಡ ಬಾರಪ್ಪ. ನಾನೇನು ನಿನ್ನ ಮಾಡೋದಿಲ್ಲ. ನೀನು ಹೋಗ್ತಾ ಇರೋ ಪಯಣ ಏನೊ ಹೇಳಪ್ಪಾ ಅಂತ ಕೇಳ್ತು. ಅವಾಗ ಆ ಮಗು ಹೇಳ್ತು: 'ಸ್ವಾಮಿ ನಾಗೇಂದ್ರ ನಿನ್ನನ್ನ ನೋಡಿದ್ರೆ ನನಗೆ ಭಯ ಆತದೇ. ಆದ್ರೆ ನಾನು ಶಿವನ್ನ ನೋಡಕ್ಕೋಸ್ಕರ ಹೋಯ್ತಾ ಇದ್ದೀನಿ. ಶಿವನ್ನ ಕಾಣನ ಅಂತ ಹೋಗ್ತಾ ಇದ್ದೀನಿ. ಎಲ್ಲಿದ್ದಾನೆ ಶಿವಾ? ನಿಮಗೊತ್ತು ಹೇಳಿ ಸ್ವಾಮಿ, ಅಂದ. ಶಿವ ಎಲ್ಲಿದ್ದಾನೆ ಅಂತ ಕೇಳ್ದಾಗ ಆ ನಾಗೇಂದ್ರ, ''ಏನೋ ನಿನಗೆ ಲಭ್ಯ ಇದ್ದರೆ ಶಿವ ದೊರಕಬಹುದು, ಹೋಗಿಬಾರಪ್ಪ. ಕೈಲಾಸಗಿರೀಲಿ ಅವ್ನೇ. ನೀನು ಹೋಗಿಬಾರಪ್ಪ'' ಅಂತ ಆ ನಾಗೇಂದ್ರ ಆ ಮಗುಗೆ ಹೇಳ್ದಾ.

ಅವಾಗ ಇಂಗೇ ಓಗೋಂಬ್ ಒಗೋಂದು ಓಗ್ತಾ ಇದ್ದರೆ, ಅಲ್ಲಿ ದೊಡ್ಡದೊಂದು ಕಾಡು. ಆ ಕಾಡ್ನಲ್ಲಿ ಅರಳೀಮರ ಇದ್ರೇ ಅಲ್ಲೊಂದು ಮಂಟಪ. ಮಂಟಪ ಅಂದ್ರೇ ದೇವಸ್ಥಾನ. ಏನದು ಅಂತ ಅವನಿಗೆ ಅರ್ಥನೂ ಆಗ್ಲಿಲ್ಲ. ಅವನಿಗಲ್ಲಿಗೆ 'ಸ್ವಾಮಿ ದೃಷ್ಟಿ ಆಗೋ ಟೈಮ್ ಬಂದ್ಬಿಡ್ತು. ಅವ್ನಿಗೆ ಒಂದತರ ಮುಚ್ಚಿದ ಕಣ್ಣು ಮುಚ್ಚಿದ ಬಾಯಿ. ಒಂದದು ಅರಳೀಕಟ್ಟೆ. ಆ ಕಾಡಿನತ್ತರ ಕೂತ್ಕೊಂಡು ಅರಳೀಮರದ ಕಟ್ಟೆ ಕೆಳಗೆ ತಪಸ್ಸಿಗೆ ಕೂತ್ಬಿಟ್ಟ. ತಪಸ್ಸಿಗೆ ಕೂತ್ರೇ ಯಾವಾಗ್ಲೂ 'ಓ ನಮಃ ಶಿವ, ಓ ನಮಃ ಶಿವ ' ಅಂತ ಹೇಳೋನು.

ಕಣ್ಣು ಬಿಟ್ಟು ಆ ಪರಶಿವನು ದರ್ಶನ ಕೊಡೋ ಹೊತ್ಗೆ ಹನ್ನೆರಡು ವರ್ಷ ಆಯ್ತು. ೧೨ ವರ್ಷ ಅವ್ನು ಮನೇ ಬಿಟ್ಟಿದ್ದು, ೧೨ ವರ್ಷ ಅವನು ತಪಸ್ಸು ಮುಗ್ಸೀ ದರ್ಶನ ಕೊಟ್ಟಿದ್ದು. ಅವಾಗ ಒಂದು ಬಡುಬುಡುಕು ಶಬ್ದ, ಆ ಮಗೂನ ಕಿವಿಗೇ ಕೇಳಿಸಿ, ಆ ಕಣ್ಣೆದುರಿಗೆ ಬಂದು ನಿಂತು ''ಏನಾಪ್ಪಾ ಮಗು ನಿನಗಿಂತ ಕಷ್ಟ ? ಯಾವಾಗ್ಲೂ ನನ್ನ ಗ್ಯಾನವನ್ನು ಮಾಡ್ಕೊಂಡು, ಇಷ್ಟು ವರ್ಷದಿಂದ ಇಷ್ಟು ಚಿಕ್ಕ ವಯಸ್ನವ್ನು ನೀನು, ಇಲ್ಲಿ ತಪಸ್ಸು ಮಾಡಿ, ನೀನು ಮನೇ ಬಿಟ್ಟು ಬರೋವಾಗ್ಲೋ ೧೦ ವರ್ಷದ ಹುಡ್ಗ; ಈಗ ನನ್ನ ಗ್ಯಾನ ಮಾಡಿ ಹಿಡಿದಿದ್ದಕ್ಕೆ ೧೨ ವರ್ಷ. ಇಲ್ಲಿಗೇ ಆಯ್ತಲ್ಲ ೨೨ ವರ್ಷ ವಯಸ್ಸಿನ ಮಗ, ಇಷ್ಟು ವರ್ಷಗಳಿಂದ ತ್ಯಾಗ ಮಾಡಿ ನನ್ನನ್ನು ನೀನು ತಪಸ್ಸು ಮಾಡ್ಬೇಕಾದ್ರೇ ನನ್ನ ಮೇಲೆ ನಿನಗೆ ಎಂಥಾ ಪೂರ್ವಿಕವಾದ ಭಾವನೆ ಇದೆಯಪ್ಪಾ ? ಆಯ್ತು ನಿನ್ನ ಕಷ್ಟ ಏನಿದೆ ಕೇಳಪ್ಪಾ ? ನಾನು ಆರ್ಶೀವಾದ ನೀಡ್ತೀನಿ ಅಂತ ಅಲ್ಲಿ ಸ್ವಾಮಿ ಪ್ರತ್ಯಕ್ಷನಾದ. ಪ್ರತ್ಯಕ್ಷನಾಗಿ ಕೇಳೋವಾಗ್ಗೆ ಅವಾಗ ಇವ್ರು ಹೇಳಿದ್ರಲ್ಲ? ಈ ಕೆರೆಗೌಡ, ಈ ಮಾವಿನಮರದ ಗೌಡ, ಈ ನಾಗೇಂದ್ರ? ಇವ್ರು ಈ ಮೂರ್ರೂ ಹೇಳ್ದಾ. ಇದೇ ತರ ಸ್ವಾಮಿ ನಾನು ಬರ್ತಾ ಇರೋವಾಗ ಶಿವ ನಿನ್ಗೆ ಸಿಕ್ತಾನೇನಪ್ಪಾ ? ಶಿವಾ ನಿನಗೆ ಸಾಧ್ಯನಾ ನೀನೋಗಿ ಹುಡುಕಕ್ಕೆ ಅವ್ನು ? ಅವನಿರೋದು ಕೈಲಾಸದಲ್ಲಿ. ಕೈಲಾಸಕ್ಕೆ ನೀನು ನಡ್ಕೊಂಡು ಒಗಕ್ಕೆ ಆಯ್ತದ ? ಅಂತ ಜನ ಎಲ್ಲಾ ನನ್ನ ಹಾಸ್ಯಮಾಡ್ತಾ ಇದ್ರು. ಆದ್ರೆ ಆ ಮಾವಿನಮರದ ಗೌಡ, 'ನೋಡಪ್ಪ ನನ್ನ ಮರದಲ್ಲಿ ಹಣ್ಣುಗೊಳಿದ್ದಾವೆ. ಒಂದು ಹಕ್ಕಿ. ಪಕ್ಷಿ ಕೂಡಾ ತಿನ್ನೋದಿಲ್ಲ. ಹಣ್ಣೆಲ್ಲಾ ಕೆಳಗಡೆ ಉದುರೋಗ್ತದೆ. ಅದೇನು ತಿಳ್ಕೊಂಡು ಬಾಪ್ಪ ಅಂತ ಒಂದು ನುಡಿ ಹೇಳಿ ಕಳಿಸಿದ್ದಾನೆ. ಅದಕ್ಕೇನು ಸ್ವಾಮಿ ಉತ್ತರ ? ಕಂದ ಅವನ ಮನೇಲಿ ಒಬ್ಬಳು ಮಗಳಿದ್ದಾಳೆ. ತುಂಬಾ ವರ್ಷದಿಂದ ಅದು ಋತುಶಾಂತಿಯಾಗಿ ಮದುವೆ ಮಾಡಿಲ್ಲ. ಆ ದೋಷಕ್ಕೆ ಆ ಮಾವಿನಮರ ಕೊಳಿತದೇ ಕಣಪ್ಪಾ. ಆ ಮಗಳ್ನ ಯಾರಾದ್ರೂ ವರನ್ನ ಹುಡುಕಿ ಧಾರೆ ಎರೆದುಬಿಟ್ರೇ ಆ ದೋಸ ಪರಿಹಾರ ಕಣಪ್ಪ; ಅವತ್ತಿನ ದಿವ್ಸ ಆ ಪಕ್ಷಿಗಳು ಆ ಹಣ್ಣನ್ನು ಊಟ ಮಾಡ್ತಾವೆ ಅಂತ ಹೇಳಿದ್ರೂ ಶಿವಾ, ಆ ಹುಡುಗೂನಿಗೇ. ಅದನ್ನೂ ಬರ್ಕೊಂಡಾ.

ಆಮೇಲೆ ಈ ಕೆರೆ ಕಟ್ಸೋದ ಹೇದ್ನಲ್ಲ ಗೌಡ, ಕೆರೆ ನಿಲ್ಲೋದಿಲ್ಲ, ಅದಕ್ಕೆ ಏನುತ್ತರ ಶಿವನ್ನ ಕೇಳ್ಕೊಂಬಾರಪ್ಪ, ಯಾತಕ್ಕಾಗಿ ಏನು ನಾನು ದೋಷಮಾಡಿದ್ದೆನಾ ? ಇಲ್ಲಾ ಯಾವ್ದು

ಏನು ? ಅಂತ ಕೇಳೊವಾಕ್ಕೆ, ಅವಾಗ ಅದು ಕೇಳ್ತಾನೆ. ಶಿವಾ ನೋಡಪ್ಪಾ ಆ ಕೆರೆ ಯಾತಕ್ಕೋಸ್ಕರ ನಿಲ್ಲೋದಿಲ್ಲ ಅಂದ್ರೇ ಅವನ ಮನೆ ಒಳಗೆ ಒಂದು ಅನ್ನದಾನ ಇಲ್ಲ, ಒಂದು ನೀರುದಾನ ಇಲ್ಲ, ಒಂದು ವಸ್ತ್ರದಾನ ಇಲ್ಲ, ಪರರ ಸೊತ್ತನ್ನ ಅವನು ಅಪಹರಿಸ್ಕೊಂಡು ಬರ್‍ತಾನೆ. ಪರರಿಗೆ ಅನ್ಯಾಯ ಮಾಡ್ತಾನೆ. ಬೇರೆಯವ್ರಿಗೆ ಅನ್ಯಾಯ ಮಾಡಿ, ಬೇರೆಯವ್ರ ಸೊತ್ತು ಹಣವನ್ನು ಬಾಚ್ಕೊಂಡು ಬಂದ್ಬಿಟ್ಟು, ಅವ್ರ ಮನೇಲಿ ಇಟ್ಕೊಂಡಿರೋದ್ರಿಂದ ಅವ್ನಿಗೆ ಆ ದೋಸಕ್ಕೆ ಆ ಕೆರೆ ಒಡಿತಾದೇ. ಅವನಲ್ಲಿರೋ ಅಂತ ಹತ್ತುಕೋಟಿ ರೂಪಾಯಿಯನ್ನು ಯಾರಾದ್ರೂ ಪರಕೀಯ ಬಡವ್ರೀಗೆ ದಾನವನ್ನು ಮಾಡ್ಬಿಟ್ರೇ, ಅವನಿಗೆ ಆ ದೋಷ ಪರಿಹಾರವಾಗಿ ಅವನ ಕೆರೆ ನಿಲ್ತದೆ ಕಣಪ್ಪಾ ಅಂತ ಅವನಿಗೆ ಹೇಳ್ದಾ. ಅದನ್ನು ಬರ್‍ಕೊಂಡ ಆ ಮಗು.

ಅಲ್ಲಿಂದ ಈ ನಾಗೇಂದ್ರ ಹೇಳಿದ್ನಲ್ಲ ಅದನ್ನು ಕಡೆಸತೀ ಹೇಳ್ದಾ. ನಾಗೇಂದ್ರ ಹೇಳಿದ್ದಕ್ಕೆ ನೋಡಪ್ಪಾ ನಿನಗೆ ಇಷ್ಟು ಅಜ್ಜಜ್ಜ ವಯಸ್ಸಾದ್ರೂವೇ ಮುಂದಕ್ಕೆ ನಿನಗೆ ಹರ್‍ಕೊಂಡೋಗಕ್ಕೆ ಶಕ್ತಿ ಇಲ್ಲ. ತುಂಬಾ ವಯಸ್ಸಾಗೋಗಿದೆ, ವಜ್ರಕುಂಡಲ ತುಂಬಾ ಬೆಳ್ಕೊಂಬಿಟ್ಟಿದೆ. ನನಗೆ ಸಾವು ಯಾವೊತ್ತು ಕೇಳ್ಕೊಂಬಾರಪ್ಪ ಅಂತೇಳಿ ಕಳಿಸಿದ್ದಾರೆ ಪರಶಿವನ್ನ ಅಲ್ಲಿ ಅಂತ ಕೇಳ್ದಾ.

ಆವಾಗ ಶಿವಾ ಹೇಳ್ತಾನೆ; ''ನೋಡಪ್ಪಾ ಆ ನಾಗೇಂದ್ರ ತಕ್ಕೆ ಹೂಡ್ಕೊಂಡು ಮಲಗೋ ಅಂತ ಸ್ಥಳದಲ್ಲಿ ಏಳು ಕೊಪ್ಪರಿಕೆ ಹಣ ಐತೆ. ಅದನ್ನ ಕಿತ್ತು, ಯಾರಿಗಾದ್ರೂ ದಾನ ಮಾಡ್ಬಿಟ್ರೆ, ಅವತ್ತೇ ಆ ಸ್ಥಳದಲ್ಲಿ ಅದಕ್ಕೆ ಮರಣ ಅಂತ ಹೇಳ್ದಾ ಶಿವ. ಅವಾಗ ಅದನ್ನು ಬರ್‍ಕೊಂಡ. ಅದನ್ನು ಬರ್‍ಕೊಂಡು ಘಸ್ಸು ಮಾವಿನ ಮರ ಹಣ್ಣಾಗಿತ್ತಲ್ಲ ಆ ಗೌಡನ ತಕ್ಕೆ ಬಂದ.

ಅಲ್ಲಿ ಬಂದು ''ಸ್ವಾಮಿ ನೀವು ಹೇಳಿದ್ದನ್ನು ನಾನು ಶಿವನ್ನ ಕೇಳ್ದೆ; ಶಿವ ನನಗೆ ದರ್ಶನವನ್ನು ಕೊಟ್ಟ; ನಾನು ಕೇಳೋ ಹೊತ್ಗೇ ನಿನ್ನ ಮನೇಲಿ ಒಬ್ಬು ಮಗಳಿದ್ದಾಳಂತಲ್ಲ, ಯಾರಿಗಾದ್ರೂವೇ ಧಾರೆ ಎರೆದರೆ, ಆ ಮಗಳ ದೋಷ ಅಲ್ಲಿಗೇ ಪರಿವಾರವಂತೆ. ನಿನ್ನ ಮಾವಿನ ಹಣ್ಣ ಪಕ್ಷಿಗಳು ತಿನ್ತಾವಂತೆ ಸ್ವಾಮಿ'' ಅಂತ ಹೇಳ್ದಾ. ಅಂಗಂತ ಹೇಳ್ದಾಗ ಆ ಗೌಡ ಹೇಳ್ದಾ ''ಸ್ವಾಮಿ ನಿನಗಿಂತ ಅತಿ ಚೆಲುವನ್ನ ನಾನು ಹುಡುಕಿ ಲಗ್ನಮಾಡಕ್ಕೆ ಸಾಧ್ಯವಿಲ್ಲ. ಏನೋ ರುಣಬಂಧವೋ ಇದ್ರೇ, ದೇವ್ರು ಕೊಟ್ಟ ದಾರೀ ಆಗಲಿ ಅಂದ್ಬಿಟ್ಟು ಆ ಹುಡುಗನಿಗೇಯಾ ಆ ಹೆಣ್ಣುಮಗವನ್ನು ಧಾರೇ ಎರದ. ಆ ಶಿವನ್ನ ಕಾಣಕ್ಕೇ ಹೋಗಿದ್ನಲ್ಲ ಆ ಹುಡುಗನಿಗೇನೇ.

ಆವಾಗ ಹೆಂಡ್ತಿ ಕರ್‍ಕೊಂಡು ಅಲ್ಲಿಂದ ಕೆರೆ ಕಟ್ಸೋ ಗೌಡನ ತವ ಬಂದ. ''ಏನಪ್ಪಾ ಹೋಗುವಾಗ ಒಬ್ನೇ ಹೋದೆ. ಅತ್ಲಿಂದ ಬರೋವಾಗ್ಗೆ ಜೊತೇಲಿ ಈ ಓರ್ವ ಸ್ತ್ರೀಯನ್ನು

ಕರ್ಕೊಂಬಂದಿದ್ದೀಯಲ್ಲ? ಯಾರಪ್ಪ ? ಏನಪ್ಪ ?'' ಅಂತ ಕೇಳ್ದಾ. ಸ್ವಾಮಿ ಅದಂಗಿರ್ಲಿ ಅದು ಆಮೇಲೆ ಹೇಳ್ತೀನಿ. ನೀವು ಹೇಳಿ ಕಳಿಸಿದ ಉತ್ತರಕ್ಕೆ ನಾನು ಪ್ರಶ್ನೆಗೆ ಉತ್ತರ ತಂದ್ದಿದ್ದೀನಿ ಸ್ವಾಮಿ ಅಂದ. ಶಿವನ್ನ ಕಂಡೇನಪ್ಪಾ ? ಕಂಡೇ ಸ್ವಾಮಿ; ಏನಪ್ಪ? ಏನಿಲ್ಲ ಸ್ವಾಮಿ. ನಿಮ್ಮಲ್ಲಿ ಬೇಕಾದಷ್ಟು ಅಷ್ಟುಐಶ್ವರ್ಯ ಐತಂತಲ್ಲ, ಅದನ್ನ ಯಾರಿಗಾದ್ರೂ ದಾನಮಾಡ್ಬಿಟ್ರೇ ನಿಮ್ಮ ಕೆರೆ ನೀಲ್ತದಂತೇ ಕಣ್ ಸ್ವಾಮಿ; ಅವಾಗ ಅಪ್ಪ ನಾನ್ಯಾರಿಗೆ ಕೊಡಾಕೋಗ್ಲೀ ? ನಾನೆಲ್ಲಿ ಹುಡುಕ್ಕಾಗೋಗ್ಲಿ ? ನನಗೆ ಬಂದಿರೋ ಕಷ್ಟದಲ್ಲಿ ಯಾರೋ ನೀನು ಕೇವಲ ಬಡವ್ನಂಗೆ ಕಂಡೇ. ಅದರೇನೊ ಓರ್ವ ಸ್ತ್ರೀಯನ್ನು ದೇವ್ರು ನಿನಗೆ ದೊರಕಿಸವ್ನೆ. ತೊಗಳಪ್ಪಾ ಈ ಗಂಟುಮೂಟೆನೆಲ್ಲಾ, ನೀನೆ ಹೊತ್ಕೊಂಡು ಹೋಗು, ಅಂದ್ಬಿಟ್ಟು ಬೇಕಾದಷ್ಟು ಹಣ ಹೊರಸಿ ಕಳಿಸ್ದಾ ಆ ಗೌಡ.

ಅದನ್ನ ಹೊತ್ಕೊಂಡು, ಹೆಂಡ್ತಿ ಕರ್ಕೊಂಡು, ನಾಗೇಂದ್ರನ ತಕ್ಕೆ ಬಂದ. ನಾಗೇಂದ್ರನ ತಕ್ಕೆ ಬಂದಾಗ, ನಾಗೇಂದ್ರ ''ಏನಪ್ಪಾ ಶಿವನ್ನ ಕಂಡೇನಾಪ್ಪ ಮಗು ?'' ಅಂತ ಕೇಳ್ದಾ ನಾಗೇಂದ್ರ. ಕಂಡೇ ಸ್ವಾಮಿ ಅಂದ್ನಂತೆ ಆ ಮಗು. ಕಂಡೆ ಸ್ವಾಮಿ, ಅಂದಾಗ, ಆವಾಗ ಅವನೇಳಿದ್ನಂತೆ ''ಏನಪ್ಪಾ ಹೋಗೋವಾಗ ಒಬ್ನೇ ಹೋದೆ. ಅಲ್ಲಿಂದ ಬರೋವಾಗ್ಗೆ ಏನೋ ಗಂಟು ತಲೆಮೇಲೆ ಹೊತ್ತಿದ್ದೀಯಾ, ಜೊತೇಲಿ ಓರ್ವ ಸ್ತ್ರೀನೂ ಕರ್ಕೊಂಡು ಬಂದ್ದಿದ್ದೀಯಲ್ಲಪ್ಪಾ ಏನೂ ? ಅಂತ ಹೇಳ್ದಾಗ, 'ಸ್ವಾಮಿ ಇಂಗಿಂಗೇ ಮಾವಿನ ಮರದ ಒಬ್ಬ ಗೌಡ ನೀನು ಶಿವನ ಕಾಣಕ್ಕೆ ಹೋಗ್ತಿಯಾ ಇದಕ್ಕೇನಪ್ಪಾ, ಕೇಳ್ಕೊಂಡ ಬಾಪ್ಪ, ಹಣ್ಣೊಂದು ತಿನ್ನಲ್ಲ ಹಕ್ಕಿ ಪಕ್ಷಿ ಅಂತ ಹೇಳಿ ಕಳಿಸಿದ್ದ, ಅನ್ನೋ ಹೊತ್ಗೆ ಶಿವ ಅವನಲ್ಲಿ ಒಬ್ಬು ಮಗಳು ಅವಳೇ ಅವ್ನೀಗೆ ಮದ್ವೆಮಾಡಿ, ಕೊಟ್ಬಿಟ್ರೆ ಪಕ್ಷಿ ಬಂದು ತಿಂತವೆ ಅಂತ ಹೇಳಿದ್ರು.ಅದೇ ತರ ನನಗೆ ಧಾರೆ ಎರ್ದು ಕಳಿಸವ್ರೇ ಸ್ವಾಮಿ ಅಂತ ಅಂದ. ಈ ಗಂಟೆನಪ್ಪಾ ? ದ್ರವ್ಯ ಸ್ವಾಮಿ ಅಂದ್ನಂತೆ. ಯಾರಪ್ಪಾ ಕೊಟ್ಟವ್ರು ಅಂತ ಅಂದ್ರಂತೆ. ಒಬ್ಬ ಗೌಡ ಕೆರೆಕಟ್ಟಿಸ್ತಾ ಇದ್ದ. ಗೋವುಗಳಿಗೆ ಕುಡಿಯಕ್ಕೆ ನೀರಿಲ್ಲಾ ಅಂತ. ಆರಂದ ಅಡಿವೀಲಿ ಇಂಥ ಕಾಡಲ್ಲಿ ಕೆರೆ ಹಿಡ್ದು ತುಂಬಾ ಹಣ ಖರ್ಚುಮಾಡಿದ್ರೂ ನನ್ಗೆ ಈ ಕೆರೆ ನಿಲ್ಲಿಲ್ಲ. ಇದಕ್ಕೇನಪ್ಪಾ ಉತ್ತರ ಅಂತ ಹೇಳಿ ಕಳಿಸಿದ್ದ. ಅದಕ್ಕಷ್ಟೆ ಕೇಳ್ದೆ. ಪ್ರಶ್ನೆಗುತ್ತರ ಆ ಸ್ವಾಮಿ ಕೊಟ್ಟಿದ್ದಾನೆ. ಅದಕ್ಕೋಸ್ಕರ ಈ ದ್ರವ್ಯದ ಗಂಟನ್ನ ನನಗೇ ಹೊರಸವ್ರೆ, ನೀನೇ ತಗೊಂಡೋಗಪ್ಪ ಅಂತ ದಾನ ಕೊಟ್ಟವ್ರೇ ಅಂತ ಹೇಳಿದ್ನಂತೆ.

ಆವಾಗ ಆಯ್ತು 'ನನ್ಮಾತಿಗೇನಪ್ಪಾ ಉತ್ತರ ? ಏನೂ ಇಲ್ಲ ಸ್ವಾಮಿ, ನೀವು ವಾಸ ಮಾಡೋತಕ್ಕಂತ ಸ್ಥಳದಲ್ಲಿ ಏಳು ಕೊಪ್ಪರಿಕೆ ಹಣ ಐತಂತಲ್ಲ ಅದನ್ನ ಯಾರಿಗಾದ್ರೂ ದಾನಮಾಡ್ಬಿಟ್ರೇ ನಿಮಗಾಗತ್ತೆ ಸಾವು. ಆಗ್ಲೇ ಆ ಹುಡುಗನಿಗೆ ''ನೋಡಪ್ಪಾ ಇಂಥ ಜಾಗದಲ್ಲಿ ಇಷ್ಟು ನಾನು ಮಲಗಿರೋವಂಥ ಸ್ಥಳದಲ್ಲಿ ಇಂತಿದ್ರಲ್ಲಿ ಇಂತಿಂಥದ್ದು ಐತೆ. ನೀನು ಯಾರಾದ್ರು ಕರ್ಕೊಂಬಂದು ಇದನ್ನ ತಗ್ಸೀ. ನೀನು ಯಾರಿಗಾದ್ರೂ ದಾನನಾದ್ರೂ ಮಾಡು, ನೀನಾದ್ರು ತಿನ್ನು, ಇದರಿಂದ ಏನಾದ್ರು ಮಾಡ್ಕೋಳಪ್ಪಾ ಅಂತ ನಾಗೇಂದ್ರ ಹೇಳಿದ. ತಕ್ಷಣ ಆ ನಾಗೇಂದ್ರ ಪ್ರಾಣಬಿಟ್ಕೊಂಡ.

ಆವಾಗ ಆ ನಾಗೇಂದ್ರ ಪ್ರಾಣಬಿಡುವಾಗ ಒಂದು ಇನ್ನೊಂದು ವರ ಹೇಳಿದ್ನಂತೆ: "ನೋಡಪ್ಪಾ ನೀನು ಇಲ್ಲಿಂದ ಮನೆಗೋಗ್ಬೇಕಾದ್ರೆ, ಈ ಹಣ ಅಷ್ಟ ಐಶ್ವರ್ಯವನ್ನೆಲ್ಲಾ ಹೊತ್ಕೊಂಡುಹೋಗ್ಬೇಕಾದ್ರೆ, ನೀನು ಇರತಕ್ಕಂಥ ಗುಡಿಸ್ಲುಮನೆ ಹೋಗ್ಲೀ, ಅರಮನೆಯಾಗ್ಲೀ; ನಿನ್ನ ತಾಯಿ ತಿರ್ಪೆ ಮುದುಕೀ ಹೋಗ್ಲೀ, ತ್ರಿಪುರ ಸುಂದ್ರಿ ಆಗ್ಲೀ ಅಂತ ವರ ಕೊಟ್ನಂತೆ. ಆ ನಾಗೇಂದ್ರ ಪ್ರಾಣ ಬಿಡೋವಾಗ ಆ ಮೂರು ವರನೂ ಇಸ್ಕೊಂಡು, ಅವಾಗ ಹೆಂಡ್ತಿ ಕರ್ಕೊಂಡು, ಹಣದ ಗಂಟನ್ನು ಹೊತ್ಕೊಂಡು, ತಾಯಿ ಮನೆಗೆ ಬಂದ. ತಾಯಿ ಮನೆಗೆ ಬಂದಾಗ, ಮನೆಗೆ ಬಂದು ನೋಡೋದ್ರಲ್ಲಿ ಗುಡಿಸ್ಲಿಲ್ಲ. ಮಾಯವಾಗಿ ಇಂತಂದೊಂದು ಬಿಲ್ಡಿಂಗ್ ಆಗಿತ್ತು.

ಇವ್ಳು ನಮ್ಮ ತಾಯಿ ಅನ್ನೋದೇ ಗುರ್ತು ಆ ಮಗನಿಗೇ ಅರೀಲಿಲ್ಲ. ಮಗಾ ಅನ್ನೋ ಗುರ್ತು ತಾಯಿಗರಿವಿಲ್ಲ. ಇವ್ನು ಹೋಗೋವಾಗ ಇಷ್ಟು ಚಿಕ್ಕ ವಯ್ಸನಲ್ಲಿ ಹೋದ; ಯಾ ಕಾಡಲ್ಲಿ ಯಾರೂ ಹೊಡೆದಾಕಿದ್ರೋ, ಚಚ್ಚಾಕಿದ್ರೊ ಏನೋ, ಹುಲೀನೆ ತಿನ್ಕೋತೋ ಕರಡಿನೇ ತಿನ್ಕೋತೋ, ನನ್ನ ಮಗ ಬದುಕಿದ್ದಾನ ಅಂದ್ಬಿಟ್ಟು ಆ ಮುದುಕೀ ದಿವ್ಸ ಗೋಳಾಡೋಳೆ ಅಂತೆ. ಗೋಳಾಡ್ಬೇಕಾದ್ರೆ ಈ ಗುಡಿಸ್ಲೋಗಿ ಅರಮನೆ ಆಗಿತ್ತಲ್ಲ? ಆ ಅರಮನೆ ಆಗೀ ಅವಳಿಗೆ ಒಳ್ಳೇ ರೂಪ ಬಂದ್ಮೇಲೆ ಆ ಅಳೊದನ್ನ ಬಿಟ್ಟಿಟ್ಲಂತೆ ಆ ಮುದುಕೀ.

ಆ ಮಗುವೋಗಿ ಬಾಗ್ಲಲ್ಲಿ ನಿತ್ಕೊಂಡು ಕಾಲಿಗೆ ನೀರ್ಕೊಡಮ್ಮ, ನಿರ್ಕೋಡಮ್ಮ ಅಮ್ಮ ನಿರ್ಕೋಡಮ್ಮಾ, ಅಂದಾಗ ಯಾರೋ ನೀರು ಕೇಳ್ತಾರಲ್ಲ? ನನ್ನ ಮಗ ವೋಗಿ ಇಷ್ಟು ವರ್ಷ ಆಗ್ಯದೇ. ಜೊತೆಲೊಬ್ರು ಹೆಂಗ್ಸೂ ಇದ್ದಾರೆ. ಒಂದು ಹೆಣ್ಮಗನೂ ಕರ್ಕೊಂಬಂದಿದ್ದಾನೆ. ಈತ ಯಾರಿರ್ಬೋದು ? ನೀರ್ಕೊಡು, ನಿರ್ಕೊಡು; ಅಮ್ಮಾ ನಾನು ನಿನ್ಮಗ ಅಲ್ವೇನಮ್ಮಾ ? ನೀರು ಕೊಡಮ್ಮ ನೀರು ಕೊಡಮ್ಮಾ ಅಂದ. ಏನಪ್ಪಾ ನೀನು ಹೋಗುವಾಗ ಚಿಕ್ಕ ಹುಡುಗ. ನನಗೇ ಗುರ್ತು ಅರಿಯಲ್ಲ ಸ್ವಾಮಿ; ಮಗು ಯಾರಪ್ಪಾ, ನೀನು ? ಏನಪ್ಪಾ ಎತ್ಲೂ ಅಂತ ಕೇಳಿದ್ಲಂತೆ. ಅಜ್ಜಿ ಅಮ್ಮಾ ನೀನು ನಾನು ಬಿಕ್ಷ ಮಾಡ್ಕೊಂಡು ಬರ್ತೀರ್ಲಿಲ್ವಮ್ಮಾ? ದಿವ್ಸಾ ನೀನು ತಿರ್ಕೋಬಂದಿದ್ದನ್ನ ನೀನು ಅನ್ನದಾನ ಮಾಡ್ತೀರ್ಲಿಲ್ವಮ್ಮ ? ನಿನ್ನ ಮಗ ಅಲ್ವೇನಮ್ಮಾ ನಾನು ? ಈಕೆ ಯಾರಪ್ಪಾ ? ಇವ್ಳು ನನ ಹೆಂಡ್ತೀ ಕಣಮ್ಮಾ. ಎಲ್ಲಿಂದ ಕರ್ಕೊಂಬಂದಪ್ಪಾ ? ಏನಪ್ಪ ಇದು ಆಶ್ವರ್ಯ ಅಂತ ಕೇಳಿದ್ಲಂತೆ. ಅಮ್ಮಾ ಇದು ಇಂಗಿಂಗೇ, ನಾನು ಎಲ್ಲಾ ಹೇಳ್ತೀನಿ ಆ ಕಥೆನಾ ನೀನು ನೀರು ಕೊಡಮ್ಮಾ ಅದ್ನಂತೆ. ಅವಾಗ ಗಿಂಡಿಯಲ್ಲಿ ಪನ್ನೀರನ್ನ ಕೊಟ್ಲಂತೆ. ಅವಾಗ ಆ ಸೊಸೆ ಕೈಲೀ ಇಸ್ಕೊಂಡು, ಅತ್ತೇ ಗಂಡನ ಪಾದ ಇಬ್ರೂದು ತೊಳೆದು, ಆ ಪಾದ ತೊಳೆದ ನೀರನ್ನು ಅವ್ಳು ಸೇವನೆ ಮಾಡಿ, ಅವಾಗ ಮುತ್ತಿನ ಆರತೀಯನ್ನು ಅವ್ಳು ಬೆಳಗೀ, ಒಳಗಡೇ ಹೋದ್ರಂತೆ. ಒಳಗಡೆ ಹೋಗಿ ಈತರ ನಡೆದಿದ್ದ ಕಥೆ ಎಲ್ಲಾನೂವೆ, ಹೆಂಡ್ತಿ ಪಕ್ಕದಲ್ಲಿ ಕುಂಡ್ರಿಸ್ಕೊಂಡು, ತಾಯಿ ಈ ಕಡೇ ಪಕ್ಕದಲ್ಲಿ ಕುಂಡ್ರಿಸ್ಕೊಂಡು ಆ ಕಥೆ ಎಲ್ಲಾನೂ ಹೇಳಿದ್ನಂತೆ ಆ ಮಗ.

ಕಥೆ ಎಲ್ಲಾನೂ ಕೇಳಿ ನೋಡಪ್ಪಾ ಅದಕ್ಕೋಸ್ಕರವೇ ಕಂದ ನಾನು ಅನ್ನದಿಂದ ಏನು ಫಲ ? ಅನ್ನದಾನವನ್ನು ಯಾತಕ್ಕಾಗಿ ನಿಮ್ಮ ತಾಯಿ ಮಾಡ್ತಿದ್ದಾಳೆ ? ಅನ್ನೋದು ಅರಿತ್ಕೋ ಮಗನೇ. ನಾನು ಸತ್ರೂ ನಿನ್ನ ವಾಕ್ಯ ನೀನು ಉಳಿಸ್ಬೇಕು ಮಗನೇ ಅಂತ ಮಗನ್ನ ಕೇಳ್ಕೊಂಡ್ಲಂತೆ. ಅದರಿಂದಾಚೆಗೆ ಅವ್ರು ಸುಖವಾಗೀ ಬದಿಕ್ಕೊಂಡ್ರು. ಅವರು ಅಲ್ಲವ್ರೇ.

ಹೇಳಿದವರು : **ಗಂಗುಬ್ಬಮ್ಮ**, 35 ವರ್ಷ ಜಲಧಿಗೆರೆ.

## ೧೧. ಸಿರಿತನ ಬಡತನ

ಎಡೆಯೂರಂತ ಊರಲ್ಲಿ ಒಬ್ಬ ಅಣ್ಣ ಅಂತೆ. ಅಣ್ಣಿದ್ರೆ ಅಣ್ಣಂಗೆ ಹೆಂಡ್ತಿ ಬಂದಿರೋಳಂತೆ. ಅಣ್ಣ ಅತ್ತಿಗೆ ಇಬ್ರೂನೂವೇ ಮನೇಲಿ ಅಚ್ಚುಕಟ್ಟಾಗಿ ಊಟ ತಿಂಡಿ ಮಾಡ್ಕೊಂಡು ಕ್ಲೀನಾಗೀ ಚೆನ್ನಾಗಿ ಬದಕಿರೋರಂತೆ.

ಚೆನ್ನಾಗಿ ಬದುಕಿದ್ರೆ ಈ ನಾದಿನಿ ಇದ್ಲಲ್ಲ ? ಈ ಅಣ್ಣನ ತಂಗಿ? ಆಯಮ್ಮಂಗೆ ಒಂದು ಪಟ್ಣಕ್ಕೆ ಕೊಟ್ಟಿತ್ತು. ಇವರಿಗೆ ಬರಬಾರ್ದ ಬಡಸ್ತನ ಬಂದುಬಿಡ್ತು. ಅಣ್ಣಂಗೆ ಸಿರಿವಂತನ ಕೊಟ್ಬಿಟ್ಟು ಭಗವಂತ ಇವರಿಗೆ ಬಡಸ್ತನನೇ ಕೊಟ್‌ಬಿಟ್ಟ. ಭಗವಂತ ನಾದಿನಿಗೂ ನಾದಿನಿ ಗಂಡಗೂ ಬಡಸ್ತನ ಕೊಟ್ಟ. ಅಣ್ಣಂಗೂ ಅಣ್ಣನ ಹೆಂಡ್ತಿಗೂ ಸಿರಿತನನೇ ಕೊಟ್ಟ.

ಇವರಿಗೆ ಸಿರಿತನ ಕೊಡುತ್ಲೂವೇ ಇವರೇನು ಮಾಡಿಬಿಟ್ರು ? ಕ್ಲೀನಾಗಿ ಅಚ್ಚುಕಟ್ಟಾಗಿ ಬಟ್ಟೆ, ಬರೆ, ಸ್ನಾನ, ಮಡಿ ತಿಂಡಿ ತೀರ್ಥ ಎಲ್ಲಾ ಕ್ಲೀನಾಗಿ ಚೆನ್ನಾಗಿಟ್ಟುಕೊಂಡ್ರು. ಒಳ್ಳೆ ಚೆನ್ನಾಗಿ ಮನೇಲಿ ಸೌಖ್ಯವಾಗಿ ಹೂವಿನ ಮಂಚದಲ್ಲಿ ಆಡಿದಂಗೆ, ಹೂವಿನ ಮಂಚದಲ್ಲಿ ಆಡಿಕೊಂಡು ಇದ್ರು.

ಒಂದು ದಿನ ನೋಡದ್ಲು, ಎರಡು ದಿನ ಮೂರು ದಿನ ನೋಡುದ್ಲು, ನಮ್ಮ ಅಣ್ಣನ ಮನೆತನದಾಗೆ ನನಗೆ ನಮ್ಮ ಅಣ್ಣಂಗೆ ಶ್ರೀಮಂತನ ಕೊಟ್ಟ ಭಗವಂತ ನನಗೆ ಇದೇ ತರ ಬಡಸ್ತನ ಕೊಟ್ಟ. ಹಿಂಗೇ ಇರಲಪ್ಪ, ಆಯ್ತು ಅಂತ ಏಳ್‌ಬಿಟ್ಟು, ಇವಳ್ ಆತರ ಅಂದ್‌ಕೊಂಡ್ಲು. ಬಂದ್ಲು; ಒಂದು ದಿನ ಅಣ್ಣ ನಿಮ್ಮ ಮನೇಲೇ ನಾನು ಈವತ್ತು ಊಟ ಸ್ನಾನ ಮಾಡಿ ಎಲ್ಲ ಸುಪ್ಪತ್ತಿಗೆ ಮೇಲೆ ಇವತ್ತು ಇರಲೇಬೇಕು ನಿನ್ನ ಸುಖಾನ ನಾನು ಒಂದುಗಳಿಗೆ ತಕ್ಕೋಬೇಕಣ್ಣ ಅಂದಳು ಆಯಮ್ಮ. ''ನಿನಗಿಂತ ಹೆಚ್‌ನಾದ್ದು ಯಾವುದೂ ಇಲ್ಲ ತಂಗೀ. ನೀನು ಆ ತರ ಸುಪ್ಪತ್ತಿಗೆ ಮೇಲೇ ಇದ್ದು ಈವತ್ತು ರಾತ್ರಿ ಇಲ್ಲೇ ಮಲಗಿದ್ದು ನನ್ ಮನೆಯಿಂದ ನಗ್‌ನಗ್‌ತಾನೆ, ನೀನು ನಗ್‌ನಗುತ್ತಾ ಆಚೆಗೋಗಮ್ಮ'' ಅಂತ

ಆಯ್ತಮ್ಮ ಈವತ್ತ್ ರಾತ್ರೇ ತಿಂಡಿ ತೀರ್ಥ, ಸ್ನಾನಮಾಡಿ ಬಟ್ಟೆಬರೇ ಎಲ್ಲಾ ಅಚ್ಚುಕಟ್ಟಾಗಿ ಇಟ್‌ಕೊಂಡು ಈವತ್ತು ರಾತ್ರಿ ನನ್ ಮಂಚದ ಮ್ಯಾಲೇ ಸುಖವಾಗಿ ಮನಗಿದ್ದು ನಿನ್ ಗಂಡನ ಮನೇಗೆ ಹೋಗು. ನಿನಗೆ ಬರಬಾರ್‍ದು ಕಷ್ಟವೇ ಭಗವಂತ ಕೊಟ್‌ಬಿಟ್ಟವ್ನೆ. ಏನೋ ನಂಗೆ ಎರಡ್ ದಿನ ಸಿರಿತನ ಕೊಟ್ಟವ್ನೆ ನನ್ ತಂಗಿ. ಈವತ್ತು ನಂಗೆ ಎರಡ್ ದಿನ ಸಿರಿತನ ಕೊಟ್ಟವ್ನೆ. ಆಯಪ್ಪ ಅಂತ ಕಡೇಗಣ್ಣಲ್ಲಿ ನಿನ್ ನೋಡಲ್ಲ ತಂಗಿ. ಈಗ ನೀನು ಸುಖವಾಗಿರದೇ ನಂಗೆ ಬಾಳ ಚಂದ. ನೀನು ಬಂದಂತ್ಲೂವೇ ಇದ್ದುಬಿಟ್ಟು ಹೋಗಮ್ಮ ಅಂತ ಅಣ್ಣ ಅಂದ.

ಇವ್ಳು ಏನಂದ್ಲು? ಓಹೋಹೋ ಇವಳ್ ನಮ್ಮನೆಗೆ ಬರ್ತಾಳಂತೆ. ಇವಳಿಗೆ ಮಂಚಬೇಕಂತೆ ಮುಂಡೇಗೆ ಸ್ನಾನಬೇಕಂತೆ ಮುಂಡೆಗೆ. ಅಯ್ಯೊಯ್ಯೊ ಇವಳಿಗೆ ಬಡಸ್ತನ ಕೊಟ್ಟವ್ನೇ ಭಗವಂತ. ಈ ಗೊಡ್ಡು ಮುಂಡೆಗೆ ಮಕ್ಕಳು ಅವ, ಗೊಡ್ಡು ಮುಂಡೆಗೆ? ಅಂತ ಅಂದ್‌ಬಿಟ್ಲು ಅಣ್ಣನ ಹೆಂಡ್ತಿ, ಆತರ ಅಂದ್ಲು.

ಆಯ್ತವ್ವ "ಇವತ್ತು ನಾನ್ ಗೊಡ್ಡು ಮುಂಡೆ. ಭಗವಂತ ಇವತ್ತು ಬಡಸ್ತನ ಕೊಟ್ಟವ್ನೆ. ನಾಳೆ ನಿನ್ನಂಗೆ ನಂಗೂ ಸಿರಿತನ ಕೊಟ್ಟಾನೋ ಏನೋ. ಆ ಭಗವಂತನ್ನ ನಂಬಿದ್ದು ಅದು ಅಂತ ಹೇಳ್‌ಬಿಟ್ಟು ಈಯಮ್ಮ ಅಂಗ್ ಅನ್‌ಕೊಂಡು, ಈಯಮ್ಮ ಅವತ್ತು ರಾತ್ರಿ, ನೈಟು ಬರ್‍ತೀನಿ ಚೆನ್ನಾಗಿರಣ್ಣ ನೀನು" ಅಂತ ಹೇಳ್‌ಬಿಟ್ಟು ಒಂಟೋಗ್‌ಬಿಟ್ಲು. ಯಾರು ? ತಂಗಿ. ತಂಗಿ ವೊಂಟೋಯ್ತುಲೂವೆ ಈಯಮ್ಮ ಏನ್ ಮಾಡಿಬಿಟ್ಲು ತಂಗಿ ಬಂದು ಹೋದ್ ಮೂರ್ ದಿನಕ್ಕೆ ಪಟ್ನಾದ ಪಟ್ನ ಎಲ್ಲನೂ ಬೆಂದೋದ್ಹಂಗಾಯ್ತು.

ಪಟ್ನಾದ ಪಟ್ನದಲ್ಲಿ ಎಲ್ ಹುಡಿಕ್ಕೊಂಡ್ರು ಸೇರ್ ಅಂಬ್ಲಿ ಇಲ್ಲ. ಕೆರೆಗೆ ನೀರಿಲ್ಲ. ಆತರ ಈಯಮ್ಮ ಬಂದ್ ಹೋದ್ ಗಳಿಗೆ.

ಈಯಮ್ಮ ಕಣ್ಣೀರ್ ಹಾಕ್ಕೊಂಡ್ ಹೋದ್ಲಲ್ಲ ? ಕಣ್ಣೀರ್ ಹೊಡೀತು ಆಯಣ್ಣಂಗೆ. ಅಯಮ್ಮನ ಕಣ್ಣೀರ್ ಯಾವಾಗ ತಗಲ್ತೋ ಪಟ್ನಾದ ಪಟ್ನ ಎಲ್ಲಾ ಬೆಂದೋಗಿ ಅಣ್ಣಂಗೆ ಬಡತನ ಬಂದೋಯ್ತು. ಅಣ್ಣಂಗೆ ಬಡಸ್ತನ ಬಂದೋಯ್ತು. ಈಯಮ್ಮಂಗೆ ಸಿರಿತನ ಕೊಟ್‌ಬಿಟ್ಟ ಭಗವಂತ.

ಭಗವಂತ ಈಯಮ್ಮಂಗೆ ಸಿರಿತನ ಕೊಡುತ್ಲೂವೇ ಈಯಮ್ಮ ಚೆನ್ನಾಗವ್ಳೇ. ಅತ್ತಿಗೇಗೂ, ಅಣ್ಣಂಗೂ ಬಡಸ್ತನ ಬಂದ್‌ಬಿಡ್ತು. ಈಯಪ್ಪ ಯಾವತ್ತು ವೋಗ್‌ದಿದ್ದೋನು ಗಿಡಕ್ಕೆ, ಗಿಡಕ್ಹೋಗಲ್ಲೇಬೇಕು. ಗಿಡಗ್ಹೋಗಿ ಚುಂಚನಗಿರಿ ಅಂತ ಬೆಟ್ಟಕ್ಹೋಗಿ, ಮರ ಕಡಿದು ಗಿಡ ಕಡಿದು ಅವೆಲ್ಲ ಸೌದೆ ಮಾಡಿ, ಸೌದೆ ಕಟ್ಟಿದ್ರೇ ತಕ್ಕೊಂಬಂದು ಬೀದಿ ಬೀದಿಗೂ ಹೊತ್‌ಕ್ಕೊಂಡು ತಿರ್‍ಗ್‌ಬೇಕು. ಯಾರು ? ಅಣ್ಣ.

ಈ ರೀತಿ ಬಡಸ್ತನ ಬಂದು ಬಿಡ್ತು. ಬೀದಿಬೀದಿಗೂ ಹೊತ್‌ಕೊಂಡ್ ತಿರುಗಿ ಸೌದೆ ತಂದು ಅಲ್ಲಿ ಮಾರಿಕೊಂಡು ಅಕ್ಕಿ ಅದು ಇದು ಕೊಂಡ್‌ಕೊಂಡು ಬಂದು ಆಯಮ್ಮ ಅಡಿಗೆ ಗಿಡಿಗೆ ಮಾಡ್‌ಕೊಂಡು ಆಗ ತಿನ್‌ಬೇಕು. ಆ ರೀತಿ ಬಡಸ್ತನ ಕೊಟ್ಟುಬಿಟ್ಟ ಭಗವಂತ. ಯಾರಿಗೆ? ಅಣ್ಣಂಗೂ ಅತ್ತಿಗೆಗೂ. ಈಯಮ್ಮಂಗೆ ಸಿರಿತನ ಕೊಟ್‌ಬಿಟ್ಟ ಭಗವಂತ.

ಆವಾಗ ಈಯಮ್ಮ ಏನ್ ಮಾಡಿಬಿಟ್ಲು ? ನನ್ನ ಮಕ್ಕಳಿಲ್ಲದವಳೂ ಅಂದ್ಯಲ್ಲೆ ? ನನ್ನ ಮಕ್ಕಳಿಲ್ಲದವಳು ಅಂದ್ಯಲ್ಲೆ, ನನ್ನ ಮಕ್ಕಳಿಲ್ಲದವಳೂ ಅಂತ ಅಂದಿದ್ದಿಯಾ. ನಿನ್ ಮುಂದಾಗಡೆ ಒಂದಲ್ಲ ಒಂದ್ ದಿನ ಗೆಜ್ಜೆಕಾಲಿನ ಮಗನ್ನ ಮುಂದೆ ನಡೆಸಿಕೊಂಡು ಸೌಟ್‌ನಲ್ಲಿ ತುಪ್ಪಾ ಹಾಕ್ಕೊಂಡು ಅನಾಲಿಸ್ ತುಪ್ಪ ಬಿಡದೇ ಹೋದ್ರೆ ನಾನ್ ನಿನ್ನ ನಾದ್ನಿನೇ ಅಲ್ಲ ಕಣೆ, ಆಯ್ತಪ್ಪ ಅಂತ ಏಳಿ ಹೊಂಟೊಗ್ಬುಟ್ಲು. ಇವಳಿಗೆ ಈಗ ಸೌದೆ ಮಾರಬೇಕು, ತರಬೇಕು, ತಿನ್‌ಬೇಕು; ಸೌದೆ ಮಾರಬೇಕು, ತರಬೇಕು, ತಿನ್ನಬೇಕು. ಈ ಸ್ಥಿತಿ ಬಂದೋಯ್ತು.

ಒಂದ್ ದಿನಾ ನೋಡದ್ಲೂ, ಎರಡು ದಿನ ನೋಡದ್ಲೂ ಆಮೇಲೆ ಇವರಣ್ಣ ಅವತ್ತಿನ ದಿನ ಸೌದೆ ತಕ್ಕೊಂಡು ಅಂದೇ ತಂಗೇ ಮನೇ ತಕ್ಕೇ ಹೋಯ್ತು; ತಂಗೇ ಮನೇತಕ್ಕೆ ಹೋದ. ಆಮೇಲೆ ಸೌದೆ ಆಕಿಸ್ಕೊಂಡು, ಒಂದೆರಡು ರೂಪಾಯಿ ಇದ್ರೆ ಕೊಡ್ರಿ, ಬಾರಿ ತಾಪತ್ರಯ ಮಕ್ಕಳೊಂದಿಗಾ, ಬಾರಿ ಬಡಸ್ತನ ಕೊಟ್ಟವ್ನೇ ಭಗವಂತ, ತಿನ್ನಾಕೆ ಅನ್ನ ಇಲ್ಲ, ಹೊದಿಯಾಕ್ ಬಟ್ಟೆಲ್ಲ. ಅಮ್ಮಾವ್ರೇ ಏನಾರ ಮಾಡಿ ದಯವಿಟ್ಟು ಈ ಸೌದೆ ಹೊರೆ ಹಾಕಿಸ್ಕೊಂಡು ಎರಡೆರಡು ರೂಪಾಯಿ ಕೊಡ್ರಿ, ನಮ್ ಜೀವ ಉಳಿಸಿಕೋತೀವಿ ಅಂತ ಹೇಳ್‌ಬಿಟ್ಟ.

ಅಣ್ಣ ಕೇಳತಾವ್ನೇ. ಕೇಳತಾ ಇದ್ರೆ, ಇವ್ನು ಅಣ್ಣ ಅನ್ನೋದು ಚೆನ್ನಾಗ್ಗೊತ್ತು. ತಂಗೇಗೆ ನಮ್ ಅಣ್ಣ ಇವ್ರು ಅಂತ ಚೆನ್ನಾಗೊತ್ತು. ಈ ಮುಂಡೆಗೇ ಗೊತ್ತಿಲ್ಲ ಅತ್ತಿಗೇಗೆ. ಇವಳಿಗೆ ಬಡಸ್ತನವ್ಹೋಗಿ ಸಿರಿತನ ಬಂದದೆ ಅನ್ನೋದು ಗೊತ್ತಿಲ್ಲ ಅತ್ತಿಗೆಗೆ. ಆಮೇಲೆ ಇವ್ನು ಏನ್ ಮಾಡ್ದ. ಅದೇ ಮನೆ ತಕೆ ಹೋದ ಸೌದೆ ತಕ್ಕೋಳಿ ಅಂತ ಹೋದ.

ಅವ್ರು ಏನ್ ಮಾಡಿಬಿಟ್ರು ? ಸೌದೆ ಹಾಕ್ಸಿಕೊಂಡ್ರು. ಒಂದ್ ದಿನ ಹಾಕ್ಸಿಕೊಂಡ್ರು, ಎರಡು ದಿನ ಹಾಕ್ಸಿಕೊಂಡ್ರು. ಮೂರನೇ ದಿನಕ್ಕೆ ಮನೆಗೆ ಬಂದ್ ಬಿಟ್ಟ. ಮೂರನೇ ದಿವ್ಸಕ್ಕೆ ಮನೆಗ್ಹೋಯ್ತೂಲೂವೇ ಇನ್ ನಾಲ್ಕನೇ ದಿವಸಕ್ಕೆ ತಿರ್ಗ್ಾ ಅಲ್ಲಿಗೇ ಹೋಗಬೇಕು. ತಿರ್ಗ್ಾ ಹೋದಾಗ ಅವತ್ತು ಏನ್ ಮಾಡಿಬಿಟ್ಲು ? ನಮ್ಮಣ್ಣಂಗೆ ಈ ಸ್ಥಿತಿ ಕೊಟ್‌ಬಿಟ್ನಲ್ಲ ಭಗವಂತ. ನಮ್ಮಣ್ಣ ಅವ್ನಗೆ ಕೊಡ ಸ್ಥಿತಿ ಈ ಮುಂಡೆಗಾದ್ರೂ ಕೊಟ್ನ, ಅತ್ತಿಗೆ ಮುಂಡೆಗೆ ಅಂತ ಅಂದ್‌ಬಿಟ್ಟು, ಬಾಯಲ್ಲಿ ಅಂಗೇ ಅನ್ಕೊಂಡ್ ಇದ್ಲು ಅವತ್ತು. ಆಯ್ತು ಇವತ್ತು ನಮ್ಮಣ್ಣ ಮನೆಗೆ ಬರಲೀ ನನ್ ಅಡ್ರೆಸ್ಸು ಇವರ ತಂಗೇ ಅಂತ ಅಡ್ರಸ್ಸೇ ಕೊಡಬಾರ್ದು ನಮ್ಮಣ್ಣಂಗೆ, ಅಂದುಕೊಂಡಳು.

ನಮ್ಮಣ್ಣ ನಮ್ಮನೆಗೆ ಬರೂತ್ಲೂವೇ ಒಂದ್ ಕಡೆ ನೀರು ಕಾಯ್ಸಿ, ಚೆನ್ನಾಗಿ ಸ್ನಾನ ಮಾಡ್ಸಿ, ಎಣ್ಣೆ ನೀರ್ ಹಾಕಿ ನಮ್ಮಣ್ಣಂಗೆ ಕ್ಲೀನಾಗಿ ಬಟ್ಟೆಬರೇ ಕೊಟ್ಟು, ಕ್ಲೀನಾಗಿ ಅವನ್ಗೆ ಸ್ನಾನ ಮಾಡ್ಸಿ, ಊಟಕ್ಕೆ ಬಡ್ಸಿ, ಕಳಿಸ್ತೀನಿ ಅಂತ ಹೇಳ್‌ಬಿಟ್ಟು ತಂಗಿ ಮನಸ್ಸು ಮಾಡಿದ್ಲು. ಏನಂತ ? ಊಟಕ್ಕೆ ಬಡಿಸ್ತೀನಿ, ನೀರು ಉಯ್ತೀನಿ, ಚೆನ್ನಾಗಿ ನಮ್ಮಣ್ಣಂಗೆ ನೋಡ್ತಿನಿ, ಬಟ್ಟೆ ಕೊಡ್ತೀನಿ ಅಂತ ಅಂದ್ಲು ಅವತ್ತಿನ ದಿನ.

ಈಯಪ್ಪ ಹೋದ. ಸೌದೆ ಹಾಕ್ಸಿಕೊಂಡು 'ಅಯ್ತಪ್ಪ ಈವತ್ತು ನೀನು ಮನೆಗೆ ಹೋಗಬೇಡ. ಏನೇ ಕಷ್ಟ ಆಗ್ಲೀ ಇವತ್ತು ಅಂಬ್ಲಿ ಕುಡೀಲಿ, ವನವಾಸ ಬೀಳ್ಲಿ, ಇಲ್ಲೇ ಇರಬೇಕು. ನೀನ್ ಮಾತ್ರ ಈವತ್ತು ಹೋಗಬೇಡ ಅಂತ ಹೇಳ್‌ಬಿಟ್ಟು ಈಯಪ್ಪನ್ನ ಇಲ್ಲೇ ಇರಿಸಿಕೊಂಡ್ರು. ''ಅಮ್ಮಾವ್ರೇ ಆ ರೀತಿ ನಾನು ಇಲ್ಲಿ ಇದ್ದು ಬಿಟ್ರೇ ನನ್ ಮಕ್ಕಳ ಗತಿ ಏನು? ನನ್ ಹೆಂಡ್ತಿದೇನ್ ಗತಿ ? ಅವರ್ಹೊಟ್ಟೇಗಿಲ್ಲದೇ ಸಾಯ್ತಾರೇ, ಅಮ್ಮಾವ್ರೇ. ನಾನ್ ಇಂದ್ ಇಲ್ಲೇ ಇದ್ದುಬಿಟ್ರೆ, ಒಬ್ಬನೇ ಊಟ ಮಾಡಬಿಟ್ರೇ ನನ್ ಮಕ್ಕು ಮರಿ ಇಟ್ಟಾಡ್ತಾರೆ. ಅಮ್ಮಾವ್ರೇ ಬೇಡ ಕಣ್ರಿ, ಕೊಡ್ರಿ ಹಣ, ಅಂದ.

ನೀನ್ ಮಕ್ಕು ಮರೀಗೆ ದೇವರ್ಹಂಗೆ ಸಪ್ಪೆ ಮಾಡುವೆ. ನೀನು ತೆಪ್ಪನೇ ಇಲ್ಲಿರೋದು ಕಲ್ತಿಕೋ ಇವತ್ತು ನೈಟೂ ಅಂತ ಹೇಳ್‌ಬಿಟ್ಲು; ಇವ್ನು ನೈಟ್ ಇರಲಿಲ್ಲ.

ಸಂಜೆ ಹೊತ್ಗೆ ಅಲ್ಲಿಗೆ ಹೋಗ್‌ಬಿಟ್ಟ. ಸ್ನಾನ ಮಾಡ್ಸಿದ್ಲು, ಬಟ್ಟೆ ಕೊಟ್ಲು, ಅಡಿಗೆ ಮಾಡಿದ್ಲು. ಆಮೇಲೆ ಊಟಾನೂ ಬಡಿಸಿದ್ಲು; ತೃಪ್ತಿ ಪಡಿಸಿದ್ಲು ಅಣ್ಣಂಗೆ; ಸಂತೋಷವಾಗಿ ಹತ್ತು ವರ್ಷದಿಂದ ಹನ್ನೆರಡು ವರ್ಷ ಆಗಿತ್ತು, ಊಟ ಸರಿಯಾಗಿ ತಿಂದು; ಬಾರಿ ಬಡಸ್ತನ ಕೊಟ್‌ಬಿಟ್ಟ ಭಗವಂತ. ಅವತ್ನಿಂದ ಸ್ನಾನ ಮಾಡ್ದೇ ಇದ್ದ, ಮೈ ತುಂಬಾ ಬಟ್ಟೆ ಹೊತ್‌ಕೊಂಡು, ಕಣ್ಣಿಗೆ ಬೇಕಾದ್ದು ತಿಂದ.

ಈವತ್ತು ನನ್ ಹೊಟ್ಟೆ ತಣ್ಣಗಾಯ್ತು, ಅಂತ ಮಲಿಕ್ಕೊಂಡ. ಮಲಿಕ್ಕೊಂಡು ''ಓಹ್ಹೊಹೋ ನಾನೇನೋ ಮಲ್ಕೊಬಿಟ್ಟೆ' ಅಂತ ಹೇಳ್‌ಬಿಟ್ಟು, ಸ್ವಲ್ಪ ಹೊತ್ಗೆ ಮಲಕ್ಕೊಂಡು ಎದ್ದು ಎಚ್ಚರಿಕೆಯಾಗಿ ''ಓಹೋ ನಾನ್ ಇಲ್ಲೇ ಮಲಗಿದ್ದೀನಿ. ಅಮ್ಮೋವ್ರೆ ದಯವಿಟ್ಟು ನಾ ಬರ್ತೀನಿ, ಊಟ ಉಪಚಾರ ಎಲ್ಲಾ ಆಯ್ತು. ಮಾತಾನಾಡಿದ್ದು ಆಯ್ತು ಅಂತ ಹೇಳ್‌ಬಿಟ್ಟು ಕಳಿಸಿಬಿಟ್ಲು. ಆಮೇಲೆ ಇವಳೇನ್ ಮಾಡಿಬಿಟ್ಲು, ಮಗನ್ನ ಮುಂದೆ ನಡ್ಸೀತೀನಿ ಅಂದ್ಲಲ್ಲ. ಬಸಿರಿ ಅವಳಿಗೆ ದಿನ ತುಂಬ್ತಾ ಬಂತು. ಅವಳಿಗೆ ಯಾವಾಗ ದಿನ ತುಂಬದ್ರಲ್ಲಿ ಇವಳಿಗೆ ಹೆರಿಗೆ ಆಯ್ತು. ತಂಗೆಗೆ ಹೆರಿಗೆ ಆಗಿ ಗಂಡು ಮಗ ಆಯ್ತು. ಗಂಡ ಮಗ ಆಯ್ತೊಲೂವೇ, ಆ ಗಂಡ್ ಮಗನಾ, ಅಷ್ಟಾಗಿ ಇಷ್ಟಾಗಿ, ಚಿಕ್ಕದಾಗಿ ದೊಡ್ಡದಾಗಿ, ಇಷ್ಟು ಮಗ ಮಾಡಿಕೊಂಡ್ರು.

ಇವರಣ್ಣಂಗೆ ಅವತ್ತು ಇವಳ್ ಹೇಳ್‌ಬಿಟ್ಳು. ನಮ್ಮ ಮಗನಿಗೆ ಇವತ್ತು ನಾಮಕರಣ. ಇವತ್ತು ದಿನ ನೀನೆ ಸೌದೆ ಹೊತ್ಕೊಂಬರ್ತಾ ಇದೇಯಲ್ಲ? ಇವತ್ತು ನಾಮಕರಣಕ್ಕೆ ಬೇಕಾದಷ್ಟು ಸೌದೆ ತಂದು ಹಾಕಪ್ಪ ಅಂತ ವಹಿಸಿಬಿಟ್ಟ. ಯಾರು ಬಾಮೈದ್ನ. ಇವಳಿಗೆ ಗೊತ್ತು. ಬಾಮೈದ್ಗೇ ಗೊತ್ತಿಲ್ಲ. ಆಮೇಲೆ ಸೌದೆ ತಂದ್ ಹಾಕಬಿಡಪ್ಪ ಇವತ್ತು ನಮ್ಮ ಮಗೀನ ನಾಮಕರಣ. ಇವತ್ತು ಸೌದೆತಂದ್ ಹಾಕ್‌ಬಿಟ್ಟು ಊಟಕ್ಕೆ ಇಲ್ಲೇ ಬಂದ್‌ಬಿಡು. ಊಟಕ್ಕೆ ಇಲ್ಲೇ ಬಾ. ನೀನು ನಿನ್ನ ಎಂಡ್ತಿ ಮಕ್ಕಳು ಎಲ್ಲ್ರೂ ಬನ್ನಿ. ಅವರನ್ನು ಬಿಟ್‌ಕೊಂಡು ನೀನೆ ಊಟ ಮಾಡಬೇಡ ಅಂತ, ತಂಗೀನು ಬಾಮೈದುನ ಹೇಳಿದ್ರು. ಅವನು ಅದೇ ರೀತಿ ಸೌದೆ ತಂದ್ ಹಾಕ್‌ಬಿಟ್ಟ. ಅವತ್ ಅವ್ರು ಮಗಂಗೆ ಹುಟ್ಟಿದ ಹಬ್ಬ. ಕ್ಲೀನಾಗಿ ಪಟ್ಣ ಸಾರಿಸಿದ್ರು. ಸುತ್ತಾ ಪ್ರಪಂಚಕ್ಕೆ ಎಲ್ಲಾ ಟಾಮ್ ಟಾಮ್ ಒಡೆಸಿ, ಪತ್ರಿಕೆ ಕಳಿಸಿ, ಇಂಥ ರಾಜ್ರ ದೊರೆ ಮಗ. ಇಲ್ಲಿ ಮನೇಲಿ ನಾಮಕರಣ ಇಡ್ತಾರೆ ಅಂತ ಹೇಳ್‌ಬಿಟ್ ಎಲ್ಲರಿಗೂ ಪತ್ರಿಕೆ ಕೊಟ್‌ಬಿಟ್ಟುರು. ಯಾರು ? ಭಾಮೈದ.

ಊಟಕ್ಕೆ ಎಲ್ಲಾ ಊರವ್ರು ಬಂದವ್ರೇ. ಬರೋವೊತ್ಗೆ, ಇವ್ರು ಬಂದಿಲ್ಲ. ಸೌದೆ ಹೊತ್ಕೊಂಬರೋವ್ರು ಬಂದಿಲ್ಲ. "ಏನ್ರೀ ಊರವವ್ರು ಬಂದ್ರು. ಇವ್ರು ಸೌದೆ ಹೊರ್‌ತಿದ್ದ್ರಲ್ಲ ಅವರ್ ಮಾತ್ರ ಬಂದಿಲ್ಲ. 'ಎಲ್ಲ್ರೀ'' ಅಂತ ಗಂಡನ್ನಲ್ಲಿ ಈಯಮ್ಮ ಅಂದ್ಲು. "ಏಯ್ ಮಾಡೇ ಕೆಲಸ ಅವ್ರೂನೂ ಕರೀಸ್ತೀನಿ, ಅವರ್ಗೂ ಲಗ್ನಪತ್ರಿಕೆ ಕೊಟಿದ್ದೀನಿ, ಅವರು ಬರ್ದಲೇ ಇರಲ್ಲ. ಮಾಡೇ ಕೆಲ್ಸ'' ಅಂದ.

ಆಯ್ತೂರೀ ಅವ್ರು ಮಾತ್ರ ಬರಬೇಕು. ಅವ್ರು ಉಸುರ್ ಅಂತ ಹೋಗಬಾರ್ದು. ಈವತ್ತು ನಿಮ್ ಮಗೀನ ಹುಟ್ಟಿದ ಹಬ್ಬ. ಅವ್ರು ಉಸೂರ್ ಅಂದ್ರೆ ನಮ್ಗೆ ಒಳ್ಳೆದಾಗಲ್ರೀ ಅಂತ ಹೇಳ್‌ಬಿಟ್ಟು ಅವಳು ಗಂಡಂಗೆ ಹೇಳಿದ್ಲು.

ಬರ್ಲೇಬೇಕು ನೀವು ಖಂಡಿತ ಅಂತ ಅವರ್ನ ಕರ್ಸಿದ್ರು. ಹೆಂಡ್ತಿ ಮಕ್ಕಳು ಗಂಡ ಎಲ್ಲಾ ಬಂದ್ರು. ಎಲ್ರೂ ಕುಂತಿದ್ರಲ್ಲ, ಪಂಕ್ತಿಯಲ್ಲಿ ಆತರ ಎಲ್ಲಾ ಊಟಕ್ಕೆ ಕೂತ್ಕೊಂಬಿಟ್ರು. ಊಟಕ್ಕೆ ಕೂತ್ಕೋತೂವೇ ಆಗ ಈಯಮ್ಮ 'ಗೆಜ್ಜೆ ಕಾಲಿನ ಮಗನ್ನ ಎತ್‌ಕೊಂಡ್, ಗೆಜ್ಜೆ ಕಾಲಿನ ಮಗನ್ನ ನಡೆಸ್ಕೊಂಡು, ಚಿನ್ನದ ಅರಿವಾಣಕ್ಕೆ ರನ್ನದ ಸೌಟು ಹಾಕೊಂಡು, ತುಪ್ಪ ಬಿಟ್‌ಕೊಂಡು ಹೋಗಬೇಕು ಆಯಮ್ಮ ಪಂಕ್ತಿಗೆಲ್ಲ. ಇವರೆಲ್ಲ ಊಟಕ್ಕೆ ಕೂತಿದ್ರಲ್ಲ ಇವರೆಲ್ಲರಿಗೂ ತುಪ್ಪ ಬಿಟ್‌ಕೊಂಡ್, ಬಿಟ್ಕೊಂಡು ಹೊಂಟೋದ್ಲು. ಅಣ್ಣ ಅಣ್ಣನ ಎಂಡ್ತಿ ಮಕ್ಳು ಅಂತ ಕೂತಿದ್ರಲ್ಲ ? ಅವಮ್ಮಗೆ ಗೊತ್ತು. ನಮ್ಮಣ್ಣ ಅವರ ಹೆಂಡ್ತಿ ಮಕ್ಳು ಇವ್ರು ಅಂತ. ಯಾರಿಗೆ ? ನಾದ್ನೀಗೆ ಗೊತ್ತು.

ಅವಾಗ ಈ ಮಾತ್ ಹೇಳ್‌ಕೊಂಡು ಮುಂದಕೇ ಹೋದ್ಲು. ಗೆಜ್ಜೆಕಾಲಿನ ಮಗನ ಮುಂದೆ ನಡೆಸ್ಕೋತ, ಚಿನ್ನದ ಅರಿವಾಣಕ್ಕೆ ರನ್ನದ ಸೌಟು ಹಾಕ್ಕೊಂಡು, ಅನಾಲಿಸ್ ತುಪ್ಪ

ಬುಡ್ದೇ ಹೋದನೇನೇ ಅಂತ ಏಳ್‌ಬಿಟ್ಲು. ಅಹ್ಹಹ ಅವತ್ತು ಈ ಮಾತೇ ಅಂದಿದ್ದೆ. ಮುಂಡೇ ನನ್ಗೇ ಗೊಡ್ಡು ಮುಂಡೆ ಅಂತ ನಾ ಅಂದಿದ್ದ್ನ, ಗಂಡು ಮಗ ಆಗಿದ್ದಕ್ಕೆ ನನ್ ಕರೆದು ಊಟಕೆ ಇಟ್‌ಬಿಟ್ಟು ಈ ಮಾತ್ ಅಂತಾಳಲ್ಲ. ಅಂದ್‌ಬಿಟ್ಟು ಅಂತ ಇವ್ಳಿಗೆ ಇಲ್ಲದ ನಾಚಿಕೆ ಬಂತು. ಆಯ್ತು ಊಟ ಉಪಚಾರ ಆಯ್ತು. ಮನೇಗ್ ಹೋಗ್‌ಬಿಟ್ರು. ಮನೆಗೆ ಹೋಗಬಿಟ್ಟು ಮಲಿಕ್ಕೊಂಡು "ಏನ್ರೀ ಮನೇಲಿ ಮಲಿಕ್ಕೊಂಡ್ರೇನ್ರಿ? ನಿಮ್ ತಂಗಿ ಅನ್ನೋದು ನಿಮ್ಗೂ ಗೊತ್ತಿಲ್ಲ, ನನಗಂತೂ ಗೊತ್ತಾಗೋಯ್ತು. ಆಪಾಟಿ ಬದಕವ್ಳೆ.

ಇವರೂ ಬದುಕಿದ್ರು, ಇವರಿಗೆ ಬಡಸ್ತನ ಕೊಟ್‌ಬಿಟ್ಟ ಭಗವಂತ. ಈವಾಗ ಅವ್ರೀಗ್ ಸಿರಿತನ ಕೊಟ್‌ಬಿಟ್ಟ. ನಿನ್ ತಂಗೇ ಅನ್ನೋದು ನಿನಗೆ ಗೊತ್ತಿಲ್ಲವೇನ್ರೀ ? ನನ್ಗೇನೋ ಗೊತ್ತಿಲ್ಲ. ನಿನಗೂ ಗೊತ್ತಿಲ್ಲವಾ?

ಗೆಜ್ಜೆಕಾಲಿನ ಮಗೀನ ಎತ್ಕೊಂಡು, ಚಿನ್ನದ ಅರಿವಾಣಕ್ಕೆ ರನ್ನದ ಸೌಟು ಹಾಕ್ಕೊಂಡು, ಅನಾಲಿಸ್ ತುಪ್ಪ ಬಿಟ್‌ಕೊಂಡ್ ವೋಗ್ತೀನಿ ಅಂದ್ಲು. ಅಷ್ಟು ಶ್ರೀಮಂತನ ಕೊಟ್ಟಿದೆ ನಿನ್ ತಂಗಿಗೆ. ಅಷ್ಟು ಬದುಕವ್ಳೆ ಅಂತ ಇವಳು ಕೇಳಿದ್ಲು. ಅವರಣ್ಣನ ಹೆಂಡ್ತಿ ಕೇಳ್ತಾಲೂವೇ. "ಅಲ್ಲ ಕಣೇ ಅವತ್ತು ನಮ್ಗೆ ಶ್ರೀಮಂತನ ಕೊಟ್ಟಿದ್ದ ಭಗವಂತ ಅಲ್ವಾ? ಅವತ್ತಿನ ಕಾಲದಲ್ಲಿ ಬಂದ್ಲು ನನ್ ತಂಗಿ. ಅಣ್ಣ ಇವತ್ತು ನಿನ್ ಹೂವಿನ ಮಂಚದ ಮ್ಯಾಲೇ ನಾನ್ ಒಂದ್ ರಾತ್ರಿ ಮಲಕ್ಕೋಬೇಕು ಅಂತ ಹೇಳಿ ತಂಗೀ ಕೇಳೋವಾಗ ನೀನು ಏನೆಂದೆ ? ಆಹಾ ಮುಂಡೇಗೆ ಮಂಚ ಬೇಕ ? ಸ್ನಾನ ಬೇಕ ? ಒಳ್ಳೊಳ್ಳೇ ಊಟ ಬೇಕಾ ಅಂತ ಕಿರಿಚಾಡದಲ್ಲೇ ? ಈಗ ಅವಳಿಗೆ ಭಗವಂತ ಒಳ್ಳೆದ್ ಮಾಡ್ತಾಲೂವೇ ಅವಳು ಸಿರಿತನದಲ್ಲಿ ಅವ್ಳೇ.ನಂಗೆ ಸೌದೆ ಹೊರೆ ಪಾಡು ಕೊಟ್ಟುಬುಟ್ಟು ಭಗವಂತ. ಆ ತರಾ ಹಿಯಾಳ್ಸೀ ಕಳ್ಸಿದ್ಯಯಲ್ಲೇ ನನ್ ತಂಗೀನ ?" ಅಂದ.

ಹೇಳಿದವರು : **ಕರಿಯಮ್ಮ**, ಎಲಿಯೂರು, ಕುಣಿಗಲ್ ತಾಲ್ಲೂಕು.

# ೧೨. ಕಾಲ ಬಂದಾಗ ಬರೋಣ

ಒಬ್ಬ ರಾಮಣ್ಣಂತೆ. ಒಬ್ಬ ರಾಮಣ್ಣಂಗೇ ಇಬ್ರಾಳು ಗಂಡು ಮಕ್ಳು. ಸಣ್ಣ ಸಣ್ಣವೂ ಎರಡು ಗಂಡು ಮಕ್ಳು. ಅವ ದಿನಾ ಸ್ನಾನ ಮಾಡೋವ್ನಂತೆ. ಸ್ನಾನ ಮಾಡೋವಾಗ, ಸ್ನಾನ ಮಾಡಿ ಕೈ ಮುಗಿದಾಗ 'ಈಗ ಬರೋಣ, ಕಾಲ ಬಂದಾಗ ಬರೋಣ' ಅನ್ನೋದಂತೆ. ಅವ್ನು ಯಾವುದಕ್ಕೂ ಮಾತ್ನೇ ಆಡ್ತಿರ್ಲಿಲ್ಲ. ಕೈ ಮುಗ್ದುಬಿಟ್ಟು ಸುಮ್ನೆ ವೋಗ್‌ಬಿಡೋವ್ನು ಮನೇಗೆ ಮನೆಗೋದ್ರೆ ಒಂದಲ್ಲದ ಒಂದು ದಿವ್ಸ ಹೆಂಡ್ತಿಕೂಟೇ ಏನಂದ್ನಂತೆ : "ಏನೇ ನಾನು ದಿನಾ

ಸ್ನಾನಮಾಡಿ ಕೈ ಮುಗಿಯೋವಾಗ ಈಗ ಬರೋಣ, ಕಾಲ ಬಂದಾಗ ಬರೋಣ'' ಅಂತದಲ್ಲ ಇದಕ್ಕೆ ಏನ್ಮಾಡೋದೇ ಅಂತ ಎಂಡ್ತಿ ಕೇಳಿದ್ನಂತೆ. ಎಂಡ್ತಿ ಕೇಳ್ತೂಲೂವೇ ''ಬರೋದಿದ್ರೇ ಬಂದ್ಬುಡೋಗು'' ಅಂದ್ಲಂತೆ. ಅವಳು ಮನೆ ಒಳಗೆ ಬೇಕಾದಂಗೆ ಅಡಿಗೆ ಮಾಡಿದಳು.

ಊಟ ಉಪಚಾರ ಎಲ್ಲಾ ಮಾಡಿದ್ಲು. ಬಂದ ಸ್ನಾನ ಮಾಡ್ದ. ಕೈ ಮುಗ್ದ. ಈಗ ಬರೋಣೋ ಕಾಲ ಬಂದಾಗ ಬರೋಣೊ. ಬರೋದಿದ್ರೇ ಬಂದ್ಬಿಡು ಅಂತ ಹೇಳ್ಬಿಟ್ಟು ಒಂಟೋಗಿಬಿಟ್ನಂತೆ. ಆಮೇಲೆ ಹೋಗುತ್ಲೂ ಈ ಎಂಡ್ತಿ ಎಲ್ಲಾ ಮಾಡ್ಕೊಂಡಿದ್ಲಲ್ಲಾ ? ಹೆಂಡ್ತಿ ಬಂದ್ಲು. ಅವ್ರಿಗೆಲ್ಲಾ ಊಟಕ್ಕೆ ಬಡಿಸಿದ್ಲು. ಊಟ ಆಯ್ತು. ಎಲ್ಲಾ ಸಾಲಾಗಿ ಹಾಸ್ಕೊಂಡು ಮನೀತುಂಬಾ ಮನೀಕ್ಕೊಂಡ್ರು. ಮನೆ ತುಂಬಾ ಮಲೀಕೊತ್ಲೂವೇ, ಒಂದೊತ್ತಿನಲ್ಲಿ ಎದ್ದು ನೋಡ್ತಾನೆ ಎಲ್ಲಾ ಕಾಡ್ನಲ್ಲಿ ಮಲಿಕ್ಕಂಡವ್ರೆ. ಆಮೇಲೆ ಇನ್ನೇನ್ ಮಾಡ್ದ? ಒಂದು ಹೊತ್ತಿನಲ್ಲಿ ಎಚ್ಚರ ಆಯ್ತು. ಎದ್ದು ನೋಡ್ದ; ಎದ್ದು ನೋಡುತ್ಲೂವೆ:

''ಅಯ್ಯೋ ಹೆಂಗ್ಸಿನ ಮಾತು ಕೇಳ್ಕೊಂಡು ಇಷ್ಟು ಆಗೋಯ್ತಲ್ಲ'' ಅಂತ ಹೇಳಿ ಎಂಡ್ರಿಗೆ ಹೇಳ್ಲಿಲ್ಲ, ಅಂಗೇ ಮಲಿಕ್ಕೊಂಬಿಟ್ಟ. ಅಲ್ಲೇ ಮಲಿಕೊತ್ಲೂವೇ ಇವ್ಳು ಒಂದು ಹೊತ್‌ನಲ್ಲಿ ಎದ್ದು ನೋಡಿದ್ಲು, ಒಳ್ಳೆ ಕಾಡನಾಗೇ ಅವ್ರೇ. ಆವಾಗ ಗಂಡನ್ನ ಎಬ್ರಿಸಿದ್ಲು. 'ಎದ್ದೋಳ್ರೀ ಎದ್ದೋಳಿ ಅಂತ ಎಬ್ರಿಸಿದ್ಲೂ. ಆಮೇಲೆ ಎದ್ದ. ''ಏನ್ರೀ ಈ ತರ ಆಗೋಯ್ತು?. ಅಯ್ಯೋ ನಿನ್ಮಾತ ಕೇಳಿ ನಮಗೀತರ ಆಗೋಯ್ತು. ಇವಾಗೇನು ಮಾಡೋಣ ಅಂತ ಗಂಡ ಎಂಡ್ರು ಇಬ್ರೂ ಮಾತಾಡ್ಕೊಂಡರು . ಆಮೇಲೆ ಇವಾಗ ಆಯ್ತು, ಅನುಬೋಗಿಸ್ತಿವಿ. ಮುಪ್ಪಿನ ಕಾಲದಲ್ಲಿ ಬಂದ್ರೆ ನಾವು ಅನುಬೋಗಿಸೋಕೆ ಆಗ್ತಿರಲಿಲ್ಲ. ಹಿಡ್‌ಕೋ ಮಗನಾ. ಎಲ್ಲಾರೂ ವೋಗಾನ ಹೊತ್ತು ಉಟ್ಟೋದರೊಳಗೆ ಅಂತ ನಡ್‌ಕೊಂಡ್ ನಡ್ಕೊಂಡು ಬಂದ್ಬಿಟ್ರು. ನಡ್ಕೊಂಡು ನಡ್ಕೊಂಡು ಬರ್ತೂಲೂವೆ, ಬರ್ತಾ ಬರ್ತಾ ಬೆಳಿಕರೀತು. ಯಾರೋ ಊಟ ಹೊತ್ಕೊಂಬಂದ್ರು. ಊಟ ಹೊತ್ಕೊಂಬಂದಾಗ' ಗಂಡ ಏನಂದ ? ಹೋಗೆ, ಹೋಗಿ ಮಕ್ಕಳಿಗೆ ಒಂದಿಷ್ಟು ತಿಂಡಿನಾದ್ರೂ ಕೊಡಿಸ್ಕೊಂಬಾ. ಆಮೇಲೆ ಅವ್ಳು ಬಂದ್ಲು. 'ಅವ್ವಾ ಮಕ್ಕಳಿಗೆ ಇಷ್ಟು ತಿಂಡಿ ಕೊಡ್ರವ್ವ ಅಂದ್ಲು. ದಿನಾ ಅನ್ನಾ ಮಿಗುತ್ತಿತ್ತು. ಇವತ್ತು ಒಬ್ಬ ದಾಸಪ್ಪ ಬಂದ. ಅದು ಮುಗಿದೋಗಿ ಬಿಟ್ಟದೆ. ಮನೆಗಾರು ನಡಿಯಮ್ಮ ಕೊಡ್ತೀನಿ. ಮನೆತಕ್ಕೆ ಕರ್ಕೊಂಡೋದ್ಲು.

ಅಲ್ಲಿ ಅತ್ತೆ ಅಸವಲ್ಲದವಳು. ಅಸವಲ್ಲದತ್ತೆಗೆ ಕಾಣದಂತೆ ಕೊಡ್ಬೇಕು. ಆಮೇಲೆ ಅಲ್ಲಿಂದ ಇಲ್ಲಿಗೆ ಕರ್ಕೊಂದಬಂದ್ನಲ್ಲಾ ಈವಮ್ಮನ್ನ ಅಂತ ಹೇಳಿ ಅತ್ತೆಗೆ ಕಾಣದಂಗೆ ಅರ್ಧ ಸೇರು ಅಕ್ಕಿ ತಗೊಂಬಂದು ಅವಮ್ಮನ ಮಡಿಲಿಗೆ ಸುರಿದ್ಲು. ಆಮೇಲೆ ಮಡ್ಲಿಗೆ ಸುರಿದು ,ಅಮ್ಮ ಚಾವಡಿ ಒಳಗೆ ಸಂನ್ಯಾಸಿ ಅವನೆ. ಆ ಸಂನ್ಯಾಸಿದೂ ಒಂದು ಪಾತ್ರೆ ಅದೇ. ಆ ಪಾತ್ರೆಯಲ್ಲಿ ಮಕ್ಳಿಗೆ ಬೇಯಿಸ್ಕೋಡೋಗಮ್ಮಾ ಅಂತ ಅಂದ್ಲು. ಆಮೇಲೆ ಅಕ್ಕಿ ತಗೊಂಡು ಚಾವಡಿಗೆ ವೋದುಳು. ಚಾವಡಿ ಒಳಗೆ ಸಂನ್ಯಾಸಿ ಇರೋವ್ನು. ಪಾತ್ರೆ ಮಡಿಕ್ಕೊಂಡಿದ್ದ.

ಆಮೇಲೆ ಅಲ್ಲೋಗಿ ಸ್ವಲ್ಪ ಪಾತ್ರೆ ಕೊಡಪ್ಪ. ಈ ಮಕ್ಕಳಿಗೆ ಅಕ್ಕಿ ಬೇಯಿಸ್ಕೊಡ್ತೀನಿ. ಅಪ್ಪ ಪಾತ್ರೆ ತೂತಾದ್ರೇ ನನ್ನ ಹೆಂಡ್ತೀನ ಕಳಿಸ್ಕೊಡ್ತೀನಿ ಕೊಡಪ್ಪ ಅಂದ. ಆಮೇಲೆ ಅವಾಗ ಏನ್ಮಾಡ್ದ ? ಆ ಪಾತ್ರೆ ಕೊಟ್ಟ. ತಗೊಂಬಂದ್ರು, ಅಕ್ಕಿ ಸುರಿದ್ರು, ನೀರು ಸುರಿದ್ರು, ಒಲೆ ಮೇಲೆ ಮಡಗಿದ್ರು. ಒಲೆ ಮೇಲೆ ಮಡಗಿದ್ರೆ ಒಂದು ಉಕ್ಕು ಆಯ್ತು. ಪಾತ್ರೇ ತೂತಾಗಿ ಬಿಡ್ತು. ಅದನ್ನೆ ಆ ಮಕ್ಕಳಿಗೆ ತಿನ್ಸಿದ್ರು. ಆಮೇಲೆ ಯೋ ತೂತು ಆಗ್ಲಿಲ್ಲವೇನಯ್ಯ ಪಾತ್ರೆ ಅಂತ ಕೂಗ್ದಾ ಸನ್ಯಾಸಿ. ಇವನು ಇದ್ದೋನು ಅಪ್ಪಾ ಪಾತ್ರೆ ತೂತು ಬಿದ್ದಾದೆ, ನನ್ನ ಎಂಡ್ತೀನೆ ಕರ್ಕ್ಕೊವೋಗಪ್ಪ ಅಂದ.

ಅವ್ನು ಬಟ್ಟೆಗಿಟ್ಟೇ ಗಂಟುಕಟ್ಕೊಂಡು ರಾಮಣ್ಣನ ಹೆಂಡ್ರು ಕರ್ಕ್ಕೊಂಡು ವೊಂಟೋಗ್ಬಿಟ್ಟ. ಇವ್ನು ಮಕ್ಕಳನ್ನ ಕುಂಡ್ರಿಸಿಕೊಂಡು ನೋಡ್ದಾ; ಅತ್ತ. ಆಮೇಲೆ ಈ ಮಕ್ಕಳ್ನೂವೆ ಕರ್ಕ್ಕೊಂಡು ಎಲ್ಲಾದ್ರೂ ಸೇರ್ಕ್ಕೊಳ್ಳೋಣ ಅಂತ ಹೇಳಿ ವೋಗ್ತಾ ಇದ್ದ. ವೋಗೋವಾಗ ಅಲ್ಲಿ ಒಂದು ತೊರೆ. ತೊರೆತಾಕೆ ವೋದ. ತೊರೆತಕ್ಕೋಗಿ ಅಪ್ಪಾ ನೀನು ಇಲ್ಲೇ ಇರು. ಅಣ್ಣನ್ನ ತಕ್ಕೋವೋಗಿ ಆಚೆ ದಡಕ್ಕೆ ಬಿಟ್ಟು ಬತ್ತೀನೀ ಅಂದ. ಆಮೇಲೆ ಆ ಹಿರೇ ಹುಡ್ಗನ್ನ ಕೇಳ್ದಾ. ಇಲ್ಲೆ ಇರಪ್ಪಾ ತಮ್ಮಯ್ಯನ್ನ ತಕ್ಕೋವೋಗಿ ಆಚೆ ದಡಕ್ಕೆ ಬಿಟ್ಟುಬತ್ತೀನಿ. ಇಲ್ಲಾ ನಾನು ಬತ್ತೀನಿ. ನಾನು ಬತ್ತೀನಿ ಅಂತ ಎರ್ಡೂ ಅಂದೋ. ಒಂದು ಹುಡುಗ್ನ ಹಿಡಿದು ಒಂದು ತಲೀಗೆ... ಕಟ್ಟಿಟ್ಟು ಇನ್ನೊಂದು ಹುಡುಗ್ನ ಎತ್ಕೊಂಡ. ಆಚೆ ಕಡೆಗೆ ವೋದ. ಇನ್ನೊಂದು ಹುಡಗ್ನ ಎತ್ಕೊಂಡು ಆಚೆ ಕಡೆಗೆ ಓಯ್ತೂ ಲೂವೇ ಆ ಹುಡುಗನ್ನ ಇಲ್ಲೇ ಇರಪ್ಪಾ ತಮ್ಮಯ್ಯನ್ನು ಕರ್ಕ್ಕೊಂಬತ್ತೀನಿ ಅಂದ. ಇಲ್ಲಾ ನಾನು ಬತ್ತೀನಿ ಅಂತು. ಅದರ ತಲೇ ಹಿಡಿದು ನದೀಗೆ ಕಟ್ಟಿಟ್ಟು ಆಮೇಲೆ ತಿರ್ಗ್ಗ ಈ ಹುಡಗ್ನನ ಕರ್ಕ್ಕೊಂಬರಾಕೆ ಬಂದ. ನಡು ದಾರಿಗೆ ಬಂದ. ಅವನು ಕೊಚ್ಚಿಕೊಂಡು ವೊಂಟೋದ.

ಈ ಕಡೆ ಕುರಿಯವ್ರು ಈ ಹುಡುಗ್ನ ಕರ್ಕ್ಕೊವೋದ್ರು. ಆಮೇಲೆ ತೊರೆ ಒಳಗ್ಹೋಗಿ ಕೊಚ್ಕೊಂಡೋದ್ನಲ್ಲ ಅವನ್ನ ತಗೊಂಡ್ಹೋಗಿ ಒಂದು ಹೂವಾಡಗಿತ್ತಿ ತೋಟ ಆ ಹೂವಾಡಗಿತ್ತಿ ತೋಟದಾಗೇ ಬಿಡ್ತು.

ಹೂವಾಡಗಿತ್ತಿ ಬೆಳಿಗ್ಗೆ ಎದ್ದು ತೋಟ ನೋಡಾಕೆ ಹೋಗ್ಯವ್ಳೇ. ಇವ್ನು ಬೇಲಿ ಒಳಕ್ಕೆ ವಾಟ್ರಿಸದೇ... ಕಾಲಿಡ್ಕೊಂಡು ತಿರುಗಿಬಿಟ್ಲು. ಕಾಲಿಡ್ಕೊಂಡು ತಿರುಗ್ತೂಲೂವೇ... ಸ್ವಲ್ಪ ಜೀವ ಸುಧಾರಿಸ್ಕೊಂಡು, ಸುಧಾರಿಸ್ಕೊಂಡು ವೋಗಪ್ಪಾ ಎಲ್ಲಿಗೋಯ್ತೊ ಅಲ್ಲಿಗೇ ಅಂದಳು. ಇಲ್ಲ ತಾಯಿ, ನಾನು ನಿನ್ನ ಮನೇಲೇ ಹೂವಿನ ಗಿಡಕ್ಕೆ ನೀರ್ ಹಾಕ್‌ಕೊಂಡೆ, ಈ ಗಿಡನೆಲ್ಲಾ ಹಸವೇ ಮಾಡ್ಕೊಂಡು ನಿನ್ನ ಮನೇಲೆ ಇರ್ತೀನಿ ಅಂದ. ಆಯ್ತು ನಡಿಯಪ್ಪಾ ಅಂತ ಮನೆಗೆ ಕರ್ಕ್ಕೊಂಡೋದ್ಲು. ಮನೆಗೆ ಕರ್ಕ್ಕೊಂಡೋತ್ಲೂವೇ ಸರಿ ಅವನಲ್ಲೇ ಇದ್ದ. ಇವನ ಜೊತೆಗಾರರು ಈ ಕುರಿ ಹುಡುಗ್ರು.

ಇನ್ನೊಂದು ಪಟ್ಣದ ದೊರೆ; ದೊರೆ ಮಗಳು ಯಾರು ಬಂದ್ರೂ ಒಪ್ಪಲ್ಲಾ. ಯಾವ ಸೀಮೆ ದೊರೆ ಬಂದ್ರೂ ಒಪ್ಪಲ್ಲ. ನನ್ನ ಆನೆ ಯಾರಿಗ್ಹೋಗಿ ಹಾರ ಆಕ್ತದೇ ನೋಡು. ಅವರನ್ನ ನಾನು ಮದ್ವೆ ಆಯ್ತೀನಿ ಅಂತ ಹೇಳಿ ಟಾಮ್ ಟಾಮ್ ಹೊಡಿಸಿದ್ಲು. ಟಾಮ್ ಟಾಮ್ ಮಾಡಿಸೂತ್ಲೂವೇ ಈ ಸುತ್ತಳ್ಳಿ ಜನವೆಲ್ಲಾ ಬಂದರು.

ಊಟಕ್ಹೋಗಬೇಕು ಇವನ್ನೂವೇ ಈ ಜೊತೆಯವ್ರೆಲ್ಲಾವ ನಡೆಯೋ ವೋಗೋಣ ಅಂತ ಕರ್‍ಕೊಂಡ್ಹೋದ್ರು; ಕರ್‍ಕೊಂಡೋಗೊತ್ಲೂವೇ ಸರಿ ಎಲ್ಲಾ ಊಟಕೆ ಕುತ್ಕೊಂಡ್ರು. ಊಟ ಆಯ್ತು. ಆ ಆನೆ ಕೈಲೀ ಹಾರ ಕೊಟ್ಟು ಕಳಿಸಿದರು. ಆಮೇಲೆ ಆ ಆನೆ ತಕ್ಕೊಂಡ್‌ವೋಗಿ ಅವನಿಗೆ ಹಾಕಿಬಿಟ್ತು. ಅವನಿಗೆ ಹಾಕುತ್ಲೂವೇ ಅಲ್ಲಿದ್ದ ಜನ ಎಲ್ಲಾ ಜರಿದುಬಿಟ್ರು. ಈ ಹೂವಾಡಗಿತ್ತಿ ಮನೇಲಿ ನೀರು ಉಯ್ಕೊಂಡು ಇದ್ದ ಇವನಿಗೆ ತಕ್ಕೊಂಡೋಗಿ ಆನೆ ಹಾರ ಆಕಿಬಿಡ್ತು. ಎಂಥೆಂಥ ರಾಜಾದಿರಾಜ್ರೆಲ್ಲಾ ಬಂದರು. ಅಂತವ್ರನ್ನೆಲ್ಲಾ ಬಿಟ್ಟಿಟ್ಟು ಅಂಥ ಜನ ಜರಿದುಬಿಟ್ರು. ಆಮೇಲೆ ಅವತ್ತು ಏನು ಬ್ಯಾಡ್ರೀ ಇವತ್ತಿಗೇ 15 ದಿವ್ಸಕ್ಕೆ ಇಟ್ಕೋಳೋಣ ಅಂತ ಹೇಳ್ಬಿಟ್ಟು ಎಲ್ರೂನೂ ಕಳಿಸ್ಬಿಟ್ರು. ಇನ್ನಾ 15 ದಿವ್ಸಕ್ಕೆ ಇಟ್ಕೊಂಡ್ರು. ತಿರ್‍ಗಾ ಅವತ್ಲೂವೇ ಸುತ್ತಳ್ಳಿಗೆ ಟಾಮ್ ಟಾಮ್ ಕೊಟ್ರು. ಇಗೋ ಈ ಹುಡ್ಗ ಕುರಿಯವ್ರು ಸುತ್ತಲಳ್ಳಿ ಜನ ಎಲ್ಲಾ ಸೇರ್‍ತು. ಸುತ್ತಲಳ್ಳಿ ಜನ ಎಲ್ಲಾ ಸೇರಿ ಆನೆ ಕೈಲೀ ಆರ ಕೊಟ್ರು. ಆನೆ ತಗೊಂಬಂದು ಅವನಿಗೇ ಹಾಕಿಬಿಡ್ತು. ಅವನಿಗೆ ಹಾಕುತ್ಲೂವೇ, ಕಣ್‌ಕಾಣದ ಆನೆ ಇವನಿಗೆ ತಗೊಂಡೋಗಿ ಹೂವಾಡಗಿತ್ತಿ ಮನೇಲಿ ನೀರು ಉಯ್ಕೊಂಡು ಇದ್ದೋನಿಗೇ ಹಾರ ಹಾಕ್ಬಿಡ್ತಲ್ಲ? ಎಂಥಾ ರಾಜಾದಿರಾಜರೆಲ್ಲಾ ಬಂದ್ರು ಅವರಿಗೆ ಹಾಕ್ದಲೇ ಅಂತ ಜನ ಎಲ್ಲಾ ಜರಿದ್ರು. ''ಏನು ನಮ್ಮ ಆಣೆಬರ ಇದು ಅಂತ ದೊರೆ ಮದ್ವೆ ಮಾಡಿದ್ರು. ಆಮೇಲೆ ಆಗ ಈ ಹುಡುಗ್ರು ಕರ್‍ಕೊಂಡೋಗಿದ್ರಲ್ಲ, ಬಂದು ಅಲ್ಲೀ ಸೇರ್‍ಕಂಡರು.

ಈ ಸಂನ್ಯಾಸಿ ಬಂದು ಅಲ್ಲೀ ಗುಡ್ಲು ಆಕೊಂಡವ್ನೇ. ಸನ್ಯಾಸಿ ಏನಂದ ? ನಾನು ಎರಡು ಆಣೆ ಕೊಡ್ತೀನಿ. ನಮ್ಮೆಂಗಸುನ ಕಾಯ್ಕೊಂಡು ಇಲ್ಲೀ ಇರ್‍ರೀ ಅಂದ್ಬಿಟ್ಟು ಊಟಕ್ಕೆ ವೋಗ್ಬಿಟ್ಟ. ಆಮೇಲೆ ಊಟಕ್ಕೆ ವೋಗೂತ್ಲೂವೇ ಅವ್ಳು ಏನ್ಮಾಡಿದ್ಲು ? ಪಾಪ ನಿಮ್ಮ ತಾಯಿ ಅವ್ರೇನಪ್ಪ ಅಂತ ಕೇಳಿದ್ಲು. ಆಗ ಅವರು ನಡೆದ ಕಥೆ ಹೇಳಿದರು. ಹಿಂದ್ಲಿಂದ ಕಥೆ ಹೇಳೂತ್ಲೂವೇ ಅವಳು ಏನ್ಮಾಡಿದ್ಲು? ಇವ್ರೇ ನನ್ನ ಮಕ್ಕಳು ಅಂತ ತಿಳಿಕಂಡಳು.

ಸಂನ್ಯಾಸಿ ಬಂದ, ಊಟ ಮಾಡ್ಕೊಂಡು. ಊಟ ಮಾಡ್ಕೊಂಡು ಬರ್‍ತೂಲೂವೇ ಇವ್ರು ನನ್ನ ಮಕ್ಳು. ನಮ್ಮ ಯಜಮಾನ್ರು ಕೊಚ್‌ಕೊಂಡ್ ಓದ್ರಂತೆ. ನಮ್ಮ ಮಕ್ಳು ಕುರಿ ಕಾಯ್ಕೊಂಡವೇ. ಇಲ್ಲಿಗೆ ನಿನ್ನ ದುಡ್ಡು ತೀರೋಯ್ತು; ನಿಮ್ಮ ಪಾತ್ರೆ ತಗೊಂಡ್ ವೋಗ್ಬಿಡಪ್ಪ ಅಂತ ಸಂನ್ಯಾಸಿ ಇದ್ದವನಿಗೆ ಹೇಳಿದ್ಲು. ಈ ಮಕ್ಳು ಸಾಕ್ಕೊಂಡು ಅದೇ ಊರಲ್ಲಿ ಕುರಿ ಮೇಯಿಸ್ಕೊಂಡು, ಇವ್ರು ಅಲ್ಲೀ ಸೇರ್‍ಕೊಂಡ್ರು. ಆಮೇಲೆ ಒಂದಲ್ಲ ಒಂದು ದಿವ್ಸ ದೊರೆ ಮನೆ ಕೆಲ್ಸಕ್ಕೆ ವೋಗೂತ್ಲೂವೇ, ದೊರೆ ಏನಂತ ಕೇಳ್ದಾ. ಏ ಮರಿ ನೀವೇ ಬತ್ತೀರಲ್ಲ ಸಣ್ಣ ಐಕ್ಳು, ನಿಮ್ಮ ತಂದೆ ತಾಯಿ ಇಲ್ವೇನ್ರಪ್ಪ ಅಂತ ಕೇಳಿದ್ರು. ಸ್ವಾಮಿ ನಮ್ಮ ತಂದೆ ತೊರೆ

ಒಳಗೆ ಕೊಚ್ಕೊಂಡೋದ. ಆಮೇಲೆ ನಮ್ಮ ತಾಯಿನ ಸಂನ್ಯಾಸಿ ಕರ್‍ಕೊಂಡೋಗಿದ್ರು. ಈವಾಗ ಬಂದು ಇಲ್ಲೆಲ್ಲಾ ಸೇರ್‍ಕೊಂಡಿದ್ದೀವಿ. ನಮ್ಮ ತಂದೆ ಸಿಕ್ಲಿಲ್ಲ ತೊರೆ ಒಳಗೆ ಕೊಚ್ಕೊಂಡೋಗಿಬಿಟ್ಟ. ಆ ಹುಡುಗ್ರು ಹಿಂದಿನಿಂದ ಎಲ್ಲಾ ಹೇಳ್ಬಿಟ್ರು. ಆಗ ಇವೇ ನಮ್ಮ ಮಕ್ಳು, ಇವ್ಳೇ ನನ್ನ ಎಂಡ್ತಿ. ನನ್ನ ಎಂಡ್ತಿ ಮಾಡಿದ್ದಲ್ಲ ಇದು. ನಾನು ಮಾಡಿದ್ದೇ ಅಂತ ಹೇಳಿ ಅಗೋ ಆ ಹೆಂಡ್ತಿ ಮಕ್ಳು ಎಲ್ಲಾ ಸೇರ್‍ಕೊಂಡು ಬಾಳ್ಕೊಂಡು ಹೋದ್ರು.

ಹೇಳಿದವರು : **ಗಿರಿಯಮ್ಮ,** ಕಾಡಸೂರು ಮುದಗೆರೆ.

# ೧೩. ಬ್ರಹ್ಮಗಂಟು

ಒಂದೂರಿನಲ್ಲಿ ಒಬ್ಬ ದೊರೆ ಇದ್ದ. ಆತನಿಗೊಬ್ಬಳು ಮಗಳಿದ್ದಳು. ಮಗಳು ಮದುವೆ ವಯಸ್ಸಿಗೆ ಬಂದಿದ್ದರಿಂದ ದೊರೆ ಅವಳಿಗೆ ಗಂಡುಹುಡುಕುವ ಪ್ರಯತ್ನನಡೆಸಿದ. ಆದರೆ ಆಕೆ ಯಾವ ಗಂಡನ್ನೂ ಒಪ್ಪಲಿಲ್ಲ. ನಿನಗೆ ಒಪ್ಪಿಗೆಯಾಗುವ ಗಂಡನ್ನು ನೀನೇ ಹುಡುಕಿಕೊಂಡು ಬಾ ಎಂದು ದೊರೆ ಮಗಳನ್ನು ಒಬ್ಬ ಹುಡುಗನ ಜೊತೆಯಲ್ಲಿ ಕಳುಹಿಸಿಕೊಟ್ಟ.

ಹುಡುಗನೊಂದೆಗೆ ಈಕೆ ಕುದುರೆಯಲ್ಲಿ ಹೊರಟಳು. ಹುಡುಗ ಈಕೆಗೆ ರಕ್ಷಣೆ ನೀಡುವುದರೊಂದಿಗೆ ಇವಳಿಗೆ ಸಹಾಯಕವಾಗಿದ್ದ. ಸಾಕಷ್ಟು ದೂರ ಹೋದಮೇಲೆ ವಿಶ್ರಾಂತಿಗೆಂದು ಒಂದು ಆಲದ ಮರದ ಕೆಳಗೆ ಅವರಿಬ್ಬರೂ ಕುಳಿತರು. ಬಾಯಾರಿಕೆಗೆ ಸ್ವಲ್ಪ ನೀರು ತೆಗೆದುಕೊಂಡು ಬಾ ಎಂದು ಈಕೆ ಹುಡುಗನನ್ನು ಕಳಿಸಿದಳು.

ಹುಡುಗ ನೀರು ತರಲು ಕಾಡಿನೊಳಕ್ಕೆ ಹೋದ. ಅಲ್ಲೊಂದು ನದಿ ಇತ್ತು. ನದೀ ತೀರದಲ್ಲಿ ಬ್ರಹ್ಮ ಒಬ್ಬ ಮುದುಕನ ವೇಷದಲ್ಲಿ ಮೆಳೆಗಳಿಗೆ ಗಂಟುಹಾಕುತ್ತಾ ಕುಳಿತಿದ್ದ. ಹುಡುಗ ಬ್ರಹ್ಮನನ್ನು ಮುದುಕನೆಂದು ಭಾವಿಸಿ ಅಜ್ಜಾ ಏನು ಮಾಡ್ತಾ ಇದ್ದೀಯ ಅಂತ ಕೇಳಿದ. ಅದಕ್ಕೆ ಬ್ರಹ್ಮ 'ಇದು ಬ್ರಹ್ಮಗಂಟು ಕಣಪ್ಪಾ' ಅಂದ. ಆ ಹುಡುಗಾ 'ಅಜ್ಜಾ ಅಲ್ಲಿ ಆಲದಮರದ ಕೆಳಗೆ ನಮ್ಮ ಅಕ್ಕ ಕುಂತವ್ಳೆ. ಅವಳಿಗೆ ಗಂಡು ಯಾರಜ್ಜಾ?' ಅಂತ ಕೇಳಿದ. ಬ್ರಹ್ಮ ಹುಡುಗನನ್ನು ನೋಡಿ ಅವಳಿಗೆ ಗಂಡು ನೀನೇ ಕಣಪ್ಪಾ ಅಂದ.

ಇದೇನು ಅಜ್ಜಾ ಹೀಗಂದನಲ್ಲಾ ಅಂತ ಯೋಚ್ನೆಮಾಡ್ತಾ ಹುಡುಗ ನೀರು ತೊಗೊಂಡು ಹೋದ. ನೀರು ತರೋಕೆ ಯಾಕೆ ಇಷ್ಟು ಹೊತ್ತು ಅಂತ, ಆ ಹುಡುಗಿ ಕೋಪದಿಂದ ತಂಬಿಗೆಯಿಂದ ಹುಡುಗನಿಗೆ ಹೊಡೆದಳು. ಆತ ಸಿಟ್ಟಿನಿಂದ ಆಕೆಯನ್ನು ಬಿಟ್ಟು

ಹೊರಟುಹೋದ.

ದೊರೆಯ ಮಗಳನ್ನು ಬಿಟ್ಟುಹೋದ ಅವನು ಪಟ್ಟಣಕ್ಕೆ ಹೋಗಿ ಸೇರಿದ. ಸಾಕಷ್ಟು ವರ್ಷಗಳು ಕಳೆಯಿತು. ಹುಡುಗ ಮದುವೆ ವಯಸ್ಸಿಗೆ ಬಂದ. ತನ್ನ ತಂದೆ ತಾಯಿಗಳಲ್ಲಿ ಹೆಣ್ಣು ಹುಡುಕಲು ತಿಳಿಸಿದ. ಅವರು ಹೆಣ್ಣು ಹುಡುಕುತ್ತಾ ಹುಡುಕುತ್ತಾ ಆ ದೊರೆಯ ಊರಿಗೆ ಬಂದರು. ದೊರೆಯ ಮಗಳನ್ನು ಕೇಳಿದರು. ಅವಳಿಗಿನ್ನೂ ಮದುವೆ ಆಗಿರಲಿಲ್ಲ. ಹೆಣ್ಣಿನ ಕಡೆಯವರೂ ಗಂಡಿನ ಕಡೆಯವರೂ ಒಪ್ಪಿದರು. ಮದುವೆ ಆಯಿತು.

ಮದುವೆಯ ಅನಂತರ ಏಕಾಂತದಲ್ಲಿ ಆತ ತನ್ನ ಪತ್ನಿಗೆ ತನ್ನ ಬೆನ್ನಿಲ್ಲಿ ಆಗಿದ್ದ ಗಾಯ ತೋರಿಸಿ ಇದು ಹ್ಯಾಗಾಯ್ತು ಗೊತ್ತ ಅಂತ ಕೇಳ್ದ. ಅದಕ್ಕವಳು ನಂಗೇನು ಗೊತ್ತು ಅಂದಳು. ಈತ ಎಲ್ಲ ವಿಷಯ ತಿಳಿಸಿ ನೀನು ತಂಬಿಗೆಯಲ್ಲಿ ಹೊಡೆದದ್ದರಿಂದ ಆದ ಗಾಯ ಅಂದ. ನಂತರ ಅವರು ಸುಖವಾಗಿದ್ದರು.

ಹೇಳಿದವರು : **ತಿಮ್ಮಮ್ಮ**, ಮುದುಗೆರೆ, ಕುಣಿಗಲ್ ತಾಲೂಕು.

## ೧೪. ಅನಾಥ ಹೆಣ್ಣು

ಒಂದು ಪಟ್ಣದಲ್ಲಿ ಒಬ್ಬ ದೊರೆ ಇದ್ದ. ಗಂಡ ಹೆಂಡ್ತಿ ಇಬ್ರೂ ಕಾಡಿಗೆ ಸೌದೆಗೆ ಹೋಗಿದ್ರು; ಬಿಮ್ಮನ್ಸೆ ಹೆಂಡ್ತಿ ಕರ್ರ್ಕೊಂಡು. ಸೌದೆ ಎಲ್ಲ ಕಡ್ದು ಹೊರೆಕಟ್ಟಿ ಹೊತ್ಕೊಂಡೋಗ್ಬೇಕು ಅನ್ನೋವಾಗ ಹೆಂಡ್ತಿಗೆ ಹೊಟ್ಟೆನೋವು ಬಂದು ಹೆರಿಗೆ ಆಯ್ತು. ಹೆಣ್ಣಾದ್ರೆ ಬಿಸಾಕ್ಬುಟ್ಬಾ, ಗಂಡಾದ್ರೆ ಎತ್ಕೊಂಡ್ಬಾ ಅಂದ. ಹೆಣ್ಣು ಮಗ ಆಯ್ತು. ಗಂಡನ ಮಾತು ಕೇಳ್ಬೇಕಲ್ಲ? ಒಂದು ಬಾಳೆ ಎಲೆ ಮೇಲೆ ಮಗಾನ ಮಲಗಿಸಿ ಅಲ್ಲಿಂದ ಗಿಡಗಳಿಗೆಲ್ಲ ಹಕ್ಕಿಪಕ್ಕಿಗಳಿಗೆಲ್ಲ ಹೇಳಿ ನೀವು ಒಂದಣ್ಣು ಹಂಪಲ ಕೊಟ್ಕೊಂಡು ನನ್ನ ಮಗ ಸಾಕಿ ಅಂತೇಳಿ ಬಂದ್ಬುಟ್ಲು.

ಮೂರು ಗಿಣಿ ಆ ಮಗೂನ ಸಾಕೊಂಡಿದ್ದೋ. ಆ ಮಗ ಅಲ್ಲೆ ಬೆಳೀತಿತ್ತು. ಆ ಗಿಣಿಗಳು ಬರೋ ಹೊತ್ಗೆ ಆ ಹುಡ್ಗಿ ಅಡ್ಗೆ ಮಾಡ್ಕೊಂಡಿತ್ತು. ಅವರೆ ಒಂದು ಬೆಕ್ಕನೂ ಸಾಕಿದ್ರು. ಒಂದಿನ ಆ ಬೆಕ್ಕಿಗೆ ಸುಡೋ ಹಾಲು ಹುಯ್ದುಬಿಟ್ಲು. ಆ ಕೋಪಕ್ಕೆ ಆ ಕೊತ್ತಿ ಏನ್ಮಾಡ್ಬುಡ್ತು, ಒಲೆ ಮುಂದೆ ಮಲ್ಕೋತಾ ಇದ್ದದ್ದು, ಒಲೆ ಬೂದಿಗೆ ಉಚ್ಚೆ ಹುಯ್ದುಬಿಡ್ತು. ಆ ಬೂದಿ ಉರುಬಿ ಒಲೆ ಹಚ್ಕೋದ್ಕೆ ಪ್ರಯತ್ನಿಸಿದ್ಲು. ಉಚ್ಚೆ ಹುಯ್ದುಬಿಟ್ಟಿದ್ದರಿಂದ ಒಲೆ ಹತ್ಲಿಲ್ಲ. ಇನ್ನು ಅಣ್ಣದೀರು ಬರೋ ಹೊತ್ಗೆ ಅಡ್ಗೆ

ಮಾಡ್ಬೇಕಲ್ಲ ಏನ್ಮಾಡೋದು ಅಂದ್ಕೊಂಡಿರ್ಬ್ವಾಗ ರಾಕ್ಷಸಿ ಪಟ್ನದಲ್ಲಿ ಸೂಜಿತೋರ್ಕೆ ಹೊಗೆ ಆಡ್ತಾ ಇತ್ತು. ಅಲ್ಲಿಗೆ ಆ ಹುಡುಗಿ ಹೋಯ್ತು. ಅಲ್ಲಿ ರಾಕ್ಷಸಿ ಇರ್ಲಿಲ್ಲ. ಅವಳ ಮಗಳಿದ್ಲು. ನಮ್ಮವ್ವ ಬಂದ್ರೆ ತಿನ್ನುಕೊತಾಳೆ. ಇಷ್ಟೊಂದು ಚಂದಾಗವ್ಳಲ್ಲ ಅಂದುಬಿಟ್ಟು ದಂಟಿನ ಬೀಜ, ಕೀರಬೀಜಕ್ಕೆ ಕಲ್ಲುಮಣ್ಣು ಬೆರಸ್ಬುಟ್ಟು ಕೊಳ್ಳೆ, ಈ ಕಲ್ಲು ಮಣ್ಣು ಒಸಿ ಆಯ್ದುಬಿಡು ಅಂತ ಕೊಟ್ಲು. ಆ ಹುಡ್ಗಿ ಕೈಯಲ್ಲಿ ಆಯೋಕೆ ಆಗಲಿಲ್ಲ. ಗೊಳೋ ಅಂತಾ ಅಳ್ತಾ ಕೂತಿದ್ಲು. ಗಿಣಿಗಳು ನೋಡ್ದೋ. ಇವ್ಳು ಬರಲಿಲ್ಲ. ಅವಳು ಹೋಗಿದ್ದ ದಾರಿ ಹಿಡ್ಕೊಂಡು ಆ ಗಿಣಿಗಳು ಬಂದು ಕೇಳ್ದೋ, ಇದ್ಯಾಕೆ ಇಲ್ಲಿಗೆ ಬಂದೆ ಅಂತ. ಬೆಂಕಿ ಇರ್ಲಿಲ್ಲ. ಅದ್ಕೆ ಬಂದ್ಬುಟ್ಟೆ ಕಣ್ಣಣ್ಣ ಅಂದ್ಲು.

ಆಗ ಈ ಗಿಣಿ ಏನು ಮಾಡ್ದೋ? ಪಣಪಣ ಅಂತಾ ಹಾರಾಡಿಬಿಟ್ಟೋ. ಆಗ ಈ ಹುಡ್ಗಿ ಆಯ್ತು ಕಣಕ್ಕ ಹೊಯ್ತೀನಿ, ಬೆಂಕಿ ಕೊಡು ಅಂದ್ಲು.

ಒಂದು ದದ್ ಮಡ್ಕೆ ತೂತುಮಾಡಿ ಹಳ್ಳದ ಕಡೆ ಇಟ್ಬಟ್ಟು, ಇದ್ಕೆ ನೀರು ತುಂಬುಡೆ ಹೋಗುವಂತೆ ಅಂದ್ಲು. ತೂತು ಮಡ್ಕೆಗೆ ನೀರು ಹುಯ್ದು ಆ ಹುಡ್ಗಿಗೆ ಸಾಕಾಯ್ತು. ಗೋಳಾಡಿ ಅಳ್ತಾ ಇತ್ತು. ಒಂದು ಕಪ್ಪೆ ಬಂದು ಆ ಹುಡ್ಗಿನ ಕೇಳ್ತು. ಹಿಂಗಿಂಗೆ ಆಗಿದೆ ಅಂದಾಗ ಆ ತೂತ್ಗೆ ನಾನು ಕುಂತ್ಕೋತಿನಿ ನೀನು ನೀರು ತುಂಬಿಬಿಡು ಹೋಗುವಂತೆ ಅಂತು. ತುಂಬಿದ್ಲು. ಆಯ್ತು ಕಣ್ಣಕ್ಕ, ಹೋಯ್ತೀನಿ, ಬೆಂಕಿಕೊಡು ಅಂದ್ಲು. ಹಂಗು ಕೊಡ್ಲಿಲ್ಲ. ಅದ ಮಾಡೆ ಇದ ಮಾಡೆ ಅಂತ ಮಾಡಿಸ್ತಾನೆ ಇದ್ಲು.

ಅಷ್ಟರಲ್ಲಿ ಆಕೊತ್ತಿ ಅಣ್ಣಾವ್ರು (ಗಿಳಿಗಳು) ಬೈಯ್ದಿದ್ದರಿಂದ ಒಂದು ಕಿವಿಗೆ ಒಂದು ಬೆಂಕಿ ಕೆಂಡ ಮಡಿಕೊಂಡು, ಆ ಹುಡ್ಗೀನ ಬಾರೆ ಬೆಂಕಿ ತಕೊಂಡಿವ್ನಿ ಅಂತ ಸನ್ನೆಮಾಡಿ ಕರೀತು.

ರಾಕ್ಷಸಿ ಮಗಳು ಅವರವ್ವನ ನೋಡೋಕೆ ಹೋದ ಮೇಲೆ ಕೊತ್ತಿನೂ ಈ ಹುಡ್ಗೀನೂ ಬಂದು ಮನೆ ಸೇರ್ಕೊಂಡ್ಬಿಟ್ಟೋ. ರಾಕ್ಷಸಿ ಮಗಳು ಬಂದು ನೋಡಿದ್ಲು. ಅವರಿರಲಿಲ್ಲ. ಆಮೇಲೆ ರಾಕ್ಷಸಿ ಅಬ್ಬರ ಮಾಡ್ಕೊಂಡು ಬಂದ್ಲು. ಆಗ ಮಗಳು ಅವ್ವನನ್ನು ಈಗ ಬಂದೇನೆ ಮುಂಡೆ ? ಇಷ್ಟೊತ್ಕಂಟ ಏನ್ ಮಾಡ್ತಿದ್ದೆ ? ಎಂಥ ಆಹಾರ ಸಿಕ್ಕಿತ್ತೆ ಹೋಗ್ಬುಡ್ತಲೆ ಅಂತ ರೇಗುದ್ಲು.

ಎಲ್ಲಿ ಯಾತಾವ ಹೋಯ್ತಾದೆ ಅಂತ ಕೇಳ್ದ ರಾಕ್ಷಸಿ, ಆ ಹುಡ್ಗಿ ಹಿಂದೆನೇ ಬಂದು ಬುಟ್ಲು. ಕೊತ್ತಿನು ಹುಡ್ಗಿನು ಕದಹಾಕ್ಕೊಂಡು ಒಳಗಡೆ ಸೇರಿಬಿಟ್ಟದ್ದೋ; ಇವ್ಳು ಕದ ತಗದಾಳೇನೋ ಅಂದ್ಕೊಂಡು ಕಾದ್ಲು. ಸಾಕಾಗಿ ಬರ್ದೆ ಹೋದ್ಮೇಲೆ ಹಲ್ಲುಕಿತ್ತು ಬಾಗಿಲ್ಗೆ ಸಿಗಿಸಿಬುಟ್ಟು ಬಂದು ಬಿಟ್ಲು.

ಆ ಗಿಣಿಗಳು ಬಂದು ಕಾಲುತೊಳೀಲಿಕ್ಕೆ ನೀರು ತಕ್ಕೊಂಡ್ಬಾ ಅಂದೋ. ಆ ಮೂರು ಗಿಣೀಲಿ ಒಂದು ಕುಂಟ ಗಿಣಿ ಇತ್ತು. ಅದು ಕಾಲು ತೊಳೀಲಿಕ್ಕೆ ಇನ್ನೊಂದು ಚೊಂಬು ನೀರು ತಕ್ಕೊಂಡ್ಬಾ ಅಂದಾಗ ಆ ಹುಡ್ಗಿ ಆ ವಿಷದ ಹಲ್ಲ ತುಳಿದ್ಬಿಟ್ಳು. ಆ ವಿಷದ ಹಲ್ಲಿನ ವಿಷ ಅವಳ್ಗೆ ಸೇರಿ ಆ ಹುಡ್ಗಿ ಸತ್ತೋದ್ಲು.

ಆಗ ಆ ಕುಂಟ ಗಿಣಿನ ಆ ಎರಡು ಗಿಳಿಗಳು ಬೋದ್ರೋ, ಇಷ್ಟಕ್ಕೆಲ್ಲ ನೀನೆ ಕಾರಣ ಅಂತ. ಏನು ಮಾಡಿದ್ರು ಅದು ಬದಿಕ್ನಿಲ್ಲ ? ಆಗ ಆ ಮಗನಾ ತಕೊಂಡೋಗಿ ಒಂದು ಆಲದ ಮರದ ಮೇಲೆ ಕಟ್ಟುಬಿಟ್ಟು ಬಂದೋ.

ಅಲ್ಲಿಗೆ ಒಬ್ಬ ಪಟ್ನದ ದೊರೆ ದಂಡುದಾಳಿ, ಮಂದಿಮಾರ್ಬಲದ ಜೊತೆ ಬಂದು ಮಲಕ್ಕೊಂಡ. ಆ ಹುಡ್ಗಿ ನೇತಾಕಿದ್ರಲ್ಲ ? ಅದರ ಬೆವರು ಈ ರಾಜನ ಎದೆ ಮ್ಯಾಲೆ ಬಿತ್ತು. ಆಗ ಸೈನಿಕರ ಹತ್ತಿಸಿ ನೋಡಿಸ್ದ. ಅವರು ಯಾವ್ದೋ ಚಂದಾಗಿರೋ ಹೆಣ್ಣು ಸತ್ತೋಗದೆ ಅಂದ್ರು. ಅದನ್ನ ತಂದು ಅವನ ಮುಂದೆ ಮಲಗಿಸಿದ್ರು. ಅದನ್ನ ನೋಡ್ದಾಗ ರಾಜನ್ಗೆ ಅನ್ನಿಸ್ತು. ಇವಳು ಇಷ್ಟೊಂದು ಚಂದಾಗವಳೆ. ಇವಳ್ಗೆ ಜೀವಬರ್ಸಿ ನಾನೆ ಮದ್ವೆ ಮಾಡ್ಕೊಬೇಕು ಅದ್ಕೊಂಡು ಅದರ ಮೈ ಕೈ ಎಲ್ಲಾನು ಹಿಸಿಕೊಂಡು ಹಿಸಿಕೊಂಡುಬಂದ. ಕಾಲಿನ ತಾವು ಹಿಸುಕಿದಾಗ ವಿಷದ ಹಲ್ಲು ಫುತುಕ್ಕನೆ ಹೊರಕ್ಕೆ ಬಂದುಬಿಡ್ತು. ಆಗ ಆ ಹೆಣ್ಣಿಗೆ ಜೀವಬಂದು ಎದ್ದೇಳ್ತು. ಅದ ತನ್ನ ಪಟ್ಣಕ್ಕೆ ಕರ್‍ಕೊಂಡೋಗಿ, ಪಟ್ನಕುಟ್ಟಿ ಪಟ್ನತಾರ್ಸಿ ಮದ್ವೆಮಾಡ್ಕೊಂಡು, ಸುಖವಾಗಿದ್ದ.

ಹೇಳಿದವರು : **ಅಕ್ಕಯ್ಯಮ್ಮ.**

## ೧೫. ಅಣ್ಣ ತಂಗಿ

ಒಂದೂರಿನಲ್ಲಿ ಅಣ್ಣ ತಮ್ಮಂದಿರು ಏಳು ಜನ ಇರ್‍ತಾರೆ. ಅವ್ರಿಗೆ ಒಬ್ಳು ತಂಗಿ ಇರ್‍ತಾಳೆ. ಏಳ್ ಜನರಲ್ಲಿ ಒಬ್ಬ ಕುಂಟ ಇರ್‍ತಾನೆ. ಆರು ಜನ ಹೊಲದಲ್ಲಿ ಆರಂಭ ಮಾಡ್ತಾರೆ. ತಂಗಿ ಏಳು ಜನಕ್ಕೆ ಊಟ ಹೊತ್ಕೊಂಡ್ಹೋಗಿ ಬರ್‍ತದೆ. ಕುಂಟ ಇರ್‍ತಾನಲ್ಲ? ಎಲ್ಲರಿಗೂ ಊಟ ಮುಗೀತದೆ. ಅಲ್ಲಿ ಹ್ಹೋಗಬೇಕಾದ್ರೆ ದಾರೀಲಿ ತಂಗಿಯ ಒಂದ್ ರಾಕ್ಷಸ ಸೇರ್‍ಕೊಂಡು ಊಟ ತಕ್ಕೊಂಬಾ ಅಂತ ಹೇಳ್ತದೆ.

ಆಗ ತಂಗಿ ಏನಂತಿರ್‍ತಾಳೆ? ಇಲ್ಲ ನಮ್ಮಣ್ಣ ಅವ್ರು ಊಟ ಮಾಡಿ ಮಿಕ್ರೇ ನಿಂಗ್ ಕೊಟ್ ವೋಗ್ತೀನಿ ಅಂತ ಹೇಳ್ತದೆ. ಅಲ್ಲಿ ಹೋದಾಗ ಊಟ ಮುಗ್ದುಹೋಗುತ್ತೆ. ಏಳ್

ಜನ ಊಟ ಮಾಡಕ್ಕೊಂಬಿಟ್ರು. ಅಣ್ಣ ಅಲ್ಲೊಂದು ರಾಕ್ಷಸಿ ಐತೆ ಊಟ ತಕ್ಕೊಂಬಾ ಅಂತ ಕೇಳುತ್ತೆ. ಊಟ ಇಲ್ಲವಲ್ಲ ಏನ್ ಮಾಡ್ಲಣ್ಣ ಅಂತ ಅಂದ್ಲು. 'ಲೇ ಕುಂಟ ನಿನಗೇನ್ ಕೆಲ್ಸ ಐತೆ? ತಂಗೀನ ತಕ್ಕೊಂಡ್ಹೋಗಿ ಮನೆಗೆ ಬಿಟ್ ಬಾ ಅಂತಂದ್ರು. ಆ ತಂಗಿ ಕರ್‌ಕ್ಕೊಂಡು ಕುಂಟ ಬರ್‍ತಾ ಇದ್ದ. 'ಬಂದ ದಾರೀಲಿ ಹೋಗ್ತಿಯಾ ಹೋಗ್ತೀಯ' ಅಂತ ಅಂದ. ಅದಕ್ಕೆ ಆ ರಾಕ್ಷಸಿ ಭಯ ಪಡ್ಕೊಂಡು ಹೋಯ್ತು. ಆ ದಿವ್ಸ ಕಳೀತದೆ. ಇನ್ನೊಂದ್ ದಿವ್ಸನೂ ಅದೇ ತರ ಕೇಳ್ತಾನೆ.

ಅವತ್ತು ಅದೇ ರೀತಿ ಕಳಿಸ್ತಾರೆ ಅಣ್ಣಂದಿರು. ಇನ್ನೆಷ್ಟು ದಿನ ಜೊತೆಲಿರೋದು ನಿಂಗೆ ಅಂತ ಅಂದು, ಅವತ್ತು ಊಟ ಮುಗ್ದೋಗಿರುತ್ತೆ, ಸ್ವಲ್ಪ ಮುದ್ದೆ ಇರ್‍ತದಲ್ಲ. ಸ್ವಲ್ಪ ದಪ್ಪಗಿರೋ ಗುಂಡ್‌ತಕ್ಕೊಂಡು ಗುಂಡಗ್ ಸುತ್ತಲೂ ಮುದ್ದೇನ ಇಟ್‌ಬಿಟ್ಟು ಅದೇನಾರ ಕೇಳಿದ್ರೆ, ನಿಂಗ್ ಕೊಡಬೇಕು ಅಂತ ತಂದಿದ್ದೀನಿ ಅಂತ ಕೊಟ್‌ಬಿಟ್ಟು ಕಳಿಸಿಬಿಡು ಅಂತಾನೆ. ಆ ತಂಗಿ ಏನ್ ಮಾಡುತ್ತೆ ಅಂದ್ರೆ ಆ ಮುದ್ದೆ ಕೇಳ್ದಾಗ, ಆ ಕಲ್ಲಿನ ಸುತ್ತಿದ ಮುದ್ದೆ ತೆಗೆದೂ ಆ ರಾಕ್ಷಸೀ ಕೈಲಿ ಕೊಟ್‌ಬಿಡುತ್ತೆ. ಹೊಟ್ಟೆ ಹಸಿವಿನಿಂದ ಇರೋ ರಾಕ್ಷಸೀ ಮುದ್ದೆ ಬೇಗ ಹಾಕೋಳುತ್ತೆ. ಬಾಯಿಗಿಟ್ಕೊಂಡಾಗ ಹಲ್ಲು ಮುರ್‍ದೋಗುತ್ತೆ. ಆ ತಂಗಿ ಕೊಟ್‌ಬಿಟ್ಟು ನಾನ್ ಮರೆಯಾಗೋವರ್‍ಗೂ ನೀನು ಬಾಯ್ಗೆ ಹಾಕ್ಕೋಬೇಡ ಅನ್ನುತ್ತೆ. ಅದೇ ರೀತಿ ನೋಡ್ಕೊಂಡಿದ್ದು ಹಾಕ್ಕೊಂಬಿಡ್ತು. ಹಲ್ಲು ಮುರುದೊಯ್ತು.

ಅದೇ ರಾತ್ರಿ ದಾರಿ ಕಾಯ್ತಾ ಇರುತ್ತೆ. ಬರ್‍ಲಿ ನನ್ ಹಲ್ಲು ಮುರ್‍ದುಹಾಕಿದ್ಲು ಅವಳು. ನಾನೇನಾರಾ ಮಾಡಿ ಅವಳ್ನ ಹೊತ್ಕೊಂಡೋಗಬೇಕು ಅಂತ ಹೇಳಿ ಕಾಯ್ತಾ ಇರುತ್ತೆ. ಆವಾಗ ಮತ್ತೆ ಇಟ್ ಇಟ್ಕೊಂಡ್ ಊಟ ತಕ್ಕೊಂಡ್ ಬರ್‍ತಾ ಇದ್ದಾಗ, ಅಣ್ಣದೀರ್‍ತಾಕೆ ವೋಗತನ್ಕ, ಬಿಡೋದ್ ಇಲ್ಲ. ಊಟನ್ನೆಲ್ಲ ಅದೇ ತಿಂದುಬಿಟ್ಟು, ಆ ಹುಡಿಗಿನೂ ಹೊತ್ಕೊಂಡು ವೋಗಿ ಇರೋ ಗುಹೆಗೆ ಸೇರ್‌ಬಿಡ್ತು.

ಅಲ್ಲಿ ಸೇರ್‌ಕ್ಕೊಂಡ ಮ್ಯಾಲೆ, ಅವಾಗ ಏಳು ಜನನೂ ಕೇಳ್ತಾರೆ: ''ಅವಳನ್ನ ಕಳಿಸಿ ಬಾ'' ಅಂತ ಅಂದ್ರೆ ಕಳಿಸ್ ಬರ್‍ನಿಲ್ಲ ನೀನು ಅಂತ ಹೇಳಿ ಕುಂಟನ್ನ ಬಯ್ತಾರೆ. ಅವಾಗ ಕುಂಟನ್ನ ಬಯ್ದು ಹುಡಿಕೊಂಡು ಬರೋಣ ಅಂತ ಹೇಳಿ ಎಲ್ಲರೂ ಬರ್‍ತಾರೆ. ಆರು ಜನಾನೂ ವೊಂಟ್ಕತ್ತಾರೆ, ಕುಂಟನೂ ವೊಂಟ್‌ತ್ತಾನೆ. ಅವಾಗ ಅವರ ತಾಯಿ ಕುಂಟನ ಮ್ಯಾಲೆ ಬೇಸರವಾಗಿ ನನ್ ಇರೋಳ್ ಒಬ್ಳು ಮಗಳು ವೊಂಟೋದ್ಲಲ್ಲ ಅಂತ ಹೇಳಿ ಕುಂಟಂಗೆ ಸೀಕು ಹಾಕಿ ,ಚೆಕ್ಲು ಅಕ್ಕಿ ಬುತ್ತಿಕಟ್ತಾಳೆ. ಆರು ಜನಕ್ಕೆ ಮೊಸರನ್ನ ಬುತ್ತಿ ಕಟ್ತಾಳೆ. ಹೋಗ್ ಬರುತ್ತಾ ಇರಬೇಕಾದ್ರೆ ಒಂದ್ ಕೆಲ್ಸ ಮಾಡ್ತಾನೆ ಕುಂಟ. ಕುಂಟಾ ಆದ್ರೂ ಬುದ್ಧಿ ಇರುತ್ತೆ. ಏನ್ ಮಾಡ್ತಾನೆ ಅಂದ್ರೆ ಅಲ್ಲಿ ಯಾರೋ ಒಬ್ರು ಹಲಿಗೆ ಬಿಟ್ ಹೋಗ್‌ಬಿಟ್ಟಿರ್‍ತಾರೆ. ಅಣ್ಣಾ ಈ ಹಲಿಗೆ ತಗೊಳ್ರೀ ಅಂತಾನೇ. ನಾವ್ ಹೋಗ್ತಾ ಇರೋದೆಲ್ಲಿಗೆ? ಹಲಿಗೆ ತಗೋಬೇಕಂತೆ. ಯಾರಾದ್ರೂ ಕಂಡು ನಮ್ಮನ್ ಹೊಡೀಲಿ

ಅಂತಲ? ನಾನ್ ಹೇಳಿದಷ್ಟು ಕೇಳ್ತಿರೋ ಇಲ್ವೋ ಅಂತ ಅಂದ ಮೇಲೆ ಎತ್ಕೋತಾರೆ.

ಅದಕ್ಕೂ ಮುಂಚೆ ಹೋಗ್ತಾ ಇರಬೇಕಾದ್ರೆ ಬುತ್ತಿ ಊಟ ಮಾಡಕೆ ಹೋಗ್ತಾರೆ. ಮೊಸರನ್ನ ಆರೂ ಜನರೂದುನೂ ನೀರಾಗಿ ಬಿಟ್ಟಿರ್ತದೆ. ಅದನ್ನ ಎಲ್ಲರಿಗೂ ಕೊಡ್ತಾನೆ. ನೀವೇನೂ ಊಟ ಮಾಡ್ಬಿಲ್ಲ. ನನ ಊಟ ಚೆನ್ನಾಗಿದೆ. ಈಗ ನನ್ನ ಊಟ ಕೊಟ್‌ಮ್ಯಾಲೆ ನನ್‌ಮಾತ ಕೇಳಬೇಕು ನೀವು. ಇಲ್ಲಾಂದ್ರೆ ನಾನ್ ಕೊಡಲ್ಲ ಅಂತಾನೆ. ಆಯ್ತು ನೀನೇಳ್ದಂಗೆ ಕೇಳ್ತೀವಿ ಅಂತ ಒಪ್ಪಿಗೆ ಕೊಟ್‌ಬಿಡ್ತಾರೆ ಆರು ಜನಾನು. ಅವಾಗ ಎಲ್ಲರೂ ಉಣ್ತಾರೆ.

ಅಲ್ಲಿ ಹಲಗೇ ಬಿದ್ದಿದ್ದು ಎತ್ಕೊಳ್ದೆ ಹೋದ್ರೆ ನನ್ನ ಸೀಕು, ಚಿಕ್ಲೆ ಅಕ್ಕಿ ಕಕ್ಕೂ ಅಂತಾನೆ ಮುಂದೆ ಅಗಸ್ರು ಬಟ್ಟೆ ಒಣೇಹಾಕಿರ್ತಾರೆ. ಆ ಬಾಂಡ್ಲಿ ಹೊತ್ಕೋ ಅಂತಾನೆ. ಇಲ್ಲ ಕಣೋ ಕುಂಟ, ಬಾಂಡ್ಲಿಯಾರದ್ದೋ ಕಣೋ ಬಿಡ್ತಾರೇನೋ ಅಂದ್ರು. ನಾನ್ ಏಳ್ದಂಗ್ ಕೇಳ್ತಿರೋ ಇಲ್ಲ ನಾನ್ ಹೇಳಿದ ಕೆಲ್ಸ ಮಾಡ್ತಿರೋ ಅನ್ತಾನೆ. ಅವಾಗ ಬಾಂಡ್ಲಿ ತಗೋತಾರೆ.

ಅಲ್ಲೊಂದು ಕತ್ತೆ ಇರುತ್ತೆ. ಈ ಕತ್ತೆ ಹಿಡ್ಕೊಂಡ್ತೀರೋ ಎಂಗೆ ಅಂತಾನೆ. ಇವತ್ತು ನಾನ್ ಎಳ್ಕ್ಲೇ ಹೋಗ್ತಾ ಇರ್ತೀನಿ. ಯಾರ್ದೋ ಕತ್ತೇನ ಹಿಡ್‌ಕ್ಕೊಳಕ್ಕಾಗಲ್ಲ. ಯಾರಾದ್ರೂ ಬಂದ್ರೆ ಏನ್ ಮಾಡೋದು? ನಾನ್ ಹೇಳಿದ್ದು ಕೇಳ್ರಿ. ಇಲ್ದೇ ಹೋದ್ರೆ ನನ್ ಸೀಕು ಚಿಕ್ಲೆ ಅಕ್ಕಿ ಕಕ್ಕೂ ಅಂತಾನೆ. ಆಗ ಕತ್ತೆನೂ ಹಿಡ್ಕೊಂಬೇಕಾಗುತ್ತದೆ.

ಅಲ್ಲೊಂದು ಕಟ್ಟಿರುವೆ ಹೋಗ್ತಾ ಇರುತ್ತೆ. ಈ ಕಟ್ಟಿರುವೇನ ಹಿಡ್ಕೊಂಡು, ಅದು ಸಾಯ್ದಂತೆ ಹಿಡ್‌ಕೊಳಿ ಅಂತಾರೆ. ಅವಾಗ ಯಾರಗಾನ ಕಚ್ಚಲಿ ಅಂತ ಹೇಳ್ತಿಯೇನೊ ಅಂತಾರೆ. ಸುಮ್ನೆ ಹಿಡ್ಕೋಳ್ಳಿ ಅಂದ್ರೆ ಕಟ್ಟಿರುವೆನ ಇಡ್ಕೊಂತಾರೆ. ಅವಾಗ ಹೋಗ್ತಾರೆ. ಹೋಗ್‌ಬಿಟ್ಟು ಕತ್ಲಾಗೆ ಗವಿಗ್ಹೋಗಿ ಬಾಗ್ಲಲ್ಲಿ ನಿಂತ್‌ಕೊಂಡು ಆ ಬಂಡೆ ಉರುಳಿಸಿ ಬಿಟ್ಟು ಒಳಗೆ ವೋಗ್ತಾರೆ. ಒಳಕ್ ಹೋಗಿ ನೋಡಿದ್ರೆ ಆ ತಂಗಿ ಇರ್ತಾಳೆ. ನಾನಂತೂ ಸತ್ರು ಚಿಂತೆ ಇಲ್ಲ. 'ನನ್ನಂತೂ ಸಾಯ್ಸಿಲ್ಲ. ಬೇಯ್ಸಿಕೊಂಡು ಮಾಡ್ಕೊಂಡು ಇದ್ದೀನಿ. ನೀವ್ ಯಾಕೆ ಬರೋಕೋದ್ರಿ ಅಣ್ಣ'' ಅಂತ ಅಂದ್ಲು.

ನೋಡಮ್ಮ ತಂಗಿ ನಾವು ನಿನ್ನ ಬಿಟ್ಟಿರೋಕಾಗ್ದೆ ಬಂದಿದ್ದೀವಿ. ಸತ್ರೇ ಇಲ್ಲೇ ಸಾಯ್‌ಬೇಕು ನಾವು. ಅಂಗಿದ್‌ಮೇಲೆ ಇದು ಹೊರಗಡೆ ಎಣಾ ತರಕ್ಕೆ ಅಂತ ಹೋಗದೆ ಅದು ಈಗ ಬರುತ್ತೆ, ನೀವು ಹೇಳ್ದಂತೆ ಒಬ್ರು ಕಾಣ್ದಂತೆ ನೀವು ಮೇಲ್‌ಗಡೆ ಹೋಗ್ಬಿಡಿ, ಅಂತ ಮ್ಯಾಲಗಡೆಗೆ ಅಟ್ಟುಬಿಟ್ಟದೆ. ಸ್ವಲ್ಪ ಮರೆಯಾಗಿರ್ರಿ ಅಂತ ಕಳಿಸಿಬಿಟ್ಲು. ಅದು ಬಂದು ಬಿಟ್ಟು, ಅಷ್ಟೊಂದು ತರಾ ಎಣಾನೂ ತಂದು ಬೇಯಿಸ್ತಾ ಇರೋದ್ ತಂಗಿ, ಅದು ತಿಂದ್ ಬಿಡ್ತು. ಅದು ತಿಂದು ಬಿಟ್ಟು ಕುಂತಿರ್ತದೆ. ಕುಂತಿರೋವಾಗ ಇವ್ನ ಕುಂಟ ಇರ್ತಾನಲ್ಲ ಅವನು ಒಂದು ಪ್ಲಾನ್ ಮಾಡ್ತಾ ಇರ್ತಾನೆ.

ಇಲ್ಲ. 'ನನ್ನಂತೂ ಸಾಯ್ಸಿಲ್ಲ. ಬೇಯ್ಸಿಕೊಂಡು ಮಾಡ್ಕೊಂಡು ಇದ್ದೀನಿ. ನೀವ್ ಯಾಕೆ ಬರೋಕೋದ್ರಿ ಅಣ್ಣಾ" ಅಂತ ಅಂದ್ಲು.

ನೋಡಮ್ಮ ತಂಗಿ ನಾವು ನಿನ್ನ ಬಿಟ್ಟಿರೋಕಾಗ್ದೆ ಬಂದಿದ್ದೀವಿ. ಸತ್ರೇ ಇಲ್ಲೇ ಸಾಯ್ ಬೇಕು ನಾವು. ಅಂಗಿದ್‌ಮೇಲೆ ಇದು ಹೊರಗಡೆ ಎಣಾ ತರಕ್ಕೆ ಅಂತ ಹೋಗದೆ ಅದು ಈಗ ಬರುತ್ತೆ, ನೀವು ಹೇಳ್ದಂತೆ ಒಬ್ರು ಕಾಣ್ದಂತೆ ನೀವು ಮೇಲ್‌ಗಡೆ ಹೋಗ್ಬಿಡಿ, ಅಂತ ಮ್ಯಾಲಗಡೆಗೆ ಅಟ್ಟುಬಿಟ್ತದೆ. ಸ್ವಲ್ಪ ಮರೆಯಾಗಿರ್ರಿ ಅಚಿತ ಕಳಿಸಿಬಿಟ್ಲು. ಅದು ಬಂದು ಬಿಟ್ಟು, ಅಷ್ಟೊಂದು ತರಾ ಎಣಾನೂ ತಂದು ಬೇಯಿಸ್ತಾ ಇರೋದ್ ತಂಗಿ, ಅದು ತಿಂದ್ ಬಿಡ್ತು. ಅದು ತಿಂದು ಬಿಟ್ಟು ಕುಂತಿರ್ತದೆ. ಕುಂತಿರೋವಾಗ ಇವ್ನು ಕುಂಟ ಇರ್‍ತಾನಲ್ಲ ಅವನು ಒಚಿದು ಪ್ಲಾನ್ ಮಾಡ್ತಾ ಇರ್‍ತಾನೆ.

ಆರು ಜನ ಅಣ್ಣಂದಿರನೂ ಕೇಳ್ತಾನೆ ಅಣ್ಣ ನಾನು ಸ್ವಲ್ಪ ಉಚ್ಚೆ ಉಯ್ಯಬೇಕಣ್ಣಾ. ಅಯ್ಯೋ ನಮ್ ಅಡೀಲಿ ರಾಕ್ಷಸಿ ಇರ್ತದೆ ತಿಂದ್‌ಬಿಡ್ತದೆ. ಉಚ್ಚೆ ಉಯ್ಯಬೇಕಂದರೆ ಆಚೆಗೆ ಹೋಗಬೇಕು ಸ್ವಲ್ಪ ಸುಮ್ನಿರು ಅಂತಾರೆ. ಇಲ್ಲಣ್ಣ ನಾನ್ ಉಯ್ಯಲೇ ಬೇಕು. ಸ್ವಲ್ಪ ಉಯ್ಯಿಅಂತಂದ್ರು, ಆವಗ ಸ್ವಲ್ಪ ಉಯ್ತ್ಯಾನೆ. ಆಮೇಲೆ ಒಂಚೂರು ಎರಡಕೆ ಹೋಗ್ಬೇಕು ಅಂತಾನೆ. ಅಲ್ಲ ಕಣೋ ಒಂದನ್ನ ಮಾಡಿದ್ದಾಯ್ತು. ಈಗ ಆಚೇಕಡೆಗೆ ವೋಗಬೇಕು ಅಂತಿ, ವೋಗು ಅತ್ಲಾಗಿ ಅಂತಾರೆ. ಅವಾಗ ಎರಡಕ್ ವೋಗ್ತಾನೆ. ಆವಾಗ ಉಚ್ಚೆ ಹರೀತಾ ಇರ್‍ತದೆ. ಆವಾಗ ಇದೇನಿದು ಇಷ್ಟು ನೀರ್ ತರ ಬೀಳ್ತದಲ್ಲ? 'ಆಹುಡ್ಗಿ ನಿಮ್ ತಾತನ ಕಾಲದ್ದು ಉಚ್ಚೆಳ್ಳೆಣ್ಣೆ ತುಪ್ಪ, ಅಂತ ಹೇಳ್ತಾಳೆ. ಬಾಯೊಡ್ಡು ಅಂತ ಹೇಳ್ದಾಗ, ಆ ರಾಕ್ಷಸಿ ಬಾಯಿ ಬಾಯಿ ಒಡ್ಡುತ್ತೆ. ಆ ರಾಕ್ಷಸಿ ಬಾಯ್ ಒಡ್ಡಿದಾಗ ಎರಡ ಮಾಡಿದನಲ್ಲ ಅದು ಕೆಳಕ್ ಬೀಳ್ತಾ ಇರುತ್ತೆ. ಇದೇನಿದು ಅಂತಾನೆ. ಅದು ಗಷ್ಟ ಇರಬೇಕು ಅಂತ ಆ ಹುಡ್ಗಿ ಹೇಳ್ತದೆ. ಅದನ್ನು ಕುಡ್‌ಕ್ಕೊಂಬಿಡು ಅನ್ತದೆ. ಅದನ್ನು ಕುಡ್ ಕೊಂಬಿಡ್ತು. ಆಮೇಲೆ ಅವೆಲ್ಲ ಮುಗೀತು. ಇನ್ನು ಮುಂದೆ ಕುಂಟ ಒಂದಾ ಮಾಡಿದ್ದಾಯ್ತು, ಎರಡಾ ಮಾಡಿದ್ದಾಯ್ತು. ಅಣ್ಣ ನಮಗೊಂದು ರಿಕಾರ್ಡ್ ಬರ್‍ತದೆ ಹಾಡ್ತೀನಿ ಅಂದ. ಅಲ್ಲೋ ಕರ್ಮಾ, ರಾಕ್ಷಸಿ ಈನೂ ಮಾಡಿಲ್ಲ ಅಂತ ಅಂದ್ರೆ ನೀರ್ ಕಡಿಕೇ ಹೋಗಿದ್ ಆಯ್ತು. ಒಂದ ಮಾಡಿದ್ದು ಆಯ್ತು. ಪದ ಹೇಳ್ತೀನಿ ಅಂದ್ರೆ ಅದು ಬಿಡ್ತದೇನೋ? ಇಲ್ಲ ಕಣೋ, ನಾನು ಹಾಡ್ಲೇಬೇಕು. ಆವಾಗ ತನನ ಅಂತ ಶುರು ಮಾಡ್ತಾನೆ. ಅದು ಹೇಳ್ತದು. ಯಾರ್‍ದು ದನಿ? ಅಂತ. ನಾನೊಬ್ಬ ದೊಡ್ಡ ರಾಕ್ಷಿಸಿ ಅಂತ ಹೇಳ್ತಾನೆ. ನನಗಿಂತ ದೊಡ್ಡ ರಾಕ್ಷಸಿ, ನನ್ ಗುಹೆಯೊಳಗೆ ಇದ್‌ಕೊಂಡು ಕೇಳ್ತಾ ಇದ್ದಿಯಾ?

ಆವಾಗ್ ನಿನ್ನ ಬಾಯಿ ತೋರ್‍ಸು ಅಂತಾದೆ. ನೀನು ಎಂಗಿದಿಯಾ ನಿನ್ ಆಕಾರ ತೋರ್‍ಸು ಅಂತ ಅಂದಾಗ, ಅವನು ಅಗಸರ ಬಾಂಡ್ಲಿ ತೆಗೆದು ಅಟ್ಟದ ಸೊಂದೀಲಿ ತೋರಿಸ್ತಾನೆ. ಬಾಯ್‌ನಂಗೇ ಇಷ್ಟಗಲ ಆಗ್ತದೆ. ನಿನ್ನ ಹಲ್ಲುಗಳ ತೋರ್‍ಸು ನೋಡೋಣ

ಅಂದಾಗ, ಆ ಹಲಗೆ ಇರ್ತದಲ್ಲ ಅದನ್ನೇ ತೋರ್ರುತ್ತಾನೆ. 'ನಿನ್ ಹಲ್ಲು ಈ ರೀತಿಯಾಗಿದೆ' ಅಂಥ ನಿನ್ ಬಾಯಿ ನಿನ್ ಹಲ್ಲು ನೋಡಿದ್ದಾಯ್ತು. ನಿನ್ ಅಬ್ಬರ ತೋರ್ರು ನೋಡೋಣ. ಎಷ್ಟು ದನಿ ಜೋರಾಗಿದೆ. ಅಂಥ. ಆಗ ಆ ಕತ್ತೆ ತಿಕ್ಕೆ ಕಟ್ಟಿರುವೆ ಬಿಟ್ಟ. ಆ ಕತ್ತೆ ಜೋರಾಗಿ ಅರಚಿದಾಗ ನೋಡೋ ನಿನಗಿಂತ ದೊಡ್ಡ ರಾಕ್ಷಸಿ. ನೀನೇನು ಇಷ್ಟೊಂದು ಇದು ಮಾಡ್ತಾ ಇದ್ದೆ. ನಾನ್ ನಿನಗಿಂತ ದೊಡ್ಡ ರಾಕ್ಷಸಿ. ಅದು ಜೋರಾಗಿ ಬಡ್ಕೊಂಡಾಗ ಅದು ಗುಹೆ ಬಿಟ್ಟು ಆಚೇಗೆ ಓಡ್ತದೆ. ಆಗ ಮತ್ತೆ ತಂಗೀನ ಕರ್ಕೊಂಡ್ ಮನೆಗೆ ಹೋಗ್ತಾರೆ.

ಹೇಳೀದವರು : ಪರಮೇಶಿ, ಹಿರೇಡೊಂಕೇಹಳ್ಳಿ, ತುರುವೇಕೆರೆ ತಾಲ್ಲೂಕು

## ೧೬. ಮೂರುಜನ ಮುಂಡೇರು

ಮೂರ್ಜನ ಮುಂಡೇರಂತೆ, ಮಾವಿನ ತೋಪ್ನಲ್ಲಿ ಸೌದೆ ಆಯ್ತಾ ಇದ್ರಂತೆ, ಸೌದೆ ಆಯುವಾಗ ಮೂರ್ಜನೂವೇ ಏನಂತ ಮಾತಾಡ್ತಾಯಿದ್ರಂತೆ ಅಂದ್ರೆ, ಯಕ್ಕಾ ನೀನೇನ್ ಕೆಲ್ಸ ಮಾಡ್ತಂದಕ್ಕ? ಒಬ್ಳೆದ್ಲಂತೆ. ನೀನೇನ್ ಮಾಡ್ತಂದಕ್ಕ? ಅಂತ ಒಬ್ಳು. ಇಂಗೆ ಮೂರ್ಜನವು ಮಾತಾಡ್ತಾಯಿದ್ರಂತೆ., ಯಕ್ಕ ಕಸ ಹಾಕ್ದೆ, ನೀರ್ತಂದೆ, ಅಡ್ಗೆ ಮಾಡ್ದೆ, ಮಕ್ಳುಗೆಲ್ಲಾ ಊಟ್ಕೊಟ್ಟೆ, ಬಂದೆ ಕಣಕ್ಕಾಂತ ಒಬ್ಳಂದ್ಲಂತೆ. ಅಯ್ಯೋ ಅಕ್ಕ ಆರ್ಪಾವಕ್ಕಿ ಹಾಕಿ, ಗಿರಿಪರ ಮಾಡಿ ಒಂದೂರ್ ಮಗಳು ಬಂದುಂಡು, ಕೋಡಳ್ಳಿ ಮಗ್ಳ ಕರ್ಕಬಂದಿಕ್ಕೆ, ಓದುಕ್ಕೋಗೋ ಮಗನ್ಗೆ ರೊಟ್ಟಿ ಬುತ್ತಿಕಟ್ಟಿ, ಇನ್ನೂ ಆರ್ಪಾವಕ್ಕಿ ಅನ್ನ ಉಳ್ದದಕಣಕ್ಕ ಅಂತ ಒಬ್ಳಂದ್ಲಂತೆ, ಇನ್ನೊಬ್ಳನಂದ್ಲಂತೆ : 'ಅಯ್ಯೋ ಯಕ್ಕ ನನ್ಗೆ ಗಂಡಿದ್ರೆ ನಾನ್ ಇಪ್ಪತ್ತೊಂದು ಮಕ್ಳ ಹೆರೊವ್ನಿ ಕಣಕ್ಕ ಅಂತ ಮೂರ್ಜನೂವೆ ಮಾತಾಡ್ತಾ ಇದ್ರಂತೆ.

ಅಲ್ಲಿ ಒಬ್ ಸೀಮೆ ದೊರೆಗೆ ಮಕ್ಳಿರ್ನಿಲ್ಲವಂತೆ. ಅವರ್ಗೆ ಮಕ್ಳಿರ್ದೇನೆ ಕುದ್ರೆ ಮೇಲೆ ವೋಯ್ತಾಯಿದ್ರಂತೆ. ಕುದ್ರೆ ಮೇಲ್ ವೋಯ್ತಾಯಿರುವಾಗ ಈ ಮೂರ್ಜನ ಮಾತಾಡ್ತ ಇರೋ ಮಾತನ್ನ ಕೇಳಿಸ್ಕಂಡ್ರು, ಕೇಳಿಸ್ಕಂಡು ಗಂಡ ಇದ್ರೆ ಇಪ್ಪತ್ತೊಂದು ಮಕ್ಳ ಹೆರೊವೆ ಅಂತಿದಾಳಲ್ಲ ಇವ್ಳನೇ ಮದ್ವ್ಯಾಗ್ಬೇಕು ಅಂತ್ಲೀವೇ ಕುದ್ರೆ ಇಳ್ದ್ ಬುಟ್ಟಿದ್ದೇಯಾ ಆಯಮ್ನ ಕುದ್ರೆ ಮೇಲೆ ಕುಂಡ್ರುಸ್ಕಂಡು ಹೋಗ್‌ಬುಟ್ಟ.

ಯೋಯ್ ಬುಟ್ಟು ಅಲ್ಲಿ ಅವರ್ಗೆ ಮದ್ಲೆಂಡ್ತಿಯಿದ್ಲು. ಆ ಮದ್ಲೆಂಡ್ತಿ ಮನೆಗೆ ಕರ್ದಂಡೋಗ್ಲಿಲ್ಲ. ಈಯಮ್ಮಂಗೆ ಬ್ಯಾರೆ ರೂಂ, ಒಂದ್‌ರೂಮ್ ಕಟ್ಸ್‌ಬುಟ್ಟು ಎಂಡ್ತಿಗೊತ್ತಿಲ್ದಂಗ್ ಈಯಮ್ಮನ ಬ್ಯಾರೆ ಇಟ್ಕಂಡ್ರು. ಇಟಗಂಡ್ರೆ ಈಯಮ್ಮ ಗರ್ಭಿಣಿಯಾಯ್ತು. ಗರ್ಭಿಯಾದಾಗ ಈ ದೊರೆ ಏನ್ಮಾಡೋರು ? ಇವ್ಳು ಎಲ್ಲೆಲ್ಲಾರ

ಅಯ್ಯೋ ಎಂಗವ್ವೆ ದೊರಸಾನಿ ಅಂತೇಳಿ ಚಾಡಿ ಯೇಳ್ಬುಟ್ರು. ಅವಾಗ ದೊರೆಸಾನಿ ಏನೆಂದ್‌ಬುಟ್ಲು . ಮತ್ತೆ ನಾನೊಂದುಪಾಯ ಹೇಳ್ಕೊಡ್ತೀನಿ. ಆಯಮ್ಮನ್ಗೆ ಕಣ್ಣಿಗ್ ಬಟ್ಟೆ ಕಟ್ಬುಡಿ. ಕಣ್ಣಿಗ್ ಬಟ್ಟೆ ಕಟ್ಬುಟ್ಟು ಅನ್ನೆರ್ಡುಕಾಲ್ ಏಣಿ ಹಾಕ್ಬುಡಿ. ಅಟ್ಕೆ ಇಳ್ಕೋದು ಹತ್ಕೋದು, ಇಳ್ಕೊದು ಹತ್ಕೋದು ಮಾಡ್ಬುಡಿ. ಅವ್ಳು ಮಗ ಸತ್ಹೋಯ್ತವೆ ಅಂತ ಯೇಳ್ ಕೊಟ್‌ಬುಟ್ಳು. ಆಮ್ಯಾಕೆ ಆಯ್ತು ಅಂಗೆ ಮಾಡ್ತೀವಿ ಅಂದಿದ್ದಲೆ ಬಂದ್‌ಬುಟ್ರು ಆ ಏಳ್ಜನ ಗೌಡೀರು.

ದೊರೆಸಾನಿ ಹೇಳದಂಗೆ ಅನ್ನೆರ್ಡಕಾಲಿನ ಏಣಿ ಅಟ್ಟುಕೆ ಆಕ್ಬುಟ್ರು. ಅತ್ಕೋದು ಇಳ್ಕೋದು ಮಾಡ್ಬುಟ್ರು. ಕಣ್ಣಿಗ್ ಬಟ್ಟೆ ಕಟ್ಬುಟ್ಟು ಅತ್ಕೋದು ಇಳ್ಕೋದು ಮಾಡ್ತಾ ಇದ್ರು. ಅವುರೆಂಗೆಂಗೆ ಅತ್ಕೋದು ಇಳ್ಕೋದು ಮಾಡಿದ್ರು ಅಂಗಂಗೆಲ್ಲಾ ಇಪ್ಪತ್ತೊಂದು ಮಕ್ಳು ಉಟ್ಟೊ. ಇಪ್ಪತ್ತೊಂದ್ಮಕ್ಳು ಉಟ್ದಾಗ ಗೌಡೀರು ಓಡಿವೋಗುಬುಟ್ರು ದೊರಸಾನಿ ಹತ್ರ. ಇಪ್ಪತ್ತೊಂದ್ ಮಕ್ಳ ಅಡುದವ್ಳೆ. ಸೂರ್ಯ ಚಂದ್ರಿದ್ದಂಗವೆ. ಇನ್ನ ನಿನ್‌ಬುದ್ತರಾ ದೊರೆ , ದೊರೆಸಾನಿ ಅಂತ ಯೇಳ್‌ಬುಟ್ರು. ಆಗ ದೊರೆಸಾನಿ ಇದ್ದೋಳು ಒಂದುಪಾಯ ಹೇಳ್‌ಕೊಟ್ಲು. ಈಗ ಇಪ್ಪತ್ತೊಂದ ಮಕ್ಳುನೂವೆ ತಗಂಡೋಗಿ, ಅಲ್ಲಿ ಒಂದು ಅಗೇವೈತೆ. ಆ ಅಗೇವ್ಗೆ ಆಕ್ಬುಡಿ. ಇಪ್ಪತ್ತೊಂದ್ನಾಯಿ ಮರಿ ತಂದು ಅವ್ಳ ಮಗ್ಗಲಲ್ಲಿ ಮಡುಗ್ಬುಡಿ ಅಂತ ಯೇಳ್‌ಕೊಟ್‌ಬುಟ್ಳು.

ಗೌಡೀರೇನ್ಮಾಡ್‌ಬುಟ್ರು, ಅಲ್ಲಿ ಊರ್ಮುಂದೊಂದು ನಾಯಿ ಈದಿತ್ತು. ಆ ಇಪ್ಪೊಂತ್ತೊಂದ್ನಾಯಿ ಮರಿನೂ ತಂದು ಅವಳ್ಮಗ್ಗಲಾಗ್ಮಡಗ್ಬುಟ್ರು. ಈ ಇಪ್ಪತ್ತೊಂದ್ ಮಕ್ಕಳ್ನೂವೆ ತಗಂಡೋಗಿ ಅಗೇವುನೊಳಿಕ್ಕೆಬುಟ್ಟು ಬಂದ್‌ಬುಟ್ರು. ಈಯಮ್ಮನ ಕಣ್‌ಬಿಚ್ಚುದ್ರು. ಒಂದ್ ನೀರು ಇಲ್ಲ, ನಿಡಿನೂ ಇಲ್ಲ. ಏನೋ ಬಂದ್ರೂ ಮನೊಳಿಕ್ಕಾಬುಟ್ರು. ಆಮೇಲೆ ದೊರೆ ಬಂದ್ರು. ದೊರೆ ಬಂದ್ಘಾಗ ಗೌಡೀರಾ ಯೆರ್ಗೆ ಆಯ್ತಾ? ಅಯ್ಯಾ ದೊರೆ ಯೆರ್ಗೆ ಆಯ್ತು. ಇಪ್ಪತ್ತೊಂದ್ನಾಯಿ ಮರೀನ ಯೆತ್ತವ್ಳೆ. ಅಲ್ಲೊಂದ್ರೂಮ್‌ನಲ್ಲಿ ಆಕಿದೀವಿ ಅಂತ ಹೇಳ್‌ಬುಟ್ರು. ಅಯ್ ಬುಡಿ ಉಗೀರಿ ಅತ್ತಗಿ ಅಂತ, ಅವ್ರುವೇ ಬೇಜಾರ್ಮಡ್ಕಂಬುಟ್ರು. ಆಯಮ್ಮನಿಗೆ ಯಿಟ್ಟು ಇಲ್ಲ ನೀರೂ ಇಲ್ಲ. ಅವಳ್ಕಥೆನೇ ಅವಳ್ಗೆ. ಏನೋ ಯಾವ್ದೋ ಟೈಂನಲ್ಲಿ ಸೀಕೋ ಯಿಟ್ಟೊ ಕೊಡೋರು. ತಿಂದ್ಕಂಡ್ ಒಂದ್ಮೂಲೇಲಿ ಬಿದ್ದಿತ್ತು.

ಇತ್ಲಾಗಿ ಈ ಅಗೇವ್‌ನಲ್ಲಿ ಈ ಮಕ್ಳೇನಾಗಬುಟ್ಟೋಂದ್ರೆ, ಇವುಗಳ್ನ ಅಗೇವು ಚಂದಾಗಿ ಸಾಯ್ಕಂಬುಡ್ತು. ಅಗೇವು ಅಂದ್ರೆ ಭೂಮ್ತಾಯಿನೇ. ಈ ಮಕ್ಳ್ನ ಸಾಯ್ಕಂಬುಡ್ತು. ನೀವ್ಯಾವಾರು? ಏನು ? ಏನ್ ಬಂದ್ರಪ್ಪ ನನ್ಗೂ ಮಕ್ಳಿಲ್ಲ. ಸಾಯ್ಕತ್ತೀನಿ, ಅಂದ್ಬುಟ್ಟು ಅಚ್ಚಕಟ್ಟಾಗಿ ಸ್ಯಾಕಂಬುಡ್ತು. ಸಾಯ್ಕಂಡು ಇಂಗೆ ಮಡಿಕಬುಡ್ತು. ಅಗೇವ್‌ಬುಟ್ಟು ಮೇಲ್ಕೆ ಕಳಿಸ್ತಿರ್ಲಿಲ್ಲ, ಅಮಕ್ಳನ್ನ. ಅವ್ಕೆ ಅದೇ ತಾಯ್ತಂದೆ ಆಗೋಯ್ತು.

ಒಂದಿವ್ಸಲ್ಲ ಒಂದಿವ್ಸ ಏನಂತ ಕೇಳ್ದ್ರೊ ಈ ಮಕ್ಳುಗೋಳು. "ತಂದೆ ಸ್ವಲ್ಪ ಮೇಲ್ಗಡಿಕೆ ವೋಗ್ಬುಟ್ಟು ಆಡ್ಕಂಬತ್ತೀವಿ ತಂದೆ". ಅಯ್ಯೋ ಅಪ್ಪ ಬ್ಯಾಡ್ರಪ್ಪ ಎಲ್ಲಾ ಮ್ಯಾಲುಕ್ಕೋಗಬ್ಯಾಡಿ. ಇಲ್ಲೆ ಒಳ್‌ಗಡೀಕ್ ಆಡಿ ಅಂತ ಯೇಳಿದ್ರೂ, ಕೇಳ್ಲಿಲ್ಲ. ಮೇಲ್ಗಡಿಕ್ ಬಂದು ಗಂಡ್ಮಕ್ಳು ಹೆಣ್ಮಕ್ಳು ಚಂಡು ಬುಗ್ರಿ ಆಡೋದು. ಆಡ್ಕೊಂಡು ವೋಗ್ತಾ ಇರುವಾಗ, ಇವ್ರು ನೋಡುಬುಟ್ರು. ಯಾರು ? ಈ ಗೌಡೀರು. ನೋಡ್ಕಂಡೋಗ್ಬುಟ್ಟದೇ ದೊರಸ್ಯಾನಿಗೇನಂತ ಯೋಳ್‌ಬುಟ್ರು ಅಯ್ಯೋ ದೊರಸ್ಯಾನಿ, ಆ ಮಕ್ಳನ್ನ ಅಗೇವ್‌ದೊಳಿಕ್ ಆಕೊಂದೆ. ಅಯ್ಯೋ ಅಷ್ಟೂ ಐಭೋಗ್ದಲ್ಲಿ ಬೆಳದವೆ ಮಕ್ಳು ದೊರೆಸ್ಯಾನಿ, ನೋಡಕ್ಕಾಗಕಿಲ್ಲ ಅಂತ ಯೋಳ್ಬುಟ್ರು. ಓ ಬದೀಕಬುಟ್ಟಾ ಅಂಗೂವೆ? ಏನ್ಮಾಡದು ಈಗ ಅಂತ ದೊರಸಾನಿ ಒಂದುಪಾಯ ಮಾಡತಾವ್ಳೆ. ಜರ-ಸಳಿ ಅಂತೇಳಿ ಮಲಿಕಬುಟ್ಳು. ದೊರೆ ಬಂದ್ರು. ದೊರೆ ಬಂದಾಗ ಯಾಕೆ ದೊರೆಸ್ಯಾನಿ ಊಟ ಆಯ್ತಾ ? ಯಾಕೆ ಮಲ್ಗೀದ್ದಿಯಾ? ಏನೂಂತ ಕೇಳಿದ್ರು. ಅಯ್ಯೋ.... ಇಲ್ಲ ಮೈ ಒಡ್ತ - ತಲೆಒಡ್ತ, ಜರ-ಸಳಿ ಅಂದ್ಲು. ಆಗ ದೊರೆ ಏನ್ಮಾಡಿದ್ರೆ ವೋಯ್ತದೆ ಅಂತ ಕೇಳಿದ್ರು. ಅಯ್ಯೋ ನನ್ಗೆ ಏನ್ಮಾಡುದ್ರೂ ವೋಗಕಿಲ್ಲ. ಆ ಊರ್ಮುಂದೆ ಒಂದ್ ಅಗೇವ್ ಅದೆ ಅದ್ನ ಮುಚ್ಚುಬುಟ್ಟು ಸ್ವಲ್ಪ ಮಣ್ಣ್ತಂದ್ಕೊಟ್ರೆ ನನ್ಗೆ ವಾಸಿಯಾಯ್ತದೆ ಅಂದ್ಲು. ಅದೇನ್ ಬೋ ಸುದ್ದಿಯಾಂತ ಮಲಿಗಿದ್ದೀಯಾ ? ಆಯ್ತು ಒಂದ್‌ಯೆರ್ಡಾಳ್ಗೇಳಿ ಮುಚ್ಚಿಸ್ಬುಡ್ತೀನಿ ಯೇಳು ಅಂದ್ರು.

ಇನ್ನ ಇವ್ರು ಬೆಳಗ್ಗೆ ಮುಚ್ಚಿಸ್ಬೇಕು ಅಗೇವ. ಈ ರಾತ್ರಿಲೇಯ ಕನಸ್‌ಬಿದ್‌ಬುಡ್ತು ಅಗೇವ್ಗೆ. ಓ ಮಕ್ಳ ಇನ್ನ ನನ್ನ ಬೆಳಿಗ್ಗೆ ಏನಿದ್ರೂ ಮುಚ್ಚಿಸ್ಬುಡ್ತಾರೆ. ಇನ್ನ ನೀವ್ ಎಲ್ಲಿ ಸೇರ್ತಿರಪ್ಪ? ನೀವ್ ಎಲ್ಲಿ ವೋಗ್ತಿರಾ ? ನಾನ್ ಏನ್ಮಾಡದು ? ಅಂತ ಅಗೇವ್ ಏನೇಳ್ತು ಅಂದ್ರೆ "ಅಪ್ಪ ಅಲ್ಲಿ ಒಂದು ಮೂಗುತ್ತ ಅದೆ. ಆ ವುತ್ತುದೊಳಕೆಲ್ಲಾ ವೋಗ್ಬುಡಿ. ಇನ್ನ ನನ್ಕಥೆ ಆಗೋಯ್ತು. ನನ್ನ ಮುಚ್ಚಿಸ್ ಆಕ್ಬುಡ್ತಾರೆ. ಆ ಮೂಗುತ್ತದೊಳಿಕ್ಕೋಗಿ ಎಲ್ಲಾ ಸೇರ್ಕಂಬುಡಿ ಅಂತ ಯೋಳ್ಬುಟ್ಟು ಎಲ್ಲಾರ್ನು ಕಳುಸ್ಬುಡ್ತು ಅಗೇವು. ಇವ್ರು ಮೂಗುತ್ತ ದೊಳಿಕ್ಕೋಗಿ ಸೇರ್ಕಂಬುಟ್ರು. ಇನ್ನ ದೊರೆ ಆಳ್ ಕರ್ಕೊಂಡೋದ್ರು. ಅಗೇವ್ನ ಮುಚ್ಚಿಸ್ಬುಟ್ರು. ಮಣ್ ತಂದ್ಕೊಟ್ರು. ಆಗ ನನ್‌ಗ್ವಾಸಿಯಾಯ್ತುಂತ ಎದ್ಲು ದೊರೆಸಾನಿ.

ಈ ಮೂಗುತ್ತದಲ್ಲಿ ಒಂದ್ ಯೋಳೆಡೆ ಸರ್ಪ ಕರ್ಣಕೊಂಡ್ಲ ಆಗಿ ಅನ್ನೆರ್ಡು ವರ್ಸದಿಂದ ಕೊಂಕಬಿದ್ದಿದ್ನಂತೆ. ಕರ್ಣಕೊಂಡ್ಲ ಆಗಿ ಕಿವಿಯೊಳ್ಗೆ ಅನ್ನೆರ್ಡ್ ವರ್ಸದಿಂದ ಅದರೊಳಗೆ ನೊಸಿಕಂಡ್ ಬಿದ್ದಿದ್ನಂತೆ. ಈ ಮಕ್ಳು ಯಾವಾಗ ತಪತಪ್ನೆ ವಳಿಕೋದ್ರೂ ಅವನ್ಗೆ ಕಾಯ್ಲೆ ಅನ್ನೋದೆ ವಾಸಿಯೋಗೋಯ್ತು, ಪರಿಯಾರ ಆಗೋಯ್ತು. ಆಗ ಸ್ವಾಮಿ ಏನೇಳಿದ್ನಂತೆ ನಾಗೇಂದ್ರಪ್ಪ ಅಯ್ಯೋ ಮಕ್ಳ ನೀವ್ ಯಾವ್ತಾಯಿ ಆಡ್ದಕ್ಕಳಪ್ಪ ? ಯಾವ್ ದೇಶದ ದೊರೆ ಮಕ್ಳಪ್ಪ ನೀವು ? ಯಾಕ್ರಪ್ಪ ಇಲ್ಲಿಗ್ ಬಂದ್ರಿ ? ನನ್ ಕಾಯ್ಲೆನೂ ವಾಸಾಯ್ತು. ನನ್ಗೂ ಯಾರೂ ಇಲ್ಲ. ನನ್ ಮಕ್ಳು ಅನ್ನುವಂಗೆ ಸಾಯ್ಕತಿನ್ಕಣ್ರಪ್ಪ, ಅಂದಿದ್ದೇಲೆ ಅವ್ಕೆ ಏನ್ಬೇಕು ಅದ್ನ ಬೇಕಾದಷ್ಟು ಬಟ್ಟೆ-ಬರೆ, ಅವ್ಕೇನು ಸಪ್ಲೈಬೇಕು

ನಾಗೇಂದ್ರ ಮಾಡ್ಬುಟ್ಟು ಸಾಯ್ಕಬುಟ್ಟ. ಅಚ್ಗಟ್ಟಾಗಿ ಸಾಯ್ಕಂಬುಟ್ಟು ಗಂಡ್ಮಕ್ಕಿಗೆಲ್ಲಾ ಚಂಡು ಬುಗ್ರಿ, ಹೆಮ್ಮಕ್ಕಿಗೆಲ್ಲ ವೂವೂ. ಈ ವೂ ತರಕ್ಕೆ ಒಬ್ಳು ವೂವಾಡ್ಗಿತ್ತಿ ಗೊತ್ಮಾಡ್‌ಬುಟ್ರು. ನಮ್ಮ ನಾಗೇಂದ್ರಪಟ್ಣಕೆ, ''ನೋಡಮ್ಮ ವೂ ತಂದ್‌ಕೊಡು ಇಷ್ಟು ಅಂತ ಒಬ್ಬ ವೂವಾಡ್ಗಿತ್ತಿಗೆ ಅವ್ರು ಆಗ್ನೆ ಮಾಡ್ಬುಟ್ರು. ಆಯ್ತು ಸ್ವಾಮಿ ತಂದ್ಕೊಡ್ತಿನಿ ಅಂತೇಳಿ ಆಯಮ್ಮ ಒಪ್ಕಂಡ್ಲು. ಆಯಮ್ಮ ಏನ್ಮಾಡೋಳು? ಒಂದ್ಮಂಕ್ರಿ ವೂ ತಗಂಬರೋಳು. ನಾಗೇಂದ್ರ ಸ್ವಾಮಿ ಪಟ್ಣಕೆ ಕೊಟ್‌ಬುಡೋಳು. ಈ ಮೂಗುತ್ತದೋಳಿಕೆ ವೋಗ್ಬುಡೋಳು. ಇತ್ಲಾಗಿ ಈ ಮಕ್ಕಳೆಲ್ಲಾ ಆಡ್ಕಂಡಿರವು.

ಒಂದಿವ್ಸಲ್ಲ ಒಂದಿವ್ಸ ಏನಂದ್ರೋ ''ತಾತ ಮೇಲ್ಗಡೆ ವೋಗಿ ಆಡ್ಕಂಬತ್ತೀವಿ ತಾತ ಸ್ವಲ್ಪ ಬೇಜಾರಾಯ್ತದೆ ಇಲ್ಲೇಯಾಂತ ಕೇಳ್ಕಂಡೊ. ಆಯ್ತು ವೋಗ್ರಪ್ಪ ಆಡ್ಕಬನ್ನಿ ಅಂತ ನಾಗೇಂದ್ರ ಹೇಳ್ಬುಟ್ಟ. ಇವು ಮೇಲ್ಕ್ ಬಂದು ಆಡಕಂಡು ವೋಗ್ತಾಯಿರುವಾಗ ಇವ್ರು ನೋಡ್ಕಬುಟ್ಬರು. ಯಾರು ? ಈ ಗೌಡೀರು. ನೋಡ್ಬುಟ್ರು. ದೊರೆಸಾನಿ ಹತ್ರುಕ ಬಂದು ಅಯ್ಯೋ ದೊರೆಸ್ಮಾನಿ ನೀನು ಅಗೇವ್ ಮುಚ್ಚದೆ ಈ ಮೂಗುತ್ತದಿಂದ ಬಿಳಿಬಳಿಬಿಳ್ನೆ ಬತ್ತವೆ ಮೇಲ್ಕೆ, ಪಿಳಿಪಿಳಿಪಿಳ್ನೆ ಒಳೀಕ್ ವೋಯ್ತವೆ. ಅಷ್ಟೊ ಚೆನ್ನಾಗವೆ ಕಣ್ ದೊರೆಸಾನಿ ಮಕ್ಳು ಅಂತ ಯೇಳ್‌ಬುಟ್ರು.

ಈಗೇನ್ಮಾಡದು ಗೌಡೀರ್‌ಗೇಳುದು ಅಂತ ಒಂದುಪಾಯ ಮಾಡತಾವ್ಳೆ ದೊರೆಸಾನಿ. ಈಗ ಇಸದ್ ಕಜ್ಜಾಯ ಮಾಡ್ಕೊಟ್‌ಬುಡ್ತೀನಿ. ಊರ್ಮುಂದೊಂದು ಕಟ್ಟೆ ಅದೆ. ಕಟ್ಟೆ ನೀರ್ಗೋಗ್ಬುಡಿ. ಅಲ್ಲಿ ಮಗಿಯದು ಚಲ್ಲದು, ಮಗೆಯದು ಚಲ್ಲದು ಮಾಡಿ. ಅವಾಗ ಆಡಾಕ್ ಬತ್ತವೆ. ಆವಾಗೊರಸ್ಬನ್ನಿ ಮಕ್ಳೆ ತಿನ್ನಾಕ್ ಕೊಡ್ತೀವಿ ಅನ್ನಿ. ಅವಾಗ ಎಲ್ಲಾಕು ಇಸದ ಕಜ್ಜಾಯ ಕೊಟ್ಬುಡಿ. ಎಲ್ಲಾ ಸತ್ಹೋಯ್ತವೆ. ಬನ್ಬುಡಿ ಅಂತ ಹೇಳ್‌ಕೊಟ್‌ಬುಟ್ಲು. ಇವು ಅಂಗೆ ಆಡಾಕೆ ಈಚೆಗೆ ಬಂದೊ. ಕಟ್ಟೆ ಹತ್ರ ಹೋಗಿ ಎಲ್ಲಾ ಈಜ್ ಹೊಡೆಯೋದು, ಇದ್ ಮಾಡಾದು. ಆಡಾಕ್ ಬಂದೊ. ಇವ್ರು ಏಳ್ಜನ ಗೌಡೀರು ಅಲ್ಲಿಗೆ ನೀರ್ಗೆ ಹೋದ್ರು. ಮಗಿಯಾದು ಚಲ್ಲಾದು ಮಾಡ್ತಾ ಇದ್ರು. ಈ ಮಕ್ಳು ನೋಡ್ನಾರದನೆ ಯಾಕಮ್ಮ ಒರ್ಸನೇನಮ್ಮ ? ಅಂದೊ. ಊಕಣ್ ಬಂನ್ರಪ್ಪ ಎಲ್ರುಗೂ ತಿನ್ನಾಕ್ ಕೊಡ್ತೀವಿ ಅಂತ ಯೇಳಬುಟ್ಟು ಕಜ್ಜಾಯ ಕೊಟ್ರು. ಕಜ್ಜಾಯ ಕೊಟ್ಬಾಗ ಏನಾಯ್ತು? ಈ ಇರೇ ಹುಡ್ಗಿ ಸ್ವಲ್ಪ ಆತ್ರುದ್ ಹುಡ್ಗಿ ತಿನಬುಡ್ತು ಕಜ್ಜಾಯನ. ಇವೆಲ್ಲಾ ಅಂಗೆ ಇಡ್‌ಕೊಂಡಿದ್ದೊ. ಆ ವುಡ್ಗಿ ತಿಂದೇಟ್ಗೆ ಸತ್ಹೋಗ್‌ಬುಡ್ತು. ಸತ್ಹೋಗ್‌ಬುಟ್ಬಾಗ ಇವು ಈ ಇಪ್ಪತ್ತು ವುಡುಗ್ರು ಇದ್ವಲ್ಲಾ, ಸುತ್ತ ಕೂತ್ಕಂಡು ಆ ವುಡ್ಗಿ ಹೆಣ ಮಧ್ಯೆ ಮಡಿಕಂಡು ಅಳ್ತಾ ಇದ್ದೊ.

ಶಿವನು ಪಾರ್ವತಿಯು ಎಲ್ಲೋ ಹೋಗ್ತಾ ಇದ್ರು. ವೋಗುವಾಗ ಏನಾಯ್ತು? ಅಯ್ಯೋ ಅದೇನೊ ನರಮನ್ಸನ ಗೋಳಾಯ್ತದೆ. ನಡೀರಿ ನೋಡನಾಂತೇಳಿ ಪಾರ್ವತಿ ಅಂದ್ಲು. ಶಿವ ಏನಂದ್ರು, ಅಯ್ಯೋ ಯೆಂಗ್ಸಿನ್ ಬುದ್ಧಿ ಇದೆನೇ. ಏ ನಡಿ ಏನೋ ಅಂದ್ರು. ಅಯ್ಯೋ ನಾವ್ ಬಂದಿರಾದ್ಯಾತಕ್ರಿ ? ನರ್‌ಮನ್ಸನ್ ಚಂಚರಣೆಗೋಸ್ಕರ ತಾನೆ ?

ನೋಡಾನ ಬನ್ನಿ ಅಂತೇಳಿ ಕರ್ಕಬಂದ್ರು. ಕರ್ಕಂಬಂದಾಗ ಯಾಕ್ರಪ್ಪ ? ಏನ್ರಪ್ಪ ? ಇಂಗೆ ಸತ್‌ವೋಗ್ಬುಡ್ತು ಸ್ವಾಮಿ, ಕಜ್ಜಾಯ ತಿನಬುಡ್ತು. ನಮ್ಮಕ್ಕ ಇಂಗೆ ಸತ್‌ವೋಗ್ಬುಡ್ತು. ನಾವ್ ಇಪ್ಪತ್ತೊಂದ್ಜನ ಇದ್ದೊ. ಇಪ್ಪತ್ಜನ ಆಗ್ಬುಟ್ವೊ ಅಂತೇಳಿ ಅಳ್‌ತಿದ್ದೊ. ಅವಾಗ್ ಏನ್ಮಾಡಿದ್ರು ಅವ್ರು? ಮರ್‌ಜಾವ್ಪದ್ಕಡ್ಡೀಲಿ ಮಂತ್ರಸ್‌ಬುಟ್ರು. ಜೀವ ಮಾಡ್‌ಬುಟ್ವು ಮಂಗಳಮಾಯ ಆಗ್‌ವೊಂಟೋಗ್‌ಬುಟ್ರು. ಇವೇನ್ ಮಾಡ್ಬುಟ್ವೋ? ಹೂವಾಡಗಿತ್ತಿ ಮನೆ ಸೇರ್ಕೊಂಬುಟ್ವೊ ವೋಗಿ.

ಈಗ ಅದೇ ದೊರೆ ನನಗೆ ಮಕ್ಳಿಲ್ಲ, ನಾನ್ ಇನ್ನೊಂದ್ ಮದ್ವೆ ಆಗ್‌ಬೇಕು ಅಂದ್‌ಬುಟ್ಟು ಏರ್ಪಾಡ್ ಮಾಡಿದ್ರು. ಎಲ್ಲಾರ ಒಂದೆಣ್ ತರಬೇಕು, ನಾನ್ ಮದ್ವೆ ಆಗ್ಬೇಕು ಅಂತೇಳಿ ಕುದ್ರೆ ಆಯ್ಕಂಡು ವೋಯ್ತಾಯಿದ್ರು. ವೋಯ್ತಾ ಇರುವಾಗ ಈ ಮಂತ್ರಿ ಏನೇಳ್ದ ದೊರಿಗೆ, ಅಯ್ಯಾ ದೊರೆ ಈ ಹೂವಾಡಿಗಿತ್ತಿ ಮನೇಲಿ ಮಕ್ಳು ಸಾಕವ್ಳೆ. ಎಣ್ಣೊಂದ್ರೆ ಅಷ್ಟೊ ಚೆನ್ನಾಗವೆ. ನಿಮ್ಗೆ ಆಗೊದೊಂದು ವುಡ್ಗೀನ್ ನೀವ್ ಮಾಡ್ಕಳಿ ದೊರೆ ಅಂತೇಳಿ ಮಂತ್ರಿ ಹೇಳ್ದ. ಆಯ್ತು ಕಣೋ ನಡಿಯೋ ಹೋಗಾನ ಅಂತೇಳಿ ಮಂತ್ರಿನೂವೆ ದೊರೆನೂವೇ ವೂವಾಡ್ಗಿತ್ತಿ ಮನೆಗೆ ಎಣ್‌ಗೋದ್ರು. ಎಣ್‌ಗೋದ್ರೆ ಏನಂದ್ರು, ಏನಮ್ಮ ನಮ್ಗೊಂದೆಣ್ಣಾಗಬೇಕಣಮ್ಮ. ನಾವ್ ಎಣ್ಣೀಗ್ ಬಂದಿದೀವಿ ಅಂತ ದೊರೆಗಳು ಅಂದ್ರು. ಆಯ್ತಪ್ಪ ಅದೃಷ್ಟ ಅಣೆಬರ ಇದ್ರೆ, ಹೆಸ್ರಬಲ ಬಂದ್ರೆ ಆಯ್ತು, ಇಲ್ಲಾಂತೀನ ದೊರೆ ಅಂತೇಳಿ ಅವಮ್ಮ ಹೇಳ್ಬುಟ್ಬುಳು. ಆಯ್ತು ಹೆಸರ್ಬಲ ಕೇಳುದ್ರು, ಏನೋ ಸರ್ಬತ್ತು ಅಂತಹೇಳಿ ಹೇಳ್ಬುಟ್ರು. ಆಯ್ತು ಎಲ್ಲಾ ಸಾಮಾನು ವೊಂಚ್ಗಬುಟ್ರು. ಮದ್ವೀಗೆ ಏರ್ಪಾಡು ಮಾಡ್‌ಬುಟ್ರು. ಎಂಟ್‌ದಿನ್ಕೆ ಎಣ್‌ಕರ್ಕಬರೊದು, ಇಷ್ಟುದಿನ್ಕೆ ಚಪ್ರ ಮದ್ವೆ ಅನ್ನಾದು ಗೊತ್ತಾಗೋಯ್ತು. ಆಯ್ತು ಎಣ್‌ಕರ್ಕವೋಯ್ತು ಅವಮ್ಮ.

ಅವಾಗ ಚಪ್ರದಟ್ಟೀಲಿ ಮೋರ್ತಕ್ ನಿಲ್ಸುದ್ರು. ಮೋರ್ತಕ್ ನಿಲ್ಸದಾಗ ತೆರೆಬಟ್ಟೆ ಇಡುದ್ರು. ಎಳ್ಳು ಜೀರ್ಗೆ ಆಕ್ಸುದ್ರು. ಇನ್ನೇನು ಮೋರ್ತಕ ಕೈವೊಡ್ಡಬೇಕು. ಎಣ್ಣು ಗಂಡು ಮೋರ್ತಕ್ ಕೈವೊಡ್ಡದಾಗ ಆಕಾಸ್‌ದಿಂದ ಒಂದ್ ಯಿಂಬೆ ಹಣ್ಣು ಎಣ್ಣೀನ್ ಕೈಯೊಳಗೆ ಬಿದ್ದಾಗ, ಆ ವುಡ್ಗಿ ಏನ್ಮಾಡ್ತು ?ಕೈಯ ಹಿಂಗ್ ತಕ್ಕಂಬುಡ್ತು. ವಾಲಕ್ ತಕ್ಕಂಡು ಆ ಯಿಂಬೆ ಅಣ್ಣೊಳ್ಗೆ ಓದಕ ನಿಂತ್ಕತು. ಆ ವುಡ್ಗಿ ಓದಕ ನಿಂತ್ಕಂಡಾಗ ಏನಂತ ಓದ್ಕ ನಿಂತ್ಕಂತು ಅಂದ್ರೆ, ಮೂರ್ಜನ ಮುಂಡೇರಂತೆ, ಕೇಳ್ ಯಿಂಬೆಅಣ್ಣೇ. ಮಾವಿನ ತೋಪ್ನಲ್ಲಿ ಸೌದೆ ಆಯ್ತಾ ಅಂತ ಒಬ್ಳಂದ್ಲಂತೆ. ಅದ್ಕೆ ಅಯ್ಯೋ ತಾಯಿ, ನಾನು ಅಡ್ಗೆ ಮಾಡಿ ಮಕ್ಳುಗಿಕ್ಕಿ, ಊಟಮಾಡಿ ಇವ್ನೆಲ್ಲಾ ಮಾಡಬಂದೆ ಅಂತ ಒಬ್ಳದ್ಲಂತೆ. ಒಬ್ಳೇನಂದ್ಲಂತೆ ಆರಪಾವಕ್ಕಿ ಆಕಿ ಗಿರಿಪರ ಮಾಡಿ ಒಂದೂರ್ ಮಗಳು ಬಂದುಂಡು ಕೋಡಳ್ಳಿ ಮಗ್ಳ ಕರ್ಕಬಂದಿಕ್ಕಿ ಓದಕ್ಕೋಗೋ ಮಗನ್ಗೆ ರೊಟ್ಟಿ ಬುತ್ತಿ ಕಟ್ಟಿ ಇನ್ನೂ ಅರಪಾವಕ್ಕಿ ಅನ್ನ ಉಳ್ದಕ್ಕಣಕ್ಕಾಂತ ಒಬ್ಳಂದ್ಲಂತೆ. ಅಯ್ಯೊ ನನಗೆ ಗಂಡಿದ್ರೆ ಇಪ್ಪತ್ತೊಂದ್ ಮಕ್ಳ ಹೆರೋನಿ ಕಣಕ್ಕ ಅಂತ ಒಬ್ಳಂದ್ಲಂತೆ. ಅಲ್ಲಿ ಒಂದ್ಸೀಮೆ ದೊರೆ ಎಣ್ಣಿಗೇಂತ ವೋಗ್ತಾಯಿದ್ನಂತೆ. ಎಣ್‌ಗೋಗುವಾಗ ಇವ್ರು ಮಾತಾಡ್ತಿದ್ದ ಮಾತ್ನ ಕೇಳಿಸ್ಕಂಡು ಕುದ್ರೆ ಇಳ್‌ದ್‌ಬುಟ್ಟು, ಕುದ್ರೆ ಮೇಲೆಯೆತ್ತಿ ಕುಂಡ್ರುಸ್ಕಂದ್‌ಬಂದ್ನಂತೆ. ಬಂದು ಅಯಮ್ಮನ ಒಂದು ಮನೆ ಮಾಡಿ ಬುಟ್ಕೊಂಡಿದ್ನಂತೆ.

ಅಯಮ್ಮ ಗರ್ಭಿಣಿ ಆದಾಗ ಈ ಗೌಡೀರ್ಗೆ ಏಳ್ಜನಕ್ಕೂವೆ ಆಗ್ನೆ ಮಾಡಿದ್ರಂತೆ. ಈಯಮ್ಮನ ಕಷ್ಟ ಸುಖಗೋಳೆಲ್ಲಾ ನಿಮಿಗೆವೊಂದಿದ್ದು. ಅವಾಗ ವುಚ್‌ದೊರೆ ಎಲ್ಲೋ ವೋಗಿದ್ದಾಗ, ಆಯಮ್ಮನ್ಗೆ ಕಷ್ಟವಾಯ್ತಂತೆ. ಆಗ ಇವ್ರು ಏಳ್ಜನ ಗೌಡೀರ್ನವೆ ಕರ್ದು ಕಷ್ಟ ಸುಖಗಳ ಯೋಳ್ತಂತೆ. ಯೋಳಿದಾಗ ನಿಮ್ಕಡೆ ಹೆರ್ಗೆ ಮಾಡಾನೋ ನಮ್ಕಡೆ ಹೆರ್ಗೆ ಮಾಡಾನೋ ಅಂತ ಕೇಳಿದ್ರಂತೆ. ನಮ್‌ಗೇನ್ ಗೊತ್ರವ್ವ? ಎಲ್ಲಾ ನಿಮಗ್‌ವೊಂದಿದ್ದು, ನಿಮಗೆಗೊತ್ತಿದ್ದು ಅಂತ ಆಯಮ್ಮ ಹೇಳತಂತೆ. ಅವಾಗ ಅವ್ರೇನ್ಮಾಡಿದ್ರಂತೆ? ಕಣ್ಗೆ ಬಟ್ಟೆ ಕಟ್‌ಬುಟ್ಟು, ಅಟ್ಟಕ್ಕೆ ಅನ್ನರ್ಧಕಾಲ ಏಣಿ ಆಯ್ಕಬುಟ್ಟು ಹತ್ಸದು ಇಳ್ಸದು ಮಾಡಿದ್ರಂತೆ. ಅವ್ರು ಹತ್ಸದು ಇಳ್ಸದು ಮಾಡದಂಗೆಲ್ಲಾ ಇಪ್ಪತ್ತೊಂದ್ ಮಕ್ಳು ವುಟ್ಟುದುವಂತೆ. ಅವಾಗ ಏನ್ಮಾಡಿದ್ರಂತೆ? ಇಪ್ಪತ್ತೊಂದ್ ಮಕ್ಳುನೂ ತಗೊಂಡೋಗಿ ಊರ್ಮುಂದ್ಲ ಅಗೇವ್‌ಗೆ ಆಕಿದರಂತೆ. ಆವಾಗ ಇಪ್ಪತ್ತೊಂದ್ನಾಯಿ ಮರಿ ತಂದು ಅವಮ್ಮನ ಮಗ್ಲುಲ್ಲೆ ಬುಟ್ರಂತೆ. ಕೇಳ್ ಯಿಂಬೆಣ್ಣೆ ಅಂತ ಎಲ್ಲಾನು ನಡೆದಿದ್ದ ವಿಚಾರನೆಲ್ಲಾ ಯಿಂಬೆಣ್ಣಲ್ಲಿ ಓದ್ಬುಡ್ತು. ಆ ನಿಂಬೆ ಅಣ್ಣಲ್ಲಿ ಓದ್ಬುಟ್ಟಾಗ ಈ ದೊರೆ ನಿಂತಿದ್ದೋರು, ವುಚ್‌ದೊರೆ, ತನ್ನ ಮಗಳ್ನೇಯ ಮದುವೆ ತಾನೆ ಆಗಕ್ ಬಂದ್ರಂತೆ, ಕೇಳ್ ಯಿಂಬೆಣ್ಣೆ ಅಂತೇಳಿ ಓದ್ಬುಡ್ತು.

ಅವಾಗ ವುಚ್‌ದೊರೆ ಮೋರ್ತಕ್ ನಿಂತಿದ್ದೋರು ಏನಾಯ್ತು ಮೂರ್ಛೆ ಬಿದ್ದೋದ್ರು. ಆಮ್ಯಾಲೆ ಏನ್ಮಾಡಿದ್ರು? ಎಚ್ಚತ್ಕಂಡು ಅದೇ ಚಪ್ರದಲ್ಲಿ ಇನ್ನೊಂದ್ ಸೀಮೆದೊರೆ ತಂದು, ಅದೇ ಮಗಳ್ಗೆ ಲಗ್ನ ಮಾಡಿದ್ರು. ಮನೇಲಿದ್ದ ದೊರೆಸಾನಿ ಏಳ್ಜನ ಗೌಡೀರ್ನುವೆ ಏಳ್ ಬಾಕಲ್‌ಗೂ ಸಿಗಿದು ತೋರ್ಣ ಕಟ್ಸಿಸುದ್ರು. ಆಮ್ಯಾಲೆ ವುಚ್‌ದೊರೆ ಮಕ್ಳು ಯೆಂಡ್ತಿ ಬದಿಕವೋಯ್ತಾವ್ರೆ.

ಹೇಳಿದವರು : **ಸಾಕಮ್ಮ,** ಬೆಟ್ಟದ ಬ್ಯಾಲಸಕೆರೆ. ಅಜ್ಜಿಯಿಂದ ಕಲಿತ ಕಥೆ.

# ೧೭. ಹೆಂಡತಿಯ ಮಿಂಡ

ಒಂದೂರಲ್ಲಿ ಗಂಡ ಎಂಡ್ತಿ ಇಬ್ರಾಳಿದ್ರಂತೆ. ಆಮೇಲೆ ಇರ್ತಾಲೂವೇ ಅವ್ಳು ಯಾರನ್ನೊ ಇಟ್ಕೊಂಬಿಟ್ಟಳು. ಗಂಡನ್ ಮುಂದೆ ಮುಂಡಾನೋವು ತಲೆನೋವು ಅಂತಿದ್ದಳು. ಅವಳು ಮೂಗುನೋವು ತಲೇನೋವು ಅಂತ ಮಲಿಕ್ಕೊಂಬಿಟ್ಲು. ಮಲಿಕ್ಕೊಂತ್ಲೂವೇ ಗಂಡ ಬಂದು ''ಏಯ್ ನಿನ್ನ ಮೂಗುನೋವು ತಲೇನೊವಿಗೇನು ಅಂತ ಕೇಳಿದ. ಅಯ್ಯೋ ಮತ್ತೇ ನಂಗೆ ನೆಟ್ಟಾನೆ ಕಲ್ಲೂವೇ ಗಾಳಿಹಣ್ಣೂವೇ... ಇಟ್ಕೊಂಡು... ನನ್ನ ಮೂಗುನೋವು ತಲೆನೋವು ಓಯ್ತದೆ ಅಂತ ಹೇಳಿದ್ಲು. ಅವ್ನು ಅವಾಗ ಆಯ್ತು ಅಂತ ಹುಡಿಕೊಂಡು ವೋಗ್ಬಿಟ್ಟು, ಒಂದು ಚುಂಚನಗಿರಿ ಬೆಟ್ಟದಂಥ ಬೆಟ್ಟ ಸಮುದ್ರಕ್ಕೆ

ಗಾಳಿಹಣ್ಣು ಎಲ್ಲಾ ಹುಡುಕುತ್ತಾ ಇದ್ದಾ. ಆಮೇಲೆ ಆ ಕಡೆ ವೋಗೊವ ಅಂತ, ಕಲ್ಲು ಕಡಿದು ನೋಡೋಣ ಅಂತ ನೆಟ್ಟಾನೇ ಕಲ್ಲು ಕಿತ್ತ. ಆಮೇಲೆ ಹಾಳುಗಿಡ ನೋಡೋಣ ಅಂತ ಗಾಳಿಹಣ್ಣು... ಹಿಡಿಯಾಕಾಗ್ಲಿಲ್ಲ... ಆಮೇಲೆ ನೀರಿಗೋಗೊನು ನೀರುಮಟ್ಟ ನೋಡ್ತಾ ಕೂತ್ಕೊಂಡ. ಕಲ್ಲು ಸಿಕ್ಕಿಲ್ಲ, ಗಾಳಿಹಣ್ಣು ಸಿಕ್ಕಿಲ್ಲ. ಈ ಹೊಳೆಗೋಗಿ, ಹೊಳೆತಕ್ಕವೋಗಿ, ನೀರಾಗಿ ಇಳಿತಾವ್ನೆ. ನೀರು ಮಟ್ಟಾಕಟ್ತಾನೆ, ನೀರು ಬಾಚ್ಕೊಂಡು. ಆ ನೀರು ಅವನಿಗೆ ಮಟ್ಟ ಕಟ್ಟಾಕೇ ಆಯ್ತದ? ನೀರು ಬಗಚು ಒಂದು ತಕ್ಕೇ ಆಗಾಕಿಲ್ಲ. ನಮ್ಮ ಗಿರಿಯಮ್ಮನಂತವ್ಳು, ಒಬ್ಬ ಅಜ್ಜಿ ಓಯ್ತಿದ್ಲು. ಅವಜ್ಜಿ ಬಂದು ಯಾರಪ್ಪ ಇಂಗೇ ನೀರಾಗೇ ಕುಂತಿದ್ದೀ, ಯಾಕೋ ಮಗಾ ನೀರಿನೊಳಗೆ ಕುಂತಿದ್ದೀಯಾ ಅಂದ್ಲು. ವೋಗಮ್ಮ... ನಿಂದೊಳ್ಳಿ ಕಥೆಯಲ್ಲ ಅಂತ ಹೇಳಿದ್ಲು. ಅವಾಗ ಅವ್ಳೇನೆಂದ್ಲು ಮತ್ತೆ ಒಳ್ಳೆದಾಯ್ತು, ಏಳಪ್ಪಾ ಅದೇನು ಅಂತ ಕಷ್ಟ ? ಮತ್ತೆ ನನ್ನ ಎಂಡ್ರು ಅರಿಸೋದಾದ್ರೂ ಅರಿಸ್ತೀನಿ, ಮತ್ತೇ ತಿರ್ಸೋದಾದ್ರೂ ತೀರಿಸ್ತೀನಿ, ಬಂದ ಕಷ್ಟ ನಾನು, ಅದೇನು ಅಂತ ವಿಚಾರಣೆ ಮಾಡ್ತೀನಿ ಹೇಳಪ್ಪಾ ಅಂತ ಅಂದ್ಲು. ಮತ್ತೆ ನನ್ನ ಎಂಡ್ರು ತಲೇನೋವು ಬಂದು ಮನೀಕ್ಕೊಂಡುಬಿಟ್ಟವ್ಳೇ, ಒಂದವಾರ ಆಯ್ತು, ಮ್ಯಾಕೇ ಎದ್ದಿಲ್ಲ ಅಂದ.

ಮತ್ತೆ ಗಾಳಿಹಣ್ಣು, ನೆಟ್ಟಾನೆ ಕಲ್ಲು, ನೀರಿನಮಟ್ಟ ಕಟ್ಕೊಂಡು ತಗೋಬಂದ್ರೆ, ನನ್ನ ತಲೆನೋವು ಬಾಧೆ ಎಲ್ಲಾ ಓಯ್ತದೆ ಅಂತ ಹೇಳಿದ್ಲು. ಅದಕ್ಕೆ ಬಂದಿದೀನಿ ಕಣಮ್ಮ. ನೆಟ್ಟಾನೇ ಕಲ್ಲು ಸಿಕ್ಲಿಲ್ಲ, ಗಾಳಿಹಣ್ಣು ಸಿಕ್ಲಿಲ್ಲ, ನೀರೇ ಮಟ್ಟಾ ಕಟ್ಕೆಂದು ಕುಂತಿದೀನಿ ಅಂದ. ಅವಾಗ ಆಯಮ್ಮ ಏನಂದ್ಲು ? ಅವಳು ಗೂಡೆ ಹೊತ್ಕೊಂಡು ಬತ್ತಿದ್ಲು. ಇವ್ಳು ಏನ್ಮಾಡಿದ್ಲು "ಅಯ್ಯೋ ಮಂಕು ಒಡ್ಡಿ ಮಗನೇ, ಅವ್ಳ ಯಾವನೋ ಮಡಿಕ್ಕೊಂಡವ್ಳೆ, ಅದಕ್ಕೆ ಯಿಂಗೆಲ್ಲಾ ಹೇಳವಳೆ. ನೀನು ಅದು ಗೊತ್ತಿಲ್ದೇ ಬಂದಿದ್ದೀ ಅಂದಳು. ಅದಕ್ಕೆ ಅವನು ಅಮ್ಮೋ ಇದೇನಮ್ಮ ಇಂಥ ಮಾತಾಡ್ತೀಯಾ ನೀನು ? ನನ್ನ ಹೆಂಡ್ರು ಅಂತವ್ಳು ಅಲ್ಲ ಕಣಮ್ಮ ಅಂದ. ಅಯ್ಯೋ ಒಳ್ಳೆ ಆಸಾಮಿ.... ನಾನು ಬತ್ತೀನಿ, ನಿನ್ನ ಮನೇ ಎಲ್ಲದೇ ತೋರ್ಸು. ಅವಾಗ ನಾನು ನಿನ್ನೆಂಡ್ರು ಎಂಥವಳು ಅಂತ ತೋರ್ಸಿಕೊಡ್ತೀನಿ ಅಂದಳು. ಅಯ್ಯೊ ಆಯ್ತು ನಡಿಯಮ್ಮ ಅಂತ ಅಂದ.

ಅವಳು ಅವನ್ನ ಪೆಟ್ಟಿ ಒಳಗೇ ಕುಂಡ್ರಿಸಿಕೊಂಡ್ಲು. ದೇವ್ರು ಅಂತ ಕೊಂಡ್ರಿಸ್ಕೊಂಡು, ತಲೇಮೇಲೆ ಹೊತ್ಕೊಂಡು, ಓಯ್ತಾ ಇದ್ಲು. ಆಮೇಲೆ ಇವ್ನು ಇದೇ ದಾರೀ ಇದೇ ದಾರಿ ನಮ್ಮೊರಿಗೆ ಅಂದ. ತಗೊಂಡ್ ಓಯ್ತಾ ಇದ್ದವಳಿಗೆ, ಇದೇ ಕಣಮ್ಮ ನಮ್ಮನೆ. ನಡಿಯಮ್ಮ ಅಂತ ತೋರ್ಸಿದಾ. ಇವ್ಳು ಮನೇ ಒಳಕ್ ಹೋದ್ಲು. ಮುಂದಕೋದ್ಲು. ಅವನ ಎಂಡ್ರು ಬಾಗಿಲಲ್ಲಿ ನಿಂತಿದ್ಲು. ತಾಯಿ ಮತ್ತೇ ತಣಗ್... ಬಂದ್ಬಿಟ್ಟು. ಸಂಜೆ ಆಯ್ತು ನಾನು ಓಗಾಕೇ ಆಗೋಕಿಲ್ಲ ದೇವ್ರು ಹೊತ್ಕೊಂಡು, ಹೊತ್ತು ಮುಳುಗಿ ಕತ್ತಲು ಬಂದುತ್ತಲ್ಲ. ಇವತ್ತು ರಾತ್ರಿ ಇಲ್ಲೇ ಮಲಿಕ್ಕೋಂತೀನಿ ಅಂದಳು. ಅವಳು ಏನ್ಮಾಡಿದ್ಲು? ಅಯ್ಯೋ ಬಾರಮ್ಮಾ ಒಳ್ಳೆದಾಯ್ತು ಕುಂತ್ಕೋ ಬಾ ಅಂತ, ಕರ್ಕೊಂಡೋದ್ಲು ಒಳಕ್ಕೆ. ಇಲ್ಲೇ ಇರುವಂತೆ ಬಾಕ್ಕ

ಅಂತ ಆಮೇಲೆ ಕರ್‍ಕೊಂಡೋಯ್ತಾ್ತಲೂವೆ ಕುಡಿಯಾಕೆ ತಣ್ಣಗೆ ಒಂದಿಷ್ಟು ಹಾಲು ಕೊಡವ್ವ ಅಂದ್ಲು ಮುದುಕಿ. ಅವಳು ಕೊಟ್ಟ ಹಾಲು ಕುಡಿದಳು. ಕೂತ್ಕೊಂಡ್ಳು ಮುದುಕಿ ದೇವ್ರ ಗೂಡೇಮರದ ಪಕ್ಕದಲ್ಲಿ. ಒಂದ್ ಹೊತ್ನಲ್ಲಿ ಅಲ್ಲಿ ಆಗ ಗೌಡ್ರ ಮಗ ಎಲ್ಲಾ ಬಂದ್ರು, ಅವ್ರು ಬರುತ್ಲೇಯಾ ಇವಳೇನು ಮಾಡ್ಬಿಟ್ಲು? ಗೌಡ್ರ ಮಗನ್ನ ಮಡಿಕ್ಕೆಂಡಿದ್ಲಲ್ಲ, ಆಗ ಏನ್ಮಾಡಿದ್ಲು ? ಊಟ ಅದು ಇದು ಬೇಕಾದ್ದು, ಬೇಡವಾದ್ದು ತಿಂಡಿ ತೀರ್ಥ ಎಲ್ಲಾ ಮಾಡ್ಕೊಂಡು ತಿನ್ನಿಸಿ ಕಳಿಸಿದ್ಲು. ಅವನ್ನ ಕಳಿಸ್ತೂಲೂವೆ ಇನ್ನ ಇವಳಿಗೆ ಮುದುಕಿಗೆ ಕಣ್ಣು ಕಾಣಕಿಲ್ಲ. ಆಗ ಒಂದಿಷ್ಟು ನೀರು ಕೊಡವ್ವ, ಕೈಕಾಲು ತೊಳ್ಕೋತಿನಿ ಅಂತ ಅಂದ್ಲು. ಆವಾಗ ಕೈಕಾಲು ಮುಖ ಯೆಲ್ಲಾ ತೊಳ್ಕೋತಿದ್ಲು. ದೇವ್ರಿಗೆ ಪೂಜೆ ಮಾಡೋಕೆ ಕಣವ್ವ ಅಂತ ಅಂದ್ಲು. ಆಮೇಲೆ ಒಂದಿಷ್ಟು ಗೂಡೆ ಬಾಯಿ ತೆಗೆದ್ಲು. ಆ ಬುಟ್ಟಿಬಾಯಿಲಿ ಇವನು ಎಲ್ಲಾನೂ ನೋಡ್ಕೊಂಡ, ಕುಂತಿದವ್ನು ಗಂಡ. ಆಮೇಲೆ ನನ್ನ ದೇವ್ರಿಗೆ ಒಂದಿಷ್ಟು ಎಡೆ ಮಾಡ್ತೀನಿ ಕಣವ್ವ ಅಂತ ಅಂದ್ಲು. ಆಗ ಎಡೆ ಮಾಡ್ತೀನಿ ಅಂತ ಆ ದೇವ್ರಿಗೆ ಒಂದಿಷ್ಟು ಎಡೆನೂ ಮಾಡಿದ್ಲು. ಆಮೇಲೆ ಎಡೆಮಾಡಿ ಆಗ ಅವರು ಒಂದಿಷ್ಟು ಊಟ ಮಾಡಿ ಕೂತ್ಕೊಂಡ್ರು. ಅವಳು ಅಂಗೇ ಮಲಿಕ್ಕೊಂಡ್ಲು. ಒಂದು ಹೊತ್ತನಲ್ಲಿ ರಾಗಿ ಬೀಸಕ್ಕೆ ಎದ್ಲು. ಅವಮ್ಮ ಎದ್ದುಲೂತೇಯಾ ಇವ್ಳೇನ್ ಅಂದ್ಲು ಮುದುಕಿ ''ತಾಯಿ ನಾವು ಹಿಂದಿನ ಕಾಲದಲ್ಲಿ ಪದ ಹೇಳ್ಕೊಂಡು ರಾಗಿ ಬಿಸತಿದ್ದೋ ಕಣವ್ವ. ರಾಗಿ ಬಿಸಬೇಕಲ್ಲ ಪದ ಹೇಳ್ಕೊಂಡು ? ನಾನು ಬೀಸ್ತೀನಿ ಅಂತ ಅಂದ್ಲು. ಅಯ್ಯೋ ಬೇಡಕಣಮ್ಮ ನಾನೇ ಬೀಸ್ತೀನಿ ನೀನು ಮನಿಕ್ಕೊಳಮ್ಮ.

ಸುಮ್ನೇ. ಪಾಪ ನೀನು ಸಂಜೆವರೆಗೆ ದೇವ್ರು ಹೊತ್ಕೊಂಡು ಸಾಕಾಗ್ಯದೆ ಮಲಿಕ್ಕೋಳಮ್ಮ ಅಂದಳು. ಇಲ್ಲ ಕಣಮ್ಮ ನಾನೂ ಬೀಸ್ತೀನಿ. ನನಗೆ ಕುಂತ್ಕೊಂಡಿರಕಾಗೋಲ್ಲ, ಬೀಸ್ತೀನಿ ಪದ ಹೇಳ್ಕೊಂಡು ನಿನ್ನ ಜೊತೆಯ ಅಂತ ಅವಳು, ಕಲ್ಲು ಹಿಡ್ಕೊಂಡ್ಲು. ಕಲ್ಲು ಹಿಡಕ್ಕೋತ್ಲೂವೆಯಾ ಪದವಾ ಹೇಳವ್ವ ಪದವಾ, ಹಿಂದಿನ ಕಾಲದಾಗೆನ ಪದ ಹೇಳವ್ವ ಅಂದ್ಲು. ಆಮೇಲೆ ಅವಳು, ''ನನಗೆ ಬರಾಕಿಲ್ಲ ಕಣಮ್ಮ ಅಂದ್ಲು. ಇಲ್ಲ ಹೇಳಮ್ಮ ಹೇಳಮ್ಮ ಅಂತ ಇವ್ಳು ಹೇಳಿದ್ಲು. ಅವಾಗ ಏನಂದ್ಲು -

ನನ್ನ ಗಂಡ ಬರುವ ದಾರೀಲೀ
ಹಾವಾರ ಕಡಿಬಾರುದ ಚೇಳುನಾರ ಕಡಿಬಾರುದ
ಸತ್ತೆಂಬ ಸುದ್ದಿ ಬರುಬಾರುದ ಜೋಕುಮಾರ!
ನನ್ನ ಮಿಂಡ ಬರುವ ದಾರೀಲೀ
ಕಲ್ಲಾರ ಇರುಬೇಡ ಮುಳ್ಳಾರ ಇರುಬೇಡ
ಸಣ್ಣ ಮಲ್ಲಿಗೆ ಹರುವಿರಲೀ ಜೋಕುಮಾರ!

ಅಂತ ಅವಳು ಹೇಳಿದ್ಲು.,ಯಾರು ? ಆಯಮ್ಮ. ಹಂಗಂತ ಹೇಳಿದ್ಲು. ಇವನ

ಹೆಂಡ್ರು. ಅಕ್ಕಿ ಜೊತೆ ಬೀಸ್ಕ್ಕೊಂತ. ಗಂಡನ ಕಳಿಸಿದ್ಲಲ್ಲ ? ಆ ಗಂಡಂಗೆ ಹಾವು ಕಡೀಲಿ, ಚೇಳು ಕಡೀಲಿ, ಅಂತವ ಹೇಳಿದ್ಲು. ನನ ಗಂಡ ಬರೋ ದಾರೀಲೀ ಅವನು ಮನಿಗ್ ಬರದಂಗೆ ಅವನಿಗೆ ಹಾವು ಚೇಳು ಕಡಿದು ಸತ್ತ್ಹೋಗ್ಬಿಡ್ಲೀ, ನೆಟ್ಟಾನೆ ಕಲ್ಲು, ಗಾಳಿಹಣ್ಣು ತರೋಕೆ ಹೋದವ್ನಿಗೆ, ನನ್ನ ಮಿಂಡ್ ಬರೋ ದಾರೀಲಿ ಒಂದು ಕಲ್ಲು, ಮುಳ್ಳು ಏನೂ ಇರಬೇಡ, ಸಣ್ಣ ಮಲ್ಲಿಗೆ ಎಲ್ಲ ಹರವಿರಲಿ ಅಂತ ಹೇಳಿದ್ಲು. ಇವಳು ಹೇಳಿದ್ಲು. ಆಮೇಲೆ ಈ ಮುದುಕಿ -

ನನ್ನ ಹೆಂಡ್ರು ಸತ್ಯವಂತೇ
ನನ್ನ ಹೆಂಡ್ರು ದೃಢವಂತೇ
ನಿನ್ನ ಮಡದಿ ಆಡಿದ ಮಾತ ಕೇಳಿದ್ಯೇನೋ ಜೋಕುಮಾರ!

ಸತ್ಯವಂತೆ ನನ್ನ ಮಡದಿ
ದೃಢವಂತೆ ನನ್ನ ಮಡದಿ
ನಿನ ಮಡದಿ ಆಡಿದ ಮಾತ ಕೇಳಿದ್ಯನೋ ಜೋಕುಮಾರ.

ಮೂಲೇಲಿ ಇರುವಂಥ ಲಕುಡಿಯ ತಕ್ಕೊಂಡು
ಗ್ಯಾನ ಬಂದಂಗೆ ತದುಕಪ್ಪ ಜೋಕುಮಾರ.

ಈಕೆ ಕೇಳಿದ್ಲು. ಯಾರು ? ಮುದುಕಿ ಹೇಳಿದ್ಲು ಅವನಿಗೆ. ಇದನ್ನ ಗೂಡೆ ಹೊತ್ಕೊಂಬಂದಿದ್ಲಲ್ಲ ಆಕೆ ಹೇಳಿದ್ಲು. ಗಂಡನ್ನ ಗೂಡೇಲಿ ಕೂಡಿಸ್ಕಂಬಂದಿದ್ಲಲ್ಲ ಅವನಿಗೆ ಗೂಡೆ ಒಳಕ್ಕೇ ಈವಾಗ ನನ್ನ ಹೆಂಡ್ರು ಸತ್ಯವಂತೆ ದೃಢವಂತೆ ಅಂತ ಹೇಳ್ತಿದ್ದಲ್ಲ. ಈಗ ಅವಳು ಆಡಿದ ಮಾತು ಕೇಳಿದಾ ಅಂತ ಹೇಳಿದ್ಲು.

ಗಂಡಂಗೆ ಅರ್ಥ ಆಗೋ ಪದನಾಗೆ ಹೇಳಿದ್ಲು. ಪದನಾಗೇ ನನ ಹೆಂಡ್ರು ಸತ್ಯವಂತೆ, ನನ್ನ ಹೆಂಡ್ರು ದೃಢವಂತೆ ಅಂತ ಹೇಳ್ತಿದ್ದೆಯಲ್ಲಾ ಅಂತ ಪದನಾಗೇ ಹೇಳಿದ್ಲು. ಆಗ ಹಾಕಪ್ಪ ಅಗಣಿಯ, ನೂಕಪ್ಪ ಕದವಾನ, ಮೂಲೇಲಿರೋ ದೊಣ್ಣೆ ತಗೊಂಡು ಗ್ಯಾನ ಎಂದಂಗೆ ತದಕಪ್ಪ ಅಂತ ಹೇಳಿದ್ಲು. ಅವನು ಆಗ ಅಗಣಿ ಹಾಕ್ದ, ಕದ ಹಾಕ್ದ, ಮೂಲೇಲಿರೂ ದೊಣ್ಣೆ ತಗೊಂಡು ಯೆಂಡ್ತಿಗೆ ಚೆನ್ನಾಗಿ ತದ್ಕ್ದ.

ಹೇಳಿದವರು : **ಕೆಂಪಮ್ಮ**, 35ವರ್ಷ, ಹರಿಜನ, ಕಾಡಸೂರು ಮುದಗೆರೆ, ತುರುವೇಕರೆ ತಾಲ್ಲೂಕು.

# ೧೮. ಮರಗೋಟಿ

ಚುಂಚನಗಿರಿ ಅನ್ನೋದು ಒಂದು ಪಟ್ನ. ಆ ಊರ್ನಾಗೇ ಗಂಡ ಎಂಡ್ತಿ ಇಬ್ರೂ ಆಳೀದ್ರೂ. ಅವರ್ಗೆ ಎಷ್ಟು ದಿನಾ ಆದ್ರೂ ಮಕ್ಳು ಆಗ್ಲೇ ಇಲ್ಲ. ಆಗ ಏನ್ಮಾಡಿದ್ರೂ? ಭೈರೂ ಸ್ವಾಮೀಗೆ ಹೋಗ್ಬಿಟ್ಟು 'ಸ್ವಾಮಿ ನಂಗೆ ಎಷ್ಟು ದಿನಾ ಆದ್ರೂ ಮಕ್ಕಳಾಗ್ಲಿವಲ್ಲ. ನನಗೆ ಮಕ್ಕಳ ಕೊಡ್ಬೇಕು, ಅಂತ ವೋಗಿ ಕೇಳಿದ್ಲೂ. ಆಗ ದೇವ್ರು ಪ್ರತ್ಯಕ್ಷ ಆಗಿ ಅಮ್ಮ ಮಕ್ಕಳಾಗ್ತವೇ ಒಂದ್ ಹೆಣ್ಣು ಒಂದ್ ಗಂಡು, ಎರಡು ಮಕ್ಕಳಾಗ್ತವೆ. ಮಕ್ಕಳಾದ್ರೆ ನೀವು ಉಳಿಯಲ್ಲ ಗಂಡ ಎಂಡ್ತಿ. ಮಕ್ಕಳು ಮಾತ್ರ ಉಳ್ಕೊಂತಾವೆ. ಆದ್ರೂ ಪರ್ವಾಗಿಲ್ಲ. ನಾವು ಉಳ್ಕಾದಿದ್ರೂ ಪರ್ವಾಗಿಲ್ಲ. ಮಕ್ಳು ಮಾತ್ರ ಕೊಡ್ಬೇಕು. ನಿಂಗೆ ಗಂಡ್‌ಕತ್ತರಿ ಆಕ್ತೀನಿ. ಮಕ್ಕಳ ಫಲ ಕೊಡ್ರಿ, ಅಂತ ಹೇಳಿದ್ಲು ಆಯಮ್ಮ.

ಆಗ ಅತು ಅಂತ ಹೇಳಿ ತೀರ್ಥ ಪ್ರಸಾದ ಕೊಟ್ಟು ಕಳಿಸಿಕೊಡ್ತು ದೇವ್ರು ಭೈರೂಸ್ವಾಮಿ. ಆಗ ಬಂದ್ಲು ಆಯಮ್ಮ. ನೀರು ಉಯ್ಕೊಂಡ್ಲು. ಒಂದ್ ಗಂಡು, ಒಂದ್ ಎಣ್ಣು ಮಕ್ಕಳಾದ್ವು. ಹದಿನಾರು ಒಂಭತ್ತು ತಿಂಗ್ಳು ತುಂಬಿ ಮಕ್ಕಳಾಗೂತಲೂವೆ, ಆಗ ಎರಡು ಮಕ್ಕಳಾದಾಗ ಆ ಮಕ್ಳು ಅಷ್ಟಾಗಿ ಇಷ್ಟಾಗಿ ಆಡಂಗೆ ಆದೋ. ಆ ಗಂಡ್ ಮಗಿಗೊಮ್ಮೆ ಸ್ನಾನ ಎಲ್ಲಾ ಮಾಡ್ಸೀ ಅದಕ್ಕೆ ಒಳ್ಳೆ ಅಂಗಿ ಹಾಕಿದಳು. ಆಡಾಕ್ ಗಂಡು ಮಗೂ ಹೋಯ್ತು. ಆಗ ಗಂಡ ಎಂಡ್ತಿ ಇಬ್ರೂ ಮನೇ ತವ ಇದ್ದರಲ್ಲ ? ಇವ್ರ ಪಡಸಾಲೆ ಒಳ್ಗೆ ಕೂತಿದ್ರು. ಹೆಣ್‌ಮಗುನು ಹೋಯ್ತು. ಗಂಡ ಹೆಂಡತಿ ಮಕ್ಕಳನ್ನು ನೋಡ್ಬಿಟ್ಟು ಸಂತೋಷ ಆಯ್ತು. ಆಗ ಅಪ್ಪನತಕ್ಕೆ ಗಂಡು ಮಗು ಹೋಯ್ತು. ಹೆಣ್‌ಮಗು ತಾಯಿ ತಕ್ ಬಂತು. ಆ ಮಗ ಎತ್ಕೊಂಡು ಮುದ್ದಾಡ್‌ಬಿಟ್ಟು ಪಕಪಕನೆ ನಕ್ಕರಲ್ಲ. ಸತ್ತೋಗ್‌ಬಿಟ್ರು! ಸತ್ತೋದಾಗ ಅಕ್ಕಪಕ್ಕದಾಗಿದ್ದವ್ರು ನಿಮ್ಮಂತವರೂ, ಅವ್ರು ಇನ್ನೇನು ಇಂಗೇ ಬಿಡಕ್‌ಆಗ್ತದ ? ಆಗ ತಕ್ಕೊಂಡೋದ್ರು ದಫನ್ ಮಾಡಿದ್ರು. ಮಕ್ಳು ಸಾಕೋರು ಯಾರು ಇಲ್ಲ. ಅಕ್ಕಪಕ್ಕದಾಗಿದವ್ರು ಮಾಡಿದ್ನೇ ಇಷ್ಟು ಕೊಟ್ಕೊಂಡು ಹಿಂಗೇ ಬಳ್ಕೊಂಡು ಇಂಗೆ ಇಂದ್ಬಿಟ್ರು.

ಆಗ ನಿಮ್ಮಂಥ ಗೌಡನೇಯ ಬಾರೋ ಮಗ ನಮ್ಮೂರ ಬಾಳೇಗಿಡದಾಗೇ ಬಾಳೇಗಿಡ ಅಗ್ತೆ ಮಾಡ್ಬೇಕು ಬಾರಪ್ಪ ತೋಟಕ್ಕೆ ಅಂತ ಆ ಗಂಡು ಮಗನ ಕರ್ಕೊಂಡು ಹೋದ್ರು. ಆಗ ಹೆಣ್ಣು ಮಗ ಏನಂತು ಅಣ್ಣಯ್ಯ ನಾನೊಬ್ಬೆ ಇರೊಣೆನೋ ಅಣ್ಣಯ್ಯ ನಾನು ಬತ್ತೀನಿ ಅಣ್ಣಯ್ಯ ಅಂತು. ಅಂಗಂದಾಗ ಈ ಮಗನೂ ಕರ್ಕೊಂಡು ಒಂದು ಗೋಣಿಚೀಲ ತಕ್ಕೊಂಡು ತೋಟಕ್ ಹೋದ್ರು.

ಒಂದು ಮಾವಿನಮರ. ಮಾವಿನ ಮರದಡಿ ಆ ಗೋಣಿಚೀಲ ಹಾಕ್ಬಿಟ್ಟಿದ್ದೆ, ಈ ಹೆಣ್‌ಮಗ ಕುಂಡ್ರಿಸಿ ಬಾಳೆಗಿಡ ಅತ್ತೆ ಮಾಡ್ತ ಇದ್ರು. ಆ ಬಾಳೆಗಿಡ ಅತ್ತೆ ಮಾಡ್ತ ಇದ್ದೇನಾಗ

ಒಂದು ಮಾವಿನಣ್ಣು ಬಿದ್ದಿತ್ತು. ಆ ಮಾವಿನಹಣ್ಣು ಬೀಳ್ತೂಲೂವೆ 'ಅಣ್ಣಯ್ಯ ಒಂದ್ ಹಣ್ಣು ಬಿದ್ದೈತೆ ಅಂದ್ಲು ಹೆಣ್ ಮಗು; ಅವ್ವ ಹಣ್ಣು ಬಿದ್ದಿದ್ರೆ ತಗೊಂಡು ತಿನ್ನು ಅಂದ. ತಿನ್ನಾಕ್‌ತಕಂಡು ನೋಡೋದ್ರೊಳ್ಗೆ ಒಳ್ಗೇ ಹುಳಾ ಇತ್ತು ಅದರಾಗೊಂದು. ಅಣ್ಣಯ್ಯ ಇದರೊಳಗೆ ಉಳ ಐತೆ ಅಂದ್ಲು. ಹುಳಾ ಇದ್ರೆ ತಿನ್ಬೇಡ ಅಂಗೆ ಮಡಿಕ್ಕೋಳವ್ವ, ಮನೀಗ್ ವೋಗಿ ತಿನ್ನಾಣ ಅಂತ ಅಣ್ಣಯ್ಯ ಹೇಳ್ದಾ. ಸಾಯಂಕಾಲ ತನ್ಕ ಅತ್ತೆ ಮಾಡ್ಕೊಂಡು ಸಾಯಂಕಾಲ ಅಣ್ಣ, ತಂಗಿ ಇಬ್ರೂ ಮನೆಗೆ ಬಂದ್ರು. ಮನೆಗೆ ಬಂದಾಗ ಕುಡ್ಲು ಇತ್ತಲ್ಲ? ಕುಡ್ಲು ತಗೊಂಡು ಆ ಹುಳ ತೆಗೆದುಬಿಟ್ರು. ಒಂದು ಪಾವು ಇತ್ತು. ಪಾವಿಗೆ ಹಾಕ್ಬಿಟ್ರು ಅವಣ್ಣು ಕುಯ್ಕೊಂಡು ತಿಂದ್ರು.

ಆ ಹುಳ ಏನ್ಮಾಡ್ತು ? ಬೆಳಕು ಹರಿಯೋದರೊಳ್ಗೆ ಪಾವಿನ ಉದ್ದಕ್ಕೂ ಗಾತ್ರಕ್ಕೂ ಆಯ್ತು. ಈ ಮಕ್ಕಳು ನೋಡಿದ್ರಲ್ಲ ? ಯಾತಕ್ಕಾಗಿ ಇದು ಇಂಗೆ ಆಗುತ್ತಲ್ಲ ಅಂದರು. ಅಂದಿದ್ದೆಯಾ ತಿರ್‍ಗಾ ಇನ್ನೊಂದು ಬೆಳಿಗ್ಗೆಗೆ, ಅಚ್ಚೇರಿತ್ತು, ಅಚ್ಚೇರ್‍ಗೆ ಹಾಕಿದ್ರು. ಅದು ಅಚ್ಚೇರಿನುದ್ದಕ್ಕೂ ಆಯ್ತು, ಗಾತ್ರಕ್ಕೂ ಆಯ್ತು. ಇನ್ನೊಂದು ಬೆಳ್ಗೆ ಸೇರಿತ್ತಲ್ಲ, ಆ ಸೇರಿಗಾಕಿದ್ರು. ಆ ಸೇರಿನುದ್ದಕ್ಕೂ ಸೇರಿನಗಾತ್ರಕ್ಕೂ ಆಯ್ತು. ಪ್ರತಿಯೊಂದು ದಿವ್ಸಕ್ಕೂ ಒಂದೊಂದು ರಾತ್ರಿಗೆ ಒಂದೊಂದು ತರಾ ಆಯ್ತು. ಕೊಳಗಿತ್ತು ಕೊಳಗಕ್ಕೆ ಹಾಕಿದ್ರು. ಕೊಳಗ್ ಉದ್ದಕ್ಕೂ ಕೊಳಗ್ ಗಾತ್ರಕ್ಕೂ ಆಯ್ತು. ಆಗ ಈ ಗಂಡಮಗ ಅಷ್ಟೊತ್ತಿಗಾಗ್ಲೆ ಒಂದಿಟ್ಟುದ್ದ ಮಗ ಆದ, ಈ ಉಳ ಯಾತ್ರಾಗ್ಹಾಕಿದ್ರೂ ಇಷ್ಟುದ್ದ ಇಷ್ಟು ಗಾತ್ರ ಆಗ್ತದಲ್ಲ, ಈ ಅರಮನೆ ಒಳಗಿದ್ದನ್ನೆಲ್ಲ, ಮನೆ ಉದ್ದಕ್ಕೂ ಮನೆ ಗಾತ್ರಕ್ಕೂ ಆದ್ರೆ, ನಮ್ಮನ್ನ ಬಿಡುತ್ತಾ ? ನಮ್ಮನ್ನ ಬಿಡಲ್ಲ. ಅಮ್ಮ ನಡೀ ನಾವೆಲ್ಲರೂ ಹೋಗಿ ಬಿಡೋಣ ಅಂತ ಹೇಳ್ಬಿಟ್ಟು ಹೊರಟ್ರು. ಹೋಗ್ಬೇಕಾದ್ರೆ, ಅವತ್ತು ಮಳೆ ಜಿಡಿ. ದನ ಕರೀನವು ನಮ್ಮಜ್ಜಿ ಅಂತವು ಒಳಗೇ ದನ ಮೇಯಿಸ್ತಾ ಇದ್ರು. ಆ ಮನೆಗೊಡೆಗೆ ಬೆಂಕಿ ಹಾಕ್ಕೊಂಡು ಕಾಯ್ಸಿಕೊಂಡಿದ್ರು.

ಇವ್ರು ಯಾವಾಗ ಮನೆಯಿಂದಾಚೆಗೆ ತೆಗೆದ ಕದ ತೆಗೆದ್ಹಂಗೆ ಬಿಟ್ಟು ಹೊರ್‍ಟ್ರಲ್ಲ ? ಅಣ್ಣ ತಂಗಿ ಇಬ್ರೂನೆ. ಹುಳ ಉರುಡಿ ಉರುಡಿ ಹಿಂದೆ ವೋಗ್ತಾ ಐತಿ. ಉಳ ಬಂತು. ಉಳಾ ನೋಡ್ಬಿಟ್ಟು, ಈ ಉಳಾ ಎಲ್ಲೋದ್ರೂ ನಮ್ಮ ಹಿಂದೆ ಹಿಂದೆನೆ ಬರ್‍ತದಲ್ಲ ? ಇದಕ್ಕೇನು ಮಾಡೋದು ? ಅಂತ ಹೇಳಿ ಅಜ್ಜಿ ತವ ಹೋದ್ರು. ''ಅಜ್ಜಿ ಬೆಂಕಿ ಹಾಕಿದ್ರಲ್ಲ ? ಅಜ್ಜಿ ಇಲ್ಲೊಂದು ಹುಳ ನಮ್ಮನ್ನ ತಿನ್ನಾಕೆ ಅಂತ ಬರ್‍ತಾ ಐತೆ. ಅದು ಹುಡ್ಗ್ರು ಬಂದ್ವ ಅಂತ ಕೇಳುತ್ತೆ. ಇಲ್ಲ ಬೆಂಕಿಗೆ ಹಾರಿ ಸತ್ಹೋದ್ರು ಅಂತ ಹೇಳ್ಬಿಡು ಅಂತ ಎರ್‍ಡು ಮಕ್ಕಳು ಹೇಳಿದ್ರು. ಅವಾಗ ಆಲಿಗ್ಹಂಟ ಮುಂದಕೆ ಹೋದ್ರು.

ಉಳಾ ಅಲ್ಲಿಗೂ ಬಂತು. ಅಲ್ಲಿ ಬಂದಾಗ ಉಳಾ ಕೇಳ್ತು: 'ಅಜ್ಜಿ ಎರಡಾಳು ಹುಡುಗ್ರು ಬಂದ್ವಲ್ಲ ಎತ್ಲಾಗ್ ಹೋದ್ರು ? ಇವ್ಬೈನ್ ಮಾಡ್ತು ಉಳಾ ತಿನ್ನಾಕೆ ಬರುತ್ತೇ ಅಂತ್ಲೂವಾ ಹಾರಿ ಬೆಂಕಿಗೆ ಬಿದ್ದು ಸತ್ಹೋಗ್ಬಿಡ್ತು ಅಂತು.

ಇವ್ನು ಮಕ್ಳು ಸತ್ಮೇಲೆ ನಾನಿನ್ಯಾಕೆ ಇರೋಣ ? ಗಂಡಗಾತ್ರ ಆಗ್ತೀನಿ ಅಂತ ಹೇಳಿತ್ತಲ್ಲ? ದೇವ್ರಿಗೆ ಹುಳ ? ಅದು ಆತರ ಕಾಯ್ತಾ ಇತ್ತು ಮಕ್ಳನ, ಉಳಾ ಕಾಯ್ತಾ ಇತ್ತು. ಉಳದರೂಪದಲ್ಲಿ ದೇವ್ರು ಬಂದು ಕಾಯ್ತಾ ಇತ್ತು. ಆಗ ಇನ್ನು ಮಕ್ಳು ಬೆಂಕಿಗೆ ಬಿದ್ದು ಸತ್ತೋದ್ವು ಅಂತ ಹೇಳ್ತಲ್ಲ ಅಜ್ಜಿ; ಆ ಮಕ್ಳು ಹೋಗ್ಬಿಟ್ಟು, ಅಂತ ಹುಳ ಉರುಳಿ ಬಿದ್ಬಿಡ್ತು ಬೆಂಕಿ ಒಳಕ್ಕೆ. ಆಗ ಇವ್ರು ಉಳಾ ಬಿದ್ರೇ ಕೇಳ್ಬೇಕಾ ? ಅವರು ಜಾಸ್ತಿ ಇನ್ನೊಂದಿಷ್ಟು ಸೌದೆ ಆಕಿದ್ರು. ಚೆನ್ನಾಗಿ ಸುಟ್ಟಾಕಬಿಟ್ರು. ಆಗ ಇವ್ರು ಮಕ್ಳು ಮುಂದಕ್ಕೆ ಹೋಗ್ಬೇಕಾದ್ರೆ, ಆ ಹುಳಾ ಯಾವಾಗ್ ಸತ್ತೋಗ್ ಬಿಡ್ತಲ್ಲ, ಮಕ್ಳು ಸಮರ್ಥ ಮಕ್ಳು ಆದ್ರು. ಇಬ್ರೂವೇ ಅಣ್ಣ-ತಂಗಿ ಇಬ್ರೂವೆ.

ಆಗ ಇಲ್ಲಿ ಬೆಟ್ಟ ಬಿಟ್ಟು ಕಲ್ಯಾಣಮಂಟಪಕ್ಕೆ ಹೋಗು ಅಷ್ಟರಕ್ಕೆ ಸಮರ್ಥ ಮಕ್ಳು ಅಣ್ಣ ತಂಗಿ ಇಬ್ರೂವೇ. ಅಣ್ಣಯ್ಯ ತಂಗಿಗೆ ಹೇಳ್ದಾ, ಅವ್ವಾ ನಾನು ನೀನೂ ಇಬ್ರೂ ನಡುವೆ ಸಮರ್ಥ ಮಕ್ಳಾದ್ವು. ಒಂದು ದಾರಿ ಒಳ್ಗೆ ಅಣ್ಣ ತಂಗೇರು ವೋಗ್ತಾ ಇದ್ರೆ, ಈಯಮ್ಮ ಏನಾಗ್ಬೇಕು ? ಅಂತ ನನ್ನ ಕೇಳಿದ್ರೆ ಅಲ್ಲಿಗೆ ನಾನ್ ಏನಂತ ಹೇಳೋದು? ಅಲ್ಲಿಗೆ ನಾನೇ ದೋಷಕ್ಕೆ ಒಳಗಾದೇ. ನಾನು ಬೆಳ್ಳೂರು ದಾರಿ ಒಳಗೆ ವೋಗ್ತೀನಿ. ನೀನು ಚಿಕ್ಕಹಳ್ಳಿ ದಾರಿ ಒಳಗೆ ಹೋಗ್ಬಿಡು. ನೀನು ಒಂದ್ ಪಟ್ಣನೋ, ಪಾಳ್ಯವೋ, ಸೇರ್ಕ್ಕೋ. ನಾನು ಒಂದ್ ಪಟ್ಣವೋ ಪಾಳ್ಯವೋ ಸೇರ್ಕ್ಕೋತ್ತೀನಿ ಅಂತ ಅಣ್ಣಯ್ಯ ತಂಗೀಗ್ ಹೇಳ್ದಾ. ತಂಗಿ ಅಣ್ಣಯ್ಯ ಇಷ್ಟಂತನ್ಕಾನೂ ಒಂದೇಳ್ಳಿವೆ ಹುಟ್ಟಿ ಬೆಳಿದಿದ್ದೆ. ಈವತ್ತು ನಾವು ಬೇರೆ ಬೇರೆ ಆಗೋ ಸ್ಥಿತಿ ಆಯ್ತಲ್ಲ ಅಂದಿದ್ದೆ ತಂಗಿ ಕೊಳ್ಳಾಗ ಕಟ್ಕೊಂಡಿದ್ದೆ ಒಂದಿಷ್ಟು ಅತ್ಲು. ಆಗ ಅಣ್ಣ ತಂಗೀರು ಇಬ್ರೂನೂವೆ ಬೇರೆಯಾದರೂ.

ಚಿಕ್ಕನಹಳ್ಳಿ ದಾರಿ ಒಳಗ್ ತಂಗಿ ಹೊಂಟ್ಲು. ಬೆಳ್ಳೂರ ದಾರಿ ಒಳಗೆ ಅಣ್ಣ ಹೊರಟ. ಅಷ್ಟು ದೂರ ಅಣ್ಣನೂ ವೋದ. ಇನ್ನೊಂದಷ್ಟು ದೂರ ತಂಗೀನೂ ಹೋದ್ಲು. ವೋಗಂದ ವೋಗಂದ ವೋಗೂಲೂವೆ ಅಲ್ಲಿ ಒಂದು ಬಳೇ ಮಲ್ಹಾರ ಬಿದ್ದಿತ್ತು. ಆಗ ತಿರ್ಗಾ ತಂಗಿ ಅಣ್ಣಯ್ಯ ಅಂತ ಕೂಗ್ಕೊಂಡು ಅಡ್ಡಗೋದ್ಲು. 'ಅಣ್ಣಯ್ಯ ನಿಲ್ಲಣ್ಣಯ್ಯ' ಅಂತ ಹೇಳಿ. ಅಲ್ಲಿ ಏಕವ್ವಾ? ಅಂದ. ನಾನು ವೋಗ ದಾರಿ ಒಳಗೇ ಒಂದು ಬಳೇ ಮಲ್ಹಾರ ಸಿಕ್ಕತುಕಣ್ಣಯ್ಯ. ಅದ್ಕೊಸ್ಕೋರ ನಿನ್ನ ಕೂಗ್ಕೊಂಡ ಬಂದೆ ಅಂತ ಅಂದ್ಲು. ಅಮ್ಮ ನಾನು ಬರೇ ದಾರಿ ಒಳಗೆ ಮುದ್ರೆಉಂಗುರ ಸಿಕ್ತು. ನೀನ್ ಬರೋ ದಾರಿ ಒಳ್ಗೆ ಬಳೇಮಲ್ಹಾರ ಸಿಕ್ತು ಅಂತೀಯಾಅಂದ.

ನಾವು ಅಣ್ಣ ತಂಗಿ ಹುಟ್ಟಿದ್ದಕ್ಕೆ ನನ್ನೂರು ಹೆಸ್ರು ಗೊತ್ತಿಲ್ಲ. ನನ್ನ ಹೆಸ್ರು ನಿನ್ಗೊತ್ತಿಲ್ಲ. ನಿನ್ನ ಹೆಸ್ರು ನನ್ಗೊತ್ತಿಲ್ಲ. ಸುಮ್ನೆ ಹುಟ್ಟಿದ್ದು, ಬೆಳೆದ್ದು. ತಾಯಿ ತಂದೆದೀರು ಹೆಸ್ರು ಒಂದು ಗೊತ್ತಿಲ್ಲ. ಇದರೊಳಗೆ ನಾನು ಒಂದು ಪಟ್ಣನೋ ಪಾಳ್ಯವೋ ಸೇರ್ಕೊಂಡು, ಮದ್ವೆ ಮುಂಜಿ ಆದ್ರೇ ನನಗೆ ಗಂಡುಮಕ್ಳು ಹುಟ್ಟಿದ್ರೇ ಮುದ್ರೇ ಕುಮಾರ ಅಂತ ಹೆಸ್ರುಕಟ್ಟೇನಿ. ನೀನು ಒಂದು ಪಟ್ಣವೋ ಪಾಳ್ಯವೋ ಸೇರ್ಕೊಂಡು, ಮದ್ವೆ ಆಗಿ ನಿನ್ಗೊಂದು ಹೆಣ್ಣು ಮಗಳು

ಹುಟ್ಟಿ ಹೆಣ್ಮಗಳು ಆದ್ರೆ, ಬಳೇಬಂಗಾರ್ತಿ ಅಂತ ಹೆಸ್ರು ಕಟ್ಟು. ಅದಕ್ಕೆ ಅಣ್ಣನ ಮಗ ಆದವ್ನೇ ಮುದ್ರೆ ಕುಮಾರ, ತಂಗೇ ಮಗಳು ಆದವ್ಳೇ ಬಳೆಬಂಗಾರ್ತಿ. ಈ ಎರಡು ಗುರ್ತು ಬಿಟ್ರೆ ನಮ್ಗೆ ಇನ್ನೇನು ಗುರ್ತು ಇಲ್ಲ ನಮಗೆ. ನಿನ್ನ ದಾರೀಲಿ ನೀನು ವೋಗು. ನನ್ನ ದಾರೀಲಿ ನಾನ್ ವೋಗ್ತೀನಿ ಅಂತ ಅಣ್ಣಯ್ಯ ಹೇಳ್ದಾ. ಆಗ ಅದೇ ದಾರೀಲಿ ತಂಗೀ ಬಂದ್ಲು. ಅದೇ ದಾರೀಲಿ ಅಣ್ಣಯ್ಯ ವೋದ. ಅಣ್ಣ ತಂಗಿ ಇಬ್ರೂ ಹೋಗ್ಬೇಕಾದ್ರೆ, ತಂಗಿ ಇಷ್ಟ್‌ಗಾತ್ರ ವೊಳ್ಳೆ ತಗೊಂಡು ಹೋಗಿರ್‍ತಾಳೆ. ತಂಗಿ ಸೀದಾ. ಇನ್ನ ಎತ್ಲಾಗೂ ವೋಗಾಕಿಲ್ಲ.

ಇದೇ ಚುಂಚನಹಳ್ಳಿ ಒಳಗೇ ಮುತ್ತುಕದ ಮರ. ಒಂದು ಕೋರೆ ಇರುತ್ತೇ. ತಂಗಿ ಅಲ್ಲಿಗೋಗಿ ಸೇರ್‍ಕೊಂಬಿಟ್ಲು. ಅಣ್ಣ ಬೆಳ್ಳೂರಿಗೆ ಹೋಗ್ಬಿಟ್ಟ. ಸೀದಾ ಬೆಳ್ಳೂರಿಗೆ ವೋದ. ಅಲ್ಲಿ ಒಂಟೆ, ಹುಲಿ ಬಂದು ಪಟ್ಣದ್ ಜನನೆಲ್ಲಾ ಬಡ್ಕೊಂಡು ತಿನ್ನುತ್ತಿರುತ್ತೆ. ಅಲ್ಲಿ ಹುಲಿ ಬರುತ್ತಲ್ಲ ? ತಿಂದು ಹಾಕುತ್ತಲ್ಲ ? ಅಂದ್ಬಿಟ್ಟು ಎತ್ಲಾಗೆ ಹೊರಕ್ ಹೋದ್ರು ಜನ ಸೂರ್‍ಯ ಮುಳಗೋ ಹೊತ್ಗೆ ಒಳಕ್ ಸೇರ್‍ಕೊಂಬಿಡೋರು. ಕದ ಹಾಕ್ಕೊಂಬಿಡೋರು.

ಇವ್ನು ಹೋದಮ್ಯಾಲೆ ಇವ್ನು ಯಾರ ಕಂಡವ್ನೆ ? ಅಲ್ಲಲ್ಲಿ ಕದ ಹಾಕೋಣಾಕೆ ಯಾರ ಮನೆಗೆ ವೋಗ್ತಾನೆ ? ಆ ಛಾವಡಿ ಒಳಗೇ ಸೇರ್‍ಕೊಂಬಿಟ್ಟ. ಸೇರ್‍ಕೊಂತ್ಲೂವೆ ಈ ಹುಲಿ ಬಂತು ರಾತ್ರೇಗ್ ಒಳ್ಳೆ ಅರ್ಧರಾತ್ರೀಲಿ. ಅವಾಗ ಏನಂತ ಬೋರ್ಡು ಹಾಕ್ಸವ್ರೆ. ಇನ್ನಾ ಆ ರಾಜನಿಗೆ ಒಬ್ಳು ಮಗಳು ಅವ್ಳೆ. ಅವ್ನು ಏನಂಥ ಬೋರ್ಡು ಆಕವ್ನೇ ? ಈ ಹುಲಿ ಬಡಿದವ್ರಿಗೆ ನನ್ನ ರಾಜ್ಯದಾಗೆ ರಾಜ್ಯ ಕೊಡ್ತೀನಿ. ನನ್ ಮಗಳ ಕೊಟ್ಟು ಮದ್ವೆ ಮಾಡ್ತೀನಿ. ಈ ಹುಲಿ ಯಾರಾದ್ರೂ ನೋಡ್ಬಹುದು ಅಂತ ಬೋರ್ಡು ಆಕ್ಯಾವ್ರೆ. ಆ ಬೋರ್ಡು ಹಾಕಿದ್ದಾಗ, ಇವ್ನು ಆ ಹುಲಿ ಯಾವಾಗ ಅಬ್ಬರಿಸ್ಕೊಂಡು ಬಂತಲ್ಲ? ವೋಗಿ ಈ ಚಾವ್ಡಿ ಇರುತ್ತಲ್ಲ, ಬಾಕ್ಲು ಹೆಬ್ಬಾಗ್ಲು, ಮ್ಯಾಕೆ ವೋಗಿ ನಿಂತ್ಕೊಂಡು ವಡದಲೆ ಸೀಳ್ಕೊಂಡು ಚಂದ್ರಕಾಂತ ಮಡಿಕೊಂಡು ವೋಗಿದ್ದ, ಆ ಹುಲಿ ಯಾವಾಗ ಅಬ್ಬರಿಸ್ಕೊಂಡು ವೋಗ್ತಾ ಇದ್ದಾಗ ಹೆಬ್ಬಾಗಿಲು ಮ್ಯಾಲೆ ನಿಂತ್ಕೊಂಡು ಹೆಬ್ಬಾಗಿಲು ಅದುಮಿಸಿ ಇವ್ನು ಎತ್ತಾನ ಕಡಿಯೋಣ ಆ ಹುಲಿ ಬಿದ್ಬಿಡ್ತು.

ಆಗ ಚುಳುಗುರು ಹೂಬಾಲ ಐತಲ್ಲ ಹುಲೀಗೆ? ಅದನ್ನು ಕುಯ್ಕೊಂಡು, ಕಾಗ್ದ ಆಕ್ಕೊಂಡು ಪಟ್ಣಕಟ್ಕೊಂಡು ಜೇಬಲ್ಲಿ ಮಡಿಕ್ಕೊಂಡು ವೋದ. ಛಾವಡಿ ಒಳಗೆ ಕೂತ್ಕೊಂಡ. ಇವ್ನು ಮಡಿವಾಳ ಶೆಟ್ಟಿ ಬಟ್ಟೆ ಒಗೆಯಾಕೆ ಅಂತ, ಬಟ್ಟೆಗಳೆಲ್ಲ ತಗೊಂಡ್ತು ಬಟ್ಟೆನೆಲ್ಲ ತುಂಬ್ಕೊಂಡು, ಬಾಣೆ ತಗೊಂಡು ಹೇರ್‍ಕೊಂಡು, ಕತ್ತೆ ಒಡ್ಕೊಂಡು ವೋಗ್ತಾ ಇದ್ದ. ವೋಗ್ತಾ ಇರೋವಾಗ ಹುಲಿ ಬಿದ್ದಿರುತ್ತಲ್ಲ ? ಆಗ ನೋಡಿದ್ನಲ್ಲ 'ಅಯ್ಯೊಯ್ಯೊ ಹುಲಿ ಬಿದ್ಬಿಟ್ಟೈತೆ. ಇವ್ನು ಕುಂಯ್ಯೊ ಬಿಟ್ಟಿದ್ನಲ್ಲ ? ಮೋಟು ಅದನ್ನೆಲ್ಲ ಕುಯ್ದು ಪಟ್ಣ ಕಟ್ಕೊಂಡು ತಗೋಂಡೋಗಿ ರಾಜನ್ಮನೇಗ್ ಕೊಟ್ಟ.

ರಾಜ ಏನ್ಮಾಡ್ಬಿಟ್ಟ ? ಎಲೆಲೆ ಈಟ್‌ತನ್ಕ ಹೊಡ್ದಿರ್‍ಲಿಲ್ಲ ಹುಲಿಯಾ. ಇವತ್ತು ಹೊಡಿದ್ನಲ್ಲ ಅಂತ, ಮಡಿವಾಳ ಶೆಟ್ಟಿಗೆ ಮದ್ವೆ ಮಾಡಾತಗ ಹೊರಟ್ರು. ಹೋಗೋವಾಗ ನಿಮ್ಮಂಥ ಯಜಮಾನ್ರು ವೋಗ್ತಾ ಇದ್ರು. ವೋಗ್ತಾ ಇರೋವಾಗ ಇನ್ನಾ ಅಲ್ಲಿ, ಎಲೆ ಅಡಿಕೆ ಚೀಲ ಹಿಡ್ಕೊಂಬಿಟ್ಟು ಶೆಟ್ಟಿ ತಾಯಿ. ಅಯ್ಯೋ ಎಲ್ಲಾರೂವೆ ನನ್ನ ಮಗನ್ನ ದಡ್ಡ ಅಂತಾವೇ ಅನ್ನೋರು. ಅಂತಾಲ್ಲೆ ಅಲ್ಲಿಗೋಗಿ ಕೂಂತ್ಕೊತ್ಲೆ ಆಂಗತ್ಲೆ, ಇಲ್ಲಿಗೋಗಿ ಕೂತ್ಕೊತ್ಲೆ ಇಂಗಿತ್ಲೆ. ಅಂಗೋಗದು ಇಂಗ್‌ಬಂದ್ಬಿಡದು ಇಂಗಾಡ್ತ ಇದ್ರು, ಅಂದಳು. ಅಷ್ಟುವೊತ್ಗೆ ಇವ್ನ ನಿಮ್ಮಂಥ ಯಜಮಾನ್ರು ಕರ್ದು ಅಯ್ಯಾ ಹುಲಿ ಉಗ್ರು ಫಸ್ಟು ಕುಯ್ದಿದ್ದೋವ್ರು ಯಾರು ? ಮೊಟು ಕುಯ್ದಿರೋದು ಯಾರು ಅಂತ ನೋಡು. ಹೆಡ್ಡು ದೊರೆ ಅಂತ ಕಾಣ್ತೀಯಾ ಅಂತ. ಆಗ ಅವ್ರು ಗುರುತು ಕೊಟ್ಟು ಕಳ್ಸಿದ್ರು. ಆಗೋಗಿ ನೋಡೊದ್ರೊಳಗಾಗಿ ಫಸ್ಟು ಕುಯ್ಕೊಂಡು ಮಡಿಕ್ಕೊಂಡಿದ್ನಲ್ಲ ಅವನೇ ಸರಿ ಅನ್ನಿಸಿತು. ಮಡಿವಾಳ ಶೆಟ್ಟಿನಾ ಉಗ್ದು ಕಳ್ಸಿ ಇವ್ನ ಕರ್‍ಕೊಂಡೋದ್ರು. ಆಗ ಸ್ನಾನ ಮಾಡ್ಸಿ, ಅವಾಗ ಹೆಣ್ಣು ಮಗೀನ ಕೊಟ್ಟು ಮದ್ವೆ ಮಾಡಿಬಿಟ್ರು. ಮದ್ವೆ ಆದ ವರ್ಷಕ್ಕೆ ನೀರು ಹುಯ್ಕೊಂಡ್ಲು, ಅವನ ಹೆಂಡ್ತಿ, ರಾಜನ ಮಗಳು. ನೀರು ಉಯ್ಕೊಂಡು ಅವ್ಳಗೆ ಗಂಡ್‌ಮಗ ಆಯ್ತು. ನವನಾರು ಒಂಭತ್ತು ತಿಂಗ್ಳು ತುಂಬಿ ಗಂಡ್ಮಗ ಆಯ್ತು. ಆಗ ಮಗೀನ ಹೆಸ್ರು ಏನಂತ ಕಟ್ಬೋದಪ್ಪ ಅಂತ ಕೇಳಿದ್ರು. ಅವ್ನೇಯಾ ಅಪ್ಪ ಇನ್ನೊಂದು ಹುಟ್ಟಿದಾಗ ಏನಾರೂ ಕಟ್ಕೊಂಡ್ರೇ ಆಯ್ತು. ಈಗ ಮುದ್ರಾ ಕುಮಾರ ಅಂತ ಹೆಸ್ರು ಕಟ್ಟಿ ಅಂತ. ಮುದ್ರಾಕುಮಾರ ಅಂತ ಹೆಸ್ರು ಕಟ್ಟಿದ್ರು.

ಇವ್ನು ಈ ತಂಗಿ ಇದ್ಲಲ್ಲ ? ಅವಳಿದ್ದ ಕಡೆ ಇವ್ನ ಅತ್ಲ ಸೀಮೆರಾಜನ ಮಗ ಎಲ್ಲೀ ಹೆಣ್ಣು ನೋಡಿದ್ರು ಮದ್ವೆ ಆಗೋಕಿಲ್ಲ. ಅವ್ರ ತಂದೆ ಎಲ್ಲೆಲ್ಲೋ ತಿರ್ಗಿ ತಿರ್ಗಿ ಸಾಕಾಗಿ, ಅಪ್ಪ ನಾನು ಎಲ್ಲಿ ಎಣ್ಣು ತಂದ್ರೂ ನೀನು ಮದ್ವೆ ಆಗಲ್ಲ. ನೀನು ವೋಗಿ, ಎಲ್ಲಾದ್ರೂ ವೋಗಿ, ನಿನ್ಗೆ ಒಪ್ಪಿಗೆ ಆಗೋ ಹೆಣ್ಣು ನೋಡ್ಕೊಂಬಾ, ಮದ್ವೆ ಮಾಡೋದು ನಂಗಿರ್‍ಲೀ ಅಂತ ಹೇಳ್ದಾ. ಆಗ ಇವ್ನು ದಂಡು ದಳ ಮಂದಿ ಮಾರ್‍ಬಲ ಎಲ್ಲ ಕರ್ಕೊಂಡು ಹೊರ್‍ಟ. ಹೆಣ್ಣು ನೋಡಾಕೆ ರಾಜ ಮಂತ್ರಿನೂ ಕಳ್ಸಿಕೊಟ್ಟ. ಮಂತ್ರಿ ಕರ್‍ಕೊಂಡ. ರಾಜನ ಮಗ ವೋದ್ರು. ಅವ್ನು ಕುದ್ರೆ, ಒಂಟೆ ಹಾಕ್ಕೊಂಡು ವೋದ್ರಲ್ಲ ? ಇವ್ನು ಇಲ್ಲಿ ಚುಂಚನಹಳ್ಳಿ ತಕ್ ಬಾವಿಗೆ ಬಂದ್ರು. ಇವರು ಬೆಂಕಿಪಟ್ಣನೂ ಬಿಟ್ಟವ್ರೇ, ಬೀಡಿನೂ ಬಿಟ್ಟವ್ರೇ. ಏನೂ ಇಲ್ಲ ಬೀಡಿ ಸೇದಾಕೇ. ಆಗ ಆ ಮಂತ್ರಿ ಏನಂದ ? ಅಯ್ಯೋ ಎಲ್ಲಾನೂ ಬಿಟ್ಬಂದ್ರಲ್ಲ, ದೊರೆ ಮಗ್ನಗೆ ಹೆಣ್ ನೋಡಾಕಂತ ಬಂದು ನನ್ನ ತವ ಎಲ್ಲೋ ಒಂದಿಷ್ಟು ಮೋಟು ಐತೆ ಅದ್ನ ನೋಡೋಣ ಅಂತ ಅಂದ್ರೇ ಬೀಡಿಯೂ ಬೆಂಕಿಯೂ ಇಲ್ಲ ಏನ್ಮಾಡೋದು ? ಅದು ಮುತ್ತುಗದ ಮರಕ್ಕೆ ಕ್ವಾರೇ ಇತ್ತಲ್ಲ ? ಅದಕ್ ವೋಗಿ ಒಂದಾ ಮಾಡಾಕ್ ಕೂತ್ಕೊಂಡ ಮಂತ್ರಿ. ಇದ್ರೊಳಗೆ ಬೆಂಕಿ ಗಮ್ಮಲು ವೋಡಿತಾ ಇತ್ತು. ಅಲ್ಲಿ ಒಂದಾ ಮಾಡಿ ಎದ್ದ. ಅಮ್ಮ ಯಾರೂ ಇದರೊಳಗೆ ಇರೋದು ? ಬೆಂಕಿ ಗಮ್ಮಲು ಬರ್‍ತಾ ಐತಲ್ಲ ಅಂದ. ಯಾಕಪ್ಪ ನಾನು ಅಂದ್ಲು. ತಂಗೀ ಅಂದ್ಲು. ಅಂಗಂತ್ಲೂವಾ ನಿಮ್ಮನೆದು ಸ್ವಲ್ಪ ನೀರು ಕೊಡವ್ವ, ಬಾಯಾರ್‍ಕೆ

ಅಂದ. ಆಗ ಇಷ್ಟು ಗಾತ್ರ ಮಿಳ್ಳೆ ಒಳ್ಗೆ ಇನ್ನೆಷ್ಟು ಕೊಡಬಹುದು? ಕೊಟ್ಲು ನೀರು ಅವ್ವ. ಆಗ ನೀರು ಕೊಟ್ಟಾಗ, ನೀರ್ ತಕ್ಕೊಂಡು ಕೈಗೆ ಇಸ್ಕೊಂಡು ಆಗ ಇಷ್ಟ್ ಗಾತ್ರ ಮಿಳ್ಳೆಒಳ್ಗೆ ನೀರು ಕೊಟ್ಟಲ್ಲ ? ಅಷ್ಟು ಗಾತ್ರ ಮಿಳ್ಳೆ ಒಳ್ಗೆ ನೀರು ಕೊಡ್ತಿಯಲ್ಲ ಆಯ್ತದೇನವ್ವ ಅಂದಾ. ಅಯ್ಯ ಆನೆ ಒಂಟೆ ಕುದುರೆ ದಂಡು ದಳ ಎಲ್ಲಾ ಇದೆ. ನೀನು ಇಷ್ಟು ಕೊಟ್ರೆ ಸಾಕಾಗೋಲ್ಲ ಅಂದ್ರು. ಅಪ್ಪ ನಿಮ್ಮ ಆನೆ ಒಂಟೆ ಕುದುರೆ ದಂಡು ದಳ ಮಂತ್ರಿ ಮಾರದಳಕ್ಕೆ ಕೊಡು ಇನ್ನೂ ಸ್ವಲ್ಪ ನೀರು ಅದ್ರೊಳಗೆ ಮಿಗುತ್ತೇ ಅಂದ್ಲು.

ಆಗ ತಕ್ಕೊಂಡೋದ. ಇಷ್ಟು ಗಾತ್ರ ಮಿಳ್ಳೆ, ಆನೆ ವಸೀ ನೀರು ಕುಡಿಯುತ್ತಾ ? ಒಂಟೆ ವಸೀ ನೀರು ಕುಡಿಯುತ್ತಾ ? ಎಲ್ಲಾ ಕುಡಿದು ಇನ್ನೂ ಸ್ವಲ್ಪ ನೀರು ಅದೊರೊಳಗೆ ಮಿಕ್ಕುತ್ತೇ! ಆಗ ಮಂತ್ರಿ ರಾಜನ ಮಗಂಗೆ ಹೇಳ್ದಾ, ಅಪ್ಪಾ ನಿನಗೆ ತಕ್ಕಾದ ಮಡದಿ, ನನ್ಗೆ ತಕ್ಕಾದ ತಾಯಿ. ಈ ಮುತ್ಕದ ಮರದ ಕ್ವಾರೇ ಒಳಗೆ ಐತೆ, ಬಾ ನೋಡೋಣ. ಮಿಳ್ಳೆ ಕೊಡ್ಬೇಕಲ್ಲ ? ಬಾ ನೋಡೋಣ ಅಂತ ಕರ್ಕೊಂಬಂದು, ಕ್ವಳಮ್ಮ ಮಿಳ್ಳೆಯಾ ಅಂದ್ರು. ಮಿಳ್ಳೆ ಇಸ್ಕೊಣಾಕೆ ಈಚೆಗೆ ಬಂದ್ಲಲ್ಲ ? ನೋಡಿದ್ರು. ನೋಡಿ ನಿಂದು ಮದ್ವೆ ಆಯ್ತಾ ಅಂತ ಕೇಳಿದ್ರು. ಇಲ್ಲಪ್ಪ ನನ್ನ ಮದ್ವೆ ಆಗಿಲ್ಲ ಅಂದ್ಲು. ಅದು ನಾವು ಹಿಂಗೇ, ಹೀಗೆ ದೊರೆಮಗ, ನಾವು ಮದ್ವೆ ಮಾಡ್ಕೋತಿವಿ ಬಾ ಅಂದ್ರು. ಆಗ ಬಾ ಅಂತ ಕರ್ಕೊಂಡು, ಕುದ್ರೆ ಮ್ಯಾಲೆ ಕುಂಡ್ರಿಸ್ಕೊಂಡ್ರು, ಬಂದ್ರು ಅರಮನೆಗೆ. ಪಟ್ಣ ಗುಡ್ಸಿ ಸಾರ್ಸಿ ಮದ್ವೆಮಾಡಿದ್ರು. ಇನ್ನು ಮದ್ವೆ ಆದ ವರ್ಷಕ್ಕೆ ನೀರು ಉಯ್ಕೊಂಡ್ಲು. ನವನಾರು ಒಂಭತ್ತು ತಿಂಗ್ಳು ತುಂಬ್ತು. ಹೆಣ್ಣುಮಗ ಆತು. ಆಯಮ್ಮನ್ನೇ ಕೇಳಿದ್ರು ''ಏನಮ್ಮ ಮಗೀನ್ ಹೆಸ್ರು ಏನಂತ ಕಟ್ಬೋಣ ಅಂತ. ಮಗೀನ್ ಹೆಸ್ರು ಬಳೆಬಂಗಾರತಿ ಅಂತ ಕಟ್ಟಿ ಅಂತ ಅಂದ್ಳು. ಮಗೀನ್ ಹೆಸ್ರು ಬಳೆಬಂಗಾರತಿ ಅಂತ ಹೆಸ್ರು ಕಟ್ಟಿದ್ರು. ಅಲ್ಲಿ ಅಣ್ಣನಮಗ ಬೆಳಿತಾನೆ. ಇಲ್ಲಿ ತಂಗೀಮಗ್ಳು ಬೆಳೀತಾಳೆ. ಆಗಂತ್ಲೂವೇ-

ಅಣ್ಣನ ಮಗ ಮದ್ವೆಗೆ ಬಂದ. ಅವ್ನು ಮತ್ತೆ ತಿರ್ಗ್ಯಾ ಹೆಣ್ ನೋಡಾಕ್ ಹೊರ್ಟ. ಹೋಗಬೇಕಾದ್ರೆ ಎಣ್ಣು ನೋಡ್ಕೊಂಬಂದ. ಮಗ ಕೇಳ್ದಾ ಅಪ್ಪಾಜಿ ನೀನು ಎಲ್ಲಿಗೋಗಿದ್ದೆ ಅಂತ. 'ಅಪ್ಪ ನಾನು ನಿನ್ನ ಮದ್ವೆ ಮಾಡೋಣ ಅಂತ ಹೇಳಿ ಹೆಣ್ಣೆಗೆ ಅಂತ ವೋಗಿದ್ದೆ ಕಣಪ್ಪ ಅಂದ.' ಅಪ್ಪಾಜಿ ಮದ್ವೆ ಮಾಡೋದು ಸರಿ. ಹೆಣ್ಣು ನೋಡೋದು ಸೈ, ಆದ್ರೆ ನಿನ್ಗೆ ಅಕ್ಕ ತಂಗಿ ಅಣ್ಣ ತಮ್ಮ ಎಷ್ಟು ಜನ ಇದ್ದೇರಿ ಅಂದ. ಇಲ್ಲಪ್ಪ ನನಗೆ ಅಣ್ಣ ಇಲ್ಲ, ತಮ್ಮ ಇಲ್ಲ. ನಾವು ಇದ್ದೋರು ಇಬ್ರೂ ಅಣ್ಣ ತಂಗಿ. ನನ್ನ ತಂಗಿ ನಾನು ಇಂಗೇ ಬರ್ರೇಕಾದ್ರೆ, ನನ್ನ ತಂಗಿ ನಾನು ಸಮರ್ಥ ಮಕ್ಕಳಾದ್ವು, ಇಬ್ರೂ ಒಂದಾರಿ ಒಳಗೆ ಹೋದ್ರೆ ಯಾರು ಏನಂತಾರೆ? ಏನಾಗ್ಬೇಕು ಈಯಮ್ಮ ಅಂತ ಕೇಳಿದ್ರೆ ನಾನು ಏನು ಹೇಳೋದು ಅಂತ ಹೇಳ್ಬಿಟ್ಟು, ನನ್ನ ತಂಗೇ ಒಂದ್ ದಾರೀಲಿ ಹೋದ್ಲು. ನಾನೇ ಒಂದ್ ದಾರೀಲಿ ಬಂದೇ. ನನ್ನ ತಂಗಿ ಹೋಗ್ಬೇಕಾದ್ರೆ ಒಂದ್ ಬಳೇ ಮಲ್ಹಾರ ಸಿಕ್ತು. ನನಗೆ ಒಂದ್ ಮುದ್ರೆ ಉಂಗ್ರಾ ಸಿಗ್ತು. ನನ್ನ ತಂಗೇ ಕೂಗ್ಕೊಂಬಂದ್ಲೂ. ಯಾಕ ಅಂತ ಅಲ್ಲಿ ನಾನು ನಿತ್ಕೊಂಡೆ. ನಿತ್ಕೊಳ್ಳೊ ವೊತ್ಗೆ ಅಣ್ಣಯ್ಯ ನಂಗೊಂದು ಬಳೇ ಮಲಾರ ಸಿಕ್ಕೈತೆ ಅಂದ್ಲು ತಂಗಿ.

ನಿನ್ನೆಸ್ರು ನನ್ಗೊತ್ತಿಲ್ಲ. ನನ್ನ ಹೆಸ್ರು ನಿನ್ಗೆ ಗೊತ್ತಿಲ್ಲ. ಈಗ ಮದ್ವೆ ಆಗಿ ಮಕ್ಳಾಗಿ ಹೆಣ್ ಮಗಳು ಹುಟ್ಟಿದ್ರೇ ಬಳೆ ಬಂಗಾರತಿ ಅಂತ ಹೆಸ್ರುಕಟ್ಟಿ. ನನಗೆ ಗಂಡು ಮಗ ಹುಟ್ಟಿದರೆ ನಾನು ಮುದ್ರೆಕುಮಾರ ಅಂಥ ಹೆಸ್ರು ಕಟ್ತೇನಿ. ಮುದ್ರೆಕುಮಾರ ಅನ್ನೋದೆ ಅಣ್ಣನ ಮಗ. ಬಳೇಬಂಗಾರತಿ ಅನ್ನೋಳೆ ತಂಗೆ ಮಗ್ಳು. ನಮಗೆ ಅಲ್ಲಿ ಗುರ್ತಾಗುತ್ತೆ ಅಂತ ಬೇರೆ ಬೇರೆ ಹೊರಟೋ. ನನ್ನ ತಂಗಿ ಮದ್ವೆ ಆದೋವ್ಳೋ ಇಲ್ಲೋ ಅದಂತು ಗೊತ್ತಿಲ್ಲ ಅಂದ. ರಾಜ ಅಣ್ಣಂಗೆ, ಹುಡ್ಗನ ಅಪ್ಪಂಗೆ ಆಗ ಅವನಿಗೆ ಪ್ರಾಣ ಹೋಯ್ತು.

ರಾಜನ್ನ ತಗೊಂಡೋಗಿ ದಫನ್ ಮಾಡಿದ್ರೆ ಅಲ್ಲಿಗೆ ಮದ್ವೆ ಸುಗ್ಗಿ ಇಲ್ಲ. ಆ ವರ್ಷ ಕೈ ಬಿಟ್ಬಿಟ್ರು. ಮುಂದಕ್ ಮದ್ವೆ ಲಗ್ನ ಇತ್ತಲ್ಲ ? ಆವಾಗ ಅವ್ನು ಹೇಳ್ದಾ ಅಮ್ಮ ನಮ್ಮತ್ತೆ ಅವ್ಳೋ ಇಲ್ವೋ ಅದು ಯಾವ್ ಪಟ್ಟಣಗಾದ್ರೂ ಇರ್ಲಿ ಏನೋ ದೇವ್ರು ಎಲ್ರೂನೂ ಒಂದ್‌ತವ ಕೂಡಾಕ್‌ಬೇಕು ಅನ್ನೋದಾದ್ರೆ ದೇವ್ರು ನಮಗೆ ತೋರ್ಸೆ ತೋರ್ತ್ಸಾನೆ ದಾರಿಯಾ. ನಾನು ವೋಗಬೇಕು ಬುತ್ತಿ ಕಟ್ಟು ಅಂದ. ಅವರ ತಾಯಿ ಮೂರು ತುತ್ತು ಬುತ್ತಿ ಕಟ್ಟಿದ್ಲು. ಆ ಬುತ್ತಿ ತಕ್ಕೊಂಡು ವೋದ. ವೋಗಂದು ವೋಗಂದು ವೋಗವಾಗ ಇದೇ ಕೆರೆ ಕೆಳ್ಗೆ ಕಟ್ಟೆ ಐತಲ್ಲ ? ಆ ಕೆರೆ ಕಟ್ಟೇಗ್ ಬಂದು ಬುತ್ತಿ ಉಂಡ. ಸೀದಾ ಚುಂಚನಗಿರಿಗೇ ಬಂದ. ಬಂದ್ರೆ ಕೆಳಗ್ ಕಟ್ಟೆ ತವ ಬುತ್ತಿ ಉಂಡವ್ನು ಕಲ್ಯಾಣಮಂಟಪತಕ್ ಬಂದ. ಅಲ್ಲಿ ಬಂದೋನೆ ಅಲ್ಲಿ ಕಲ್ಯಾಣಿ ಐತಲ್ಲ ? ಕಲ್ಯಾಣಿ ತಕ್‌ಬಂದು, ಕೂತ್ಕೊಂಡ. ನೀರಿಗೆ ಬಂದ್ರೆ ಎತ್ತತಲೆ ನಮ್ಮತ್ತೆ ಅಂತ ಎಂಗ್ ಕೇಳೋಕಾಗುತ್ತೆ ? ಅವ್ರು ಹೆಸ್ರು ಊರು ಏನೂ ಇಲ್ಲ. ಯಾರಾದ್ರೂ ನೀರಿಗೆ ಬಂದ್ರೆ ನೋಡೋಣ ಅಂತ. ಸಾಯಂಕಾಲ ಆಗ್‌ಬಿಡ್ತು. ಅಲ್ಲಿ ಕೂಕೊಂಡ.

ಅಲ್ಲಿ ಕೂಕೊಂಡಾಗ ಅತ್ತೆ ಮಗ್ಳು ಜೊತೆಯೋರು ನೀರಿಗೆ ಹೋಗಿದ್ರು. ಅವ್ರ ಅತ್ತೆ ಮನೆ ಇಲ್ಲಿ, ಊರಹಳ್ಳ ಇಲ್ಲಿ. ಊರಳ್ಳ ಆದ್ರೆ ಈ ಜೊತೆಯವ್ರನೆಲ್ಲ ಕರ್ಕೊಂಡು ಬಳೆಮಲಾರತಿ ನೀರಿಗೆ ಬಂದ್ಲು. ನೀರ್‌ಗೋದಾಗ ಸುಮ್ನೇ ಅವ್ನ ಪಾಡಿಗೆ ಅವ್ನು ಕಲ್ಯಾಣಿಮ್ಯಾಲೆ ಕೂಕೊಂಡೇ ಇದ್ದ. ಇವ್ರು ಬಿಂದಿಗೆ ಬೆಳ್ಕೊಂಡ್ರು, ನೀರ್ ಮಗ್ಕೊಂಡ್ರು. ಬರ್‌ಬೇಕಾದ್ರೆ ಬಳೆ ಮಲ್ಲಾರತಿ ತಿರ್ಗಾ ನೀನು ನೀರಿಗೆ ಬರ್ತಿಯಾ ? ಸಾಕೋ ಅಂದ್ರು.

ಆಗ ಇವ್ನು ಕೇಳ್ಕೊಂಡ. ಓ ನಮ್ಮಪ್ಪಾಜಿ ಇಂಗೇಂತ ಹೇಳ್ಬಿಟ್ರಾ. ಬಳೆಮಲಾರತಿ ಅನ್ನೋಳು ನಮ್ಮ ಅತ್ತೇ ಮಗಳೇಯಾ ಅಂದ. ಮತ್ತೆ ಅಮ್ಮ ನಿಮ್ಮಣ್ಣನ ಮಗನಂತೆ ಮುದ್ರೆ ಕುಮಾರ ಅಂತೆ. ಬಂದು ಕುಂತವ್ನೇ ಕಲ್ಯಾಣೀತವ. ಅಂತ್ಲೂವೆ ನಮ್ಮ ಅತ್ಯಮ್ಮಂಗೆ ಹೇಳ್ಬಿಡ್ರಮ್ಮ ಅಂತ ಹೇಳ್ಬಿಟ್ಟು ಅಲ್ಲೇ ಕೂತ್ಕೊಂಡ.

ಕಲ್ಯಾಣಿ ಹತ್ರ ಕೂತೊಂಡಾಗ ಇವ್ರು ಇಲ್ಲಿಂದ ಚುಂಚನಗಿರಿಯಿಂದ ತಿರ್ಗಾ ಅಲ್ಲಿಗೆ ವೋಸ್ಟು ದೂರ ಮುಂದಕ್ ಹೋಗ್ಬೈಕಲ್ಲ? ಆಗ್ಲೇ ಸಾಯಂಕಾಲ ಆಗೋಗ್ಬೈತೆ. ನಾವು ಅದ್ ಮಾಡ್ಬೇಕು, ಇದು ಮಾಡ್ಬೇಕು. ನಮ್ಮಮ್ಮ ಬೈತಾಳೆ, ನಮ್ಮಪ್ಪ ಬೈತಾನೆ, ಏನ್ಮಾಡೋದು

ಅಂತ ಹೇಳಿ, ಹೇಳ್ತಿಯೆನೆ ಬಳೆಬಂಗಾರತಿ ನಿಮ್ಮವ್ವನ ಕೈಯಲ್ಲಿ ಅಂತ ಅಂದ್ರು. ನಾನ್ ಹೇಳ್ತೀನಿ ಬಿಡಕ್ಕ, ನೀನು ಇನ್ನಕ್ ಬರ್ತೀಯಾ ಅಂತ ಅಂದ್ಲು. ಇವ್ಳು ಹೇಳ್ಲಿಲ್ಲ ಅವರವ್ವನ ಕೂಟೆ.

ನಿಮ್ಮಣ್ಣನ ಮಗ ಅಂತೆ ಮುದ್ರೆ ಬಂಗಾರ ಅಂತ ಹೇಳ್ಲಿಲ್ಲ ಅವ್ಳು. ಆಗ ಇವ್ನು ಸುಮ್ನೆ ಆಗ್ಬಿಟ್ಟು ಇನ್ನು ಇವಳು ಹೇಳ್ಲಿಲ್ಲ. ಅವ್ನು ಕಲ್ಯಾಣಿತವ, ಕಲ್ಯಾಣಿ ದಿಣ್ಣೆ ಮೇಲೆ ಮಲಗಿದ್ನಲ್ಲ ? ನೀರಿನಾಳದಿಂದ ಸರ್ಪ ಬಂದ್ಬಿಡ್ತು. ಮುಟ್ಟಿಟ್ತು. ಸತ್ತೋಗ್ಬಿಟ್ಟ, ಕಲ್ಯಾಣಿಮ್ಯಾಲೆ. ತಿರ್ಗ್ಾ ಬೆಳಿಗ್ಗೆಗೆ ಎದ್ರಲ್ಲ ? ಎದ್ದಾಗ ತಿರ್ಗಾ ನೀರ್ಗೋದ್ರು. ನೀರ್ಗೋದಾಗ ಅಲ್ಲಿ ನೋಡಿದ್ರು. ಇದೇ ಸಾಯಂಕಾಲ ಅವ್ರೆ ಮೂರಾಳು ನೀರ್ಗೋಗಿದ್ರಲ್ಲ ? ಅಲ್ಲ ನಿನಗ್ ತಕ್ಕಾದ ಗಂಡ, ನಮಗೆ ತಕ್ಕಾದ ತಾಯಿ, ನಿಮ್ಮ ಅಣ್ಣನ ಮಗ ಅಂತ ಹೇಳಿದ್ರು. ನೀನು ಹೇಳ್ತೀನಿ ಅನ್ನೋವೊತ್ಗೆ ನಾವು ಬಂದ್‌ಹೇಳ್ಲಿಲ್ಲ. ನೀನು ಹೇಳ್ಬೇಕಾಗಿತ್ತೋ ಇಲ್ಲೋ ಅಂತಲೇ ಅವ್ರು ಬಿಂದ್ ಬಿಂದಗೆಯಾ ಕುಕ್ಕುತಾರೆ. ಕುಕ್ಕುದ್ರೆ ಬರುತ್ತಾ? ಅವರೇ ನೀರ್ ತಕ್ಕೊಂಡ್ರು. ಬಂದ್ರು. ಮನೆತವ ವೋದ್ರು ಅಮ್ಮ ನಿನ್ನೇ ದಿವ್ಸ ಬಂದವ್ನೆ, ನಿಮ್ಮಣ್ಣನ ಮಗ ಮುದ್ರೆ ಕುಮಾರ. ಅದಕ್ಕೆ ನಿನ್ಮಗಳು ಹೇಳ್ತೀನಿ ಅಂದ್ಲು. ನಾವು ಬರ್ಲಿಲ್ಲ. ಸತ್ತೋಗವ್ನೆ ಕಣಮ್ಮ ಅಂದ್ರು. 'ಅಯ್ಯೋ ನಾವೇ ಅಣ್ಣ ತಂಗಿ ಇಬ್ರಾಳು ಒಂದ್‌ದಾರಿ ಒಳಗೇ ಬರ್ಬೇಕಾದ್ರೆ ಎಷ್ಟು ದಿನಾತು ಏನ್ಕಥೆ ? ತಮ್ಮಣ್ಣಯ್ಯ ಅವ್ನೋ ಇಲ್ವೋ ನೋಡಾರ ನೋಡ್ಬೋದಾಗಿತ್ತು. ನೀನ್ ಹೇಳಿಲ್ಲವಲ್ಲ ? ನಮ್ಮಣ್ಣಯ್ಯನ ಮಗಂಗೆ ಕೊಟ್ಟು ಮದ್ವೆ ಮಾಡ್ತೀನಿ ಅಂದಿದ್ದೆ. ಇವ್ಳು ಹೇಳ್ದೇ ಹೋದ್ಲು. ನಾನು ಸತ್ ಹೆಣಕ್ಕೆ ಕೊಟ್ಟು ಮದ್ವೆ ಮಾಡ್ತೀನಿ ಅಂತ ಹೇಳ್ಬಿಟ್ಟು ಆಗ್ಲೇ ವೋಗ್ಬಿಟ್ಟು ಕೊರಮರ ಕೇರಿಗೆ, ಅವ್ಳು ಉದ್ದೂಕು ಮರ ಎಣಿಸ್ಬಿಟ್ಲು. ಸಾಬ್ರೂ ಗೌಸು ಆಕ್ಕೊಂತರಲ್ಲ ಆ ತರ ಗೌಸು ಆಕೊಂಗೆ ಎಣಿಸಿಬಿಟ್ಲು. ಅವ್ಳಿಗೆ ಕರೇಬಳೆ ತೊಡ್ಸಿ, ಹೂವಿನ ಹಾರ ಅರಿಶಿನ ಹಾಲು ಎಲ್ಲಾ ತಗೊಂಡು ಊರ್ ಜನಾನೆಲ್ಲ ಕರ್ಕೊಂಡು, ಕಲ್ಯಾಣಿತಕ್ ಹೋಗ್ಬಿಟ್ಟು, ಒಂದ್ ತಿರುಪಿನ ತಪ್ಲೆ ಎಣಿಸಿಬಿಟ್ಲು. ಒಂದ್ ಟ್ರಂಕ್ ಮಡಗಿದ್ದೆ ಅದಕ್ಕೆಲ್ಲ ಬಟ್ಟೆ ಒಡವೆ ವಸ್ತ್ರ ಎಲ್ಲಾ ಮಡಗಿದ್ಲು. ಮಗಳಿಗೆ ಬಳೇ ಕೊಡಿಸಿದ್ಲು. ನಮ್ಮ ಅಣ್ಣಯ್ಯನ ಮಗ ಬಂದವ್ನೇ ಅಂತ ನಂಗೆ ಹೇಳಿದ್ರೆ ಜೀವದೊರಸೆ ಇದ್ದಂಗೇನೆ ಮದ್ವೆ ಮಾಡೀನೆ. ನೀನು ಹೇಳಿಲ್ವಲ್ಲ ನಂಗೆ. ನಮ್ಮಣ್ಣಯ್ಯನ ಮಗ ಸತ್ತ ಎಣಾನೆ ಆಗಿರ್ಲಿ, ಅವ್ಗೆ ಕೊಟ್ಟು ಮದ್ವೆ ಮಾಡ್ತೀನಿ ಅಂತ ಹೇಳಿ. ಆಗ ನೀರು ಗೀರು ಎಲ್ಲಾ ಬಿಟ್ರು. ಮದ್ವೆ ಮಾಡ್ಬಿಟ್ರು, ಎಣಕ್ಕೆಯಾ. ಸರಿ ಅದರೊಳಗೆ ಎಣ ತೆಗೆದು ಮಲಿಗ್ಸಿಬಿಟ್ಟು ಇವ್ಳನೇಯಾ ಅದ್ರೊಳಗೆ ಕುಂಡ್ರಿಸಿಬಿಟ್ಟು, ಆ ಪೆಟ್ಟಿಗೆ ಇತ್ತಲ್ಲ ಅದನ್ನ ಮಡ್ಗಿಬಿಟ್ಟು, ಜೈ ಪರಮೇಶ್ವರಾ ಅಂದ್ಲು. ಅಂದ್ಬಿಟ್ಟು ಅವ್ರತಾಯಿ.

ಹಿಂಗ್ ಅನ್ಬೇಕಾದ್ರೆ ವೋಗೋಂದ ವೋಗೊಂದ ವೋಗ್ತಾ ಇದ್ರು. ಆ ಕಟ್ಟೆ ಹತ್ರ ಊಟ ಮಾಡಿದ್ನಲ್ಲ ? ಅಲ್ಲಿಗೋದ್ರು. ಅಲ್ಲಿ ಒಂದು ಆಲದ ಮರ. ಅಲ್ಲಿಗೋತ್ಲು ಏನಂದ್ಲು? ಒಬ್ಬ ತಾಯಿಗೆ ಹುಟ್ಟಿ, ಒಬ್ಬ ತಾಯಿಗೆ ಹೆಸ್ರು ಕರೆದು, ಒಬ್ಬ ಗಂಡಿಗೆ ನಾನು ಸವಿಸಿದ್ರೆ ವರ ಅಂತ ಕೆಳಕ್ ಇಳಿಯಮ್ಮ ಅಂದ್ಲು. ಇಳಿತು ರೈಟು ಇಳೀತು ಇವ್ನು ಊಟ

ಮಾಡಿದ್ನಲ್ಲ ? ಆ ಜಾಗಕ್ಕೆ ಏರಿ ಮೇಲೆ ಇಳಿದು, ಆಗ ಇಳಿದಾಗ, ಇವ್ಳು ತೊಟ್ಲು ಬಿಟ್ಟು ಮ್ಯಾಕೆ ಏಳ್ಲಿಲ್ಲ. ಎಣೀನ್ ದಡದಾಗೆ ಕುಂತಿರ್ತಾಳೆ.

ಆ ಆಲದಮರದ ಮ್ಯಾಲೆ ಎರಡಕ್ಕಿ ಗಂಡಸೇ ಗಂಡಸೇ ನನಗೊಂದು ಕಥೆನಾದ್ರೂ ಹೇಳ್ಬಾರ್ದಾ ? ಅಂತು. ಇವ್ಳಿಗೆ ದಿವ್ಸಾನೂವೆ ಕತೆ ಹೇಳ್ತಾನೆ ಇರ್ತಾರೆ, ಅಂತ ಎರಡಕ್ಕಿನೂ ಗಂಡಕ್ಕಿ ಹೆಣ್ಣಕ್ಕಿ ಕಡಿದಾಡ್‌ಬಿಟ್ಟು ಕೆಳಕ್ ಬಿದ್ಬಿಡ್ತು. ಸತ್ತೋಗ್ಬಿಡ್ತು. ಆಗ ಆಲದಮರದಿಂದ ಒಂದು ಸರ್ಪ ಇಳಿದು ಕೆಳಕ್ಕೆ ಬಂದ್‌ಬಿಡ್ತು. ಒಂದು ಗಿಡ, ಒಂದು ಸಸಿ ಕಡ್ಕೊಂಡು ಬಂತು. ಮೂರುಕಲ್ಲು ಮಡುಗ್ತು. ಎಲೆ ಒಳಗಿಯೂ ಕಲ್ಲು ಮಡುಗ್ತು. ಒಂದು ಬೆಂಕಿ ಮಡುಗ್ತು. ಆ ತೋಪು ಎಲೆ ಒಳಗೆ ಇಂಗೆ ಕರ್‌ಕೊಂಡು ಅದನ್ನ ಎಲೆ ಒಳಗೆ ಇಂಗೇ ಅಂತ, ಎಲೆ ಒಳಗೆ ಕಲ್ಲನ್ನ ಸವರಿಕೊಂಡು ಇತ್ಲಾಗ್ ಇತ್ಲಾಗ್ ಅಂದ್ಬಿಟ್ಟು, ಈಗೇನು ಇಲ್ಲ ಏಳಪ್ಪ ಇರ್ತಾಯ್ತು ಅಂತು. ಆಗ ಆವೊಕ್ಕಿ ಎಲ್ಲಾ ಎದ್ದು ಹಾರೋಯ್ತು.

ಮ್ಯಾಕೆ ಸರ್ಪ ಆಲದಮರದ ಮ್ಯಾಕೇ ಹೋಗ್ಬಿಡ್ತು. ಇವ್ಳು ನೋಡ್ಕಂಡೇ ಕುಂತಿದ್ಲಲ್ಲ? ಅದೇ ಬೆಂಕಿ ಅದೇ ಬೋಕಿ ಎಲ್ಲ ಇತ್ತಲ್ಲ ? ಆ ಗಿಡದಾಗೇ ಸೊಪ್ಪು ತೊಕೊಂಡು ಬಂದು ಆ ಬೋಕೆನೆ ಇಕ್ಕಿ ಅದರಾಗೆ ಉರಿದು ಮಡಿಕ್ಕೊಂಡ್ಲು. ಇನ್ನೊಂದು ಕಲ್ನಾಗೆ ಅರೆದು ಅವ್ನ ಮೈಗೆಲ್ಲ ಸವರಿ ಬಿಟ್ಲು. ಆಗ ಎಷ್ಟೊತ್ತು ಮಲಗಿದ್ದೀರಿ ? ಏನಪ್ಪಾ ಶಿವ ಶಿವ ಅಂತ ಇವ್ನ ಉದ್ದಕ್ಕೂ ಮರ ತಗಲಾಕ್ ಬಿಟ್ಟಿದ್ರಲ್ಲ ? ಆಗ್ ಎದ್ದವ್ನೆ. ಅಲ್ಲ ನಮ್ಮ ಅತ್ತೆಮ್ಮನ ಮಗ್ಳು ನೋಡೋವೊತ್ಗೆ ನನ್ನಂಗೆ ಇದ್ಲು. ಇನ್ನು ನಮ್ಮ ಅತ್ತೆಮ್ಮ ಇನ್ನೆಂಗಿದ್ಲೋ? ಮಗ್ಳು ಇನ್ನೆಂಗಿದ್ಲೋ ? ಅಲ್ಲ ಇವ್ಳು ಕೊರಮತಿ ಕಳ್ಸಿಬಿಟ್ಟವ್ಳಲ್ಲ. ನಮ್ಮ ಅತ್ತೆಯಮ್ಮ, ನಮ್ಮ ಅತ್ತೆಮ್ಮ ಏನ್ ಮಾಡಿಬಿಟ್ಲು ನೋಡ್ದಾ ಅಂದ.

ಏಯ್ ನನ್ನ ಹಿಂದೆ ಬಂದ್‌ಗಿಂದೇಯಾ. ನಮ್ಮ ತಾಯಿಗೆ ಏನಂತ ಹೇಳ್ಲಿ ? ನಮ್ ಅತ್ತೇ ಮಗಳನ್ನ ತಂದು ನಾನು ಮದ್ವೆ ಮಾಡ್ಕೋತೀನಿ ಅಂತ ನಾನು ಹೇಳಿರೋದು. ಮರಗೋಟಿಗೆ ಕಟ್ಟಿಬಿಟ್ಟವ್ರೆ. ಬರ್ಬೇಡ ನನ್ ಹಿಂದೆ ನಮ್ಮಮ್ಮ ಬೈತಾಳೆ ಅಂದ.

ಆದರೂ ಇವ್ಳು ವೋಗ್ತಾಳೆ, ಎಷ್ಟು ದೂರದಿಂದ ಕಲ್ಲೇಟಿಂದ ಬಡಿದ್ರು ಮರ ಒದ್ದಿಬಿಡೋಳು. ಇವಳಿಗೆ ಏನು ತಗೋಲೋಲ್ದು. ಸರಿ ಅವ್ನ ಮುಂದೆಯಾ, ಇವ್ಳು ಹಿಂದೆಯಾ, ಇಂಗ್ ಮಾಡಿ ಹೊರಟ್ರು. ಹಿಂಗ್ ಮಾಡಿ ಹೋಗಿ, ಆಗ ಅಲ್ಲಿ ಏನ್ಮಾಡ್ದ ? ಮನೆಗೋದ. ಅರಮನೆಗೆ ಹೋದಾಗ, ಅಮ್ಮ ಮತ್ತೇ ನಮ್ಮ ಅತ್ತೆಮ್ಮನ ಮಗಳು ಕೈತೊಳೆದು ಮುಟ್ಟೇಕು ಕಣಮ್ಮ ಅಂಗಿದ್ಲು. ನನ್ನಂಗೆ ಇದ್ಲು ಕಣಮ್ಮ. ಆದ್ರೆ ನಮ್ಮತ್ತೆ ಈ ಕೊರಮತಿ ಕಳ್ಸಿಬಿಟ್ಟವ್ಳಲ್ಲಮ್ಮ ? ಈ ಮುಂಡೆ ಬ್ಯಾಡ ಅಂದ್ರೂ ಕೇಳ್ಲಿಲ್ಲ. ನನ್ನ ಹಿಂದೆ ಬಂದ್ಲು. ಏನ್ಮಾಡೋಣ ?

ಅಪ್ಪ ಮಾಡೊಷ್ಟು ಬದುಕೈತೆ. ತಿನ್ನೋಷ್ಟು ಅನ್ನೈತೆ. ಅವಳು ಇದ್ರೇ ಏನ್ಮಾಡ್ತಾಳೆ ? ಕಸ ನೀರು ಮಾಡ್ಕೊಂಡು ಇರ್‍ತಾಳೆ. ನೀನು ಇನ್ನೊಬ್ಬಳನ್ನ ಮದ್ವೆ ಮಾಡ್ಕೋಳಿವಂತೆ ಇರು ಅಂತ ಅವಳನ್ನು ಅಲ್ಲೆ ಇಟ್ಕೊಂಡ್ರು.

ಅವ್ರು ಮರ ತೆಗೆಯೊಲ್ಲ ಏನಿಲ್ಲ. ಅವ್ರು ಹಿಂಗೇ ಕಸನೀರು ಮಾಡ್ಕೊಂಡು ಇರ್‍ತಾಳೆ. ಇನ್ನು ಮತ್ತೇ ಮದ್ವೆ ಲಗ್ನ ಬರುತ್ತುಲ್ಲ ? ಆಗ ವೋದ. ಚುಂಚನಹಳ್ಳಿಗೆ ವೋದ. ಒಂದು ಹೆಣ್ ನೋಡ್ದ. ಇವ್ನು ಮನೆಗೆ ಏನೂ ಹೇಳೊದಿಲ್ಲ; ಅವ್ರ ತಾಯಿ ಕುಟ್ಟೆ. ಇನ್ನ ಹೋಗ್ಬೇಕಾದ್ರೆ ಬತ್ತಲೇ ಸುಮ್ನೇ, ಎದ್ದು ವೋಗ್‌ಬಿಡ್ತಾನೆ. ಹೆಣ್ ನೋಡ್ಕೋತಾನೆ, ಬತ್ತಾನೆ. ಮನೆಗೆ ಬಂದಾಗ ತಾಯಿ ಏನಂದಾಳೆ 'ಅಪ್ಪ ಎಲ್ಲಿಗೋಗಿದ್ದೆ ?' ಹೇಳೋದು ಇಲ್ಲ, ಕೇಳೋದು ಇಲ್ಲ. ಹೋದೋನು ಹೋದಂಗೆ ಹೋಗ್ಬಿಡ್ತಿಯಲ್ಲ ಅಂತ ಅಂದ್ಳು. ಅಂಗ್ ಅಂದಾಗ ಅಮ್ಮ ಹಿಂಗೆಂಗೇ ಚುಂಚನಹಳ್ಳಿಗೆ ಹೋಗಿದ್ದೆ. ಒಂದ್ ಹೆಣ್ಣು ನೋಡಿದ್ದೀನಿ. ಚೆನ್ನಾಗೈತ್ತೆ ಕಣವ್ವ. ಮದ್ವೆ ಆಗಬೇಕು ಚೆನ್ನಾಗೈತೆ ಅಂದ. ಆಗ ಇವ್ರು ಕೇಳ್ಕೊಂಡ್ಲಲ್ಲ? ಅವ್ಳು ಏನಂದ್ಳು? ಅಲ್ಲ ಕಣತ್ತಮ್ಮ ನಮ್ಮಪ್ಪನ ಮನೆಗೆ ಇರೋತಕ್ಕಾನೂ ಎಂಟು ದಿನಕ್ಕೊಂದ ಸರಿ ಗಂಗಮ್ಮನ ಮಡೀನೇ. ಈಗ ಗಂಗಮ್ಮನೂ ಇಲ್ಲ; ಗೌರಮ್ಮನೂ ಇಲ್ಲ. ಅಲ್ಲಿ ನಿನ್ಗೇನು ? ಏನೂ ಇಲ್ದಂಗ್ ಆಯ್ತೋನೆ ಗೋಟಿ, ವೋಗು. ನಿನ್‌ಗೇನ್ ಬೇಕು, ಅದನ್ನ ತಗೊಂಡು ವೋಗಿ ಗಂಗಮ್ಮನ ಮಾಡ್ಕೊಂಡು ಬಾ ವೋಗು ಅಂದ್ಲು. ಆಗ ಇವಳು ಏನ್ಮಾಡಿದ್ಲು ? ಎಲ್ಲಾ ಅವ್ರ ಅತ್ತೇತವ ಇಸ್ಕೊಂಡ್ಲು. ಅದೇ ಬೇಳೆ ಎಲ್ಲಾ, ಅವ್ರು ಅತ್ತೇತವ ಇಸ್ಕೊಂಡ್ಲು. ಆಮೇಲೆ ಅಂಗ್ಡಿಗೆ ವೋದ್ಲು ಕಡ್ಡಿ, ಕರ್ಪೂರ ತಕ್ಕೊಂಡ್ಲು. ತಕ್ಕಂಡೋಳೆ ಗಂಗಮ್ಮ ಮಾಡಾಕ್ ತಗೊಂಡೋದ್ಲು. ಸಾಮಾನ್ನೆಲ್ಲ ಗಂಗೇ ಒಳಕ್ ಕಳ್ಸಿಬಿಟ್ಲು. ಈ ಮರ ಇತ್ತಲ್ಲ ? ಅವಳ ಉದ್ದಕ್ಕೂ, ತಗಲಿಸ್ಕೊಂಡಿತ್ತು. ಅದನ್ನೇ ಕುಕ್ಕೆ ಮಾಡ್ಕೊಂಬಿಟ್ಲು. ಕಣೆ ಏಳ್ತೀನಿ ಅಂತ ಊರೊಳಗೆ ವೋದ್ಲು.

ಊರೊಳಗೆ ಹೋದ್ಲು. ಅಲ್ಲಿ ವೋದಾಗ ಇವ್ನು ಹೆಣ್ ಕೊಡ್ತೀನಿ ಅಂದಿದ್ರಲ್ಲ ? ಮಾತಾಡಿದ್ರಲ್ಲ ? ಅವಳ ಗಂಡಂಗೇ. ಆಗ ಅವರು ಹೆಂಗ್‌ಹೆಂಗಸ್ರು ಕೇಳ್ಬೇಕಾ ? ಬನ್ರಿ ನಾನೊಂದಿಷ್ಟು ಕಣೇ ಕೇಳ್ತೀನಿ ನಮ್ಮುಡುಗಿ ಕೊಡೋ ವಿಚಾರಕ್ಕೆ ಅಂತ ಕರೆದ್ರು. ಕರೆದಾಗ ಇವ್ಳೇನೊ ಕಟ್ಟಿ ತಟ್ಕ ಪಟ್ಕಾ ಅಂದ್ಬಿಡ್ತಾಳೆ.

ಅಮ್ಮ ಅಲ್ಲಾ ನಿನ್ನ ತಲೇ ಯಾತರ ಬೆಳೆಸಿದ್ದೆ ? ಅಯ್ಯೋ ನನ್ನ ತಲೇ ಬೆಳ್ದಿದ್ದ ಕೇಳ್ತಾ ಇದ್ದೀಯಾ ? ಚೆಂದಾಗಿ ಬೆಳಿಕೆ ಏನು ಮಾಡಬೇಕು ಅಂದಳು. ಅಲ್ಲಾ ಚೌರಾ ಮಾಡೋರನ್ನ ಕರ್‍ಕೊಂಬಂದು ಚೌರ ಮಾಡ್ಸಿ, ಕಲ್ಲುಮುಳ್ಳು ಉಯ್ಯೋರನ್ನ ಕರ್‍ಕೊಂಬಂದು ಕಲ್ಲುಮುಳ್ಳು ಉಯ್ಸಿಸಿ, ಮುಂಡ್‌ಗಳ್ಳಿ ಹಾಲು ಉಯ್ದುಬುರುಗು ಮಣ್ಣಾಕಿ ಮಾಳಿಗೆ ಪಟ್ಟಿ ಮ್ಯಾಲೇ ಮಲಗ್ಸಿದ್ರೆ ಇದಕ್ಕಿನ್ನ ಹತ್ತು ಸಮಕ್ ಬೆಳೆಯುತ್ತೆ ಅಂದ್ಲು.

ಅಲ್ಲ ಒಂದೇ ಮನೆತವ ಇಷ್ಟೋತಕ್ ಹೇಳ್ತಾ ಕೂತ್ಕೊಂಡ್ರೇ, ನಮ್ಮ ಹೊಟ್ಟೆ ಹೊರೆ

ಯುತ್ತೇನಮ್ಮ ಅಂದ್ಲು. ಅಷ್ಟು ಮಾತ್ ಹೇಳ್ಬಿಟ್ಟು ಎದ್ದು ಬಂದ್‌ಬಿಟ್ಲು. ಮರ ತಗಲಾಕ್ಕೊಂಡ್ಲು. ವೊಂಟ್‌ಬಿಟ್ಲು.

ಇವ್ರು ಹೆಣ್ ನೋಡ್ಕೊಂಡು ವೋಗಿದ್ರಲ್ಲ ? ನಮ್ಮೆಣ್ಣಿಗೂ ಅಂಗೇ ಮಾಡೋಣ ತಡೀ ಅಂದ್ರು. ಚೌರದವರನ್ನ ಕರ್ಕೊಂಬಂದು ಚೌರ ಮಾಡಿಸಿದ್ರು. ಕಲ್ಲುಮುಳ್ಳ ಉಯ್ಯೋರನ್ನ ಕರ್ಕೊಬಂದು ಕಲ್ಲುಮುಳ್ಳು ಉಯ್ಸಿದ್ರು. ಮುಂಡ್‌ಗಳ್ಗಿ ಆಲು ಉಯ್ಯಿಸಿ, ಬುಡದ ಮಣ್ಣು ಹಾಕಿದ್ರೂ. ಮಾಳಿಗೇ ಪಟ್ಟೆ ಮ್ಯಾಲೆ ಮಲಗ್ಸಿದ್ರು. ಬೆಳಕು ಅರಿಯೋದ್ರಾಗೇ ತಪತಪನೇ ಬಿದ್ದು ಸತ್ತೋದ್ಲು. ನೀನು ನೋಡ್ಕೊಂಡ್ ಹೋದ ಹೆಣ್ಣು ಸಾಯ್ತು ಅಂದಾಗ, ಅವನು ವೋದಾ. ಮಣ್ಣಿಗೆ ವೋದಾ. ಬಂದ. ಮನೆಗೆ ಬರ್ತಾಲೂವೆ ಇನ್ನೊಂದು ಎಂಟು ದಿವ್ಸ ಸುಮ್ನೆ ಇದ್ದ. ಇನ್ನ ಬೇರೆ ಪಟ್ಟಣಕ್‌ವೋಗಿ ಇನ್ನೊಂದು ಹೆಣ್ಣು ನೋಡ್ದಾ. ಅಲ್ಲಿ ಹೆಣ್ಣು ನೋಡ್ಕೊಂಡು ಮನೆಗೆ ಬಂದ. ತಾಯಿ ಇರ್ತಾಳಲ್ಲ ? ಅವಳ ತಾಯಿ ಎಲ್ಲಿಗೋಗಿದ್ದ್ಯಯಪ್ಪ ಅಂದ್ಲು.

"ಅವ್ವ ಈಗ ಮಾಯಸಂದ್ರ ಅನ್ನೋ ಪಟ್ಣಕ್ ವೋಗಿದ್ದೆ. ಹೆಣ್ ನೋಡಿದ್ದೀನಿ ಅಲ್ಲಿ. ಒಳ್ಳೆ ಚೆನ್ನಾಗೈತೆ. ಅಪ್ಪರ ದಿವ್ಸ ಬಿಡಂಗಿಲ್ಲ ಕಣವ್ವ. ಅವತ್ಲೇ ಲಗ್ನದ ಶಾಸ್ತ್ರನೂ ಅವತ್ತೇ ಮದ್ವೇನೂ ಅವತ್ತೇ ಅಂತ ತೀರ್ಮಾನ ಮಾಡ್ಕೊಂಡು ಬಂದೇ ಬಿಟ್ಟಿದ್ದೀನಿ ಕಣಮ್ಮ ಅಂತ ಹೇಳ್ದಾ.

ಇವ್ಳ ಕೇಳಿಸ್ಕೊಂಡ್ಲಲ್ಲ, ತಾಯಿ ಮಗ ಮಾತಾಡೋವಾಗ. ಅಲ್ಲಕಣ ಅತ್ತೆಮ್ಮ ಮತ್ತೆ ನಮ್ಮಮ್ಮನ ಮನೇಲಿ ಇರೋವಾಗ ಎಂಟು ದಿವ್ಸಕ್ಕೊಂದು ಸರ್ತಿ ಗಂಗಮ್ಮ ಮಾಡಿವೇ. ಇಲ್ಲಿ ಗಂಗಮ್ಮನೂ ಇಲ್ಲ ಗೌರಮ್ಮನೂ ಇಲ್ಲ ಅಂದ್ಲು. ಅಲ್ಲ ಮರಗೋಟಿ ನಿಂಗ್ ಯಾವಾಗ್ಲೂ ಗಂಗಮ್ಮಂದೇ ಆಗ್ಯೆತೆ. ವೋಗೆ ನಮ್ಮನೇಲಿ ಇಲ್ದಂಗ ಆಗ್ಯೆತಾ ?. ವೋಗಿ ಮಾಡ್ಕೊಂಬಾ ಅಂತ ಅಂದ್ಲು. ಅವತ್ನಂಗೇ ಎಲ್ಲಾ ಸಾಮಾನು ಇಸ್ಕೊಂಡು ಹೋಗಿಬಿಟ್ಟು, ಎಲ್ಲಾ ಗಂಗೇಗೆ ಬಿಟ್ಟು, ಕುಕ್ಕೆ ಮಾಡ್ಕೊಂಡು ಕಣೆ ಹೇಳ್ತೀನಿ ಅಂತ ವೋದ್ಲು. ಇವ್ರು ಹೆಣ್ ನೋಡಿದ್ರಲ್ಲ. ಅದೇ ಮನೇಗೂ ಕರೆದ್ರು. ಅಲ್ಲಿಗೂ ವೋದ್ಲು. ಅಲ್ಲಿಗೆ ವೋಗಿ ಕಣೆ ಹೆಳ್ದಂಗೆ ಏನೊ ತಟ್ಕಪಟ್ಟ ಹೇಳಿದ್ಲು. ಹೇಳ್‌ದೋಳೆ ಅವತ್ತು ಹುಡುಗಿ ತಲೇ ಬಗ್ಗೆ ಕೇಳಿದಳು. ಅಮ್ಮ ನಿನ್ನ ತಲೆ ಏನಾದ್ರೂ ಕೊಟ್ಟು ಬೆಳಸಿದೆಯಮ್ಮ ? ನೋಡಮ್ಮ ಎಂಗೆ ಬೆಳ್ದೈತೆ ನೋಡಮ್ಮ ಅಂದ್ಲು. ಏನ್ ಮಾಡಬೇಕು ಅಂದಳು. ಅಲ್ಲ ಚೌರ ಮಾಡೋರ್ನ ಕರ್ಕೊಂಬಂದು ಚೌರ ಮಾಡ್ಸಿ, ಕಲ್ಲುಮುಳ್ಳು ಉಯ್ಯುರ್ನ ಕರ್ಕೊಂಬಂದು ಕಲ್ಲುಮುಳ್ಳು ಉಯ್ಯಿಸಿ, ಮುಂಡಗಳ್ಗಿ ಹಾಲು ಉಯ್ದು, ಬುರುಗ ಮಣ್ಣು ಹಾಕಿ, ಮಾಳಿಗೆ ಕಟ್ಟೆ ಮ್ಯಾಲೆ ಮಲಗ್ಸಿದ್ರೆ ಇದಕ್ಕಿನ್ನ ಹತ್ತೂ ಸಮಕ್ ಬೆಳಿಯುತ್ತೆ ಅಂದ್ಲು. ಅಂತ ಹೇಳ್ಬಿಟ್ಟು ಬಂದ್‌ಬಿಟ್ಲು, ಮನೇಗೆ. ಅದೇ ಮರ ತಗಲಾಕ್ಕೊಂಡು ಬಂದ್ಲು. ಇವ್ರು ಅದೇ ರೀತಿ ಮಾಡ್ಬಿಟ್ರು.

ಚೌರ ಮಾಡಿಸಿದ್ರು, ಕಲ್ಲುಮುಳ್ಳು ಉಯ್ಯಿಸಿ, ಬೂದಿ ಮಣ್ಣಾಕಿ, ಮಾಳಿಗೆ ಮ್ಯಾಲೇ

ಮಲಗ್ಸಿದ್ರು. ಇನ್ನು ನೀನು ನೋಡ್ಕೊಂಡ್ ವೋದ ಹೆಣ್ಣು ಸಾಯ್ತು ಅಂತ ತಿರ್ಗ್ಗಿ ಅಂಗಂದ್ರು. ಅಲ್ಲಿಗೆ ಎರಡೂ ವೋದ್ವ ? ಅಲ್ಲಿಗೇನ್ ಏಳ್ದಾ ಅವ್ವ ? ಅಯ್ಯೋ ನಾನ್ ಎಲ್ಲಿಗೋದ್ರೂವೇ ಇಂತ ಕಡೆ ಕಾಲಿಟ್ಟಾಗ ಇಂಗ ಆಯ್ತೆ, ಇಂತ ಹೆಣ್ಣೇ ಹಿಂಗ್ ಆಯ್ತು, ನಾನೋಗಿದ್ದ ತವ ಎಲ್ಲಾ ಇಂಗೇ ಆಯ್ತಲ್ಲ ? ಎರುಡಾರಾಗೋಗಿ ಹೆಣ್ಣು ನೋಡಿದ್ದ. ನನಗೆ ಅದೃಷ್ಟವೋ ಏನೋ ಇನ್ನು ವೋಗೋದೆ ಬ್ಯಾಡ ಅಂತ ಸುಮ್ನೆ ಆಗ್ಬಿಟ್ಟ.

ಇನ್ನು ಅಂಗಾಡಿ ಇಂಗಾಡಿ ಮದ್ದೆ ಕಾಲ ಕಳದೋಗ್ ಬಿಡ್ತು. ಮುಂಗಾರು ಹುಟ್ಟಿಬಿಡ್ತು. ಅವ್ವ ಈಗೇನು ಅಂದ್ಲು ? ಮುಂಗಾರು ಮಳೆ ಬಿತ್ತು. ಎಲ್ಲಾ ಬೇಕಾದಂಗೆ ಹೊಲ ಗೇಯ್ಕೊಂಡು ಜೋಳ ತೊಳಿತಾ ಇದ್ರು. ಇವ್ವ ಏನಂದ್ಲು ? ಸಾಯಂಕಾಲದಲ್ಲಿ ? ಅಲ್ಲಕಣೆ ಅತ್ತಮ್ಮ ಮತ್ತೆ ಎಲ್ಲಾರೂ ಅಯ್ಯಾಲೋ ಅಂತ ಹೊಲ ಗೇಯ್ತಾರೇ, ಮುಂಗಾರಾಗ್ತಾದೆ ಅಲ್ಲಿ. ನಮ್ಮನೆಗಿನ್ನೂ ಹೊಲನೂ ಗೇಯಾಗಿಲ್ಲ. ಏನ್ ಮಾಡೋಂಗಿಲ್ವ ಅಂದ್ಲು. ಅಂಗ್ ಅನ್ನತ್ಲೇಯಾ ವೋಗಿದ್ಬಾ, ನೀನು ವೋಗಿ ಹೊಲ ಗೆಯ್ದು ಜೋಳನಾದ್ರೂ ತೊಳಸು ವೋಗು ಅಂದ್ಲು. ಅವನು ಇನ್ನೇನು ಮಾತಾಡೋಲ್ಲ. ಅಂಗ ಅಂತ್ಲೂವೇ ಇವ್ವ ಹೋದ್ಲು ಏಳಿದ್ಲೂ. ಅವ್ವ ಇನ್ನಾ ಅತ್ಲಾಗ ಒಂದಗೆರೆ, ಇತ್ಲಾಗೆ ಒಂದುಗೆರೆ, ನಾಕಲ್ವೆ ಎಕರೆ ಜ್ವಾಳ ತೊಳ್ಕೊಂಡ್‌ಬಂದ, ಕಡ್ಡಾಯಕ್ ತೊಳ್ಕೊಂಡ. ಮನೆಗೆ ಅಕ್ಕಿ ಬಡಿಯಂಗಾತು! ಅಲ್ಲಕಣಮ್ಮ ಅತ್ತಮ್ಮ ಎಲ್ರೂ ಅಯ್ಯೊಲೋ ಅಂತ ಜೋಳ ಕಾಯ್ತಾರೆ. ಅಲ್ಲಾ ನಮ್ಮನೆಗೇನೂ ಕಾಯೋಂಗಿಲ್ವ ಅಂದ್ಲು. ಅಲ್ಲ ಇಲ್ಯಾರು ವೋಗ್ತಾರೇ ಜ್ವಾಳ ಕಾಯಾಕೇ ? ಮರಗೋಟಿ ನೀನೆ ವೋಗಬೇಕು. ನಾವು ಇನ್ನೇನು ವೋಗಾಕ ಆಗ್ತದ ಅಂದ್ಲು. ಅಂತ್ಲೆ ಅಂಗತ್ಲೂವೇ ಇವ್ಳೇ ಎದ್ಲು. ಎರಡು ಅಸು ಇರ್ತಾವೆ. ಅವಸು ಹಿಡ್ಕೋಕ್ಕೋದು, ಕುಡ್ಲು ತಗೋಳೊದು, ಕಸ ತುಂಬಿಕ್ಕೋಳೊದು, ಕಸ ಹೊತ್ಕೋಳೋದು, ಕುಡ್ಲು ತಗೋಳೊದು ಜೋಳ ಕಾಯಾಕ್ ವೋಗೋದು. ಜ್ವಾಳ ಕಾಯೋತವ ಒಂದು ಹೊರೆ ನುಗ್ಗಲನೊಪ್ಪು, ದನೀಗೆ ಒಂದು ಹೊರೆ ಕೀರೆ ಸೊಪ್ಪು ಕಿತ್ಕೊಂಡು ಜ್ವಾಳ ಕಾಯ್ಕೊಂಡು ಸಾಯಂಕಾಲ ಕುಯ್ದಿಕೊಂಡು ಒಂದು ಹೊರೆ ನುಗ್ಗೆಸೊಪ್ಪು ಒಂದು ಹೊರೆ ಹುಲ್ಲು ಎರಡನ್ನು ಒಂದಕ್ ಕಟ್ಕೊಂಡೋಗಿ ಹೊತ್ಕೊಂಡು ಮತ್ತೇ ತಿರ್ಗ್ಗಾ ಹೊರೆ ಇಡ್ಕೊಂಡು ಮನೇಗ್ ಬರೋಳು. ಮನೆಗೆ ಬಂದಾಗ ಆ ನುಗ್ಲಸೊಪ್ಪು ಹರಡೋದು, ಹುಲ್ಲು ಬಡಿಯೋದು, ದನೀಗೆ ಹುಲ್ಹಾಕೋದು. ಅವತ್ತು ಅಡಿಗೆ ಮಾಡ್ತಿರ್ತಾಳೆ. ಒಂದು ಈಚೆಗೆ ಒಂದು ಸಿಲ್ವರ್ ತಟ್ಟೆ ಒಂದು ಸಿಲ್ವರ್ ಚೆಂಬು ಕೊಟ್ಟಿರ್ತಾಳೆ, ಕೂರಮರೋಳು ಅಂತ. ಅದ್ನ ಈಚೇಗೆ ಮಡಗಿತ್ತವ ತಗೋಂಬಂದು ಊಟ ಮಾಡೋದೂ ಈಚಲೇ ಮಲಿಕ್ಕೋಳೋದೂ ಈಂಗ ಮಾಡ್ಕೊಂಡು ಇದ್ಲು. ಆಗ ಇವ್ವ ಈತರ ಮಾಡೋಳು. ವೊತ್ತಿಲ್ಲಿಂದ ಊಟಲ್ಲ, ಊಟ ಮಾಡೋದೂ ಮಲಿಗೋದೂ ಅಷ್ಟೇ ಮಾಡ್ಕೊಂಡು ಇರೋಳು. ಆಗ ಮಗ ಏನಂದ ಅವ್ವ ಮತ್ತೆ ಯಾಕೋ ನನಗೆ ಬೇಜಾರಾಗ್ತಾ ಐತೆ. ದೊಂಬರಾಟ ಆಡಿಸಬೇಕು ಕಣವ್ವ ಅಂದ. ವೋಗಪ್ಪ. ನಿಂಗ್ ಯಾರಾದ್ರೂ ಬೇಡ ಅಂದ್ರಪ್ಪ ? ವೋಗಿ ಆಡಿಸು ಅಂತ ಅಂದ್ಲು.

ಆಗ ವೋದ. ದೊಂಬರಟ್ಟಿಗೆ ಹೋದ. ವೀಳ್ಯೆ ಕೊಟ್ಟು, ವೀಳ್ಯ ಕೊಟ್ಟಂದ ಅವತ್ತು.

ದೊಂಬರಾಟ ಆಡಿಸದು ಯವಾಗ ? ಅಂತ ಕೇಳಿದಳು ತಾಯಿ. ಈವತ್ತು ವೀಳ್ಯ ಕೊಟ್ಬಂದಿದ್ದೀನಿ, ಬತ್ತಾರೆ ಕಣವ್ವ ಸಾಯಂಕಾಲದೊತ್ತಿಗೆ ದೊಂಬರಾಟ ಆಡ್ತಾರೆ. ಆತು ಒಳ್ಳೇದ್ ತಗೋ. ಇವ್ರು ಕೇಳ್ಕೊಂಡಿದ್ಲು. ಇವ್ರು ಸಾಯಂಕಾಲ ಎಂಟು ಗಂಟೆ ತನ್ಕ ಬರ್ಲೇ ಇಲ್ಲ. ಇನ್ನ ದೊಂಬರಾಟ ನೋಡಾಕ್ ವೋಗ್ಬೇಕಂತ ಅವರ ತಾಯಿ ಅಡಿಗೆ ಮಾಡವ್ಳೆ. ಎಲ್ಲಾ ಮಾಡವ್ಳೆ. ಆಗ ಅವರು ತಾಯಿ ಮಗ ಊಟ ಮಾಡ್ಕೊಂಡು ಹೊರಟವ್ರೆ. ಇವ್ರು ಸಿಲ್ವರ್ ತಟ್ಟೆಗೆ ಮುದ್ದೆ ಇಕ್ಕವಳೆ. ಚೆಂಬಲ್ಲಿ ನೀರು ಮಡಿಗವಳೆ. ಇನ್ನು ಬರ್ಲಿಲ್ಲವಲ್ಲ? ನಾವು ದೊಂಬರಾಟ ನೋಡಾಕ್ ವೋಗ್ಬೇಕು ಅಂತ ದಾರಿ ದಾರಿ ಕಾಯ್ತಾ ಅವ್ಳೆ. ಅಷ್ಟೊತ್ತಿನಲ್ಲಿ ಬಂದ್ಲು. ಆಗ ಏನಂದ್ಲು ಇದಿರ್‌ಗೇ ಸಿಕ್ಕಿದ್ಲಲ್ಲ. 'ಅಲ್ಲ ಕಣೇ ಮರಗೋಟಿ ದೊಂಬರಾಡ್ತಾರೆ. ನೋಡಾಕ್ ವೋಗೋಣ ಅಂದ್ರೆ ಎಷ್ಟು ಕರೆದ್ರು ನೀನು ಬರೋದೆ ಇಲ್ವಲ್ಲ ? ಅಲ್ಲ ಇಷ್ಟೊತ್ತರ ಏನೇ ನೀನು ಜ್ವಾಳ ಕಾಯೋದೂ ? ನೀನು ಬರೋಲ್ವೇನೆ ದೊಂಬರಾಟ ನೋಡಾಕೆ ? ಅಯ್ಯೋ ನಮಗ್ ತಾಳೊಂದು ಕೇಡು ಮ್ಯಾಳೊಂದು ಕೇಡು. ನಾನು ಜೋಳದಿಂದ ತಿರ್ಗಿ ತಿರ್ಗಿ ಕಾಲೆಲ್ಲ ಗಾಯವಾಗಿವೆ. ಅಲ್ಲ ನಂಗ್ ಮ್ಯಾಳೊಂದು ಕೇಡು ವೋಗ್ರಿ ನೀವು ಅಂದ್ಲು. ಅಂಗಾದ್ರೇ ನೀನು ಬರಲ್ಲೇನೆ ? ಇಲ್ಲ. ನಾನು ಬರಲ್ಲ ನೀವು ವೋಗ್ರಿ. ಇವ್ರು ವೋಗ್ಬಿಟ್ರು.

ಆ ಮಾತ ಹೇಳಿ ಇವ್ರು ಹುಲ್ಲು ಬಡಿದ್ಲು. ಬಡಬಡನೆ ಬಂದುಬಿಟ್ಲು. ದನಕ್ಕೆ ಹೋಗ್ಬಿಟ್ಟು ನುಗ್ಲು ತೊಪ್ಪು ಹರಡಬಿಟ್ಲು ಊಟಾನೂ ಇಲ್ಲ ಏನೂ ಇಲ್ಲ ವೋದವ್ಳೇ ಸರಸರನೇ ನೀರು ತಂದು ನಾಕು ಗಡಿಗೇಯಾ ಸರಸರನೆ ಸ್ನಾನ ಮಾಡ್ಕೊಂಬಿಟ್ಲು. ಸ್ನಾನ ಮಾಡಿದ್ಲಲ್ಲ ಮರ ತಗಲಾಕ್ಕೊಂಡಿದ್ಲಲ್ಲ ? ಮರ ತೆಗೆದು ಬಿಟ್ಟು ಗೂಟಕ್ಕೆ ನೇತಾಕಿದ್ದೇ ಸ್ನಾನ ಮಾಡ್ಕೊಂಡು ಪೆಟ್ಟಿಗೆ ಒಳಗೆ ಸೀರೆ ಒಡವೆ ಎಲ್ಲಾ ಇತ್ತು. ಬೇರೆ ಸೀರೆ ಉಟ್ಕೊಂಬಿಟ್ಲು. ಒಡವೆನೆಲ್ಲ ಇಕ್ಕೊಂಡ್ಲು. ತಲೆ ಕೆರ್ಕೊಂಡು, ಜಡೆ ಹಾಕ್ಕೊಂಡ್ಲು. ಅಲ್ಲಿ ದೊಂಬರಾಟ ಆಡಾಕೇ ಗೋವಿಂದ ಅಂತರಲ್ಲ ಫಸ್ಟು ವೋಗಿದ್ದೆ ದೊಣ್ಣೆ ಎತ್ತಿ ಇವ್ರು ಆಡಿದ್ಲು. ಇವ್ರು ಗಂಡ ವೀಳ್ಯಾ ಕೊಟ್‌ಬಂದ್ದಿದ್ನಲ್ಲ ? ಮುಂದೆ ಕುಂತಿದ್ನಲ್ಲ ? ಚೇರು ಹಾಕ್ಕೊಂಡು ಕೂತ್ಕೊಂಡವ್ನೇ. ಇವಳನ್ನು ನೋಡ್ದಾ. ದೊಂಬರೋಳನ್ನ. ಅಂಗೆ ಯೋಚ್ನೆ ಮಾಡ್ದ. ಅಲ್ಲಿ ಫಸ್ಟಾಗಿ ಹೋಗ್ಬಿಟ್ಟು, ಆಡ್ಬಿಟ್ಟು, ಇವಳ ಮನೇಗ್ ಬಂದ್ಲು. ಮರ ತಗಲಾಕ್ಕೊಂಡು ಮಲಿಕ್ಕೊಂಡ್ಲು ಮನೆಗೆ ಬರ್ತ್ತಾಲೂವೆ.

ಆಗ ಇವ್ನು ಏನಂತಾನೆ? ಅಲ್ಲ ಮನೇಲ್ ಇರೋಳು ಕೊರಮರೋಳು. ಇವಳು ದೊಂಬರೋಳು. ಇವ್ರು ದೊಂಬರೋಳು ಆದ್ರೂವೇ ಇದೇ ಹೆಣ್ಣು, ನಮ್ಮ ಅತ್ತೆ ಮಗಳಂಗೆ ಇವಳು ಅವ್ಳೆ. ಅವಳಂಗೆ ಇನ್ನು ಯಾರೂ ಇಲ್ಲ. ಇವಳು ದೊಂಬರೋಳು ಆದ್ರೂವೆ ಇವಳನ್ನೇ ನಾನು ಇನ್ನೊಂದು ಮದ್ವೆ ಆಗ್ಬೇಕು ಅಂದ. ನಾಟಕ ಬೆಳಕು ಅರಿಯೋ ತನ್ಕ ನೋಡ್ದಾ. ಇನ್ನೊಂದು ಸರಿ ದೊಂಬರಾಟ ಒಳ್ಗೆ ಇದ್ರೆ ಅಲ್ವ ಬರೋದು ಅತ್ತೆ ಮಗಳು ? ಅತ್ತೆಮಗಳು ಆಗ್ಲೇ ಮನಿಗ್ ಬಂದವಳೇ. ನೋಡಿ ನೋಡಿ ಸಾಕಾಗ್ ಬಿಟ್ಟು ನಾಟಕಕ್ಕೆ

ಹೋಗ್ಬಿಟ್ಟು ಮನೆಗೆ ಬಂದ. ಬಂದವ್ನೇ ಏನ್ಮಾಡ್ಬಿಟ್ಟ? ಸೀದಾ ದೊಂಬರಾಟಕ್ಕೆ ಹೋದ. ಇವ್ಳು ಆಗ್ಲೇ ಮರ ತಗಲಾಕ್ಕೊಂಡು ಗಂಡನೂ ಅತ್ತೆನೂ ಬರೋದ್ರಗಾಗಿ ದನ ಈಚೆಗ್ ಅಟ್ಟಿ, ಕಸಗೂಡಿಸ್ಕೊಂಡು, ಬಾಗಿಲಿಗೆ ಬೆಳಗಿ ರಂಗೋಲಿ ಬಿಟ್ಟು, ಕುಡ್ಲು ತಗೊಂಡು, ದನ ಇಟ್ಕೊಂಡು ಜ್ವಾಳದ ತವ ಹೋಗ್ತಾ ಇರ್ತಾಳೆ ಇವ್ಳು. ಆಗ ಜ್ವಾಳತಕ್ ವೋದ್ಲು. ಅವುರು ಬಂದ್ರು. ಇವ್ನು ಸೀದಾ ದೊಂಬರಟ್ಟಿಗೆ ವೋದಾ. ಮಗ ವೋಗಿ ಅಲ್ಲಿ ನಿಮ್ಮನೆಲಿ ಎಷ್ಟು ಜನ ಅವ್ರೇ ? ನಿಮ್ಮ ನಿಮ್ಮನೆಯವರು ಎಲ್ಲಿಗೋಗವ್ರೆ? ಎಲ್ಲಾ ಒಂದು ಕುರಿ ಎಲ್ಲಾನೂ ಪರಿಚಯ ಮಾಡ್ದ. ಅವ್ರು ಮನೇ ಜನಾನೆಲ್ಲ ಪರಿಚಯ ಮಾಡ್ದಾ. ಅವ್ರ ಮನೆನೆಲ್ಲಾ ಟೆಸ್ಟು ಮಾಡ್ದ. ಎಲ್ಲೆಲ್ಲಿ ನೋಡಿರ್ತೀಲೇನೆ ಅವ್ರ ಅತ್ತೆಮಗಳಂತೆ ಮಗಳಿಲ್ಲ. ಅವಳು ನಮ್ಮ ಅತ್ತೆಮಗಳಂಗೆ ಬಂದು ಫಸ್ಟು ದೊಣ್ಣೆ ಎತ್ತಿ ಆಡಿದ್ಲಲ್ಲ ಯಾರಾಗಿರ್ಬೋದು ? ನಮ್ಮ ಅತ್ತೆ ಮಗಳೇ ಏನಾದ್ರೂ ಆಗಿದ್ದಾಳ ? ನೋಡ್ಲೆಬೇಕು ಅಂಥ ಅಲ್ಲಿಗೆ ಬಂದು ತಿಳ್ಕೊಂಡ. ದೊಂಬರಟ್ಟಿ ಒಳಗಿಲ್ಲ, ಅತ್ತೇಮಗಳು. ಮತ್ತೆ ಬಂದವ್ನು ಇನ್ನೊಂದು ನಾಕೈದು ದಿವ್ಸ ಬಿಟ್ಕೊಂಡು ತಿರ್ಗಾ ಅವ್ರ ತಾಯಿಗೆ ಅವ್ವ ಮತ್ತೆ ನಂಗೆ ಯಾಕೋ ತುಂಬಾ ಬೇಜಾರಾಗುತ್ತೆ ಕಣವ್ವ. ಈವತ್ತು ಬೇರೆ ನಾಟ್ಕ ಆಡಿಸ್ಬೇಕು ತಿರ್ಗಾ ದೊಂಬರಾಟಕ್ಕೆ. ವೀಳ್ಯಾ ಕೊಡ್ಬೇಕು ಕಣವ್ವ ಅಂದ. ಅಂಗತ್ಲೂವೇ ಆಯ್ತಪ್ಪ ಆಡಿಸೋ. ನಿಂಗೆ ಬ್ಯಾಡ ಅಂದಿನಾ ಅಂದ್ಲು. ಅಂಗ್ ಅಂದಾಗ ತಿರ್ಗಾ ದೊಂಬರಾಟಕ್ಕೆ ವೀಳ್ಯ ಕೊಟ್ಟು ಬಂದಾ. ಬರ್ತಾಲೂವೆ ಅವತ್ತು ಬೇರೆ ನಾಟಕಕ್ಕೆ ಹೇಳಿಬಂದ ಅವತ್ತು. ಇವ್ಳು ಬಂದೇ ಇಲ್ಲ ನಾಟಕದ ದಿವ್ಸ. ಜಲ್ದಿ ಸರಿಯಾಗಿ ಬರೋಳು. ಅವತ್ತು ಲೇಟಾಗಿ ಬರ್ತಾಳೆ.

ಅವತ್ತು ಅಂಗೇ ಲೇಟಾಗಿರ್ತದೆ. ಲೇಟಾಗಿ ಬಂದ್ಲು. ಅಷ್ಟೊತ್ತಿಗೆ ಇವರಾಗ್ಲೆ ತಾಯಿ ಮಗನೂ ಊಟ ಮಾಡಿ ಆಗ್ಲೇ ಹೊರಟು ನಿಂತಿರ್ತಾರೆ. ಅಲ್ಲಾ ಮರಗೋಟಿ, ಅವತ್ಲೂ ಬರ್ದೇ ಹೋದೆ ನಾಟ್ಕ ನೋಡೋಕೆ. ಇವತ್ತಿಗಾದ್ರೂ ಬರಾಕಿಲ್ವೇನೆ? ಯಾವಾಗ ಬರ್ತೀಯೆ ನೀನು ? ಅಂತ ಕೇಳಿದರು.

'ಅಯ್ಯೋ ನೋಡ್ದ ನಮಗೆ ನಾಟ್ಕ ಒಂದು ಕೇಡ ನಮಗೆ ಮ್ಯಾಳ ಒಂದು ಕೇಡ ನಮಗೇ ತಾಳ ಒಂದು ಕೇಡ. ಹೋಗ್ರಿ ನೀವು ಅಕ್ಕಿ ಅತ್ಲಿಂದ ಹೊಡೆದ್ರೆ ಇತ್ಲಾಗ ಹೋಗ್ತವೆ, ಇತ್ತಿಲ್ಲಿಂದ ಹೊಡೆದ್ರೆ ಅತ್ಲಾಗೆ ಹೋಗ್ತಾವೆ. ಅತ್ಲಾಗೇ ಇತ್ಲಾಗೇ ಓಡಾಡಿ ಓಡಾಡಿ ಕಾಲು ಸೋತೋಗ್ಯೆತೆ. ಸಧ್ಯಕ್ಕೆ ವೋಗಿ ಎಷ್ಟೊತ್ತಿಗೆ ಮಲಿಕ್ಕೋಳ್ಳೋಣ ಅನ್ನೊಂಗೇ ಆಗ್ಯೆತೆ ಅಂದ್ಲು.

ಬಿಡತ್ಲಾಗೇ ನೀನು ಬರಲ್ವೇನೆ ? ಅಂಗಾದ್ರೆ ? ಇಲ್ಲ ನಾನು ಬರಲ್ಲ ಅಂದ್ಲು. ಅಂಗಂದ್ರೆ ಬಿಗಿಯಾಗಿ ಕದ ಆಕ್ಕೊಂಡು ಮಲಿಕ್ಕೊ ನೀನು ಅಂದ್ರು. ತಾಯಿ ಮಗ ಹೋದ್ರು.

ಇನ್ನೇನು ಮಾಡ್ದ ? ಇವತ್ತು ಎಂತೂ ನನ್ನ ಅತ್ತೆಮಗಳೆ ಬರೋಳು ನೋಡ್ಲೇಬೇಕು ಅಂದ. ಇವನೋಗೋ ದಾರಿ ಒಳಗೆ ಖುರ್ಚಿ ಚೇರು ಹಾಕ್ಕೊಂಡ. ಕೂತ್ಕೊಂಡ. ಕೂತ್ಕೋಣೊ ಹೊತ್ಗೇ... ಇವಳೇನು ಮಾಡಿದ್ಲು ? ಇವಳಿಗೆ ಊಟವು ಇಲ್ಲ ಏನೂ ಇಲ್ಲ. ದಡದಡನೇ ಹುಲ್ಲು ಬಡಿದ್ಲು ಹಾಕಿದ್ಲು. ನುಗ್ಗಲುಸೊಪ್ಪು ಹರಡಿದ್ಲು. ಬೇರೆ ಡ್ರಸ್ಸು ಆಕ್ಕೊಂಡು ಅವತ್ತು ಗೋವಿಂದ ಅಂದ್ರಲ್ಲ ನಾಟಕ ಆಡಕ್ಕೆ ಅಲ್ಲಿಗೋದೊಳೆ ದೋಣಿ ಎತ್ತಿ ಆಡಕ್ಕೋದ್ಲು. ಹೋಗ್ತಿದಂಗೆ ಮನೀಗೆ ಬಂದ ಅವ್ನು ಗಂಡ. ಮನೀಗ್ ಬಂದು ನೋಡ್ತಾನೆ. ಮರ ಆ ಗೂಟಕ್ಕೆ ತಗಲಾಕಿರ್ತಾಳೆ. ಈ ಮರ ಇರೋ ಹೊತ್ಗೆ ಹೌದೋ ಅಲ್ಲ ನೋಡು, ನಮ್ಮ ಅತ್ತೆ ಪಾಪ ಸತ್ತ ಹೆಣಕ್ಕೆ ಮದುವೆ ಮಾಡಿ, ಇಷ್ಟು ದಿನತನಕ ಇವಳು ಮರ ತಗಲಾಕ್ಕೊಂಡು ಕೊರಮರೊಳು ಕೊರಮರೊಳು ಅಂತ ನಾನು ಇಂಗೆ ಮಾಡಿದ್ನಲ್ಲ, ಅಂತ ಹೇಳಿ ಆ ಮರ ಇರೊಹೋತ್ಗೆ ಅಲ್ವ ತಗಲಾಕ್ಕೋಳೋದು ಅಂತ ಹೇಳಿ ಆ ಮರ ಕೆಚ್ಚಿಬಿಟ್ಟು ಪುಡಿಮಾಡ್ಬಿಟ್ಟು ಮನೆ ಹಿಂದಕ್ಕೆ ಎಸೆದುಬಿಟ್ಟು ವೋದ, ಅವನು ನಾಟ್ಕ ನೋಡಾಕೆ ತಿರುಗಿ.

ಇವಳು ಅತ್ಲಿಂದ ಬತ್ತಾ ಇರ್ತಾಳೆ. ಓ ಇವತ್ತು ಮರ ಇಲ್ಲ ಆಚೇ ತಗಲಾಕ್ಕಿದ್ದೀನಿ ಅಂತ ಇವನು ಅಂದ್ಕೊಂಡ. ಹೋಗ್ಬಿಟ್ಟ ನಾಟ್ಕ ನೋಡಾಕ್ಕೆ. ಅವತ್ತು ಮರ ಇವಳು ತಗಲಾಕೊಳ್ಳೇ ಇಲ್ಲ. ಬಂದ್ಲು ಮನೆಗೆ. ಮನೆಗೆ ಬಂದು ನೋಡ್ತಾಳೆ. ಮರ ಇಲ್ಲವಲ್ಲ? ದನ ಕಟ್ಟಕ್ಕೆ ಇಷ್ಟು ದಿನ ತನಕ ತಗಲಾಕ್ಕೊಂಡು, ಇವತ್ತು ಅಂಗೆ ಹೋಗ್‌ಬೇಕಲ್ಲ ಅಂದ್ಲು. ಅವತ್ತು ಎದ್ದೂ ಇಲ್ಲ ದನ ಕಟ್ಟೂ ಇಲ್ಲ ತೆಗೆದೂ ಇಲ್ಲ. ನಾಟ್ಕ ನೋಡ್ಕೊಂಡು ತಾಯಿ ಮಗ ಇಬ್ರೂ ಬಂದ್ರು ಜೊತೇಲಿ. 'ಅಲ್ಲ ಈವತ್ತು ನಮ್ಮ ಮರಗೋಟಿ ಎಲ್ಲೋದ್ಲು ? ನಮ್ಮ ಮರಗೋಟಿ ಎಲ್ಲೋ ಹೋಗ್ಬಿಟ್ಲಲ್ಲ ? ಕದ ತೆಗೆದೇ ಇಲ್ಲ? ದನ ಕಟ್ಟಾಕೆ ಇಲ್ವಲ್ಲ ? ಅಂದ್ಲು ಅವರತ್ತೆ. ಯವ್ವಾ ನಡಿಯವ್ವಾ ಎಲ್ಲೋ ಅವ್ಳೇ. ಅದೇನು ಅಂಗಂತೀಯಾ ಅಂದ. ಆಗ ಬಂದು ಕದ ತೆಗೆಯೋ ಹೊತ್ಗೆ ಮನೆ ಎಲ್ಲ ಬೆಳಕಾಯ್ತಂತಂತೆ. ಆಗ ಅವರ ತಾಯಿ, ಬಳೆಬಂಗಾರತಿ ಅವರ ತಾಯಿಗೆ ಕಾರ್ಡು ಬರೆದು, ಅತ್ತೇಮಾವ ಅವರ್ನೆಲ್ಲ ಕರ್ಸೇ ಕಂಡರು. ಆಗ ಪಟ್ಣ ಗುಡ್ಸಿ, ಪಟ್ಣ ಸಾರ್ಸಿ, ಮದುವೆ ಆಗಿ ಬಾಳ್ಕೊಂಡು, ಬದಿಕೊಂಡು ಹೋದ್ರಂತೆ.

ಹೇಳಿದವರು : **ತಿಮ್ಮಮ್ಮ**, ಕೋಳೇಘಟ್ಟ, ತುರುವೇಕೆರೆ ತಾಲ್ಲೂಕು.

## ೧೯. ಅಣ್ಣಂದಿರನ್ನು ಸಾಯಿಸಿದ ತಂಗಿ

ಒಬ್ಬ ದೊರೆಯಂತೆ. ಒಬ್ಬ ದೊರೆಗೆ ಐದುಜನ ಗಂಡುಮಕ್ಕಳಂತೆ. ಒಬ್ಬಳೇ ಹೆಣ್ಣು ಮಗಳಂತೆ. ಅವರೇನು ಮಾಡಿದ್ರು ? ಅವ್ವ ತ್ವಾಟಕ್ಕೆ ಓಯ್ತೀವಿ ಊಟ ಕಳಿಸವ್ವ ಅಂತ ಹೇಳ್ಬಿಟ್ಟು ಹೋದ್ರಂತೆ. ಇವ್ರು ಅಡಿಗೆ ಮಾಡಿದ್ರು. ಹೆಣ್ಮಗಳು ಕೈಯಲ್ಲಿ ಊಟ ಕೊಟ್ಟು ಕಳಿಸಿದ್ರು.

ಅಲ್ಲೊಂದು ಕೋತಿ ಬಂದು ಅಡ್ಡ ಅಕ್ಕೊಂಬಿಡ್ತು. ಅಡ್ಡ ಅಕ್ಕೊಂಬಿಟ್ಟು ಊಟನೆಲ್ಲಾ ತಿನ್ಕೊಂಬಿಡ್ತು. ಊಟನೆಲ್ಲಾ ಕಿತ್ಕೊಂಡು ತಿನ್ತಾಲೂವೇ "ಅಯ್ಯೋ ಊಟನೆಲ್ಲಾ ಕಿತ್ಕೊಂಡು ತಿಂದ್ಬಿಡ್ತಲ್ಲಾ, ಇನ್ನೇನು ಮಾಡದೋ" ಅಂತ ಹೇಳಿ, ತಿರ್ಗಾ ಮನಿಗೋದ್ಲು ಅಳ್ತಾಲೂವ. ಅಲ್ಲಿ "ಯಾಕ್ಕವ್ವಾ ಅಂತ ಕೇಳಿದ್ಲೂ" ಅವ್ವಾ. ಅವ್ವಾ ಯಾಕವ್ವಾ ಅಂತ ಕೇಳಿತ್ಲೂವೆ, ಕೋತಿ ಅಂತ ಹೇಳ್ಲಿಲ್ಲ. ಅಣ್ಣದೀರ ಮೇಲೆ ದೂರುಹೇಳ್ಬಿಟ್ಟು, ಅಣ್ಣಂದಿರೂ ಊಟ ಇಷ್ಟೊತ್ತಿಗೆ ತಂದಿದೀಯಾ ಅಂತ ಹೊಡಿದ್ಬಿಟ್ರು. ಕೈಗಳ ಬಳೀ ಎಲ್ಲಾ ಒಡೆದೋದೋ. ಉಟ್ಟ ಸೀರೆ ಎಲ್ಲಾ ಹರಿದೋಗ್ಬಿಡ್ತು ಅಂತ ಹೇಳಿ ಅವ್ವನ ಕೂಟ ಹೋಗಿ ದೂರುಹೇಳಿದ್ಲು. ಅವ್ವನ ಕೂಟ ದೂರ ಹೇಳ್ತಾಲೂವೇ, ನೋಡ್ದಾ ನನ್ನ ಇರೊಳ್ಬೊಬ್ಳು ಮಗ್ಳು, ಹಿಂಗ್ ಮಾಡಿದರಲ್ಲಾ ಅಂತ ವೋಗಿ, ಅವರನ್ನೋಗಿ ಕೊಲೆ ಮಾಡ್ಬಿಟ್ಟು ಬರೋಗ್ರೀ ಅಂತ ಹೇಳೀ ಗಂಡಂಗೆ ಹೇಳಿ ಕಳಿಸಿದ್ಲು.

ಆಮೇಲೆ ಗಂಡ್ ಏನಾದ್ದ? ಬಂದೋನೆ ಅವ್ರ ಐದು ಜನ ಮಕ್ಕಳ್ನುವೆ ಕಡಿದುಬಿಟ್ಟ. ಆಮೇಲೆ ಕಡಿದುಬಿಟ್ಟು ಮನೆಗೋದ. ಮನೆಗೋಗಿತ್ಲೂವೆ ಈ ಬಳೇಯವ್ರು ಬಂದಿದ್ರು. ಮಗಳು ಅಪ್ಪಾಜಿ, ಅಪ್ಪಾಜೀ ಬಳೆ ಕೊಡಿಸು ಅಂತ ಅಂದ್ಲು. ಆಮೇಲೆ ಬಳೆಯವ್ರ ಕರಿದ್ರು. ಬಳೆಯವ್ರ ಕರ್ದು ಬಾರಯ್ಯ ನಮ್ಮ ಉಡ್ಗಿಗೆ ಬಳೆ ತೊಡ್ಸು ಅಂದ. ಅವನು ಕೈಹಿಡಿದು ನೋಡಿ, ನಿಮ್ಮ ಮಗಳಿಗಾಗೋ ಬಳೆ ಇಲ್ಲಿಲ್ಲ. ಬೆಳಿಗ್ಗೆ ತತ್ತೀನಿ ಅಂತ ಹೇಳ್ಬಿಟ್ಟು, ಬಳೆ ಸಾಬಿ ಓಗ್ಬಿಟ್ಟ. ಇವ್ರು ಮಗದೀರು ಐದು ಜನಾನೂ ಕಡಿದಿದ್ರಲ್ಲ? ಐದು ಜನನೂ ಸಂಪಿಗೆಮರ ಆಗಿ ಉಟ್ಟವ್ರೆ. ಆಮೇಲೆ ಸಂಪಿಗೆ ಮರ ಆಗಿ ಉಟ್ಟಿತ್ಲೂವೆ ಇನ್ನು ಬೆಳಿಗ್ಗೆಯಾ ಬಳೆಸಾಬಿ ಬಳೆಹೊತ್ಕೊಂಡು ಬತ್ತಾಇದ್ರು. ಹೊಳೆ ದಡದಲ್ಲಿ ಈ ಐದು ಜನಾನೂ ಸಂಪಿಗೆ ಮರಾಗಿ ಹುಟ್ಟಿ ಸಂಪಿಗೆ ಹೂವಾಗ್ಲೇ ಗಮಗುಟ್ಟಾತಾ ಇರ್ತದೆ; ಗಮಗುಟ್ತಾ ಇರ್ತಾಲೂವೆ ನಿನ್ನೇ ದಿವ್ಸ ನಾನೋಗೋವಾಗ ಇರ್ಲಿಲ್ಲ. ಈವತ್ತಾಗ್ಲೇ ಗಮಗುಟ್ಟುತ್ತವಲ್ಲ? ಇದೇನು ಕಾರಣ ಇರಬಹ್ದು ಅಂತ ವೋಗಿ, ಬಳೆ ಮಲಾರ ಮಡಿಗ್ಬಿಟ್ಟು, ಸಂಪಿಗೆ ಹೂವ ಕಿತ್ಕೊಕೊಳ್ಳಕ್ಕೆ ಓದ. ಅವನೇನು ಅಂದ? ಸಂಪಿಗೆ ಮರ ಏನಂತು ? ಮುಟ್ಟದಿರು ಮುಟ್ಟದಿರು ಬಳೆಗಾರಶೆಟ್ಟಿ, ಕೋತಿಕುಟ್ಟೆ ಸರಸವಾಡಿ ತಾಯಿಕುಟ್ಟೆ ಚಾಡಿ ಹೇಳಿ, ತಂದೆ ಕುಟ್ಟ ತಲೆ ಹೊಡೆಯಿಸ್ಯವ್ಳೇ ತಂಗ್ಯಯಮ್ಮ ಅಂದ್ತು. ಆಮೇಲೆ ಐದು ಮರದ ತಕ್ಕೆ ವೋದ. ಐದು ಮರನೂ ಅಂಗೇ ಅಂದೋ. ಐದು ಮರದಾಗೂ ಹೂಕಿತ್ಕೊಂಡು, ಬಳೇ ಬಳೇ ಅಂತ ಸಾರ್ಕಂಡು ಬಂದ. ಆಮೇಲೆ ಬಾರಯ್ಯೋ ಬಳೇ ಶೆಟ್ಟಿ ಅಂತ ಕರೆದ್ರು.

ಬಾರಯ್ಯೊ ಬಳೇಶೆಟ್ಟಿ ಅಂತ ಕರೀತ್ಲೂವೆ ವೋದ. ಚಾಪೆ ಹಾಕಿಕೊಟ್ರು. ಕೂತ್ಕೊಂಡ. ಆಮೇಲೆ ಬಳೇತೊಟ್ಟುಕೊಳ್ಳಕೇ ಇಂಗೇ ಕುಂತ್ಕೊಂಡ್ರು. ಈ ಹೂವು ಗಮಗುಟ್ಟುತಿದ್ದಲ್ಲ? ಅಪ್ಪಾಜೀ ಹೂವ ಕೊಡ್ಸು ಅಪ್ಪಾಜೀ ಅಂತ ಹೇಳಿದಳು. ಆಮೇಲೆ ಸಾಬೀ ಎಲ್ಲೋ ಹೂವ ಗಮಗುಟ್ಟುತವಂತೆ ನಿಮ್ಮತ್ರ, ಕೊಡಿ ಸಾಬಿ ಅಂದ್ರು. ವೋಗಪ್ಪಾ ನಿನ್ನೆ ದಿವ್ಸ ವೋಗುವಾಗ ಏನೂ ಇರ್ಲಿಲ್ಲ. ಈವತ್ತು ಬರೋವಾಗ ಐದು ಸಂಪಿಗೆ ಮರ ಹುಟ್ಟಿ, ಆಗಲೆ ಹೂಬಿಡ್ತಾ

ಇದ್ವು. ಕಿತ್ಕೋಳಕ್ಕೆ ಹೋದೆ. ಅವೇನು ಅಂದೋ ''ಮುಟ್ಟದಿರು, ಮುಟ್ಟದಿರು ಬಳೆಗಾರಶೆಟ್ಟಿ. ಮುಟ್ಟಿದ್ರೇ ಹೂವು ಬಾಡ್ಯವು. ತಾಯಿ ಕುಟ್ಟಿ ಚಾಡಿ ಹೇಳಿ, ಕೋತಿಕುಟ್ಟಿ ಸರಸ ಆಡಿ, ತಂದೆಕುಟ್ಟಿ ತಲೆಹೊಡಿಸವ್ಳೆ ತಂಗಿಯಮ್ಮ ಅಂದ್ರು. ನಾನು ಅದರಗೂ ಬಿಡ್ಲಿಲ್ಲ. ಕಿತ್ಕೊಂಬಂದೇ. ನಾನು ಕೊಡದಿಲ್ಲ ಕಣಪ್ಪ ಅಂದ. ಅವಾಗ ಅವ್ರು ಅರ್ಥಮಾಡ್ಕೊಂಡು, ಆ ಮಗ್ಳುನ ತಗೊಂಡೋಗಿ ಸಂಪಿಗೆ ಮರದ ಮುಂದೆಲೆಯೇ ತಲೆ ಒಯ್ದು ಉಯ್ದರು. ಆ ಮಗದೀರೆಲ್ಲ ಆಗಲೇ ಎದ್ದ್ರು. ಅಷ್ಟೆ ಕಥೆ.

ಹೇಳಿದವರು : **ಗಿರಿಯಮ್ಮ**, ಕಾಡಸೂರು ಮುದಿಗೆರೆ.

# ೨೦. ಗೌಡನ ಮಗ

ಒಬ್ಬ ಗೌಡ. ಒಬ್ಬ ಗೌಡನಿಗೆ ಹೆಣ್ಣೊಂದು, ಗಂಡೊಂದು. ಹಿರೇಮಗಳು, ಅವಳ ಹಿಂದೆಗಡೆ ಒಬ್ಬ ಮಗ. ಅದ್ರಿಂದೇ ಮಕ್ಕಳಿರಲಿಲ್ಲ. ಅಪಾರ ದಿನದ ವರ್ಗೇ ಮಕ್ಕಳಿರ್ಲಿಲ್ಲ. ಅವ್ರು ಏನೋ ಗಿರೀ ಹತ್ತಿ ವರ ಬೇಡಿ ಒಂದು ಹೆಣ್ಣು ಗಂಡು ಪಡೆದ್ರು. ಅವ್ರಿಗೆ ಮುಪ್ಪಿನಕಾಲ ಆಗ್ಬಿಡ್ತು. ಮಗಳಿಗೆ ಮದ್ವೆ ಮಾಡಿದ್ರು. ಮಗಳೊಟ್ಟೇಲಿ ಒಂದು ಹೆಣ್ಣು ಮಗು ಆಯ್ತು. ಗಂಡು ಮಗ ಆದ್ರೆ ಮಗನಿಗಿನ್ನ ವಯಸ್ಸಾಗಿರಲ್ವಿಲ್ಲ? ಆ ಹುಡ್ಗೀ ಏನ್ಮಾಡಿದ್ಲು ? ಅಂಗಾಡಿ, ಇಂಗಾಡೀ ಒಂದು ಹತ್ತು ಹನ್ನೆರಡು ವರ್ಷದ ಉಡ್ಗೀ ಆಯ್ತು.

ಆಮೇಲೆ ಈ ತಾಯಿ ಏನ್ಮಾಡಿದ್ಲು ? ಅಪ್ಪಾ ನಿಂಗೆ ಒಬ್ಳೇ ಅಕ್ಕ. ಆಚಲಿಂದ ಎಣ್ಣು ತಂದ್ರೇ ಮಗಳಿಗೆ ತವ್ರೀಲ್ಲ. ಇರೊಳೊಬ್ಳು ಅಕ್ಕ. ನೀನು ಅಕ್ಕನ ಮಗಳನ್ನೆ ಮದ್ವೆ ಆಗಪ್ಪಾ ಅಂದ್ಲು.

ಯವ್ವಾ ನಾನು ಅಕ್ಕನ ಮಗಳಾಗೋದಿಲ್ಲ. ಅವಳು ಸಾಕಿ ಸಲುಹಿ ಅವಳ ಎತ್ತಿಕ್ಕಿ ಮುದ್ದಾಡಿ ಇವತ್ತಿನ ದಿನ ನಾನಾದ್ರೇ ಕ್ವಾಪದಲ್ಲಿ ಬಂದು ನಿನ್ನ ತಾಯೀನಾ ಕೇಯಾ ಅಂದ್ರೇ ಸರೋದದ ? ನನಗೆ ದೋಸ. ನಾನು ಆಚೆ ಕಡೆಯಿಂದ ತಂದೇನೆ ಹೊರ್ತು ನಾನು ಮನೇಲಿ ಅಕ್ಕನ ಮಗು ಆಗೋದಿಲ್ಲ ಅಂದ. ಅಪ್ಪನೂ ಅವ್ವನೂ ಎಷ್ಟು ಹೇಳಿದ್ರೂ ಕೇಳ್ಲಿಲ್ಲ. ಇವ್ನು ಕೇಳ್ದೆ ಇರೂತ್ಲೆಯಾ ಅಪ್ಪ ಏನಾರ ಮಾಡ್ಕೋ ಓಗಪ್ಪ ಅಂದ್ಬಿಟ್ರು.

ಇವ್ನು ಇಂಗೇ ಇಪ್ಪತ್ತೈದು ವರ್ಷ ಆಗೊತನ್ಕ ಮದ್ವೆ ಸುದ್ದೀನೆ ಎತ್ಲಿಲ್ಲ. ಇಪ್ಪತ್ತೈದು ವರ್ಷ ಆಯ್ತು. ಅಪ್ಪಾ ನಿಮ್ಮ ತಂದೇ ಅವರಿಗೆ ಮುಪ್ಪಿನ ಕಾಲ ಬಂತು. ತಂದೇ ತಾಯಿ

ಇದ್ದಂಗೆ ತಲೆ ಮೇಲೆರಡು ಅಕ್ಕಿಕಾಳು ಆಕ್ತೀವಿ. ಮೊರ್ತ್ಯಾ ಮಾಡ್ತೀವಿ. ಮದ್ವೆ ಆಗಪ್ಪಾ. ಎಲ್ಲಿ ಎಣ್ ನೋಡ್ಕೊಂಬರ್ತೀಯೋ ಅಲ್ಲಿ ನೋಡ್ಕೊಂಬಾ ಅಂತ ಹೇಳಿದ್ರು.

ಏಳುತ್ಲೆಯಾ ಇವ್ನೇನು ಮಾಡ್ದ ? ಓದಾ. ಬಡಗೀ ಮನೆಗೇ ಓದಾ. ಬಡಗೀ ಮನಗೋಗಿ ಅವನುದ್ದುಕುವೆ ಅವನ ನಿಲುವಿಗೂವೆ ಒಂದು ತ್ಯಾಗದ ಪೆಟ್ಟಿಗೆ ಮಾಡಿಸ್ದಾ. ಪೆಟ್ಟಿಗೆ ಮಾಡಿಸ್ದಾ. ಆಮೇಲೆ ಆಚಾರಿ ಮನೆಗೋದ. ಒಂದು ಚೆಂದಾಗಿರೋದೊಂದು ಚಂದ್ರಾಯ ಮಾಡಿಸ್ದಾ. ಅವೆರಡನ್ನು ತಗೊಂಡು ಆಚಾರೀ ಮನೇಲಿ ಮಡಿಗ್ಬಿಟ್ಟು ಮನಿಗ್ಬಂದಾ. ಅವ್ವಾ ಅವ್ವಾ ಅಂದ. ಏನಪ್ಪಾ ಅಂದ್ಲು. ಇಗೋ ನಾನೊಂದು ಮಾತೇಳ್ತೀನಿ, ಏನು ಹೇಳಿರವ್ವಾ ಅಂದ.

ಯಾಕಪ್ಪಾ ''ಏನೋ ಒಂದು ಮಾತೇಳ್ತೀನಿ. ನೀವು ಕೇಳ್ತಿರಾ ? ಅಪ್ಪನೂ ಅವ್ವನೂ ಇಷ್ಟೊ ಅಂತ ಕೇಳ್ದಾ. ಅಪ್ಪ ಈಗಿನ ಕಾಲ್ದಲ್ಲಿ ನಿಮ್ಮ ಮಾತೇ ಮುಂದಾಗ್ಬೇಕು, ನಮ್ಮ ಮಾತು ಹಿಂದಾಗ್ಬೇಕು ಕೇಳ್ತೀನಿ ಹೇಳಪ್ಪಾ. ಕೇಳೋ ಮಾತಾದ್ರೆ ಕೇಳ್ತೀನಿ ಅಂದ. ಸರಿ ಸಾಯಂಕಾಲ ಯೇಳ್ತೀನಿ ಹೇಳಪ್ಪಾ ಅಂತ ಹೊಂಟೋದ. ಸಾಯಂಕಾಲಕ್ಕೆ ಅಪ್ಪನೂ ಅವ್ವನೂ ಹೊಲದ ಕಡೆ ಒಂಟ್ಹೋಗಿದ್ರು. ಅವ್ರು ಬರೋದ್ರೊಳ್ಗೆ ಆ ಪೆಟ್ಟಿಗೆನೂ ಚಂದ್ರಾಯನೂ ತಂದು ರೂಮ್ನಲ್ಲಿ ಮಡಗ್ಬಿಟ್ಟ.

ಸಾಯಂಕಾಲಕ್ಕೆ ಅವ್ವಾ ಅಪ್ಪಾ ಎಲ್ಲಾ ಬಂದ್ರು. ಬಂದು ಅವ್ವಾ ಈವತ್ತು ಸ್ವಲ್ಪ ಬೆಳಿಗ್ಗೆ ಎಲ್ಲ ಸ್ನಾನ ಮಾಡಿ ಮಡಿಮಾಡ್ಬಿಟ್ಟು, ಮನೆಮಠ ಎಲ್ಲಾ ಸಾರಿಸ್ಬಿಟ್ಟು, ದೇವ್ರು ದೀಪ ಅಚ್ಚಿಟ್ಟು ಕೂತ್ಕೋಳಿ. ನಾವು ಮೂರೇಜನ ಇರ್ಬೇಕು. ನಾನೊಂದು ಮಾತೇಳ್ತೀನಿ. ಅದರಂತೆ ನಡೆಕೊತೀನಿ ಅನ್ನೊಂಗಿದ್ರೆ, ನನ್ನ ಬಲಗೈಗೆ ಭಾಷೆ ಕೊಡಿ ಅಂತ ಕೆಳ್ಕೊಂಡ. ಕೇಳ್ಕೊತ್ಲೆಯಾ ಇನ್ನೇನು ಬೇರೆ ಲಗ್ನ ಮಾಡು ಅಂತ ತಾನೇ ಹೇಳ್ತಾನೆ ನನ್ಮಗ ಇನ್ನೇನೇಳಕೋಯ್ತಾನೆ ? ಎಲ್ಲಾರೂ ಎಣ್ಣು ನೋಡಿದ್ದೀನಿ ಮಾಡ್ರವ್ವ ಅಂತಾನೆ ಅಷ್ಟೆತಾನೆ ? ಮಾಡೋ ಕರ್ತವ್ಯ ಮಾಡ್ಬಿಡೋದು ಅಂತ ಏಳ್ಬಿಟ್ಟು ಆಯ್ತು ಕಣಪ್ಪ ಅಂತ ಬಲಗೈ ಭಾಷೆ ಕೊಟ್ಬಿಟ್ರು. ಅದನ್ನೋಡಿ ಭಾಷೆ ತಗೊಳ್ಳೋವಾಗ ಅಪ್ಪನಾಗ್ಲೀ ಅವ್ವನಾಗ್ಲೀ ಕಣ್ಣಲ್ಲಿ ಒಂದು ತೊಟ್ಟು ನೀರು ಬಿಡಕೂಡ್ದು. ಆತರ ನೀವು ನಗನಗ್ತಾ ಇದ್ರೆ, ದೇವ್ರು ಮಾಡಿದ್ರೆ, ನಾನು ಭಾಷೆ ತಗೋತೀನಿ ಅಂದ.

ಆಯ್ತು ಓಗಪ್ಪ. ನಗ್ತನಗ್ತಲೇ ನಾವು ಮಾಡ್ತೀವಿ. ದೇವ್ರು ಕೆಲ್ಸ ಮಾಡೋದಲ್ವ ? ಅಂತ ಹೇಳಿ ಅವ್ರು ತಾಯಿತಂದೆ ಏಳಿದ್ರೂ. ಆಮೇಲೆ ಅವತ್ತೆಲ್ಲಾ ನೀರುಗೀರು ಸ್ನಾನ ಮಾಡಿದ್ರು. ಮನೆಮಠ ಸಾರಿಸಿದ್ರೂ. ದೇವ್ರದೀಪ ಅಚ್ಚಿಟ್ರು, ಕೈಮುಗಿದ್ರು. ಆಮೇಲೆ ತಾಯಿ ಮಕ್ಕಳೆಲ್ಲಾ ನಿತ್ಕೊಂಡ್ರು. ಆಮೇಲೆ ಅಮ್ಮಾ ಇಲ್ಲಿ ಬನ್ರಮ್ಮಾ ಅಂದ. ಎಲ್ಲಿಗೇ? ರೂಮಿಗೆ. ರೂಮಿಗೆ ಕರ್ದಾ. ಅವನು ಮನಿಕ್ಕೊತನಲ್ಲಾ ರೂಮು ಆ ರೂಮಿಗೆ ಕರ್ಕೊಂಡೋದ. 'ನೋಡು ಒಬ್ರೂ ಕಣ್ಣೀರಕ್ಕಕ್ಕೆ ಆಗ್ದು. ಈ ಪೆಟ್ಟಿಗೆ ಒಳ್ಗೆ ನಾನು

ಮನಿಕ್ಕೋತೀನಿ. ಏಕಾ ಒಂದೇ ಸಮ ಸಿಗುಳಬೇಕು ನನ್ನ. ಆ ಸಿಗುಳುಬಿಟ್ಟು ನೀನು ಪತಿವ್ರತೆ ಆಗಿದ್ರೆ, ನಾನು ಪೆಟ್ಟಿಗೇಲಿ ಒಂದು ಗಂಡು, ಒಂದು ಎಣ್ಣು ಆಯ್ತೀವಿ. ಅದೇ ಎಣ್ಣು ನನಗೇ ಮದ್ವೆ ಮಾಡ್ಬೇಕು. ಕಣ್ಣೀರಾಕ್ಕೂಡದು. ನೀವು ಸಂತೋಷದಿಂದ ನನ್ನ ಸಿಗ್ದು ಪೆಟ್ಗೆ ಬೀಗ ಹಾಕ್ಬೇಕು, ಅಂತ ಹೇಳ್ಬಿಟ್ಟ. ಭಾಷೆ, ಕೊಟ್ಬಿಟ್ಟವ್ರೆ. ಇನ್ನೇನು ಮಾಡ್ತಾರೇ? ನಡೆಕ್ಕೊಬೇಕೂತಾನೆ ?

ಆಮೇಲೆ ಆಯ್ತು ಅಂತ, ಅವ್ರ ದುಃಖ ಅವ್ರೆ ಮಡಿಕ್ಕೆಂಡು, ನಾವು ಹೆತ್ತಮಗನ್ನ ನಾವು ಸಿಗುಳೀ ನಾವು ಯಾತರ ಕೈನೋವು ಬರ್ತದೇ ಅಂತ ಹೇಳ್ಬಿಟ್ಟು, ಇನ್ನೇನು ಭಾಷೆ ಕೊಟ್ಟಿದ್ದಾಯ್ತು ಬಿಡು, ಇನ್ನಾಯ್ತು ಅಂದವ್ರು, ಆಗ ಮಗನ್ನ ಅವ್ರ ದೇವ್ರು ದಿಂಡರು ನೆನಗೊಂಡು, ಸಿಗುಳುಬಿಟ್ರು. ಏಕಾ ಏಕಾ ಸಿಗುಳುಬಿಟ್ರು. ಆ ಸಿಗುಳೋವಾಗ ಎಲ್ಲೋ ಒಂದು ರಾಗಿಕಾಳು ನೆತ್ತರ ಆಚೆಗೆ ಹಾರ್ತು. ಇವ್ರಿಗೆ ಗೊತ್ತಿಲ್ಲ. ಹಾರ್ಬಿಟ್ಟೀರೋದು ಇವ್ರಿಗೆ ಗೊತ್ತಿಲ್ಲ.

ಆಮೇಲೆ ಜಿಗುಳ್ಬಿಟ್ಟು ಪೆಟ್ಗೆ ಬೀಗ ಹಾಕ್ಬಿಟ್ರು. ಆಗೇ ಮಡ್ಡಗ್ಲಿಂದ, ಮಗನ್ನ ಜಿಗುಳಿ ಮಲಗ್ಸಿದಾಗಿಂದಲೂವೇ, ಅವ್ರು ಆಗೇ ಮಾಡ್ದಾಗ್ಲಿಂದ, ಮಗನ್ನ ಜಿಗುಳೀ ಮಲಗ್ಸಿದಾಗಿಂದಲೂವೆ, ಊಟ ಮಾಡ್ಲಿಲ್ಲ, ಉಪಚಾರನೂ ಮಾಡ್ಲಿಲ್ಲ. ನಮ್ಮ ಕೈಯಿಂದ ಮಗನ್ನ ಕಳ್ಕೊಂಡೋ ಅಂತ ಹೇಳಿ. ಇಂಗೇ ಯೋಚ್ನೆ ಮಾಡ್ಕೊಂಡಿದ್ರು.

ಅಲ್ಲಲ್ಲಿಗೆ ಒಂದವರ್ಷಕ್ಕೆ ತೆಗೀರಿ ಅಂತ ಹೇಳಿದ್ನಲ್ಲ ? ಒಂದು ವರ್ಷಕ್ಕೆ ತೆಗಿದ್ರು. ಒಂದು ವರ್ಷಕ್ಕೆ ತೆಗಿತ್ಲೂಯಾ ಎಣ್ಣು ಗಂಡು ಆ ಪೆಟ್ಗೇಲಿ ಆಯ್ತು. ಅವಾಗ ಅವ್ರನ್ನ ಎಬ್ರಿಸ್ಕೊಂಡ್ರು. ಆಗ ಮನೆಮಠ ಗುಡ್ಸೀ ಬೀಸಿ ಆಗ ಅವ್ರ ಮದ್ವೆಗೆ ಏರ್ಪಾಟು ಮಾಡೀ ಮದ್ವೆ ಮಾಡ್ಬಿಟ್ರು. ಮದ್ವೆ ಮಾಡ್ಬಿಟ್ರು, ಮದ್ವೆ ಆಗಿ ಇಂಗೆ ಇದ್ರು.

ಆಮೇಲೆ ಮದ್ವೆ ಆಗಿ ಒಂದೈದಾರು ವರ್ಷಕ್ಕೆ ತಂದೆ ತಾಯಿ ತೀರೋದ್ರು. ತೀರೋದ್ಮೆಲೆ ಇಂಗೇ ಇದ್ರು. ಆ ಊರಲ್ಲಿ ಬೆಂಟ್ನಳ್ಳಿ ಅಂತದ್ದು ಊರು. ಆ ಊರ್ನಲ್ಲಿ ಯಾವ್ದೋ ಒಂದು ನ್ಯಾಯ. ನ್ಯಾಯಬಿದ್ದು ಏಳೂರ ಗೌಡಗಳು ಬಂದು, ಏಳೂರು ಗೌಡಗಳು ಏಳುವರ್ಷದಿಂದ ನ್ಯಾಯ ಮಾಡಿದ್ರಂತೆ. ಆ ನ್ಯಾಯ ಮುಗಿಲೇ ಇದ್ದಂವೆ, ಏಳು ಊರು ಗೌಡಗಳೂವೇ ಇಂಗೇ ಇದ್ರು. ಇಂಗೇ ಇರೂತ್ಲೇಯಾ ನಿಮ್ಮಂಥ ಬುದ್ಧಿವಂತ್ರು ಒಬ್ರು ಏನ್ಮಾಡಿದ್ರು ? ನ್ಯಾಯ ಏಳುವರ್ಷದಿಂದ ಏಳೂರು ಗೌಡಗಳು ಬಂದು ನ್ಯಾಯ ಮಾಡೀಯ ನ್ಯಾಯ ಬಗೆಹರಿಲಿಲ್ಲ. ಈಗ ಅವನ ಶರೀರನೆ ಸಿಕ್ಕೊಂಡು ಅವನು ಹೆಣ್ಣುಪಡ್ದು ಮದ್ವೆ ಆಗವ್ನಲ್ಲ ಅವನ್ನ ಕರ್ಕೊಂಬಂದ್ಬಿಡೋಣ. ಇವ್ರು ಆಡಿದ್ದೆ ಆಡ್ತಾರೆ ನ್ಯಾಯಗಾರ್ರು. ಬ್ಯಾಡ ಈಗ ಅವ್ನು ಹೊಸಬಲ್ವಾ ? ಅವನ ಕರ್ಕೊಂಬಂದು ನ್ಯಾಯ ಕೇಳೋಣ ಅಂತ ಹೋದ್ರು. ಕರ್ಕೊಂಡೋದ್ರು.

ಕರ್‍ಕೊಂಡೋಯ್ತಾಲೇಯಾ ಇವ್ನು ಹೋದ್ನಂತೆ. ಹೋಗಿ ಎಲ್ಲಾ ಕೂತ್ಕೊಂಡ್ರು. ನ್ಯಾಯದೋರೆಲ್ಲಾ. ಏಳೂರು ಗೌಡಗಳು ಕೂತ್ಕೊಂಡ್ರು. ಈಯಪ್ಪನೂ ಓಗೀ ಕೂತ್ಕೊಂಡ. ನ್ಯಾಯ ಅವತ್ತು ಮೂರುಗಂಟೆ ಟೇಮಿಗೆ ನ್ಯಾಯ ತೀರ್ಮಾನ ಆಗೋಯ್ತು. ಎಲ್ಲಾರು ರಾಜಿ ಆಗ್ಬಿಟ್ಟರು. ರಾಜೀ ಆಯ್ತಾಲೂವೆ, ಊಂ ಆಯ್ತಪ್ಪಾ ಮನೆಗೋಯ್ತೀವಿ. ಏಳುವರ್ಷದಲ್ಲಿ ನ್ಯಾಯ ಅರಿದಿರ್‍ಲಿಲ್ಲ. ಈ ಒಂದು ಮೂರು ಗಂಟೆ ಟೈಮಿಗೆ ನ್ಯಾಯವಾ ಎಲ್ಲಾನೂ ಬಗೇ ಹರಿಸ್ಬಿಟ್ಟಲ್ಲ, ಈವತ್ತು ಇರಪ್ಪ ನಮ್ಮನೆಗೆ, ಏನೋ ಸೇರು ಅಂಬ್ಲಿ ಕುಡ್ದು ಹೋಗಿವ್ರಂತೆ ಅಂತ ಹೇಳಿದ್ರು. ಇಲ್ಲಪ್ಪಾ ಎಂಗಸ್ರು ಒಬ್ರೆ ಅವ್ರೆ ಮನೇಲಿ, ನಾನು ಹೋಗ್ಬೇಕು ಅಂತ ಅಂದ. ಅವ್ರು ಹೇಳಿದ್ರು ಇಲ್ಲ ಇಲ್ಲ ಕರ್‍ಕೊಂಡೋಗಿ ಬಿಡ್ತೀವಿ ಬೇಕಾದ್ರೆ ಅಂತ ಇರಿಸ್ಕೊಂಬಿಟ್ರು. ಆಮೇಲೆ ಅಡಿಗೆ ಮಾಡಿದರು. ಊಟ ಆದ್ಮೇಲೆ ಕರ್‍ಕೊಂಡೋಗಿ ಬಿಟ್ಟು ಬರೋಣ ಅಂತ ಹೇಳಿದ್ರು. ಹೇಳುತ್ಲೆಯಾ ಇವ್ರೇನು ಮಾಡಿದ್ರು ? ಕೂತಿದ್ರು.

ಈ ನೆತ್ತರ ಅರಿದಿತ್ತಲ್ಲ ಒಂದಿಷ್ಟು ? ಆ ನೆತ್ತರ ಏಳು ಹೆಡೆ ಸರ್ಪ ಆಗ್ಬಿಟ್ಟಿದೆ. ಈ ಅಣ್ಣ ಯಾವಾಗ ನ್ಯಾಯದ ಮನೇಲಿ ಅವ್ನೆ, ಈ ಸರ್ಪ ಏನ್ಮಾಡದೇ ಅವನ ಮನೆಗೆ ಹೋಗ್ತದೆ. ಮನೆಗೆ ಹೋಗ್ತೈತೆ. ಮನಗೋದ್ರೆ ಮನೆತನ್ಕ ಸರ್ಪನಾಗೇ ಹೋಗದೆ. ಬಾಗಿಲುಗೋದ್ಮೇಲೆ ಮನುಷ್ಯನ ರೂಪ ಆಗೀ ಒಳಗೋಗಿದೆ. ಅವಳು ಬಾಗ್ಲು ತೆಗ್ದು ನೀನ್ಯಾರು? ಅಂದಳು. ನಾನು ನಿಮ್ಮ ಮೈದ ಅಂದ. ಎಲ್ಲಿ ಮೈದ ? ನನ್ಗಂಡ ಉಟ್ಟಿರೋನೆ ಒಬ್ಬ. ನನ್ಗಂಡನಾ ಜೊತೇಲಿ ಉಟ್ಟಿರೋಳೆ ನಾನು. ಮೈದಿನೆಲ್ಲಿ ಬಂದ ? ಇಲ್ಲ ಇಲ್ಲ ನಮ್ಮಣ್ಣನ್ನ ಜಿಗುಳುವಾಗ, ನಮ್ಮ ತಂದೆ ತಾಯಿ ಒಂದಿಷ್ಟು, ರಾಗಿ ಕಾಳು ಗಾತ್ರ, ರಕ್ತ ಆಚೆಗೆ ಬಂತು. ನಾನು ಸರ್ಪ ಆಗ್ಬಿಟ್ಟಿದ್ದೆ. ಈವತ್ತು ನಮ್ಮಣ್ಣ ನ್ಯಾಯಕ್ಕೊಗಿರೊದ್ರಿಂದ ನಾನು ಇಲ್ಲಿ ಬರಕ್ಕೆ ಆಸೆ ಆಯ್ತು, ಬಂದೇ ಅಂತ ಹೇಳ್ತು.

ನೀನು ನಿಮ್ಮಣ್ಣನ್ನ ರಕ್ತದಲ್ಲೇ ಉಟ್ಟಿದೋನಾದ್ರೆ ಓಗಿ ನಿಮ್ಮಣ್ಣ ನ್ಯಾಯಮಾಡ್ತನಲ್ಲ ಅಲ್ಲೋಗಿ ಕಡಿದ್ಬಿಟ್ಟು ಬಂದ್ರೇ ನನ್ನ ಮೈದ್ನೇ ಅಂತ ಇವ್ಳು ಹೇಳ್ಬಿಟ್ಲು. ಯಾರು ? ಅತ್ತಿಗೆ. ಆಮೇಲೆ ಇಲ್ಲೆಲ್ಲಾ ಜಗುಲಿ ಮೇಲೆ ಕೂತ್ಕೊಂಡು ನ್ಯಾಯಾ ಮಾಡ್ತಾ ಇದ್ರು ಇವ್ರು. ಹೋಗ್ಬಿಟ್ಟು ಓಗೀ ಆ ಜಗುಳಿ ಮೇಲೆ ನೆಗೀತದೆ, ಕೆಳಕ್ಕೆ ಬಿಳ್ತದೆ. ನೆಗಿತದೆ ಕೆಳಕ್ಕೆ ಬೀಳ್ತದೆ. ಏನಿಂಗ್ ಬೀಳ್ತದಲ್ಲ? ಅಲೆಲೆ ಹಾವು ಬಂತಲ್ಲ ಹೊಡೆದಾಕ್ರಲಾ ಹಾವು ಕಡ್ಡೀಗಿಡ್ಡಿ ತಗೊಂಡು ಹೊಡೆದನೋ ಗಿಡದೇನೋ ಅನ್ನೋ ಹೊತ್ಗೆ ಬಾಗಿಲಲ್ಲಿ ಬೂಡ್ಸು ಬಿಟ್ಟಿದ್ನಲ್ಲ ಆ ಬೂಡ್ಸಿನೊಳ್ಗೇ ಓಗೀ ಹೊಕ್ಕೊಂಬಿಡ್ತು. ಸೇರ್‍ಕೊಂಬಿಡ್ತು. ಅದನೆಲ್ಲಲ್ಲೋ ಉಡಿಕಿದ್ರು. ಸಿಕಲಿಲ್ಲ. ಆಮೇಲೆ ಎಲ್ಲೋ ಓಂಟೋಯ್ತು. ಎಲ್ಲೋ ಹೋಗ್ಬಿಡ್ತು ಅಂತ ಹೇಳಿ ಇವ್ರೆಲ್ಲಾ ಮಾತಾಡ್ಕೊಂಡ್ರು. ಆಮೇಲೆ ಅಡಿಗೆ ಆಯ್ತು. ಊಟ ಉಪಚಾರ ಮಾಡ್ದ. ಆಯ್ತಪ್ಪ ನನ್ನ ಕಳಿಸ್ಕೊಡಿ ಅಂದ. ಕರ್‍ಕೊಂಡು ಹೋಗೋವಾಗ ಇನ್ನೇನು ಮಾಡ್ದ ? ಓಗ್ರಲಾ ಕಳಿಸ್ಬನ್ನೀ. ಒಂದು ಮೂರುಜನ ಹೋಗಿ ಅಂತ ಬುದ್ಧಿವಂತ್ರು ಹೇಳಿದ್ರು.

ಆ ಹೇಳೋ ಹೊತ್ಗೆ ಇವನೇನು ಮಾಡ್ದ ? ಬೂಡ್ಸು ಆಕ್ಕೋಳಕ್ಕೆ ಓದಾ . ಬೂಡ್ಸು ಯಾವಾಗ ಇವ್ನು ಆಯಿಕ್ಕೊಳ್ಳಕ್ಕೆ ಓದಾ ಹಾವು ಕಚ್ಚಿಬಿಡ್ತು.

ಬೂಡ್ಸೂಳಗಿತ್ತು, ಕಚ್ಚಿಬಿಡ್ತು. ಕಚ್ಚಿದ್ರೇ ಏನೋ ಕಚ್ಚಿಡ್ತು ಅಂತ ಬೂಡ್ಸು ಬಿಚ್ಚಿಟ್ಟ. ನೋಡ್ತಾರೆ ಹಾವು. ಅಯ್ಯೋ ಬೂಡ್ಸನೊಳಗೆ ಸೇರ್ಕೊಂಬಿಟ್ಟಿದೆ. ಅನ್ಯಾಯದಲ್ಲಿ ನ್ಯಾಯ ಮಾಡಕ ಬಂದವ್ನ, ಅವನ್ನ ಹೆಂಡ್ರು ಮುಂಡೆ ಮಾಡಿದ್ವಲ್ಲ ಅಂತ ಹೇಳ್ಬಿಟ್ಟು ಆಗ ಆ ಹಾವು ಒಡೆದಾಕ್ಬಿಟ್ರು. ಅದು ಬಡಿತಾ ಬಡಿತಾ ಊದ್ಬಿಡ್ತು. ಆ ಹಾವು ಅದು ಊದು ಬಿಡ್ತಲೇನಾ ಇವ್ನೇನು ಮಾಡಿದ್ರು ? ಓಸ್ದೀ ಕಷಾಯ ಕೊಟ್ಟು ಉಸಾರು ಮಾಡಿ, ಬೆಳಿಗ್ಗೆ ಕರ್ಕೊಂಡೋಗಿ ಬಿಟ್ರು. ಅವಾಗ್ಗೇ ಇವ್ರು ಇನ್ನೆಂಗೋ ಅವರ ಅಣ್ಣನ ಕಚ್ಚಿಟ್ಟು ಬತ್ತಾನೆ ಮನೆಗೆ ಅಂತ ಯೋಳಿ ಬಾಗ್ಲು ತಕ್ಕೊಂಡು... ಕೂತವಳೆ. ಆದ್ರೆ ಅವ್ನು ಬರ್ಲಿಲ್ಲ ಬೆಳಿಗ್ಗೆ.

ಅಲ್ಲ ನಾನ್ಕೊಬ್ಬಳ್ನೆ ಬಿಟ್ಟಿಟ್ಟು ಅಚ್ಚುಕಟ್ಟಾಗಿ ಉಣ್ಣಕ್ಕೆ ಕೂತ್ಕೊಂಬಿಟ್ಟ. ಯಾರೂ ಮಾಡದ ನ್ಯಾಯ ಮಾಡಕ್ಕೋಗಿದ್ದ ಅಂದ್ಲು. ಗಂಡನ್ನ ಅಂಗನ್ನೋ ಹೊತ್ಗೆ ಅಲ್ಲ ಕಣೆ ಏಳು ವರ್ಷ ಆಗಿತ್ತಂತೆ, ಆ ಊರ್ನಲ್ಲಿ ನ್ಯಾಯ ಮಾಡೀ, ಏಳು ವರ್ಷದಿಂದ ನ್ಯಾಯ ಅರಿದಿರ್ಲಿಲ್ಲ. ನಾನು ಓಗೀ ಮೂರೇ ಗಂಟೇ ಟೈಮಿನಲ್ಲಿ ನ್ಯಾಯನೆಲ್ಲಾ ಮಾಡಿ ಅರ್ಸಿ ಅವ್ರ ರಾಜೀ ಮಾಡ್ಬಿಟ್ಟು ಬಂದೇ. ಅನ್ಯಾಯದಲ್ಲಿ ನೀನು ಮುಂಡೇ ಆಗೋಗಿವೆ. ನಾನು ಬರೋ ಟೈಮ್‌ನಲ್ಲಿ ಸರ್ಪಕಡಿದು ಬಿಡ್ತಲ್ಲೇ ಅಂದ.

ಹೂಂ ಸರ್ಪ ಕಡಿದ್ಬಿಟ್ಟು ? ಉಳ್ಕೊಂಬಿಟ್ಟ? ಉಳ್ಕೊಂಹೋದೇನು ? ಉರಿಹೊಗೆ ಆಯ್ತು. ಯಾರೋ ಓಸ್ತಿ ಕೊಟ್ರು. ಆ ಒಡೆದಾವು ಎಲ್ಲಿ ಆಕ್ದೀ ? ಹೊಡಿದ್ರು ಅತ್ಲಾಗೀ ಎಸುದ್ರು. ಅದೇನಾದ್ರೂ ಕಚ್ಕೊಂಡೋಗಿದೆಯೋ ಅಲ್ಲೆ ಬಿದ್ದೈತೋ ? ಅಲ್ಲಿ ಬಿದ್ದೈತೋ ಕಚ್ಕೊಂಡೋಗ್ಯೆತೋ ಗೊತ್ತಿಲ್ಲ ಅಂತ ಇವನಂದ.

ಇವನಂಗಂತ್ಲೇಯಾ ಅವ್ರೂರಲ್ಲಿ ಟೈಲರಿದ್ರೂ. ಆ ಟೈಲರಿಗೋಗಿ ಅಮ್ಮಾ ಅಮ್ಮಾ ಅಲ್ಲೊಂದು ಹಾವು ಹೊಡೆದಾಕವ್ರೆ. ಆ ಹಾವು ತಂದು ಚರ್ಮ ಸುಲ್ದು ಅದರಲ್ಲಿ ನಂಗೊಂದು ರವಿಕೆ ಹೊಲ್ಕೊಟ್ರೆ ನಾನು ನಿನಗೆ ಬೇಕಾದಂಗೆ ಬಹುಮಾನ ಕೊಡ್ತೀನಿ ಅಂತ ಯೋಳಿದ್ಲು.

ಅವ್ರು ಹೋದ್ರು. ಆ ಸರ್ಪ ಸುಲ್ಕೊಂಡ್ರು ಚರ್ಮ ತಗೊಂಬಂದು ರವಿಕೆ ಹೊಲದ್ರು. ರವಿಕೆ ಹೊಲ್ದು ತಗೊಂಡೋಗಿ ಅವಮ್ಮನ್ಗೇ ಕೊಟ್ರು. ಆ ರವಿಕೆಯಾ ಹೊಲ್ದು ಕೊಡುತ್ಲೆಯಾ ಅವಮ್ಮ ಏನ್ಮಾಡಿದ್ಲು ಸ್ನಾನಗೀನ ಮಾಡಿದ್ಲು, ಮಾಡಿ ರವಿಕೆ ಇಕ್ಕೋಳಕ್ಕೆ ಹೋದ್ಲು. ರವಿಕೆ ಇಕ್ಕೊಳಕ್ಕೊಯ್ತಲೇ ಒಂದು ತೋಳು ಬಂದು, ಇನ್ನೊಂದು ತೋಳು ಹರಿದೋಯ್ತು.

ಆಮೇಲೆ ಹರಿದೋಯ್ತು. ಅದನ್ನ ಅಂಗೇ ಮಡಿಗಿದ್ಲು. ಆಮೇಲೆ ಗಂಡ್ ಬಂದ್ನಲ್ಲ? ಏನ್ರಿ ಒಂದು ವಡಚು ಕಥೆ ಹೇಳ್ತೀನಿ. ಅದಕ್ಕೆ ನೀವು ಉತ್ರ ಏಳ್ರೀ. ಅದಕೆ ನಾನು ಕೇಳ್ತೀನಿ

ಅಂದ. ನೀವು ಹೇಳೊ ಕಥೆ ನಾನು ಒಡಿತೀನಿ, ನಾನು ಹೇಳೋ ಕಥೆ ನೀವು ಒಡೀರಿ. ನೀನು ಹೇಳಿದ ಕಥೆ ನಾನು ಒಡೆದೆ ಹೋದ್ರೆ ನಾನು ಸಿರಿಗಂಧದ ಕೆಂಡಕೊಂಡ ಆಯ್ತೀನಿ ಅಂದ. ನಾನು ಹೇಳಿದ ಕಥೆ ನೀನು ಒಡಿದೆ ಹೋದ್ರೆ ನೀನು ಸಿರಿಗಂಧದ ಸೌದೇಲಿ ಕೆಂಡಕೊಂಡ ಅಂತ ಹೇಳಿದ ಗಂಡ.

ಗಂಡ ಏನ್ಮಾಡ್ದ ? ಇನ್ನೆಂಥ ವಡಚು ಕಥೆ ಹೇಳ್ಬಿಡ್ತೀಯೇ ನೀನು. ನಾನು ವಡಚ್ತೀನಿ ಕಣೇ ಹೇಳೆ ಅಂದ. ಅಂಗೆ ಅನ್ನೋ ಹೊತ್ಗೆ ಅವಳು ಹೇಳಿದ್ಲು; ತೊಡೆ ಮ್ಯಾಗಳ ಗಂಡ, ತೋಳು ಮ್ಯಾಗಳ ಮಿಂಡ, ವಡಚಿದ್ರೆ ವಡಚ್ಬೋದು, ವಡಚದಿದ್ರೆ ಸಿರಿಗಂಧದ ಸೌದೇಲಿ ಕೆಂಡಕೊಂಡ ಅಂತ. ಹೂ ಆಯ್ತು ಅಂತ ಹೇಳಿ ಅವನೇನು ಮಾಡ್ದ? ಏಳು ದಿನ ವಾಯಿದೆ ಕಟ್ಟಿದ್ಲು. ಏನೇನೋ ಮಾಡ್ದ. ಏನ್ಮಾಡಿದ್ರು ವಡಚಾಗ್ಲಿಲ್ಲ. ಯಾರ್‍ಯಾರೋ ಬುದ್ಧಿವಂತ್ರನ್ನೆಲ್ಲಾ ತಿಳ್ದಾ. ಅದೇನೋ ನನಗೊತ್ತಾಗೋದಿಲ್ಲ ಕಣ್ರೀ ಅಂದರು.

ಇನ್ನ ಅವ್ನು ಸಿರಿಗಂಧದ ಸೌದೇಲಿ ಕೆಂಡಕೊಂಡ ಆಗ್ಬೇಕಲ್ಲ ? ಆಮೇಲೆ ಇವ್ಳು ಏನ್ಮಾಡಿದ್ಳು ? ಐದು ದಿನ ನೋಡಿದ್ಲು. ಏನ್ರೀ ವಡಚಿರೇನ್ರಿ ಅಂದಳು. ಇಲ್ಲಾ ಕಣೇ ಆಗೋದಿಲ್ಲ ಅಂದ. ಸರೀ ಸಿರಿಗಂಧದ ಸೌದೆ ಎಲ್ಲಾ ತಂದ್ಲು. ಆಕಿದ್ಲು. ಕರ್ಪೂರ ಗಂಧದಕಡ್ಡಿ ಎಲ್ಲಾ ತಂದ್ಲು. ಪೂಜೆ ಸಾಮಾನೆಲ್ಲಾ ತಂದ್ಲು. ಆ ಊರು ಗೌಡ್ರನೆಲ್ಲಾ ಕುಂಡ್ರಿಸ್ಕೊಂಬಿಟ್ಲು. ಆಮೇಲೆ ಆ ಊರು ಗೌಡಗಳು ಇಂಥಾ ಪುಣ್ಯಾತಗಿತ್ತೀದೂ. ಅಯ್ಯೋ ಒಂದೇ ಎಣ್ಣು ಒಂದೇ ಗಂಡು. ಅಂತದ್ರಲ್ಲಿ ಅಕ್ಕನಮಗಳು ಆಗೋ ಅನ್ನೋ ಹೊತ್ಗೆ ಅಗ್ಲಿಲ್ಲ. ಅವರ ಅಕ್ಕನ ಅವರವ್ವ ಇದ್ದಾಗ ನೋಡಿದ್ದು. ಅಪ್ಪಪ್ಪಾ ನಾಳೇಕೆ ಕೆಂಡಕೊಂಡ ಆಯ್ತನಾ. ಆ ಉಡ್ಗಿ ಅವರಕ್ಕನ್ನ ನೋಡ್ಲಿಲ್ಲವಲ್ಲ. ಯಾರಾನಾದ್ರೂ ನೋಡೆದೇನ್ರಿ ? ಇನ್ನಾರುನ್ನ ನೋಡಾನೆ ನಾನು. ನಾನು ನಮ್ಮಕ್ಕ ನೋಡ್ಬೇಕಾಗಿತ್ತು ಕಣೇ ಅಂತ ಅಂದ. ನಮ್ಮಕ್ಕನೇ ನೋಡ್ಬೇಕಾಗಿತ್ತು ಅನ್ನೋ ಹೊತ್ಗೆ ಯಾರ್‍ನೋ ಒಂದಾಳು ಕಳಿಸಿದ್ಲು. ಅಲ್ಲಿಗೋಗು ಹೊತ್ಗೆ ಸಂಜೆ ಆಗೋಯ್ತು. ಆ ಹುಡ್ಗ ಹೋಗಿ ಯೋಳ್ಬಿಟ್ಟು ಬಂದ. ಓಗೀ ಯೇಳ್ಬಿಟ್ಟು ಬರ್ತಲೇಯಾ ಅವಳೇನು ಮಾಡಿದ್ಲು ? ಇಂಗಿಂಗೇ ಕಣಮ್ಮಾ ಗಂಡಂಗೂ ಹೆಂಡ್ರಿಗೂ ಪಂಥ ಬಿತ್ತು. ಬೆಳಿಗ್ಗೆ ಏಳು ಗಂಟೆ ಹೊತ್ತಿಗೆ ಸಿರಿಗಂಧದ ಸೌದೇಲಿ ಕೆಂಡಕೊಂಡ ನಿನ್ನ ತಮ್ಮ, ಮಕನಾದ್ರೂ ನೋಡ್ಕೊಂಬರುವೀ ಬಾ ಅಂದ.

ಅವಳೆಲ್ಲಾ ಬಿಟ್ಟಿದ್ದು ಬಿಟ್ಟಂಗೇ ಬಿಟ್ಬಿಟ್ಲು, ನನ್ನ ತಮ್ಮಂಗೇ ಎಂಥಾ ಇದಾಯ್ತು. ಇರೊನೊಬ್ಬ ತಮ್ಮ. ನನ್ನ ಕರಿಬೇಡ, ಕಳ್ಸಿಬೇಡ. ನಮ್ಮಪ್ಪನ ಮನೇಲಿ ನನ್ನ ತಮ್ಮ ಅವ್ನೇ ಅನ್ನಿವ್ನೆಲ್ಲಾ ಅಂತ ಬಡ್ಕೊಂಡು ಚಚ್ಕೊಂಡು ಅವಳೂ ಬಂದ್ಲು. ಬತ್ತಾವ್ಳೆ ಅಲ್ಲಿ. ಇಂತದ್ದು ಬಂಡೇ ತಿಟ್ಟು. ಆ ತಿಟ್ಟಿನಲ್ಲಿ ಒಂದು ದೇವರ ಗುಡಿ. ಆ ಗುಡಿ ಒಳಗೇ ಕತ್ತಲಾಗ್ಬಿಡ್ತು. ಅಲ್ಲಿ ಬರೋಹೊತ್ಗೆ.

ಆ ಗುಡಿ ಒಳಗೇ ಕೂತಿದ್ದು ಕೋಳಿ ಕೂಗಿದ್ದು ಕೋಳಿ ಶಬ್ದ ಕೇಳಿ ಹೋಗಾಣ ಅಂತ ಇವ್ಳೇನು ಮಾಡಿದ್ಲು? ಗುಡೀ ಒಳಕ್ಕೋಗಿ ಕೂತ್ಕೊಂಡ್ಲು. ನಾನೀ ಕೈ ಎಣ್ಣೀ ದೀಪ ಇಕ್ಕಿ ತೀವಲ್ಲಾ ಈ ದೀಪಗಳು ಹೋಗಿ ಅಲ್ಲಿ ಮಾತ್ತಾಡ್ತಾವೆ. ಏನಂಥ ಮಾತಾಡ್ತಾವೆ ? ಒಂದು ದೀಪ ಮುಂದಾಗೇ ಹೋಗ್ಯದೆ. ಓಗೀ ಇದೇನು ಅಗ್ಲೇ ಹೊತ್ಗಂತೇ ಬಂದ್ಬಿಟ್ಟಿದ್ದೀಯಲ್ಲ ಅಂತ ಒಂದು ದೀಪ ಕೇಳ್ತದೆ. ಅದೇನಂತದೆ ಎಣ್ಣಿ ಹೊಂಚಲಾರ್ದೆಯಾ ಅವ್ಳು ಕಡ್ಡಿಪುಡೀಗೆ ಹೊಂಚಾಳೋ ಎಣ್ಣಿಗೆ ಹೊಂಚಾಳೋ. ಆ ಬತ್ತಿ ತ್ಯಾವ ಮಾಡ್ತಾಳೆ, ಆ ದೀಪಕ್ಕೆ ಆಗ್ತಾಳೆ ತೋರ್ತಾಳೆ. ಅದು ಅಂಗೇ ಬಂಟೋಯ್ತದೆ. ಅಲ್ಲೇನು ಕೆಲ್ಸ ನನಗೆ ನೆಟ್ಟಕ್ಕೆ ಬಂದ್ಬೀಡ್ತೀನಿ ಕಣೇ ನಾನು ಅಂತ ಒಂದ್ ಅನ್ತದೆ. ಒಂದು ದೀಪ ಅನ್ತದೆ. ಇನ್ನೊಂದು ದೀಪ ಏನಂತದೇ? ಇಲ್ಲಮಾ ನನ್ಗೇನೋ ಆ ಮನೆ ಒಳಗೆ ತುಂಬಾ ಎಣ್ಣೆ ಬಿಡ್ತಾರೆ, ಬತ್ತಿ ಆಕ್ತಾರೆ, ನನಗೆ ಸಂತೋಷವಾಗಿ ಉರೀತೀನಿ. ಉರ್ದು ನನಗೆ ಯಾವಾಗ ಸಂತೋಷ ಆಗ್ತದೇ ಅವಾಗ ನಾನು ಬತ್ತೀನಿ ಕಣೇ ಅಂತ ಒಂದು ಅನ್ತದೆ.

ಇನ್ನೊಂದು ಏನಂತದೇ ನಮ್ಮನೆ ಒಳಗೆ ಅಚ್ತರೆ. ಪಟೀರನೆ ಕೆನ್ನೆಗೆ ಬಡಿತ್ತಾರೆ. ಬಡಿಸ್ಕೊಳ್ಳೋದು ಯಾಕೆ ? ನಾನು ಸುಮ್ನೆ ನಂದೇ ಬಂದ್ಬೀಡ್ತೀನಿ ಅಂತ ಒಂದು ಅನ್ತದೆ ಇನ್ನೊಂದು ಜ್ಯೋತಿ ಬರ್ಲಿಲ್ಲವಲ್ಲ ಅಂತ ಕಾಯ್ಕೊಂಡು ಕೂತವೇ. ಇವ್ರು ಜ್ಯೋತಿಗಳು ಮಾತಾಡ್ದಂಗೆ ಮಾತಾಡ್ಕೊಂಡಿದ್ದೆಲ್ಲಾ ಕತ್ಲೇ ಒಳ್ಗೇ ಕೈಗೇ ಅಕ್ಷರ ಬರ್ಕೊಂಬಿಟ್ಟು. ಯಾರು ? ಈ ಅಕ್ಕ ಬರ್ಕೊಂಡು ಬರ್ಕೊಂಡು ಆಮೇಲೆ ಈ ದೀಪ ಕೊನೆಗೆ ಬತ್ತು. ಮೂರು ಗಂಟೆ ಟೇಮಿಗೆ ಬಂತು. ಇಷ್ಟೋತನ್ಕ ಏನು ಮಾಡ್ತಿದ್ದೇ, ಈವತ್ತು ಹೊತ್ತನಂತೆ ಬರ್ತಿದ್ದಲ್ಲಾ ಅಂತ ಕೇಳಿದೋ.

ಅಯ್ಯೋ ಅದರ ಕಥೆ ಯೇಳಿದ್ರೆ ವಿಚಿತ್ರ. ಆ ಇದಿಂಗೇ ಆಯ್ತು. ಅಗೋ ಒಬ್ಬ ಅಕ್ಕನಂತೆ, ಒಬ್ಬ ತಮ್ಮನಂತೆ. ಆಮೇಕೆ ಹಿಂಗಾಗೀ ಗಂಡನ್ನ ಸಿಗಿಯೋವಾಗ ಒಂದು ಎರಡು ಹನಿ ರಕ್ತ ಅರಿತ್ತಂತೆ. ಅದು ಸರ್ಪ ಅಗಿ ಹೋಗಿ ಗಂಡ ನ್ಯಾಯಾ ಮಾಡಿ ಬರೋದ್ರೊಳಗೆ ಸರ್ಪ ವೋಗಿ ಅತ್ತಿಗೆ ತವಕೆ, ಅವ್ರಮಾತ ಕೇಳಿ ವೋಗಿ ನಿಮ್ಮಣ್ಣನ್ನ ಕಡಿದುಬಿಟ್ಟು ಬಾ ಅಂತ ಹೇಳಿ, ಅದು ಓಗೀ ಅವರಣ್ಣನ್ನ ಕಡ್ದುಬುಡ್ತು. ಅವ್ರು ಚರ್ಮ ಸುಲ್ದು ಅದನ್ನ ಟೈಲರ್ ಕೈಲೀ ಸುಲಿಸಿ, ಅವಾಗ ರವಿಕೆ ಹೊಲಿಸಿ ಒಂದು ಮೈಗೆ ಇಕ್ಕೊಂಡ್ಲಂತೆ, ಒಂದು ಮೈಗೆ ಹರಿದೊಯ್ತಂತೆ. ಅದು ಗಂಡಂಗೆ ವಡಚು ಕಥೆ ಹೇಳಿ ಆ ಒಡಚು ಹೇಳಿದ್ರೆ ಹೇಳ್ಬೋದು, ಯೋಳದಿದ್ರೆ ಸಿರಿಗಂಧದ ಸೌದೇಲಿ ಕೆಂಡಕೊಂಡ ಅಂತ ಹೇಳಿದ್ಲಂತೆ. ಬೆಳಗ್ಗೆ ಕೆಂಡಕೊಂಡ್ಲೆ. ಅವರಕ್ಕನಗಾಗಿ ಕಾಯ್ಕೊಂಡು ಕೂತವ್ರೆ ಅಂತಂತೆ.

ಅದೆಲ್ಲಾ ಬರ್ಕೊಂಬಿಟ್ಲು. ಇವ್ರೆಲ್ಲಾ ಕೆಂಡಕೊಂಡ್ಲಕ್ಕೆಲ್ಲಾ ಆಗ್ಲೇ ರೆಡಿಯಾಗವ್ರೆ. ಅಷ್ಟೊತ್ತಿಗೆ ಇವ್ಳು ಅಲ್ಲಿಂದ ಬಡಕ್ಕೊಂಡು ಚಚ್ಕೊಂಡು ಓಡಿ ಬತ್ತಾಳೆ. ಅಪ್ಪಾ ನಾನು ಬಂದೀನಿ. ನನ್ನ ತಮ್ಮನ್ನ ಜೀವ ಸಹಿತ ಬಿಡ್ರುಪ್ಪಾ ಅಂತ ಬಂದ್ಲು.

ಅಯ್ಯೋ ಅವರಕ್ಕ ಓಡೋಡಿ ಬರ್‍ತಾಳೆ ತಾಳಪ್ಪ ಅಂತ ಹೇಳಿ ಅವರು ಇಳಿಸಿದ್ರು. ಅಮ್ಯಾಕೇ ಅಲ್ಲಿಂದ ಬಂದವ್ಳೇ ಬಡಕ್ಕೊಂಡು ಚಚ್ಕೊಂಡು ನೋಡ್ರಪ್ಪಾ ಅವಕ್ಷರ ಓದ್ಕೊಂಡು ನನ್ನ ತಮ್ಮನ್ನ ಕೆಂಡಕೊಂಡ ಮಾಡೀ ಅಂತ ತೋರಿದ್ಲು.

ಅವಾಗೆಲ್ಲಾ ಓದ್ಕೊಂಬಿಟ್ರು. ಅಲ್ಲಿ ಓದ್ಕೊಂಡು ಅವಳನ್ನ ಹಿಡ್ದು, ಆ ಕೆಂಡಕೊಂಡ್ಲಕ್ಕೆ ಆಕಿದ್ರು. ಆಗ ಅಕ್ಕನ ಮಗಳು ತಂದು ಮದ್ವೆ ಮಾಡಿ, ಅಪ್ಪನ ಮನೇ ಬೆಳಗಿಸಿಕೊಂಡು ಹೋದ್ಲು.

ಹೇಳಿದವರು : **ರಂಗವ್ವ,** 60 ವರ್ಷ, ಒಕ್ಕಲಿಗರು, ತಿಪ್ಪಶೆಟ್ಟಿ ಕೆರೆ, ತುರುವೆಕೆರೆ ತಾಲ್ಲೂಕು

## ೨೧. ಸತ್ತಗಂಡನನ್ನು ಬದುಕಿಸಿಕೊಂಡಿದ್ದು

ಒಬ್ಬ ರಾಜನಿಗೆ ಒಬ್ಬನೇ ಮಗ. ಒಬ್ಬ ತಾಯಿಗೆ ಒಬ್ಬನೇ ಮಗ. ಅವ್ರು ಏನಂತ ತಂದೆ ತಾಯಿ ಇಟ್ಕೊಂಬಿಟ್ರು ? ಹರಕೆ ಕಟ್ಕೊಂಡ್ರು ? ಮಗನಿಗೆ ಮದ್ವೆ ಮಾಡಬೇಕು. ಮಗ ಸೊಸೆ ನೋಡ್ಬೇಕು. ಅವ್ರಿಗೆ ಮದುವೆ ಮುಂಜೀ ಮಾಡಿ, ಅವ್ರ ಕಷ್ಟ ಸುಖ ನೋಡ್ಬಿಟ್ಟು, ಈ ರೂಮಿನಿಂದ ಆ ರೂಮಿಗೋಗೋಗಂಟ ನಾವಿದ್ರೇ ಸಾಕು. ದೇವ್ರು ಅಂತಾಗಂಟ ನಮ್ಗೆ ಆಯುಷ್ಯ ಆರೋಗ್ಯ ಕೊಟ್ಬಿಡಲೀ ಅಂತ, ಅಂದು ಒಂದು ಹರಕೆ ಮಾಡ್ಬಿಟ್ರು; ಆಯಪ್ಪ ಒಬ್ನೇ ಮಗ ಉಟ್ಟಿದ್ನಲ್ಲ ಅದಕ್ಕೆ.

ಆಮೇಲೆ ಇಷ್ಟಾದ್ರೂ ಅಷ್ಟಾದ್ರೂ. ಮದ್ವೆ ಆಯ್ತು. ನಿಷೇಕಾನೂ ಆಯ್ತು. ಆಮೇಲಿ ಆಯಮ್ಮ ದಿವ್ಸ ಹೋಗಿ ಅತ್ತೆ ಮಾವನ ಪಾದ ತೊಳೆಯೋದು, ತೊಳೆದು, ನಮಸ್ಕಾರ ಮಾಡಿ ಬರೋವ್ಳು ಸೊಸೆ. ಒಂದಲ್ಲ ಒಂದು ದಿವ್ಸ ಇಂಗೇ ಇರೋಹೊತ್ಗೆ ಏನಾಯ್ತು ? ಅವಾಗ ಈವತ್ತು ಬೇಕಾದಂಥ ಅಡಿಗೆ ಊಟ ಮಾಡ್ಬಿಡ್ರೀ, ಇವತ್ತು ನಾವು ಸಂತೋಷವಾಗಿರ್ಬೇಕು ಅಂತ, ಅವ್ರಿಗೆ ಸಾವು ಗೊತ್ತಾಯ್ತು. ಅವಾಗ ಬೇಕಾದಂಥ ಪಾಲು ಪಂಚಾಮೃತದ ಅಡಿಗೇ ಮಾಡಿದ್ರು. ಊಟ ಮಾಡಿದ್ರು. ಅವ್ರು ಆ ರೂಮಿಗೋದ್ರು, ಇವ್ರು ಈ ರೂಮಿಗೋದ್ರು. ವೋಗಿ ಮಲಿಕ್ಕೆಂಬಿಟ್ರು. ಮಲಿಕ್ಕೊಂಬಿಟ್ಟು ಬೆಳಿಗ್ಗೆ ಈಯಮ್ಮ ಸೊಸೆ ಚೊಂಬಾಗೆ ನೀರು ತಕ್ಕೆಂಡು ಪಾದ ತೊಳೆಯಕೋದ್ಲು. ಅತ್ತೇಮಾವನ ಪಾದ ತೊಳಿಯಾಕೆ ವೋಗೋ ಹೊತ್ಗೆ ಇವ್ರು ಶೀರೋಗಿಬಿಟ್ಟವ್ರೆ.

ಅವಾಗ ಬಂದು ಅವರ ಯಜಮಾನ್ರನ ಎಬ್ಬಿಸಿದ್ಲು. ದಿವ್ಸ ಒಂದುತರವಾಗಿ ಮಲಿಕ್ಕೊಣೋರು ಅತ್ತೇಮಾವ, ಈವತ್ತು ಒಂದು ತರವಾಗಿ ಮಲಕ್ಕೊಂಡವ್ರೇ. ನನಗೆ ಭಯ ಆತದೇ ಬರ್ರಿ ಅಂತ ಅಂದ್ಲು. 'ಏನು ಮಾತು ಹೇಳ್ತಿಯಾ ? ವೋಗು' ಅಂದ. ಎಷ್ಟು ಹೇಳಿದ್ರು ಕೇಳ್ಲಿಲ್ಲ. 'ನೀವು ಬಂದೇ ಬರಬೇಕು' ಅಂತ ಅಂದ್ಲು. ಕರ್ಕೊಂಡೋದ್ಲು. ನೋಡೋ ಹೊತ್ಗೆ, ಇವ್ರೂ ತಿರೋಗ್ಬಿಟ್ಟವ್ರೆ. ಅವಾಗ ಏನ್ಮಾಡಿದ್ರು ? ಓಹೋ ಇಂಗಾಗೋಯ್ತಲ್ಲ. ಈವಾಗ ಏನ್ಮಾಡೋದು ? ನಮ್ಮ ತಂದೆ ತಾಯಿ ಇಷ್ಟು ಬದುಕಿ, ಇಂಥಾ ರಾಜರು ಇಂಗೇ ಹೋಗ್ಬಿಟ್ರಲ್ಲ ? ಅವಾಗ ಮಗ ಅವ್ರು ಏನು ಯೋಚ್ನೆ ಮಾಡಿದ್ರು ? ಒಂದು ಬಂಡಿ ಮೇಲೆ ಚಿನ್ನ, ಒಂದು ಬಂಡಿ ಮೇಲೆ ಬೆಳ್ಳಿ ತುಂಬಿಕೊಂಡು ಇವ್ರು ಇಬ್ರನ್ನು ಎರಡು ಗಾಡಿ ಮೇಲೆ, ಅಪ್ಪನದ್ದು ಬಾಳೇವನ ಬೇಕಾದಂಥ ಸಿಂಗಾರದ ವನ ತಗೊಂಡೋಗಿ ಮಣ್ಣು ಮಾಡ್ಬೇಕು, ಇಲ್ಲೆಲ್ಲೂ ಮಣ್ಣು ಮಾಡ್ಬಾರ್ದು, ಅಂತ ಅಂದ್ಬಿಟ್ಟು, ಅವರಿಬ್ರನ್ನು ಎರ್ಡು ಗಾಡೀ ಮೇಲೆ ಒಂದು ಗಾಡೀ ಚಿನ್ನ, ಒಂದು ಗಾಡಿ ಬೆಳ್ಳಿ, ಅವು ನಾಲ್ಕು ಗಾಡೀನೂ ತಗೊಂಡೋಗ್ಬಿಟ್ಟು ಬೇಕಾದಂಥ ಸಿರಿಗಂಧ ವನದಲ್ಲಿ ಮಣ್ಣುಮಾಡ್ಬಿಟ್ಟು ಬಂದ್ಬಿಟ್ರು. ಬಂದ್ಬಿಟ್ಟು ಇಂಗೇ ಕೆಲವಾರು ದಿನ ಸುಮ್ನೆ ಇದ್ರು.

ವೋಗಿ ತಂದೆತಾಯಿ ಪಾದಪೂಜೆ ನಾವು ಮಾಡ್ಕೊಂಬರ್ಲಿಲ್ಲವಲ್ಲ. ಬಾಳ ದಿನಾ ಆಗೋಯ್ತು ಏನ್ಮಾಡೋದು ಅಂತ ಅಂದುಕೊಂಡು, ಒಂದಲ್ಲ ಒಂದ ದಿನ ಬೇಕಾದಂಥ ಹೂವಿನಗಾಡಿ, ಬೇಕ್‌ಬೇಕಾದ್ದು ತಕೊಂಡು ಅಲ್ಲಿ ಪೂಜೆಗೆ ಹೊರಟ್ರು. ಈವಾಗ ನಮ್ಮ ತಾಯಿ ತಂದೆ ನಾನು ಪಾದಪೂಜೆ ಮಾಡ್ಕೊಂಬರ್ಬೇಕು. ತುಂಬಾ ದಿನ ಆಯ್ತು ಅಂತ ಹೆಂಡ್ತಿಗೇಳ್ಬಿಟ್ಟು ಹೋದ್ರು.

ಹೋಗಿ ಇವ್ರು ಎಲ್ಲಾ ಪೂಜೆ ಮಾಡಿ ತಾಯಿ ತಂದೆದ್ದು ಬೇಕಾದಂಥ ಇದು ಮಾಡಿ ಬರೋವಾಗ, ಒಂದ್ಕಡೆ ದೇವಗನ್ನೀಕೆರು ನಾಲ್ವರು ಜಲಕ್ರೀಡೆ ಆಡ್ತಿದ್ರು, ಕಲ್ಯಾಣಿ ಒಳಗೇ ಕಲ್ಯಾಣಿ ಒಳಗೇ ಜಲಕ್ರೀಡೆ ಆಡುತಿದ್ರೇ ಇವ್ರು ರಾಜನ್ನ ನೋಡ್ಬಿಟ್ಟು ಮೋರ್ಚೆ ಬಿದ್ದೋದ್ರು. 'ಅರೆರೆ ನಮಗೆ ತಕ್ಕಾದ ರಾಜನೇ ಇವ್ನು, ವೋತಾ ಇರೋರು ಅಂತ ಮೋರ್ಚೆ ಬಿದ್ದುಬಿಟ್ಟರು. ಮೂರ್ಚೆ ಅವ್ರೇ ತಿಳ್ಕೊಂಡು, ಎದ್ದು ಬಂದ್ರು ಈಚೆಗೆ. ಬಂದು ಕೈ ಹಿಡ್ಕೊಂಬಿಟ್ರು. ಆಮೇಲೆ ಓಹೋ ಏನ್ಮಾಡೋದು ? ಇವ್ರು ಹಿಂಗೆ ಕೈ ಹಿಡ್ಕೊಂಬಿಟ್ರಲ್ಲ ಅಂತ ಅಂದು "ಏನಾಗ್ಬೇಕು ನನ್ನಿಂದ ?" ಅಂತ ಕೇಳಿದ. "ನೀನೋಗಿ ನಿನ್ನ ಹೆಂಡ್ತಿ ಅತ್ರ ಏನಾದ್ರೂ ಮಾತಾಡಿದ್ರೆ ನಿನ್ನ ತಲೆ ಹೋಯ್ತದೆ. ನಿನ್ನ ಹೆಂಡ್ತಿ ಹತ್ರ ಎಂದೆಂದು ನೀನು ಮಾತಾಡ್ ಕೂಡ್ದು" ಅಂದರು. ಇವನೇನು ಮಾಡ್ತಾನೆ ? ಮಾತಾಡಲ್ಲ ಅಂತ ಹೇಳ್ದಾ. ಅಂಗಂತ ಇವ್ರು ಪ್ರತಿಜ್ಞೆ ಮಾಡಿ ಕಳಿಸ್ಬಿಟ್ರು. ಇವ್ರೆಲ್ಲಾ ಪೂಜೆ ಮಾಡಿಸ್ಕೊಂಡು ಮನೆಗೆ ವೋದ್ರು. ಅರಮನೆ ಒಳಗೆ ಈಯಮ್ಮ ಏನೋ ಈಗ ಮಾತಾಡ್ತಾರೆ; ಆಗ ಮಾತಾಡ್ತಾರೆ ಅಂತ ನೋಡ್ಕೊಂಡಿದ್ಲು. ಯಾವಾಗ್ಲೂ ಮಾತಾಡ್ಲೇ ಇಲ್ಲ. ಅಡಿಗೆ ಮಾಡಿದ್ರು. ಊಟಕ್ಕೆ ಇಕ್ಕಿದ್ರು. ಏನ್ಮಾಡಿದ್ರೂ ಮಾತಾಡ್ಲಿಲ್ಲ.

ಅವಾಗ ಅಕ್ಕಪಕ್ಕದವ್ರನ್ನ ಕೇಳೋದಾಯ್ತು. "ಏನು ? ನಮ್ಮ ಜಮಾನ್ರು ಪೂಜೆ ಮಾಡಾಕೋಗಿದ್ದೇ ಅವ್ರ ತಂದೆ ತಾಯಿ ಸಮಾಧಿ ಮೇಲೆ ಬಂದಾಗಿಂದ ಮಾತಾಡ್ಲೇ ಇಲ್ವಲ್ಲ. ಈಗ ನಾನೇನು ಮಾಡೋದು ? ಈತರ ಮಾಡ್ತಾ ಅವ್ರೆ. ಐದು ದಿನ ಆದ್ರೂ ಮಾತಾಡ್ಲಿಲ್ಲ ಅಂದಳು. ಮತ್ತೆ ಇವತ್ತು ಒಂದಥರ ಮಾಡು ನೀನು, ಅಡಿಗೆ ಮಾಡ್ತೀಯಲ್ಲ, ಸಾರಿಗೆ ಒಂದಿಡಿ ಉಪ್ಪು ಹೆಚ್ಚಾಗಿ ಆಕ್ಬಿಡು; ಆಕಿ ನೋಡು ಇಲ್ಲ ಅಡಿಗೆಗೆ ಎಲ್ಲಾನೂ ಬೇಕ್ ಬೇಕಾದ್ದು ಬೇರೆ ಬೇರೆದಾಕು ಮಾತಾಡ್ತಾರೆ, ಅಂದ್ರು. ಏನ್ಮಾಡಿದ್ರೂ, ಇನ್ನಾ ಒಂದು ವಾರ ಆಯ್ತು, ಅವ್ರು ಮಾತಾಡ್ಲೇ ಇಲ್ಲ. ಅವಾಗ ಹೇಳಿದ್ಳು ತಿರ್ಗ್ಗ ಅಕ್ಕಪಕ್ಕದವ್ರಿಗೆ "ಏನಮ್ಮಾ ನೀನು ಹೇಳಿದ್ದೆಲ್ಲಾ ಮಾಡ್ದೇ. ಕಡೆಗೂ ಇವ್ರು ಮಾತಾಡ್ಲೇ ಇಲ್ಲವಲ್ಲ?

ಮತ್ತೇ ಈವತ್ತು ಒಂದು ತರ ಮಾಡು. ಬೇಕಾದಂಥ ಅಡಿಗೆ ಎಲ್ಲಾ ಮಾಡಿ ಊಟಕ್ಕೆ ಇಕ್ಬಿಡು. ನೀನು ಒಳ್ಳೆದೊಂದು ಕತ್ತಿ ಮುಂದಿಕ್ಕೊಂಡು ಕೂತ್ಕೊ. ಈವತ್ತು ನೀನು ಮಾತಾಡ್ತಿಯೋ ಇಲ್ಲ ನಾನು ಈ ಕತ್ತಿಯಿಂದ ಪ್ರಾಣ ತೆಕ್ಕೋಳ್ಳೋ" ಅಂತ ಮಾತಾಡಿ ಮುಂದೆ ಅಕ್ಕೊಂಡು ಕುತ್ಕೋ.

ಅವತ್ತು ಅಡಿಗೆ ಮಾಡಿದ್ಲು, ಊಟಕ್ಕೆ ಇಕ್ಕಿದ್ಲು. ಒಂದು ಕತ್ತಿ ಮುಂದೆ ಅಕ್ಕೊಂಡು ಕೂತ್ಕೊಂಡ್ಲು. ಯಜಮಾನ್ರ ಮುಂದೆ ಕೂತ್ಕೊಂಡು ಈವತ್ತು ನೀವು ಮಾತಾಡಿದ್ರೆ, ಸರಿ ಹೋಯ್ತು, ಇಲ್ದಾ ಹೋದ್ರೆ ನಾನು ಈ ಕತ್ತಿಯಿಂದ ಪ್ರಾಣ ತಕ್ಕೊತೀನಿ ಅಂದಳು. ಆಮೇಲೆ, ಒಳ್ಳೆ ಕಥೆ ಆಗೋಯ್ತಲ್ಲ, ಅನ್ಯಾಯವಾಗಿ ಇವ್ಳು ಪ್ರಾಣ ತೆಕ್ಕೋತಳಲ್ಲ ಅಂದ್ಬಿಟ್ಟು 'ನಾನು ಅವತ್ತು ನಮ್ಮ ತಾಯಿ ತಂದೆ ಸಮಾಧಿ ಮ್ಯಾಕೆ ವೋದೆ' ಅಂದ್ರು. ಇವ್ರು ಕೂತಿದ್ರಲ್ಲ ದೇವಗನ್ನಿಕೇರು, ತಲೇನ ಪಟ್ಟಂಥ ಬಾಚ್ಕೊಂಡು ಹೋಗ್ಬಿಟ್ರು, ಈಯಪ್ಪನ್ನ ತಕ್ಕೊಂಡು ಹೋಗ್ಬಿಟ್ರು. ಹೋಗ್ಬಿಟ್ಟದ್ದೆ ಅಲ್ಲಿ ಒಂದು ಪಟ್ಣದಾಗೇ ಒಂದು ಮಂಟಪ, ಮಂಟಪದ ಮೇಲೆ ಒಂದು ಆಲದಮರ, ಅದರ ಪಕ್ಕದಲ್ಲಿ ಅಲ್ಲಿ ತಕ್ಕೊಂಡೋಗ್ಬಿಟ್ಟು ಸಮಾಧಿ ಮಾಡ್ಬಿಟ್ರು. ಅಲ್ಲಿ ಈಯಪ್ಪನ್ನ ಮುಚ್ಕೊಂಬಿಟ್ರು. ತಲೆಕಡೇ ಒಂದು ತೊಳಸಿಗಿಡ ಊಣಿ ಬಿಟ್ರು. ತೊಳಸಿಗಿಡ ಊಣ್ಬಿಟ್ಟು ಇವ್ರು ನಾಲ್ವರು ದೇವಗನ್ನಿಕೆಯರು ಒಳ್ಳೇ ಹನ್ನೆರಡು ಗಂಟೆ ರಾತ್ರಿಗೆ ಒಂದು ತಟ್ಟೆಗೆ ಹೂವು, ಒಂದು ತಟ್ಟಿಗೆ ಗಂಧ ಬೇಕಾದಂಥ ಫಲ, ಅಡಿಗೆ ತಂದು ಊಟಕ್ಕೆ ಇಕ್ಕೋದು, ಬೇಕಾದ ದಾಯಿ ಪಗಡೇ ಆಡೋದು, ಒಟ್ಟಿಗೆ ಇರೋದು. ಐದು ಗಂಟೇ ಆಯ್ತಾಲೂವೇ ಅವ್ರು ಹೋಗ್ಬಿಡವ್ರು.

ಇದ್ದು ಇಂಗೇ ಹೋಗ್ತಿರಬೇಕಾದರೆ ಒಬ್ಬ ಬಳೆಶೆಟ್ಟಿ ಬಂದ. ಅವನಿಗೆ ಕತ್ತಲಾಗಿ ಬಿಡ್ತು. ಅಲ್ಲಿ ಬರೋವಾಗ ಹೋಗಿ ಆಲದಮರದ ಮ್ಯಾಲೆ ಕೂಕ್ಕೊಂಬಿಟ್ಟ. ಆಮೇಲೆ ಕೂತ್ಕೊಂಬಿಡ್ತಾಲೂ ನಿದ್ರೆ ಬರ್ಲಿಲ್ಲ ಅಯಪ್ಪಂಗೇ. ನೋಡ್ತಾ ಇದ್ದ. ಇವ್ರು ಬಂದ್ರು, ಹುತ್ತದ ಕೋವಿಯಿಂದ ದೇವಗನ್ನಿಕೇರು ನಾಲ್ವರು ಬಂದರು. ಒಬ್ಳು ಹೂವ, ಒಬ್ಳು ಗಂಧ, ಬೇಕಾದಂಥ ಫಲ, ಬಗೇ ಆಡಿಸಿ ನಾಲ್ವರು ತಕ್ಕೊಂಬಂದ್ರು. ಬಂದು ಅವಾಗ ತಲೆಕಡೇ ಕಿತ್ತು,

ಕಾಲಕಡೆ ಊಣೆದ್ರು. ಈಯಪ್ಪ ಎದ್ದು ಕೂತ್ಕೊಂಡ. ರಾಜ ಎದ್ದು ಕೂತ್ಕೊಂಡು ಊಟ ಮಾಡ್ದ. ಬೇಕಾದಂಗೇ ದಾಯಿ ಪಗಡೇ ಆಡಿದ್ರು. ಮತ್ತೆ ಐದು ಗಂಟೆ ಆಯ್ತು. ಕಾಲಕಡೆ ಕಿತ್ತು, ತಲೆ ಕಡೇ ಊಣೆದ್ರು. ಹೊರಟ್ಬಿಟ್ರು. ಅವ್ರು ದೇಶಕ್ಕೆ ಹೋಗ್ಬಿಟ್ರು. ಹೋಗ್ಬಿಟ್ಬುದ್ದನ್ನ ಇವ್ನು ನೋಡ್ಕೊಂಡೆ ಇದ್ದ ಬಳೇ ಶೆಟ್ಟಿ. ನೊಡ್ಕೊಂಡಿದ್ದು, ಅದರೊಳಗೆ ಒಂದು ದೊಡ್ಡ ರೆಂಬೆ ಕಿತ್ಕೊಂಡು, ತಿರ್ಗ್ಗೀ ಇವಳ ಪಟ್ಣಕ್ಕೆ ಬಂದು, ರಾಜನ ಪಟ್ಣಕ್ಕೆ ಮೊದ್ಲು ಇದ್ದ ಪಟ್ಣಕ್ಕೆ ಬಂದು, ಒಂದೊಂದು ಎಲೆ ಹಾಕ್ಕೊಂಡು ಬಂದ.

ಈಯಮ್ಮ ಧರಣಿ ಶೋಕ, ಧರಣಿ ಶೋಕ ಮಾಡ್ತಾ ಅವ್ಳೇ ರಾಜನ ಹೆಂಡ್ರು. ನಾನು ಅವರಿವ್ರ ಮಾತು ಕೇಳಿ ನಾನು ಇಂಗೆ ಕೆಟ್ಟೆ ಬೆಂದೇ ಅಂತ. ಅವಳ್ದು ಗೋಳು ಅನ್ನೋದು ಮುತ್ತಿನಸರ. ಅವಳ ಸರ ಅರಿ ಅರಿತಾದೆ. ಶಿವನ ಶೋಕ ಮಾಡ್ತಾ ಅವ್ಳೆ. ಈ ಬಳೆಶೆಟ್ಟಿ ಅಮ್ಮಾ ನಿಂಗೇನು ಕಷ್ಟ ? ಇದ್ಯಾಕಿಂಗೆ ಅಳ್ತೀ ? ಕಷ್ಟ ಏನು ? ಎತ್ತ ? ಅಂತ ಕೇಳ್ದಾ. ಅಪ್ಪಾ ನೀನೇನು ಅರಿಸಿಯಾ, ನೀನೇನು ತೀರಿಸಿಯಾ ? ನನ್ನ ಕಷ್ಟ ದೇವ್ರಿಗೆ ಗೊತ್ತು. ನಿನಗ್ಯಾಕೋಗು ಅಂದ್ಲು. ''ನಾನು ಅರಿಸೋದಾದ್ರೆ ಅರಿಸ್ತೀನಿ, ತೀರಿಸೋದಾದ್ರೆ ತೀರಿಸ್ತೀನಿ ನೀನು ಹೇಳಮ್ಮಾ'' ಅಂದ.

ಅವಾಗ ಅಪ್ಪ ಇಂಗೇ ನಮ್ಮ ಯಜಮಾನ್ರು, ಅವರ ತಾಯಿ ತಂದೆ ಮಣ್ಣು ಮಾಡ್ದಾಗಿಂದ ಅವರ ಸಮಾಧಿತಕ್ಕೆ ಹೋಗಿರ್ಲಿಲ್ಲ. ಹೋಗಿಬಂದ್ರು. ಬಂದ್ಮೇಲೆ ಕೆಲವಾರು ದಿವ್ಸ ಒಂದು ತಿಂಗಳಾ ಮಟ್ಟಲೇ ಮಾತಾಡ್ಲಿಲ್ಲ. ಅಕ್ಕಪಕ್ಕದವ್ರ ಮನೆಲಿ ಕೇಳಿದೆ. ಇಂಗ್ ಮಾಡು, ಮಾತಾಡ್ತಾರೆ ಅಂತ ನನಗೆ ಹೇಳ್ಕೊಟ್ರು. ಅವ್ರು ಅಡಿಗೆಗೆಲ್ಲ ಇಂಗೇ ಬೆರಸಿಡು ಅಂಗೇ ಮಾತಾಡ್ತಾರೆ, ಅಂದ್ರು, ಅಂಗೂ ಮಾತಾಡ್ಲಿಲ್ಲ. ತಿರ್ಗಾ ಇನ್ನಾ ಒಬ್ರು ಏನು ಹೇಳ್ಕೊಟ್ರು, ನೀನೊಂದು ಕತ್ತಿ ಮುಂದೆ ಅಕ್ಕೊಂಡು ಕೂತ್ಕೋ. ಈವತ್ತು ನಾನು ಪ್ರಾಣ ತಕ್ಕೊಂಬಿಡ್ತೀನಿ. ನೀನು ಮಾತಾಡ್ತೀಯಾ ಇಲ್ಲ ನಾನು ಪ್ರಾಣ ತಕ್ಕೊಂಳ ಅಂತ ಕೂತ್ಕೊಂಡೆ. ಅವಾಗ ನಮ್ಮ ಯಜಮಾನ್ರು ಇಂಗೇ ನಾನು ವೋಗಿದ್ನಲ್ಲ. ನಾನು ಸಮಾಧಿತಕ್ಕೇ ಅನ್ನೋವಾಕೇ ದೇವಗನ್ನೇರು ಬಂದು, ಬಾಗಿಲಾಗೇ ಕೂತಿದ್ರು, ಅವರಂಗೇ ತಲೇ ಬಾಚ್ಕೊಂಡು ಹೋಗ್ಬಿಟ್ರು ಅಂತ ಅಂದ್ಲು.

ಆಮೇಲೆ ನೋಡಮ್ಮಾ ನೀನು ಎಷ್ಟು ಮಾತ್ರಕ್ಕೂ ನನ್ನ ಮಾತು ಅಲ್ಲಗಳೀಬೇಡ. ಇದೇ ರಸ್ತೆಯಾಗೇ ಹೋಗ್ಬಿಡು. ನಾನು ಒಂದೊಂದೆ ಎಲೆ ಆಕ್ಕೊಂಡು ಬಂದಿದ್ದೀನಿ. ವೋಗಿ ನೀನು ಅದೇ ಮರದ ಮ್ಯಾಲೇ ಕೂತ್ಕೊಂಬಿಡು. ಅವ್ರೊಳ್ಳೆ ಹನ್ನೆರಡು ಗಂಟೆ ರಾತ್ರಿಗೆ ಬತ್ತಾರೆ ನಾಲ್ವರು. ಅವರು ತಟ್ಟೆ, ಗಂಧ ಹೂವು ಎಲ್ಲಾ ಬೇಕಾದ್ದು ತತ್ತಾರೆ. ದಾಯ ಪಗಡೆ, ಊಟಗೀಟ ಎಲ್ಲಾ ಮುಗ್ಸಿ ಅವ್ರು ಐದು ಗಂಟೆಗೆ ವೋಗ್ಬಿಡ್ತಾರೆ. ಹೋದ್ಮೇಲೆ ನೀನೋಗಿ ಪುನಃ ಅವ್ರು ಹೋದ ಹಿಂದೇನೆ, ತಲೆ ಕಡೆ ಕಿತ್ತು ಕಾಲುಕಡೆ ಇಕ್ಕಿಬಿಡು ತೊಳಸಿಗಿಡ. ಎದ್ದು ಕೂತ್ಕೋತಾರೆ. ನೀನು ಏನ್ಬೇಕೋ ಅವನೆಲ್ಲಾ ನೀನು ಮಾತಾಡೀ ಕತೆಯಾಡೀ ಅವಾಗ್ ನಿನ್ನ ಗಂಡನ್ನ ಉಳಿಸ್ಕೊಂ ಬರ್ಬೋದು' ಅಂದ.

ಅವಾಗ ಹೋದ್ಲು. ಅದೇ ರೀತಿ ಬೇಕಾದಂಥ ಮುತ್ತು ರತ್ನ ಮಡ್ಲಲ್ಲಿ ಕಟ್ಕೊಂಡು ಹೋಗ್ಬಿಟ್ಳು. ಅಲ್ಲಿ ವೋಗಿ ಅದೇ ಆಲದಮರದಡೀ ಕೂತ್ಕೊಂಬಿಟ್ಲು. ಆಮೇಲೆ ಮರದ ಮೇಲೆ ಹತ್ತಿ ಕೂತ್ಕೊಂಡ್ಲು. ಇವ್ರು ಬಂದ್ರು ನಾಲ್ವರೂನು. ಒಂದು ಹೂವು, ಗಂಧ ಬೇಕಾದ್ದು ತಗೊಂಬಂದ್ರು. ತಲೆಕಡೇದು ಕಿತ್ತು ಕಾಲುಕಡೆ ಇಟ್ರು. ಇವ್ರು ಮನೀಗಿದ್ದು ಎದ್ದು ಕೂತ್ಕೊಂಡ್ರು. ಬೇಕಾದಂಗೆ ದಾಯಿ ಪಗಡೇ ಆಡಿದ್ರು. ಐದು ಗಂಟೆಗೆ ಹೋಗ್ಬಿಟ್ರು ದೇವಗನ್ನಿೀಕೆಯರು. ಅವ್ರು ಹೋದ ತಕ್ಷಣ ಇಳಿದು ಹೋದ್ಲು. ಹೋಗಿ ಅದೇ ಅವ್ರು ಮಾಡ್ದಂಗೇ ಕಿತ್ತು, ತಲೆ ಕಡೇ ಕಿತ್ತು ಕಾಲು ಕಡೇ ಇಟ್ಲು ತೊಳಸೀಗಿಡ. ಅವಾಗ ರಾಜ ಎದ್ದು, ಅಮ್ಮಮ್ಮ ಅಂತ ಎದ್ದು ಕೂತ್ಕೊಂಡ್ರು. ಬೇಕಾದಷ್ಟು ದುಃಖ ಮಾಡ್ದ. ನೀನು ಅರಮನೆ ಅಂಥ ಪಟ್ಣ ಪಾಳ್ಯ ಎಲ್ಲಾ ಬಿಟ್ಟು ನೀನು ಯಾಕೆ ಬರಾಕೋದೇ ? ನಾನು ಹೋದ್ರೆ ನಾನೇ ಹೋತೀನಿ. ನೀನು ಯಾಕ್ ಬಂದೇ ? ಅಂಗೇ ಇಂಗೇ ಅಂತ ಇಬ್ರೂ ಗೋಳಾಡಿ ಬೀಳಾಡಿ ಅತ್ರು. ನ್ಯಾನೇನಾಗ್ಲೀ ನೀನೂ ಬರ್ರ್ಬೋದಾ ? ನೀನು ಅನ್ಯಾಯ ಆಗ್ತೀಯಾ ಅಂತ ಅಂದು ಅತ್ತು ಸುರ್ದು ಎಲ್ಲಾ ಆಗೋವಾಕ್ಕೆ, ಆಗ್ಲಿ ನಾನು ಏನೇ ಕಷ್ಟ ಆಗ್ಲೀ ನಿಮ್ಮನ್ನ ತಗೊಂಡು ವೋಗೊತನ್ಕ ನಾನು ಹೋಗೋದಿಲ್ಲ ಅಂತ ಅಂದ್ಬಿಟ್ಟು ಹೇಳುಬುಟ್ಟುಳು ಗಂಡಂಗೇ. ಅವಾಗ ಮತ್ತೆ ನೀವೇನೊ ನನ್ನ ಈ ಕಡೆಗೆ ತಂದು ಇಟ್ಕೊಂಬಿಟ್ರಿ. ನಾನು ನಿಮ್ಮ ಸಾವು ಬಾಳು ನಾನೆಂಗೆ ಕಾಣ್ಬೇಕು ? ನನಗೊಂದು ಕಷ್ಟ ಸುಖಾನೇ ಬಂತು. ನಾನು ಯಾರಿಗ್ಬೇಕು ? ನೀವಿನ್ನ ನರಲೋಕದಲ್ಲಿ ಎಷ್ಟುದಿನ ಇರ್ತೀರಾ ನನಗೇಳ್ಬೇಕು ಅಂತ ಕೇಳು ಅಂದ್ಳು.

ಅವಾಗ ಆಮೇಲೆ ಅಂಗಂತ ಎಲ್ಲಾ ಕೇಳ್ಕೊಂಡ್ರು. ಈವತ್ತು ಅವರು ತಿರ್ಗಾ ಅದೇ ಆ ತರ ಊಟಾ ಎಲ್ಲಾ ತಗೊಂಡು ಬಂದ್ರು. ರೆಡಿಯಾಗಿ ಅವಾಗ ಇವ್ರೀಗೆ ಆ ಕಡೆ ನೋಡ್ತಾರೆ ರಾಜ ಹೆಂಡ್ತೀ ಅಲ್ಲೆ ಅವ್ಳಲ್ಲ? ಊಟ ಸೇರ್ಲಿಲ್ಲ. ಯಾಕೇ ಇವತ್ತು ಊಟ ಇಂಗೇ ಮಾಡ್ತಿರಲ್ಲ ಅಂದ್ರು. ದಿನ ದಿನ ಬಾಳ ಚೆನ್ನಾಗಿದ್ದೀರಾ. ಈವತ್ತು ಯಾಕೇ ಈತರ ಮಾಡ್ತೀರ? ಏನು ಶೀತ ಜ್ವರನ? ಊಟ ಮಾಡ್ದೇ ಇದೀರ ಅಂದ್ರು. ಅವಾಗ ಕೇಳ್ದಾ ನೀವೇನೂ ನನ್ನ ತಂದು ಇಲ್ಲಿ ಇಟ್ಕೊಂಬಿಟ್ರಿ. ನಿಮ್ಗೇನೋ ಒಂದು ಗ್ರಹಚಾರ ಆಯ್ತು. ನಿಮ್ಗೇನೋ ನನ್ಗೇನು ? ಆ ಕಾಡಾಗೆ ಗ್ರಹಚಾರ ಆಯ್ತು ನಂಗೇನೊ ನೀವು ಎಷ್ಟು ದಿನ ಈ ನರಲೋಕ ದಾಗೇ ಇರ್ತೀರಾ ? ನೀವು ಹೇಳ್ಬೇಕು, ಅಂತ ಕೇಳಿದ. ನಮಗೇನೂ ಇಲ್ಲ. ನಮ್ಮ ತಾಯಿ ತಂದೆಗೆ ಒಂದು ಕಷ್ಟ ಬಂದ್ಬಿಟ್ರೇ ಅಲ್ಲಿ ನಮ್ಮ ದೇಶದಾಗೇ ದೇವಲೋಕದಾಗೇ ರಣಭೇರಿ ಮೇಲೆ ಏಟು ಹೊಡೆದ್ಬಿಡ್ತಾರೆ. ಅವಾಗ ನಾವು ಹೋತೀವಿ. ಅತ್ತಗಂಟ ನಾವು ಕಷ್ಟ ಬರೋವರ್ಗೂ ಹೋಗೋದಿಲ್ಲ. ನಾವು ಅಲ್ಲಿ ತಂಕ ಈ ನರಲೋಕದಾಗೇ ಇರೋರು ಅಂದ್ಬಿಟ್ರು. ಆಮೇಲೆ ಕೇಳ್ಕೊಂಬಿಟ್ಟ, ಆಗೋಯ್ತು.

ಅವ್ರು ಐದು ಗಂಟೆ ಆಯ್ತು. ಅವ್ರು ಹೋಗ್ಬಿಟ್ರು. ಅವ್ರು ಪಟ್ಣಕ್ಕೆ ಅವ್ರು ಹೋಗ್ಬಿಟ್ರು. ಆಮೇಲೆ ಬಂದು ತಿರ್ಗಾ ಎಥಾ ಪ್ರಕಾರ ಹೆಂಡ್ರು ಅದೇ ರೀತಿ ಮಾಡಿ ಎಬ್ಬ್ರಿಸೀ ಕುಂಡ್ರಿಸ್ಕೊಂಡ್ಳು. ಅವಾಗ ಕುಂಡ್ರಿಸ್ಕೊಳ್ಳೋ ಹೊತ್ಗೆ ಅವಾಗ ಹೇಳ್ದಾ ಈತರಕ್ಕೆ ಈತರಂತೇ,

ನಿನಗೆಲ್ಲೀ ಸಾಧ್ಯ ? ನೀನೋಗ್ಬಿಡು ಹಿಂದಕ್ಕೆ ಅಂದ. ಎಷ್ಟು ಮಾತ್ರಕ್ಕೂ ನಾನು ಪಟ್ಣಕ್ಕೆ ಹಿಂದಕ್ಕೆ ಹೋಗಲ್ಲ. ನಿಮ್ಮನ್ನ ಕರ್ಕೊಂಡೋಗಗಂಟ ನಾನು ಹೋಗಲ್ಲ ಅಂತ ಅಂಧ್ಬಿಟ್ಳು.

ಅವಾಗ ನಿಮ್ಮಿಷ್ಟಕ್ಕೆ ನೀವಿರಿ, ಎಥಾ ಪ್ರಕಾರದಂತೆ ಅವರ ಕೈಲೀ ಅಂಥ ಹೇಳ್ಬಿಟ್ಟು, ಒಂದು ದೊಡ್ಡದು ಹುತ್ತದ ಕೋವಿಗೆ ವೋಗಿ ನಿಂತ್ಕೊಂಡ್ಲು. ನಾನು ಒಬ್ಬ ತಾಯಿ ಒಬ್ಬ ತಂದೆಗೆ ಹುಟ್ಟಿ ಒಬ್ಬ ಗಂಡಗೇ ನಾನು ಸೆರ್ಗು ಹಾಕಿದ್ರೆ ದೇವಲೋಕಕ್ಕೆ ಹೋಗುವಂತಾರಲಿ. ದೇವಲೋಕದ ಜೈ ಪರಮೇಶ ಎಂದಳು. ಅವಾಗ ಸುವ್ವನೆ ಇಳಿದ್ಬಿಡ್ತು. ದೇವಲೋಕಕ್ಕೆ ಹೋಗ್ಬಿಟ್ಳು. ಹೋಗ್ಬಿಟ್ಟು ನಡಾದೇವಲೋಕಕ್ಕೆ ವೋಗಿ ಕೂಗಿದ್ಲು. ಇದು ನರಲೋಕದಿಂದ ಬಳೆ ಬಂದವೇ. ಯಾರಿದ್ರೂ ತೊಟ್ಕೊಂಬೋದು ಬಳೇ ಅಂತ ಸಾರ್ಬಿಟ್ಲು. ಅವಾಗ ಅವರಮ್ಮ ನೀರಿಗೆ ಬಂದಿದ್ಲು. ಯಾರು ದೇವಗನ್ನೇರಮ್ಮ ? ದೇವಗನ್ನೇರಮ್ಮ, ನೀರಿಗೆ ಬಂದಿದ್ದಾಗ ಅವಾಗ ಹೇಳಿ ಕರೆದ್ಲು. ಕೂಗಿದ್ಲು. ಬಾಳೇವನ ಬಲಕ್ಕೆ ಬಿಡು, ಸೀಗೇವನ ಎಡಕ್ಕೆ ಬಿಡು, ನಟ್ಟನಡುವೇ ಬಾರಯ್ಯ ಬಳೇಶೆಟ್ಟಿ ಅಂದ್ಲು. ಹೋಗ್ಬಿಟ್ಟು ಅಲ್ಲಿಗೆ ಬಾವಿತಕ್ಕೆ ಹೋದ್ಲು ವೋಗಿ ನಿತ್ಕೊಂಡು ಆಹಾ ಏನಮ್ಮಾ ನೀನು ನರಲೋಕದೋಳು ದೇವ ಲೋಕಕ್ಕೆ ಬರಬೇಕಾದ್ರೆ ಏನು ಕಾರಣಾಮ್ಮಾ ? ಅಂತ ಕೇಳಿದಳು.

ಅವ್ಳಿಗೇ ಗೊತ್ತಾಯ್ತು. ನಿನ್ನ ಮಕ್ಳು ಇಂಗೇ ಮಾಡ್ಬಿಟ್ಟವ್ರೆ. ನಾನು ಯಾಕೆ ಬರೋಣಾಮ್ಮ ? ನಿನ್ನ ಹೆಣ್ಣಮಕ್ಳು ಬಂದು ನನ್ನ ಬಳೇ ಕಿತ್ಕೊಂಡು ಬಂದು, ನನ್ನ ಅರಿಸಿನ ಕುಂಕುಮ ಅಳಿಸಾಕ್ಕೆ ಬಂಧ್ಬಿಟ್ರು. ನನಗೀತರ ಕಷ್ಟ ಆಯ್ತು. ಅದ್ರಿಂದ ನಾನು ಬಂದೆ. ಇಲ್ಲದಿದ್ದರೆ ನಾನು ಯಾಕೆ ಬರ್‍ತೀ ? ಅವಾಗ ಬೇಕಾದಂಗೇ ದೇವಲೋಕದ ಸೀರೆ, ದೇವಲೋಕದ ರವಿಕೆ, ಕಣ್ಣಿಗೆ ಬೇಕಾದಂಥ ಆಭರಣದ ಒಡವೆ ಇಕ್ಕಿ, ನೀನು ನಡಾದಾರಿಗೇ ಹೋಗಿ, ನಮ್ಮಪ್ಪನ್ಮನೇ ಹಾಳಾಗೋಯ್ತು ಅಂತ ಹೇಳಿ ಹೋಗ್ಬಿಡು. ನಾವು ನಮ್ಮ ಮಕ್ಕಳನ್ನ ಕರ್ಕೊತೀವಿ ಅಂತ ಹೇಳ್ಬಿಟ್ಳು.

ಅವಾಗ ನಡಾದಾರಿಗೇ ಹೋದ್ಲು. ಅವಾಗ ಹೋಗ್ಬಿಟ್ಟು ನಮ್ಮಪ್ಪನ ಮನೆ ಹಾಳಾಗೋಯ್ತು ಅಂದ್ಲು. ಅವಾಗ ಇವರು ಹೋಗಿದ್ದೇ ರಣಭೇರಿ ಮೇಲೆ ಏಟು ಹೊಡೆದುಬಿಟ್ರು. ಅವಾಗ ಇವ್ರು ಕಿತ್ಕೊಂಡು ಓಡ್ಬಿಟ್ರು. ಅವಾಗ ಅಮ್ಮಮ್ಮ ಎಷ್ಟೊತ್ತು ಮಲಗಿದ್ದೇ ಅಂತ ಎದ್ದ. ಈಕೆ ಗಂಡನ್ನ ಎಬ್ರಿಸ್ಕೊಂಡು, ಅವಾಗದ್ದು ಮದುವೆ ಅಲ್ಲ ಅಂತ, ಆಕಾಶದಷ್ಟು ಹಸೆ ಉಯ್ದು, ಭೂಮಿ ಉದ್ದುದ್ದು ಚಪ್ರ ಹಾಕ್ಸಿ, ಇವ್ರು ತಿರ್‍ಗಾ ಲಗ್ನ ಆಗೀ ಚೆನ್ನಾಗೀ ಬದುಕಿದ್ರು.

ಹೇಳಿದವರು : **ರಾಜಮ್ಮ**, ನೆಲಮಂಗಲ

# ೨೨. ಮಳೆ ದೇವೇಂದ್ರ

ಒಂದು ಪಟ್ಣ ಅಂತೆ. ಆ ಪಟ್ಣದಲ್ಲಿ ಒಬ್ಬ ದೊರೆ ಅಂತೆ. ಆ ದೊರಿಗೆ ಆರು ಜನ ಗಂಡು ಮಕ್ಳು ಅಂತೆ. ಆರು ಜನ ಗಂಡುಮಕ್ಳು ಆದ್ರೆ ಒಬ್ಬಳೇ ಒಬ್ಳು ಮಗಳಂತೆ. ಕಡೇವ್ಳು. ಒಬ್ಬಳೇ ಒಬ್ಳು ಮಗಳಾದ್ರೇ ಆ ಮಗಳಿಗೆ, ನರಮನಸ್ರು ನೋಡಂಗಿಲ್ಲ. ಅಯಮ್ನ ನರಮನಸ್ರು ನೋಡ್ದಂಗೇ ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಮಡಗ್ಬಿಟ್ರು ರಾಜ್ರು. ಅವಾಗ ರಾಜರು ಮಡಿಗ್ಬಿಟ್ರು ಮಗಳ್ನ, ಹೂವ ಮುಡಿಸೋಕೆ ಒಬ್ರು. ತಲೆ ಬಾಚೋದೆ ಒಬ್ರು. ಊಟ ತಕೊಂಡೋಗವ್ರೆ ಒಬ್ರು. ಹಾಸಾಕೇ ಒಬ್ರು ಗುಡಿಸವ್ರೇ ಒಬ್ರು. ನರಮಾನವ್ರ ಸಬ್ದ ಅನ್ನೋದಿಲ್ಲ ಮಗಳಿಗೆ. ''ಏನಪ್ಪಾ ಎಷ್ಟು ದಿನ ಆದ್ರೂ ನನ್ನ ಇದೇ ತರ ನೀನು ಹನ್ನೆರೆಡು ಅಂತಸ್ತಿನ ಮಾಡಿ ಮೇಲೆ ನೀನು ಮಡಗ್ಬಿಟ್ರೇ, ನಾನು ನರಮಾನ್ರು ಅನ್ನೋರ ನೋಡಂಗಿಲ್ಲ ಭಾಳ ಬೇಸರಿಕೆ ಆಗ್ತಾ ಐತೆ. ಈ ಊರಲ್ಲಿ ಒಂದು ಕಥೆನಾದ್ರೂ ಮಾಡಿಸಬಾರ್ದಾ ಅಂತ ಮಗಳು ಅಪ್ಪ ಅವರ್ನ ಕೇಳಿದ್ಲು.' ಅಯಮ್ಮಾ. 'ನಾಳೆ ಮಾಡಿಸೋಣ' ಅಂತ ತಂದೆ ದಾಸ್ರನ್ನ ಕರಿಸ್ಬಿಟ್ರು ಕಥೆ ಮಾಡಿಸೋಕೆ ಏರ್ಪಾಡು ಮಾಡಿದ್ರು ರಾಜ್ರು.

ರಾಜ್ರ ಮನೇ ಮುಂದೇನೆ ಕಥೆ ಮಾಡಿಸೋವಾಗ ಮಾಡಿಸೋಕೆಲ್ಲಾ ಏರ್ಪಾಟು ಮಾಡಿದ್ರು. ಕಥೆ ಮಾಡೋ ಹೊತ್ಗೆ ಇಳಿದು ಬಂದ್ರು. ಹನ್ನೆರಡು ಅಂತಸ್ತಿನಿಂದ, ಮಾಡಿ ಮೇಲಿಂದ. ಕೆಳಿಕ್ಕೆ ಇಳಿದು ಬಂದು ಕುಂತ್ಕೊಂಡ್ರು. ಕುಂತ್ಕೋಣೋ ವೊತ್ತಿಗೆ ಎಲ್ಲೂ ಇಲ್ಲದ ಮಳೆ ಬಂದ್ಬಿಡ್ತು. ಎಲ್ಲೂ ಇಲ್ಲದ ಮಳೆ ಬರೋವಾಕ್ಕೇನೆ, ಅಬ್ಬಬ್ಬಾ ಎಷ್ಟೋ ವರ್ಷಗಳಿಂದ ನಾನು ಕಥೆ ಮಾಡೋವಕ್ಕೆ ನಮ್ಮೂರಿಗೆ ದೊಂಬರು ಬಂದು ಎಲ್ಲೂ ಇಲ್ಲದ ಮಳೇ ಬಂದ್ಬಿಡ್ತು. ಈವತ್ತು ಬರೋ ದೇವೇಂದ್ರರಾಯ ನಾಳೇ ಆದ್ರೂ ಬರ್ಬಾದ್ದಾಗಿತ್ತಾ, ಅಂತ ಈಯಮ್ಮ ಅಂದ್ಲು ಮಗ್ಳು. ಅನ್ನೋವಾಕ್ಕೆ ದೊಂಬ್ರು ಕಥೆ ಆಡ್ಬಿಟ್ರು. ಅವತ್ಲೂ ದಿನ ಆಗೋಗಿಬಿಟ್ತು. ಅವತ್ಲುದಿನ ಆಗೋಗಿ ಬಿಡ್ತು. ಅವತ್ಲು ದಿನ ಕಥೆ ಆಡಾದ ಮೇಲೆ ಹೊರಟೋಗಿಬಿಟ್ರು. ಮಗ್ಳು ಹನ್ನೆರಡು ಅಂತಸ್ತಿನ ಮಾಡಿ ಮೇಲಿದ್ದ ಮಗಳಿಗೆ ಮಾರನೇ ರಾತ್ರೆ ವೋಗಿ ದೇವೇಂದ್ರರಾಯ ಬಾಗಿಲು ತಟ್ಟಿದ.

ಏನಪ್ಪ ಇಲ್ಲಿ ನರಮಾನವ್ರ ಸಬ್ದನೇ ಇಲ್ಲ. ಈವತ್ತು ಬಾಕ್ಲು ತಟ್ತಾ ಅವ್ರೆ ಅಂದ್ಬಿಟ್ಟು ಯಾರು ನೀವು ? ಅಂತ ಕೇಳಿದ್ಲು. ಈವತ್ತು ಬರೋ ದೇವೇಂದ್ರರಾಯ ನಾಳೇ ಬಾ ಅಂದ್ನಲ್ಲಾ ನಾನು, ಅಂದ್ರು. ಏನಪ್ಪಾ ಈವಾಗ ಮಾಡೋದು ? ಒಳ್ಗೆ ಸಿಕ್ಕಾಕ್ಕೊಂಬಿಟ್ನೇ ನಾನು ? ಹೇಳೊಳು ಹೇಳ್ಬಿಟ್ಲೆ. ಈವಾಗ ದೇವೇಂದ್ರರಾಯ ಬಂದ್ಬಿಟ್ರು. ಕದ ತೆಗೆದೆ ಹೋದ್ರೆ ತಪ್ಪು ನಂದಾಗೋಗ್ಬಿಡ್ತದೆ. ಅಂತ ಯೋಚ್ನೆ ಮಾಡ್ತಾ ಹತ್ತು ನಿಮಿಷ ನಿತ್ಕೊಂಡ್ಲು. ಅಮೇಲಿಂದ ಕದ ತೆಗೆದ್ಲು. ಕದ ತೆಗಿತಲೇ ಬಂದ ದೇವೆಂದ್ರರಾಯ. ದೇವೆಂದ್ರರಾಯ ಬಂದು ಬೇಕಾದಂಗೇ ಪಗಡೇ ಆಡಕ್ಕೆ ಕುಂತ್ಕೊಂಡ್ರು. ದಾಯಿ-ಪಗಡೆ ಆಡಿದ್ರು. ಊಟ ಉಪಚಾರ ಮಾಡಿದ್ರು. ಐದು ಗಂಟೆ ಹೊತ್ತಾಯ್ತು. ಬೆಳಗಿನ ಜಾವ ಎದ್ಬಿಟ್ಟು ಹೋಗ್ಬಿಟ್ರು.

ಅವ್ರ ದೇಶಕ್ಕೆ ಅವ್ರು. ಇದೇ ರೀತಿ ಮಾಡ್ತಾ ಇದ್ರು. ಇದೇ ರೀತಿ ಘಸ್ಟು ದಿನ ಮಾಡಿ ಆನಂದ ಐಶ್ವರ್ಯದಿಂದ ಇದ್ರು.

ಇರೋ ಹೊತ್ಗೆ "ನೀವೀಗೆ ಇದ್ರೆ ಆಗೋಗ್ತದ ? ಏನಾನ ನಿಮ್ಮ ದೇಶದ್ದು ನಂಗೊಂದು ಉಡುಗೊರೆ ತಂದ್ಕೊಡ್ಬೇಕು" ಅಂತ ಅಂದ್ಲು. ಏನು ಉಡುಗೊರೆ ತಂದ್ಕೋಡ್ತಿರಿ? ನಿಮ್ಮ ಗುರ್ತು ನಂಗೆ ಬೇಕು ಅನ್ನೋ ಹೊತ್ಗೆ, ಪೀತಾಂಬರದ ರವಿಕೆ ಹೊಲಸಿದ್ರು, ಅವ್ರ ದೇಸದಾಗೆ ಹೊಲಸಿಬಿಟ್ಟು, ಟ್ರಂಕನಾಗೆ ಮಡಿಗಿ, ಮಡಚಿ ಬೇರೆ ದೇಶಕ್ಕೆ ಮಳೆ ನಡೆಸಕ್ಕೆ ವೋಗ್ಬಿಟ್ಟ ದೇವೆಂದ್ರ.

ಬೇರೆ ದೇಶಕ್ಕೆ ಮಳೆ ನಡೆಸಕ್ಕೆ ಹೋದಾಗ ಈ ಜಾಕಿಟ್ಟು ಟ್ರಂಕನಲ್ಲಿ ಮಡಗಿದ್ದು ಸೂರ್ಯ ಚಂದ್ರ ಹೊಳೆದಂಗೆ ಹೊಳೆತಿತ್ತು. ಈಚಕ್ಕೆ ಬೆಳಕು ಹೊಡೀತಾ ಇತ್ತು. ನೋಡಿದ್ರು. ತೆಗ್ದು ನೊಡೋವಾಕ್ಕೆ ಅದರೊಳಗೆ ರವಿಕೆ ಇತ್ತು. ಇಷ್ಟು ಪೀತಾಂಬರದ ರವಿಕೆ ಹೊಲಿಬೇಕಾದ್ರೆ ಅವಳು ಇನ್ನೆಷ್ಟು ಸುಂದರವಾಗಿರ್ಬೇಕು ಅಂತ ಯೋಚ್ನೆ ಮಾಡ್ಬಿಟ್ಲು ದೇವೇಂದ್ರನ್ ಹೆಂಡ್ತಿ ಆದವ್ಳು.

ದೇವೆಂದ್ರನ ಹೆಂಡ್ತಿ ಯೋಚ್ನೆ ಮಾಡ್ಬಿಟ್ಟು, ವಾದ್ಯದ ಬೀದಿಗೆ ಹೋಗಿ ವಾದ್ಯಾರ್ನ ಕರ್ಸಿ ನಿನಗೆ ಒಂದು ಮರ ಚಿನ್ನ ಕೊಡ್ತೀನಿ, ಒಂದು ಮರ ಬೆಳ್ಳಿ ಕೊಡ್ತೀನಿ, ನಾನು ಹೇಳ್ದಾಗೆ ಸಣ್ಣ ಸೂಜಿ ಅರ್ಧಪಾವು ಸೂಜೀನ ಮಾಡ್ಬಿಟ್ಟು ನೀನು ಈ ರವಿಕೇಗೆ ನೇಯ್ದಿರೋ ನೆಯ್ಗೆ ಒಳಗೆಲ್ಲ ಸಸ್ದು ಬಿಡ್ಬೇಕು, ಅಂತ ಹೇಳಿದ್ಲು. ಆಯ್ತು ಅದೇ ತರ ಮಾಡಿಕೊಡ್ತೀವಿ. ಸಸ್ದು ಬಿಟ್ರು. ಸಸ್ದುಬಿಟ್ಟು ಪುನಃ ತಂದು ರವಿಕೇನ ಅದೇ ತರ ಪಟ್ಣ ಕಟ್ಟುಬಿಟ್ಟು ಟ್ರಂಕಲ್ಲಿ ಅಂಗೇ ಮಡಿಗ್ಬಿಟ್ರು.

ಟ್ರಂಕಲ್ಲಿ ಅಂಗೇ ಮಡಗ್ದಾಗ ಆ ಹೆಂಡ್ತಿ, ಅದೇ ತರ ಮಡಿಗ್ಬಿಟ್ರು ಹೆಂಡ್ತಿ, ಗಂಡಂಗೆ ಗೊತ್ತಾಗ್ದಂಗೆ. ಈ ರವಿಕೆ ಹಿಂಗೆ ಅದಲ್ಲ ರವಿಕೆ ಅಂಗೆ ಪಟ್ಣದಲ್ಲಿದ್ದುದ್ದು ನೋಡ್ಬಿಟ್ಟು ಅರೆರೇ ನಾನು ಕಳಿಸ್ಲೇ ಇಲ್ಲ, ನಾನು ಇಲ್ಲೇ ಇಟ್ಕೊಂಬಿಟ್ಟಿದ್ದೀನ ರವಿಕೇನಾ ಹೊಲ್ಸಿ ಎಷ್ಟೋ ದಿನ ಆಗೋಯ್ತಲ್ಲ ಅಂತ ದೇವೆಂದ್ರ ಏನ್ಮಾಡಿದ್ರು ಬಂದು ರವಿಕೆ ತೆಗ್ದು ಕಾಗೇನ ತರಿಸಿ, ಕಾಗೆ ಕಾಲಿಗೆ ಕಟ್ಟಿ ಇಂಥ ಪಟ್ಣ, ಇಂಥ ರಾಜನ ಮಗ್ಳು, ಇಂಥ ಇದು, ಇಂಗೇ ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಅವ್ಳೇ, ಕಾರಕಾರನೇ ಹೋಗಿ ನೀನು ಬಡ್ಕೊಂಡು ಅಲ್ಲಿ ಮಾಡಿ ಇಂದ ಕೆಳಗೆ ಬಾಗಿಲತ್ರ ಬಿಟ್ಟು ಬರ್ಬೇಕು ಈ ಜಾಗಿಟ್ಟು ಅಂತ ಹೇಳಿ ಹೆಸ್ರು ಬರ್ದು ಕಳಿಸ್ಬಿಡ್ತಾನೆ, ದೇವೇಂದ್ರ.

ಇದು ಬಂತು. ಹನ್ನೆರಡು ಅಂತಸ್ತಿನ ಮಾಡಿ ಮೇಲೆ ನಿಂತ್ಕೊಂತು. ಆ ಪಟ್ಣದೊಳಗೆ ಬಂದು ಕಾರ ಕಾರನೆ ಬಡಕ್ಕೊಳವಾಕ್ಕೆ ಈಚೆಗೆ ಬಾಗಿಲು ತೆಗೆದು ಬಂದ್ಲು. ಏನು ? ಕಾಗೆ

ಇವತ್ತು ಬಡಕ್ಕೊಂತಾ ಅದೇ ಅಂತ ರಾಜನ ಮಗ್ಳು ಬಂದು ನೋಡಿ. ಪಟ್ಟ ದೊಪ್ಪನೆ ಬಿತ್ತು. ಎತ್ಕೊಂಡು ನೋಡಿ ಓಹೋ ದೇವೇಂದ್ರ ಕಳಿಸೋದೆ ರವಿಕೆ. ಹೇಳೋಗಿದ್ರಲ್ಲ ಉಡುಗೊರೆ ಏನಾರೂ ಕಳಿಸ್ತೀನಿ ಅಂತ. ಈವತ್ತು ಜ್ಞಾಪಕಕ್ಕೆ ಬಂದು ಕಳಿಸವ್ರೇ ಅಂತ, ಹೇಳಿದ್ರು ಹೇಳಿ ತಕ್ಕೊಂಡೋಗಿ ಆ ರವಿಕೇನಾ ಸ್ನಾನ ಮಾಡಿ ಮಡಿಮಾಡಿ ಊಟ ಉಪಚಾರ ತೀರಿಸ್ಕೊಂಡು ರವಿಕೇನ ತೊಟ್ಕೊಂಡ್ರು. ತೊಟ್ಕೊಂಡೋತ್ಗೆ ಮೈಗೆಲ್ಲ ಮೈಯಾದು ಮೈಗೆಲ್ಲ, ಸೂಜಿ ಚುಚ್ಕೊಂಬಿಡ್ತು. ಚುಚ್ಕೊಂಬಿಟ್ಟುತೂ ಈಯಮ್ಮನೂಗೆ ಬಾಳ ಕೋಪ ಬಂದ್ಬಿಡ್ತು. ದಾದೇರು ನಾಕು ಜನ, ದಾದೇರು ಇದ್ದೋರು ಹತ್ರ ಚಿಮುಟ ತಕೊಂಡು ಎಲ್ಲ ಕೀಳಿಸ್ಬಿಟ್ಳು. ಕೀಳಿಸಿ ಅಳತೇ ಮಾಡೋ ಹೊತ್ಗೆ ಅರ್ಧಪಾವು ಸೂಜಿ ಇತ್ತು. ಸೂಜೀನಂಗೆ ತೆಗ್ದುಬಿಟ್ಟು ಬಲಗಡೆ ಒಳದೊಡೆ ಸೀಳುಬಿಟ್ಟು ಒಳದೊಡೆ ಒಳಗೆ ಮಡಿಗ್ಬಿಟ್ರು. ಯಾರ್ಗೂ ಕಾಣ್ದಂಗೆ, ಗೊತ್ತಾಗ್ದಂಗೆ ದಾದಿದೀರು ಗೊತ್ತಾಗ್ದಂಗೆ.

ಆಮೇಲೆ ಮಾರನೆ ದಿನ ರಾತ್ರಿ ಎಲ್ಲೊ ಯಾವ್ದೋ ದೇಶದಲ್ಲಿ ದೇವೇಂದ್ರ ಮಳೆ ನಡೆಸಿಕ್ಕೆ ವೋಗಿದ್ದ. ಪುನಃ ಬಂದಾ. ಬಂದು ಬಾಗಿಲು ತಟ್ಟೋ ಹೊತ್ಗೆ ಬಾಗಿಲು ತಗೀಲಿಲ್ಲ. ಒಂದು ಸಲೀ ತಟ್ಟಿದ್ರು ತಗೀಲಿಲ್ಲ, ಎರಡು ಸಲೀ ತಟ್ಟಿದ್ರು ತೆಗೀಲಿಲ್ಲ. ಮೂರನೇ ಸರ್ತಿ ತಟ್ಟಿದ್ರು ತೆಗಿಲಿಲ್ಲ. ಬೇಡ ಅನ್ಯಾಯವಾಗಿ ಕೆಟ್ಹೋಗ್ತಿಯಾ. ಬ್ಯಾಡ ನಾನು ಏನು ಪಾಪ ಮಾಡಿದ್ರು ಬಾಗಿಲು ತೆಗೆದು ಮಾತಾಡೂ ಅಂದ್ರು. ಆದ್ರೂ ತೆಗಿಲಿಲ್ಲ. ಒಂದು ಗುಡುಗು ಗುಡುಗದೇ ಅಂದ್ರೆ ನೀನು ತಲೇ ತಿರ್ಗಿ ರಪ್ಪನೆ ಬೀಳ್ಬೇಕು ಅಂದ್ರು. ಅಲ್ಲಿಗೂ ಮಾತಾಡ್ಲಿಲ್ಲ. ಒಂದು ಸಿಡಿಲು ಒಡ್ದೇ ಅಂದ್ರೆ ನೀನು ಹನ್ನೆರಡು ಅಂತಸ್ತಿನ ಮಾಡಿ ಮ್ಯಾಗಿರೂ ಗಾಜೆಲ್ಲ ಪುಡಿಪುಡಿ ಆಗ್ಬೇಕು ಅಂದ್ರು. ಆದ್ರೂ ತೆಗಿಲಿಲ್ಲ. ಬ್ಯಾಡ ನಿನ್ನ ನಾಲ್ವರು ಅಣ್ಣ ತಮ್ಮದೀರು ಇರೋರು ಜೋಳಿಗೆ ಹೊತ್ಕೊಂಡು ಹೋಗ್ತಾ ಇರ್ತಾರೆ. ಸಮುದ್ರವಾಗಿ ನೀರು ಹರಿಸೋ ಹಂಗೆ ಮಾಡ್ತೀನಿ ಮಳೆ ಉಯ್ಯಿಸಿ ಅಂದ್ರು. ಅಲ್ಲಿಗೂ ತೆಗೀಲಿಲ್ಲ.

ನಿಮ್ಮ ತಾಯಿ ತಂದೆ ಉಣ್ಣೋ ಊಟದ್ದು ತಟ್ಟೆ ಅರಗಿನ ತಟ್ಟೆ ಗಿಂಡಿ ಚೆಂಬು ಬಂಗಾರ ತೇಲ್ಕೊಂಡು ಹೋಯ್ತಾ ಇರ್ತದೆ. ಅನ್ಯಾಯವಾಗಿ ಹೋಯ್ತು ಅಂತ ಅವಾಗಾದ್ರೂ ಮಾತಾಡು. ಮಾತಾಡಲ್ಲ.

ಒಳಗಡೆನೇ ಒಂದು ಮಿಂಚು ಮಿಂಚಿದ ತಕ್ಷಣವೇ ಹನ್ನೆರಡು ಅಂತಸ್ತಿನ ಮಾಡಿ ಮೇಲೆ ಪಳಪಳನೇ ಉದರೋಗಿ ಬಿಡ್ತು. ಒಂದು ಮಿಂಚು ಮಿಂಚ್ತಾನೆ.

ಕೆಳಕ್ಕೆ ಬಿದ್ದೋದ್ರು ಈಯಮ್ಮ. ಬಿದ್ದೋತ್ಲನೇ ಏಕವಾಗಿ ಎಲ್ಲೂ ಇಲ್ಲದ ಮಳೆ ಬರಿಸ್ಬಿಟ್ಟ. ಮಳೆ ಬರ್ಸಿದಾಗ ಈಯಮ್ಮನ್ನ ನಾಲ್ಕು ಆಳು ಅಣ್ಣ ತಮ್ಮದೀರು ಜೋಳಿಗೆ ಒಳಗೆ ಕಟ್ಕೊಂಡು ಹೋಗ್ತಾ ಇರ್ತಾರೆ. ಇವರಪ್ಪ ಇವರಮ್ಮ ಊಟ ಮಾಡೋ ಬಂಗಾರದ ತಣಿಗೆ ತೇಲಿಕ್ಕೊಂಡು ವೋಗ್ತಾ ಇರ್ತದೆ. ಆದ್ರೂ ಮಾತಾಡದೋದ್ಲು.

ಪಕ್ಕದಳ್ಳಿಗೆ ವೋಗಿ ತಿರ್ದು, ಹೊರ್ದು ಅಣ್ಣತಮ್ಮಂದಿರು ತಂದು ದವಸ ರಾಗಿ ಅಕ್ಕಿ ತಂದಿಟ್ಟಿದ್ರೆ, ಕೋಳಿ ಬಿಟ್ಟು ಎಲ್ಲಾ ಚೆಲ್ಲಾಡಿಸಿಬಿಡ್ತಾನೆ, ದೇವೇಂದ್ರರಾಯ. ಅಲ್ಲಿಗೂ ಮಾತಾಡೋದೇ ಇಲ್ಲ. ಆಮೇಲಿಂದ ಪುನಃ ತಿರ್ಗಾ ಇವ್ರು ಹೋರಿಬಿಟ್ಟಟ್ಟು ಗುಟ್ರಕ್ಕೆ ಹಾಕ್ಸಿ ಈ ರೆಕ್ಕೆ ಗರಿಗಳು ದಿಕ್ಕಾಪಾಲು ಆಗೋಗಿ ಬಿಡ್ತವೆ. ಅಲ್ಲಿಗೂ ಮಾತಾಡೊಲ್ಲ.

ಏನ್ಮಾಡಿದ್ರು ಇಷ್ಟಾದ್ರೂ ಮಾತಾಡ್ಲೇ ಇಲ್ವಲ್ಲ. ಏನೋ ಇರ್ಬೋದು ಅಂದ್ಬಿಟ್ಟು ಈ ಊರಲ್ಲಿ ಈವತ್ತು ಸಂಭ್ರಮ ಐತೆ. ಪ್ರತಿಯೊಬ್ರು ಬಂದು ಊಟ ಮಾಡ್ಬೇಕು. ಮಕ್ಳು ಮರಿ ಚಿಕ್ಕವ್ರು ದೊಡ್ಡೋರು ಅಂತ ಅನ್ನದ ಸಂತರ್ಪಣೆ ಮಾಡೋ ಏರ್ಪಾಟು ಮಾಡ್ತಾರೆ. ಆಗಾದ್ರೂ ಬಂದು ಊಟ ಮಾಡಲ್ಲ.

ಅಲ್ಲಿಗೂ ಮಾತಾಡೋಲ್ಲ. ನೀನು ಎಷ್ಟು ನಾಕೈದು ದಿನಾದ್ರೂ ಊಟ ಮಾಡ್ದೀರಾ ಅಸಿವಾತಲ್ಲ. ಆಗಾದ್ರೂ ಮಾತಾಡೋದಿಲ್ಲ. ಆಗ್ಲೂ ಮಾತಾಡಲ್ಲ ಅಂತ ಹೇಳ್ತಾಳೆ. ಆಮೇಲೆ ಇಷ್ಟು ಮಾಡಿ ಹೇಳಿ ಅದ್ರೂನಾ ದೇವೇಂದ್ರ ಮಾತೇ ಆಡೋದಿಲ್ಲ. ಮಾತಾಡ್ದೇ ಇರ್ದೇ ಹೋಗ್ಬಿಡ್ತಾರೆ. ಮಾತಾಡೋದೆ ಇಲ್ಲ. ಆಮೇಲೆ ಜನ ಎಲ್ಲಾ ಅಯ್ಯೋ ಯಾವ ಸೀಮೆ ದೊರೆ ಬಂದು ಬೇಕಾದಂಗೆ ನಾವು ಮಕ್ಳು ಮರೀ ಹೋಗಿ ಊಟ ಮಾಡೋಣ ಸಂತುಷ್ಟಿಯಾಗಿ ಅಂತ ಎಲ್ಲಾ ಊಟ ಮಾಡ್ತಾ ಇರ್ತಾರೆ ಸಂಭ್ರಮದಿಂದ. ಆಗೂ ಮಾತಾಡೋದೆ ಇಲ್ಲ ವೋಗೀ.

ಊಟಾನೂ ಮಾಡಲ್ಲ. ವೋಗೋದು ಇಲ್ಲ. ಆಮೇಲಿಂದ ಎಲ್ಲಾ ಊಟ ಮಾಡ್ಕೊಂಡು ಪುನಃ ಬರ್ತಾ ಇರ್ತಾರೆ. ಆಗೂನಾ ವೋಗೋದಿಲ್ಲ. ಆಮೇಲೆ ದೇವೇಂದ್ರ ಹೇಳ್ತಾರೆ. ಇಷ್ಟು ನೀನು ಹಟ ಮಾಡಿರೋದು ಏನು ? ಅಂತ ಪುನಃ ಬಂದು ಕೇಳೊವಕ್ಕೇ 'ಇಷ್ಟೆಲ್ಲಾ ಆಗೋಯ್ತಲ್ಲ, ಅನಾಹುತ. ಇನ್ನೇನು ತೇಲಾಗೋಯ್ತು, ಹನ್ನೆರಡು ಅಂತಸ್ತಿನ ಮಾಡೀನೂ ಬಿದ್ದಾಗೋಯ್ತು, ನೀನು ಮಾಡಿರೋದು ಈ ತಪ್ಪು ಅಂತ ಒಳದೊಡೇ ಸಿಗ್ದು ತೋರ್ಸಾ ಹೊತ್ಗೆ, ಆಗ ಅದಿರಲ್ಲಿರೋದು ಸೂಜೀ ನೋಡಿ, ಆಗ ಅವ್ನ ಮನಸ್ಸು ಅವನೇ ತಿಳ್ಕೊಂಡು ಎಂಡ್ರು ಕೊಡಬಾರ್ದು ಕಷ್ಟ ಕೊಟ್ಟವ್ನೇ ಅಂದ್ಬಿಟ್ಟು, ಪುನಃ ಅವ್ರು ಗಂಡ ಹೆಂಡ್ರು

ಆ ಹೆಂಡತಿನ ಬಿಟ್ಟುಬಿಟ್ಟು, ಹನ್ನೆರಡು ಅಂತಸ್ತಿನ ಮಾಡಿ ಹ್ಯಾಗಿತ್ತೋ ಪುನಃ ಅದೇತರ ಮಾಡಿಬಿಟ್ಟು, ಆಗ ಆಕಾಶದಷ್ಟು ಹಸೆ ಉಯ್ಯಿಸಿ ಭೂಮಿ ತಾಯಿಯಷ್ಟು ಚಪ್ಪರ ಹಾಕ್ಸಿ, ಅವಾಗ ಲಗ್ನ ಆಗೋಗ್ತಾರೆ.

ಹೇಳಿದವರು : **ಯಶೋದಮ್ಮ** ತಿಪ್ಪಾಪುರ, ವೀರಪುರ ಅಂಚೆ, ದೊಡ್ಡಬಳ್ಳಾಪುರ ತಾಲ್ಲೂಕು.

## ೨೩. ಅದೃಷ್ಟದ ಆಟ

ಒಂದು ಊರ್‍ನಾಗೆ ಒಬ್ಬ ಬಡವ ಇದ್ದ. ಅವನಿಗೆ ಒಬ್ಳು ಹೆಂಡ್ತಿ. ಮಕ್ಕಳಿದ್ದರು.ಅವರಿಗೆ ತಿನ್ನಾಕೆ ಹಿಟ್ಟಿಲ್ಲ. ಬಟ್ಟೆ ಇಲ್ಲ. ಒಂದು ಮರದಡಿ ವಾಸಮಾಡಿಕೊಂಡು ಇದ್ರು. ಆ ಊರಾಗೆಲ್ಲ ತಿರಿದ್‌ಕೊಂಡು ರೋವಷ್ಟು ಉಣ್ಣೋದು, ಒಂದು ತವ ಬಿದ್‌ಕೊಂಡು ಇರೋದು. ಅವಾಗ ಒಬ್ಬ ರಾಜ ಯಾರಾನ ಬಡುವ್ರು ಸಿಕ್ಕಿದ್ರೆ ಅವುನ್ನ ಕರಕ್ಕೊಂಬಾ ಅವರಗೇನಾನ ನಾವು ಅಷ್ಟು ಕೊಡಾನ ಅಂತ ಹೇಳಿ ಪ್ರದಾನಿನ ಕಳಿಸಿದ್ರು. ಅವುರಾಗ ಬಂದು ಇವ್ನ ಎಲ್ಲೋ ಊರ್‍ನಾಗೆ ಇಸ್ಕೊಂಡು ತಿನ್ಕೊಂಡು ಹೋಗ್ತಾ ಇದ್ದ. ಇವ್ರು ಬಂದು ಏನಪ್ಪ ನೀನ್ ಇಂಗ್ ವೋಗ್ತಾ ಇದ್ದೀ ? ಸ್ವಾಮಿ ನಮಗೆ ತಿನಕ್ ಇಟ್ಟಿಲ್ಲ ಬಟ್ಟೆ ಇಲ್ಲ. ಈ ತರ ಇದ್ದೇವ್ ನಾವು. ಇಷ್ಟು ಇಸ್ಕೊಂಡು ತಿಂದ್ಕೊಂಡು ಇದ್ದೀವಿ ಸ್ವಾಮಿ ಅಂತ ಅಂದ್ರು. ಬಾಪ್ಪಾ ಹೋಗಾನ ಅಂತ ಅಂದ್ರು, ಕರೆದ್ರು, ಅವಾಗ ಹೋದ್ರು. ಸಾವ್‌ಕಾರ್ ತವ ಹೋದ್ರು. ಅಲ್ಲಿನೂ ಇದೇ ಮಾತೇ ಹೇಳಿದ್ರು. ಅವಾಗ ಅಪ್ನ ನೀ ಬದುಕ್ಕೊಂಗಾಗಲೀ ಅಂತ ಒಂದ್ ಸಾವಿರ ಎತ್ತಿ ಕೈಗೆ ಕೊಟ್ರು. ತಕ್ಕೊಂಡ್ಹೋಗ್ರಿ ಅಂತ ಕೊಟ್ರು.

ಆ ಸಾವಿರ ತಕ್ಕೊಂಡ್ ಬಂದ್ರು. ಬಂದಿದ್ದು ಒಂದು ಡಜನ್ ಬಾಳೆಹಣ್ಣು ತಕ್ಕೊಂಡ್ರು. ಬಾಳೆಹಣ್ ತಕ್ಕೊಂಡಿದ್ದು, ಅಷ್ಟಗಲ ಬಟ್ಟೆ ಇತ್ತು. ಆ ಬಟ್ಟೆ ಒಳಗೆ ಆ ಸಾಮಾನು ಮಡಿಕ್ಕೊಂಡು ಬಾಳೆಹಣ್ಣು ಗಂಟಿಕ್ಕಿ ಮ್ಯಾಲೆ ಇಟ್ಕೊಂಡು ಒಂದ್ ಊರ್‍ನುದ್ದಾಕು ಬಂದ್ರು. ಊರ್ ಮುಂದೆ ಬಂದ್ರೆ ಗರಡ ಅಲ್ಲಿಗೆ ಬಂತು. ಗಂಟ್‌ಗಂಟೇ ಇತ್ತಲ್ಲ ಎತ್‌ಕ್ಕೊಂಡ್ಹೋಗಿ ಆಲದ ಮರದ ಮ್ಯಾಲೇ ಕೂತ್ಕೊಂಬಿಡ್ತು. ನಾವ್ ಇಷ್ಟು ಇದ್ ಮಾಡಿ ನಮ್‌ಕೈಗೆ ಸಿಗಲಿಲ್ವೆ ಅಂತದ್ದು ಬಂದು ಒಂದು ಮರದಡಿ ಕೂತ್‌ಕೊಂಡಿದ್ರು. ಆಗಲೀ ಇನ್ನೊಂದ್ಸಲ ಹೋಗ್‌ಬಿಟ್ ಬರೋಣ ಅಂತ ಹೆಂಡ್ರು ಮಕ್ಕಳಿಬ್ರೂ ಮಾತಾಡ್‌ಕೊಂಡು ತಿರುಗಾ ಹೋದ್ರು.

ಅವಾಗ ಸಾವಿರ ಎತ್ತಿ ಕೈಗೆ ಕೊಟ್ರು. ಹೋಗಿ ಏನಾದ್ರೂ ಒಂದು ವ್ಯಾಪಾರ ಮಾಡ್ರಿ. ಇದ್ರಾಗೆ ಬದುಕ್ರೀ ಅಂತ ಹೇಳಿದ್ರು. ಅದನ್ ತಕ್ಕೊಂಡ್ರು, ನಿಮ್ಮಂತ ಯಜಮಾನ್ರನ್ನ ಬಂದ್ ಕೇಳಿದ್ರು, ದುಡ್ ತಕ್ಕೊಂಡ್ಹೋಗಿ ನಾನ್ ಏನ್ ಮಾಡಬೇಕು ಸಾಮಿ ಅಂತ. ಮತ್ತೆ ತೌಡು ವ್ಯಾಪಾರ ಮಾಡು, ಇದ್ರಾಗೆ ನೀನು ಬದುಕ್‌ಬೈದು ಅಂತ ನಿಮ್ಮಂತವ್ರು ಹೇಳಿದ್ರು. ಅವಾಗ ಏನ್ ಮಾಡಿದ್ರು? ಒಂದಿಪ್ಪತ್ತು ಸೇರು ತೌಡು ತಕ್ಕೊಂಡ್ರು. ಒಂದು ಗೋಣಿ ಚೀಲಾದಾಗ ಹಾಕ್ಕೊಂಡ್ರು. ಅಲ್ಲಿ ಮಡಗಿದ್ರು. ಅದರಾಕ್ ಏನ್ ಮಾಡಿದ್ರು. ರಾಜ ಕೊಟ್ಟಿದ್ದ ದುಡ್ಡನ್ನ ತಕ್ಕೊಂಡ್ಹೋಗಿ ಅದರಾಗಿ ಇಟ್ಟವ್ರೆ. ಇಟ್ಟಿದ್ರೆ ಮತ್ತೆ ಈಯಪ್ಪ ಚುಂಚಿನಗಿರಿ ಊರಾಗೆ ತೌಡು ವ್ಯಾಪಾರ ಮಾಡ್‌ಕ್ಕೊಂಡು ಬತ್ತೀನಿ. ನೀನು ಇಲ್ಲೇ ಇರು, ಅಂತ ಹೆಂಡ್ತಿಗೇಳ್ಬಿಟ್ಟು ಹೋಗ್‌ಬಿಟ್ರು. ಯಾರೋ ತೌಡು ಅದೇನಮ್ಮ ಅಂತ ಬಂದ್ರು. ಏನ್ ಮಾಡಿದ್ರು? ನಮ್ಮನೆಗೆ ಅದಪ್ಪ ಅಂತ ಅಂದ್ರು. ಆ ತೌಡ್‌ನಾಗೆ ಮಡಗಿದ್ರಲ್ಲ ದುಡ್ಡು ಆ ಮೂಟೆ.ಮೂಟೆ ತಕ್ಕೊಂಡ್ಹೋಗಿ ಕೊಟ್ ಬಿಟ್ರು ಆಯಮ್ಮ ಅವರಿಗೆ.

ತಿರಗ್ಹೋಗಿ ಗಂಡ ಬಂದ. ''ತೌಡೇನಾಯ್ತು ಅಂತ ಅಂದ. ಮತ್ತೇ ನೀನು ಮೂರು ರೂಪಾಯಿಗೆ ತಕ್ಕೊಂಡಿದಿಯಾ ನಾನು ನಾಕು ರೂಪಾಯಿನಂಗೆ ಕೊಟ್ಟೆ ಅಂತ ಅಯಮ್ಮನು ಹೇಳಿದ್ರು. ಅದರಾಗ್ ದುಡ್ಡಿತ್ತಲ್ಲ ಏನಾಯಿತು ಅಂತ ಕೇಳಿದ. ''ಮೂಟೆ ಎತಕೊಟ್‌ಬಿಟ್ಟೆ ಸ್ವಾಮಿ''. ಆಗ್ಲೀ ಇದ್ರಲ್ಲೂ ನಾವ್ ಕೆಟ್ಹೋಗ್ಬಿಟ್ಟಿವೀ ಅಂತ ತಿರ್ಗಾ ಹೋದ್ರು ಸ್ವಾಮಿ ರಾಜನತಾಕೆ.

ಅವಾಗ ಏನ್ ಮಾಡಿದ್ರು? ಪ್ರದಾನಿ ಕೂಡ, ಅಯಪ್ಪನಿಗೆ ಒಂದು ಮೊಳೆ ಕೊಟ್‌ಬಿಡು ಅಂತ ಅಂದ್ರು ರಾಜ್ರು. ಅವಾಗ ಆ ಮಳೆ ತಕ್ಕೊಂಡ ಮನೆಗೆ ಬಂದ್ರು. ಒಂದು ತವ ಕೂತ್ಕೊಂಡ್ರು. ಅವರಿಬ್ರೂ ಮಾತಾಡ್ತ ಕೂತ್ಕೊಂಡಿದ್ರು. ಯಾರೋ ಒಬ್ರು ಬೆಸ್ತರೋನು ಬಂದಿ 'ನಿಮ್ಮನೆಗೇನಾನಾ ಒಂದು ಮಳೆ ಇದ್ರೆ ಕೊಡ್ರಿ' ಅಂತ ಕೇಳದ. ಅವಾಗ ಹೆಂಡ್ತೀಗೆ ಏ ನಮ್ಮನೇಲಿರೋದು ಮೊಳೆ ಎತ್ತಿ ಅಯಪ್ಪಗೆ ಕೊಟ್‌ಬಿಡು ಅಂದ. ಅವಾಗ ಎತ್ತಿಕೊಟ್ ಬಿಟ್ರಲ್ಲ ಬೆಸ್ತರೋನಗೆ; 'ಮುಂದೆ ಬಂದ್ರೆ ನೀನೂ ನಂಗೆ ಕೊಡಬೇಕು. ಅಂತ ಹೇಳಿದ್ರು. 'ಆಗ್ಲಿ ಕೊಡ್ತೀನಿ' ಅಂತ ಹೇಳ್‌ಬಿಟ್ಟು ಬೆಸ್ತ ಮಳೆ ಇಸ್‌ಕೊಂಡು ಹೋಗ್‌ಬಿಟ್ಟ.

ಆಚೆ ಸಮುದ್ರದಾಗೆ ಒಂದು ಮೀನು ಬಿತ್ತು. ಆ ಮೀನು ತಕ್ಕೊಂಬಂದ್ರು. ಕೊರಕೆಲ್ಲ ಚೆನ್ನಾಗ್ ತೆಗೆದುಬಿಟ್ ಕಸನ ಒಪ್ಪ ಮಾಡಿಬಿಟ್ಟ. ಈಯಮ್ಮನೂ ಎಲ್ಲಾ ಕೆರೆದು ಬಿಟ್ಟು, ಇಂತ ಮಚ್ಚನಾಗೆ ತಳ್ಳವಳೇ, ಎಲ್ಲಾ ಬಂಗಾರ ಆಗಿಬಿಟ್ಟವೇ ಸ್ವಾಮಿ. ಮಡಿಕೆನಾಗ್ ಈ ಕಸ ಎಲ್ಲ ಬಂಗಾರ ಆಗೋಗ್ ಬಿಟ್ಟಿದೆ. ಅವಾಗ ಯಾರೋ ಒಬ್ಬ ಬಂದು ಆ ಮಡಿಕೆನಾಗಿರೋದು ಕಸಕೊಡು ಒಂದು ಸಾವಿರ ಕೊಡ್ತೀನಿ ಅಂತ ಅಂದ. ಇಲ್ಲಪ್ಪ ನಮ್ಮೋರು ಬರೋತನ್ಕ ಕೊಡೋದಿಲ್ಲ ಅಂತ ಈಯಮ್ಮ ಅಂದ್ರು. ಅಂಗೇ ಆಯಪ್ಪ ಬಂದ್ರು. ಗಂಡ ಬಂದಾಗ ''ಸ್ವಾಮಿ ಆ ಕಸ ಕೊಡು. ಒಂದು ಸಾವಿರ ಕೊಡ್ತೀವಿ ಅಂತ ಕೇಳಿದ್ರು. ನಾನ್ ಕೊಡ್ಲಿಲ್ಲ ಅಂತ ಈಯಮ್ಮ ಅಂದ್ಲು. ಆಯಪ್ಪ ಅವಾಗ್ ಏನ್ ಮಾಡಿದ್ರು ಅಂದ್ರೆ, ಮೂರು ಸಾವಿರ

ಕೊಡ್ತೀನಿ. ಆ ಕಸಕೊಡು ಅಂತ ಕೇಳಿದ್ರು. ಅವಾಗ ಮೂರು ಸಾವಿರ ಕೊಟ್ಟ. ಆ ಕಸ ಎತ್ತಿ ಕೊಟ್ರು. ಕೈಗೆ ಎಲ್ಲಾ ಚಿನ್ನ ಆಗಿ ಕುಂತದೆ, ಬಂಗಾರ ಆಗಿ. ಅವಾಗ ಈ ಮೀನು ಮೀನ್ನೆಲ್ಲಾ ಕೊಯ್ದು ಒಪ್ಪ ಮಾಡಿ ಕ್ಲೀನ್ ಮಾಡಿ ಮಡಗಿದ್ರೆಲ್ಲ ? ಎಲ್ಲಾ ಬಂಗಾರ ಆಗೋಗಿ ಬಿಟ್ಟಿದೆ. ಆದರೊಳಗೇನೇ ಬಂಗಾರ ಆಗಾದೆ. ಅವಾಗ ಏನ್ ಮಾಡಿದ್ರು ? ಏನಾಗ್ಯದೆ ಅಂದ್ರೆ ಎಲ್ ನೋಡಿದ್ರು ಮಹಡಿ ಮಟ್‌ಗೋಳು. ತಿನ್ನಾಕೆ ಹಿಟ್ಟಿರ್ಲಿಲ್ಲ. ಇರಾಕ್ ಮನೆ ಇರಲಿಲ್ಲ. ಮಾಡಿ ಮಠಗಳು ಎತ್ಲಾಗೂನೂ ನೋಡಿದ್ರು ರಾಶಿ. ಐಶ್ವರ್ಯದಿಂದ ಬದುಕ್‌ತಾವ್ರೆ. ಇತ್ಲಾಗಿ ರಾಜ ಪ್ರದಾನಿನ ಅಪ್ಪಾ ನಿನ್ (ನಿರ್) ಬಡವನಿಗೆ ಎಷ್ಟು ಸಹಾಯ ಮಾಡಿದ್ದೆ, ಏನಾಗವ್ರೆ ನೋಡ್‌ಕ್ಕೊಂಬರೋಣ ಅಂತ ಅಂದ್ರು. ಅವಾಗ ಕುದುರಿ ಆಕ್ಕೊಂಡು ಅವ್ರು ಬಂದ್ರು ಸ್ವಾಮಿ. ಬಂದ್ರೆ ನಮಗೆ ಸಹಾಯ ಮಾಡವ್ರೇ ಒಂದಿಷ್ಟು ತೌಡನೂ, ರೋಷ್ಟು ಹುರುಳಿ ಹೊಟ್ಟು ತಂದು ಕುದ್ರಿಗ್ಹಾಕೋಣ ಅಂತ ಅಂದು ಹೋದ್ರು ಇವ್ರು. ಹೋಗ ದಿನ ನಮ್ಮನ್ಯಾಗೇ ಕೊಡ್ತೀನಿ ಬಾಪ್ಪ ಅಂತ ಅಂದ್ರು.

ಈ ತೌಡು ಮೂಟೇ ತಕೊಂಡು ಹೋಗಿದ್ರಲ್ಲ ? ಆ ಮೂಟೆ ಅಂಗೇ ಅದೆ. ಅವ್ರು ಬಿಚ್ಚಲೇ ಇಲ್ಲ. ತಕ್ಕೊಳ್ಳೊ ಇಲ್ಲ. ಮೂಟೆ ಎತ್ತಿ ಜನ್ರ ಕೈಗೆ ಕೊಟ್ರು. ಆ ಮೂಟೆ ತಕ್ಕೊಂಬಂದು ಅಲ್ಲಿ ಮಡಗಿದ್ರು. ಅದರೊಳಗೆ ಒಂದು ಸಾವಿರ ದುಡ್ಡು ಇತ್ತು. ದೊಡ್ಡ ಪಕ್ಷಿ ತಕ್ಕೊಂಡೋಗಿತ್ತಲ್ಲ ಈ ಬಾಳೆಹಣ್ಣು, ತಕ್ಕೊಂಡೋಗಿ ಮರದ ಮ್ಯಾಲೆ ಇಕ್ಕೊಂಡಿತ್ತು. ಅಲ್ಲಿ ಬಾಳೆ ಹಣ್ಣನ್ನೆಲ್ಲ ತಿಂದ್‌ಹಾಕ್ ಬಿಟ್ಟಿದೆ. ದುಡ್ಡು ಅದರಾಗೇ ಇದೆ ಎರಡು ಸಾವಿರ. ಅದು ಅದರಾಗೇ ಅದೇ.

ಅವಾಗ ಅದನ್ನು ತಕ್ಕೊಂಡು ಮರದಿಂದ ಕೆಳಕ್ಕೆ ಇಳಿದ್ರು. ಆಮ್ಯಾಕೆ ''ಸ್ವಾಮಿ ನೀವು ಮಾಳೆ ಕೊಟ್ಟಿದ್ರಲ್ಲ ಆ ಮಾಳೆ ಬೆಸ್ತರೋನ ಕೈಗೆ ಕೊಟ್ಟಿದ್ದೀನಿ. ಅದರಾಗ ಮೀನು ಇಡ್ಕೊಂಡು ಬಂದು, ಅದ್ರ ಕಸದಾಗ ಮೂರು ಸಾವಿರ ಬಂತು. ಈ ಸ್ವಾಮಿ ಐಶ್ವರ್ಯದಿಂದ ಮಹಡಿ ಮಠ ಎಲ್ಲಾ ಆಗ್ಯಾದೆ. ನಿಮ್ಮ ಅನುಕೂಲ ನಮಗೂ ಸರಿ ಹೋಯ್ತು ಅಂತ ಅಂದ್ರು ಅವರು. 'ಅಪ್ಪ ಐಶ್ವರ್ಯದಿಂದ ನೀವಿಲ್ಲಿ ಬದಕಪ್ಪ ಸಂದಾಕ್ ನೀನು ಬದುಕಪ್ಪ ಅಂತ ಅಂದು ಅವರು ಆಶೀರ್ವಾದ ಕೊಟ್ಟು ಅವರು ಹೋಗ್‌ಬಿಟ್ರು.

ಹೇಳಿದವರು : **ಮುನಿಯಕ್ಕಯ್ಯ,** ಚೋಳೂರು, ದೊಡ್ಡ ಬಳ್ಳಾಪುರ ತಾಲ್ಲೂಕು.

# ೨೪. ಹೆಣ್ಣು ಹುಡುಕಲು ಹೋದದ್ದು

ಒಂದೂರಿನಲ್ಲಿ ಒಬ್ಬಾಕೆ ಇದ್ದ. ಅವಳಿಗೊಬ್ಬ ಮಗ ಇದ್ದ. ಮಗ ಮದುವೆ ವಯಸ್ಸಿಗೆ ಬಂದ. ತಾಯಿ ಮಗನನ್ನು ಕರೆದು ''ಮಗನೇ ನನಗೂ ಮನೆಯಲ್ಲಿ ಒಬ್ಬಳೇ ಇದ್ದು ಸಾಕಾಗಿದೆ. ನೀನು ಮದುವೆ ವಯಸ್ಸಿಗೆ ಬಂದಿದ್ದೀಯ. ನಿನಗೆ ಮದುವೆ ಮಾಡ್ತೀನಿ'' ಅಂತ ಹೇಳಿದಳು. ಮಗ ತಾಯಿಯ ಮಾತುಕೇಳಿ ಅಮ್ಮಾ ನಾನು ಮದುವೆ ಆಗೋ ಹುಡುಗಿಯನ್ನು ನಾನೇ ಹುಡುಕ್ತೀನಿ. ನನ್ನ ಶರೀರದಿಂದಲೇ ಜನಿಸಿದವಳನ್ನೇ ನಾನು ಮದುವೆ ಆಗೋದು'' ಎಂದು ತಿಳಿಸಿದ. 'ಹಾಗೇ ಆಗಲಿ. ನಿನ್ನ ಹೆಂಡತಿಯಾಗವಳನ್ನು ನೀನೇ ಹುಡುಕಿಕೊಂಡು ಬಾ ಎಂದು ಹೇಳಿ ತಾಯಿ ಮಗನನ್ನು ಕಳುಹಿಸಿಕೊಟ್ಟಳು.

ಮಗ ಹೆಣ್ಣು ಅರಸುತ್ತಾ ಹೊರಟ. ದಾರಿಯಲ್ಲಿ ಒಂದು ಮಾವಿನ ಮರ ಇತ್ತು. ಆ ಮರದಲ್ಲಿ ತುಂಬಾ ಹೂವುಹಣ್ಣು ತುಂಬಿತ್ತು. ಆದರೆ ಯಾವುದೇ ಪಶು ಪಕ್ಷಿಗಳೇ ಆಗಲೀ ನರಮನುಷ್ಯರೇ ಆಗಲಿ ಆ ಮರದ ಹಣ್ಣನ್ನು ಉಪಯೋಗಿಸುತ್ತಿರಲಿಲ್ಲ. ಮರ ಈತನನ್ನು ನೋಡಿ ''ಅಯ್ಯಾ ಎಲ್ಲಿಗೆ ಹೋಗ್ತಾ ಇದ್ದೀಯ'' ಅಂತ ಕೇಳಿತು. ಈತ 'ಅಮ್ಮಾ ನಾನು ಪರಮಾತ್ಮನನ್ನು ನೋಡಲು ಹೋಗ್ತಾ ಇದ್ದೀನಿ'' ಅಂತ ಹೇಳಿದ. ''ಅಯ್ಯಾ ನಂದೊಂದು ಪ್ರಶ್ನೆ ಇದೆ ಕೇಳ್ಕೊಂಡು ಬರ್ತೀಯಾ ? ಅಂತ ಕೇಳಿತು.'' ''ಆಯಿತು. ಅದೇನು ನಿನ್ನ ಪ್ರಶ್ನೆ?'' ಅಂತ ಕೇಳಿದ. ''ಮರ ಹೇಳಿತು'' ನನ್ನ ಹಣ್ಣುಗಳನ್ನು ಪಶುಪಕ್ಷಿಗಳೂ ನರಮನುಷ್ಯರೂ ತಿನ್ನೊಲ್ಲ. ಅದು ಯಾಕೆ ಅಂತ ಕೇಳ್ಕೊಂಡು ಬರ್ತೀಯ ? ಎಂದು ಕೇಳಿತು. ಆಯಿತು ಅಂತ ಮುಂದಕ್ಕೆ ಹೋದ.

ಇನ್ನಷ್ಟು ಮುಂದೆ ಹೋಗುತ್ತಿದ್ದಂತೆ ಅಲ್ಲಿ ಒಬ್ಬ ಅಜ್ಜಿ ಇದ್ದಳು. ಆಕೆ ಆತನನ್ನು ನೋಡಿ ಎಲ್ಲಿಗೆ ಹೋಗ್ತೀಯ ಮಗು ಅಂತ ಕೇಳಿದಳು. ಈತ ಪರಮಾತ್ಮನನ್ನು ನೋಡಲು ಹೋಗ್ತಿದೀನಿ ಅಜ್ಜಿ ಅಂತ ಹೇಳಿದ. ಅಜ್ಜಿ ನನ್ನದೊಂದು ಪ್ರಶ್ನೆ ಕೇಳ್ಕೊಂಡು ಬಾ ಅಂತು. ಆ ಅಜ್ಜಿಗೆ ಗಂಟಲಲ್ಲಿ ನೀರು ಅನ್ನ ಏನೂ ಇಳೀತಿರಲಿಲ್ಲ. ಆರು ತಿಂಗಳಿಂದಲೂ ಆಹಾರ ತಗೊಳಕ್ಕೆ ಆಗ್ತಿರಲಿಲ್ಲ. ಅದಕ್ಕೆ ಕಾರಣ ತಿಳ್ಕೊಂಡು ಬಾ ಅಂತ ಅಜ್ಜಿ ಹೇಳಿತು. ಆಯಿತು ಅಂತ ಮುಂದೆ ಹೊಂಟ.

ಹೀಗೆ ಮುಂದಕ್ಕೆ ಹೋಗ್ತಾ ಅಲ್ಲೊಂದು ಆಲದ.ಮರ ಇತ್ತು. ಆಲದ ಮರದ ಕೆಳಗೆ ಒಬ್ಬ ಅಜ್ಜ ಕುಳಿತಿದ್ದ. ಆತನಿಗೆ ಮೈಯಲ್ಲಾ ಕಜ್ಜಿ ಆಗಿತ್ತು. ಅಜ್ಜ ಈ ಹುಡುಗನನ್ನು ಕರೆದು 'ತಮ್ಮಾ ಎಲ್ಲಿಗೋಗ್ತಾ ಇದೀಯ' ಅಂತ ಕೇಳಿದ. ನಾನು ಆ ಪರಮಾತ್ಮನ್ನ ನೋಡಕ್ಕೆ ಹೋಗ್ತಾ ಇದ್ದೀನಜ್ಜ. ಅಂತ ಆ ಹುಡುಗ ಹೇಳಿದ. 'ಪರಮಾತ್ಮ ಎಲ್ಲಪ್ಪಾ ಸಿಗ್ತಾನೆ ?. ಬಾಪ್ಪ ಇಲ್ಲಿ. ನನ್ನ ಮೈ ಸ್ವಲ್ಪ ತುರಿಸಿಕೊಡು'' ಅಂತ ಅಜ್ಜ ಹೇಳಿದ. ''ಅದಕ್ಕೆ ಆ ಹುಡುಗ ಇಲ್ಲ ಅಜ್ಜಾ ನನಗೆ ಸಮಯ ಇಲ್ಲ. ನಾನು ಪರಮಾತ್ಮನ ನೋಡ್ಬೇಕು ಅಂದ. ಅದಕ್ಕೆ ಆ ಅಜ್ಜ 'ಮಗೂ ಪರಮಾತ್ಮ ಅಲ್ಲೆಲ್ಲಪ್ಪಾ ಇದ್ದಾನೆ? ಇಲ್ಲೇ ಇದ್ದಾನೆ ಬಾರಪ್ಪಾ '' ಅಂದ.

ಹುಡುಗ ಹೇಳಜ್ಜ ಪರಮಾತ್ಮ ಎಲ್ಲಿದ್ದಾನೆ ಎನ್ನಲು, ಅಜ್ಜ 'ಮೊದಲು ನನ್ನ ಮೈ ಕೆರೆ .ನಂತರ ಅಲ್ಲಿರೋ ನೀರುಬಾವಿಲಿ ಕೈ ತೊಳಿ, ಹಾಲು ಬಾವಿಲ್ಲಿರೊ ಹಾಲು ಕುಡಿದುಕೊಂಡು ಬಾ' ಎಂದ. ಹುಡುಗ ಪರಪರ ಅಂತ ಅಜ್ಜನ ಮೈ ಬೇಗಬೇಗ ಕೆರದು ಕೈತೊಳಿಯದೇನೇ ಹಾಲು ಬಾವೀಲಿ ಹಾಲುಕುಡಿದು ಅಜ್ಜನ ಮುಂದೆ ನಿಂತು, 'ಪರಮಾತ್ಮ ಎಲ್ಲಿದ್ದಾನೆ? ಹೇಳಜ್ಜ' ಅಂದ. ಅದಕ್ಕೆ ಆ ಅಜ್ಜ 'ಪರಮಾತ್ಮ ಎಲ್ಲಪ್ಪಾ ಸಿಕ್ತಾನೆ? ನೋಡಪ್ಪ ನೀನು ನೇರವಾಗಿ ಮನೆಗೋಗು. ನಿಮ್ಮ ತಾಯಿ ಹತ್ರ ದೊಡ್ಡದೊಂದು ಮಡಕೆ ಮಾಡಿಸಕ್ಕೆ ಹೇಳು. ಅದಕ್ಕೊಂದು ಮುಸುಗು ಮಾಡಿಸ್ಲಿಕ್ಕೆ ಹೇಳು. ಆಕೆ ಕೈಗೊಂದು ಚಂದ್ರಾಯುಧ ಕೊಡು. ಪರಮಾತ್ಮನನ್ನ ಧ್ಯಾನಿಸಿ ನೀನು ಮೂಡಲದಿಕ್ಕಿಗೆ ಮುಖಮಾಡಿ ನಿಂತ್ಕೋ. ಪರಮಾತ್ಮ ಅಂತ ಹೇಳಿ ನಿನ್ನ ತಾಯಿ ನಿನ್ನ ಕತ್ತನ್ನು ಚಂದ್ರಾಯುಧದಿಂದ ಕಡಿಯಲಿ. ಬಂದ ರಕ್ತವನ್ನು ಅದೆ ದೊಡ್ಡ ಮಡಕೆಗೆ ಬೀಳುವಂತೆ ಹಿಡಿಯಲಿ. ನಂತರ ಅದಕ್ಕೆ ಮುಸುಗುಮುಚ್ಚಿ ಪರಮಾತ್ಮನನ್ನು ಧ್ಯಾನಿಸಿ ನಿನ್ನ ರುಂಡ ಮುಂಡಗಳನ್ನು ಸೇರಿಸಲಿ. ನಿನ್ನ ಇಚ್ಚೆ ನೆರವೇರುತ್ತದೆ ಅಂತ ತಿಳಿಸಿದ. ಅದಕ್ಕೆ ಆ ಹುಡುಗ ಇನ್ನೊಂದು ಮಾತು ತಾತಾ ಅಂದ. ಅದಕ್ಕೆ ಅಜ್ಜ ಅದೇನು ಹೇಳಪ್ಪಾ ಅನ್ನಲು ಹುಡುಗ ದಾರಿಯಲ್ಲಿ ಸಿಕ್ಕ ಮಾವಿನ ಮರದ ಕಥೆ ತಿಳಿಸಲು ಆ ಅಜ್ಜಾ ಆ ಮರದ ಕೆಳಗೆ ಏಳು ಕೊಪ್ಪರಿಗೆ ದ್ರವ್ಯ ಇದೆ. ಅದನೆಲ್ಲಾ ಬಡವರಿಗೆ ದಾನ ಮಾಡಿದರೆ, ಆ ಮರದ ಹಣ್ಣನ್ನು ಪಶುಪಕ್ಷಿಗಳೂ ನರಮಾನುಷ್ಯರೂ ತಿನ್ತಾರೆ ಅಂದ. ಹುಡುಗ ತಾತಾ ತಾತ ಇನ್ನೊಂದು ಮಾತು ತಾತ ಅಂತ, ದಾರೀಲಿ ಸಿಕ್ಕಿದ ಅಜ್ಜಿಯ ಪ್ರಶ್ನೆ ಕೇಳಿದ. ಅದಕ್ಕೆ ತಾತ ಈ ಅಜ್ಜಿಯ ಎದೇಲಿ ಮೂರು ಕಥೆ ಇದೆ. ಅದನ್ನು ಇನ್ನೊಬ್ರಿಗೆ ಹೇಳಿದರೆ ಆಕೆಯ ಗಂಟಲಲ್ಲಿ ನೀರು ಇಳೀತದೆ, ಅನ್ನವೂ ಇಳೀತದೆ ಅಂದ. ಸರಿಕನಜ್ಜ ಬರ್‍ತೀನಿ ಅಂತ ಆ ಹುಡುಗ ತನ್ನ ಮನೆಗೆ ವಾಪಾಸು ಹೊರಟ.

ದಾರೀಲಿ ಅಜ್ಜಿಗೂ, ಮಾವಿನ ಮರಕ್ಕೂ ತಾತ ಹೇಳಿದ ಉತ್ತರವನ್ನು ಹೇಳಿ ಮನೆಗೆ ಬಂದ. ತಾತ ಹೇಳಿದ್ದನ್ನೆಲ್ಲಾ ತಾಯಿಗೆ ಹೇಳಿದ. ತಾಯಿ ಅದೇ ರೀತಿ ಒಂದು ದೊಡ್ಡ ಮಡಕೆ ಮಾಡಿಸಿದಳು. ಅದಕ್ಕೊಂದು ಮುಸುಗುಮಾಡಿಸಿದಳು. ಒಂದು ಚಂದ್ರಾಯುಧ ಮಾಡಿಸಿದಳು. ಹುಡುಗ ಪರಮಾತ್ಮ ಅಂತ ಮೂಡಲದಕ್ಕಿಗೆ ಮುಖಮಾಡಿ ನಿಂತ. ತಾಯಿ ಪರಮಾತ್ಮ ಅಂತ ಚಂದ್ರಾಯುಧದಿಂದ ಮಗನ ರುಂಡ ಮುಂಡ ಬೇರೆ ಬೇರೆ ಮಾಡಿದಳು. ರಕ್ತನ ಮಡಿಕೆಲಿ ಹಿಡದು ಮುಸುಗುಮುಚ್ಚಿದಳು. ಪರಮಾತ್ಮನನ್ನು ಧ್ಯಾನಿಸಿ ರುಂಡ ಮುಂಡ ಒಂದುಮಾಡಿದಳು. ಮಗ ಜೀವಂತವಾಗಿ 'ಮಡಕೆಯ ಮುಸುಗು ತೆಗೆದಾಗ' ಅವರಿಂದ ಒಂದು ಹೆಣ್ಣು ಹೊರಗೆ ಬಂತು. ಆ ಹೆಣ್ಣನ್ನು ಅವನು ಮದುವೆಯಾಗಿ ಸುಖವಾಗಿದ್ದ.

ಹೇಳಿದವರು : **ತಿಮ್ಮಮ್ಮ**, ಮುದಗೆರೆ, ಕುಣಿಗಲ್ ತಾಲ್ಲೂಕು.

# ೨೫. ಸತ್ತ ರಾಜಕುಮಾರನ ಕಥೆ

ಒಬ್ಬ ರಾಜರಂತೆ. ಒಬ್‌ರಾಜರ್ಗೆ ಒಬ್ರೆಒಬ್ರು ಮಗನಂತೆ. ಅವ್ರೇನ್ಮಾಡಿದ್ರು? ಅನ್ನೆರಡ್‌ವರ್ಸ ತುಂಬತಕ ಇದ್ರು. ಅನ್ನೆರಡ್‌ವರ್ಸಕಾಲ ತುಂಬಿದ ಮೇಲೆ ಅವರ್ಗೆ ಮರಣಗಾಲ ಬಂದ್‌ಬುಡ್ತು. ಇನ್ನ್ಯಾರು ಎಣ್‌ಮಕ್ಳು ಇಲ್ಲಾ, ಗಂಡ್‌ಮಕ್ಳು ಇಲ್ಲಾ. ಸತ್ತ್ಹೋಗ್‌ಬುಟ್ರು. ಸತ್ತ್ಹೋದ್ಮೇಲೆ ಇಂಗೆ ತಗಂಡೋಗಿ ಮಣ್‌ಮಾಡ್‌ಬೇಕಲ್ಲ ಅಂದ್‌ಬುಟ್ಟು, ಮಂತ್ರಿಗೇಳಿದ್ರು. ಮಂತ್ರಿ ಎಲ್ಲಾರ ಹೋಗಿ ನನ್‌ಮಗನ್ಗೆ ಒಂದ್ ಎಣ್ ನೋಡ್ಕ ಬಲ್ಲಿ, ನಾವ್ ಲಗ್ನ ಮಾಡ್ಬುಟ್ಟು ಮಣ್ ಮಾಡನ ಅಂದರು.

ಆಯ್ತಪ್ಪ ಅಂದ್ಬುಟ್ಟು ಮಂತ್ರಿ ಒಂದ್ ಜೋಳ್ಗೆ ಹೊನ್‌ತಕಂಡು ಹಳ್‌ಹಳ್ಳಿ ಮೇಲೆ ತಿರ್ಗೀಕ ವೊಂಟೋದ್ರು. ಹಳ್ ಹಳ್ಳಿ ಮೇಲೆ ತಿರ್ರೀಕವೊಂಟೋದ್ರೆ ಯಾರ್ ಕೊಡ್ತಾರೆ? ಸತ್ತಕುಮಾರಂಗ್ ಎಣ್ ಕೊಡಿ ಅಂದ್ರೆ ಕೊಡ್ತಾರಾ ? ಎಲ್ಲೆಲ್ಲೂ ತಿರ್ರೀಕವೋದ್ರು. ಎಲ್ಲೂ ಕೊಡ್ಲಿಲ್ಲ. ಆಮೇಲೆ ಯಾರೋ ಬೇರೆಯವರೊಂದೊಬ್ರು, ಹಿರೇ ಎಣ್ತ ಮಕ್ಳು ಸಾಕಂಡಿದ್ರು. ಅವರ್ಮನಗೋದ್ರು. ಅವರ್ಮನೆಗೋದ್ರು ಅವರ್ಮನೆಗೋಯ್ದಾಗೇನೆಂದ್ರು ಒಂದ್ ಎಣ್‌ಕೊಡ್ರಿ ಒಂದ್‌ಜೋಳಗೆ ವೊನ್ ಕೋಡ್ತಿವಿ ಸತ್‌ಕುಮಾರಂಗೆ ಅಂದ್ರು. ಆಯ್ತು ನಾವ್ ಕೊಡ್ತಿವಿ ಬಲ್ಲಿ ಅಂತ ಹೇಳ್‌ಬುಟ್ಟು ಕರ್ಕಂಡೋಗಿ ಅವರ್ಗೇನ್ ಬೇಕಾದ್ದು ಮಾಡಿ ಊಟಕ್‌ಕೊಟ್ಟು ಎಣ್ಮಗೀಗೆಲ್ಲಾ ತಲೆ ಕೆರೆದು ಸೀರೆವುಡಿಸಿ ಅವೊನ್ನಿಸ್ಕಂಬುಟ್ಟು ಕಳ್ಸಬುಟ್ರು.

ಅವರಿಂದೆ ಕಳ್ಸಿದ್ಮೇಲೆ ಬರುವಾಗ ಮಂತ್ರಿ ''ನೀವೂ ಬಂನ್ನಿರಮ್ಮ, ಮದ್ವೆ ಮಾಡ್ಬುಟ್ಟು ಬರೋರಂತೆ, ಎಣ್‌ಮಗು ನೀವೆ ಕರ್ಕೊಬರೋರಂತೆ, ಮದ್ವೆಯಾಯಿತ್ಲೆ ನಾವ್ ಮಡಿಕಳದಿಲ್ಲ ಬಲ್ಲೀ'' ಅಂದ್ರು. ಆಯ್ತೂಂತ ಬಂದ್‌ಬುಟ್ರು. ಬಂದ್‌ಬುಟ್ಟಾಯ್ತು. ಇವ್ರು ಪಟ್ಣ ಪಾಳೇನೆಲ್ಲಾ ಗುಡ್ಸಿದ್ರು. ಆ ಎಣ್‌ಮಗೀಗೆ ಕಣ್ಣಗ್ ಬೇಕಾದ ಸೀರೆ ಒಡ್ವೆನೆಲ್ಲಾ ಧರಿಸಿದ್ರು. ತಾಯಿ-ತಂದೆ ಲಗ್ನ ಮಾಡಿದ್ರು. ಲಗ್ನ ಮಾಡಿ ಏನ್ಮಾಡಿದ್ರು ಅತ್ತೆ ಮಾವದೀರು, ಹೆಣ್ಣಿನತಾಯಿ ತಂದೆ ಇದ್ರಲ್ಲಾ ಅವುರ್ಗೆ ಅಮ್ಮ ನಿಮ್ಮಗು ಕರ್ಕಂಡ್ ವೊಂಟೋಗಿ. ನಮ್ಮಗನ ಮದ್ವೆ ಆಗೋಯ್ತು. ನಾವ್ ಈ ಸತೀಯ ಮಣ್ಗೆ ತಯಾರ್ ಮಾಡ್ತೀವಿ. ಕರ್ಕಂಡು ವೋಗ್ರಮ್ಮ ಅಂದ್ರು. ಯಾರು ? ಗಂಡಿನ ತಾಯಿ ತಂದೆ. ಅಂಗಂದಿದ್ದಕ್ಕೆ ಇವ್ರು ಏನಂದ್ರು ಬಾರಮ್ಮ ನಮ್ಮೂರ್ಗೋಗನಾಂತ ಕರುದ್ರು. ಇಲ್ಲಮ್ಮ ನಾ ಬರದಿಲ್ಲ. ನಮ್ಮನೇನೆ ಇದು. ನಿಮ್ಮನೆಗೆ ನಾನಿನ್ಯಾಕ್ ಬರಕೋಗನೆ, ಬರದಿಲ್ಲ ಅಂದ್ಳು. ಇವ್ರು ಎಷ್ಟೋ ಕರದ್ರು. ಕರದ್ರೂ ಈ ಎಣ್‌ಮಗ ವೋಗ್ನಿಲ್ಲ.

ಈ ವುಡ್ಗಂಗೆ ಏನ್ ಕರ್ತವ್ಯ ಆಗಬೇಕೋ ಅದ್ನೆಲ್ಲಾ ಮಾಡಿದ್ರು. ಮೂರ್ನಾಕ್‌ದಿವ್ಸ ಮಾಡ್ಬುಟ್ಟು ಮಣ್‌ಮಾಡಬೇಕಲ್ಲಾ ಅನ್ಬುಟ್ಟು, ಮಸಾಣದ ಕಡೆಗೆ ತಗಂಡೋದ್ರು.

ಆಯಪ್ಪ ನಮ್ಮ ಕರ್ತವ್ಯ ನಾವ್ ಮುಗಿಸ್ತೀವಿ, ಇನ್ ನೀನ್ ಏನ್ಗತಿನಾರ ಆಗಮ್ಮ ನಿಮ್ತಾಯಿ ಮನೆಗಾರ ವೋಗು, ಎಲ್ಲಾರ ವೋಗ್‌ಬುಡು ಅನ್‌ಬುಟ್ಟು, ವೋಯ್ತಾಯಿದ್ರು. ವೋಯ್ತಾ ಇರಬೇಕಾದ್ರೆ ಈ ಎಣ್‌ಮಗ ಏನ್ಮಾಡ್ಬುಡ್ತು, ಇಲ್ಲಾ ನಾನು ಬರ್ತೀನಿ ಹಿಂದ್‌ಗಡಲೆಯಾ ಅಂತ ಹೇಳುಬುಟ್ಟು, ಆ ಶವದ ಇಂದ್‌ಗಡಲೆಯ ವೋಯ್ತು. ವೋಗ್‌ಬೇಕಾದ್ರೆ ಮಸಣದಲ್ಲಿ ಹೆಣಕ್ಕೆ ಬೆಂಕಿ ಇಟ್‌ಬುಟ್ರು. ಈ ವುಡ್ಗಿ ಕರದ್ರು ನಾ ಬರಲ್ಲಾಂತು. ಬರಲ್ಲಾನ್ ಬೇಕಾದ್ರೆ ಇನ್ನೇನ್ ಮಾಡ್ತಾರೆ ? ಹೊಂಟ್‌ಬಂದ್‌ಬುಟ್ರು.

ಇದೇನ್ ಮಾಡ್ತು? ನಾನು ಒಬ್ತಂದೆಗೆ ಹುಟ್ಟಿ, ಒಬ್ತಾಯಿ ಎದೆ ಆಲ್ನೇ ಕುಡಿದಿದ್ರೆ, ನನ್ಗೆ ಇವತ್ತು ಎಲ್ಲೂ ಮಳೆ ಬಂದ್‌ಬುಟ್ ವೂದ್‌ಬುಡ್ಲಿ. ನನ್ ಮುತ್ತೈಸ್ತನದ್ ಭಾಗ್ಯ ಇರಬೇಕೂಂದ್ರೆ ಅಂದ್‌ಬುಟ್ಟು ಆಯಮ್ಮ ಕೂತ್ಕಂಬುಡ್ತು. ಬೇಕಾದಂಗೆ ಮಳೆ ಬಂದ್‌ಬುಡ್ತು. ಮಳೆಬಂದ್‌ಬುಟ್ಟು ಹಳ್ಳಕೊಳ್ಳ ಎಲ್ಲಾ ತುಂಬಿ ಹರ್ಕಂಡ್ ವೋಯ್ತಾಯಿದೆ. ಈವಳ್ಳದಲ್ಲಿ ಎಣಾನೂ ಕೊಚ್ಗವೊಂಟೋಯ್ತು. ಉರಿ ತಣ್‌ಗಾಗ್‌ಬುಟು. ಆಮೇಲೆ ಕೊಚ್ಗವೋಯ್ತಾಯಿದ್ದ ಎಣ ಹಿಡ್ಕಂಬುಟ್ಟು ತೊಡೆ ಮೇಲಾಕಂಡು ಶಿವಂಗೆ ಸೋಕ ಮಾಡ್ಕಂಡು ಕುತ್ಗಂಡವ್ಳಂತೆ.

ಕೂತ್ಕಬೇಕಾದ್ರೆ ಶಿವ-ಪಾರ್ವತಿ ಎಲ್ಲೋ ಬೇರೆ ದೇಶಕ್ಕೋಯ್ತಾ ಇರಬೇಕಾದ್ರೆ ಪಾರ್ವತಿಗೆ ಈ ಸಬ್ದ ಕೇಳಿಸ್ತು. ಏನೋ ನರಮನ್ಸನ್ ಸಬ್ದ ಆಗ್ತದೆ ಬಲ್ಲಿ ವೋಗ್‌ಬುಟ್‌ಬರಾನಾ ಅಂದ್ರು. ಏ ಬಾ ಗಾಳಿನೋ ಪೀಡೆನೋ ವೊತ್ತಲ್ದವೊತ್ತಲ್ಲಿ ಅರಚುವಾಗ ನಾವ್ಯಾವ್ದೂಂತ ವೋಗನ್ ಬಾ ಅಂತ ಅಯಪ್ಪ ಕೇಳಿದ್ರು. ಅದಕ್ಕೆ ಇವಳೇನಂದ್ಲು? ಇಲ್ಲಾ ಇಲ್ಲಿ ನಾವು ದೇಸಕ್ಕೆಲ್ಲಾ ದೇವರಾಗಿರುವಾಗ ನಾವ್ ಇವೊತ್ತಿನ್ ಪರಿಸ್ಥಿತಿಲಿ ವೋಗ್‌ಲಿಲ್ಲಾಂದ್ರೆ ನಮ್ಗೇನಿದು ? ನಾವ್ ವೋಗ್ಲೇ ಬೇಕು ಬಲ್ಲಿ ಅಂತೇಳಿ ಆಯಮ್ಮ ಕರ್ಕಬಂದ್ಲು. ಕರ್ಕಬಂದು ನಿಂತ್ಕಂಡ್ರು ಅಷ್ಟುದೂರ. ಈಯಮ್ಮ ಅಳಾದ್ ಕೇಳಿಸ್ಕಂಡ್ರು. ಅಜ್ಜಜ್ಜಿ ಮುದ್ಕರಾಗಿ ಯಾಸ ತಾಳ್ಕೊಂಡು ಅತ್ರಕ್ಬಂದು ಏನಮ್ಮ ಅಂತ ಕೇಳಿದ್ರು. ಇಂದೆ ನಡ್ಡಿತ್ತಲ್ಲಾ ಕಥೆ ಅದ್ನೆಲ್ಲಾ ಹೇಳಿದ್ಲು ಸಾಂಗವಾಗಿ, ಈತರ ಈತರ ಆಯ್ತೂಂತ. ಅವಾಗ ಅಯಪ್ಪನಿಗೆ ಶಿವ-ಪಾರ್ವತಿ ಜೀವಕಳೆ ಕೊಟ್‌ಬುಟ್ಟು ಮಾಯ್‌ವಾಗೇಬುಟ್ರು. ಇವ್ರು ಕಣ್ಣಾಗ್ ಬೆಳಕರೀತಂಕ ಅಲ್ಲೇ ಇದ್ರು.

ಈ ದೊರೆಗಳೇನ್ಮಾಡಿದ್ರು? ಮತ್ತೆ ನಾವ್ ಬೆಂಕಿ ಇಟ್‌ಬುಟ್‌ವೊಂಟ್ ಬಂದ್ರೊ. ಆ ಎಣ್‌ಮಗ ಅಲ್ಲೇ ಸೇರ್ಕತು. ಬೇಕಾದಂಗೆ ಮಳೆ ಉಯ್ತೊ. ಅದೇನ್ ಬೇಯ್ತೊ ಬೇಯ್ಲಿಲ್ಲೋ ? ವೋಗ್ ನೋಡ್ಕಬನ್ನಿ ವೋಗಿ ಅಂತ ಹೇಳ್‌ಬುಟ್ಟು ಆಳಗಳ್ ಕಳಿಸ್ಕೊಟ್ರು. ಆಳ್‌ಗಳ್ ಕಳಿಸ್ಕೊಟ್ಟಾಗ ಅಳ್ ಬತ್ತವ್ರೆ. ಇವ್ರೇನ್ ಸರ್ಪ ಪ್ರಕಾಸ ಉರ್ದಂಗೆ ಉರೀತಾವ್ರೆ. ಇಬ್ರಾಳುವೇ ಕೂತವ್ರೆ. ಆ ಹಳ್ಳದ ದಡಿನಲ್ಲಿ. ಬಂದ್‌ನೋಡಿದ್ರು. ನೋಡ್ಬುಟ್ಟು ರಾಜನತಾಕೆ ಬಂದ್‌ಬುಟ್ರು ತಿರ್ಗ ವಾಪಸ್. ಬಂದ್‌ಬುಟ್ಟು ರಾಜರೇ

ನಿಮ್ಮ ಸೊಸೆ ನಿಮ್ಮಗ ಚೆಂದಾಗವ್ರೆ. ಸತ್‌ಕುಮಾರನ ಆಯಮ್ಮ ಜೀವ ಮಾಡ್ಕಂಡವ್ಳೆ. ಬನ್ನಿ ರಾಜರೇ ಅಂತ ಕರದ್ರು. ಏ ವೋಗೊ ಸುಳ್ ಏಳ್‌ತೀಯಾ ನೀನು. ಸತ್‌ವೋಗಿದ್ ಮಗನ ಬೆಂಕಿ ಇಟ್‌ಬುಟ್ಟು ಬಂದಿದೀವಿ ನಾವು. ಜೀವಾಗವ್ನೇಂತ ಹೇಳ್ತ ಇದ್ದೀಯ ಅಂತ ಅಂದ್ರು. ಅಂಗೂ ಅವರ್ ಮಾತ ಇದ್‌ಮಾಡುಬುಟ್ಟು ಬಂದ್ರು ಅಲ್ಗೆ. ಬಂದ್ ನೋಡಿದ್ರಲ್ಲಿ ಇವ್ರು ಜೀವಕಳೆವಾಗಿದ್ರು. ಅವಾಗ್ ಬಂದು ಕಳಸ ತಗಂಬಂದಿ ಅವರ್ನ ತಿರ್ಗ ಕರ್ಕಂಡೋಗಿ ಬೇಕಾದಂಗೆ ಮುತ್ತಿನ್ ಚಪ್ರ ರತ್ನದ್ ಚಪ್ರ ಆಕಿ, ತಿರ್ಗ ಲಗ್ನ ಮಾಡಿ, ಅವ್ರು ಮನೆವಳ್ಗೆ ಚೆಂದಾಗಿ ಬಾಳಿಸ್ಕಂಡು ಮಡೀಕಂಡ್ರು.

ಹೇಳಿದವರು : **ಸಾಕಮ್ಮ,** ಬೆಟ್ಟದ ಬ್ಯಾಲದಕೆರೆ.

## ೨೬. ಈ ಹೆಣ್ಣು ಯಾರಿಗಾಗಬೇಕು ?

ಒಬ್ಬ ಬ್ರಾಹ್ಮಣನಿಗೆ ಒಂದೇ ಒಂದು ಹೆಣ್ಣು. ಒಂದೇ ಹೆಣ್ಣದ್ರೆ ಏಕಕಾಲದಲ್ಲಿ ಮೂರಜನ ಹೋದ್ರಂತೆ ಆ ಹೆಣ್ಣು ಕೇಳೋದಿಕ್ಕೆ. ಹೋದಕಾಲದಲ್ಲಿ ಬ್ರಾಹ್ಮಣ "ಅಪ್ಪಾ ಬಲ್ಲಿ ಇಲ್ಲಿ; ನೀವ್ ಬಂದಿರತಕ್ಕಂತವರಲ್ಲಿ ಒಬ್ರು ಬಿಟ್ಟು ಒಬ್ರಿಗೆ ಕೊಟ್ರೆ ಹೊಟ್ಟೆಉರಿಬರುತ್ತೆ. ನೀವ್ ಮೂರ ಜನ ಮೂರುದಿಕ್ಕಿಗೆ ಹೋಗಿ ಭಾರೀ ವಿದ್ಯಗಳನ್ನು ಕಲ್ತಗಂದು ಬನ್ನೀಂತ ಕಳಿಸ್ದ. ಮೂರು ಜನವೂ ಹೊರಟೋದ್ರು.

ಒಬ್ಬ್ ಹೋದ. ಹೋಗ್ತಾ ಇರತಕ್ಕಂತ ಕಾಲದಲ್ಲಿ ಅವನಿಗೆ ಬಾಳ ಹಸಿವಾಗಿಬಿಡ್ತು. ಒಂದು ಊರ್ತಾಕೋಗಿ 'ಭಿಕ್ಷಾಂದೇಹಿ' ಅಂತ ಊಟುಕೋಸ್ಕರವಾಗಿ ಕೇಳ್ದ. ಆಗಲಪ್ಪ ಹೋಗಿ ಸ್ನಾನ ಮಾಡ್ಕೆಂಬಾ ಅಂತ ಮುದುಕಿ ಹೇಳಿದ್ಲು. ಹೋದ. ಸ್ನಾನ ಮಾಡ್ಕೊಂಡು ಬಂದ. ಬರೋದ್ರೊಳಗಾಗಿ ಮಗ ಅಳತಾಯಿದ್ದ. ಅಳ್ತಾಯಿದ್ದೀಯಲ್ಲಾಂತೇಳಿ ಮಗೀನ ಕೆನ್ನಿಗೆ ಹೊಡ್ದ್‌ಬಿಟ್ಟ. ಕೆನ್ನೆಗೆ ಹೊಡ್ದ ತಕ್ಷಣ ಪ್ರಾಣಬಿಟ್‌ಬಿಟ್ಟ. ಅಮ್ಮಾ ನಾನು ಶಿಶುಹತ್ಯೆ ಮಾಡಿದವರ ಮನೆಯಲ್ಲಿ ಊಟಮಾಡುವುದಿಲ್ಲ ಅಂದ. ಆಗ ಆ ಮುದುಕಿ ತನ್ನ ಮಂತ್ರ ಶಕ್ತಿಯಿಂದ ತನ್ನ ಮಗನನ್ನು ಪಡದ್ಲಂತೆ. ಹಾಗೆ ಪಡೆದಾಗ ಇವ್ನು "ಆ ಮಂತ್ರ ಶಕ್ತಿ ಕಲಿಸಿಕೊಟ್ರೆ ಮಾತ್ರ ನಾ ಊಟಮಾಡ್ತೇನಿ, ಇಲ್ದಿದ್ರೆ ಊಟ ಮಾಡದಿಲ್ಲ" ಅಂದ್ನಂತೆ. ಇದು ಒಳ್ಳೆ ಗ್ರಾಚಾರಕೆ ಬಂತಲ್ಲ? ಊಟುಕ್ಕೆ ಈತನಿಗೆ ಹೇಳಿ ಹಿಂಗಾತಲ ಅಂತೇಳಿ ಆ ಮಂತ್ರಶಕ್ತಿಯನ್ನು ಕಲಿಸಿಕೊಟ್ಲು.

ಕಲ್ಸಿ ಕೊಡೋದ್ರೊಳಗಾಗಿ ಈ ಕಡೆ ಬ್ರಾಹ್ಮಣನ ಮಗಳಿದ್ಲಲ್ಲ? ಇವಳು ಆ ಮನ್ಮಥನ ಬಾಧೆಯನ್ನು ತಡೆಯಲಾರದೆ ಸತ್ತೋದ್ಲು. ತಗಂಡೋದ್ರು. ಒಂತಾವ ಕುರಲಿ

ಮಾಡಿಬಿಟ್ರು. ಒಬ್ಬ ಬಂದ್ನಂತೆ. ''ಎಲ್ಲಪ್ಪ ನಿನ್ನ ಮಗಳು'' ? ''ಸತ್ತೋದ್ಲು.'' ಎಲ್ಲಿ ಅಲ್ಲಿ ಅಂದ. ಅಲ್ಲಿ ಗುಡ್ಲಾಕಂಡ್ ಕೂತ್ಕಂಡ. ಇನ್ನೊಬ್ಬ ಬಂದ. ಎಲ್ಲಪ್ಪ ನಿನ್ ಮಗಳು ? 'ಸತ್ತೋದ್ಲು.'' ''ಯಾ ಸ್ಥಳದಲ್ಲಿ?.'' ''ಇಂತಾ ಸ್ಥಳದಲ್ಲಿ. ಅವ್ನು ಬೂದಿ ತಕಂಡೋದ''. ಹೊಳಿಯಾಗೆ ಬಿಟ್‌ಬಿಟ್ ಬಂದ.

ಇವ್ನು ಬಂದ ಕಡಿಯೋನು. ''ಎಲ್ಲಪ್ಪ ನಿನ್ ಮಗಳು'' ಅಂತ ಕೇಳಿದ. ''ಸತ್ತೋದ್ಲು'' ಅಂದ. ''ಎಲ್ಲಿ ? '' ಇಂಥಾ ಸ್ಥಳದಲ್ಲಿ. ಇವ್ನು ಹೋದ. ಆ ಬೂದಿನೆಲ್ಲ ಗುಡ್ಡೆಮಾಡ್ದ. ಆ ಹೆಣ್ಣನ್ನ ಪಡ್ದ. ಆಗ ಮೂರುಜನದೊಳಗೆ ಆ ಹೆಣ್ಣು ಯಾರಿಗಾಗಬೇಕು?.

ಅದರರ್ಥಾಂದ್ರೆ. ಇವಳನ್ನು ಪಡೆದಿರತಕ್ಕಂತವನು ತಂದೆಯಾದ. ಬೂದಿಬಿಟ್ಟು ಬಂದವನು ಕರ್ಮಾಂತರ ಕಳೆಯಲು ಅಣ್ಣನಾದ. ಗುಡ್ಡಾಕ್ಕೆಂದ್ ಕೂತಿದ್ದೋನು ಗಂಡನಾದ.

ಹೇಳಿದವರು : **ತಿರುಮಲಯ್ಯ,** 55 ವರ್ಷ, ಒಕ್ಕಲಿಗ, ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು, ಮಂಡ್ಯಜಿಲ್ಲೆ.

# ೨೭. ಮಗನನ್ನು ಕೊಂದವಳು

ಒಂದೂರಲ್ಲಿ ಒಬ್ ದೊರೆಯಂತೆ. ಆ ದೊರೆಗೆ ಮಕ್ಳಿಲ್ಲ. ಮಕ್ಕಳಿಲ್ಲದಿದ್ರೆ, ಇವ್ರೇನು ಮಾಡಿದ್ರು? ಎಲ್ಲಾ ದೇವ್ರನೂ ಮಾಡಿದ್ರು. ಎಲ್ಲಾ ದೇವ್ರು ಕಡೇ ಹೋದ್ರು. ಮಕ್ಳೇ ಆಗ್ಲಿಲ್ಲ. ಈಯಮ್ಮ ಅವತ್ತಿನ ದಿನ ಎಲ್ಲಾ ದೇವ್ರು ಮಾಡ್ದೆ, ನಮ್ ಕುಲಪಂಕ್ತಿ ದೇವ್ರು ಭೂಮಿತಾಯಿಗೆ ಮಾಡ್ಲಿಲ್ವಲ್ಲ ಅಂತ ಹೇಳ್‌ಬಿಟ್ಟು, ಕುಲಪಂಕ್ತಿ ದೇವ್ರಿಗೆ ನಾವು ಮಾಡ್ಲೇಬೇಕು, ಅಲ್ವೇನ್ರಿ ? ಆ ದೇವ್ರು ಮಾಡೊಕೆ ಹೂವು ಕಾಯಿ, ಗಂಧದ ಕಡ್ಡಿ ತಂದುಬಿಟ್ಟು ಪೂಜೆ ಸಾಮಾನೆಲ್ಲ ರೆಡಿಮಾಡಿಕೊಡಿ ಅಂತ ಅಂದ್ಲು.

ಆ ರಾಜ ವೋದ; ಎಲ್ಲಾ ಸಾಮಾನೂನು ತಂದ್‌ಕೊಟ್ಟ. ಆಯಮ್ಮ ಮನೆ ಕೆಲ್ಸ ಎಲ್ಲಾ ಅಚ್ಚುಕಟ್ಟಾಗಿ ಮಾಡಿ ಸ್ನಾನ ಮಾಡ್‌ಕೊಂಡ್ಲು. ಪೂಜೆಗೆ ಸಾಮಾನು ತಕ್ಕೊಂಡಿದ್ದೆ, ಹುತ್ತದ್ ತವ ವೋದ್ಲು. ಹುತ್ತದ್‌ತವ; ಹುತ್ತದ ಪೂಜೆ ಮಾಡಿ ಪುತ್ರನ್ನ ಪಡೆದ್ಲು. ಹುತ್ತದ್ ಪೂಜೆ ಮಾಡಿದ್ಲು, ಪುತ್ರನ್ನ ಪಡಿದ್ಲು. ಅಯಮ್ಮಂಗೆ ಮಕ್ಕಳೇ ಇರಲಿಲ್ಲವಲ್ಲ ? ಎಲ್ಲಾ ದೇವ್ರಿಗೂ

ಮಾಡಿದ್ರೂ, ಮಕ್ಕಳೇ ಇರಲಿಲ್ಲ. ಈಗ ಕುಲಭಕ್ತಿಗೆ ದೇವತೆ ನಮ್ ಭೂಮಿ ತಾಯಿ ಅಲ್ವ ಅಂದ್‌ಬಿಟ್ಟು ಆಗ ಅಯಮ್ಮ ತಿಳಕೊಂಡ್‌ವೋಗಿ ಹುತದ್ ಪೂಜೆ ಮಾಡಿದ್ಲು, ಪುತ್ರನ್ನ ಪಡೆದ್ಲು.

ಆ ಪುತ್ರಂಗೆ ಅಷ್ಟಾಗಿ ಇಷ್ಟಾಗಿ ಹನ್ನೆರಡು ವರ್ಷದ ಮಗ ಅತು. ಹನ್ನೆರಡು ವರ್ಷದ ಮಗ ಆದಂಗೆ ಇವರಪ್ಪ ದಂಡಿಗೆ ಹೋದ್ರು. ಹೆಂಡ್ತಿ ಅತ್ರ ಏನ್ ಹೇಳ್ದ "ಮನೆ ತವ ಭದ್ರ, ಜೋಕೆ. ನಿನ್ ಮನೆತನ ಭದ್ರವಾಗಿರಬೇಕು. ನಾನ್ ದಂಡಿಗೆ ಹೋಗ್ ಬತ್ತೀನಿ ಅಂತ; ಹೆಂಡ್ತಿ ಕೈಯಲ್ಲಿ ಹೇಳಿದ.

"ದೊರೆ ದೊರೆ ಇನ್ನೊಂದು ಮಾತು ನೀವು ಹೋಗೊವ್ರು ಹೋಗ್ತೀರ. ನನ್ ಮಗೀಗೆ ಏನ್ ತರ್ತೀರಾ ? ಮತ್ತೀಗ ನನ್ಗೆ ಏನ್ ತರ್ತೀರಾ ? ನಮಗೆಂತ ತರ್ತಿರಾ ? "ಅಂತ ಕೇಳಿದಳು. ಮಗೀಗೆ ಕಾಲಿನ ಗೆಜ್ಜೆ, ನಡೀಗ್ ದಾರ, ತಲೆಗೆ ಟೋಪಿ ನಿನ್ನ ಮಗಂಗೆ ತರ್ತೀನಿ ಅಂದ. ನೀನು ಮನೇತವ ಬಿಟ್ ಜೋಕೆ ಕಣೆ ಅಂತ ಹೇಳ್‌ಬಿಟ್ಟು ವೊಂಟ್ಹೊಗ್ಬಿಟ್ಟ ದೊರೆ. ಅವಾಗ ವೊಂಟ್ಹೋಯ್ತಾಲೂವೆ, ದೊರೆ ವೋಗಿ ದೊರೆ ಪ್ಯಾಟೇಲಿ ಅವ್ನೆ. ಪ್ಯಾಟೇಲಿ ಇದ್ದ ಈಯಪ್ಪ, ಅದು ಇದು ವ್ಯಾಪಾರ ಮಾಡ್ಕೊಂಡು ಇದ್ದ.

ಆಯಮ್ಮ ಏನ್ ಮಾಡ್ಬಿಟ್ಲು? ನಮ್ ಯಜಮಾನ್ರು ಇವತ್ತು ದಂಡಿಗೆ ಹೋಗ್‌ಬಿಟ್ಟವ್ರೇ ಅಂತ, ಹೇಳ್‌ಬಿಟ್ ಚಿನ್ನದ ಚಿವುಡು ಇಟ್ಕೊಂಡ್ಲು. ಚಿವುಡು ಅಂದ್ರೆ ಸಿಂಬೆ; ಚಿನ್ನದ ಚಿವುಡು ಇಟ್ಕೊಂಡು, ರನ್ನದ ಕೊಡ ಕೈಯಲ್ಲಿ ಇಟ್ಕೊಂಡ್, ಸೇದ ಬಾವೀಗೆ ನೀರಿಗೋದ್ಲು. ಅಲ್ಲಿ ಯಾರೋ ನಿಮ್ಮ ತರ ಒಬ್ರು ಇದ್ದರು.

ಅವ್ರು ಘಸ್ಟಿಂದ್ಲೂ ನೋಡ್‌ಕೊಂಡೇ ಇದ್ಲು ಅಯಪ್ಪನ್ನಾ. ಅವ್ನು ಮಗೀಗೆ ಕಂಡು ಬಂದಿರ್ಲಿಲ್ಲ. ಇವಳು ಘಸ್ಟಿಂದ ಗಂಡ ದಂಡಿಗ್ಹೋಗಕೆ ಮುಂಚಿಂದ ನೋಡಿಕೊಂಡಿದ್ಲು.

ಆ ದಂಡಿಗ್ಹೋಗೂತ್ಲೂವೆ ಈ ಮಗನ್ನಾ ಆಡಾಕೆ ಕಳಿಸಿದ್ಲು. ಅವಳು ಸೇದ ಬಾವೀಗೆ ನೀರ್‌ಗ್ಹೋದ್ಲು. ಅವನು ಆಡಾಕೆ ವೋದ. ಅವನ ಆಟ ಅವ್ನದಾಯ್ತು. ಇವ್ರು ಆಟ ಇವಳದ್ದು. ಇವಳು ನೀರಿಗ್ಹೋಯ್ತುಲೂವೇ ನೀರ್ ಸೇದಿದ್ಲು. ನೀರ್ ಸೇದಿ, ಅಲ್ಲಿ ಮಡಗ್‌ಬಿಟ್ಟು 'ಅಪ್ಪ ಈವತ್ತು ನಮ್ಮೆಜಮಾನ್ರು ಮನೇಲಿ ಇಲ್ಲ. ದಂಡಿಗೆ ವೋಗಬಿಟ್ಟವ್ರೇ. ನೀನ್ ಮನೆಗೆ ಬರ್ಲೇಬೇಕು, ಅಂದಳು. ಆಯ್ತು ಬತ್ತೀನಿ ಅಂತ ಹೇಳ್‌ಬಿಟ್ಟು ನಿಮ್ಮಂತವನು ಆಯಪ್ಪ ಬರ್ತೀನಿ ಅಂತ ವೋದ. ಮಗ ಏತಲ್ಲೇ ಅಂದ್ರೆ, ಮಗ ಇದ್ರೆ ಇದ್ದ, ಮಗ ಏನ್ ಮಾಡ್ತದೆ ನಿಮ್ಮನ್ನು, ಬರ್ರೀ ಅಂತಲೂ ಕರ್ಕೊಂಡ ಹೋದ್ಲು.

ಕೊಡ ಇಳಿಸಿದ್ಲು. ಈ ಮಗೀಗೆ ಕಡ್ಲೆ ಪುರಿ ಎಲ್ಲಾ ತಂದ್ಲು. ಮಗೀನ್ ಜೋಬಿಗೆ ತುಂಬಿದ್ಲು, ಆಡಾಕ್ ಕಳಿಸಿದ್ಲು. ಆಡಕ್ ಕಳಿಸತ್ಲೂವೇ ಇವ್ರು ಒಳಗವ್ರೆ. ಬಂದ ಒಳೀಕೆ. ಮಂಚದ ಮ್ಯಾಲೇ ಮಲಿಕ್ಕೊಂಡ. ಈ ಮೊಗ ಅಲ್ಲಿ ಇಲ್ಲಿ ಆಡ್ಕೊಂಡು ಕಡ್ಲೆಪುರಿ ತಿಂದ್‌ಕೊಂಡ. ಬಾಯಾರಿಕೆ ಬಂತು. ಬಾಯಾರಿಕೆ ಬಂತು, ಬಾಗ್ಲಲ್ಲಿ ಬಂದು ಅಮ್ಮ ಅಮ್ಮ ಸ್ವಲ್ಪ ನೀರ್ ಕೊಡಮ್ಮ ಅಂತ ಮಗ ಕೇಳಿತು. ನೀರ್ ಕೊಡು ಅಂತ ಮಗ ಕೇಳಿದಾಗ 'ಏಯ್ ನೀರ್ ಇಲ್ಲ ಕಣೋ ನೀರು ತರಬೇಕು'' ಅಂತ ಅಂದ್ಲು. ಅಮ್ಮ ಒಳಗಿರೋ ನೀರೆ ಕೊಡಮ್ಮ. ಬಾರಿ ಬಾಯಾರಿಕೆ ನಂಗೆ ಅಂತು. ಆಯ್ತು ಒಳಗಿರೋ ನೀರೇ ಕೊಡ್ತೀನಿ. ನೀನೆ ಇಲ್ಲಿ ಇರು ಅಂತ ಅವಳು ಹೋದ್ಲು. ಇವ್ನು ದೃಷ್ಟಿ ಕೊಟ್ಟು ಅವರಪ್ಪನ ಮಂಚದ ಮ್ಯಾಲೆ ಮಲಗಿರದ್ನ ನೋಡಿ ಅವ್ನು ನೀರ್ ಕುಡಿದಾದ್ ಮ್ಯಾಲೇ ''ಅಮ್ಮ ನಮ್ಮಪ್ಪ ನೋಡಿದ್ರೆ ದಂಡಿಗೆ ಹೋಗವ್ನೇ ಇವನ್ಯಾರು ? ಅಂತ ಕೇಳ್ತು. ಇವನ್ಯಾರಮ್ಮ ಇವ್ನು ಅಂತ ಕೇಳಿದಾಗ ನಿನಗೆ ಚಿಕ್ಕಪ್ಪ ಅಲ್ಲವೇನೋ ಅಂದ್ಲು. ಕೇಳಿದಾಗ ಈ ಮಗ, ನನ್ಗೆ ಚಿಕ್ಕಪ್ಪಾದ್ರೇ ಚಿಕ್ಕಂದಿಂದ ಏಕೆ ನನ್ನ ಎತ್ಕೊಂಬಾರದು ? ಈವಾಗ ಇವ್ನು ಚಿಕ್ಕಪ್ಪ ಅಂತ ನಂಗ್ ಹೇಳ್ತಿಯಲ್ಲ ? ನಾನ್ ಚಿಕ್ಕಂದಿಂದ ಸಾಕಿ ಸಲುಹಿ ಎತ್ತಿ ಇಳಿಸ್ದೇ ಪರಿಚಯ ಮಾಡ್ಕೊಂಡ್ರೆ ಇವತ್ತು ನಮ್ಮಪ್ಪ ಅತ್ತ ಹೋಯ್ತುಲೂವೇ ಇವ್ರು ಬಂದ್ ಮಲಗವ್ನೇ. ಯಾರು ? ಯಾರಪ್ಪ ? ಅಂದ. ಯಾರಾದ್ರೇ ನಿಂಗೇನ್ಲಾ? ಹೋಗ್ಲಾ ಆಡಾಕೇ ಅಂದ್ಲು. ಅಹಹಾ ಇರಲೀ ಇದಕೆ ಒಂದ್ ಐಡಿಯಾ ಮಾಡ್ಲೇಬೇಕು ಅಂತ ಹೇಳ್‌ಬಿಟ್ ಅವಳು ಒಳೀಕ್ ವೊಂಟೋದ್ಲು.

ಈ ಮಗ ಆಡಕ್ಕೆ ವೋಯ್ತು. ಅಪ್ಪಾ ಊರೆಲ್ಲ ಸೌದೆಗೆ ವೋಗ್ತಾರೆ. ನೀನು ಹೋಗ್ಬಿಟ್ ಬಾರಪ್ಪ ಸೌದೆಗೆ ಅಂತ ಅಂದ್ಲು. ಸೌದಿಗೆ ವೋಗ್ಲಿಲ್ಲ ಆ ವುಡ್ಗ. ಆಡಕ್ಕೆ ವೊಂಟೋಗ್‌ಬಿಟ್ಟ. ಇವರ್ ದಾರಿ ಇವ್ರೀಗೆ ಆಗ್ಹೋಯ್ತು. ಅವತ್ತು ರಾತ್ರಿ ಮಲಿಕೊಂಡಿದ್ದಾಗ ಮಂಚದ ಮ್ಯಾಲೇ, 'ಅಂಗೇ ಅವ್ರ ತಂದೆ ತಾಯಿ ಮಗ ಯಾತರ ಮಲಿಕ್ಕೋತರೆ ಆ ತರ ಮಲಿಕ್ಕೊಂಬಿಟ್ರು'.

ಹನ್ನೆರಡು ವರ್ಷದ ಮಗೀಗೆ ತಂದೆ ತಾಯಿ ಈ ತರ ಇದಾರೆ ಅನ್ನೋದು ಮಗೀಗೆ ಗೊತ್ತಾಗಲ್ವ? ಮಗೀನ್ ಕೇಳಿದ್ರೆ ಗೊತ್ತಾತದೇ ಅಂದುಕೊಂಡಳು. ಆಮ್ಯಾಲೆ ಬೆಳಿಗ್ಗೆ ಏನ್ ಮಾಡಿದ್ಲು ? ಓಹೋಹೋ ನಮ್ ಯಜಮಾನ್ರು ಬಂದ್ರೆ ದಂಡಿನಿಂದ ಈ ಮಗ, ಯಾವನೋ ಕರ್ಕೊಂಬಂದು ಮನೇಗ್ ಇಟ್‌ಕೊಂಡವ್ಳೇ ಅಂತ ನಮ್ ಯಜಮಾನ್ರು ಕೂಟ ಏಳ್‌ಬಿಟ್ರೇ ನನ್ಗೆ ಬೇಕಾದ ಶಿಕ್ಷೇನ ಕೊಟ್‌ಬಿಡ್ತಾನೆ ಅನ್ನಿಸಿತು. ಹಿಂಗಾಗುದು ಬ್ಯಾಡ. ಇವ್ನಿಗೊಂದ್ ಸ್ಥಿತಿ ಮಾಡ್ಲೇಬೇಕು. ಇರ್ಲಿ ಅಂತ ಹೇಳ್ಬಿಟ್ಟು ಕರೆದ್ಲು. ಆಡಾಗ್ಹೋಗಿದ್ ಮಗನ್ನಾ ಕರೆದ್ಲು. ಒಳೀಕ್ ಕರ್ದು ಆ ಮಗೀಗೇ ಕಾಲು ಕೈ ಕೊಯ್ದು ಪೀಸ್‌ಪೀಸ್ ಮಾಡಿ ಚಾಪೆ ಒಳಿಕ್ ಸುತ್ತಿ ಅಟ್ಟದ ಮ್ಯಾಕ್ ಕಟ್‌ಬಿಟ್ಲು.

ಮಗಾ ದಂಡಿನಲ್ಲಿ ಇರೋ ದೊರೆಗೆ ಸ್ವಪ್ನಕ್ಕೊಂಟೋದ. ಯಾರಿಗೆ ? ದಂಡಿನ ದೊರೆಗೆ. ಸ್ವಪ್ನಕ್ಕೆ ಓದ. ಇವ್ನು ಚಾಪೇಲಿ ಸುತ್ತಿ ಮೇಲೆ ಕಟ್ಟಿದ್ರಲ್ಲ ? ಆ ತಕ್ಷಣವೇ ಸ್ವಪ್ನಕ್ಕೆ ವೊಂಟೋಗ್ಬಿಟ್ಟ.

''ನೋಡಪ್ಪ ಯಾವನೋ ನೀನ್ ದಂಡಿಗೇ ಬಂದ ಮ್ಯಾಲೆ ಯಾವೋನೋ ಬಂದು ಮನೇಲಿ ಮಲ್ಗಿಸಿಕೊಂಡವ್ಳೇ ನನ್ ತಾಯಿ. ಅವನ್ಯಾರಮ್ಮ ? ಅಂತ ಕೇಳಿದ್ರೆ ನಿಮ್ ಚಿಕ್ಕಪ್ಪ ಅಂತ ಹೇಳ್ತಾಳೆ. ಸರಿ ಅವತ್ನಿಂದ ಹೆತ್ತಿರ್ಲಿಲ್ಲ, ಸಾಕಿರ್ಲಿಲ್ಲ, ಮಾತನ್ನಾಡಿಸಿರಲಿಲ್ಲ. ಇವತ್ತು ದಿನ ನನ್ ಕಣ್ ಮುಂದಾಗಡೆ ನಿಮ್ ಚಿಕ್ಕಪ್ಪ ಅಂತ ಹೇಳ್ತಾಳಲ್ಲ ? ನೀನು ದಂಡಿಗೋದ ಮ್ಯಾಲೇ ಬಂದವ್ನಲ್ಲ ? ನೀನ್ ಇದ್ದಾಗಿನ್ನು ನಮ್ ಚಿಕ್ಕಪ್ಪ ಮನೆಗ್ಯಾಕೆ ಬರಬಾರ್ದಿತ್ತು ? ಅಂತ ನಾನ್ ಕೇಳಾಕೆ ಈ ರೀತಿ ನನ್ನ ಕಡಿದು ಕತ್ತರಿಸಿ, ಪೀಸ್ ಮಾಡಿ, ಚಾಪೇಲಿ ಸುತ್ತಿ ಮ್ಯಾಲಕ್ಕೆ ಕಟ್ಟಿಬಿಟ್ಟವ್ಳೇ ನನ್ನ'' ಅಂತು ಮಗ.

''ನೀನು ಹತ್ತು ದಿನಕ್ಕೆ ಬರೋದು ಒಂದೇ ದಿನಕ್ಕೆ ಬರ್ಬೇಕೂ'' ಅಂತ ಅಲ್ಲಿ ಸ್ವಪ್ನದಲ್ಲಿವೋಗಿ ಹೇಳಿದ. ಆಮ್ಯಾಲೆ ಅವನಿಗೆ ಇನ್ನೊಂದು ಕೆನ್ನೆಗೆ ಬಡಿದ್ಹಂಗಾತಲ್ಲ ? ಏನ್ ಈ ತರ ಸ್ವಪ್ನದಲ್ಲಿ ಬಿದ್ದದಲ್ಲ ? ಏನ್ ಈತರ ಅಂತ ಹೇಳ್ಬಿಟ್ಟು ಹತ್ತು ದಿವ್ಸ ಬರೋ ದಾರಿ ಒಂದೇ ದಿವ್ಸ ಬಂದ. ದಂಡಿನಿಂದ ಒಂದ್ ದಿವ್ಸಕ್ ಬಂದು ಓಡಿ ಬಂದು, ಯಾರೇ ? ಒಳಗಿರೋದು ರಾಣಿ ? ಎಲ್ಲೇ ನನ್ ಮಗ ಅಂದ. ನನ್ ಮಗ ಎಲ್ಲಿ ಅಂತ್ಲೂನೆ, ರೀ ಬನ್ರೀ ಸ್ನಾನ ಮಾಡ್ರೀ ಊಟ ಮಾಡ್ರೀ ಅಂದಳು.

ಅಪ್ಪನಿಗೆ ಅಲ್ಲಿ ಹೇಳಿತ್ತಲ್ಲ ಸ್ವಪ್ನದಾಗೇ? ''ಅಪ್ಪ ಆ ಮುಂಡೇ ನನ್ ಕೊಂದಿರೋಳು. ನಿನ್ನು ಕೊಲ್ತಾಳೆ. ಹುಷಾರಾಗಿರು, ಊಟ ಮಾಡ್ಬೇಡ, ಊಟಕ್ ವಿಷ ಹಾಕ್‌ಬಿಡ್ತಾಳೆ. ಅವರಿಬ್ರೂ ಒಂದಾಗಿ ನಿನ್ನ ಕೊಂದ್‌ಬಿಡಲಾಗಿ, ನೀನು ಎಚ್ಚರಿಕೆಯಿಂದ ಇದ್ಬಿಡಪ್ಪ'' ಅಂತ ಹೇಳ್‌ಬಿಟ್ಟ ಆ ಮಗ. ಅದೇ ತರ ಸ್ವಪ್ನದಲ್ಲಿ ಹೇಳ್‌ಬಿಟ್ಟ, ಆ ಮಗ. ಮಗನೇ ಹೇಳ್ಬಿಟ್ಟ ಊಟ ಮಾಡಕೇ ಹೋಗಬೇಡ. ಊಟ ಮಾಡಿದ್ರೆ, ನಿನ್ನ ಸಾಯಿಸ್ತಾಳೆ. ವಿಷ ಹಾಕವ್ಳೇ. ಬೇಡ ಬೇಡ ಅಂತ ಮಗ ಸ್ವಪ್ನದಲ್ಲಿ ಹೇಳಿದ.

ಇವ್ನೇನ್ ಮಾಡ್ದ ? ಒಂದೇ ದಿನ ಮನೇಗ್ ಬಂದ. ಮನೇಗೆ ಬಂದ್ಬಿಟ್ಟು 'ಯಾರೇ ಅವಳು ಒಳಗಿರೋ ರಾಣಿ ? ಎಲ್ಲೇ ನನ್ನ ಮಗ? ಎಲ್ಲೇ ನನ್ ಮಗ, ಅಂತ್ಲೂವೇ ರೀ ಬನ್ರೀ ಸ್ನಾನ ಮಾಡ್ರೀ ಊಟ ಮಾಡ್ರೀ ಅಂತ ಕರದ್ಲು. ಆಯ್ತು ಸ್ನಾನಮಾಡ್ತೀನಿ, ಊಟ ಮಾಡ್ತೀನಿ. ನನ್ ಮಗ ಬರೋವರ್ಗೂವೇ ನಾನು ಊಟನಾ ಮಾಡೋಲ್ಲ ಸ್ನಾನ ಮಾಡೋಲ್ಲ, ಏನೂ ಮಾಡಲ್ಲ. ನನ್ ಮಗ ಬಂದೇ ನಾನ್ ಕೂತ್ಕೋಬೇಕು, ಊಟ ಮಾಡ್ಬೇಕು. ಅದುವರ್ಗೂ ನಾನ್ ಇಂಗ್ ಇರಬೇಕು ಅಂತ ಶಪಥ ಮಾಡ್ದ ರಾಜ.

ಅವ್ನ ಸೌದೆಗೆ ಅಟ್ಟಬಿಟ್ಟ. ಸೌದೆಗ್ಹೋಗೌನ್ರೀ ಓಡೋಗ್ಬಿಟ್ಟ. ಸೌದೆ ಕಡೀತಿದ್ರಲ್ಲ ಹುಡುಗರು ? ನಾನು ಇಂಗೆ ಜೊತೆಗ್ಹೋಗಿದ್ರಲ್ಲ ಅಲ್ಲಿಗ್ಹೋಗ್ಬಿಟ್ಟ. ಅವರ ತಂದೆ ಅಲ್ಲಿಗ್ಹೋಗ್ಬಿಟ್ಟ. ಏನಪ್ಪ ಮರೀ ಪಾಪು ನನ್ಮಗ ಬಂದ್ನ ? ಏನ್ ದೊರೆ ನಿನ್ನ ಮಗನ್ನ ನಾವ್ ಕಣ್ಣಲ್ಲೇ ಕಾಣೇ. ಇವತ್ತು ನಿಮ್ಮ ಮಗ ಹೊತ್ತಾರಿಂದ ಕಣ್ಣಲೇ ಕಾಣೋ ಅಂದರು. ಇಲ್ಲ ಕಣ್ರೀ ಅಂತ ಅಂದ್ರು. ಅಲ್ಲಿಂದ ಓಡಿ ಬಂದ. ಎಲ್ಲೇ ನನ್ಮಗ ? ಅಂದ. ಏನ್ರೀ ಮತ್ತೇ ಸಗಣೀ ಹೊರೋರ ಕೂಡ ಸಗಣಿಗೋದ ಕಣ್ರೀ ಅಂತ ಅಂದಳು. ಸಗಣಿ ಹೊರೋರ ತಾಕೂ ಓಡೋಗ್ಬಿಟ್ಟ ಈ ದೊರೆ. 'ಅಪ್ಪ ಮರಿ ನನ್ಮಗ ಬಂದಾನ' ಅಂತ ಕೇಳಿಬಿಟ್ಟ. ಏನ್ ದೊರೆ ನೀವ್ ಆಡೋ ಮಾತು? ನಿಮ್ಮ ಮಗ ಬಂದಾನ ಅಂತ ಬಂದಿದ್ದಿರಲ್ಲ ? ನಿಮ್ಗೊತ್ತಿಲ್ವ ? ಅಂದ್ರು.

ಏನಪ್ಪ ಎಲ್ಲಿದಾನಪ್ಪ ನನ್ಮಗ? ತೋರ್ಸಿ ತೋರ್ಸಿ. ಇವ್ರು ಬಾರಿ ಪ್ರೀತಿಯಿಂದ, ಮಕ್ಳು ಇಲ್ಲದವ್ನು, ಎಷ್ಟೋ ವರ್ಷದ ಮ್ಯಾಲೇ ಹುತ್ತದ ಪೂಜೆ ಮಾಡಿ ಪುತ್ರನ್ನ ಪಡಕ್ಕೊಂಡಿದ್ದ. ಅದಕ್ಕೆ ಇವರ್ನ ಎಲ್ಲಪ್ಪ ಎಲ್ಲಪ್ಪ ಅಂತ ಕೇಳಾಕೆ ಶುರು ಮಾಡ್ಬಿಟ್ಟ ದೊರೆ.

ಇಲ್ಲಾರೀ ನಿಮ್ ಮಗನ್ನ ನಾವ್ ಹೊತ್ತಾರಿಂದ ಕಣ್ಣಿಂದ ನೋಡೆ ಇಲ್ಲ ಅಂದರು.

ಅಲ್ಲೇ ಮುಂಡೆ ಅಂದಿದ್ದೇ ಓಡಿ ಬಂದುಬಿಟ್ಟು ತಿರ್ಗಾ ಎಂಡ್ರನ್ನ ಕೇಳ್ದಾ. "ಏನೇ ಒಳಗಿರೋರ್ಯಾರೋ ರಾಣಿ ? ಎಲ್ಲೇ ನನ್ಮಗ ? ಅಂದ.

ಅಲ್ಲ್ರೀ ಆಚೆ ಮನೇಲೀ ಅವ್ರ ಸೋದರತ್ತೆ ಬಂದಿದ್ಲು ರೀ ಕರ್ಕ್ಕೊಂಡ್ ಹೋಗವ್ರೆ ರೀ ಅಂದ್ಬಿಟ್ಲು. ಅವ್ರ ಸೋದರತ್ತೆ ಬಂದವಳೇ ಕರ್ಕ್ಕೊಂಡ್ ಹೋಗಿದಾಳೇ ಕಣ್ರ್ರೀ ಅವನ್ನ. ಅವ್ರ ಸೋದರತ್ತೆ ಅವ್ರ ಯಜಮಾನ್ರ ತಂಗಿ. ಅಲ್ಲಿಗೂನೂ ಓಡೋಡಿ ಹೋಗ್ಬಿಟ್ಟ. ಏನಮ್ಮ ನನ್ ತಂಗಿ, ನನ್ಮಗ ಬಂದಿದ್ದಾನ? ನೀನ್ ಬಂದಿದಯಿಯಂತೆ ಕರ್ಕ್ಕೊಂಬಂದಿದ್ದಿಯೇನೋ ಅಂತ ಕೇಳೋದಾಗಿ ಬಂದೆ ಅಂದ.

ಅಣ್ಣಾ ನಾನ್ ಮೂರು ದಿವ್ಸದಲ್ಲಿ ನಿನ್ ಮಗನ್ನ ನೋಡಿದ್ದೆ. ಇನ್ನಾವರ್ಗಾದ್ರೂ ನನ್ ಕಣ್ಣಿಂದ ನೋಡೇ ಇಲ್ಲ ಅಂದಳು. ಆಮೇಲೆ ಅಲ್ಲಿಂದ ಓಡಿ ಬಂದ್ಬಿಟ್ಟ. ತಿರ್ಗಾ ಮನೇಗೆ ಬಂದ. ತಿರ್ಗಿ ತಿರ್ಗಿ ಸಾಕಾಯ್ತು. ಯಾರೂ ಹೇಳ್ಲಿಲ್ಲ. ಎಲ್ಲವ್ನೇ ಮಗ ಅಂತ . ಈ ತರ ಮಾಡವ್ಳೇ ಅಂತನೂ ಹೇಳ್ಲಿಲ್ಲ. ಆಮೇಲೆ ಮನೆ ತವ ಬಂದು ದೊರೆ ಮಂಚದ ಮೇಲೆ ಮಕಾಡೆಯಾಗಿ ಮಲ್ಗೆಬಿಟ್ಟ. ಇವಳೇನ್ ಮಾಡ್‌ಬಿಟ್ಲು? ನನ್ಗೆ ಉಳಿಗಾಲ ಇಲ್ಲ. ನನ್ನ ಉಳಿಸೋದಿಲ್ಲ. ಎಂಗೂ ನನ್ ಪ್ರಾಣ ತೆಗೆದ್ ಹಾಕ್ತಾನೆ, ಅಂತ ಹೇಳ್‌ಬಿಟ್ಟು ಇವಳು ಅಡ್ಗಿ ಮಾಡಿದ್ಲು, ಸ್ನಾನ ಮಾಡಿದ್ಲು, ನೀರ್ ಕಾಯ್ಸಿದ್ಲು; ಬನ್ರೀ ಎಲ್ಲೋ ಅವ್ನೇ ಬತ್ತಾನೆ. ಏಳಿ ಸ್ನಾನ ಮಾಡ್ರಿ ಸಾಕಾಗಿದ್ದೀರಿ. ಬನ್ರೀ ಬನ್ರೀ ಅಂತ ಹಿಂಸೆ ಮಾಡಿದ್ಲು. ಕರ್ಕ್ಕೊಂಡೋಗಿ ಸ್ನಾನ

ಮಾಡ್ಸಿದ್ಲು. ಅವನ್ಗೆ ಊಟ ತಂದ್ಲು. ವಿಷ ಹಾಕಿದ್ಲು; ಊಟ ತಂದು ಮುಂದ್‌ಕಿಟ್ಲು. ಆ ಹುಡ್ಗ ಹೇಳಿದ್ನಲ್ಲ ? ಯಾರು ? ಆ ಮಗ ಹೇಳಿದ್ನಲ್ಲ? ಊಟ ತಿನ್ಬೇಡಪ್ಪ, ತಿನ್ಬೇಕಾದ್ರೆ ಆ ನಾಯಿಗೆ ಹಾಕ್ಬಿಟ್ಟು ತಿನ್ನು ಅಂತ ಹೇಳಿದ್ನಲ್ಲ? ಆ ನಾಯಿಗೆ ಒಂದ್ ತುತ್ತು ಆಕಿ ನೀನು ತಿನ್ನಪ್ಪ. ಆ ನಾಯಿ ತಿಂದ್ರೇ ನಿನ್ ಊಟ ಮಾಡು. ಇಲ್ಲದಿದ್ರೇ ನೀನೆ ಊಟನೇ ಮಾಡಬೇಡಪ್ಪ ಅಂತ ಹೇಳಿದ್ನಲ್ಲ ?

ಆಮೇಲೆ ಊಟಕೆ ತಂದು ಬಡಿಸಿದ್ಲು. ನಾಯಿಗೆ ಎತ್ತಿ ಘಸ್ಟು ಒಂದು ತುತ್ತಾಕ್ಬಿಟ್ಟ. ಅಯನ್ನವ ನಾಯಿಗೆ ಮಗ ಯಾವ್ ರೀತಿ ಹೇಳಿದ್ನೋ ಆ ತರ ಎಸೆದ.

ಆ ನಾಯಿ ಏನ್ ಮಾಡ್ತು ? ನಾಯಿ ಮೂಸಿ ನೋಡ್ಲಿಲ್ಲ. ಜಾಸ್ತಿ ಆಕಿದ್ಳಲ್ಲ ? ನಾಯಿ ತಿಂದ್ರೆ ನೀನ್ ತಿನ್ನು ಅಂತ ಹೇಳಿದ್ನಲ್ಲ ? ನಾಯಿ ತಿನ್ನುದೇ ಇದ್ರೇ ನೀನ್ ತಿನ್ಬೇಡ, ಅಂತ ಹೇಳಿದ್ನಲ್ಲ ? ಆಗ ಇವ್ನು ಏನ್ ಮಾಡ್ದ? ಆ ನಾಯಿಗೆ ಹಾಕ್ದ. ಆ ನಾಯಿ ತಿನ್ನಲಿಲ್ಲ. ಇವ್ನೂ ಬಿಟ್ಬಿಟ್ಟು ಎದ್‌ಬಿಟ್ಟಾ. ಆಮ್ಯಾಲೇ ತಡಿ ಇದೇನೋ ಅಟ್ಟದ ಮ್ಯಾಲೇ ಈ ಪಾಟಿ ರಕ್ತ ಸುರ್ದದೇ ಅಂತ ಅಟ್ಟತಕ್ ವೋದಾ.

ಅಟ್ಟದ ಮ್ಯಾಲೇ ರಕ್ತ ಅನ್‌ಗ್ತದೆ, ತಲೆ ಮಡಿಗವ್ರೇ. ಇದೇನೆ ? ಇಂಗ್ ಅನಗ್ತದೇ ಅಂತ ಕೇಳೋವಾಗ-

ಅಲ್ಲಾರೀ ಮತ್ತೆ ಅಲ್ಲಿ ಒಂದು ಮರ ಕಾರೇಹಣ್ಣು ಇಟ್ಟಿದ್ದೇ. ಆ ಕಾರೇ ಅಣ್ಣು ಮ್ಯಾಕೇ ಮಡಗಿದ್ದೆ. ಅದೇ ಜಿನಗ್ತಿರೋರು ಕಣ್ರೀ ಅಂದ್ಲು.

ಆಮೇಲೆ ''ಬಿಚ್ಚೆ ನೋಡೋಣ. ಕಾರೆ ಅಣ್ಣಿನ ಮ್ಯಾಲೇ ನಂಗೂ ಆಸೆ ಐತೆ ಕಣೇ. ನಾನು ತಿನ್ಬೇಕು '' ಅಂದ. ಬಿಚ್ರೀ ನೀವೇನೇ ನಾನು ಬಿಚ್ಬೋಕಾಗೊಲ್ಲ ಅಂದ್ಲು. ಅವನು ಏನ್ ಮಾಡ್ಬಿಟ್ಟ ? ತಡಿ ಈ ಮುಂಡೇಗೆ ಮಾಡ್ತೀನಿ ಇರ್ಲಿ ಅಂತ ಅಟ್ಟದ ಮ್ಯಾಕ್ ಅತ್ತಿದ್ದೆಯಾ, ಚಾಪೆ ಒಳ್ಗೆ ಸುತ್ತಿದ್ಲು, ಕೆಳಕ್ ಇಳಿಸ್ತೂಲೂವೇ ಈ ರೀತಿ ಈ ಮಿಂಡಗಾರನ್ನ ಆಳಾಕ್‌ವೋಗಿ ಮಗಾನ ಈ ರೀತಿ ಶಿಕ್ಷೆ ಕೊಟ್ಟಿದ್ದಿಯಲ್ಲ ? ಇದ್ ಸರೀನ ಅಂತ ಆ ಹೆಂಡ್ತಿಗೆ ಕೇಳಿದ. ಊರ್ ಗೌಡ್ರನ್ನೆಲ್ಲ ಕರ್ಸಿ ಆ ಹೆಂಡ್ತಿ ತಲೇನ ಬೋಳ್ಸಿ, ಮೂರ್ ಪಟ್ಟೆ ಬಳಿದು, ಸುಣ್ಣ ತರ್ಸಿ ಸುಣ್ಣ ಉಯ್ಸಿಬಿಟ್ಟು ಆ ಹೆಂಡ್ತಿಗೇ ಕತ್ತೆ ಮ್ಯಾಲೆ ಮೆರವಣಿಗೆ ಮಾಡ್ಸಿ ತಕ್ಕೊಂಡೋಗಿ ಆ ಸುಣ್ಣದ ನೀರಲ್ಲಿ ಹಾಕ್ಬಿಟ್ಟ.

ಹೆಂಡ್ತೀನೂ ವೋಯ್ತು. ಮಗನೂ ವೋಯ್ತು; ಈ ದೊರೆ ಬ್ಯಾರೇ ಕಡೆ ಮದ್ವೆ ಆಗಬೇಕು. ಈಗ ಹೆಂಡ್ತೀನೂ ಹೊರಟೋಯ್ತು, ಮಗ ಹೊರಟೋಯ್ತು. ಈ ಮುಂಡೆ ಮಾಡಿದ ಶಿಕ್ಷೆಗೆ ಅನುಭವಿಸಬೇಕು. ಆ ತರ ಅವ್ರು ಮಾಡ್ಬಿಟ್ರು.

ದೊರೆ ಹೆಂಡ್ತಿನೂ, ಮಗನ್ನೂ ಆ ತರ ಮಾಡ್ಬಿಟ್ಟು ದೊರೆ ಮದುವೆನೂ ಆಗಲಿಲ್ಲ. ಏನೂ ಆಗ್ಲಿಲ್ಲ. ಮೊದ್ಲು ಬಂದವ್ಳೆ ಈ ತರ ಮಾಡವ್ಳೆ. ಇನ್ ಬರೋವ್ಳು ಏನ್ ಮಾಡ್ತಾಳೋ? ಯಾಕೆ ಮದುವೆ ಇನ್ಯಾಕೇ? ನಾನ್ ಹುತ್ತದ ಪೂಜೆ ಮಾಡಿ ಪುತ್ರನ್ನ ಪಡೆದಿದ್ದೆ. ಹಿಂಗಾಯ್ತು. ಯಾವ್ ಸಿರಿ ಸಂಪತ್ ಮ್ಯಾಲೆ ನಾನಿರ್ಬೇಕು? ನನ್ ಮಕ್ಳು ಎಂಡ್ತಿ ಇದ್ದಾಗ್ಲೂ ದೂರದಲ್ಲಿ ದಂಡ್‌ನಾಗೆ ಇದ್ದೆ. ಅಂಗೇ ಇರೋಣ ಅಂತ ನಿಶ್ಚಯಿಸಿಕೊಂಬಿಟ್ಟ ದೊರೆ. ಮದ್ವೇನೂ ಆಗ್ಲಿಲ್ಲ.

ಹೇಳಿದವರು : **ಕರಿಯಮ್ಮ.** ಎಲಿಯೂರು, ಕುಣಿಗಲ್ ತಾಲ್ಲೂಕು.

# ೨೮. ಘನ ಪುಣ್ಯವತಿ

ಹಿಂದೂ ಅಷ್ಟೆ ಈಗ್ಲೂ ಅಷ್ಟೆ. ಈ ಕಲಿಯುಗದಲ್ಲು ಅಷ್ಟೆ. ಬಡವ ಬಡವ್ನೇಯ, ಬಲ್ಲಿದ ಬಲ್ಲಿದ್ನೇಯ. ಬಡವ ಬಡವನ ಮನೇಲಿ ಸಂಬಂಧ ಬೆಳಸಬೇಕೇ ಹೊರತು, ಬಲ್ಲಿದನ ಮನೇಲಿ ಸಂಬಂಧ ಬೆಳೆಸಬಾರದು. ಬಲ್ಲಿದ ಬಲ್ಲಿದನ ಮನೆಯಲ್ಲೆ ಅವನ ಸರಿಜೋಡಿಯಾಗಿರತಕ್ಕವನ ಮನೆಯಲ್ಲೇ ಸಂಬಂಧ ಬೆಳೆಸಬೇಕು.

ಹೀಗಿರತಕ್ಕಂತ ಕಾಲದಲ್ಲಿ ಬೆಂಗ್ಳೂರಲ್ಲಿ ಒಬ್ಬ ಸೌಕ್ಕಾರ, ಮೈಸೂರಲ್ಲಿ ಒಬ್ಬ ಸವ್ಕಾರ ಇರ್ತಾರೆ. ಬೆಂಗ್ಳೂರ ಸವ್ಕಾರನ ಮನೇಲಿ ಒಂದ್ ಹೆಣ್ಣಿತ್ತು. ಮೈಸೂರು ಸವ್ಕಾರನ ಮನೆಲೊಂದು ಗಂಡಿತ್ತು. ಸಮಜೋಡಿಯಾಗಿತ್ತು. ಮೈಸೂರು ಸವ್ಕಾರ, ಬೆಂಗ್ಳೂರ ಸವ್ಕಾರನ ಮನಿಗೆ ಹೆಣ್ಣಿಗೆ ಬಂದ. ಮಾತ್‌ಕೊಟ್‌ಬಿಟ್ಟ. ಇನ್ನೇನ್ ನೋಡಬೇಕಾಗಿದೆ ? ನನ್ ಸರಿಜೋಡಿಯಾಗಿರತಕ್ಕವನು ಅಂದು ಮಾತುಕೊಟ್ಟ. ವಡವೆ ವಸ್ತು ಎಲ್ಲ ಮಾತಾಯ್ತು. ಇನ್ನ ಎಲ್ಲಿ ಲಗ್ನ ಮಾಡದು ? ನಾನು ಸವ್ಕಾರ, ನಾನು ಗಂಡಿನ ಮನೇಲೆ ಲಗ್ನ ಮಾಡದ? ಅದಾಗದುಲ್ಲ, ನಾನೂ ಸವ್ಕಾರ, ನಾನೂ ಹೆಣ್ಣಿನ ಮನೇಲಿ ಲಗ್ನ ಮಾಡೋದು ಆಗಲ್ಲ. ನಾವಿಬ್ರಾಳು ಹೀಗೆ ಯಾಜ್ಯಾಮಾಡ್ಕೆಂತಯಿದ್ರೆ ಲಗ್ನ ಮಾಡೋದು ಹ್ಯಾಗೆ ? ನಾವು ಹೀಗೆ ಮಾಡೋಣ, ನಮಗಿಂತಲು ಹಿರಿಯೊರಾಗಿರತಕ್ಕಂತವರ ಮನಿಗೋಗಿ, ಯಾರ ಮನೇಲಿ ಲಗ್ನ ಮಾಡಬೇಕು ಅಂತಕಂತದ್ದನ್ನು ಕೇಳೋಣ. ಆ ಅಜ್ಜ ಯಾರಮನೇಲಿ ಲಗ್ನ ಮಾಡ್ಬೇಕೂಂತ ತೀರ್ಮಾನ ಹೇಳ್ತಾನೋ ಅವರ ಮನೇಲಿ ಲಗ್ನ ಮಾಡಾಣ ಅಂತೇಳಿಬಿಟ್ಟು ಒಬ್ಬ ಅಜ್ಜನಲ್ಲಿ ಹೋದ್ರು.

ಹೋಗಿ ಹೇಳಿದ್ರು. ಅಜ್ಜಾ ಗಂಡಿನೋರು ಸವ್ಕಾರ್ರು. ಹೆಣ್ಣಿನೋರು ಸವ್ಕಾರ್ರು.

ಗಂಡಿನೋರು ನನ್ನ ಮನೇಲಿ ಲಗ್ನ ಮಾಡ್ಬೇಕೂಂತ. ಹೆಣ್ಣಿನೋರು ನನ್ನ ಮನೇಲಿ ಲಗ್ನ ಮಾಡ್‌ಬೇಕೂಂತ. ನೀನು ಯಾರ್‍ಮನೆ ಬಾಕ್ಲಲ್ಲಿ ಲಗ್ನ ಮಾಡ್ಬೇಕೂಂತ ತೀರ್‍ಮಾನ ಹೇಳ್ತಿಯೋ ಅದ್ರಂತೆ ನಡಕಂಡು ಹೊಗ್ತೀವಿ ಹೇಳಜ್ಜ ಅಂದ್ರು. ಅಜ್ಜನಿಗೆ ಒಳ್ಳೆ ಪಿಕಲಾಟಕ್ ಬಂತು. ಇವ್ನಿಗೆ ಹೇಳಿದ್ರೆ ಅವ್ನಿಗೆ ನಿಷ್ಠೂರ. ಅವ್ನಿಗೆ ಹೇಳಿದ್ರೆ ಇವ್ನಿಗೆ ನಿಷ್ಠೂರ. "ಹೂ ಆಗಲಪ್ಪ ಬನ್ನಿ ಇಲ್ಲಿ. ಗಂಡಿನ ಬಾಕ್ಲಲ್ಲಿ ಲಗ್ನ ಮಾಡಿದ್ರೆ, ಗಂಡ್ ಮೂರ್ತಿಂಗ್ಳು ಹೆಣ್ಣಿನ ಮನೆ ಬಾಕ್ಲಿಗೆ ಕಳ್ಸಂಗಿಲ್ಲ. ಹೆಣ್ಣಿನ ಬಾಕ್ಲಲ್ಲಿ ಲಗ್ನ ಮಾಡಿದ್ರೆ, ಹೆಣ್ಣು ಮೂರ್ತಿಂಗಳು ಗಂಡಿನ ಬಾಕ್ಲಿಗೆ ಕಳ್ಸಂಗಿಲ್ಲ. ಈ ಎಲ್ಡ್ರಲ್ಲಿ ಯಾರಾದ್ರು ಒಬ್ರು ಒಪ್ಗೆಂದ್ರೆ ಲಗ್ನ ಮಾಡಪ್ಪ" ಅಂತ ಆ ಅಜ್ಜ ತೀರ್ಮಾನ ಹೇಳ್ತು. ಆಗ ಗಂಡಿನವನು ಯೋಚ್ನೆ ಮಾಡ್ದ. ಹೆಣ್ಣುಮಗುವನ್ನು ಲಗ್ನ ಮಾಡಿದ ಕಾಲದಲ್ಲಿ ಶಾಸ್ತ್ರೋಕ್ತವಾಗಿ ಗಂಡಿನ ಮನಿಗೆ ಹಾಗೂ ಕಳ್ಸದುಲ್ಲ ಹೀಗೂ ಕಳ್ಸದುಲ್ಲ. ಇದಕ್ಕೋಸ್ಕರವಾಗಿ ನಾನ್ಯಾಕೆ ಒಪ್ಕೆಳ್ಳಿ ? ಹೆಣ್ಣಿನೋರೆ ಮಾಡ್ಲಿ ಬಿಡು ಅಂತೇಳಿಬಿಟ್ಟ. ಆಗ ಹೆಣ್ಣಿನೋರು ಒಪ್ಗೆಂದ್ರು. ತನ್ ಹೆಂಡ್ತಿಗೇಳಿ ಎಂಟು ದಿನದಲ್ಲೆ ಲಗ್ನ ಇಟ್ಟ.

ಈ ಘನ ಪುಣ್ಯವಂತ ತನ್ನ ಮಗಳನ್ನು ಐಶ್ವರ್ಯದಲ್ಲಿ ಬೇಕಾದಷ್ಟು ಸಂಪತ್ತಿನಿಂದ ಲಗ್ನ ಮಾಡಿಕೊಟ್ಟ. ಆ ಲಗ್ನವಾದ ಕಾಲದಲ್ಲಿ ತನ್ನ ಗಂಡನ ಮನೆಯನ್ನು ಶಾಸ್ತ್ರೋಕ್ತವಾಗಿ ನೋಡಬೇಕಾದ್ದು ಹೆಣ್ಣಿನ ಕರ್ತವ್ಯ. ಆದ್ರೆ ಈ ಅಜ್ಜನಲ್ಲಿ ಒಂದು ಕಟ್ಟಪ್ಣೆ ಇತ್ತಲ್ಲ ? ಆದ್ರಿಂದ ಹೆಣ್ಣುಮಗಳನ್ನ ಕಳಿಸ್ಲಿಲ್ಲ. ಇವ್ನು ತನ್ನ ಮಗನನ್ನ ಲಗ್ನ ಮಾಡಿಕೊಂಡು ಕರಕಂದ್ ಬಂದ್‌ಬಿಟ್ಟ. ಕರಬಂದ್ ಮೂರು ದಿವಸದಲ್ಲೆ ಆ ಘನ ಪುಣ್ಯವಂತ ಸತ್ತೋದ. ಯಾವಾಗ ಸತ್ತೋದ್ನೊ ಅವನ ಘನ ಐಶ್ವರ್ಯವೆಲ್ಲ ಎಲ್ಲೆಲ್ಲಿತ್ತೊ ಅಲ್ಲಲ್ಲೆ ಅದೃಶ್ಯವಾಯ್ತು. ಇದ್ದ ಮನೆಮಠಗಳನ್ನು ಅವರಿವರು ಕಿತ್ಕಂಡ್ರು. ಒಂದೇ ಒಂದು ಹುಲ್ಲು ಜೋಪಡಿ ಮಾತ್ರ ಇವ್ನಿಗೆ ಉಳೀತು. ಆ ತಾಯಿ ನಾನು ಸಾವ್ಕಾರ್‍ನ ಹೆಂಡ್ತಿ ಅನಿಸ್ಕಂಡಿದ್ದೆ. ನಾನು ಹತ್ತಾರು ಜನ ಬಡಬಗ್ಗರನ್ನು ಕಾಪಾಡತಿದ್ದವಳಾಗಿ ಈಗ ಇದುನ್ನೆಲ್ಲ ನೋಡೋದ್ಕಿಂತ ಕಣ್ ಮುಚ್ಗೆಂದ್ ಸುಮ್ನೆ ಕೂರೋದು ಬಾಳ ಒಳ್ಳೇದಲೆ ಅಂತೇಳಿ ಕಣ್ ಮುಚ್ಗೆಂದ್ ಸುಮ್ನೆ ಕುಂತ್‌ಬಿಟ್ಳು. ಇನ್ನು ತಾಯಿ ಕಣ್ಣುಮುಚ್ಗೆಂದ್ ಸುಮ್ನೆ ಕುತಗಂದ ಮ್ಯಾಲೆ ತಾಯಿನ್ನ ಕಾಪಾಡೊ ಭಾರ ಯಾರ್‍ದು ? ಮಗಂದು. ಮಗ ಏನ್ಮಾಡ್ದ ? ತನ್ ತಾಯಿಗೋಸ್ಕರವಾಗಿ ಆಪತ್ತಿನಲ್ಲಿ ಭಿಕ್ಷಾಟನೆಗೆ ಹೋದ.

ಉಳಿದಿರೋದು ?'' ಏನಿಲ್ಲ ನಮ್ಮ ಮಾವನ ಮನೆ ಮಾತ್ರ ಉಳಿದಿದೆ. ಅಯ್ಯೋ ಬೇಡಪ್ಪ. ನಿಮ್ಮ ಮಾವನ ಮನಿಗೆ ಬೇಡ. ನಾವು ಹೀಗೆ ನಿರ್ಗತಿಕರಾಗಿದೇವಿ ಅನ್ನೋ ವಿಚಾರ ಅವ್ರಿಗೆ ತಿಳಿಯೋದು ಬೇಡ, ಬೇಡಪ್ಪಾ; ಅದು ಅಲ್ಲದೆ ಆಗ ನಿಮ್ಮ ತಂದೆ ಲಗ್ನ ಮಾಡದಂತ ಕಾಲದಲ್ಲಿ ಬೇಕಾದಷ್ಟು ಐಶ್ವರ್ಯದಲ್ಲಿ ನಿನ್ನ ಲಗ್ನ ಮಾಡಿದ್ರು. ಇವತ್ ನಾವು ಒಬ್ಬ ಭಿಕ್ಷುಕರಿಗಿಂತಲು ಕಡೆಯಾಗಿದೇವಿ: ಅದು ಒಂದಲ್ಲದೆ ರೂಪರೇಖೆಗಳೆಲ್ಲ ಕೆಟ್ಟು ಹೋಗಿವೆ. ಹರಕಲಂಗಿ ಹರಕಲ ಚಡ್ಡೀಲಿ ನಿಮ್ಮಾವನ ಹತ್ರ ಹೋದಾಗ ನಿನ್ನ ಅಳಿಯಾಂತ ಖಂಡಿತವಾಗು ಗುರ್ತು ಹಿಡಿಯೋದಿಲ್ಲ. ಯಾರೋ ಭಿಕ್ಷುಕಾಂತ ನಿನ್ನನ್ನ ಒದ್ದು ನೂಕ್ತಾರೆ. ಬೇಡಪ್ಪಾ ನನ್ನ ಮಾತು ಕೇಳು. ''ಇಲ್ಲವ್ವ ಆಗ ನಾನು ಹೋಗ್ತ ಕಂತ ಕಾಲದಲ್ಲಿ ನನ್ನೆಂಡ್ತಿ ನನ್ನನ್ನು ಪ್ರೀತಿಯಿಂದ ಕಾಣ್ತಾಳೆ. ಇಲ್ಲ ಒದ್ದು ನೂಕ್ತಾಳೇನ್ನರ ನೋಡ್ಬೇಕೂಂತ ಮಾಡಿದ್ದೇನಮ್ಮ. ಆದರೆ ನನ್ನ ಗತಿ ಏನು ಮಾಡಿ ಹೋಗ್ತಿಯಾ ?'' ಏನೂ ಇಲ್ಲ ಈಗ್ಗು ಅಲ್ದೆ ಸಾಯಂಕಾಲಕ್ಕೆ ಇನ್ನೊಬ್ರ ಮನೇಲಿ ಭಿಕ್ಷೆ ಮಾಡಿ ತಂದಿಟ್ಟಿದೀನಮ್ಮ. ಊಟಮಾಡು. ನಾಳೆ ನಾನ್ನೆಲ್ಲಿದ್ರು ಸರಿ ಬಂದು ಇನ್ನೊಬ್ರ ಮನೆ ಭಿಕ್ಷೆನಾದ್ರು ಬೇಡಿ ತಂದು ಕಾಪಾಡುತ್ತೇನಮ್ಮಾ ಅಂತ ಹೇಳಿಬಿಟ್ಟ. ತಾಯಿಯಿಂದ ವಾಗ್ದಾನವನ್ನು ಪಡಕಂಡ. ತನ್ನ ಮಾವನ ಊರಿಗೆ ಬಂದ.

ಮಾವನ ಮನೆಯಾದ್ರೂ ಸೀದ ಹೋಗಾಕ್ ಆಗುತ್ತದೆಯೇ? ಯಾಕೆ? ಭಿಕ್ಷುಕನಿಗಿಂತ ನಿರ್ಗತಿಕನಾಗಿದ್ದರಿಂದ ಮಾವನ ಮನಿಗೆ ಸೀದ ಹೋಗಾಕ್ ಆಗದುಲ್ಲ. ಊರ ಹೊರಭಾಗದಲ್ಲಿ ಆ ಪಟ್ಟಣದಲ್ಲಿರತಕ್ಕಂತ ಕೊಳ. ಆ ಕೊಳದತ್ರ ಅರಳಿಕಟ್ಟೆ. ಆ ಅರಳಿ ಕಟ್ಟೆಮ್ಯಾಲೆ ಸುಮ್ನೆ ಬಂದು ಕೂತ. ಇನ್ನು ಈ ಸವ್ಕಾರನ ಮಗಳು ತನ್ನ ಒಡನಾಡಿಯವರ ಜತೆಯಲ್ಲಿ, ಅವರವರ ಸಮಜೋಡಿಯಾಗಿರತಕ್ಕಂತವರ ಜೊತೆಯಲ್ಲಿ, ಅಲ್ಲಿ ನೀರಿಗೆ ಬಂದ್ಲು. ನೀರಿಗೆ ಬಂದ್ರೆ ಈ ಮನುಷ್ಯನ್ಯಾಕೆ ಮಾತಾಡ್ಸಾಕ್ ಹೋಗ್ತಾರೆ ? ಯಾವುದೋ ಭಿಕ್ಷುಕ ಕೂತಿದಾನೇಂತ ಹೇಳ್ಬಿಟ್ಟು, ತಮ್ಮ ಪಾಡಿಗೆ ತಾವು ನೀರ ತಗಂದ್ರು, ತಮ್ಮ ತಮ್ಮ ಮನಿಗೆ ಬಂದ್ರು. ಈ ಒಡನಾಡಿಗಳು ಬಂದುದ್ರಲ್ಲ ? ಅವರವ್ರಿಗೆ ಅಷ್ಟಷ್ಟಕೆ ಸಾಕಾಯ್ತು. ಅವರವ್ರು ಅಲ್ಲಲ್ಲೆ ನಿಂತ್‌ಬಿಟ್ರು. ಈ ಸಾವ್ಕಾರನ ಮಗಳು ಇನ್ನು ಒಂದವ ನೀರಿಗೆ ಬರಬೇಕಾದ ಸಂದರ್ಭ ಬಂದದ್ದರಿಂದ, ಆಗ ಅವರ್ನ ಕರಕಂದ್ ಬರಾಕ್ ಆಗುತ್ತದೆಯೇ ? ಆಗ ಅವಳು ಒಬ್ಬಳೇ ಬಂದ್ಲು. ನೀರನ್ನು ಎರಡು ಕೊಡದಲ್ಲಿ ಮೊಗೆದಿದ್ದಾಳೆ. ಒಂದ್ ಕೊಡವನ್ನು ಹೊತ್ಕಂಡು, ಇನ್ನೊಂದು ಕೊಡವನ್ನು ಎತ್ತಿಗೊಳ್ಳೊ ಟೈಮು. ಅಷ್ಟೊತ್ಗೆ ನೋಡ್ದ. ನಾನು ಹೀಗೆ ಕುತ್ಕಂದ್ರೆ ನನ್ನ ಕಾರ್ಯ ನೆರವೇರುತ್ತೆಯೇ? ಹಾಗಂತ ಇವ್ನು ಇಳ್ದ. ಆ ಕೊಳಕಿಳ್ದು ಒಂದ್ ಬಕ್ಸೆ ನೀರು ಕುಡುದುಬಿಟ್ಟ. ಇವ್ನು ಒಂದು ಮೆಟ್ಲ ಹತ್ತಿದ. ಆಕೆನು ಒಂದು ಬಿಂದಿಗೆ ಇಡ್ಕಂಡು ಒಂದ್ ಬಿಂದಿಗೆ ಹೊತ್ಕಂಡು ಒಂದ್ ಮೆಟ್ಲ ಹತಿದ್ಲು. ಇವ್ನು ಒಂದು ಬಕ್ಸೆ ನೀರು ಕುಡುದು ಒಂದು ಮೆಟ್ಲ ಹತ್ತಿದ. ಹುಶ್.... ಅಂದ. ಹುಶ್.... ಅಂದಟ್ಗೆ ಗರಕ್ಕನೆ ತಿರುಗಿಬಿಟ್ಲು. ಯಾಕಣ್ಣ ಹೀಗದೀಯ ಅಂತ ಕೇಳಿದಳು ? ಅಮ್ಮ ನನಿಗೆ ಮೂರು ದಿವಸದಿಂದ ಊಟವಿಲ್ಲ. ಅದುಕ್ ಹೀಗಿದೀನಿ ಅಂದ. ಹಾಗಾದ್ರೆ,

ನಿನಿಗೆ ಯಾರೂ ಇಲ್ಲವೇನಪ್ಪಾ ? ''ನಮ್ಮನೇಲಿ ಒಪ್ಪತ್ತು ಉಣ್ಕೊಂತೆ ನಡಿಯಪ್ಪ. ''ಸರಿ ಆಗಲಮ್ಮ''. ಮುಂದೆ ಈಕೆ ಬರ್‍ತಾಯಿದ್ದಾಳೆ. ಅದರಿಂದ್ಗಡೆ ಇವನು ಬರ್‍ತಾಯಿದಾನೆ.

ಇನ್ನು ಹೆಣ್ಣಿನ ತಂದೆ ಘನ ಪುಣ್ಯವಂತ ಮನೆಮುಂದ್ಗಡೆ ಮಂಚದಮ್ಯಾಲೆ ಕಾಲಮ್ಯಾಲೆ ಕಾಲ ಹಕ್ಕೆಂಡು, ಬೆತ್ತದಕೋಲು ಕೈಲಿ ಹಿಡ್ಕಂಡು, ಕುಂತುದಾನೆ. ಮಗಳು ಮುಂದುಗಡೆ ನೀರು ಹೊತ್ಕಂಡೆ ಬರ್‍ತಾಯಿದ್ದಾಳೆ. ಅವಳ ಹಿಂದಗಡೆ ಇವನು ಬರ್‍ತಾಯಿದಾನೆ. ಯಾರಮ್ಮ ಈತ? ಅಂತ ಕೇಳಿದ ಅಪ್ಪ. 'ಯಾರೋ ಗೊತ್ತಿಲ್ಲವಪ್ಪ'' ಮೂರು ದಿವಸದಿಂದ ಊಟವಿಲ್ಲವಂತೆ. ಅದಕ್ಕೆ ಬಾರಪ್ಪಾ ಊಟುಕೆ ಇಕ್ತೇನಿ ಅಂತ ಕರಕಂದ್ ಬಂದೆ. 'ಅಯ್ಯೊಯ್ಯೊ ಇವನಿಗೇನಮ್ಮ ಬಂದಿರೋದು ? ಒಂದಾಳು ಸಿಗುದ್ರೆ ಎರಡಾಳು ಆಗ್ತಾಯಿದಾನೆ. ಯಾರ ಮನೇಲಾದ್ರು ಕೂಲಿ ಮಾಡ್ಕೋದು. ಇಲ್ದೆ ಹೋದ್ರೆ ಗೇಯಬಹುದು. ಹೆಸರು ಅದು ಏನೂ ನೋಡ್ಲಿಲ್ಲಾಮ್ಮ..... ಬರಿ ಮನೆಮನೆ ಭಿಕ್ಷೆ. ಇದನ್ನೆ ಮಾಡ್ಕೊಂಡ್ ಬಿಟ್ಟಿದ್ದಾರೆ. ಅಯ್ಯೊ ಬಿಡಿ ಅಪ್ಪ. ಅವನು ಎಂತೋನರ ಆಗ್ಲಿ. ಅವನ್ನ ಕಟಕಂಡ್ರೆ ನಮಿಗೇನಪ್ಪ ? ಅವನಲ್ಲಿರತಕ್ಕಂತ ಕರಮಶೇಷವನ್ನು ನಮ್ಮ ಬಾಯಲ್ಲಾಡಿ ಆ ಪಾಪವನ್ನು ನಾವ್ಯಾಕೆ ಹೊತ್ಕಬೇಕಪ್ಪ ? ನಾವಿಕ್ಕದು ಒಪ್ಪತ್ತಿನ ಊಟ. ಊಟ ಮಾಡ್ಕಂಡು ಹೊಂಟೋಗಪ ಅಂದ್ರೆ ತೀರಿಹೋಗಲ್ವೆನಪ್ಪಾ ? ಅವನ ಕಟಕಂಡು ನಮಗೇನು ಆಗಬೇಕಾಗಿದೆ ? ಆಗಲಮ್ಮ ಊಟುಕೆ ಕೊಡು. ಬಾರಣ್ಣ ಯೋಚ್ನೆ ಮಾಡ್ದೆ ಬಾ ಪರಮಾತ್ಮ ಇದ್ದಾನೆ. ಒಬ್ಬ ಮನುಷ್ಯ ಹುಟ್ತಾ ತಕ್ಕಂದು ಬಂದಿಲ್ಲ. ಹೋಗತಕ್ಕಂತ ಕಾಲದಲ್ಲಿ ತಕ್ಕಂದು ಹೋಗದುಲ್ಲ. ಆದ್ರು ಒಬ್ಬ ಮನುಷ್ಯ ಮೂರು ದಿವಸದಿಂದ ಊಟಕ್ಕಿಲ್ಲ ಅಂತಿದಾನಲ್ಲ ? ಇದಕ್ಕೇನು ಗತಿಮಾಡ್ಲಿ ? ಅಣ್ಣಾ ಒಂದು ಬುದ್ವಂತ್ಗೆ ಹೇಳ್ತೇನಿ ಮಾಡ್ತೀಯ ಅಂದ್ಲು. ಓ ಮಾಡ್ತೀನಿ. ಏನೂಯಿಲ್ಲ ಇನ್ನು ಹತ್ತಾರು ದಿನದಲ್ಲಿ ನನ್ನ ಗಂಡನ ಮನೆಯವರು ಘನ ಪುಣ್ಯವಂತ್ರು. ನನ್ನನ್ನ ಕರಕೊಂಡು ಹೋಗಾಕ್ ಬರ್‍ತಾರೆ. ಅಲ್ಲಿ ನಿನ್ನನ್ನು ಕರಕಂಡೋಗಿ ಸುಖ ಸಂಪತ್ತಿನಿಂದ ಸಾಕ್ತೇನಿ. ಇವಾಗ ನನ್ನ ತಂದೆ ಮನೆಯಲ್ಲಿ ಕೂಲಿಗಿರು. ಓ ಆಗ್ಲಿ ಅಂದ.

'ಅಪ್ಪಾ'. 'ಏನಮ್ಮ ?' 'ಇವರು ನಮ್ಮನೇಲಿ ಕೂಲಿಗಿರತಾರಂತೆ. ಇರಲೇಳು. ಇನ್ನೇನು? ಇನ್ನ ಹತ್ತಾರು ದಿವಸದಲ್ಲಿ ಯಾರಾದ್ರು ಕರಿಯಾಕ್ ಬಂದ್ರೆ ಅಲ್ಲಿ ನನಗೆ ಹಂತ ಹಂತವಾಗಿ ಕೆಲಸಮಾಡಿ ಕೊಡೋದಿಕ್ಕಾದ್ರು ಬೇಕಲ್ಲಪ್ಪ ? ಆಗಲಮ್ಮ. ಬರಬೇಕಾಗಿತ್ತು ಇಷ್ಟತ್ಗೆ. ಏನಾಯ್ತೊ ಎಂತಾಯ್ತೊ ಗೊತ್ತಾಗಲಿಲ್ಲಮ್ಮಾ. ಅವನು ಈಗ ಊಟ ಮಾಡಿ ಬೆಳಿಗ್ಗೆ ಅಷ್ಟತ್ಗೆ ಎದ್ದು ಊರ ಮುಂದ್ಲ ಬಾಳೇ ತ್ವಾಟಕ್ಕೆ ಹೋಗಿ ಕಪಲೆ ಹೊಡೀಂತ ಹೇಳಿಬಿಡಮ್ಮ. ಆಗಲಿ. ಸರಿ ಊಟ ಮಾಡ್ದ. ಬೆಳಿಗ್ಗೆ ಅಷ್ಟತ್ಗೆ ಎದ್ದು ಊರ ಮುಂದಗಡೇಲೆ ಬಾಳೆತ್ವಾಟ. ಅಷ್ಟತ್ಗೆ ಎದ್ದು ಕಪಲೆ ಹೊಡೆದುಬಿಡಣ್ಣ ಅಂತ ಹೇಳಿದ್ಲು, ಮನಿಕ್ಕಂಬುಟ್ಟ.

ಸಾವ್ಕಾರನಿಗು ಒಬ್ಬ ಮಗ ಇದ್ದ. ಮಗನಿಗು ಲಗ್ನ ಮಾಡಿದ್ರು. ಸೊಸೆ ಬಂದುದ್ಲು. ಇನ್ನು ಮಗ ಕೋಳಿ ಕೂಗೊ ಹೊತ್ಗೆ ಎದ್ದ. ಬೇರೆ ಜನಗಳನ್ನು ಕರಕಂದು ಬೇರೆ ತ್ವಾಟಕ್ಕೆ

ಕೆಲಸಕ್ಕೆ ಹೋದ. ಆಗ ಈಕೇನು ಏಳ್ಸಿದ್ಲು ಇವನ್ನ. ಏಳ್ಸಿ, ಹೋಗಪ್ಪ ಊರಮುಂದ್ಲ ಬಾಳೇ ತ್ವಾಟಕೋಗಿ ಕಪಲೆ ಹೊಡಿ. ಆದ್ರೆ ಕಪಲೆಯನ್ನು ಹೊಡಿಯೋದಕ್ಕೆ ಬರುತ್ತದೆಯೇ ಇವನಿಗೆ? ಸಪ್ಕಾರನ ಮಗನಾಗಿದ್ದೋನು. ಹತ್ತುಜನ ಆಳುಗಳ ಕೈಲಿ ಮಾಡಿಸ್ತಿದ್ದೋನು. ಆದ್ರೆ ಅವರು ಆರು ಹೊಡೀತಾಯಿದ್ರಲ್ಲಿ. ಅದ್ರಂತೆ ಹೊಡ್ದ. ಒಂದು ಬಾನಿ ನೀರು ಎತ್ತಿದ. ಆಯ್ಯೊಂತೇಳಿ ಬಿದ್ಬಿಟ್ಟ. ಬಾಳೆ ಸರುಕ್ಕೊಗಿ ಹಾಸ್ಗೆಂದ್ ಸುಖ್ವಾಗಿ ಮಲಗಿಬಿಟ್ಟ.

ಇತ್ಕಡೆ ಸೂರ್ಯ ಹುಟ್ಟಿ ಎಂಟ್‌ಗಂಟೆಯಾಗಿದೆ. ಸೊಸೆ ತನ ಗಂಡ ಯಾವ ಕಡೀಕ್ ಕೆಲಸಕ್ ಹೋಗಿದಾರೊ ಆ ಕಡೀಕ್ ತಿಂಡಿ ಪದಾರ್ಥ ತಗಂದ್ ಹೋದ್ಲು. ಎಂಟ್‌ಗಂಟೆಯಾದ ಮೇಲೆ ಸಪ್ಕಾರ್ರು ಬಂದಿದಾರೆ. ತಾಯಿ ?''ಏನ್ರಪ್ಪಾ?' 'ಆ ಮಗೀಗೆ ಊಟುಕ್ ಕೊಟ್ಟೇನವ್ವಾ? ' 'ಇಲ್ಲಪ್ಪಾ ಕೊಟ್ಟಿಲ್ಲ'. 'ಅಯ್ಯೊ ಕೊಡಬೇಕಮ್ಮ. ಅವ್ರು ಯಾತಕ್ಕೋಸ್ಕರ ಅಮ್ಮ ನಮ್ಮ ಮನೆಯಲ್ಲಿ ಕೆಲಸಕ್ ಬರೋದು ? ಕಷ್ಟಪಟ್ಟು ದುಡಿಯಾಕಲ್ಲೇನಮ್ಮ ? ಕೊಡಮ್ಮ ಮೊದಲು ಕಟ್ಟಿಕೊಡು'. ಇಲ್ಲಪ್ಪ ದೂರದ ಪ್ರದೇಶವಾದರೆ ನೀವು ಹೋಗಿ ಅಂತ ಹೇಳ್ತಾಯಿದ್ದೆ. ಊರ ಮುಂದ್ಗಡೆ ತ್ವಾಟಲ್ಲವಾ ನಾನೇ ಕೊಟ್ ಬರ್ತೇನಿ. ನನಿಗೆ ಕೆಲಸವಿಲ್ಲವಾಗಿದೆ. ಹೋಗಮ್ಮ ಹಾಗಾದ್ರೆ. ಕೊಟ್ಬಿಟ್ ಬಾ ಹೋಗಮ್ಮ. ಸರಿ ಆಗ ಕುಕ್ಕೆಯಲ್ಲಿ ಅನ್ನವನ್ನು ಮಡಿಕ್ಕಂಡ್ಲು. ಅದಕ್ಕೆ ಹಾಕ್ತಕ್ಕಂತ ಸಲಕರಣೆಗಳನ್ನೆಲ್ಲ ತೆಗೆದುಕೊಂಡು ಹೊಂಟ್ಲು. ಹೋಗಿ ನೋಡ್ತಾಳೆ ಮನಗಿಬಿಟ್ಟಿದ್ದಾನೆ ಮನುಷ್ಯ.

ಅಯ್ಯೋ ನಿದ್ದೆಯಲ್ಲಿ ಮಲಗಿದವನನ್ನು ಎಚ್ಚರಿಸಿದರೆ ಪಾಪ, ದೋಷ ಇದಕ್ಕೇನು ಗತಿಮಾಡ್ಲಿ? ಹಾಗೆಂದೋಳೆ ಏನ್ಮಾಡಿಬಿಟ್ಲು ? ಆ ಕುಕ್ಕೆಯನ್ನು ಅಲ್ಲೆ ಇಟ್ಟು, ಆ ಕಪಲೆಯನ್ನು ಕಟೆಗಂಡ್ ಅರ್ಧಾ ತ್ವಾಟುಕ್ ನೀರು ಹೊಡದ್ಲು. ಅಷ್ಟತ್ಗೆ ಎಚ್ಚರವಾಯ್ತು. ಎದ್ದ. ಮನಿಗಿಬಿಟ್ಟುದ್ದಯ ಮಾರಾಯ. ನಾನು ಬರೋವತ್ಗೆ ಸರಿಹೋಯ್ತು. ಇಲ್ಲ ನಮ್ಮ ತಂದೆಯೇನಾದ್ರು ಬಂದುದ್ರೆ ಗತಿಯೇನಪ್ಪ? ಆಗಂತೇಳಿಬಿಟ್ಟು ತಂದಿರತಕ್ಕಂತ ಊಟವನ್ನು ಊಟಮಾಡಲು ಕೊಟ್ಟು. ಅನ್ನವನ್ನಿಕ್ಕಿದ್ದಾಳೆ. ಕಲಸಿಕೊಂಡು ಬಾಯಲ್ಲಿ ತುತ್ತಿಟ್ಟುಕೊಂಡಿದ್ದಾನೆ. ತುತ್ತಿಟ್ಟುಕೊಂಡಾಗ ಹನ್ನೆರಡುಗಂಟೆ ಬರಾಬರಿ ಆಯ್ತು. ಹನ್ನೆರಡು ಗಂಟೆ ಹೊತ್ತಾದ್ದರಿಂದ ತನ್ನ ತಾಯಿಯ ನೆನಪಾಯ್ತು. ಅಮ್ಮ ಹನ್ನೆರಡುಗಂಟೆ ಹೊತ್ತಿಗೆ ಎಲ್ಲಿದ್ರು ಭಿಕ್ಷೆ ಬೇಡಿಯಾದ್ರು ತಂದು ನಿನ್ನಲ್ಲಿ ಇರ್ತೇನಿ ಅಂತ ಹೇಳಿದ್ದೆನಲ್ಲಮ್ಮಾ ಅಂತ ತಾಯಿ ನೆನಪು ಬಂದದ್ದರಿಂದ, ಎರಡೂ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರದ್ವು. ಆಗ ಆಯ್ಯಯ್ಯೊ ಯಾಕಪ್ಪ ಅಳ್ತಾಯಿದ್ದೀ ? ನಾನೇನು ಅನ್ಲಿಲ್ವಲ್ಲಾ ? ಅಯ್ಯೊ ನೀವೇನರ ಅಂದ್ರೂಂತ ನಾನು ಅಳ್ತಾಯಿಲ್ಲ. ನಾನು ಊಟಮಾಡುವಾಗ ನನ್ನ ತಾಯಿ ನೆನಪು ಬಂತು. ಅದಕ್ಕೆ ಅಳ್ತಾ ಇದ್ದೀನಿ ಅಂದ. ಅಪ್ಪಾ ಯಾವೂರಲ್ಲಪ್ಪ ಇರದು ? ನನ್ನ ಕೂಟ ಹೇಳು. ನಿನ್ನಲ್ಲಿರತಕ್ಕಂತಹ ಗುಟ್ಟಾದ ರಹಸ್ಯಾನು ಮುಚ್ಚಿಡಬೇಡ. ಏನೂಂತ ವಿಚಾರ ಖಂಡಿತವಾಗಿ ಹೇಳಪ್ಪಾ. 'ಅಯ್ಯೋ ಹುಚ್ಚಿ ಏನು ಹೇಳಬೇಕಾಗಿದೆ?' ನಿನ್ನನ್ನು ಲಗ್ನವಾದ ಮೂರು

ದಿವಸದಲ್ಲೆ ನನ್ನ ತಂದೆ ತೀರಿದ್ದರಿಂದ, ನಮ್ಮ ಸಕಲೈಶ್ವರ್ಯವೆಲ್ಲ ಅದೃಶ್ಯವಾಗೋಯ್ತು. ಆಗ ಹೊಲಮನೆ ಮಠಗಳನ್ನು ಅವರಿವರು ಕಿತ್ತುಕೊಂಡ್ರು. ಒಂದು ಹುಲ್ಲಿನ ಜೋಪಡಿ ಮಾತ್ರ ಉಳಕಂತು. ನಮ್ಮ ತಾಯಿ ಎಲ್ಲ ನೋಡಲಾರದೆ ಕಣ್ಣುಮುಚ್ಚಿಕೊಂಡು ಕುಳಿತರು. ನಮ್ಮ ತಾಯಿಗೋಸ್ಕರವಾಗಿ ನಮ್ಮ ಪಟ್ಣದಲ್ಲಿ ಮೂರು ತಿಂಗಳು ಭಿಕ್ಷಾಟನೆ ಮಾಡ್ದೆ. ನಿನ್ನೊಬ್ಬ ಪರೀಕ್ಷೆ ಮಾಡ್ಬೇಕಾಗಿತ್ತು. ಇಷ್ಟಾಯ್ತು.

ಆಗ ಎತ್ತು ಕಪಲೆಗಳನ್ನೆಲ್ಲ ಬಿಚ್ಚಿಬಿಟ್ಲು. ಗಂಡನ್ನ ಕರಕಂದ್ ಬರ್‍ತಾಯಿದ್ಲು. ಅವತ್ತಂದು ಗಂಡನ ಅನಬೇಕಾದರೆ ಬಯಸಿದ್ದಾಯ್ತು. ಇವತ್ತು ಕಂಡು ಹಾಗಿರಾಕೆ ಆಗುತ್ತೆಯೇ ? ನೀನು ಹಿತ್ಲು ಬಾಗಲ್ಲಲ್ಲಿ ಬಾ ಅಂದ್ಲು. ತಂದೆ ಮುಂದಿನ ಬಾಗಲಲ್ಲಿ ಕೂತಿದ್ದಾನೆ. ಆಗ ನೆನೀಬಾರ್‍ದ್ದೀನ್ ಕರ್‍ಸಿ, ಇವನ ಗಡ್ಡ ಮೀಸೆಗಳನ್ನೆಲ್ಲ ತಗಸಿ, ಆತನ ಸ್ನಾನ ಮಾಡ್ಸಿ, ಅಣ್ಣನ ಬಟ್ಟೆ ಬರೆಗಳನ್ನು ಉಟ್ಟುಕೊಳ್ಳಾಕ್ಕೆ ಕೊಟ್ಟಿದ್ದಾಳೆ. ನೋಡಿ ಆ ಮಂಚದ ಮ್ಯಾಲೆ ಮನಿಕ್ಕಳಿ ನಾ ಮಲಗೋ ಮಂಚದ ಮ್ಯಾಲೆ. ಹೋಗಿದ್ದಾನೆ ಸುಖವಾಗಿ ಮಲಗಿದ್ದಾನೆ. ತಲೆಯನ್ನು ಬಾಚ್ತಾ ಹೂವನ್ನು ಮುಡೀತಾ 'ಅಪ್ಪಾ?' ''ಏನಮ್ಮ ?' 'ಅಲ್ಲಪ್ಪ ನಾನು ಹೋಗ್ತೇನಿ'. 'ಎಲ್ಲಿಗೋಗ್ತಿಯಮ್ಮ ?' 'ಅದೇ ನನಗಂಡನ ಮನೆಗೆ ಹೋಗ್ತೇನಿ' 'ಅನತಕ್ಕಂತ ವಿಚಾರವು ಗೊತ್ತಾಗಲಿಲ್ಲ. ನನಗಂಡನ ಮನೆಗೆ ಹೋಗ್ತೇನಿ ಅಂತಿಯಲ್ಲಮ್ಮ ? ಯಾರಮ್ಮ ಬಂದಿರೋರು? 'ಅವರೆ ಬಂದಿದ್ದಾರಪ್ಪಾ' ಎಲ್ಲಿದ್ದಾರೆ ? 'ನೋಡಿ ಅಲ್ಲಿ ಮಲಗಿದ್ದಾರೆ.' ಆದ್ಯಾವಾಗಮ್ಮ ಬಂದ್ರು ? ಆದ್ರೆ ಇವನ ಗಡ್ಡ ಮೀಸೆಗಳನ್ನು ತೆಗೆಸಿದ್ರು. ಅಷ್ಟತ್ಗೆ ಇವನಿಗೆ ಆ ಬಣ್ಣ ಬರಬಲ್ಲದೆ ? ಏನು ಈ ಮನ್ಸ ನಿನ್ನೆ ಕೂಲಿಗೆ ಬಂದ ಹಾಗಿತ್ತಲ್ಲ ? ಹಾಗಂತ ವಿಚಾರ ಮಾಡೋದ್ರೊಳಗಾಗಿ ಇವನ ವಿಚಾರಗಳೆಲ್ಲವು ಗೊತ್ತಾಯ್ತು. ಈಕೆ ಗಂಡನ ಮನೆಯವರೆಲ್ಲ ಭಿಕ್ಷುಕರಾಗಿದ್ದಾರೆ ಅನ್ನತಕ್ಕಂತ ವಿಚಾರ ಇವರಿಗೆಲ್ಲ ಗೊತ್ತಾಯ್ತು. ಗೊತ್ತಾದ ಮೇಲೆ ಅಯ್ಯೊ ನನ್ನ ಮಗಳು ಸುಖ ಸಂಪತ್ತಿನಿಂದ ಬದುಕ್ಲಿ ಅಂತೇಳಿಬಿಟ್ಟು ಘನಪುಣ್ಯವಂತರ ಮನಿಗೆ ಕೊಟ್ಟೆ. ಅದು ನನ್ನ ಮಗಳ ಹಣೆಯಲ್ಲಿ ಬರೆದಿಲ್ಲ. ನಾನೇನ್ ಮಾಡಾಕಾಗುತ್ತೆ ?

ಹಾಗೇಂತ ಹೇಳಿಬಿಟ್ಟು, ಹತ್ತಾರು ಗಾಡಿಗಳನ್ನು ಕಟ್ಟಿಸಿ ಆ ಗಾಡಿಗಳಿಗೆ ಅಕ್ಕಿ ಬೆಲ್ಲ ತುಪ್ಪ ತೈಲ ಎಲ್ಲವುಗಳನ್ನು ಕಟ್ಟಿಸಿ ನಿಲ್ಲಿಸಿದ. ಎಲ್ಲ ಸಾಲಿಗೆ ನಿಂತುದಾವೆ. ಮಗಳು ಈಚೆಗಡೆ ಬಂದು ನೋಡಿದ್ಲು. ಇವೇನಪ್ಪಾ ಇವೆಲ್ಲ? ನಿನಿಗೋಸ್ಕರವಮ್ಮ. ಇದುನ್ನೆಲ್ಲ ಹೊಡಿಸ್ಗಂದ್ ಹೋಗಿ ನಿಮ್ಮ ಗಂಡನ ಊರಲ್ಲಿ ಇಳಿಸಿಕೊಂಡು ಸುಖ ಸಂತೋಷ್ದಿಂದ ಇರಮ್ಮ. ನಾನು ಕಾಲಾಂತರದಲ್ಲಿ ಬಂದು ನಿನಿಗೆ ಏನು ಮಾಡಬೇಕೂಂತ ಇದೆಯೊ ಅದನ್ನ ನಾನು ಮಾಡ್ತೇನಮ್ಮ. 'ಅಪ್ಪಾ ನನ್ನ ಮಾವರ ಅಷ್ಟೈಶ್ವರ್ಯವೆಲ್ಲ ಹೋಯ್ತು. ನೀವು ಕೊಡೋದೆಲ್ಲ ಎಷ್ಟ್ ದಿವ್ಸಾ ಕೊಡ್ತೀಯ ? ಈ ಭರ್ತಿಗಾಡಿಗಳನ್ನು ಅಲ್ಲಿಗಂಟ ಹೊಡೆಸಿದ್ರೆ, ಅದೇ ಭರ್ತಿಗಾಡಿಗಳನ್ನು ತಿರಗ ಮನೆಹತ್ರ ತರಬೇಕೆನಪ ? 'ಒಬ್ಬಳೇ ಮಗಳೂಂತೇಳಿ ಪ್ರೇಮಕೋಸ್ಕರವಾಗಿ ನಿನ್ನನ್ನು ಸಾಕಿ, ಬೇಕಾದಷ್ಟು ಐಶ್ವರ್ಯದಿಂದ ಬೆಳಸಿರತಕ್ಕಂತ ನೀನು,

ಯಾಕಮ್ಮ ಹಾಗಂತಾಯಿದ್ದೀಯ ? ಇಲ್ಲ ಅರ್ಧ ಆಸ್ತಿ ಬೇಕೆ ? ಇಲ್ಲ ಹತ್ತು ಸಾವ್ರ ರೂಪಾಯಿ ಬೇಕೆ ? ಏನು ಬೇಕೂಂತ ಕೇಳು ತಾಯೀ. ಅದನ್ನು ನಾನು ಕೊಡುತೀನಿ. 'ಅಯ್ಯೋ' ಅಪ್ಪಾ ಮಗಳೂಂತ ಪ್ರೇಮೇಕ್ಕೋಸ್ಕರವಾಗಿ ಬೇಕಾದಷ್ಟು ವಡವೆ ವಸ್ತುಗಳನ್ನು ಮಾಡಿಸಿ ಕೊಟ್ಟಿದಿಯಲ್ಲ ? ಅವನ್ನೂ ಸಹ ನಾನು ತಗಂಡು ಹೋಗ್ತಕಂತವಳಲ್ಲ. ನನ್ನ ಗಂಡನ ಮನೇದು ಎಷ್ಟಿದೆಯೋ ಅಷ್ಟನ್ನು ತೆಗೆದುಕೊಡು ಹೋದೋಳೆ ವಿನಃ ಇನ್ನೇನನ್ನು ತೆಗೆದುಕೊಂಡು ಹೋಗ್ತಕ್ಕಂತವಳಲ್ಲ. ಅಪ್ಪಾ ಮೈಗೆ ಸಲ್ಲತಕ್ಕಂತ ತಂದೆಮನೆ ಭಾಗ್ಯ ಯಾವ್ದೂನ್ನದಾದ್ರು ಗೊತ್ತಿದೆಯೇನಪ್ಪಾ ? ನಾನು ನನ್ನ ಗಂಡನ ಮನೆಗೆ ಹೋಗತಕ್ಕಂತ ಕಾಲದಲ್ಲಿ ನನ್ನ ತಾಯಿ ನನಗೆ ಆಶೀರ್ವಾದ ಮಾಡಿ ಒಂದೇ ಒಂದು ಪಾವು ಮಡ್ಲಕ್ಕಿ ಹಾಕ್ತಾರಲ್ಲ, ಅಷ್ಟೊಂದು ಸಲ್ತಕಂತಾದೆ ಹೊರ್ತು, ಯಾವ ಭಾಗ್ಯ ಕೊಟ್ರು ಸಲ್ಲದೂಯಿಲ್ಲ. ನಾ ತಗಂಡ್ ಹೋಗಾದು ಇಲ್ಲ.

ತನ್ನ ತಾಯಿತಾವ ಬಂದಿದ್ದಾಳೆ. "ಅಮ್ಮಾ?" "ಬಾ ತಾಯಿ". "ನಾನು ಗಂಡನ ಮನೆಗೆ ಹೋಗ್ತಾ ಇದ್ದೇನೆ. ನನ್ನ ಆಶೀರ್ವಾದ ಮಾಡಿ ಕಳ್ಸಮ್ಮ. ಆದ್ರೆ ಸುಖ ಸಂತೋಷ್ದಿಂದ ಬೆಳೆದಿರತಕ್ಕಂತ ಮಗಳು ಆ ನಿರ್ಗತಿಕರಾಗಿರತಕ್ಕಂತವರ ಮನೆಯಲ್ಲಿ ಹೋಗಿ ಏನು ಕಷ್ಟ ಪಡ್ತಾಳೋ ಹಾಗೇಂತೇಳಿದ ತಾಯಿ ಮಗಳಿಗೆ ಆಶೀರ್ವಾದ ಮಾಡಿ, ಒಂದು ಪಾವು ಮಡ್ಲಕ್ಕಿ ಇಕ್ಕೋತಾವ ಒಂದ್ ಸೇರು ಮಡ್ಲಕ್ಕಿ ಇಕ್ಕಿದ್ಲು. ಇದರಿಂದಲಾದ್ರು ನನ್ನ ಮಗಳು ಕೆಲದಿವಸ ಕಾಲಮಾಡ್ಲಿ ಅಂದು. ಆಗ ಅದುನ್ನ ತಗಂಬುಟ್ಳು. ತನ್ನಗಂಡನ್ನ ಕರಕಂದ್ ಹೋಗಿಬಿಟ್ಲು.

ಸೀದ ತನ್ನ ಅತ್ತೆ ಎಲ್ಲಿ ಕಣಿಮುಚ್ಗೆಂದ್ ಕೂತಿದಾಳೊ ಅಲ್ಲಿಗೋಗಿ ತನ್ನ ಅತ್ತೆ ಪಾದುಕ್ ನಮಸ್ಕಾರ ಮಾಡಿದ್ಲು. ಬಂದೆಯಾ - ಬಂದೆಯಾ ತಾಯಿ ಘನ ಪುಣ್ಯವಂತರ ಮಗಳು, ನಿರ್ಗತಿಕರಾದ ನಮ್ಮನ್ನು ನೋಡೋದಕ್ಕೊಸ್ಕರವಾಗಿ ನೀನು ಇಲ್ಲಿಗೆ ಬಂದೆಯಲ್ಲ? ನೀನೇ ಪತಿವ್ರತೆ. ಅಯ್ಯೋ ದೇವರೇ ನಾವು ತಂದಿರತಕ್ಕಂತ ಕರ್ಮಾವಶೇಷಗಳನ್ನು ನಾವು ನಾವು ಅನಬೋಯಿಸಬೇಕೇ ವಿನಃ ಇದನ್ನ ಯಾರಿಗೆ.ಕೊಟ್ರು ಇಸ್ಕೊಳ್ಳೊದಿಲ್ಲ. ಹಾಗೇಂತ ಏನ್ಮಾಡಿದಾಳೆ ? ಆ ಹುಲ್ಲು ಜೋಪ್ಡಿಯೊಳಗೆ ನೋಡ್ತಾ ಇದ್ದಾಳೆ. ಹೆಗ್ಗಣ ಮಣ್ಣು ಅಡಕಿದೆ. ಆಗ ಆ ಒಲೆಮ್ಯಾಲಿನ ಮಣ್ಣನ್ನು ಒರೆಸಿ ಗುಡಿಸಿಬಿಟ್ಟು ಒಂದು ಪಾವಕ್ಕಿ ಅನ್ನ ಒಲೆಮ್ಯಾಲಿಟ್ಟು ಗಂಜಿಯನ್ನು ಮಾಡಿ. ಆ ಗಂಜಿಯನ್ನು ಬಸ್ದು ಬೇರೆ ಇಟ್ಟುಬಿಟ್ಟು, ತನ್ನ ಅತ್ತೆ ತನ್ನ ಗಂಡನನ್ನು ಕುಂಡಿರಿಸಿಕೊಂಡು ಊಟುಕ್ ಬಡಿಸ್ತಾಳೆ; ತಾನು ಬಂದು ಗಂಜಿ ಕುಡುದಳು.

ಆಗ ಅರಮನೆಯನ್ನು ಕ್ಲೀನ್‌ಮಾಡಿಕೊಳ್ಳೊದುಕ್ಕೋಸ್ಕರವಾಗಿ ಹೆಗ್ಗಣದ ದೋರಿನಮಣ್ಣನ್ನ ಹೊರ್ತಾಯಿರ್ತಾಳೆ. ಕೃಷ್ಣಪರಮಾತ್ಮ ನೋಡಿದ; ಲಕ್ಷ್ಮಿಯನ್ನು ಕರೆದು. ಲಕ್ಷ್ಮೀ ನೋಡು. ಒಂದುದಿವಸ ಬೆಳಕುತೋರ್ಸಿ ಮತ್ತೊಂದಿವಸ ಕತ್ತಲು. ಆ ಸಾಧ್ವಿಮಣಿ ಮಾಡ್ತಕ್ಕಂತ ವಿಚಾರನಾದ್ರು ನೋಡು ಲಕ್ಷ್ಮಿ ಹಾಗೆಂದ. ಆದ್ರೆ ಕೃಷ್ಣ ಪರಮಾತ್ಮ

ವಾಹನವಾಗಿರತಕ್ಕಂತ ಯಾವ ಗರುಡಸ್ವಾಮಿ ಅಪ್ಪಣೆ ಕೊಟ್‌ಬಿಡಿ. ಈಗಿಂದೀಗಲೆ ಹೋಗಿ ಆಕೆಗೆ ಐಶ್ವರ್ಯ ಕೊಟ್ ಬಂಧ್ಬಿಡ್ತೇನಿ. ಹೋಗು ಗರುಡ ಹೋಗು ಆಕಿಗೆ ಐಶ್ವರ್ಯ ಕೊಟ್ ಬಂಧ್ಬಿಡು ಅಂದ.

ಗರುಡ ಹಾರಿ ಬರ್ತಾಯಿದ್ದಾನೆ. ಆ ಪಟ್ಣದ ದೊರಿ ಹೆಂಡ್ತಿ ಹೊಳೆ ಹತ್ರ ಸ್ನಾನ ಮಾಡೋದಕ್ಕೋಸ್ಕರವಾಗಿ ಬಂದ್ಲು; ನವರತ್ನ ಖಚಿತವಾಗಿರತಕ್ಕಂತ ಪದಕವನ್ನು ದಡದಲ್ಲಿ ಬಿಚ್ಚಿಟ್ಟು ಸ್ನಾನ ಮಾಡ್ತಾಯಿದ್ದಾಳೆ. ಇವಳಿಗೆ ಬೆಂಗಾವಲಿಗೋಸ್ಕರವಾಗಿ ಬೇಕಾದಷ್ಟು ಸೈನ್ಯ ಬಲಭಾಗದಲ್ಲಿ ಕಾದು ನಿಂತಿದೆ. ಗರುಡ ಹಾರಿ ಬರ್ತಾಯಿದಾನೆ. ಆದ್ರೆ ಆಕೆ ಬಿಚ್ಚಿಟ್ಟಿರತಕ್ಕಂತಹ ನವರತ್ನ ಖಚಿತವಾದ ಪದಕವನ್ನು ನೋಡಿ ರಾಚ್ಯುಪಲ್ಲವಾದ ಪದಾರ್ಥ ಪಳಪಳನೆ ಹೊಳಿತಾಯಿದೆ. ಇದನ್ನು ಹಾರಿಸ್ಕೊಂಡೋಗಿ ಅವಳ ಮನೆ ಮುಂದೆ ಬಿಟ್‌ಬಿಟ್ರೆ ಸುಖ ಸಂತೋಷದಿಂದ ಬದಿಕ್ಕಂತಾಳೆ ಹಾಗೇಂತೇಳಿಬಿಟ್ಟು, ಆ ಗರುಡ ಬರ್‍ರನೆ ಬಂದೋನು ಆ ಪದಕವನ್ನು ಹಾರಿಸ್ಕೊಂಡು ಬಿಡ್ತು. ಇಲ್ಲಿ ಇವಳು ಮಣ್ಣು ಹೊತ್ಕಂದ್ ಬಂದಿದಾಳೆ. ಇವಳ ಬಾಕಲಿಗೆ ಸರೀಗ್ ಅದು ತಂದು ಬಿಡ್ತು. ಇವಳು ಮಣ್ಣುಹೊತ್ಕೊಂಡ್ ಬಂದೋಳು ಬಾಗಿಲಲ್ಲಿ ಬಿಟ್ಟಿತ್ತಲ್ಲ ? ಈ ಪದಕ ನೋಡಿದ್ಲು. ಅಯ್ಯೋ ನಮ್ಮ ಮಾವನ ಐಶ್ವರ್ಯ ಅಷ್ಟಿದ್ದುದ್ದು ಅದೃಶ್ಯವಾಗಿ ಹೋಯ್ತಲ್ಲ. ಇದೊಂದು ಯಾಕಪ್ಪ ಉಳಕಂತು ? ಹಾಗೇಂತೇಳಿಬಿಟ್ಟು, ಆ ಮಣ್ಣಿನ ಜೊತೆಗೆ ಅದನ್ನು ಕೆರಕಂದ್ಲು. ಆ ಮಣ್ಣಿಗೆ ತಗಂದೋಗಿ ಹಾಕಿದ್ಲು. ಇತ್ಕಡೆ ಮಹಾರಾಣಿ ಪದಕವನ್ನು ಗರುಡ ಅಪಹರಿಸ್ಕೊಂದೋಯ್ತು ಅಂತಕಂತ ವಿಚಾರ ಮಹಾರಾಜರಿಗೆ ಯಾವಾಗ ಗೊತ್ತಾಗೋಣ, ಅಯ್ಯೋ ಅದೇನ್ ತಿನ್ನೊ ಪದಾರ್ಥವೇ ಎಲ್ಲೊ ಈ ಪಟ್ಣದಲ್ಲಿ ತಗಂದೋಗಿ ಬಿಟ್‌ಬಿಟ್ಟಿದೆ ಅಂದ್ರು. ಆದ್ರೆ ತನ್ನ ಆಳುಗಳನ್ನು ಬಿಟ್ಟು ಮನೆಮನೆಯನ್ನೆಲ್ಲ ಚೆಕ್ ಮಾಡಿಸ್ದಾ. ಚೆಕ್ ಮಾಡಿಸ್ತಾ ಹೋದಾಗ ಇವಳ ಪಕ್ಕದಮನೇಲಿ ಚೆಕ್ ಮಾಡ್ತಾಯಿದಾರೆ. ಅಮ್ಮಾ ಮಹಾರಾಣಿದೊ ಮಹಾರಾಜುನದೊ ಅದು ಮಾತ್ರ ಗೊತ್ತಿಲ್ಲ. ನಾನು ಒಳಗಿಂದ ಮಣ್ಣು ಹೊರ್ತಾ ಇದ್ದಾಗ ಬಾಕ್ಲಲ್ಲಿ ಬಿದ್ದಿತ್ತು. ಅದನ್ನ ತಕ್ಕಂಡೋಗಿ ಆ ಮಣ್ಣಿನ ಜೊತೆನೆ ಹಾಕಿಬಿಟ್ಟೆ ಅಂದಳು.

ಈ ವರ್ತಮಾನ ಮಹಾರಾಜರಿಗೆ ಮುಟ್ತು. "ಏನು ಸಿಕ್ಕಿದರೆ ಸಾಕೂಂತ ಇರುವಾಗ ಅದನ್ನ ತಗಂದೋಗಿ ಮಣ್ಣಿಗಾಕೋದು ಎಲ್ಲಾದ್ರು ಉಂಟೇ ? ಇದನ್ನ ಪ್ರತ್ಯಕ್ಷವಾಗಿ ನೋಡ್ಬೇಕೂಂತೇಳಿ ಮಹಾರಾಜ್ರು ಬಂದ್ರು. ತಾಯಿ ? ಏನ್ ಸ್ವಾಮಿ ? 'ನಿನಿಗೆ ಪದಕ ಸಿಕ್ಕಿದೆಯಂತೆ ನಿಜವೇ ತಾಯಿ ? 'ಸ್ವಾಮಿ ಅದು ನಿಮ್ದೊ ಅಥವಾ ಬೇರೆ ಯಾರ್ದೊ ಗೊತ್ತಿಲ್ಲ. ಬಾಕ್ಲಲ್ಲಿ ಬಿದ್ದಿತ್ತು. ಅದ ತಗಂದೋಗಿ ಮಣ್ಣಿಗೆ ಎಸ್ದೆ. ಮಣ್ಣು ಹೊತ್ತಾಕ್ತಾಯಿದ್ನೆಲ್ಲ ? ಆ ಮಣ್ಣಿನ ಜೊತೆ ಅದನ್ನು ಹಾಕಿಬಿಟ್ಟೆ" ಅಂದ್ಲು.

ಆಗ ಮಣ್ಣನ್ನ ತೆಗೆಸಿ ನೋಡಿದರಂತೆ. ಅದರಲ್ಲಿ ಪದಕ ಇತ್ತಂತೆ. ತಾಯಿ ಪರರ ಸೊತ್ತಿಗೆ ಆಸೆ ಮಾಡದಂತ ಪತಿವ್ರತಾ ಶಿರೋಮಣಿ ನನ್ನ ರಾಜ್ಯದಲ್ಲಿದ್ದಾಳೆ ಅನ್ನೋದು

ಇವತ್ತಿನ ದಿವಸ ನನಗೆ ಗೊತ್ತಾಯ್ತು. ಅಮ್ಮ ನಿನ್ನಂಥ ಪತಿವ್ರತಾ ಇರೋದ್ರಿಂದ ಸಕಲೈಶ್ವರ್ಯವನ್ನು ದಾನವಾಗಿ ಕೊಡ್ತೇವಿ. ನನ್ನಲ್ಲಿ ಮೂರು ಪ್ರಶ್ನೆಗಳನ್ನು ಏನು ಬೇಕಾದರೂ ಕೇಳು ತಾಯೀ. ನೀವು ಕೊಟ್ಟ ಭಾಗ್ಯವೆಲ್ಲ ಇದೆ. ನನಗೇನೂ ಬ್ಯಾಡ. ಕ್ಷಾತ್ರವಂಶದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದರೆ ದೋಷಾಂತ ಹೇಳ್ತಾರೆ. ಆದ್ರಿಂದ ನನ್ನಲ್ಲಿ ಮೂರು ಪ್ರಶ್ನೆಗಳನ್ನು ನೀನು ಏನು ಬೇಕಾದರೂ ಕೇಳು, ಖಂಡಿತವಾಗಿಯೂ ಕೊಡುತ್ತೇನೆ. ಒಳ್ಳೆ ಗ್ರಹಚಾರಕ್ಕೆ ಬಂತಲ್ಲ ? ಇವರಲ್ಲಿ ಮೂರು ಪ್ರಶ್ನೆ ಏನ್ ಕೇಳ್ಳಿ ನಾನು ? ಸ್ವಾಮಿ ಹಾಗಿದ್ದಪಕ್ಷದಲ್ಲಿ ಒಂದ್ ಕೆಲ್ಸ ಮಾಡಿ. ಸಾಯಂಕಾಲ ಆರುಗಂಟೆಯಿಂದ ಹಿಡಿದು ಬೆಳಗಿನ ಆರುಗಂಟೆವರೆಗೂ ಒಬ್ರು ಮನೆ ಜ್ಯೋತಿ ಉರಿಕೂಡ್ದು. ಒಬ್ರ ಮನ್ಯಾಗು ಕದ ತೆಗೀಕೂಡ್ದು. ಮೂರು ಪ್ರಶ್ನೆ ತಾನೆ ನೀವು ಕೇಳಿಂತ ಹೇಳಿದ್ದು ? ಮೂರು ದಿವಸಕಾಲ ಕೊಟ್‌ಬಿಡ್ರಿ. ಬೆಳಿಗ್ಗೆ ಆರುಗಂಟೆಯಿಂದ ಸಂಜೆ ಆರು ಗಂಟೆವರೆಗು ಏನ್‌ಬೇಕಾದ್ರು ಮಾಡ್ಕಳ್ಳಿ. ಸಂಜೆ ಆರುಗಂಟೆಯಿಂದ ಬೆಳಿಗ್ಗೆ ಆರುಗಂಟೆತನಕ ಕದ ತೆಗೆದಿರಕೂಡದು. ಮೂರು ದಿವಸ ಕಾಲ ಆಗಲಮ್ಮ. ಇದು ಒಪ್ಗೆ. ಆದ್ರೆ ಎಲ್ಲಾರ ಮನೆ ಹಾಕ್ಸಿದ್ರೆ ನಿನಗೆ ಬರತಕ್ಕಂತ ಭಾಗ್ಯ ಏನು ? ನೀನ್ ಕೇಳಿದಷ್ಟೆ ಕೊಡಬೇಕಾದ್ದು ನಂದೂಂತೇಳಿ ತನ್ನ ಪಟ್ಟದಲ್ಲಿ ಡಂಗೂರ ಸಾರ್ಸಿಬಿಟ್ಟ.

ಈಕೆ ಮನೆ ಸಾರಿಸಿಬಿಟ್ಳು. ರಂಗೋಲೆಯನ್ನು ಬಿಟ್ಳು. ಒಂದ್‌ಕೈಲಿ ಕಸಬರಿಗೆ, ಒಂದ್ ಕೈಲಿ ನೀರ ಹಿಡ್ಕಂಡು ಬಾಕಲಿಗೆ ಬಂದಳು. ಬಾಕಲಲ್ಲಿ ಕುತಗಂದ್ಲು. ಸರಿ ಇನ್ನ ಅರಮನೆ ಲಕ್ಷ್ಮಿ ಹೊರಸಂಚಾರಕ್ಕೆ ಹೋಗಿದ್ದೋಳು ಬಂದಿದ್ದಾಳೆ; ಬಂದು ನೋಡ್ತಾಳೆ. ಅರಮನೆಯೆಲ್ಲ ಬಂದಾಬಸ್ತಾಗಿ ಹೋಗಿಬಿಟ್ಟಿದೆ. ಆ ಪಟ್ಣವನ್ನೆಲ್ಲ ಸುತ್ಕಂದು ಬಂದಿದ್ದಾಳೆ. ಕಡೆಗೆ ಹಂತಿಭಾಗದ ಮನೆ. 'ಏನ್ ತಾಯಿ ನೀನಾದ್ರು ದೀಪವನ್ನಿಟ್ಟು ಕೊಂಡಿದ್ದೀಯಲ್ಲ?' ಅಂತಾಳೆ. ಈಕೆ 'ಒಂದೆಜ್ಜೆ ಕಾಲಿಟ್ರೆ ನೀನು ಕಸಬರೀಗೇಲೇಟು' ಅಂದ್ಲು. 'ಅಯ್ಯೊ ಹುಚ್ಚಿ. ನನಿಗೋಸ್ಕರ ಪ್ರಪಂಚದಲ್ಲಿ ಬೇಕಾದಷ್ಟು ಪೂಜೆ ಮಾಡ್ತಾರೆ. ನಾನಾಗಿ ಬಂದ್ರೂ ಹೊಡಿತಾ ಇದ್ದೀಯಲ್ಲ ?' 'ಇಲ್ಲ ನಿನ್ನನ್ನು ನಾನು ಬಯಸಾದು ಇಲ್ಲ. ನೀನು ಬರಲೂಬ್ಯಾಡ.' ಆಗ ಕೃಷ್ಣಪರಮಾತ್ಮನಲ್ಲಿ ಹೋದಳಂತೆ. ಏನಪ್ಪ ನಿನ್ನ ಭಕ್ತಳ ಮನಿಗೆ ಹೋಗಾಕ್ ಹೋದ್ರೆ, ನನಗೆ ಕಸಬರಿಗೇಲಿ ಏಟು ಕೊಡ್ತಾಳೆ ? ಹಾಗಲ್ಲ ಲಕ್ಷ್ಮಿ ಇಂದು ಬೇಡ ನಾಳೆ ರಾತ್ರಿಗು ಹೋಗು.

ನಾಳೆ ರಾತ್ರಿಗು ಬಂದಿದ್ದಾಳೆ ಹಾಗೆಯೇ. ಆಗದುಲ್ಲ ಸ್ವಾಮಿ. ನಿನ್ನ ಭಕ್ತಳ ಮನಿಗೆ ಹೋಗಾಕ್ ಸಾಲ್ದು. ಹಾಗಾದ್ರೆ ನಡಿ ಮೂರ್ನೆ ರಾತ್ರಿಗೆ ನಾನು ನಿನ್ನ ಜೊತೇಲೆ ಬರ್ತೇನಿ. ದೇಶಾಂತರದಿಂದ ದಾರಿ ಕಾದಂತೆ ಬರತೀನಿ ನಾನು. ಬನ್ನಿ ಸ್ವಾಮಿ. ಪತಿಕಂಡು ಪ್ರಮಾಣಿಸು, ರುಚಿಕಂಡು ಊಟ ಮಾಡೂಂತೇಳಿ ಶಾಸ್ತ್ರ ಹೇಳುತ್ತಾರೆ. ಕಣ್ಣಾರೆ ಕಂಡ್ರೆ ತಾನೆ ನಿಮಗೆ ಗೊತ್ತಾಗುತ್ತೆ? ಹಾಗೆಯೇ ಮೂರನೇ ರಾತ್ರಿ ಯಾವ ಕೃಷ್ಣ ಪರಮಾತ್ಮ ದಾರಿಕಾದಂತೆ ಲಕ್ಷ್ಮಿ ಜತೆ ಬಂದ. 'ಮೊನ್ನೆ ರಾತ್ರಿ ಲಕ್ಷ್ಮಿ ಬಂದಿದ್ದಾಳೆ. ಬಿಡಮ್ಮ ನಿನ್ನ ಮನಿಗೆ ಬರಬೇಕಂತ ಆಸೆಯಿದೆ ಬಿಡು ತಾಯೀ.' 'ಇಲ್ಲ ಸೆನಿಯೊಂದೆಜ್ಜೆ ಕಾಲಿಟ್ರೆ ಮಾತ್ರ ನಿನಿಗೆ ಕಷ್ಟ ಬರಲೇಳು. ಆಗ ದೇಶಾಂತರದಲ್ಲಿರತಕ್ಕಂತ ಪರಮಾತ್ಮನು ಯಾಕೆ ತಾಯೀ ಬ್ಯಾಡಾಂತಿ ಯಾಕಮ್ಮ?'

'ಬ್ಯಾಡಿ ಆ ಬೆಳಕು ಅನತಕ್ಕಂತ ಐಶ್ವರ್ಯಕ್ಕಿಂತಲೂ ಕತ್ತಲು ಅನ್ನತಕ್ಕಂತ ಬಡತನವೇ ಸ್ಥಿರವಾಗಿರಲಿ'. 'ಹಾಗಲ್ಲ ತಾಯೀ. ನೀನು ಹಿಡಿದಿದೀಯಲ್ಲ ಗಂಗೋಧಕ, ಆ ಗಂಗೋದಕದಂದ ನಿನ್ನ ಮಕ್ಳು ಮಕ್ಕಳ ತಲಂತ್ರಕು ಕೈಬಿಟ್ಟು ಹೋಗೋದಿಲ್ಲಾಂತ ಧಾರೆ ಎರೆದು ಕೊಟ್ರೂ, ಯಾಕಮ್ಮ ಹಂಗತೀಯ ? ಆಗ ಲಕ್ಷ್ಮಿ ಈಕೆ ಹಿಡಿದಿರತಕ್ಕಂತ ಗಂಗೋದಕದಿಂದ ನಿನ್ನ ಮಕ್ಳುಮಕ್ಳು ತಲಾಂತ್ರಕು ನಿನ್ನ ಕೈಬಿಟ್ ಹೋಗಲ್ಲಾಂತ ದಾರಿಮೂರ್ತ ಮಾಡಿಕೊಟ್ಲು. ಮಾಡಿಕೊಟ್ಟು ಒಂದು ಗಳಿಗೆ ಕೂತಗಂಡ್ಲಂತೆ. ತನ್ನ ಮಾವನ ಐಶ್ವರ್ಯ ಎಲ್ಲೆಲ್ಲಿ ಅದೃಶ್ಯವಾಗಿತ್ತೋ ಅಲ್ಲಲ್ಲಿ ಉತ್ಪತ್ತಿಯಾತು. ಹೊಲಮನೆ ಮಠಗಳನ್ನು ಯಾರು ಯಾರು ಕಿತ್ಕಂಡವರೋ, ತಾವು ತಾವಾಗೆ ಬಿಟ್ಟುಕೊಟ್ಟರಂತೆ. ತನ್ನ ತಂದೆಗಿಂತಲ ಘನಪುಣ್ಯವತಿಯಾಗಿ ಬಂದಿದ್ದಾಳೆ. ಅವತ್ ಹೇಳಿದ್ರಂತೆ. ಹೋಗಯ್ಯ ನಿನ್ನ ಮಗಳು ನಿನಗಿಂತ ಪುಣ್ಯವತಿಯಾಗಿ ಬದುಕ್ತಾ ಇದ್ದಾಳೆ. ಹಾಗೇಂತೇಳಿ ಅವತ್ ಬಂದನಂತೆ ತಂದೆ ನೋಡೊದಿಕ್ಕೆ. 'ಅಮ್ಮಾ ನಾನು ಕೊಟ್ಟದ್ದು ಎಷ್ಟ್ ದಿವ್ಸಾ ಬರ್ತಾಯಿತ್ತು ? ಇವಾಗ ನಿನ್ ಮಕ್ಳುಮಕ್ಳು ತಲಂತ್ರಕು ಮುಗಿಯಂಗಿಲ್ಲ. ಹಾಗೇಂತೇಳಿ ಅಂತಾದಿವಸ ಮಗಳ ಮನೇಲಿದ್ದು, ತನ್ನ ಮನಿಗೆ ಹೋದನಂತೆ.

ಹೇಳಿದವರು : **ತಿರುಮಲಯ್ಯ,** 55 ವರ್ಷ, ಒಕ್ಕಲಿಗ ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು, ಮಂಡ್ಯಜಿಲ್ಲೆ.

# ೨೯. ಜಾಣ ಸೊಸೆ

ಮಾಯಸಂದ್ರದ ಒಂದು ಗಂಡು. ಬೆಳ್ಳೂರ್ದೊಂದು ಹೆಣ್ಣು. ಎಲ್ ನೋಡಿದ್ರುನೆ ಮದುವೆಗೆ ಗಂಡನ್ನ ಹೆಣ್ಣೊಪ್ಪೊಲ್ಲದು, ಹೆಣ್ಣನ್ನು ಗಂಡೊಪ್ಪೊಲ್ಲದು. ಒಂದ್ ದಿನ ಗಂಡಿನ ಕಡೆಯವರೂ ಹೆಣ್ಣಿನ ಕಡೆಯವರೂ ಗಂಡು ಹೆಣ್ಣು ಹುಡ್ಕೊಂಡು ಬರ್ತಾ ಇದ್ದರು. ಬರ್ತಾ ಇರಬೇಕಾದರೆ ಮಧ್ಯದಲ್ಲಿ ಒಂದ್ ಕೆರೆ ಸಿಕ್ತು. ಕೆರೆಹತ್ರ ಒಂದು ಕಡೆ ಹೆಣ್ಣೋರು, ಇನ್ನೊಂದು ಕಡೆ ಗಂಡ್ನೋರು ಕುಂತಿದ್ರು. ಆಗ ಗಂಡಿನ ಕಡೆಯವರೊಬ್ಬರು ಹೆಣ್ಣಿನ ಕಡೆಯವರನ್ನ ಕೇಳಿದ್ರು. ಎಲ್ಲಿಗೆ ಬಂದಿದ್ರಿ ಯಜಮಾನರೆ ಅಂತ. ಅದಕ್ಕೆ ಅವರು 'ಅಯ್ಯಾ ನಮ್ಮ ಗಂಡು ಯಾವ್ ಹೆಣ್ಣು ನೋಡಿದ್ರೂ ಒಪ್ಪಲ್ಲ. ಹೀಗೆ ಹುಡುಕ್ತಾ ಇದ್ವಿ, ಅಂದ್ರು. ಆವಾಗ ಈ ಹೆಣ್ಣೋರು 'ಅಯ್ಯಾ ನಮ್ಮ ಹೆಣ್ಣೂ ಯಾವ್ ಗಂಡ್ ನೋಡಿದ್ರು ಒಪ್ತಾ ಇಲ್ಲ. ನಾವು ಇಂಗೇ ಗಂಡು ಹುಡಕೊಂಡು ಬಂದ್ವಿ' ಅಂದ್ರು. ಹೀಗಿರಬೇಕಾದರೆ ಇಬ್ಬರೂ ಅಂತೋರೇಯೆ ಸೆಟ್ಟಾದ್ವಲ್ಲ ಅಂತ ಅಂದುಕೊಂಡು, ಹಾಗಾದರೆ ಗಂಡಿನ ಫೋಟ, ಹೆಣ್ಣಿನ ಫೋಟಾನ ಇಬ್ಬರೂ ಈಸ್ಕೊಂಡು ಗಂಡಿಗೆ, ಹೆಣ್ಣಿಗೆ ಇಬ್ಬರಿಗೂ ತೋರ್ಸಾನ. ಅವರೇನಾದರೂ ಒಬ್ಬರೊನ್ನೊಬ್ಬರು ಒಪ್ಪಿಕೊಂಡರೆ ಮದ್ವೆ ಮಾಡ್‌ಬಿಡಾನ ಅಂತ ಆ ಯಜಮಾನರುಗಳು ಮಾತಾಡಕಂಡ್ರು.

ಗಂಡಿಗೆ ಹೆಣ್ಣಿನ್ ಫೋಟ, ಹೆಣ್ಣಿಗೆ ಗಂಡಿನ ಫೋಟಾನ ತೋರಿಸಿದ್ರು. ಇಬ್ಬರು ಒಪ್ಕೊಂಡರು. ಮದ್ವೆ ಮಾಡೋದಿಕ್ಕೆ ಏರ್ಪಾಟ್ ಮಾಡಿದ್ರು. ಇದಕ್ಕೆ ಮುಂಚೆ ಮದುವೆ ಗಂಡ್ ಏನ್ ಮಾಡವ್ನೆ ಅಂದರೆ ಆ ಊರನಲ್ಲೊಬ್ಬಳು ಸೂಳೆ ಇಟ್ಕೊಂಡಿರೋನು. ಆ ಸೂಳೆ ಏನ್ ಹೇಳ್ಕೊಡೋಳು ಅಂದರೆ 'ನೀನು ಧಾರೆ ಉಯಿಸ್ಕೋಬ್ಯಾಡ, ಅವಳ ಹತ್ರ ಹೋಗ್ಬೇಡ, ನೀನ್ ಹೋದ್ರೆ ನನ್ನ ಬಿಟ್ಟುಬಿಡಬೇಕು' ಅಂತ ಹೇಳಿದ್ಲು.

ಸೂಳೆ ಮಾತನಂಗೆ ಈ ಹುಡಗ ಏನ್ ಹೇಳಿದ ಅಂದರೆ : "ನನಗೆ ತಲೆನೋವು, ಜ್ವರ ನಾನು ಮದ್ವೆಗೆ ಬರಲ್ಲ. ಈ ನನ್ನ ಚಂದ್ರಾಯುಧಕೆ ಧಾರೆ ಉಯಿಸ್ಕೊಂಡು ಬನ್ನಿ" ಅಂದ. ಆಗ ಹೆಣ್ಣೋರ ಮನೆ ಬಾಕ್ಲಲ್ಲೆ ಮದುವೆ ಚಪ್ಪರ ಹಾಕಿಸಿ ಅವನ ಚಂದ್ರಾಯುಧಕ್ಕೆಯೆ ತಾಳಿ ಕಟ್ಸಿಸಿದ್ರು. ಅವಾಗ ತಾಳಿ ಕಟ್ಬಿಟ್ಟು ಆ ಹುಡುಗಿ ಅಂಗೇ ತೌರಮನೇಲಿರುವಾಗ ಏನ್ಮಾಡಿದ್ಲು? 'ಅಮ್ಮ ಈ ತೌರಮನೇಲಿ ಎಷ್ಟೇ ದಿನ ಇದ್ದರು ಸ್ಥಿರವಾದ್ದಲ್ಲ, ನಾನು ಗಂಡನ ಮನೆಗೆ ಹೋಗ್ತೀನಿ ಅಂತ ಅಂದ್ಲು, ಆದರೆ ಇವರ ಮನೆಯವರು, ' ಗಂಡ ಬಂದು ಕರ್ಕೊಂಡೋದ್ರೆ ಸರಿ. ಇಲ್ಲ ಅಂದ್ರೆ ನಾವಾಗಿ ನಾವು ಎಂಗಮ್ಮ ಹೋಗೋದು' ಅಂದ್ರು. ಆದರೆ ಇವಳು ಹೋಗ್ಲೇಬೇಕು ಅಂತ ಹಟ ಮಾಡಿದ್ಲು. ಆಗ ಅವಳನ್ನು ಗಂಡನ ಮನೆಗೆ ಕಳಿಸಿಕೊಟ್ಟರು. ಕಳಿಸಿಕೊಟ್ಟ ಮೇಲೆ ಇಂಗೇ ಇರಬೇಕಾದರೆ ಅವಳ ಗಂಡ ಒಂದು ರೂಮಿನ ಮೂಲೆಯಲ್ಲಿ ಕುಂತೋನು ಏಳಲೇ ಇಲ್ಲ ಮೇಲಕ್ಕೆ. ಅವನ ಸೂಳೆ ಹೇಳ್ದಾಗೆ ಇವನ್ ಕೇಳ್ದಂಗೆ. ಹೀಗೆ ಸುಮಾರು ದಿನ ಇದ್ಲು. ಇದ್ದರೆ ಗಂಡ ರೂಮ್ನಲ್ಲೇ ಇದ್ದನಲ್ಲ? ಅವನಿಗೆ ಒಂದು ತರ ಕುಷ್ಟರೋಗ ಹತ್ಕೊಂಡ್ಬಿಡ್ತು. ಕಾಯಿಲೆ ಆಗ್ಬಿಟ್ಟು ಅವನು ಪ್ರಾಣ ಬಿಟ್ಬಿಟ್ಟ. ತಿಥಿಗಿತಿ ಎಲ್ಲಾ ಮಾಡಿದ್ರು. ಅವರ ಅತ್ತೇನೂ ತೀರಿ ಹೋಗ್ಬಿಟ್ಟಳು. ಈಗ ಮಾವ ಸೊಸೆ ಇಬ್ಬರೇ ಮನೇಲಿ. ಅವರ ಮಾವ, ಅಮ್ಮ ಈ ಮನೇಲಿರೋದು ನಾನು ಮತ್ತು ನೀನು ಇಬ್ಬರೇ. (ಸೊಸೆ ಮಾವ) ಜನ ನಮ್ಮನ ಏನಾದರೂ ಅಂದ್ಕೊಳ್ತಾರೆ. ನೀನು ನಿಮ್ಮ ತೌರಮನೆಗೆ ಹೋಗ್ಬಿಡಮ್ಮ"ಅಂದ್ರು. ಆಗ ಅವಳು "ಇಲ್ಲ ಮಾವ ನಾನ್ ಹೋಗಲ್ಲ, ನಾನ್ ಇಲ್ಲೇ ಇರ್ಬೇಕು. ನಿಮ್ಮ ಪಾದಪೂಜೆ ಮಾಡ್ಕೊಂಡು ಸ್ವರ್ಗ ಸೇರಬೇಕು" ಅಂತ ಅಂದ್ಲು. ಇಷ್ಟಾದ ಮೇಲೆ ನೀನ್ ಇಲ್ಲೇ ಇರಮ್ಮ ನಿನ್ನಿಷ್ಟದಾಗೆ ಅಂತ ಮಾವ ಹೇಳಿದರು.

ಅವರ ಮನೇಲಿ ಒಂದು ಟಗರು ಇತ್ತು. ಒಂದಿನ ಈ ಟಗರು ಕಿತ್ತುಕೊಂಡು ಪಟೇಲರ ಮನೆ ಹತ್ರ ಬಂದ್ಬಿಟ್ಟಿತ್ತು. ಇವಳು (ಸೊಸೆ) ಹುಡ್ಕೊಂಡ್ ಬಂದ್ಲು. ಪಟೇಲನ ಮನೆ ಹತ್ತಿರ. ಆಗ ಈ ಪಟೇಲ ಇದ್ನಲ್ಲ? ಈ ಹುಡ್ಗೀನ್ ನೋಡಿದ, "ಹುಡುಗಿ ನೋಡಿದ್ರೆ ಇಷ್ಟು ಚೆನ್ನಾಗಿದೆ, ಈ ಬಡ್ಡೀಮಗ (ಗಂಡ್ನ) ನೋಡಿದ್ರೆ ಕುಷ್ಟರೋಗ ಹತ್ಕೊಂಡು ಸತ್ತೋದ. ಏನಾದ್ರು ಮಾಡಿ ಇವಳನ್ನ ನನ್ನ ವಶ ಮಾಡ್ಕೊಬೇಕೂಂತ" ಆಸೆ ಇಟ್ಕಂಡ. ಇವನಿಗೆ ಒಬ್ಬ ಮಂತ್ರಿ. ಆ ಮಂತ್ರಿಗೆ ಹೇಳಿದ: "ಹೇ ಮಂತ್ರಿ, ಇವತ್ತು ಅವಳ ಮಾವ ಆ ಕುಂಬಳಗೌಡನ ಮನೆಗೆ ಹೋಗಿ ಒಂದು ಕುಂಬಳದ ಹಣ್ಣು ಈಸ್ಕೊಂಬಾ. ಬೆಳಿಗ್ಗೆ ಊರು ಊಟ ಮಾಡಿಸಬೇಕು ಅಂತ ಹೇಳು" ಅಂದ. ಮಂತ್ರಿ ಕುಂಬಳಗೌಡನ ಮನೆಗೆ ಬಂದು "ಅಪ್ಪ ಕುಂಬಳಗೌಡ ಇವತ್ತು ಕುಂಬಳಹಣ್ಣು ಬೇಕಂತೆ, ಬೆಳ್ಕರಿಯೋತ್ಗೆ ತಂದ್ ಕೊಡಬೇಕಂತೆ

ಕಣಯ್ಯ'' ಅಂತ ಹೇಳಿದ. ಆಗ ಇವರು ''ನಮ್ಮನೇಲಿ ಕುಂಬಳದಪಣ್ಣು ಇಲ್ಲ ಹೆಂಗಯ್ಯ ಕೊಡೋದು'' ಅಂದರು. ''ನೋಡಯ್ಯ ಅದೆಲ್ಲಾ ಗೊತ್ತಿಲ್ಲ, ಈಗಾಕಿ ಬೆಳ್ಕರಿಯೋತ್ಗೆ ಕುಂಬ್ಳದಹಣ್ ಆಗಬೇಕಂತೆ'' ಅಂದ. ಆಗ ಸೊಸೆ ಮಾವನಿಗೆ ಕೇಳಿದ್ಲು: ''ಏನ್ ಆ ಮಂತ್ರಿ ಹೇಳ್ತಾ ಇರೋದು? ಅಮ್ಮ ಈಗ ಹಾಕ್ಬಿಟ್ಟು ಬೆಳ್ಗರಿಯೊತ್ತಿಗೆ ಕುಂಬ್ಳದಣ್ಣು ಬೇಕಂತೆ; ಆಗೋದು ದಿಟವೇನಮ್ಮಾ'' ಅಂದ ಸೊಸೆಗೆ. ''ಅದು ಬಲ್ ಸಾಮ್ರಾಜ್ಯವಲ್ಲ ಬಾ ಮಾವ. ಬಂದ್ ಊಟ ಮಾಡಿ ಮಲಿಕೋ'' ಅಂಗ್ಲು. ಮಾವ ಊಟಮಾಡಿ ಮಲಗಿಕೊಂಡರು.ಸ ಎಲ್ಲಾರು ನಿದ್ದೆ ಮಾಡಿದರು. ಇವಳು ಹಿತ್ಲಿಗೆ ಹೋಗಿ ಗುಂಡಿ ತೆಗೆದು ಗೊಬ್ಬರ ಹಾಕಿ, ಬೀಜನೆಟ್ಟು ''ನಾನ್ ಒಬ್ಬ ತಂದೆ ತಾಯಿಗೆ ಹುಟ್ಟಿ ಒಬ್ಬನಿಗೆ ಸೆರಗ ಹಾಸಿದ್ರೆ ಈ ಕುಂಬಳಗಿಡ ಹುಟ್ಟಿ ಬೆಳಗ್ಗೆಗೆ ಕಾಯಿಬಿಡಲಿ. ಇಲ್ಲದಿದ್ದರೆ ಬೇಡ'' ಅಂತ ಬಂದ್ಲು. ಇನ್ನೊಂದು ಹೊತ್ನಲ್ಲಿ ಎದ್ದು ನೋಡ್ತಾಳೆ, ಆಗ್ಲೆ ಕುಂಬಳ ಗಿಡ ಅರಿದು ಕುಂಬಳಕಾಯಿ ಬಿಟ್ಟಿದೆ. ಆ ಕುಂಬಳಕಾಯಿ ಮೇಲೆ ಒಂದು ಗಡಿಗೆ ದಬಾಕಿದ್ಲು. ಕೋಳಿ ಕೂಗ್ಹೊತ್ತಿಗೆ ಸರಿಯಾಗಿ ಬಂದ ಮಂತ್ರಿ ''ಕುಂಬಳಗೌಡ ಕುಂಬಳದ್ಹಣ್ಣು ಕಿತ್ತುಕೊಡಬೇಕಂತೆ'' ಅಂದ. ಆಗ ಸೊಸೆ ''ನೋಡಯ್ಯ ಮಂತ್ರಿ ನಮ್ಮಾವನ್ನ ಏನ್ ಕೇಳ್ತಿಯ'' ಅಂದ್ಲು. ಆಗ ಮಂತ್ರಿ ''ನಿನ್ ಏನ್ ಕೇಳೊದು ನಿಮ್ಮ ಮಾವನ ಕೇಳ್ತಾ ಇದೀನಿ ಇರಮ್ಮ. ನಿನ್ನದೇನು ಯಜಮಾನಿಕೆ'' ಅಂದ. ''ಇಲ್ಲ ನನ್ನದೇ ಯಜಮಾನಿಕೆ'' ಅಂದ್ಲು. ಅಯ್ಯಾ ಮಂತ್ರಿ ''ಒಡ್ದ್ ಕೀಳ್ಬೇಡ, ಕುಡ್ಲಲಿ ಕೊಯ್ಯಿಬೇಡ, ಗುಂಬ ಹೊಡಿಬೇಡ ಕಿತ್ಕೊಂಡೋಗಯ್ಯ ಕುಂಬಳದಣ್ಣ'' ಅಂತ ಅಂದ್ಲು, ಅಲ್ಲಮ್ಮ ''ಒಡ್ದ್ ಕೀಳ್ಬೇಡ, ಗುಂಬ ಹೊಡಿಬೇಡ, ಕುಡ್ಲಲ್ಲಿ ಕೊಯಿಬೇಡ ಅಂದ್ರೆ ಹೆಂಗಮ್ಮಾ ಕಿತ್ಕೊಂಡೋಗೋದು'' ಅಂದ. ಈಗ ಹಾಕ್ಬಿಟ್ಟು ಬೆಳ್ಕರಿಯೋತ್ಗೆ ಕುಂಬಳದಣ್ಣು ಬಿಡೋದು ದಿಟವೇನಯ್ಯಾ ಅಂದ್ಲು ಅವಳು. ಹಾಃ ನೀನೇ ಗೆದ್ದುಬಿಟ್ಟಲ್ಲ ಅಂತ ತಡೀ ನಮ್ಮ ಸಾವುಕಾರನಿಗೆ ಹೇಳ್ತೀನಿ ಅಂದ ಮಂತ್ರಿ.

ಮನೆಗೆ ಬಂದು ಪಟೇಲರಿಗೆ ಹೇಳಿದ ಮಂತ್ರಿ. ಆಗ ಆ ಪಟೇಲ ''ಎಲಾ ಮುಂಡೆ ಇದರಲ್ಲೂ ಗೆದ್‌ಬಿಟ್ಳಲ್ಲ; ಇರ್ಲಿ ಈವಾಗ ಇನ್ನೊಂದು ಯಾತ್ರಿದಂಟು ಈಗಾಕಿ ಬೆಳ್ಕರಿಯೊ ಹೊತ್ಗೆ ಕುಯ್ಕೊಂಡ್ ಬರಬೇಕಂತೆ ಅಂತ ಹೇಳ್ಬಿಟ್ಟು ಬಾ'' ಅಂದ. ಆಗ ಮಂತ್ರಿ ಕುಂಬಳಗೌಡನ ಮನೆಗೆ ಮತ್ತೆ ಬಂದು ''ಅಯ್ಯಾ ಕುಂಬಳಗೌಡ ಈಗಾಕ್ಬೇಕಂತೆ ಬೀಜವ, ವತಾರೆ ಹೊತ್ಗೆ ದಂಟು ಬಿಡಬೇಕಂತೆ. ಆ ದಂಟು ಕುಯ್ಕೊಂಡು ಬಂದು ಊರುಊಟಕ್ಕೆ ಕೊಡಬೇಕಂತೆ'' ಅಂತ ಅಂದ ಮಂತ್ರಿ. ''ಅದು ಬಲು ಸಾಮ್ರಾಜ್ಯವೆ ಬಾ ಮಾವ ಊಟ ಮಾಡಿ ಮಲಿಕೋ'' ಅಂದ್ಲು. ಊಟ ಮಾಡಿ ಮಲಗಿದರು ಎಲ್ರೂ. ಒಂದ್ ಹೊತ್ನಲ್ಲಿ ಎದ್ದು ಹಿತ್ತಲಿಗೋಗಿ ಅವೇ ರೀತಿ ಗೊಬ್ಬರ ಹಾಕಿದ್ಲು, ಬೀಜ ಹಾಕಿದ್ಲು, ಬಂದ್ಬಿಟ್ಟು ಇನ್ನೊಂದು ಹೊತ್ನಲ್ಲಿ ಎದ್ದೋಗಿ ನೋಡಿದ್ಲು. ದಂಟು ಬೆಳೆದು ಬಿಟ್ಟಿದ್ದವು. ಆಗ ತಿರ್ಗ ಬೆಳಿಗ್ಗೆ ನಾಲ್ಕು ಗಂಟೆಗೆ ಮಂತ್ರಿ ಬಂದು ದಂಟಂತೆ ಗೌಡ್ರೆ ಅಂದ. ಆಗ ಸೊಸೆ ''ಅಯ್ಯಾ ಕುಡ್ಲಲ್ಲಿ ಕುಯ್ಯಬೇಡ, ಬೇರು ಕೀಳಬೇಡ, ಕಿತ್ಕೊಂಡೋಗಯ್ಯ ದಂಟನ್ನ'' ಅಂದ್ಲು. ಮಂತ್ರಿ ''ಅಲ್ಲಮ್ಮ ಕುಡ್ಲಲ್ಲಿ ಕುಯ್ಬೇಡ, ಬೇರ್ ಕೀಳ್ಬೇಡ ಅಂದ್ರೆ ಹೆಂಗಮ್ಮ ತಗೊಂಡ್ಹೋಗೋದು ದಂಟ'' ಅಂದ. ಅದಕ್ಕೆ ಅವಳು ಈವಾಗ ಹಾಕ್ಬಿಟ್ಟು ಬೆಳ್ಕರಿಯೋತ್ಗೆ ಹೆಂಗಯ್ಯ ಬೆಳೆಯೋದ್ ದಂಟ ಅಂದ್ಲು. ಆಗ ಮಂತ್ರಿ ತಡಿ ನಮ್ಮ ಪಟೇಲರಿಗೆ ಹೇಳ್ತೀನಿ ಅಂತ ಹೊಂಟೋಗ್ಬಿಟ್ಟ.

ಆಗ ಹೋಗಿ ಇನ್ನೊಂದು ಏರ್ಪಾಟ್ ಮಾಡಿ ಬಂದ. ಇವತ್ತು ತೊಟ್ಟಿಲಿನ ಮಗೂನು ಊರ್ನಲ್ಲಿ ಇರಕೂಡದು, ಊರಿನ ಜನರೆಲ್ಲ ಊಟಕ್ಕೆ ಬರಬೇಕು ಅಂತ ಡಂಗೂರ ಸಾರಿಸ್ತಾನೆ. ಸಾರಿಸ್ಬಿಟ್ಟು ಕುಂಬಳಗೌಡನಿಗೆ ಹೇಳ್ತಾನೆ. ''ಇವತ್ತು ಕೋಣವೊಂದು ಗಬ್ಬಾಗಬೇಕಂತೆ'' ಅಂತ. ಅದು ಬಲು ಸಾಮ್ರಾಜ್ಯವೆ ಬಾ ಮಾವ ಅಂದ್ಲು ಸೊಸೆ. (ಎಲ್ಲಾ ಬಿಟ್ಟು ಕೋಣ ಗಬ್ಬಾಗೋದುಂಟೆ? ಹಾಲು ಕರೆಯೋದು ನಿಜವೆ?) ಬನ್ನಿ ಊಟಮಾಡಿ ಮಲಕ್ಕೊಳ್ಳಿ ಅಂತ ಹೇಳಿ ಊಟಮಾಡಿ ಎಲ್ಲಾ ಮಲಿಕ್ಕೊಂಡರು.

ಮಂತ್ರಿ ಮಾಮೂಲಿ ಬೆಳಿಗ್ಗೆ ನಾಲ್ಕು ಗಂಟೆಗೆ ಬಂದ ಕರೆಕ್ಹಾಗಿ. ಬಂದು ಕೇಳಿದ. ಆವಾಗ ''ಅಲ್ಲ ಕಣಯ್ಯ ನಮ್ಮಾವಯ್ಯ ಈಚೆಗಾಗಿ (ಹೊರಗಡೆಗಾಗಿ) ಹಿತ್ಲಲ್ಲಿ ಕುಂತವ್ರೆ ಹೋಗಯ್ಯ. ಆಮ್ಯಾಲೆ ಬಾ'' ಅಂದ್ಲು. ಆಗ ಮಂತ್ರಿ ''ಗಂಡಸು ಈಚೆಗಾಗೋದು ದಿಟವಾ? ಹಿತ್ಲಲ್ಲಿ ಕುಂತ್ಕೊಳ್ಳೋದು ದಿಟವಾ ?'' ಅಂದವನೆ ಮತ್ತೆ ಪಟೇಲರ ಹತ್ತಿರಕ್ಕೆ ಹೋಗಿ ನಡೆದ ವಿಷಯವನ್ನು ಹಂಗೇ ಹೇಳ್ದ. ಅವಾಗ ಮೊದಲೇ ಸಾರಿಸಿದ್ದಂಗೆ ತೊಟ್ಟಿಲು ಮಗೂವೆ ಬಿಡ್ದಂಗೆ ಊಟಕ್ಕೆ ಬರಹೇಳಿದ. ಆಗ ಎಲ್ರೂ ಹೋದ್ರು. ಹೋದಾಗ ಇವಳೂ ಹೋದ್ಳು. ಆಗ ಇವಳಂಥ ಎಲ್ಲಾ ಹೆಂಗಸರೂ ಸೇರ್ಕೊಂಡು ''ಬಾರೆ ಅಮ್ಮ ತುಪ್ಪ ಬುಡಾನ, ಹಪ್ಪಳ ಹಾಕಾನ, ಉಪ್ಪಿನಕಾಯಿ ಹಾಕಾನ'' ಅಂತ ಕರೆದ್ರು ಇವಳನ್ನು... ಆವಾಗ ಇವಳು 'ನಾನ್ ಬರಲ್ಲ ಊಟಮಾಡ್ಕೊಂಡ್ ಮನೆ ಹತ್ತಿರ ಹೋಗ್ತೀನಿ, ಮನೆ ಹತ್ತಿರ ಯಾರೂ ಇಲ್ಲ. ಕಡೆಮನೆ ಅಂತ ಹೇಳಿದ್ಳು.'' ''ಕಡೆಮನೆ ಆದ್ರೆ ಏನೂ ಭಯವಿಲ್ಲ ಬಾರೆ'' ಅಂದ್ರು. ಅಷ್ಟೊತ್ತಿಗೆ ಇವಳೇನ್ ಮಾಡಿದಾಳೆ ? ನಾಲ್ಕು ಸೀರೆ ಒಂದರ ಮೇಲೋಂದು ಉಟ್ಕೊಂಡು ಹೋಗಿರೋಳು.

ಆಗ ಹೆಂಗಸರೆಲ್ಲ ತುಪ್ಪ ಬಿಡಾಕೋದ್ರೆ ಇವಳನ್ನ ಪಟೇಲ್ನ ರೂಮಿನೊಳಕ್ಕೆ ಕರಕೊಂಡೋಗಿಬಿಟ್ಟಿಟ್ರು. ಬಿಟ್ಬಿಟ್ಟು ಬಂದಾಗ ಇವಳೇನ್ಮಾಡಿದಳು, ಪಟೇಲನಿಗೆ ನೋಡಿ ''ನಾನ್ ಯಾವತ್ತಿದ್ರು ನಿಮ್ಮ ವಶದವಳೆ. ನಾನ್ ಸ್ವಲ್ಪ ಆಚ್‌ಗೋಗ್ ಬರಬೇಕು'' ಅಂದ್ಳು. ನೀನ್ ಬರಲ್ಲ ನಾನ್ ಬಿಡಲ್ಲ ಅಂತ ಪಟೇಲ ಅಂದ. ''ಇಲ್ಲಾರೀ ನಾನೀಗ್ಲೆ ಬರ್ತೀನಿ. ನಂಬಿಕೆ ಇಲ್ಲದಿದ್ದರೆ ಸೆರ್ಗ ಹಿಡ್ಕಳಿ ನಂದ'' ಅಂದ್ಲು. ಸೆರ್ಗ ಹಿಡ್ಕೊಂಡ ಇವನು. ಆಗ ಸೊಸೆ ಮನೆಯಿಂದ ಹೊರಗಡೆ ಬಂದುಳು. ಮನೆ ಮುಂದೆ ಒಂದು ನುಗ್ಗೇಮರ. ಆ ನುಗ್ಗೆ ಮರಕ್ಕೆ ಸೆರಗು ಕಟ್ಟಿದಳು. ಕಟ್ಬಿಟ್ಟು ನೆಟ್ಟಗೆ ಮನೆಗೆ ಹೋದ್ಳು. ಇವನು ಕೆಳಗೆ ಕೂತ್ಕೊಂಡು ಸೆರಗು ಎಳೀತಾ ಇದ್ದ. ಆಗ ನುಗ್ಗೇಮರ ನರ ನರ ಅಂತ ಎಳ್ಕೋದು. ಅವಳ್ಹೋಗಿ ಮನೆ ಸೇರಿಕೊಂಡಳು. ಕೊನೆಗೆ ಪಟೇಲನೇ ಸೋತ. ಆಗ ಹೇಳಿದ ''ನಿನ್ಮ್ಯಾಲೆ ಕಣ್ಣಾಕಿದ್ದರೂನು ನೀನು ನನ್ನ ಮೇಲೆ ಆಸೆ ಮಾಡ್ಲೇ ಇಲ್ವಲ್ಲೇ ಹೆಣ್ಣೆ'' ಅಂತ ಅಂದ. ಆಗ ಅವಳು ''ನಿನ್ಮೇಲೆ ಆಸೆಪಡೋಳಾಗಿದ್ದರೆ ಸೆರಗ ಕಟ್ಟಿ ನಿನ್ಮೇಲೆ ನುಗ್ಗೇಮರ ಬೀಳಿಸ್ತಿದ್ನೆ'' ಅಂದ್ಳು.

ಹೇಳಿದವರು : **ಮಂಗಮ್ಮ,** ಥಣಾಯಕನ ಪುರ, ತುರುವೇಕೆರೆ ತಾಲ್ಲೂಕು.

# ೩೦. ಮನದಾಗಲ ಗುಟ್ಟ ಮಡದಿಗೆ ಹೇಳಬೇಡ

ಒಬ್ ತಂದೆಗೆ ಮೂವರು ಮಕ್ಳಿರ್ತಾರೆ. ತಂದೆ ಹಿಸ್ಸೆ ಮಾಡ್ವಾಗ ಇಬ್ರು ಮಕ್ಳಿಗೆ ಹಿಸ್ಸೆ ಮಾಡಿಕೊಟ್ಟ. ಇನ್ನೊಬ್ಬ ಮಗ ಇದ್ನಲ್ಲ ಕಿರಿಯೋನು ಅವ್ನಿಗೆ ಏನಂತ ಹೇಳ್ತಾರೆ: ''ನಾವು ಮೂರು ಮಾತು ಕಲ್ಸಿಕೊಡ್ತೀವಿ, ನಿನ್ಗೆ ಆ ಮೂರ್ ಮಾತೆ ಸಾಕು, ನಮ್ಮ ಆಸ್ತಿ ಏನೂ ಬ್ಯಾಡಂತ ಹೇಳಿದ್ರು''. ''ಹುಂ ಅದ್ಯಾವ್ದು ಹೇಳ್ರಿ ಮತ್ತೆ ಆ ಮೂರ್ಮಾತು?'' ಅಂದ. ಒಂದ್ಮಾತು - ಯಾರ್ಯಾರ ತಿಳ್ದೋರ್ ಹೇಳಿದ ಮಾತ್ನ ಮೀರ್ಬ್ಯಾಡ. ಲೊಟುಕ್ಕಂದೋಗ್‌ಬ್ಯಾಡ. ಅವರು ಮಾತು ಕೇಳು. ಇನ್ನೊಂದ್ಮಾತು - ದಾರಿಬಟ್ಟೆವಳಗೆ ಬಿದ್ದದ್ದು, ಕಣ್ಣಿಗೆ ಕಂಡದ್ದು ಬಿಟ್‌ಬರ್ಬ್ಯಾಡ ತಗಂಬಾ. ಇನ್ನು ಮೂರ್ನೆ ಮಾತು - ನನ ಮಗನೆ ಹೊಟ್ಯಾಗ್ಳ ಗುಟ್ಟ, ಹಡ್ದ ತಾಯಿಗೂ ಹೇಳ್ಬ್ಯಾಡ; ಮನದಾಳ ಗುಟ್ಟ, ಮನೆ ಹೆಂಡ್ತಿಗು ಹೇಳ್ಬ್ಯಾಡ. ಇವು ಮೂರ್ ಮಾತ್ನ ಮರಿಬ್ಯಾಡ ಅಂತ ಹೇಳಿದ್ರು. ಇವ್ನ ಹೊಟ್ಯಾಗಿಟ್ಕಂಡ. ಹೇಳಿ ಆತಲ? ಅವ್ರವ್ವ ಕುಡಗೋಲು ತಗಂಡ್ಲು ಕೋಳಿ ಕೊಯ್ಯಾಕ್ ಹೋದ್ಲು.

ಅತ್ಲಿಂದ ಇವ್ನು ಬರ್ತ್ತಿದ್ದ ಹುಡುಗ. ಅಲ್ಲಿ ಯಾರೋ ನಾಗರ ಸರ್ಪನ್ ಹೊಡ್ದ್ ಹಾಕಿದಾರೆ. ಇವ್ನ ನೋಡ್ದ. 'ನಮ್ಮಪ್ಪ ನಮ್ಮವ್ವ ಹೇಳ್ದೋರ್ ಮಾತ್ ಮೀರ್ಬ್ಯಾಡ. ಕಣ್ಣಿಗೆ ಕಂಡದ್ ಬಿಟ್‌ಬರ್ಬ್ಯಾಡ'' ಅಂತ ಹೇಳಿದ್ರು. ಈಗ ಕಣ್ಣಿಗೆ ಕಂಡಿದ್ ಇದೇ ಮೊದ್ಲು ಸಿಕ್ಕಿರೋದು. ಇದ ತಗನಾನ ಅಂದು ಹಾವ ತಗಂದು ಮನಿಗೆ ಬಂದ. ಹಿತ್ಲಾಗಾಸಿಂದ ಮನಿಗೆ ಬಂದೊನೇ ಬೆಂಕ್ಟಿಗೆ ಬೀಸಿ ಒಗೆದುಬಿಟ್ಟ ಮನೆ ಮ್ಯಾಲೆ ಆ ಹಾವ. ಬೆಂಕ್ಟಿ ಮ್ಯಾಲೆ ಬಿದ್ಬುಡ್ತದು. ಮತ್ತೆ ಹೊತಾರೆ ಎದ್ದು ನೋಡ್ಲಿಲ್ಲ. ಎಲ್ಡ್ ದಿನ ಮೂರ್ದಿನ ಸುಮ್ನಿದ್ಬುಟ್ಟ.

ಆವಾಗ ದೊಡ್ಡ ಸಾವ್ಕಾರ್ರು ಮನಿಯಾಗೆ ಸಾವ್ಕಾರೆಂಡ್ರು ಮೈಸೋಪು ಹಚ್ಚಿಕೊಳ್ಳೊ ಮೊದ್ಲು ಬಚ್ಚಲಲ್ಲಿ ಪದ್ಕುದಸರ, ಪವನ್‌ಸರಗಳ್ನ ಮ್ಯಾಲೆ ಇದ್ಕೆ ಅದ್ಕೆ ಸಿಗೆಹಾಕ್ತರಲ್ಲ ಹಂಗ್ ಹಾಕಿದಾಳೆ. ಈ ನಾಡಿನ ಮ್ಯಾಲೆ ಆಡೋ ಗರಡಪಕ್ಷಿ ಹೊಡ್ಕಂದ್ ಬಂದ್ಬಿಡ್ತತೆ ಆ ಸರಗೋಳ. ಇವ್ನ ಬೆಂಕ್ಟಿಮೇಲೆ ಹಾವಾಕಿದ್ನಲ ಅಲ್ಲಾಸೆ ಬಂತು. ಹಾವು ನೋಡಿದ್ದೆ ಬಡವನ ಮನೆಮ್ಯಾಲೆ ಕೆಡವೆಬಿಡ್ತು ಆ ಪವನ್ ಸರಾನ. ಹಾವ ಕಾಲಾಗೆ ಹಿಡ್ಕಂತು, ನಡೀತು. ಅವೆಲ್ಲ ಏನುಗೊತ್ತು ಇವ್ನಿಗೆ. ಮನಿನ್ಯಾಗ ಹಾವ ವಗ್ದದ್ದೆ, ಮನೆಮ್ಯಾಲೆ ಏನೈತೊ ಇಲ್ಲ ಏನಾರ ಕಚ್ಗಿಂಡ್ ಹೋಗ್ಯೆತೋ ನೋಡ್ಬೇಕೂಂತ ಏಣಿ ಹಕ್ಕೆಂದ್ ನೋಡ್ತಾನೆ. ಹಾವು ಇರ್ಲಿಲ್ಲ. ಅಲ್ಲಿ ಪವನ್ನಿನ ಸರ ಬಿದ್ದತೆ. ಆ ಸರ ತೆಗೆಂದ್ ಪಂಚೆ ಸೆರಗಿನಾಗೆ ಕಟಿಗೆಂದ. ನಮ್ಮಪ್ನ್ಗ ತೋರ್ಸ್ಬಾಕಾದು. ನಮ್ಮವ್ವಗು ತೋರ್ಸ್ಬಾಕಾದು ಅಂದ್ಕಂದ.

ಮತ್ತೆ ತಿರ್ಗ ಮಾರ್ನೆ ದಿನ ಕೆಲ್ಸಕ್ಕೆ ಹೋಗಬೇಕಲ್ಲ; ಕೆಲ್ಸಕೆ ಹೋಗ್ತಾಯಿದ್ದ. ಯಾವ್ದೊ ಒಂದ್ ದಿಕ್ಕಿಲ್ಲದ ಐಯ್ಯಪ್ಪ ಸತ್ತುತ್ತು ಊರಾಗೆ, ಅಕ್ಸೆ ಬಡ್ಯಾಗೆ ನಾಕಜನ ದೊಡ್ ಮನುಷ್ರು

ಕೂಡ್ಕೆಂದು 'ಪಾಪ ಪರದೇಶಿ ಸತ್ತತೆ ದಫನ್ ಮಾಡ್ಬೇಕು. ಇದ್ದೂರೊರಾದಾಗ ಬಿಡ್ಬಾರದಂದು. ಅವರು ಒಳ್ಳೆ ಜನ ನೋಡ್ತಾ ಕುಂತುದ್ರು. ಅದೆ ಹೊತ್ತಾಗೆ ಕುಡುಗೋಲು ಕೈಯಾಗಿಡ್ಕಂದು ಈ ಹುಡ್ಗ ಹೋಗ್ತಾಯಿದ್ದ. ''ಏ ತಮ್ಮ ಬಾರೋ ಇಲ್ಲಿ''. 'ಯಾರ್ ಸ್ವಾಮಿ?'. 'ಅದೆ ಐಯ್ಯಪ್ಪ ಸತ್‌ಬಿಟ್ಟುದ್ದಾನೆ. ನಿನ್ ಇವತ್ತಿನ ಕೂಲಿ ಕೊಡ್ತೇವಿ. ಆ ಐಯ್ಯಪ್ಪನ ತೆಗಂದೋಗಿ ಒಂಚೂರು ದಫನ್ ಮಾಡಿ ಬಾರೋ ನನ್ನಮಗನೆ. ಮತ್ತೆ ದಫನ್ ಮಾಡಾಕ್ ಹೋಗ್ತಾ ನೋಡು ಉಡ್ದಾರ ಹರಿದಂಗ್ ಬಿಡ್ಬಾಡ. ಉಡ್ದಾರ ಹರ್ದು ದಫನ್ ಮಾಡಿ ಬಾ.''ಅಂದರು.

ಒಬ್ಬನೆ ಹೋಗ್ತಾನೆ. ಹೋಗಿ ಐಯ್ಯಪ್ಪನ್ನ ಗುದ್ನ್ಯಾಗೆ ಹಾಕ್ದ. ಉಡ್ದಾರ ಬಿಡಬ್ಯಾಡ ಹರ್ದಾಕಿ ಬಾ ಅಂದುದ್ರು ನೋಡು! ಉಡ್ದಾರ ಹರಿಯಾಕೋದ್ರೆ ಅಂದೆಂತದು ಸುಡ್ಗಾಡು. ಉಡ್ದಾರ ತುಂಬ ಬರಿ ಇಕ್ಕೇರಿ ನಾಣ್ಣೇವು. ಇಬುತ್ತಿಗಟ್ಟಿಗೊಳಂಗೆ ಮುತ್ತುರತ್ನದಿಂದ ಉಡುದಾರ ಬಿಡೋದ? ಬಿಟ್ ಬಾ ಹರ್ದು ಅಂದುದ್ರು. ಇದನ್ಯಾಕ್ ಬಿಟ್‌ಬರ್ಲಿ ನಾನು. ಇಂತಾ ರೊಕ್ಕದ ಮಾಲು, ಬಂಗಾರದ್ದ. ಅದ್ನೆ ಹರ್ದು ಆ ಪವನ್ನಿನಸರ ಕಟ್ಟಿದ್ರಾಗೆ ಈ ಉಡ್ದಾರನು ಪಂಚೆ ಸೆರಗಿನಾಗೆ ಕಟಿಗೆಂದ. ಓಟೆಬಿದ್ದ. ಹೊಟ್ಯಾಗೆ ಇಟಗಂದ ಮನಿಗೆ ಬಂದ. ಮನಿಗೆ ಬಂದೋನು ಮಕಾಡೆ ಮಕ್ಕಂಬುಟ. ಹೆಂಡ್ತಿ ಉಣ್ಯಾಕ್ ಕರ್ದೆ ಕರಿತಾಳೆ. 'ಏ ಬರ್ಬಾರ್ದ, ಬೆಳಿಗ್ಗೆ ಉಂಡುದ್ದು ಉಣ್ಣಾಕ್ ಬರ್ಬಾರ್ದ' ಅಂತಾಳೆ. ಇದಿಲ್ಲಿ ಸಿಕ್ಕೆತೇಂತ ಹೇಳಿದ್ರೆ ಊರ್ಕುಟೆ ಹೇಳ್ಕೆಂತ ಹೋಗ್ತಾಳೆ. ಇದ್ನ ಹೇಳಿದ್ರೆ ಹೊಟ್ಯಾಗಿಟ್ಕಂತಾಳೋ ಯಾರ್ಕುಟಗಾರು ಹೇಳ್ಕೆಂತ ಹೋಗ್ತಾಳೋಂತ, 'ಏ ತಗಿಯೇ ನನಗೆ ಉಣ್ಣಂಗಾಗಿಲ್ಲ. ನಾ ಉಣ್ಣಂಗಿಲ್ಲಾಂದ.' 'ಯಾಕೆ ಏನಾಗೇತ ?' 'ತಗಿ ಮುಟ್ಟಾಗಿದೇನಿ ನನ್ ಹೊಟ್ಟೆ ಬಾರಿ ನೊಯ್ತದೆ. ನಾನು ಏಳಂಗಿಲ್ಲ ಮುಟ್ಟಾಗಿದೇನಿ. ನಾನು ಉಣ್ಣಂಗಿಲ್ಲ, ಈಕೇನು ಹೊಟ್ಯಾಗಿಟಗಂತಾಳೊ ಹೆಂಗೇಂತ ಅಂದ. ಆಕೇನ್ಮಾಡಿದ್ಲು ಹೋದ್ಲು ಹೇಳಾಕೆ. ನೀರಕ್ಕೆಂತೀಯ ಅನ್ಲುಲ್ಲ, ಉಣ್ತೀಯ ಅನ್ಲುಲ್ಲ, ಮಂದಿಮನಿಗೋದ್ಲು. 'ಓಯ್ ಗಂಗಕ್ಕ ನಮ್ಮನ್ಯಾಗ್ ಅವ್ರು ಎಸ್‌ಮುಸ್ ಆಗಿದಾರಂತೆ. ತಾಯಿ ಸಾಂತಕ್ಕ ನಮ್ಮನಿಯಾಗೆ ಅವ್ರು ಏಸ್‌ಮುಸ್ ಆಗಿದಾರೆ. ಈಕೆ ಸಿಕ್‌ಸಿಕ್ಕೋರಿಗೆಲ್ಲ ಹೇಳಿದ್ಲು. ಈಕೆ ಮುಟ್ಟಾಗಿದೇನಿ ಅಂದುದ್ನೆ ಸೀಮೆಲ್ಲ ಸಾರ್ದೊ. ಮೈಸೂರು ರಾಜ್ರತನಕ ಮುಟ್ಟಂತೆ ಇದು. ಮೈಸೂರು ರಾಜ್ರೇನ್ಮಾಡಿದ್ರು ಬೇಕಾದಂತ ಕಾರು, ಲಾರಿ ಬಸ್ಸು ತಗಂದು ಬಂದ್ರು.

ಗಂಡ್ಮಗ ಹಿಂಗಾಗಿದಾನೆ ಅಂದ್‌ಮ್ಯಾಲೆ ಅವ್ನಿಗೇನಾರ ಧರ್ಮ ಮಾಡ್ಬೇಕೂಂತೇಳಿ ದೊಡ್‌ದೊಡ್ಡೋರು ಹೊಂಟ್ ಬಂದ್ರು. 'ಗಂಡ್ಮಗ ಮುಟ್ಟಾಗಿದಾನಂತಲ ಯಾವ್ದ ಮನಿ ಅದು ?' 'ಇದೇ ಸ್ವಾಮಿ'. ಅವ್ರು ಬಂದೋರು. 'ತಮ್ಮ ಮಾತ ಕೇಳಂಗ್ ಅದಾನೊ ಇಲ್ವೊ ?' 'ಸುಸ್ತಾಗಿ ಮನಗಿದಾನೆ'. 'ತಮ್ಮ ಮೆಲ್ಲುಕರ ಎದ್ ಬಂದಿಯೇ ಇಲ್ಲಪಾ? ಏನಪಾ ಇಷ್ಟ್ ದಿನದೀಲಿ ಆಗಿದ್ದಿ ನೀನು ? ಇದುನ್ನ ನಾನೆಲ್ಲು ಕೇಳುದ್ದುಲ್ಲ. ಹೆಂಗೆ ಇದು?'' ಅಂದ್ರು. ರಾಜ್ರು, ಸಾವ್ಕಾರ್ರು ಎಲ್ಲರು ಬಂದ್ರಲ್ಲ ಅವರು ಕೇಳಿದ್ರು: 'ಹ್ಯಾಂಗಪ ಇದು ? ಇದು ಎಲ್ಲು

ಕೇಳಿದ್ದುಲ್ಲ. ಹೆಂಗಪ್ಪ ?' - ಅಂತ ಕೇಳಿದ್ರು. 'ಸ್ವಾಮಿ ಗಂಡಮಕ್ಳು ಎರಕನದು ಎಲ್ಲು ಕೇಳಿಲ್ಲ. ನಾವು ತಂದಿಗೆ ಮೂವರು ಮಕ್ಳು. ಮೂವರು ಮಕ್ಕೊಳಗೆ ಇಬ್ರಿಗೆ ಹಿಸ್ಯಾಕೊಟ್ರು. ನನ್ನೊಬ್ನಿಗೆ ನಮ್ ತಂದೆತಾಯಿ ಮೂರು ಮಾತ್ ಸಾಕೂಂತ ಹೇಳಿಕೊಟ್ರು'. ಆಮ್ಯಾಲೆ ಹಾದ್ಯಾಳ ಸರ್ಪ ತಂದ್ ಮನೆಮ್ಯಾಗಾಕ್ದೆ. ಪದ್ಕದ ಸರ ಸಿಕ್ತು. ಆಮ್ಯಾಲೆ ಯಾರೋ 'ತಮ್ಮ ಐಯಪ್ಪ ಸತ್ತುದಾನೆ ಉದ್ದಾರ ಹರ್ದು ಹುಗುದು ಬಾರೋಂದ್ರು. ಉದ್ದಾರ ಹರಿಯೋಕೋದ್ರೆ, ಅದ್ರ ತುಂಬ ಇಕ್ಕೇರಿ ನಾಣ್ಣೇವೆ ತುಂಬಿತ್ತು. ಅದುನ್ನು ಪದ್ಕಸರನು ಪಂಚೆ ಸೆರಗಿನಾಗೆ ಕಟ್ಗಂದೆ. ಇದ್ನ ಹೊಟ್ಯಾಗಿಟ್ಕಂಡೆ. ಹೆಂಡ್ತಿಕೂಟು ಹೇಳ್ಳುಲ್ಲ. ಇದುನ್ನ ಹೇಳಿದ್ರೆ ಊರ್ತುಂಬ ಮಾಡ್ತಾಳೆ ಹಿಂಗ್ ಹೇಳಿದ್ರೆ ಮುಚ್ಚಾಕ್ಕೆಂತಾಳೆ ಅಂತ ನಾನು. ''ಮುಟ್ಟಾಗಿದೇನಿ ಕಣೆ ಉಣ್ಣಂಗಿಲ್ಲ' ಅಂದೆ ಸ್ವಾಮಿ. ಅವಾಗ ಅವ್ನ ಬುದ್ದಿವಂತ್ಗೆ ಮೆಚ್ಚಿದ್ರು. ಆ ಪದ್ಕ ಯಾವ ಸವ್ಕಾರನ ಮನೆಗೋಗಿದ್ರು ಬರ್ತಿದ್ದುಲ್ಲ. ಈ ನಾಣ್ಯವು ಯಾರ್ಗ್ಗೆರ ಸಿಕ್ಕಿದ್ರೆ ಏನಿತ್ತು? ಬಡವಗೆ ಸಿಕ್ಕದೆ ಬಿಡು. ತಮ್ಮ ಬಾರಿ ಬುದ್ದಿ ಹಾಕಿದಿ ನನ್ ಮಗನೆ. ಈ ಬುದ್ದಂತ್ಕೆ ನಿಮ್ಮ ತಂದೆ ತಾಯಿ ಕಲ್ಸಿದ್ರಾ ನಿನಿಗೇಂದು ಅವ್ರು ಒಂದ್ ಸಾವ್ರ ಕೈಯಾಗೆ ಕೊಟ್ಟು ಬದಿಕ್ಕೆ ಹೋಗಪ್ಪ ಅಂತ ಹೇಳಿದ್ರು.

ಹೇಳಿದವರು : **ಲಕ್ಷ್ಮಮ್ಮ**, 60 ವರ್ಷ, ಕತ್ತಿಗೆ, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## ೩೧. ಅವಳ ಗಂಡ

ಒಂದು ಊರಿನಲ್ಲಿ ಒಬ್ಬ ಸುದ್ದ ಪೋಲಿ ಹುಡುಗ. ತಂದೆ ಯೋಚ್ನೆ ಮಾಡ್ದ. ಏನು ಪ್ರಾಪ್ತವಯಸ್ಕನಾದ್ರು ಹೀಗೆ ಪೋಲಿ ಆಟ ಆಡ್ತಾಯಿದ್ದಾನಲ್ಲ; ಇವನಿಗೆ ಸಂಬಂಧ ಬೆಳಸಿ ಹೆಣ್ಣು ಕೊಡ್ತಕ್ಕಂತವರು ಯಾರು ? ಹಾಗೇಂತೇಳಿ, ಮಗನೇ ನನಕಂದ; ಮಗು ನೀನಿಷ್ಟು ವಯಸ್ಕನಾದ್ರು ಇನ್ನೂ ನಿನ್ ಪೋಲಿ ಆಟ ಬಿಡ್ಲಿಲ್ಲಲ್ಲೋ. ಯಾರಪ್ಪಾ ನಿನ್ಗೆ ಹೆಣ್ಕೊಡ್ತಾರೆ. ಅಂದ. 'ಹೋ... ಬಿಡಪ್ಪ ಹೆಣ್ಣಂದೊಂದು ಸುದ್ದಿ ಏನಪ್ಪಾ ? ಎಲ್ಡ್ ಆಣೆ ಕೊಡು ಸಂಜೆ ಹೊತ್ತಿಗೆ ಮದುವ್ಯಾಗಿ ಬಂದ್ಬುಡ್ತೀನಿ' ಅಂದ ಮಗ. ಒಂದ್ ಮದುವಿಗೆ ಎಲ್ಡ್ ಸಾವ್ರ ರೂಪಾಯಾದ್ರು ಖರ್ಚ್‌ಮಾಡ್ಬೇಕು. ಅಂತೆದ್ರಾಗೆ ಇವ್ನ ಎಲ್ಡ್ ಆಣೆ ಕೊಡು ಮದುವ್ಯಾಗಿ ಬಂದ್‌ಬುಡ್ತೀನಿ ಅಂತಾನೆಲ್ಲ ಅಂದು ಎರಡಾಣೆ ತಗ್ದು ಕೊಟ್ಟ.

ಸರಿ, ಎರಡಾಣೆ ತಗಂಡ, ಕೋಟು ಷರ್ಟು ಹಾಕ್ಕಂಡ, ಒಂದ್ ಬ್ಯಾಗ ಕೈಲಿಡ್ಕಂಡ, ಬೆಳ್ಳೂರ್ಗೆ ಹೋದ. ಬೆಳ್ಳೂರಲ್ಲಿ ಒಬ್ಬ ಮಿಠಾಯಿಗಾರ, ಒಂದು ಹುಡುಗನ್ನ ಮಿಠಾಯಿ ಅಂಗಡಿತಾವ ಕುಂದುರ್ಸಿಬಿಟ್ಟು, 'ನೋಡಪ್ಪ ನಾನು ಒಳಗೋಗಿ ಊಟಮಾಡ್ಕೆಂದ್

ಬಂದ್ಬುಡ್ತೀನಿ ಸರ್ನೆ. ಹಾಗೆ ಕುತ್ಕಳಪ್ಪ ನೋಡ್ಕೆಂಡು.' ಹಾಗಂತೇಳಿಬಿಟ್ಟು ಒಳಗೆ ಊಟ ಮಾಡ್ತಾಯಿದ್ದ. ಇವನು ಹೋದ -

'ಲೋ ಮಗ ಹ್ಯಾಗೋ ಮಿಠಾಯಿ ?' ಅಂತ ಕೇಳಿದ.
' ಹತ್ತಾಣೆಗೆ ಸೇರು ಸ್ವಾಮಿ'.
'ಹಾಗಾದ್ರೆ ಒಂದ್ ಹತ್‌ಸೇರು ಮಿಠಾಯಿ ಕಟ್ಟಾಕೊ'.
ಏನು! ಇವ್ರು ಹತ್‌ಸೇರು ಮಿಠಾಯಿ ಕೇಳ್ತಾಯಿದ್ದಾರಲ್ಲ....!
'ಹಾಗಾದ್ರೆ ನಿಮ್ಮ ಹೆಸ್ರೇನ್ ಸ್ವಾಮಿ? '

'ಲೋ ನನ್‌ಹೆಸ್ರು ಸುಮ್‌ಸುಮ್ಕೆ ಕಣೋ'. ಏನೋ ಅವ್ರ ತಂದೆ ತಾಯಿಗಳು ಇಟ್ಟಿರೋ ಹೆಸ್ರೂಂತೇಳಿಬಿಟ್ಟು ಮಿಠಾಯಿ ಕಟ್ಟಿಹಾಕ್ದ. ಆಮೇಲೆ ಇವ್ನು ಹೊತ್ಕಂಡ್‌ಹೊಯಿತ್ಲೆ ಇದಾನೆ.

'ಯಪ್ಪಾ, ಮಿಠಾಯಿ ತಗಂಡ್ ಹೊಯ್ತಾಯಿದಾನಲ್ಲೊ'.
'ಯಾರ್ಲ ?'
'ಸುಮ್‌ಸುಮ್ಕೆಯ'.
'ನನ್‌ಕೂಡಾನೆ ಹಾಸ್ಯ ಮಾಡ್ತಿ ಏನಪ್ಪಾ ?'
'ಅಪ್ಪಾ ಮಿಠಾಯಿ ತಗಂಡ್ ಹೊಯ್ತಾ ಅವ್ನೆ'.
'ಯಾರೋ?'
'ಸುಮ್‌ಸುಮ್ಕೆಯ.'

'ಸುಮ್‌ಸುಮ್ಕೆ ನನ್‌ಕೂಡೆ ಹಾಸ್ಯಾಡ್ತೀಯ? ಸರ್ರನೆ ಊಟಮಾಡಿ ಬಂದ್ಬುಡ್ತೀನಿ ಇರಪ್ಪ.' ಸರಿ ಇವನು ತಗಂಡ್ ಹೋಗೇಬಿಟ್ಟ.

ಅಲ್ಲಿ ಅಗಸರು ರಾಜರ ಮನೆ ಬಟ್ಟೆಗಳನ್ನ ಇಸ್ತ್ರಿಮಾಡಿ ಒಣಗಾಕ್ಯವ್ರೆ. ಮದ್ಲೆ ಅಗಸರು; ಇವ್ನು ಅಲ್ಲಿಗೆ ಬಂದೋನೆ 'ಅಲ್ಲಮ್ಮ ಆಚೆ ಕೇರೀಲಿ ಬೇಕಾದಷ್ಟು ಮಿಠಾಯಿ ಸಿಗ್ತಾ ಅವೆ. ನಾನು ಬೇಕಾದಷ್ಟು ಈಸ್ಗಂಡ್ ಬಂದೀನಿ. ಬ್ಯಾಗಿಗೆ ಬ್ಯಾರೆ ತುಂಬ್ಕಂಡ್‌ಬಂದೀನಿ ಹೋಗಮ್ಮ.... ಹೋಗು..... ಈಸ್ಕಂಡ್ ಬಾ ಹೋಗಮ್ಮ'ಅಂದ.
'ಸ್ವಾಮಿ ಯಾವ ಕೇರೀಲಿ ಸಿಕ್ತಾ ಐತೆ ಸ್ವಾಮಿ ?'
' ಆಚೆ ಕೇರೀಲಿ ಸಿಗ್ತಾ ಅವೆ. ಹೋಗಮ್ಮ'
'ಹಾಗಾದ್ರೆ ಒಂದ್ ಸ್ವಲ್ಪ ಬಟ್ಟೆ ನೋಡ್ಕೊಳ್ತಾಯಿರಿ'.
'ಹೋಗಮ್ಮ ನೋಡ್ಕಂತೀನಿ'.
'ಸ್ವಾಮಿ ನಿಮ್ಮ ಹೆಸ್ರು?'

'ನನ್ನೆಸರು ಕೊಟ್ಬೋನು ಕಣಮ್ಮ'.

ಏನೋ ಇರ್ಬೋದೂಂತೇಳಿ ಓಡೋಗ್ ಬಿಟ್ಲು. ಅಷ್ಟತ್ಗೆ ಇವ್ನು ಬಟ್ಟೆನೆಲ್ಲ ಗಂಟ್ ಕಟ್ಗಂಡು ಓಡ್ತಾ ಇದಾನೆ.

'ಅಯ್ಯಯ್ಯಪ್ಪಾ ನನ್ ಬಟ್ಟೇನ್ ತಗಂಡೋಯ್ತಾ ಅವ್ನೆ. ಹಿಡ್ಕಳ್ರಪ್ಪೋ....'ಅಂದಳು.

'ಯಾರಮ್ಮ ?'

'ಕೊಟ್ಬೋನು'

'ಕೊಟ್ಬೋನು ಕೊಟ್ಬುದ್ದ ತಗಂಡ್ ಹೋಗ್ತಾನೆ. ಅವುನ್ನ ಹಿಡ್ಕೊಂಡ್ರೆ ಬಿಡ್ತಾನ ?' ಇವ್ರು ಸುಮ್ನೆ ಆಗಿಬಿಟ್ರು.

ಒಂದ್ ನಾಕೈದ್ ಜನ ಹೆಂಗುಸ್ರು ಒಂದ್ ಹೆಣ್ಮಗುನ್ನ ಕರಕಂಡ್ ಬರ್ತಾ ಇದಾರೆ. ಕೆರೇಲಿ ಕೋಡಿ ಬಿದ್‌ಬಿಟ್ಟು ನೀರ್ ಕಟ್ಕೊಂಡ್ ಬಿಟ್ಟದೆ. ಅಲ್ಲಿಗೆ ಇವ್ನು ಬಂದಿದಾನೆ. 'ಅಣ್ಣಾ ನಮ್ಮನ್ ಸ್ವಲ್ಪ ಆಚೆಗೆ ಬಿಡಣ್ಣ'. ಅಂದರು 'ಅಯ್ಯೋ ಬರ್ರಮ್ಮಾ ಬುಡ್ತೀನಿ ಅಂತ ಒಬ್ಬೊಬ್ರುನ ಬಿಡ್ತಾ ಇದಾನೆ. ಈ ಹೆಣ್ಮುಮಗ ಮಾತ್ರ ಕಡೆಗೆ ಉಳಿಸ್ಕಂಡಿದಾನೆ.

'ನೋಡೆಯಕ್ಕ ಬಾಳ ಒಳ್ಳೇನ್ ಕಣೇ ಇವ್ನು. ಯಾರೂ ಬುಡ್ಲಿಲ್ಲ. ಈ ಮನಸ ಬಿಡ್ತಾ ಇದ್ದಾನೆ. ನಿನ್ ಹೆಸರೇನಪ್ಪ ?ಅಂತ ಕೇಳಿದಳು.

'ಅಮ್ಮಾ ನನ್ನೆಸ್ರು ಅವಳ ಗಂಡ'.

ಇರಬೋದೇನೊ ಅಂದು ಸುಮ್ನಾದ್ರು. ಇವ್ರೆಲ್ಲ ಈಚೆಗೆ ಅವ್ರೆ. ಆಚೇಲಿ ಅವ್ನು ಆ ಹೆಣ್ ಎಳಕಂಡ್ ಹೊಯ್ತಾ ಇದಾನೆ. ಆ ಹೆಣ್ಣೋರು -

'ಅಯ್ಯಯ್ಯಪ್ಪೊ ನನ್ನ ಮಗಳ ಕರಕಂಡ್ ಹೋಯ್ತಾನೆ ಹಿಡುಕಳ್ರಪ್ಪೋ' ಅಂದಳು.

'ಯಾರಮ್ಮಾ ?'

'ಅವಳ ಗಂಡ'.

'ಅಯ್ಯಯ್ಯೊ! ಅವಳ ಗಂಡ ಅವಳ್ನ ಕರಕಂಡೋದ್ರೆ ನೀವ್ಯಾಕೆ ಹೊಯ್ಕೆಂತೀರಿ'.

ಕೋರ್ಟಿಗೆ ಯಾಜ್ಯಕ್ಕೆ ಇದನ್ನು ಹಾಕಿದ್ರಂತೆ. ಕೋರ್ಟಿನಲ್ಲಿ ತೀರ್ಮಾನ ಮಾಡಿದ್ರು.

'ಏನಪ್ಪಾ, ನಿನ್ನ ಮಿಠಾಯಿ ಕದಕಂದ್ ಹೋದೋರು ಯಾರಪ್ಪಾ?'

'ಸುಮ್‌ಸುಮ್ನೆ.'

'ಏನೋ ? ಕೋರ್ಟ್‌ನಲ್ಲಿ ಆಕ್ಲಾಸಾ ಆಡಾಕ್ ಬಂದಿದೀಯ? ಮಿಠಾಯಿ ಕದ್ಕಂಡ್ ಹೋದೋರು ಯಾರೂಂದ್ರೆ ಸುಮ್‌ಸುಮ್ಕೆ ಅಂತೀಯ ? ಕೇಸ್ ವಜಾ' ಅಂದ್ರು.'

'ಯಾರಮ್ಮ ನಿನ್ ಬಟ್ಟೆ ತಗಂಡ್ ಹೋದೋರು ?'

'ಸ್ವಾಮಿ, ಕೊಟ್ಬೋನು'.

'ಕೊಟ್ಬೋನು ಕೊಟ್ಬುದ್ದ ತಗಂಡ್ ಹೋದ. ಅದ್ಕೇನಮ್ಮಾ ? ಇದ್ನ ಕೋರ್ಟ್‌ನಲ್ಲಿ ತೀರ್ಮಾನ ಮಾಡಾಕ್ ಆಯ್ತದ ?'

'ಯಾರಮ್ಮ ನಿನ್ ಮಗಳ ಕರಕಂಡ್ ಹೋದೋನು ?'

'ಸ್ವಾಮಿ ಅವಳ ಗಂಡ'.

'ಅವಳ ಗಂಡ ಅವಳ್ನ ಕರಕಂಡೋದ್ರೆ, ನಿಂದೇನಮ್ಮ ?'

ಆಗ ಎರಡಾಣೆನು ಉಳಿಸ್ಕಂಡು ಹೆಣ್ಣೂ ತಂದು ನೋಡಪ್ಪಾ ಹೆಣ್ ತಗಂಡ್ ಬಂದಿದೀನಿ ಅಂತ ತೋರಿಸ್ದ.

ಹೇಳಿದವರು : **ತಿರುಮಲಯ್ಯ,**
55 ವರ್ಷ, ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು.

## ೩೨. ಮೂರು ಕೋಟಿ ಸುಳ್ಳು ಹೇಳುವವನ ಕಥೆ

ಒಂದೂರಲ್ಲಿ ಒಬ್ಬ ಮುದ್ಕ ಇದ್ದ. ಅವ ಮೂರು ಕೋಟಿ ಸುಳ್ಳು ಒಬ್ನೆ ಹೇಳ್ತಿದ್ದ. ಇನ್ನೊಂದೂರಲ್ಲಿ ಮೂವರು ಮೂರ್ಕೋಟಿ ಸುಳ್ಳು ಹೇಳ್ತಿದ್ರಂತೆ. ಅವ್ರು ಮೂವರು ಮಾತಾಡ್ಕೊಂಡ್ರಂತೆ. ನಾವು ಮೂವರು ಮೂರ್ಕೋಟಿ ಸುಳ್ಳೇಳ್ತೀವಿ. ಇನ್ನೊಂದೂರಲ್ಲಿ ಒಬ್ನೆ ಮೂರ್ಕೋಟಿ ಸುಳ್ಳೇಳ್ತಾನಂತೆ. ಅದೆಂಗೆ ಹೇಳಾನು ? ಅವ್ನ ನಾವೊಂದ್ಸಾರಿ ನೋಡ್ಕೊಂಡ್ಬರ್ಬೇಕು ಅಂತ ಮೂವರೂ ಹೊರಟ್ರು.

ಈ ಮೂರ್ಕೋಟಿ ಸುಳ್ಳೇಳೋನು ಏನ್ಮಾಡ್ದ ಅಂದ್ರೆ ಗಿಡಕ್ಕೋಗಿ ಎರ್ಡು ಮೊಲದ ಮರಿ ಹಿಡ್ಕೊಂಡ್ಬಂದ. ಎರಡ್ಕೂ ಒಂದೇ ಅಳತೆ ಲಂಗ ಹೊಲಿಸಿ ರಾಗಿಕಲ್ಲಿನ ಗೂಟಕ್ಕೆ ಕಟ್ಟಾಕ್ದ. ಇವರು ಮೂರು ಮಂದಿ ಬರೋ ಸಂಗ್ತಿ ಗೊತ್ತಾಗಿ ನನ್ನೋಡೋಕೆ ಮೂರ್ಕೋಟಿ ಸುಳ್ಳೇಳೋ ಮೂರು ಮಂದಿ ಬರ್ತಾರೆ. ನೀನು ಒಂದು ಮೊಲದ ಮರೀನ ರಾಗಿಕಲ್ಲಿನ ಗೂಟಕ್ಕೆ ಕಟ್ಟಾಕಿರು, ಆಮೇಲೆ ಏನು ಬೇಕು ಅದ ಮಾಡ್ತೀನಿ ಅಂತ ಹೆಡ್ತಿಗೆ ಹೇಳಿದ.

ಅವ್ರು ಮೂರು ಜನ ಮೂರುಕೋಟಿ ಸುಳ್ಳೇಳೋರು ಬಂದ್ರು. ಅವರನ್ನ ಹೊಲಕ್ಕೆ ಹೋಗಿದ್ದು ಬರೋಣ ಬನ್ನಿ ಅಂತ ಜೊತೆಗೆ ಒಂದು ಮೊಲದ ಮರಿಯನ್ನು ಕರ್ಕೊಂಡು ಹೋದ. ಹೊಲದತಾಕೆ ಹೋದ್ಮೇಲೆ "ಓಹೋ ನಾನು ನನ್ನೆಂಡ್ತಿಗೆ ಅಡ್ಗೆ ಮಾಡು ಅಂತ ಹೇಳ್ದೇನೆ ಬಂದ್ಬಿಟ್ಟೆ. ನೀನು ಮನೆಗೋಗ್ಬುಟ್ಟು ನಮ್ಮೋಳ್ಗೆ ಅವರ್ಗೆಲ್ಲ ಅಡ್ಗೆ ಮಾಡ್ಬೇಕಂತೆ ಅಂತೇಳ್ಬುಡು ಅಂದ್ಬುಟ್ಟು ಕಂಕುಳಲ್ಲಿದ್ದ ಮೊಲದ ಮರೀನ ಬಿಟ್ಟ". ಅದು ಗಿಡ ಬಿದ್‌ಬಿಡ್ತು.

ಹೊಲ ಸುತ್ತಾಡಿಕೊಂಡು ಮನೆಗೆ ಬರೋಹೊತ್ಗೆ ಇವ್ರು ಅಡ್ಗೆ ಎಲ್ಲಾ ರೆಡಿ ಮಾಡಿ, ಮನೇಲಿದ್ದ ಮೊಲದ ಮರೀನಾ ರಾಗಿಕಲ್ಲಿಗೆ ಕಟ್ಟಾಕೊಂಡಿದ್ಲು. ಏಳ್ರಣ್ಣ ಕೈಕಾಲು ತೊಳ್ಕೊಳ್ಳಿ, ಊಟ ಮಾಡೋರಂತೆ ಅಂದ್ಲು. ಅಂತೆ ಎಲ್ಲರೂ ಊಟ್ಟ ಮಾಡಿದ್ರು. ಆಮೇಲೆ ಆ ಮೂವರು ಮಾತಾಡ್ಕೊಂಡ್ರು. ನೋಡ್ರೋ ಈ ಮೊಲಾನ, ಎಷ್ಟೆಲ್ಲ ಬುದ್ದಿ ಅದೆ ಅಂದ್ಕೊಂಡ್ರು. ಅದರ ಮೇಲೆ ಇವರಿಗೆ ಮನಸುಬಿತ್ತು. ಮೂರ್ಕೋಟಿ ಸುಳ್ಳೇಳೋನ ಕೇಳುದ್ರು. ಈ ಮೊಲಾನ ನಮ್ಗೆ ಕೊಡು ಅಂತ. ಅದ್ಕೆ ಅವ ಇಲ್ಲಪ್ಪ ನಾನು ಹೊಲದತ್ರ ಹೋಗಿ ಏನೇ ಹೇಳಿ ಕಳ್ಸಿದ್ರೂ ಎಲ್ಲಾ ಕೆಲ್ಸಾನು ಮಾಡುತ್ತೆ. ನಾನು ಕೊಡೋದಿಲ್ಲ ಅಂದ. ಇಲ್ಲಣ್ಣ ನೀನು ಇನ್ನೊಂದು ತಕ್ಕೊಂಡು ಕಲ್ಸೋವಂತೆ ನಾವು ಒಂದು ಸಾವಿರ ಕೊಡ್ತೀವಿ ಅಂತೇಳಿ, ಒಂದ್ಸಾವಿರ ಕೊಟ್ಬುಟ್ಟು ಈಸ್ಕೊಂಡ್ಬಂದ್ರು.

ಅವರ ಊರತ್ರಕ್ಕೆ ಬಂದ್ಮೇಲೆ ಮೊಲ ಬಿಟ್ಬುಟ್ಟು, ನಮ್ಮ ಮೂರು ಮನೆಗೆ ಹೋಗಿ ನಮ್ಮೆಂಡ್ತೀರ್ಗೆ ಹೇಳ್ಬುಡು, ಅಡ್ಗೆ ಮಾಡಿಸು ಅಂತ ಅಂದ್ಬಿಟ್ಟು ಬಿಟ್ಬಿಟ್ರು. ಅದು ಗಿಡ ಬಿದ್ಬಿಡ್ತು.

ಎಲ್ಲ ಆಮೇಲೆ ಮನೆಗಳಿಗೆ ಬಂದ್ರು. ಹೆಂಡ್ತಿರ ಕೇಳುದ್ರು. ಎಲ್ಲೆ ಮೊಲ ಬರ್ಲಿಲ್ವಾ? ಅಡ್ಗೆ ಮಾಡ್ಲ ಅಂತ. ಯಾವ ಮೊಲಾನು ಇಲ್ಲ ಅಂತ ಅವ್ರು ರೇಗಿದ್ರು. ಆಗ ಅವ್ರು ನೋಡ್ದ್ರೇನೋ ಮೂರ್ಕೋಟಿ ಸುಳ್ಳೇಳೂನು ಹೆಂಗೆ ಮೋಸ ಮಾಡ್ದ ? ಬನ್ರೋ ನಾವೆಲ್ಲ ತಿರ್ಗಿ ಹೋಗಿ ಅವನ್ಗೆ ಒದ್ದು ಹಣ ವಸೂಲ್ ಮಾಡ್ಕೊಂಡು ಬರೋಣ ಅಂದ್ಕೊಂಡು ಬಂದ್ರು.

ಅಷ್ಟೊತ್ಗೆ ಮೂರ್ಕೋಟಿ ಸುಳ್ಳೇಳೊನ್ಗೆ ಗೊತ್ತಿತ್ತು. ಅವ್ರು ಬರ್ತಾರೆ ಅಂತ. ಹೆಂಡ್ತಿಗೆ ಹೇಳ್ದ. ಮೈದಾ ಹಿಟ್ಟೇಲಿ ಬೊಂಬೆ ಮಾಡಿ ಸೀರೆ ಉಡ್ಸಿ ಮಡಗಿರ್ತೀನಿ. ದುಡ್ಡಿಸ್ಕೊಂಡೋಗಕೆ ಬರ್ತಾರೆ. ನಡುಮನೇಲಿ ನೀನಿರು. ನಿನ್ನ ಕತ್ತರಿಸಿ ಹಾಕಿಬಿಡ್ತೀನಿ ಅಂದ್ಬುಟ್ಟು ಬೊಂಬೆ ಕತ್ತರಿಸಾಕಿಬಿಡ್ತೀನಿ. ಅದನ್ನ ನೋಡ್ಬುಟ್ಟು ಹೊರಟು ಹೋಗ್ತಾರೆ. ಅಂದ. ಹಂಗೆ ಮಾಡಿ ಅಂದ್ಲು.

ಅವ್ರು ಬಂದು ಮೋಸ್ಗಾರ ಮೂರ್ಕೋಟಿ ಸುಳ್ಳೇಳೋನೆ ಅಂತ ಬೈಯ್ದಾಗ ಹೆಂಡ್ತಿಗೆ ಹೊಡ್ದ. ಹೊಟ್ಟೇಲಿದ್ದ ಕುಂಕುಮದ ನೀರೆಲ್ಲ ರಕ್ತ ಚೆಲ್ಲಾಡ್ದಂಗೆ ಚಲ್ಲಾಡ್ಬುಡ್ತು. ನಿಜವಾದ

ಹೆಂಡ್ತಿ ಒಳ್ಗೆ ಅವಳೆ ಸಾಯ್ಲಿಲ್ಲ. ಇವ್ರು ಅಯ್ಯೋ ಇದೇನು ಹಿಂಗೆ ಮಾಡ್ದ ಅಂತ, ಹೊರಗೆ ಬಂದ್ಬಿಟ್ರು. ಹೋಗ್ರಯ್ಯ ನನ್ನೆಂಡ್ತಿ ಸತ್ರು ತಿರ್ಗಿ ಬದ್ಕಿಸ್ಕೊಂತೀನಿ ಅಂದ.

ಪಾತ್ರೆಗಾಕೋ ಸಿಂಬಿ ಇತ್ತಲ್ಲ ಅದ ತಂದು ಮೂರು ಸಾರಿ ಇಳಿ ತಗ್ದಾಗೆ ಮಾಡಿ, ಮಾಡ್ದಾಗ ಕೋಣೇಲಿದ್ದ ಹೆಡ್ತಿ ಎದ್ದು ಬಂದ್ಲು. ಅದ್ನೋಡಿ ಇವ್ರು ನಾವು ನಮ್ಮೆಂಡ್ತಿರ ಕೊಂದ್ರು ಬದುಕಿಸ್ಕೋಬೋದು ಅಂದ್ಕೊಂಡು ಅವನ್ನ ಕೇಳುದ್ರು. ಅದ ನಮ್ಗೆ ಕೊಟ್ಬುಡಣ್ಣ ಅಂತ. ಇಲ್ಲ ನಾನು ಕೊಡೋದಿಲ್ಲ. ನೀವು ಈಗಾಗ್ಲೆ ಮೊಲದ ಹಣಕ್ಕೆ ಬಂದಿದ್ದೀರಿ. ಅದ್ಕೆ ಕೊಡೋದಿಲ್ಲ ಅಂದ. ಇಲ್ಲ ಕಣಣ್ಣ ಹಿಂದೆ ಆದ್ದ ಎಲ್ಲಾನು ಮರ್ತುಬುಡು. ಅಣ್ಣೋ ಆದ್ದಾಯ್ತು ಹೋದ್ದೋಯ್ತು ಎರ್ಡು ಸಾವಿರ ಕೊಡ್ತೀವಿ ಕೊಡಣ್ಣ ಅಂದ್ಬುಟ್ಟು ದುಡ್ಡು ಕೊಟ್ಬುಟ್ಟು ಆ ಸಿಂಬಿ ಈಸ್ಕೊಂಡ್ಬಂದ್ರು. ಬಂದೋರೆ ಮೂವರು ಒಂದೊಂದೇಟ್ಗೆ ತಮ್ಮೆಂಡ್ರನ್ನ ಕತ್ತರಿಸಾಕ್ಬುಟ್ರು. ಸಿಂಬಿ ತಕ್ಕೊಂಡು ಇಳಿ ತಗುದ್ರು. ಅವ್ರು ಬದುಕ್ಲಿಲ್ಲ. ಓಹೋ ಇಲ್ಲೂ ನಮ್ಗೆ ಮೂರ್ಕೋಟಿ ಸುಳ್ಳೇಳೋನು ಕೈಕೊಟ್ನಲ್ಲ ಅಂದ್ಕೊಂಡು ಬನ್ರಲ್ಲ ನಾವೆಲ್ಲ ಹೋಗಿ ಅವನೆಂಡ್ತಿಯಾ ಕತ್ತರಿಸಿಬಿಡೋಣ ಅಂದ್ಕೊಂಡು ಬಂದ್ರು.

ಇಲ್ಲಿ ಇವ್ನ ಹೆಂಡ್ತಿಗೆ ಹೇಳ್ಕೊಟ್ಟಿದ್ದ. ಅವ್ರು ತಿರುಗಿ ಬರ್ತಾರೆ. ನೀನೇನ್ಮಾಡು ನನ್ನ ತಲೆದಸೀಲಿ ಅಕ್ಕಿ ಬೆಲ್ಲ ದೀಪ ಎಲ್ಲಾನು ಇಟ್ಕೊಂಡು ನನ್ ಬಾಯ್ಗೆ ಎಲೆ ಅಡ್ಕೆ ಕುಟ್ಟಿ ತುಂಬಿಟ್ಟು ತಲೆದಸೀಲಿ ಕುಂತ್ಕೊಂಡು ಬಡ್ಕೋ. ನಾನು ಅವರ್ಗೆ ಮಾಡ್ತೀನಿ ಅಂದ. ಅವ್ಳು ಅಂಗೆ ಮಾಡ್ತಾ ಇದ್ಲು. ಅವ್ರು ಮೂವರು ಬಯ್ಕೊಂಡು ಬಂದ್ರು. ಅವರನೋಡ್ಬುಟ್ಟು ಮೂರ್ಕೋಟಿ ಸುಳ್ಳೇಳೋನ ಹೆಂಡ್ತಿ ಅಣ್ಣ ನನ್ಗಂಡ ಸತ್ಹೋದ ಕಣಣ್ಣ. ಇನ್ನು ನನಗ್ಯಾರಣ್ಣ ದಿಕ್ಕು ? ಇವ್ನ ತಕೊಂಡೋಗಿ ಎಲ್ಲಾದ್ರೂ ನೀರಲ್ಲಿ ಮುಳುಗಿಸಿಬಿಡ್ರಣ್ಣ. ನಾನು ನಿಮ್ಮ ಜೊತೆ ನಿಮ್ಮೂರ್ಗೆ ಬಂದ್ಬುಡ್ತೀನಿ ಅಂದ್ಲು.

ಅವರೇನ್ಮಾಡಿದ್ರು ಒಂದು ಮಂಕ್ರಿಗೆ ಹಾಕ್ಕೊಂಡು ಹೊತ್ಕೊಂಡು ಸಮುದ್ರಕ್ಕೆ ಹಾಕ್ಬಿಡೋಣ ಅಂದ್ಕೊಂಡ್ಬಂದ್ರು. ಅಲ್ಲೊಂದು ಪಾಳು ಮಂಟಪ ಇತ್ತು. ಅಲ್ಗೆ ಬರೋ ಹೊತ್ಗೆ ಗಾಳಿಮಳೆ ಎಲ್ಲಾ ಬಂದ್ಬುಡ್ತು. ದನಕುರಿ ಮೇಯ್ಸೋಕೆ ಹೋಗಿದ್ದ ಹುಡ್ಗ ಅವೆಲ್ಲಾನು ಹೊಡ್ಕೊಂಡ್ಬಂದು ಅಲ್ಲಿ ನಿಂತ್ಕೊಂಡಿದ್ದ. ಇವ್ರು ಆ ಮೂರ್ಕೋಟಿ ಸುಳ್ಳೇಳೋನಿದ್ದ ಮಂಕ್ರಿನ ಅಲ್ಲಿ ಇಟ್ಬುಟ್ಟು ನಿಂತ್ಕೊಂಡಿದ್ರು.

ಆ ಕತ್ಲೇಲಿ ಮೂರ್ಕೋಟಿ ಸುಳ್ಳೇಳೋನು ಆ ಹುಡ್ಗನ ಕೇಳ್ದ. ನಿನ್ಗೆ ಅಪ್ಪ ಅಮ್ಮ ಇದ್ದಾರಾ ಅಂತ. ಈ ಹುಡ್ಗ ನನ್ಗೆ ಯಾರೂ ಇಲ್ಲ ಕಣಣ್ಣ. ನಾನು ಒಬ್ಬ ಗೌಡ್ನಟ್ಟೀಲಿ ಅನ್ನ ಬಟ್ಟೆಗೆ ಕೆಲ್ಸ ಮಾಡ್ಕೊಂಡಿವ್ನಿ, ಅಂತು. ಆಗ ಆ ಹುಡ್ಗನ್ಗೆ ಕೇಳ್ದ. ನೀನು ಈ ಮಂಕ್ರೀಲಿ ಕುಂತ್ಕೊಂಡ್ರೆ, ಹೊಳೆಗೆ ಹಾಕ್ತಾರೆ. ಆಗ ಅಲ್ಲಿ ಅಪ್ಪ ಅವ್ವ ಎಲ್ಲ ಸಿಗ್ತಾರೆ ಅಂದ. ಆ ಹುಡುಗನ್ಗೆ ಆಸೆ ಆಯ್ತು. ನಾನು ಕುಂತ್ಕೋತೀನಿ ಅಂತ ಕುಂತ್ಕೊಂಡ. ಆ ಹುಡ್ಗನ್ನ

ಕೂರಿಸ್ಬಿಟ್ಟು ಇವ್ನು ಎದ್ಬುಟ್ಟು ಆ ಕುರಿ ದನಕರ ಎಲ್ಲಾನು ಹೊಡ್ಕೊಂಡು ಮನೆಗೆ ಬಂದ್ಬುಟ್ಟ.

ಇವ್ರು ಆ ಮಂಕ್ರಿ ತಕ್ಕೊಂಡೋಗಿ ಸಮುದ್ರಕ್ಕೆ, ಹಾಕ್ಬುಟ್ಟು ಅವನೆಂಡ್ತಿ ಕರ್‍ಕೊಂಡೋಗೋಣ ಅಂದ್ಕೊಂಡ್ಬಂದ್ರು. ಅವ್ರು ಬರೋ ಹೊತ್ಗೆ ಇವ್ನು ದನಕುರಿ ಎಲ್ಲಾನು ಕಟ್ತಾ ಇದ್ದ. ಅದ್ನ ನೋಡಿ ಕೇಳುದ್ರು. ಇದೇನಣ್ಣ ಮೂರ್‍ಕೋಟಿ ಸುಳ್ಳಣ್ಣ ಇದೆಲ್ಲ ಹೆಂಗಾಯ್ತಣ್ಣ ಅಂತ.

ಅವ್ನು ಹೋಗ್ರೋ ನಿಂತ ನೀರಿಗಾಕ್ದೊತ್ಗೆ ಇಷ್ಟೊಂದು ಸಿಕ್ಕೋ, ಹರಿಯೋ ನೀರ್‍ಗಾಕಿದ್ರೆ ಇನ್ನು ಸಿಕ್ತಿದ್ದೋ ಅಂದ್ನಂತೆ. ಇವ್ರೇನ್ಮಾಡಿದ್ರು ಹೌದೇನಣ್ಣ ನಮ್ಗೂ ಸಿಕ್ಕಾದೇನಣ್ಣ ಅಂತ ಕೇಳಿದರು. ನಮ್ಮ ಒಬ್ಬೊಬ್ಬರ್‍ನೆ ಹಾಕಣ್ಣ ಅಂದ್ರು.

ಇವನೇನ್ಮಾಡ್ದ ಒಬ್ಬೊಬ್ಬನ್ನೆ ಮಂಕ್ರೀಲಿ ಹಾಕ್ಕೊಂಡೋಗಿ ತುಂಬಿ ಹರಿಯೋ ಹೊಳೇಲಿ ಹಾಕ್ಬುಟ್ಟ. ಅವ್ರು ಕೆಳಮೊಕ್ನಾಗಿ ಕೊಚ್ಕೊಂಡು ಹೋದ್ರು. ಇವ್ನು ಹೆಂಡ್ತಿ, ದನಕುರಿ ಜೊತೆ ಸಂಸಾರ ಮಾಡ್ಕೊಂಡು ಸುಖವಾಗಿದ್ದ. ಕೆಟ್ಟೋರ್‍ಯಾರು ? ಮೂರುಜನ, ಮೂರ್‍ಕೋಟಿ ಸುಳ್ಳೇಳೋರು.

ಹೇಳಿದವರು : **ಅಕ್ಕಯ್ಯಮ್ಮ.**

## ೩೩. ಮುದ್ದೇಗೌಡನ ಮಗ

ಒಂದೂರಲ್ಲಿ ಒಬ್ಬ ರಾಜಾ ಇರ್‍ತಾನೆ. ಅದೇ ಊರಲ್ಲಿ ಒಬ್ಬ ಮುದ್ದೇಗೌಡ ಅಂತ ಇರ್‍ತಾನೆ. ಮುದ್ದೇಗೌಡನಿಗೆ ಏಳುಜನ ಗಂಡುಮಕ್ಳು ಇರ್‍ತಾರೆ. ಏಳುಜನ ಗಂಡುಮಕ್ಳು ಇದ್ರೇ ಅದರಲ್ಲಿ ಆರುಜನಕ್ಕೆ ಮದ್ವೆ ಮಾಡಿರ್‍ತಾರೆ. ಅವರಪ್ಪ ಕಿರೇಮಗನಿಗೆ ಇನ್ನೂ ಮದ್ವೆ ಮಾಡಿರಲಿಲ್ಲ. ಅವನ್ಗೂ ಮದ್ವೆ ಮಾಡ್ಬೇಕು, ಮಾಡ್ಕೋಳ್ಳೊ, ಆರುಜನರ ಮದ್ವೆ ಮಾಡಿದ್ದೀನಿ, ನಿನ್ನೊಬ್ಬನ ಮದ್ವೆ ಮಾಡಿಲ್ಲ, ಮದ್ವೆ ಮಾಡ್ಕೊಳ್ಳೋ ಅಂತ ಹೇಳ್ತಾ ಇರ್‍ತಾನೆ. ಇಲ್ಲ ನಾನು ಎಲ್ಲೂ ಹೆಣ್ಣು ನೋಡಲ್ಲ, ನಂಗೆ ಬ್ಯಾಡ ಮದ್ವೆ ಅಂತಾನೆ.

ಅವನೇನು ಮಾಡ್ತಾನೆ ? ತಿರ್‍ಗಾ ಹೋಗ್ಬಿಟ್ಟು ಪದ್ಮಾವತಿ ಸೂಳೇಮನೇಲಿ ಸೇರ್‍ಕೊಂಡಿರ್‍ತಾನೆ. ಅಪ್ಪ ಎಲ್ಲಿ ಯೆಣ್ಣನ ಫೋಟೊ ಹಿಡಿಕ್ಕೊಂಡು ತಗಂಬಂದ್ರು, ಇವ್ನು ಒಪ್ಪದೇ ಇಲ್ಲ. ಹೆಣ್ಣು ಒಪ್ಪದೇ ಇರೋ ಹೊತ್ಗೆ ಏನ್ ಮಾಡ್ಬಿಡ್ತಾನೆ ? ಇವ್ರು ಅದೇ ಇವ್ನ

ಫೋಟೊನೂ ಇಡಿಸ್ಕೊಂಬಿಡ್ತಾರೆ. ಬುತ್ತಿ ಕಟ್ಕೊಂಡು ಹೋಗ್ತಾ ಇರ್ತಾರೆ, ಯೆಣ್ಣು ನೋಡಾಕೆ. ಹೆಣ್ಣು ಹುಡಿಕ್ಕೊಂಡು, ಹೆಣ್ಣು ಹುಡಿಕ್ಕೊಂಡು ವೋಗ್ತಾರೆ. ವೋಗ್ತಾ ಇರ್ಬೇಕಾದ್ರೆ, ಅತ್ಲೊಂದು ಪಟ್ನ. ಆ ರಾಜನ ಮಗಳಿಗೆ ಗಂಡು ಹುಡಿಕ್ಕೊಂಡು ಬರ್ತಾ ಇರ್ತಾರೆ. ಅಮ್ಯಾಕೆ ಇವ್ರು ಇತ್ಲಿಂಧ ಹೋಗ್ತಾರೆ. ಅವ್ರು ಅತ್ಲಿಂದ ಬರ್ತಾರೆ. ಆ ಕಡೆ ದಡದಲ್ಲಿ ಅವ್ರು ಬುತ್ತಿ ಹಂಚ್ಕೊಂಡು ಊಟ ಮಾಡ್ತಾ ಇರ್ತಾರೆ. ಈ ಕಡೆ ದಡದಲ್ಲಿ ಇವ್ರು ಬುತ್ತಿ ಬಿಚ್ಗೊಂಡು ಊಟ ಮಾಡ್ತಾ ಇರ್ತಾರೆ. ಯಿಂಗೆ ಇರ್ಬೇಕಾದ್ರೆ ಏನ್ಮಾಡ್ತಾರೆ? ಅವ್ರು ಆ ಕಡೆ ದಡದಿಂದ ಈ ಕಡೆ ದಡಕ್ಕೆ ಬರ್ತಾರೆ. ಯಾವೂರು ? ಏನು ? ಎತ್ತ ? ಅಂತ ಕೇಳ್ತಾರೆ. ನಮ್ಮೊಂದು ಪಟ್ನ. ನಾವೊಂದು ದೇಶದವ್ರು. ನಾವೊಂದು ಹೆಣ್ಣಗೆ ಒಂದು ಗಂಡು ಹುಡಿಕ್ಕೊಂಡು ಹೋಗ್ತಾ ಇದ್ದೀವಿ ಅಂತ ಹೇಳ್ತಾರೆ. ಇವ್ರು ಇವರೇನಂತ ಕೇಳ್ತಾರೆ ? ನೀವು ಯಾವ ದೇಶದವರು ? ಏನು ಅಂತ ಕೇಳ್ತಾರೆ. ನಾವು ಒಂದು ಗಂಡಿಗೆ ಒಂದು ಹೆಣ್ಣು ಹುಡಿಕ್ಕೊಂಡು ಹೋಗ್ತಾ ಇದ್ದೀವಿ ಅಂತ ಇವ್ರು ಹೇಳ್ತಾರೆ. ಆಯ್ತಾ ಅಂಗಾರೆ ನಮ್ಮ ಹೆಣ್ಣು ನಿಮಗೆ ಕೊಡ್ತೀವಿ. ನಿಮ್ಮ ಗಂಡಿನ ಫೋಟೊ ನಮಗೆ ಕೊಡಿ. ನಮ್ಮ ಹೆಣ್ಣಿನ ಫೋಟೋ ನಿಮಗೆ ಕೊಡ್ತೀವಿ, ಅಂತ ಇಸ್ಕೊಂತ್ತಾರೆ. ಫೋಟೊ ಇಸ್ಕೊಂಡು ತಿರ್ಗ ಮನೆಗೆ ಬರ್ತಾರೆ.

ಮನಿಗೆ ಬಂದುಬುಟ್ಟು ಏನ್ಮಾಡ್ಬಿಡ್ತಾರೆ? ಆ ಫೋಟೋ ತಗೊಂಡೋಗಿ ಅವರಪ್ಪ ಪದ್ಮಾವತೀ ಸೂಳೆ ಮನೆಗೆ ಕಳಿಸ್ತಾರೆ. ಇವ್ನು ಸ್ನಾನಕ್ಕೆ ವೋಗಿರ್ತಾನೆ. ಸ್ನಾನಕ್ಕೆ ವೋಗಿರ್ತ್ತಾಲೂವೆ, ಅದ್ಯಾರೋ ಬಂದವರೆ ನೋಡೆ ಅಂತಾನೆ. ಫೋಟೋ ತಂದ್ಕೊಟ್ಟವ್ರೆ ನಿಮ್ಮಪ್ಪ. ಯಾವ್ದೋ ಹೆಣ್ಣಿಂದಂತೆ. ಹೆಣ್ಣು ನೋಡಕ್ಕೋಗಿದ್ರಂತೆ ಅಂತಾಳೆ. ಅವನು ಸ್ನಾನ ಮಾಡ್ಕೊಂಡು ಬರೋವಷ್ಟು ಹೊತ್ಗೆ ಇವಳು ಬಂದು ಯೆಣ್ಣಿನ ಚಿತ್ರದ ಕಣ್ಣಿಗೆ ಸುಣ್ಣ ಇಕ್ಕಿರ್ತಾಳೆ. ಇನ್ನೊಂದು ಕಣ್ಣಿಗೆ ಕೆಮ್ಮಣ್ಣು ಇಕ್ಬಿಟ್ಟಿರ್ತಾಳೆ. ಯಾವುದಕ್ಕೆ ? ಫೋಟೊಗೇ. ಫೋಟೋ ಮಡಿಗಿರ್ತಾಳೆ. ಅಮ್ಯಾಕೆ ಮಡಿಗಿರ್ತ್ತಾಲೂವೆ, ಅಯ್ಯೋ ನೋಡಾಕ್ ಮಾತ್ರ ಚೆನ್ನಾಗಿ ಕಾಣ್ತಾಳೆ ಅಂದುಕೋತಾಳೆ. ಏನೇ ಕೊಟ್ಟು ಕಳಿಸಿದ್ದು ಅಂತ ಕೇಳ್ತಾನೆ. 'ನೋಡಾಕ್ ಮಾತ್ರ ಅಷ್ಟೇ ಚೆನ್ನಾಗಿ ಕಾಣ್ತಾಳೆ. ಹೆಣ್ಣು ಚೆಂದ ಕಣ್ಣು ಕುರುಡು ಅಂತ ಕಣ್ಣು ಕುರುಡಾಗೈತೆ. ನೋಡಾಕ್ ಮಾತ್ರ ಚೆನ್ನಾಗಿ ಕಾಣ್ತಾಳೆ ಅಂತ ಇವ್ಳು ಹೇಳ್ತಾಳೆ. ಇವ್ಳು ಹೇಳ್ದಾಗ ಅವನೇನು ಮಾಡ್ತಾನೆ ? ಅಂಗಾದ್ರೆ ಬಿಸಾಕ್ ಅಂತಾನೆ.

ಅಮ್ಯಾಕೆ ಇವರೇನು ಮಾಡ್ತಾರೆ ? ಇವ್ರು ಬತ್ತಾರೆ. ಬಂದ್ಬಿಟ್ಟು ಒಂದು ದೇವಸ್ಥಾನಕ್ಕೆ ಇಂಥ ದಿವ್ಸ ಬನ್ನಿ ಅಂತ ಹೇಳ್ಬಿಟ್ಟು ಡೇಟು ಮಾಡಿ ಬಂದಿರ್ತಾರೆ. ಇವ್ರು ಹೆಣ್ಣು ಕರ್ಕೊಂಬರ್ತಾರೆ. ಹೆಣ್ಣು ಕರ್ಕೊಂಬರ್ತ್ತಾಲೂ ಇವ್ರು ಏನ್ಮಾಡ್ತಾರೆ ? ಒಂದು ದೇವಸ್ಥಾನಕ್ಕೆ ಹೋಗ್ತಾರೆ. ದೇವಸ್ಥಾನದಲ್ಲಿ ಮತ್ತೆ ನಮ್ಮ ಕಡೇ ಗಂಡಿಗೆ ಧಾರೆ ಉಯ್ಯಲ್ಲ, ಚಂದ್ರಾಯುಧಕ್ಕೆ ಧಾರೇ ಉಯ್ಯದು. ಆ ತರ ಚಂದ್ರಾಯುಧಕ್ಕೆ ಧಾರೆ ಎರ್ಕೊಡಿ ಅಂತ ಕೇಳ್ಕೊಂತಾರೆ. ಆಯ್ತು ಅಂಗೇ ಮಾಡಿ ಅಂತ ಚಂದ್ರಾಯುಧಕ್ಕೆ ಧಾರೆ ಎರೆದು ಕರ್ಕೊಂಬರ್ತಾರೆ, ಮನೆಗೆ. ಮನೆಗೆ ಕರ್ಕೊಂಬರ್ತ್ತಾಲು ಕೆಲವಾರು ದಿವ್ಸ ಇಂಗೇ ಇರ್ತಾರೆ.

ಕೆಲವಾರು ದಿವ್ಸ ಇಂಗೇ ಇರ್ರೂ್ತಲೂವೆ ಅವ್ರೂರು ರಾಜ ಏನ್ಮಾಡ್ತಾನೆ ? ಒಂದು ದಿವ್ಸ ಎದ್ದು ಲೆಟ್ರಿನ್‌ಗೆ ಹೋಗ್ಬೇಕು ಅಂತ ಈವಯ್ಯ ಎದ್ದು ಹೋಗ್ತಾ ಇರ್ತಾನೆ. ಹೋಗ್ತಾ ಇರ್ರೂ್ತಲೂವೆ ಸೊಂಡೇನಹಳ್ಳಿ ಮುದ್ದೇಗೌಡ ಬಾರೋ ಇಲ್ಲಿ ಅಂತ ಕರಿತಾರೆ. ಕರ್ದಾಗ ಅವನೇನು ಮಾಡ್ತಾನೆ ? 'ಯಾಕ್ ದೊರೆಗಳು ಯಾವತ್ತು ಕರಿದವ್ರು ಇವತ್ತು ಇಂಗೆ ಕರೀತಾ ಅವ್ರಲ್ಲ ಏನ್ಮಾಡಿದ್ದೀವಿ ನಾವು ? ಏನು ಮಾಡಿಲ್ಲವಲ್ಲ ? ಅಂತ ಭಯಂಕರವಾಗಿ ಈವಯ್ಯ ಹೋಗ್ಯೆತೆ ಅಲ್ಲಿಗೆ. ಅವಯ್ಯ ವೋಗುತ್ಲೂ ಏನ್ಮಾಡ್ಯೆತೆ ? ಮತ್ತೆ ನಿಮ್ಮೂರಲ್ಲಿ ನಿಮ್ಮ ಮನೇಲಿ ಎಷ್ಟು ಜನಕ್ಕೆ ಮದ್ವೆ ಮಾಡಿದ್ದೀಯಾ ಹೆಣ್ಮಕ್ಕಳ್ದಾ ಅಂತ ಕೇಳ್ತಾನೆ. ಏಳುಜನಾನು ಮದ್ವೇ ಮಾಡಿದ್ದೀವಿ ಅಂತಾನೆ. ಅಂಗೆ ಅನ್ನೂ್ತಲೂವೇ ಏನ್ಮಾಡ್ತಾರೆ ? ಇವ್ರು ಆರುಜನ ಸೊಸೆದೀರು ಹೊಲದ ಕಡೆಗೆ ಹೋಗಿರ್ತಾರೆ. ಹೊಲದ ಕಡೆಗೆ ಹೋಗಿರ್ತಲ್ಲೂವೆ ಇವ್ರ ಮನೇಲಿ ಏಳೆಂಟು ಎಮ್ಮೆಗಳು ಇರ್ತಾವೆ. ಎಲ್ಲಾ ಕರು ಹಾಕಿರ್ತವೆ. ಇವ್ರು ಎಮ್ಮೆ ಏನೂ ಕಟ್ಟಿರೋದಿಲ್ಲ. ಹೊಲದ ಕಡಿಕ್ಕೇ ಮೇಯಕೋಗಿರ್ತುವೆ. ಮೇಯಕ್ಕೋಗಿದ್ದಾಗ ಏನ್ಮಾಡ್ತಾವೆ ? ಎಮ್ಮೆ ಕರುಗಳೆಲ್ಲ ಕಿತ್ಕೊಂಡು ಅದೆ ಕಡೆಗೆ ಹೋಗಿರ್ತುವೆ.

ಇವ್ಳು ಎಲ್ಲಿಗೂ ಹೋಗಿರತಿಲ್ಲ. ಏಳಂತಸ್ತಿನ ಮಾಡಿ ಮೇಲೆ ಇರ್ತಾಳಿವ್ಳು. ಇವ್ಳ ತಲೆ ಏಳುಮಾರುದ್ದ ಇದೆ. ಇದ್ರೇ ಏನ್ಮಾಡ್ತಾಳೆ ? ಎಮ್ಮೆ ಕರುಗಳೆಲ್ಲ ಹೊಲದ ಕಡೆಗೆ ಹೋಗ್ತಾ ಇರ್ತವೆ. ಮಾಡಿ ಮೇಲೆ ನಿತ್ಕೊಂಡು ತಲೆ ಕೆರ್ಕಂಡು ನೋಡ್ಬಿಡ್ತಾಳೆ. ಅಯ್ಯೊ ನಮ್ಮ ಅಕ್ಕದೀರೆಲ್ಲ ಹೊಲದ ಕಡೆಗೆ ಕೆಲ್ಸಕ್ ಹೋಗವ್ರೆ. ಎಮ್ಮೆ ಕರುಗಳೆಲ್ಲ ಹೋಗ್ತಾವೆ. ಬಂದ್ರೇ ಇನ್ನು ಕೇಳಿದ್ರೇ ಏನೇಳದು ? ತಡೀ ಹೋಗಿ ಒಡಕೊಂಡು ಬಂದ್ಬಿಡೋಣ ಅಂತ ಹೇಳ್ಬಿಟ್ಟು ಸುಮ್ನೆ ವೋಗ್ತಾಳೆ. ಹಗ್ಗ ಇರೋದಿಲ್ಲ, ಒಂದಕ್ಕೂವೆ. ಇವಳೇನು ಮಾಡ್ತಾಳೆ ? ತಲೆಕೂದಲಲ್ಲೆ ಎಮ್ಮೆಗಳಿಗೆಲ್ಲಕ್ಕೂವೆ ಕಟ್ಕೊಂಡು ಒಡಿಕೊಂಡು ಬರ್ತಾ ಇರ್ತಾಳೆ. ಈ ರಾಜ ನೋಡ್ಬಿಟ್ಟು ಓ ಇಂಥವ್ಳು ಬಿಟ್ಬಿಟ್ಟು ಪದ್ಮಾವತೀ ಸೂಳೇ ಮನೇಲಿ ಸೇರ್ಕೊಂಡಿವ್ನಲ್ಲ. ಇವಳ್ನೇನಾರ ಮಾಡಿ ನನ್ನ ವಶ ಮಾಡ್ಕೊಂಬೇಕು ಅಂಥ ಹೇಳ್ಬಿಟ್ಟು ಅವಳ ಮೇಲೆ ಕಣ್ಣಿಟ್‌ಬಿಡ್ತಾನೆ.

ಇವನು ಬೆಳಿಗ್ಗೆ ಓಗ್ತಾ ಇರ್ತಾನೆ. ಯಾರು ? ಸೊಂಡೆನಳ್ಳಿ ಮುದ್ದೇಗೌಡ ವೋಗ್ತಾ ಇರ್ತಾನೆ. ಓಗ್ತಾ ಇರ್ರೂ್ತಲೂ ಬಾರೋ ಇಲ್ಲಿ ಗೌಡ ಅಂತ ಕರೀತಾನೆ. ಬಾರೋ ಇಲ್ಲಿ ಗೌಡ ಅಂತ ಕರ್ದು ಬಿಟ್ಟು ನಿಮ್ಮನೆಲೆ ಎಷ್ಟು ಜನ ಅವ್ರೇ ಸೊಸೆದೀರು ಅಂತಾನೆ. ಏಳುಜನ ಅವ್ರೇ ಅಂತಾನೆ. ಮತ್ತೆ ನಮ್ಮೂರಲ್ಲಿ ನಮ್ಮ ಮನೆಲಿ ಇವತ್ತು ಒಂದು ದೇವತೆ ಕಾರ್ಯ ಇಟ್ಕೊಂಡಿದ್ದೀವಿ. ಆ ಕಾರ್ಯಕ್ಕೆ ಕೀರಸೊಪ್ಪೆ ಆಗ್ಬೇಕು. ಬೆಳಕು ಹರಿಯೋ ಹೊತ್ಗೆ ಕೊಡ್ಬೇಕು. ಕೊಡ್ದೆ ಹೋದ್ರೇ ನಿನ್ನ ಬದುಕು, ನಿನ್ನ ಬಾಳು, ನಿನ್ನ ಕಿರೆಸೊಸೆ, ನನ್ನ ಪಾಲು ಕಣಯ್ಯ ಅಂತ ಹೇಳಿ ಕಳಿಸ್ತಾರೆ. ಅಯ್ಯೋ ರಾಮ ಬೆಳಕರಿಯೋ ಹೊತ್ಗೆ ನಾ ಬಂಡೀಮ್ಯಾಗಳ ಕಿರೇಸೊಪ್ಪ ಹೆಂಗೆ ಬೆಳಕೊಡೋದು ? ಇಂಗಂತ ಕೇಳ್ಬಿಟ್ನಲ್ಲ ಈವಯ್ಯ. ಏನ್ಮಾಡೋದು ಅಂತ ಹೇಳ್ಬಿಟ್ಟು ಮನೆಗೋಗಿ ಮಂಚದ ಮ್ಯಾಲೇ ಮಕಾಡ ಮನಿಗಿರ್ತಾನೆ.

ಆರುಜನ ಮಗದೀರು ಎಬ್ಬಿಸ್ತಾರೆ. ಸೊಸೆದೀರು ಎಬ್ಬಿಸ್ತಾರೆ. ಒಬ್ರುಗೂ ಎದ್ದೇಳಾಕಿಲ್ಲ. ಇವ್ಳು ಮಾಡಿ ಮೇಲಿದ್ದವಳು ಕೆಳಕ್ಕೆ ಇಳಿದು ಬರ್ತ್ತಾಳೆ. ''ಯಾಕ್ರೀ ಮಾವಯ್ಯವ್ರೇ ಇಂಗೆ ಮಲಗಿದ್ದೀರಿ ಈವತ್ತು ? ಇಷ್ಟು ಚಿಂತಾಕ್ರಾಂತವಾಗಿ ಮಲಗಿದ್ದೀರಾ? ಅದೇನಿದ್ರು ನನಗೆ ಹೇಳಿ. ನಾನು ಬಗೆಹರಿಸ್ತೀನಿ'' ಅಂತ ಕೇಳ್ತಾಳೆ ಇವ್ಳು. ಅವ್ರು ಕೇಳಿದ್ರೇ 'ನಾನು ಏನೂ ಅಂತ ಹೇಳೊಣಮ್ಮ ? ಎಂಗೇಳೊಣಮ್ಮ ? ಈ ತರ ಇಂಗೆ ಕೇಳ್ದಾ ರಾಜ ಅಂತ ಹೇಳ್ದಾ. ಅಷ್ಟಕ್ಕೆ ಇಷ್ಟೊಂದು ಚಿಂತೆ ಮಾಡ್ಕೊಂಡು ಮಲಗಿದ್ದೀರಾ ಅಂತ ಹೇಳ್ಬಿಟ್ಟು ಒಂದು ಗಾಡಿ ಗೊಬ್ಬರ ತಗೊಂಬರ್ಲ್ರೀ. ಹಿತ್ತಲಿಗೆ ಹಿಂದಕಡೆ ನಿಲ್ಲಿಸಿ. ನಾನು ಬತ್ತೀನಿ ಅಂತ ಹೇಳ್ತಾಳೆ ಇವ್ಳು.

ಆಯ್ತು ಕಣಮ್ಮ ಅಂತ ಹೇಳ್ಬಿಟ್ಟು ಸಾಯಂಕಾಲ ಐದು ಗಂಟೇಲ್ಹೊಗ್ಬಿಟ್ಟು ಗೊಬ್ಬರನ ಗಾಡಿಗೆ ತುಂಬ್ಕೊಂಡಬಂದ್ಬಿಟ್ಟು, ತಗೊಂಡೋಗಿ ಹಿತ್ತಲಲ್ಲಿ ಹಿಂದಗಡೆ ನಿಲ್ಲಿಸ್ತಾರೆ. ನಿಲ್ಲಿಸಿತ್ಲೂ ಇವಳೇನು ಮಾಡ್ತಾಳೆ ? ಹೋಗ್ಬಿಟ್ಟು ನಾಲ್ಕು ಗಂಟೆ ಐದು ಗಂಟೆಗೆ ಹೋಗ್ಬಿಟ್ಟು, ಒಬ್ಬ ತಾಯಿಗೆ ಒಬ್ಬ ತಂದೆಗೇ ನಾನು ಹುಟ್ಟಿದ್ರೆ, ಬೆಳಕರಿಯೋ ಹೊತ್ಗೆ ಮಂಡೀಉದ್ದ ಕೀರೆಸೊಪ್ಪು ಬೇಳೀಲಿ'' ಅಂತ ಹೇಳ್ಬಿಟ್ಟು ಹಾಕ್ಬಿಟ್ಟು ಬತ್ತಾಳೆ. ಅದೇ ಏನ್ಮಾಡುತ್ತೆ? ಬೆಳಕರಿಯೋ ಹೊತ್ಗೆ ಇದು ಮಂಡೀ ಉದ್ದ ಕೀರೇಸೊಪ್ಪು ಬೆಳೆಯುತ್ತೆ.

ಆಮೇಕೆ ರಾಜ ಆಳುಗಳನ್ನು ಕಳಿಸ್ತಾನೆ. ಇಂಗಿಂಗೆ ನಮ್ಮ ದೇವತೆ ಕಾರ್ಯವಂತೆ. ಬುಡ ಕೀಳ್ದಂಗೆ, ತುದಿ ಚಿಗಟದಂಗೆ, ಅದನ್ನ ಕೀರೆಸೊಪ್ಪನ್ನ - ಕಿತ್ಕೊಂಡೋಗ್ಬೇಕು ಕಣಯ್ಯ ಅಂತ ಹೇಳ್ತಾಳೆ. ಅಲ್ಲ ಕಣೆ ಹೆಂಗಸೇ, ಬುಡ ಕೀಳ್ದಂಗೆ, ತುದಿ ಚಿಗಟದಂಗೆ, ಅದೆಂಗೇ ತಗೊಂಡೋಗ್ತಾರೆ ಹೇಳು ಅಂತ ಕೇಳ್ತಾರೆ. ಇವ್ಳು ''ಮತ್ತೆ ಅಲ್ಲ ಕಣೋ ಗಂಡಸೇ ಬೆಳಕರಿಯೋ ಹೊತ್ಗೆ ಬಂಡೀ ಮ್ಯಾಗಲ ಕೀರೆಸೊಪ್ಪು ಆಗ್ಬೇಕು ಅಂತ ಕೇಳ್ತಾ ಇದ್ದೀಯಲ್ಲಾ, ಅಂದೆಂಗ್ ಕೊಡಕ್ಕೆ ಸಾಧ್ಯ ಅಂತಾಳೆ. ಆ ಮಾತನ್ನ ಅವ್ನು ರಾಜಂಗೆ ಹೇಳ್ತಾನೆ. ಇವ್ರು ಇದ್ರಲ್ಲೂ ಗೆದ್ಲಲ್ಲ ಅಂತ ಹೇಳ್ಕೊಂತ್ತಾರೆ.

ಅಂಗಂತ ಹೇಳ್ಕೊಂತ್ಲೂವೇ ತಿರ್ಗಾ ಬೆಳಿಗ್ಗೆ ಇವನು ಲೆಟ್ರಿನ್‌ಗೆ ಹೋಗ್ತಾ ಇರ್ತಾನೆ. ಹೋಗ್ತಾ ಇರೂತ್ತಲೂ ಕರೀತ್ಲೂ ''ಯಾಕ್ರೀ ಸ್ವಾಮಿ'' ಅಂತ ವ್ಹೋಗ್ತಾನೆ. ಏನಂತ ಹೇಳ್ತಾನೀವ್ನು? ಮತ್ತೆ ನನಗೆ ಬೆಳಿಗ್ಗೆಗೆ ಕ್ವಾಣನ ಮೊಸರಾಗ್ಬೇಕು, ಕ್ವಾಣನ ಹಾಲಾಗ್ಬೇಕು, ಕೊಡ್ದೇ ಇದ್ರೇ ನಿನ್ನ ಬದುಕು, ನಿನ್ನ ಬಾಳು, ನಿನ್ನ ಕಿರೇಸೊಸೆ, ನನ್ನ ಪಾಲು ಕಣಯ್ಯ'' ಅಂತನೆ. ಕ್ವಾಣದ ಮೊಸರು ಎಲ್ಲಿ ತರಕ್ಕೆ ಸಾಧ್ಯ ? ಆಮೇಕೆ ಏನ್ಮಾಡ್ತಾನೆ ? ಬತ್ತಾನೆ. ಚಿಂತೆಮಾಡ್ಕೊಂಡು ಮಲಿಕ್ಕೊಂಡಿರ್ತಾನೆ. ಹಂಗೆ ಅನ್ಕ ಬರೂತ್ಲೂ ಕಿರೇಸೊಸೆ ಮಹಡಿ ಇಳಿದು ಬರ್ತಾಳೆ. ಇಳಿದು ಬಂದಾಗ ಏನ್ಮಾಡ್ತಾನೆ ? ಮತ್ತೇ ಯಾಕ್ ಮಾವವ್ರೆ ಇಂಗೇ ಚಿಂತೆ ಮಾಡ್ಕೊಂಡು ಮಲ್ಗಿದ್ದೀರಾ ಅಂತ ಕೇಳ್ತಾಳೆ. ಕೇಳ್ದಾಗ ಅವನೇನು ಮಾಡ್ತಾನೆ? ''ಮತ್ತೇ ಇದು ಕ್ವಾಣನ ಮೊಸರಾಗಬೇಕು, ಮತ್ತೆ ಬೆಳಕರಿಯೋ ಹೊತ್ಗೆ ಅವ್ರು ದೇವತೆ ಕಾರ್ಯವಂತೆ,

ಕ್ವಾಣನ ಹಾಲ್ಬೇಕಂತೆ'' ಅಂತ ಹೇಳ್ತಾನೆ. ''ಅಯ್ಯೋ ಇಷ್ಟಕ್ಕೆ ಇಷ್ಟೊಂದು ಚಿಂತೆ ಮಾಡ್ಕೊಂಡು ಮಲಗಿದ್ದೀರಾ ಎದ್ದೇಳಿ. ನಾನು ಬೆಳಿಗ್ಗೆಗೆ ಕೊಡ್ತೀನಿ'' ಅಂತ ಹೇಳ್ತಾಳೆ.

ಬೆಳಿಗ್ಗೆ ಆಳು ಕಳಿಸ್ತಾನೇ ರಾಜ. ನಮಗೆ ದೇವತೆ ಕಾರ್ಯಕ್ಕೆ ಬೇಕು, ಕಳಿಸ್ಕೊಡಿ ಹಾಲು ಬೇಕಂತೆ, ಅಂತ ಬರ್ತಾರೆ. ಮತ್ತೆ ನಮ್ಮಾವವ್ರುಗೆ ಹಸುರು ಗುಡ್ಲು ಹಾಕ್ಸಿದೆ. ಊರಿಂದಾಚೆಗೆ ಹಸುರುಗುಡ್ಲು ಹಾಕ್ಸಿರ್ತಾಳೆ.

'ಮತ್ತೇ ನಮ್ಮಾವನವ್ರು ಹೆಣ್ಣಾಗಿ ಋತುವಾಗಿದ್ದಾರೆ. ಈಚೆಕಡೆ ಅಲ್ಲಿ ಗುಡ್ಲು ಹಾಕಿದ್ದಿವಿ. ಅವ್ರನ್ನ ತಿಳಿಕ್ಕೊಳ್ಳೊತನ್ಕ ನಾವು ಕೊಡಕಾಗಕಿಲ್ಲ, ಅಂಗಂತ ಹೇಳೋಗು ರಾಜಂಗೇ ಅಂತಾಳೆ. ಅದಕ್ಕೆ ಇವನೇನು ಅಂತ ಹೇಳ್ತಾನೆ ? ಅಲ್ಲಕಣಮ್ಮ ಗಂಡಸು ಎಲ್ಲಾರ ಹೆಣ್ಣಾಗೋದು ಉಂಟೇನಮ್ಮ '' ಅಂತ. ಅಲ್ಲಕಣಯ್ಯ ಎಲ್ಲಾರೂ ಹೋಗಿ ಕ್ವಾಣದಲ್ಲಿ ಮೊಸರು ಹಾಲು ಕರಿಯೋದು ಉಂಟೇನಯ್ಯಾ ಅಂತ ಕೇಳ್ತಾಳೆ. ಇದ್ರಲ್ಲೂ ಗೆದ್ಲಲ್ಲ ಅಂತ ವೋಗಿ, ಸ್ವಾಮಿ ಇಂಗೇ ಅಂತ ಹೇಳಿದಳೂ ಅಂತಾನೆ. ಇದ್ರಲ್ಲೂ ಗೆದ್ದಲ್ಲ ಏನ್ಮಾಡೋದು ಅನ್ಕೋತ್ತಾರೆ .

ಆಮೇಕೆ ಏನ್ಮಾಡ್ತಾರೆ ? ಮತ್ತೇ ಬೆಳಿಗ್ಗೆ ನಮ್ಮ ದೇವತೆ ಕಾರ್ಯ ಇದೆ. ಆ ಕಾರ್ಯಕ್ಕೆ ನಮ್ಮ ಬಾವೀ ನೀರು ಸಾಕಾಗೊಲ್ಲ. ಬಾವಿ ನೀರಿಗೆ ನಿಮ್ಮ ಬಾವಿನ ನಮ್ಮ ಬಾವಿತಕ್ಕೇ ಕಳಿಸ್ಕೊಡಬೇಕು ಅಂತ ಕೇಳ್ತಾರಿವ್ರು. ಹಂಗಂತ ರಾಜ ಹೇಳಿ ಕಳಿಸ್ತಾನೆ. ಅಂಗಂತ ಕೇಳ್ತಾಲೂವೇ ''ಇಂಗಿಂಗೇ ಸ್ವಾಮಿ'' ಅಂತ ಬರ್ತಾರೆ. ಬರ್ತ್ತಾಲೂವೆ ಅವ್ನು ಮುದ್ದೇಗೌಡನ್ನ ಕೈಯಲ್ಲಿ ಬಂದು ಹೇಳ್ತಾನೆ. ಮುದ್ದೇಗೌಡ, ಏನ್ಮಾಡೋದು ? ಬಾವಿ ಎಂಗೆ ಹೊಡಕೊಡೋದು ? ಅದರಲ್ಲಿ ಎಂಗೇ ಮಾಡೋದು ಅಂತ ಯೋಚ್ನೆ ಮಾಡ್ತಾ ಇರ್ತಾನೆ. ಆಮೇಲೆ ಕಿರೇಸೊಸೆ ಬತ್ತಾಳೆ. ಕಿರೀಸೊಸೆ ಬಂದೋಳ್ ಏನ್ಮಾಡ್ತಾಳೆ'? ಯಾಕ್ರಿ ಮಾವವ್ರೇ ಇಷ್ಟೊಂದು ಚಿಂತೆ ಮಾಡ್ಕೊಂಡು ಮಲಗಿದ್ದೀರಾ ? ಏನು ಹೇಳ್ರಿ ಮಾವ. ಮಾವ ನಿನ್ನ ಕೈಲೀ ಆಗದ್ದು ನಾನ್ಮಾಡ್ತೀನಿ ಹೇಳು ಅಂತ ಅಂತಾಳೆ. ಅಂಗಂತ್ಲೂವೇ ''ನೋಡಮ್ಮ ಅವರ್ಮನೇಲಿ ದೇವತೆ ಕಾರ್ಯವಂತೆ. ಬೆಳಿಗ್ಗೆಗೆ ನೀರು ಸಾಕಾಗೊಲ್ವಂತೆ. ಅದಕ್ಕೆ ನಮ್ಮ ಬಾವೀನ ಅವ್ರು ಬಾವೀತನ ಕಳಿಸ್ಕೊಡ್ಬೇಕಂತೆ. ಕಳಿಸ್ಕೊಡ್ದೆ ಇದ್ರೇ ನಿಮ್ಮ ಬದುಕು ನಿಮ್ಮ ಬಾಳು ನಿಮ್ಮ ಕಿರೇಸೊಸೆ ನಮ್ಮ ಪಾಲು'' ಅಂತ ಹೇಳಿ ಕಳಿಸವ್ನೆ. ಏನ್ಮಾಡೋದು ಇದಕ್ಕೆ ಅಂತ ಯೋಳ್ತಾರೆ. ''ಅಯ್ಯೋ ಇಷ್ಟಕ್ಕೆ ಇಷ್ಟೊಂದು ಚಿಂತೆ ಮಾಡ್ಕೊಂಡು ಮಲಿಗಿದ್ದೀರಾ ? ಎದ್ದೇಳಿ ಮಾವವ್ರೇ ಊಟ ಮಾಡಿ ಅಂತ ಹೇಳಿ ಎಬ್ಬಿಸಿ ಊಟ ಮಾಡ್ಸಿದಳು. ಅವನು ಒತ್ತಾರೆ ಇನ್ನೂ ಬೆಳಿಗ್ಗೆಗೆ ಬಂದ್ಬಿಟ್ಟು, ನಮ್ಮ ಬಾವಿ ನೀರು ಸಾಕಾಗೊಲ್ಲ ಮತ್ತೇ ನಮ್ಮನೇಲಿ ಕಾರ್ಯ ಇಟ್ಕೊಂಡವ್ರೆ ಬಾವಿ ಕಳಿಸ್ಬೇಕಂತೆ ಅಂತ ಕೇಳಿತ್ಲೂವೆ ''ಅಲ್ಲ ಕಣಯ್ಯ ನಮ್ಮ ಬಾವೀ ಒಂದು ದಿವ್ಸವೂ ಎಲ್ಲೂ ಓಗ್ಲಿಲ್ಲ ಬಂದಿದ್ದಲ್ಲ, ಹೆದರ್ಕೋಣತ್ತೆ, ಬೆಚ್ಚುತ್ತೆ, ಜ್ವರ ಬರುತ್ತೆ. ನಿಮ್ಮ ಬಾವಿ ನಮ್ಮ ಬಾವೀತಕ್ಕೆ ತಕ್ಕಬಂದು

ಕರ್ಕೊಂಡೊಗಿ. ಇಲ್ದಿದ್ರೆ ಕಳಿಸೊಕ್ಕೆ ಹೇಗೆ ಸಾಧ್ಯ ಹೇಳಯ್ಯ ? ಅಂಗಂತ್ಲೂ ಇಂಗಂದ್ಲೂ ಸ್ವಾಮಿ ಅಂತ ವೋಗಿ ಹೇಳ್ತಾರೆ ರಾಜನ್ಗೆ. ಇದ್ರಲ್ಲೂ ಗೆದ್ಲಲ್ಲ, ಏನ್ಮಾಡೋದು ಇವಳನ್ನು ಅಂತ ಹೇಳ್ತಾನೆ.

"ಮತ್ತೇ ಈವತ್ತು ಬೆಳಿಗ್ಗೆ ದೇವತೆಕಾರ್ಯ ಇಟ್ಕೊಂಡಿದ್ದೀನಿ. ಮನೇ ಅವ್ರಿಗೆಲ್ಲಾನ. ಒಂದು ಹಸೀಮಗೀಗೂ ಸಹ ಹಾಲು ಕುಡಿಸ್ದಂಗೇ ಬಂದು ನಮ್ಮನೇಲಿ ಊಟ ಮಾಡ್ಕೊಂಡೋಗ್ಬೇಕು. ಒಬ್ರೂ ಬರ್ದೇ ಇದ್ರೇ ನಿಮ್ಮ ಬದುಕು, ನಿಮ್ಮ ಬಾಳು, ನಿಮ್ಮ ಕಿರೇಸೊಸೆ ನಮ್ಮ ಪಾಲು" ಅಂತ ಹೇಳಿ ಕಳಿಸಿರ್ತಾನೆ, ಮಂತ್ರಿ ಕೈಲೀ. ಅವನು ಬಂದು ಹೇಳೊತ್ಲೂವೆ ಆಯ್ತು ಕಣಪ್ಪಾ ಬತ್ತೀವಿ ಅಂತ ಒಪ್ಕೊಂತ್ತಾನೆ. ಒಪ್ಕೊಂತ್ಲೂ ಇವ್ಳೀಗೆ ಆಗ್ಲೇ ಅರಿವಾಗುತ್ತೇ. ಇವಳೇನು ಮಾಡ್ತಾಳೆ. ಎಲ್ಲಾ ವೋಗ್ತಾರೆ. ಇವಳು ಎಷ್ಟೊತ್ತಾದ್ರೂ ಬಂದಿರಕ್ಕಿಲ್ಲ. ನೋಡು ಮುದ್ದೇಗೌಡ ಇಷ್ಟೊತಾದ್ರೂ ಬರ್ಲಿಲ್ಲ ನಿನ್ನ ಕಿರೇಸೊಸೆ. ನಿಮ್ಮ ಬದುಕು, ನಿಮ್ಮ ಬಾಳು, ನಿಮ್ಮ ಕಿರೇಸೊಸೆ ನಮ್ಮ ಪಾಲು ಅಂತ ಹೇಳಿದ್ದೀನಿ. ಇಷ್ಟೊತ್ತಾದ್ರೂ ಬರ್ಲಿಲ್ಲ. ವೋಗಿ ಕರ್ಕೊಂಬಾ ಅಂತ ಹೇಳ್ತಾನೆ. ಆಳು ಕೈಯಲ್ಲಿ ಕರಿಸ್ಕೊಂಬರ್ತಾನೆ. ಇವ್ರಿಗೆಲ್ಲ ಒಂದ್‌ತರಾ ಊಟ ಮಡಗ್ಸಿರ್ತಾನೆ. ಅವಳಿಗೆ ಒಂದಥರ ಮತ್ತುಬರೋತರ ಊಟ ಮಾಡ್ಸಿ ಮಡಗಿರ್ತಾನೆ. ಆಮೇಕೆ ಆಳುಗಳಿಗೆ ಏನಂತ ಹೇಳ್ತಾನೆ ? ಅವಳುತಕ್ಕೆ ಬರೋ ಹೊತ್ಗೇ ಎಲ್ಲಾ ಊಟಾನೂ ಖಾಲಿ ಆಗಿರ್ತದೆ. ಅವಾಗ ಏನ್ಮಾಡಿಬಿಡ್ತಾನೆ? 'ಅಯ್ಯೋ ಇಲ್ಲಿಗೆ ಬರ್ತ್ತಾಲೂವೆ ಊಟ ಖಾಲಿ ಆಗೋಗಿಬಿಡ್ತದಲ್ಲ, ಏನ್ಮಾಡೋದು ತಡೀ ಊಟ ತಂದಿಕ್ಕುತ್ತೀನಿ ಅಂತ, ಬೇರೆ ಊಟ ಮಾಡ್ಸಿರ್ತಾನಲ್ಲ ಅದನ್ನ ತಂದು ಇಟ್ಟುಬಿಡ್ತಾರೆ.

ಅದನ್ನ ತಗೋಬಂದು ಇಡ್ತೂಲೂವೆ ಊಟ ಮಾಡ್ತಾ ಮಾಡ್ತಾ ಗ್ಯಾನ ಕೆಟ್ಹೋಗಿ ಬಿಡುತ್ತೇ. ಇವ್ಳಿಗೆ ಗ್ಯಾನ ಕೆಟ್ಹೋಗ್ತೂಲೂವೆ ಏನ್ಮಾಡ್ತಾನೆ ಇವ್ನ? ವೋಗ್ತಾನೆ. ವೋಗಿ, ನೀವೆಲ್ಲಾ ವೋಗಿ, ಅದೇನು ನೋಡಿ ಸರಿಪಡಿಸೀ ನಾವು ಕಳಿಸ್ತೀವಿ ಅಂತ ಇವ್ನೂ ಹೇಳ್ಬಿಟ್ಟು ರಾಜ ಕಳಿಸ್ತಾನೆ. ಕಳಿಸ್ತೂಲೂವೆ ಒಂದು ರೂಮಿಗೆ ಕರ್ಕೊಂಡೋಗಿ ಮಲಿಗ್ಸಿರ್ತಾನೆ. ಅಲ್ಲಿ ಮಲಗ್ಸಿರ್ತೂಲೂವೆ ಇವನೇನು ಮಾಡ್ತಾನೆ ? ಆ ರೂಮಿಗೆ ಹೋಗ್ತಾನೆ. ಆ ರೂಮಿಗೋಗಿ ಅವಳಿಗೆ ಎಚ್ಚರಿಕೆ ಆಯ್ತೂಲೂವೆ ನೋಡ್ತಾಳೆ ಇವ್ನುನ್ನ. ಏನ್ಮಾಡೋದು ಅಂತ ಹೇಳಿ ಒಂದರ ಮೇಲೊಂದು ಸೀರೆ ಉಟ್ಕೊಂಡು ಹೋಗಿರ್ತಾಳೆ. ಇವ್ನು ಸೀರೆ ಉಟ್ಕೊಂಡೋಗಿರ್ತೂಲೂವೆ ಆಯ್ತು ನಿನ್ನ ಕೈವಸ ನಾನಾಗ್ತೀನಿ, ನಾನು ರೀಸಸ್ ಮಾಡ್ಬೇಕಾಗಿದೆ. ನಾನು ಆಚೆಗೆ ಹೋಗ್ಬೇಕು. ನಿನ್ನ ಕೂಡಾನೇ ನಾನು ಸಂಸಾರ ಮಾಡ್ಬೇಕು ಅಂತ ನಾನು ಇಷ್ಟೆಲ್ಲಾ ಕಷ್ಟ ಬಿದ್ದಿದೀನಿ. ನಾನು ನಿನ್ನ ಜೊತೆಲೇ ಇರ್ತೀನಿ ಅಂತ ಹೇಳ್ತಾಳೆ. ನಿನಗೆ ಅಷ್ಟು ಅನುಮಾನ ಬಂದ್ರೇ ಸೆರ್ಗು ಹಿಡ್ಕೋ ಅಂತ ಹೇಳ್ತೂಲೂವೇ ಇವ್ನು ಏನ್ಮಾಡ್ತಾಳೆ. ಆ ಸೀರೆನೆಲ್ಲ ಒಂದೊಂದು ಒಂದೊಂದು ಗಂಟಾಕಿ ಬಿಟ್ಟು ಅವರ್ಮನೆ ಮುಂದೆ ಬರ್ತಾಳೆ. ಬಂದು ಅಲ್ಲೊಂದು ಬಾವಿ ಇರುತ್ತೆ. ಆ ಬಾವಿಗೇನ್ಮಾಡ್ಬಿಡ್ತಾಳೆ ? ಆ ಬಾವಿತವ

ಒಂದು ಚೆಂಬು ಇರುತ್ತೆ. ಆ ಚೆಂಬುಗೆ ಸೀರೆ ತುದಿ ಕಟ್ಬಿಟ್ಟು ವೋಗ್ತಾಳೆ. ಇವನೇನು ಮಾಡ್ತಾನೆ ? ಆ ಚೆಂಬು ಎಳ್ಕೊಂಡು ಎಳ್ಕೊಂಡು ಹಿಂಗ್ ನಿಂತಿರ್ತಾನೆ. ಎಷ್ಟೊತ್ತಾದ್ರೂ ಬರ್ಲೇ ಇಲ್ಲ. ಇವಳೂ ವೋಗ್ಬಿಟ್ಟು ಮನೆಗೆ ಸೇರ್ಕೊತಾಳೆ. ಮನೆಗೆ ವೋಗ್ಬಿಟ್ಟಿಲ್ಲೂ ಏನ್ಮಾಡ್ಬಿಟ್ಟ ಇವ್ನ? ಬರ್ಲಿಲ್ಲವಲ್ಲ ಅಂತ ನೋಡ್ತಾಲೇ ಅವ್ನೇ. ಇವ್ನ ಈಚೆಗೆ ಬಂದು ನೋಡ್ತಾನೆ ಕಟ್ಬಿಟ್ಟು ಹೋಗವ್ಳೇ ? ಇದ್ರಲ್ಲೂ ಗೆದ್ಲಲ್ಲ ಅಂತ ಹೇಳ್ತಾನೆ.

ಬೆಳಿಗ್ಗೆ ಇವಳನ್ನು ಕರಿಸ್ಬಿಟ್ಟು ಏನಂತ ಹೇಳ್ತಾನೆ ? "ಮತ್ತೇ ಇವಳು ಇಂಗಾಗೋ ವೊತ್ಗೆ ಅಲ್ವಾ ಗಂಡನ್ನ ಪದ್ಮಾವತಿ ಸೂಳೆ ಮನೇಲಿ ಮಡಿಕ್ಕೊಂಡು, ಬಿಟ್ಕೊಂಡು ಇವ್ಳು ಇಂಗೇ ಕುಂತವ್ಳಲ್ಲ. ಅದ್ಕೇ ಮತ್ತೆ ಇವಳ ಗಂಡ ಇವಳತ್ರ ಬರ್ದೇ ಇರೋದು, ಅಂತ ಅಂದ್ಬಿಡ್ತಾನೆ. ಇವಳಿಗೆ ಅವಾಗ ಗೊತ್ತಾಗುತ್ತೆ ನನ್ನ ಗಂಡ ಪದ್ಮಾವತಿ ಸೂಳೆ ಮನೇಲಿ ಅವ್ನೆ, ಇಲ್ಲಿಲ್ಲ ಅನ್ನೋದು. ಆಗ 'ಮಾವ ಊರಿಂದಾಚೆಗೆ ನಂಗೊಂದು ಗುಡ್ಲು ಹಾಕ್ಬಿಟ್ಟು, ನಾಲ್ಕು ಎಮ್ಮೆ ಕೊಡಿ ಅಂತ ಕೇಳ್ಕೊತಾಳೆ. ಆಯ್ತು ಕಣವ್ವ ಕೊಡ್ತೀನಿ ಅಂತಾನೆ. ಗುಡ್ಲಾಕ್ಬಿಟ್ಟು ಅವಳಿಗೊಂದು ನಾಕು ಎಮ್ಮೆ ಕೊಟ್ಬಿಟ್ರು. ಇವಳು ಏನ್ಮಾಡ್ಬಿಟ್ಲು? ಗೊಲ್ಲರಿಕ್ಕೊಂತರಲ್ಲ ಮುಸುರೇ ಕಡುಗ ಆಗೊಂದು ಮುಸುರೆ ಕಡುಗ ಹಾಕ್ಕೊಂಡು, ಗೊಲ್ಲರಂಗೇ ವೇಷ ಹಾಕ್ಕೊಂಡು, ಇವಳೂ ದಿನ ಮೊಸರು ಹಾಲು ಮಾರ್ಕೊಂಡೋಗೋಳು. ಕೇರಿ ಮ್ಯಾಲೇ ಸಾರ್ಕೊಂಡು ಮೊಸರು ಹಾಲು ಮಾರ್ಕೊಂಡು ಬರೋಳು. ಮೊಸರಮ್ಮ ಮೊಸರಮ್ಮ ಮೊಸರಮ್ಮ ಅನ್ಕಂಡು ವೋಗವ್ಳು.

ಇವ್ನು 'ಏನ್ಮಾಡಿದ್ಲು? ಗೊಲ್ತೀ ಬಾರೇ ಇಲ್ಲಿ, ನಮ್ಮ ಮನೇಲಿ ತಗಂತೀನಿ' ಅಂತ ಅಂದ್ಲು. ಒಂದು ಮೊಗೇ ಮೊಸರೀಗೆ ಎಷ್ಟೇ ದುಡ್ಡು ಅಂತ ಕೇಳಿದಳು. ಏನವ್ವಾ ನಾವು ಬಡವ್ರು. ಒಂದು ಮಗೇ ಮೊಸರಿಗೆ ಒಂದು ಮಗೇ ಹಣ ಕಣವ್ವಾ ಅಂತ ಅಂದ್ಲು. ಅಯ್ಯೋ ಅಷ್ಟೇ ತಾನೆಯಾ ಅಂತ ಒಂದು ಮಗೆ ಹಣ ಮಡಿಗಿದ್ಲು, ತಗೊಂಬಂದ್ಲು ಸುರಿದ್ಲು. ಮತ್ತೇ ಮತ್ತೊಂದಿನ ಬೆಣ್ಣೆ ತಗೊಂಡೋದ್ಲು. ಬೆಣ್ಣೆ ತಗೊಂಡೋಯ್ತಾನೇ 'ಬೆಣ್ಣೆ ಬೇಕೇನ್ರಮ್ಮ ಬೆಣ್ಣೆ, ಅಂದ್ಕೊಂಡು ಹೋದ್ಲು ಆಮೇಕೆ. ಬಾರೆ ಇಲ್ಲಿ ಗೊಲ್ಲತೀ" ಅಂತ ಕರಿದ್ಲು. ಇವ್ನು ಕರಿತ್ಲೂವೆ 'ಎಷ್ಟು ಹೇಳ್ತೀಯೆ ಬೆಣ್ಣೆಗೆ' ಅಂತ ಅಂದ್ಲು. "ಅಯ್ಯೋ ಇನ್ನೆಷ್ಟು ಹೇಳ್ತಿನವ್ವಾ ಒಂದು ಮಗೇ ಬೆಣ್ಣೆಗೆ ಒಂದು ಮಗೆ ದುಡ್ಡು ಹೇಳ್ತೀನಿ" ಅಂತ ಅಂದ್ಲು. ಅಂಗೆ ಅನ್ತೂಲೂವೆ ಇವ್ಳೇನು ಮಾಡಿದ್ಲು ? 'ಮತ್ತೇ ನನ್ಹತ್ರ ದುಡ್ಡೆಲ್ಲಾ ಆಗೋಗಿಬಿಡ್ತು. ನೆನ್ನೇನೆ ಕೊಟ್ಟು ತಗೊಂಬಿಟ್ಟೆ. ನಾನೊಂದು ಮುದ್ರೆ ಉಂಗುರ ಕೊಡ್ತೀನಿ ಅಂತ ಅಂದ್ಲು. ಆಯ್ತು ಕೊಡವ್ವಾ ಅಂತ ಅಂದ್ಲು. ಆ ಮುದ್ರೆ ಉಂಗುರ ಇಸ್ಕೊಂಡ್ಲು ಬಂದ್ಲು.

ಇನ್ನ ಬೆಳಿಗ್ಗೆ ತಿರ್ಗ್ಗಾ ತುಪ್ಪಾ ತಗೊಂಡೋದ್ಲು. ತುಪ್ಪ ತಗೊಂಡು ಹೋಗ್ತೂಲೂವೆ ಏನಂತ ಹೇಳಿದ್ಲು ತುಪ್ಪ ಬೇಕೆನವ್ವಾ ತುಪ್ಪ ಅಂದ್ಲು. ಊ ಕಣಮ್ಮ ಬೇಕು, ಬಾರಮ್ಮಾ ಅಂತ ಕರಿದ್ಲು. ಆಮೇಕೆ ಕರಿತ್ಲೂವೇ ಎಷ್ಟು ಹೇಳ್ತಿಯಮ್ಮ ಅಂದ್ಲು. ಇನ್ನೇನಮ್ಮ ಒಂದು ಮಗೇ

ತುಪ್ಪಕ್ಕೆ ಒಂದು ಮಗೇ ಹಣ ಕಣವ್ವಾ. ಅಷ್ಟೇ ಕಣವ್ವಾ ನಾನೇನು ಹೆಚ್ಚಿಗೆ ಕೇಳಲ್ಲ ಅಂತ ಅಂದ್ಲು. ಮತ್ತೆ ನನ್ನತ್ರ ಏನೂ ಇಲ್ಲ. ಎಲ್ಲಾ ಆಗೋಗ್ಯೆತೆ. ಬಟ್ಟೆ ಬರೀಗಳೂ ಹೊಸ ಹೊಸಾವು ಅವೇ. ಅದ್ನೆಲ್ಲಾ ಕೊಡ್ತಿನಿ. ತಗೊಂಡೋಗ್ತಿಯಾ ? ಅಂತ ಕೇಳಿದಳು. ಹೂಂ ಕಣಮ್ಮ ತಗೊಂಡೋಗ್ತೀನಿ, ನಮಿಗೆ ಬಟ್ಟಿಲ್ಲ ಅಂದ್ಲು. ಅವನ ಆ ಗಂಡನೋವು ಬಟ್ಟೆ ಇದ್ದವಲ್ಲಾ ಅವನೆಲ್ಲಾ ಇಸ್ಕೊಂಬಂದ್ಲು. ಇಸ್ಕೊಂಬರ್ತ್ತಾಲೂ ಅವನೆಲ್ಲಾ ತಗೊಂಬಂದು ಮನೆಗೆ ಸೇರ್ಕ್ಕೊಂಡ್ಲು.

ಮನೆಗೆ ಸೇರ್ಕೊಂತ್ಲೂವೆ ಇವನೇನು ಮಾಡ್ದ ಮಗ? ಯಾವುದೋ ಒಂದು ಸಂದರ್ಭದಲ್ಲಿ ಮನೀಗ್ ಬಂದ. ಬಂದ ಇವನು ಮನೆಗೆ. ಬರ್ತ್ತಾಲೂ ಏನಾಯ್ತು ? ಇವಳು ಮ್ಯಾಕಿಂದ ಕೆಳಗೆ ಬರೋದು, ಕೆಳಗಿಂದ ಮ್ಯಾಕೆ ಓಗೋದು, ಇಂಗೇ ಓಡಾಡ್ತಾನೆ ಇದ್ಲು. ಇವ್ನ ನೋಡ್ಬಿಟ್ಟಾ ಅವಳನ್ನ. ಎಲೇಲೇ ಇಷ್ಟೊಂದು ಸುಂದರವಾಗಿ ಉಡುಗೀ ನಮ್ಮಪ್ಪಾ ಕರ್ಕೊಂಬಂದು ನಮ್ಮನೇಲಿ ಮಡಿಕ್ಕೊಂಡು ಅವ್ನಲ್ಲ, ಇವಳು ಯಾರು ಇರ್ಬೋದು ? ಏನೂ ಎಂತು ? ಅಂತ ಕೇಳಿದ. ಇವನು ಕೇಳ್ದಾ ಅಪ್ಪನ್ನ. ಅಪ್ಪನ್ನ ಕೇಳ್ತಾಲೂ ಅವನು ಹೇಳ್ದಾ ಈತರ ಈತರ ಮಾಡ್ದೆ. ನೀನು ಇಂಗೆ ಹೋಗ್ಬಿಟ್ಟಿದ್ದೆಯಲ್ಲಾ. ಅದಕ್ಕೆ ಚಂದ್ರಾಯುಧಕ್ಕೆ ಧಾರೇ ಉಯ್ಯಿಸ್ಕೊಂಡು ಕರ್ಕೊಂಬಂದು ಮಡಿಕ್ಕೊಂಡಿದ್ದೇನಿ ಅಂದ. ಮಗ ಎಲ್ಲನೂ ಕೇಳ್ಕೊಂಡ. ಆವಾಗ ಕೇಳ್ಕೊತ್ಲೂ ಇವ್ನೂ ಆಯ್ತು ನಾನು ಮದ್ವೆ ಮಾಡ್ಕೊತೀನಿ, ಅಂತ ಅಂದ. ಆಗ ತಿರ್‍ಗಾ ಮದುವೆ ಮಾಡ್ಕೊಂಡು ಅವ್ರು ಸುಖವಾಗಿರ್ತಾರೆ.

ಹೇಳಿದವರು : **ರಂಗಮ್ಮ.** ಎಲೆಕೊಪ್ಪ, ನಾಗಮಂಗಲ ತಾಲ್ಲೂಕು.

# ೩೪. ಎಡವಟ್ಟ

ಗೌಡ್ರುತಾಕೆ ಹೋಗ್ಬಾರ್ದ ಏನಾರ ಕೊಡ್ತಾರೇ ಅಂತಾಳೆ ಆಕೆ. ತಗಿ ನಾನೋಗಿ ಕೇಳ್ತೀನಿ ಅಂದು ಹೋದ. 'ಸರಿ. ನಾನು ಒಂದೇ ವರ್ಷಕ್ಕೆ ಹೊಡ್ಡ್ ಬಿಡ್ತೇನಿ ಇಪ್ಪತ್ತೈದು ಜೀವ್ನಾನ. ನನಗೆ ಏನರ ಕೊಡ್ಬೇಕು ನೀವು ಅಂತ ಕೇಳ್ತಾನೆ. ಅಲಲಲ ಲಂಡ ದೇಶ್ದಾಗೆ ಲಡಾಯಿ ಯಾಕೆ? ಲಡಾಯ್ಕೆ ಹೋಗಿ ನೀನು ಲಡಾಯ ಮಾಡ್ಬೇಕು. ತಗಂದೋಗು ಒಂದ್‌ಚೀಲ ಗೋಧಿ ಕೊಡ್ತೇನಿ. ಒಂದ್ ಚೀಲ ಅಕ್ಕಿ ಕೊಡ್ತೇನಿ. ಬೆಣ್ಣೆ ಸಕ್ರೆ ಕೊಡ್ತೇನಿ. ತಿನ್ನೋಗು ಅಂತ ಗೌಡ್ರು ಹೇಳಿದ್ರು.

ಇವ್ನು ಬಂದೋನೆ, ನಿನಿಗೆ ಆಸೇವಾಗಿತ್ತಲ್ಲ ನಾ ಮಾಡಿದ್ದು ಅಕ್ಕಿ, ಗೋಧಿ, ಸಕ್ರೆ ಎಲ್ಲಾದ್ನು ಕೊಟ್ ಕಳ್ಸಿದ್ದಾರೆ. ಒಂದ್ ತಿಂಗಳು ಮೆಯ್ಬೇಕಂತೆ ನಾನು. ನಾ ಹೋಬಕು ಗಾಡ ಇಕ್ಕೆ. ದಿನಾ ಗೋದಿ ಅಮ್ಲಿ ತುಪ್ಪ ಮೆಯ್ತಾನೆ. ಈ ಊರಿಗೆ ಬರೋರು ಕಳ್ರು ನಾಲರು

ದೊಡ್ ದೊಡ್ಮನೆ, ದೊಡ್ ದೊಡ್ಮನೆ ಹೊಕ್ಕು ಕಳ್ತನ ಮಾಡ್ತಾ ಇದ್ರವ್ರು. ಒಬ್ರು ಕೈಯಿಗು ಸಿಕ್ಕಿದ್ದಿಲ್ಲ. 'ಮತ್ತೆ ಬಡವ ಲಂಡ ದೇಶಕ್ಕೆ ಹೋಗೊದ್ರೊಳಗೆ ನಾಲರು ಕಳ್ರು ಊರಾಗಿದ್ದ ವಡವೆ ವಸ್ತ್ರ ಎಲ್ಲ ಕದ್‌ಕಂಡ ಹೋಗೋಗಿ ಒಬ್ರು ಕೈಗೆ ಸಿಕ್ಕಿಲ್ಲ. ಅವರನ್ನ ಹೊಡಿಬಕ್ ನೀನು ನಿನ್ಗೊಂದ್ ಸಾವ್ರರೂಪಾಯಿ ಸಕ್ರೆ, ಬ್ಯಾಳೆ, ಬೆಲ್ಲ ಎಲ್ಲ ಕೊಡ್ತೇನಿ. 'ಆಗಲಿ ಸ್ವಾಮಿ' ಅಂದ. ''ಎಲ್ಲಿಗೋಗಿದ್ದೆ?'' ಅದೇ ಗೌಡ್ರು ಕರೆಕಳ್ಸಿದ್ರು ಕಣೇ ನನ್ನಾ''. ಯಾಕೇ? ''ನಾಲರು ಕಳ್ರು ಕಳ್ತನ ಮಾಡ್ತಾರಂತೆ ಈ ಊರಲ್ಲಿ. ಆ ನಾಲುರು ಕಳ್ರುನ್ನ ಹೊಡಿಬಕಂತೆ ನಾನು. ಮತ್ತೆ ಮತ್ತೊಂದ್ ಚೀಲಕ್ಕಿ, ಸಕ್ರೆ, ಬೆಣ್ಣೆ ಎಲ್ಲ ಕೊಟ್ಟುದಾರೆ'' ಅಂದ. 'ಮತ್ತೆ ಯಾವಾಗ ಹೋಗದು? ಇವತ್ತು ಹೋಕಿಯೋ ನಾಳೆ ಹೋಕಿಯೋ ?'' 'ಇವತ್ ರಾತ್ರೆ ಹೋಗ್ಬೇಕುಕಣೆ. ಗಡಗಡ ರೊಟ್ಟಿ ಸುಡೆ ನಾಕಾ'' ಅಂದ. ''ಐ ಈಗೆಲ್ಲಿ ಸುಡಲಿ ನನಿಗೆ ನಿದ್ದೆ ಬರ್ತದೆ'' ಅಂದು ಉಲ್ಡಿಕೆಂದ್ಲು. ಎಬ್ಬುರುಸ್ದ, ಏ ಏಳೇ ಮ್ಯಾಕೆ ಎಲ್ಡ್ ರೊಟ್ಟಿ ಸುಡು. ಮನಿಕ್ಕೆಂಬುಟ್ಟಲ್ಲ ಅಂದ. ಆಕೆ ನಿದ್ದೆಗಣ್ಣೀಲೆ ಕಣ್ ವರಸ್ಕಂಡ್ ಎಲ್ಡ್ ಮೆಣಸಿನ ಕಾಯಿ ಹಕ್ಕೆಂದ್ಲು. ಎಲ್ಡ್ ಹಳ್ಳ ಉಪ್ಪು ಹಕ್ಕೆಂದ್ಲು. ಕಿವಿಚಿಲ್ಲ ಮಾಡಿಲ್ಲ. ವಳ್ಳಾಗೆ ಏನ್ ಬಿದ್ದೈತೇಂತ ನೋಡಿಲ್ಲ. ಅಲ್ಲಿ ನೋಡಿದರೆ ಮಿಡ್‌ನಾಗರ ಮರಿ ಬಿದ್ದು ಸುಳ್ಳಿ ಹೊಯ್ಕಂದತೆ. ನಿದ್ಗಣ್ಣಿಲಿ ತಗಂದ್ ಒಂದೂ ಉಪ್ಪು ಮೆಣಸಿನಕಾಯಿ ಅದ್ಯಾಗೆ ಹಾಕಿದೊ ಕುಟ್ಟಿದೊ ಹಿಂಡಿ ಅರ್ದೊ ರೊಟ್ಟಿ ಮ್ಯಾಗಿಟ್ಟು ಮ್ಯಾಗೊಂದ್ ರೊಟ್ಟಿ ತಟ್‌ಹಾಕ್ದೊ 'ತಗೋ ರೊಟ್ಟಿ ಹಾಕಿದೇನಿ, ಚಟ್ನಿ ಹಾಕಿದೇನಿ, ತಗಂದೋಗು', ಅಂದಳು ಕಟ್ಗಂದ, ಈ ಮಾದ್ನಳ್ಳಿ ದಾರಿ ಹಿಡ್ದ್ ಹೋದ.

ಹಿಂಗೇ ಹೋಗ್ತಾ ಇರ್ಬೇಕರೆ ಅತ್ಲಿಂದ ನಾಲರು ಕಳ್ರು ಪೂರ ಕುಡ್‌ದ ಬಿಟ್ಟುದಾರೆ - 'ಯಾರು ಅವ್ರು?' 'ಏನಪ್ಪಾ ನಾನು'. 'ಯಾಕೆ ನಿಂತಿ ಇಲ್ಲಿ?' 'ಏ ಯಾಕು ಇಲ್ಲ ಸುಮ್ನೆ ಕೆಲಸಿತ್ತು ಮಾದ್ನಳ್ಯಾಗೆ ಹೋಗಾನಂತ ಬಂದೆ. 'ಎಲಿ ನಿನ್ ಮೈ ಮ್ಯಾಗೆ ಏನಾರ ವಡವೆ ಅದಾವೆನೊ?' 'ವಡವಿ ಏನು ಇಲ್ಲ, ರೊಟ್ಟಿಗಂಟ್ ಐತೆ'. ಅಲಲಲ ನಮಗು ಹೊಟ್ಟೆ ಹಸ್ತಿತ್ತು. ರೊಟ್ಟಿಗಂಟ್ ಇಟ್ಕಂದ್ ಕುಂತಾನೇಂದು ರೊಟ್ಟಿಗಂಟ್ ಕಸ್ಗಂದ್ರು. ನಾಲರು ರೊಟ್ಟಿ ತಿಂದ್ರು. ನಾಲರು ತಿಂದ್ರಾ ತಗೋ ತಿಂದು ತಾಸೊತ್ತಾಗ್ಲುಲ್ಲ, ಅತ್ಲಾಗೊಬ್ಬ ಇತ್ಲಾಗೊಬ್ಬ ಬಿದ್ದು ಸತ್ತೋಗಿ ಬಿಟ್ರು.

ಮತ್ತೆ ಬಂದ ಗೌಡ್ರುತಾಕೆ. 'ಸ್ವಾಮಿ ನನ್ನ ಎಂಥ ಸಿಪಾಯಿ ಮಾಡ್ಕೆಂದೀರಿ ನೀವು ? ನಾಲರು ಕಳ್ರನ್ನ ಹೊಡ್ದೆಬಿಟ್ಟೆ. ಈ ಕೈಯಾಗೆ ಹಿಂಗಂದು ಇಬ್ರು ತಗ್ದೆ, ಈ ಕೈಯಾಗೆ ಹಿಂಗಂದು ಇಬ್ರು ತಗ್ದೆ, 'ಐ ಅಲಲಲ ನೀನೆ ಸಿಪಾಯಿ ಲಂಡ. ದೇಸ್ದಾಗೆ ಕುದ್ರೆ ಲಡಾಯಿ ಆಕತೆ. ಆ ಲಡಾಯಕ್ ಹೋಗ್ಬೇಕು ನಾನೂಂದ. ಮತ್ತೆ ಅಕ್ಕಿ, ಬೆಲ್ಲ, ಗೋದಿ ಸಕ್ರೆ ಎಲ್ಲ ಕೊಟ್ರಪ. ತಗಂದ ಮನಿಗೆ ಬಂದ. ''ಏನ್ ಲಡಾಯಕ್ ಹೋಗ್ಬೇಕಂತೆ, ಮತ್ತೆ ಎಲ್ಲ ಕೊಟ್ಟುದಾರೆ ಅರ್ಜೆಂಟ್ ಮಾಡ್ಬಿಡೆ ತಿಂದ್ ಬಿಡ್ತೇನಿ ಅಂದ. ಬಜಾಸ್ತಿ ತಿಂದ ಮೇದ. ಅಲ್ಲಿಗೆ ತಿಂಬ್ರುಗಾಳಿ ಸುರುವಾತು. ಅಲ್ಲಿಂದ ಲಡಾಯಿ ಕೆಂದೊಳೆ ಕೆದ್ರಿ ಬರ್ತತೆ ಈ ಪಟ್ಣುಕ್ಕೆ. ಎಲೋ ಸಿಪಾಯಿ ಲಡಾಯಕ್ ಹೋಬಕು ಗಡಗಡ ಯಾವ್ದು ಕುದುರೆಬೇಕು ಹತ್ತೊಂತಾನೆ.

ಮೂರ್ಕಾಲಿಂದ್ ಬೇಕೋ ನಾಕ್ಕಾಲಿಂದ್ ಬೇಕೋ ಎಲ್ಡ್‌ಕಾಲಿಂದ್ ಬೇಕೊ ಕುದ್ರೆ ಲಾಯಕೋಗಿ ನಿನಿಗೆ ಬೇಕಾದ್ ಕುದ್ರೆ ಹಿಡಿ ನನಮಗನೆ.

ಒಂದೇ ಕಾಲಾಗೆ ನಿಂತತೆ ಮೂರ್ಕಾಲಿನ ಕುದ್ರೆ, ಇದೇ ಕುದ್ರೆ ಬೇಕು ನನಿಗೆ. ತಗೋ ಮತ್ತೇಂದ. ಆ ಕುದ್ರೆ ಹಿಡ್ದ. ಕುದ್ರೆ ಹಿಡ್ಕಂದು ಬಾಗಲಾಗೆ ನಿಲ್ಲಿಸ್ಗಂದು 'ಸ್ವಾಮಿ ಕುದ್ರೆ ಮ್ಯಾಗೆ ಜೇನ್ ಬಿಗೀರಿ' ಅಂದ. ಜೇನ್ ಬಿಗಿಸ್ಗಂದ. 'ಹುಂ ಕುತಗನದುಲ್ಲ ಸ್ವಾಮಿ ನಾನು ಮಕ್ಕಂತೇನಿ . ಇದೊಂದ್ ನೂಲಾಕಿ ಬಿಗ್ದ್ ಬಿಡ್ರಿ ನನ್ನ. ಹೋಗಿಬಿಡ್ತೇನಿ. ಕುದ್ರೆಮ್ಯಾಲೆ ಸಬರ ಹಾಕಿ ಜೇನು ಬಿಗ್ದು ಇವನ್ನ ಮ್ಯಾಲೆ ಮನಗ್ಸಿದ್ರು. ಹೊಟ್ಟೆ ಮ್ಯಾಲಾಸಿ ಹಗ್ಗ ತಗಂದು ಬಿಗುದ್ರು. ಬಿಗ್ದು ಲಡಾಯಕ್ ಕುದ್ರೆ ಬಿಟ್ರು. ಹಂಗೇ ಕುದ್ರೆ ಅನ್ನೋದು ಮೂರುಕಾಲಿಂದು ಒಂದೇ ಕಾಲಾಗೆ ಹೋಗ್ಬೇಕು. ಹೊಯ್‌ನೆ ಹೋತು. ಎಂತ ಒಳ್ಳೇ ಕುದ್ರೆ ಹಿಡ್ದ್‌ಬಿಟ್ನಲ್ಲಪ್ಪ ಇವನು ಅಲೆಲೆಲೆ ಬಾರಿ ಐತಪ್ಪ. ಇನ್ನು ನಮ್ಮ ದೇಶ್ದಾಗೆ ಇಲ್ಲ ಇಂತ ಸಿಪಾಯಿ. ಮೂರ್‌ಕಾಲಿನ ಕುದ್ರೆ ಹಿಡ್ದ್ ಬಿಟ್ಟ.

ಅಮ್ಯಾಲೆ ಏನಿಲ್ಲ ಆ ಕುದ್ರೆ ರೋಡ್ನು ಬಿಡ್ತು ದಾರೀನು ಬಿಡ್ತು. ಈಚಲಾಗೆ ನುಗ್ಗಿ ಬಿಡ್ತು. ಈಚಲಾಗೆ ನುಗ್ಗಿ ಹೋಗ್ಬೆಕರೆ ಈ ಎಳೆಹಾಕಿ ಕಟ್ಟಿ ಬಿಗ್ದುದ್ರಲ್ಲ ಇವುನ್ನ ಮನುಷ್ಯನ್ನ ಈ ಕಡಿಕೊಂದ್ ಬಡ್ಡೆ ಕಿತಗಂದ್ ನಿಂತಗಂತು ಹಿಂಗೆ. ಇಚೆ ಕಡಿಕೊಂದ್ ಬಡ್ಡೆ ನಿತಗಂತು ಹಿಂಗೆ. ಎಲ್ಲುಕಡೀಕು ಎಲ್ಡು ಮರಾಗಿ ಬಿಟ್ಟು. ಇವ್ನು ಸುಮ್ನೆ ದೊರೆ ಹಾಗೆ ಮನಗಿದಾನೆ. ಇವುನೇನು ಕಿಸ್ದುಲ್ಲ. ಸುಮ್ನೆ ಮನಗಿದಾನೆ. ಇವನೇನು ಏಳ್ಳುಲ್ಲ. ಇತ್ಲಿಂದ ಈಚಲುಮರ ಕಟ್ಗಂದು ಲಡಾಯ ಆಡತಾಕ್ ಹೋದ. ಅತ್ಲಿಂದ ಬರೋದ್ರಾಗೆ, ಅವರೇನ್ಮಾಡಿದ್ರು? ಇದೇನಪ್ಪಾ ಇದೊಂದು ಹೆದ್ರಿಬಿಟ್ರು. ಇತ್ಲಿಂದ ಸುತ್‌ಗಟ್ನಂದ್ ಹೋಗಿಬಿಡ್ತು. ಇದು ಸಿಗದಮ್ಯಾಲೆ ಏನ್ಮಾಡ್ತತೆ? ಸಿಟ್ ಬಂದ್ ಬಿಡ್ತು. ಮತ್ತೆ ಹಿಂದುಕೆ ವಾಪಾಸ್ ತಿರುಗಿಬಿಡ್ತು. ಹೊಡಿ ಬಂದ್ರು ಸಾವ್ಕಾರು. ಸರಿ ಬಿಗ್ದ್ ನಿತಗಂದುತ್ತು ಕುದುರೆ. ಈಚಲು ಮರ ಹಂಗೆ ಕಿತ್ಕಂದ್ ಬಂದ್ ಬಿಟ್ಟುದಾನಲ್ಲ. ಹೆಂಗೆಂಗ್‌ಮಾಡ್ಕೆಂದ್ ಕಿತ್ಕಂಡ್ರೊ ಇವುನ್ನ ? 'ಸ್ವಾಮಿ ಇಲ್ಲೆಂದ ಕುದ್ರೆಮ್ಯಾಲೆ ಮನಗಿದ್ನೆಲ್ಲ ನಾನು ಇಚೆ ಕೈಯಾಗೊಂದ್ ಕಿತ್ತೆ ಎರಡೂ ಕೈಯಾಗು ಎರಡು ಈಚಲ ಮರ ಕಿತ್ಕಂದು ಲಡಾಯಿ ಮಾಡಿ ಬಂದೇನ್ ಸ್ವಾಮಿ'. ಇಡಿ ಲಂಡ ದೇಸ್ದಾಗು ಇಲ್ಲ ನಮ್ ದೇಸ್ದಾಗು ಇಲ್ಲ ಇಂತ ಸಿಪಾಯಿ'' ಅಂದು ಮತ್ತೆ ಸಾವ್ರುರೂಪಾಯಿ ರೊಕ್ಕ ಕೊಟ್ಟು, ಹೋಗಪ್ಪ ಬದಿಕ್ಕೆ ಹೋಗು ಅಂದು ಕೊಡ್ಸಿದ ಅವ್ನು.

ಹೇಳಿದವರು : **ಲಕ್ಕವ್ವ,** 60 ವರ್ಷ, ಹರಿಜನ. ಕತ್ತಿಗೆ, ಹೊನ್ನಾಳಿ ತಾಲ್ಲೂಕು.

# ೩೫. ದಡ್ಡನ ಕಥೆ

ಒಂದೂರಿನಲ್ಲಿ ಒಬ್ಬ ಮುದುಕಿಗೊಬ್ಬ ಮಗ. ಆದ್ರೆ ಸುದ್ದ ದಡ್ಡ. ದಡ್ಡನಾದ್ರೆ ಈಗಲೂ ಅಷ್ಟೆ ನೋಡಿ, ದಡ್ಡನಾಗಿರತಕ್ಕಂತೋರಿಗೆ ಹತ್ತರದಲ್ಲಿ ಯಾರು ಹೆಣ್ ಕೊಡೋದಿಲ್ಲ. ಅಂತೋರಿಗೆ ದೂರದ ಪ್ರದೇಶದಿಂದ ಹೆಣ್ ತಂದು ಲಗ್ನ ಮಾಡ್ಬೇಕು. ಇವ್ರ ವಿಚಾರ ಗೊತ್ತಿರೊದಿಲ್ಲ. ಹಾಗೆ ದೂರ್ದಿಂದ ಹೆಣ್ ತರ್‍ತಾರೆ.

ಹಾಗೆ ಆ ಮುದ್ಕಿ ದೂರದ ಪ್ರದೇಶದಿಂದ ಹೆಣ್ ತಂದು ಲಗ್ನ ಮಾಡಿದ್ಲು. ಆದ್ರೆ ಹಣ್ಣು ಹಣ್ ಮುದ್ಕಿಯಾದ್ದರಿಂದ ಆ ಹೆಣ್ಣನ್ನ ಇವರ ಮನೆಯಲ್ಲಿ ಬಿಟ್ಟಿತ್ತು. ಇನ್ನು ಶಾಸ್ತ್ರ ಸಂಬಂಧ ಮುಗಿದಿರಲಿಲ್ಲ. ಆದ್ರೆ ಹಣ್ ಹಣ್ ಮುದ್ಕಿಯಾದ್ದರಿಂದ ಮನಿಯಾಗಿತ್ತು. 'ಅಮ್ಮಾ.' 'ಏನಪ್ಪಾ?' ''ಅತ್ತೆನ್ನು ಮಾವನ್ನು ನೋಡ್ಬೇಕಲ್ಲ'' 'ಅಯ್ಯೋ ಹೋಗಪ್ಪ ಯಾರು ಬ್ಯಾಡಾಂತಾರೆ, ಹೋಗಿ ನೋಡ್ಕೆಂಬಾ ಹೋಗು.''

ಅತ್ತೆ ಊರಿಗೆ ಹೋದ. ಮುಂಗಾರು ಕಾಲ. ಜ್ವಾಳ ಬಂದಿರದು. ಕಿಚಡಿ ರೊಟ್ಟಿ ಮಾಡಿ ಕಾಯಾಲು ಕಾಸಿದ್ರು. ಸರಿ ಇನ್ನ ಚಿಕ್ಕಮಾವನ ಮಕ್ಳು ದೊಡ್ಡಮಾವನ ಮಕ್ಳು ಇದ್ರಲ್ಲ. ಮಾವ ಬಂದ ಮಾವ ಬಂದ ಅಂದ್ರು. ಎಲ್ಲಾರು ಹೋಗಿ ಕುತಕಂಡ್ರು. ಇನ್ನು ಅಷ್ಟತ್ಗೆ ಅಡ್ಗೆಯು ಆಗಿತ್ತಲ್ಲ? ಕಿಚಡಿ ರೊಟ್ಟಿ ಮಾಡಿ ಹಾಕಿದ್ರು. ಇನ್ನ ಅವರ್‍ನೆಲ್ಲ ಏಳ್ಸಿ ಒಬ್ಬ ಊಟುಕ್ ಕೂರಾಕ್ ಆಗುತ್ತೇಯೇ ? ಎಲ್ಲಾರು ಕುತಗಳ್ರಪಾ ಅಂದ. ಕುತಗಂಡ್ರು. ಈ ಕಿಚಡಿ ರೊಟ್ಟಿ ಹಕ್ಕೆಂದ್ ಕಾಯಾಲು ಬಿಟಗಂದ್ ಬರ್‍ತಾಯಿದಾಳಂತೆ. ನೋಡ್ದಾ ನಾನು ಬಂದುದ್ಕೆ ಎಂತದ್ನೊ ಮಾಡಿಬಿಟ್ಟುದಾರಲ್ಲ. ನನ್ನತ್ರ ಬಂದ್‌ಕೂಟ್ಲೆ ಒಲ್ಲೆ ಅನ್ಬೆಕೂಂತ ತಿರ್‍ಮಾನ ಮಾಡ್ಕಂಡಿದ್ನಲ್ಲ? ಹಂಗೆ ಇವನ್ನತ್ರಕ್ ಬಂದ್‌ಕೂಟ್ಲೆ ಒಲ್ಲೆ ಅಂದ. 'ಯಾಕಪ್ಪಾ ಒಲ್ಲೇಂತಿ? ಒಸಿ ಅನ್ನನರ ಇಕ್ಕಿಸ್ಕೆಂದು ಉಣ್ಣಪ್ಪ'. ಹೂಂ ಹುಂ ಬಿಲ್‌ಕುಲ್ ನಾನು ಮುಟ್ಟೋದೇ ಇಲ್ಲ. ಹಾಗೆ ಅಂತ ಹೇಳಿದ್ರು ಸುಮ್ನೆ ಬಿಡ್ತಾರ್‍ದಲ ಅಂದು ಒಂದಷ್ಟ್ ಕಿಚಡಿ ರೊಟ್ಟಿ ಕಾಯಾಲು ಬಿಟ್ರು. ಇನ್ನ ಹಾಕಿದ್ರಲ ಒಂಚೂರು ಇವ್ನು ಸುಮ್ನಿರ ಕುತಗಂಡ್ಲಿಲ್ಲ. ಅದಂಚೂರು ವರಳಿಸಿ ಬಾಯಿಗೆ ಮಡಿಗ್ದ. ಬಾಳ ರುಚಿಯಾತು. ನಾನು ಆಗ ಒಲ್ಲೆಂದನೆ ಇಕ್ಕಿಂದ್ರೆ ನಾಚ್ಕೆ ಆಯ್ತದೆ. ಬಿಟ್ರೆ ಇಂತ ಪದಾರ್ಥ ಬಿಡ್ಬೇಕಲ್ಲ. ಆಗದುಲ್ಲ. ನಮ್ಮೂರಿಗಾದ್ರು ಹೋಗಿ ಮಾಡ್ಸಿ ಬಿಡ್ಬೇಕೂಂತೇಳಿ ಹೋಗಿದ್ದೆ ಮನಿಕ್ಕಂಬುಟ್ಟ.

ಕೋಳಿ ಕೂಗೊ ಹೊತ್ಗೆ ಎದ್ದ. ಇದ್ಕ ನೆನ್ಕಂದ್ ಹೋಗ್ಬೇಕಲ್ಲ ದಾರಿಲೋಗ್ತಾ ಕಿಚಡಿ ಕಿಚಡಿ ಕಿಚಡಿ ಕಿಚಡಿ ಅಂದ್ಕೊಂಡೇ ಹೋಗ್ತಿದ್ನಂತೆ. ಗದ್ದೆ ಬದ ಕಾವಲೆ. ಕಾಲುವೆ ದಾಟ ಬೇಕಾದ್ರೆ, ಕಿಚಡಿ ಅನ್ನುದ ಬಿಟ್ಬಿಟ್ಟ. ಪಚಡಿ ಪಚಡಿ ಪಚಡಿ ಅದ್ಕಂದೆ ಹೋಗ್ತಾಯಿದ್ದ. ಊರಿನತ್ರ ಪಕ್ಕದಲ್ಲಿ ಒಂದು ದೊಡ್ಡ ಹಳ್ಳ. ಆ ಪಕ್ಕದಲ್ಲಿ ನಿಂತಗಂದ್ ಇಳಿಬೇಕು. ಅಲ್ಲೊಬ್ಬ ಅದೇ ಊರಿನ ಬೆಸ್ತ ಮೀನು ಹಿಡಿಯೋದಿಕ್ ಬಂದಿದಾನೆ. ಈ ಬಟ್ಬೆಬರೆ

ಎತ್ಕಳದ್ರಲ್ಲಿ ಅದ್ನು ಮರ್ತ್ಬಿಟ್ಟ. ಮರ್ತ್ಬಿಟ್ಟು ನೀರ್ನಲ್ಲಿ ತಡಕಾಡ್ತ ಇದ್ದನಂತೆ. ಈ ಬೆಸ್ತನಿಗೆ ಗೊತ್ತಿತ್ತೆಲ್ಲ ಇವನು ಸುದ್ದ ದಡ್ಡ ಅನ್ನೋದು. ಇವನೇನೊ ಕಳಕಂಡ್ ತಡಕ್ತಾ ಇದಾನೆ; ನಾ ತಡಕಿದ್ರೆ ನನಗೆ ಸಿಕ್ಲೀಂತ ಬಲೆ ಅಲ್ಲೆ ಬಿಟ್ಟ. ಇವ್ನು ಬಂದ ತಡಕಾಕೆ. ತಡಕ್ತಾ ಇದ್ದಾಗ ಹೂಸಬಿಟ್ಟ. 'ಏನೋ ಕಿಚಡಿಗಬ್ ರೊಟ್ಟಿ ತಿಂದಂಗ್ ಉಚ್ತಿಯಲ್ಲೊಂದ ಅಂ...... ಸಿಕ್ತು ಕಣಪ್ಪಾಂತ ಹೊಡಿತಾನೆ ಓಟ. ಇವ್ನಿಗೇನ್ ಸಿಕ್ಕಿದ್ದೀಯಂತ ಇವ್ನು ಓಡ್ತಾನೆ ''ಏನ್ಲಾ ಸಿಕ್ಕಿದ್ದು? '' ಏ ನಮ್ಮತ್ತೆ ಮನೇಲಿ ಕಿಚಡಿ ರೊಟ್ಟಿ ಮಾಡಿ ಹಾಕಿದ್ರು. ಅದೇಳಾಕ್‌ಬರ್‍ಲಿಲ್ಲ. ಅದ್ಕೆ ನಿಂತಗಂದಲ್ಲೆ ತಡಕ್ತಾಯಿದ್ದೆ ಅದಕ್ಕೋಸ್ಕರ'' ಅಂದ ಅಯ್ಯೊ ದಡ್ಡ ಸೂಳೆ ಮಗನೆ ಇಷ್ಟತ್ಗೆ ಎಷ್ಟ್ ಮೀನ್ ಹಿಡಿತಿದ್ನೆಲ್ಲೊ ಹಾಗಂತೇಳಿ ಹಿಂದುಕ್ ಹೋಗಿಬಿಟ್ಟ.

ಮನಿಗೆ ಬಂದ. ಮನಿಗೆ ಬಂದ್ರಲ್ಲಿ ಅದ್ನು ಮರ್‍ತ. ಹೆಂಡ್ತಿದ್ಲು. 'ಲೇ' ಅಂದ. ಏನ್ರೀ?ಅಂದಳು. ಅದು ಮಾಡೇಂದ. ಅದು ಮಾಡೊಂದ್ರೆ, ಇದು ಉಪ್ಪಿಟ್ ಮಾಡ್ಲ. ಬ್ಯಾಡ. ವಡೆ ಕಜ್ಜಾಯ ಮಾಡ್ಲ? ಬ್ಯಾಡ. ಕೋಡ್ಬಳೆ ಮಾಡ್ಲೆ? ಬ್ಯಾಡ. ಅಯ್ಯೊ ನಮ್ಮತ್ತೆ ನಮ್ಮ ತಂದೆತಾಯಿಗಳು ಬಂದ್ರೆ ಏನಂದ್ಕಂದಾರು. ಏನುಕ್ಕ ಬ್ಯಾಡ ಬ್ಯಾಡ ಅಂದ್ರೆ ನಾನೇನು ಮಾಡ್ಲಿ? ಏ ಅದ್ಮಾಡೆ ಮಾಡಕಿಲ್ವೆನೆ ನೀನು ಅಂತ ಹೆಂಡ್ತಿಗೆ ತಟಾತಟ್ನೆ ನಾಲ್ಕೈದು ಏಟ್ನು ಹೊಡ್ದ. ಅವಳು ಅಳ್ತಾ ಕೂಗಿಕೊಂಡ್ಲು. ತಾಯಿ ಬಂದ್ಲು ''ಯಾಕವ್ವಾ.... ತಂದೆ ತಾಯಿಗಳು ಬಿಟ್ ಬಂದಿರೊ ಹುಡ್ಗಿ ಯಾಕೆ ಹೊಡಿತಿಯಪ್ಪಾ ? ಅದ್ಮಾಡೂಂದ್ರೆ ಮಾಡಾಕಿಲ್ಲವಲ್ಲವ್ವಾ; 'ಅದುಂದ್ರೇನು ' ರೊಟ್ಯಾ? ''ಇಲ್ಲಾ ಒಂದ್ ಗೇಣು ಸಿಗ್ತದೆ. ಏನು ಕಿಚಡಿರೊಟ್ಟಿನಪ್ಪಾ ? 'ಹುಂ ಹುಂ' 'ಅಯ್ಯೊ ದಡ್ಡ ಸೂಳೆ ಮಗನೆ. ಹಂಗಂದುದ್ರೆ ಅವಾಗ್ಲೆ ಮಾಡಿ ನೀಡ್ತಿದ್ದಲ್ಲಪ ಅಂದು ಕಿಚಡಿ ರೊಟ್ಟಿ ಮಾಡಿ ಹಾಕಿದ್ರು. ಅವತ್ಗೆ ಒಳ್ಳೆ ಶುಭದಿನವಾದ್ದರಿಂದ ಹೆಣ್ಣಿನೋರು ಬಂದ್ರು. ಅಮ್ಮಾ ಹೆಣ್‌ಮಗುವನ್ನು ಕರ್ಕಂದ್ ಹೋಗಾಕ್ ಬಂದುದೇವಿ. ನಿಮ್ಮ ಮಗನ್ನ ನಾಳೆ ಸಾಯಿಂಕಾಲ ಬರಾಕ್ ಹೇಳಿ ಬಿಡ್ರಮ್ಮ. ಆಗ್ಲಿಂತೇಳಿ ಹೆಣ್‌ಮಗಳನ್ನ ಕರ್ಕಂದ್ ಹೋದ್ರು.

ಇವ್ನು ಎಲ್ಲೊ ಹೋಗಿದ್ದೋನು ಬಂದ ''ನೋಡಪ್ಪಾ ನಿಮ್ಮ ಮಾವಾರು ಶಾಸ್ತ್ರೋಕ್ತವಾಗಿ ಕರಿಯಾಕ್ ಬಂದ್ರು. ಹೋಗು. ಹೋಗಿ ಮದ್ಲು ನಿನ್ನ ಬಟ್ಟೆ ಬರಿಗಳ ಸೆಳಕಂದ್ ಬಾರಪ್ಪಾ'' ಅಂತೇಳಿದ್ಲು ತಾಯಿ. ''ಐಯ್ ನಾನು ಖಂಡಿತವಾಗಿಯು ಹೋಗುವುದಿಲ್ಲ.'' ಯಾಕಪ್ಪ ಹೋಗದಿಲ್ಲ ಅಂತೀಯೆ ?'' ''ಶಾಸ್ತ್ರೋಕ್ತವಾಗಿ ಹೋಗ್ಬೇಕು. ಯಾಕುಯಿಲ್ಲ ನೋಡವ್ವಾ ನಾ ಕಿಚಡಿ ರೊಟ್ಟಿ ಸಿಟ್ಟಿನ ಬರ್‍ದಾಗೆ ಅವಳ್ನ ಹಿಡ್ಕಂಡ್ ಹೊಡ್ದೆ ಬಿಟ್ಟಿದೀನಿ. ಅವಳು ಅವಳ ಅಣ್ಣಂದಿರ ಮುಂದೆ ಹೇಳ್ಕೊಂಡು ನಕ್ತಾಳೆ. ಅದ್ರಿಂದ ನಾನು ಹೋಗೋದಿಲ್ಲ.'' ''ಹಾಗಲ್ಲಪ್ಪಾ... ಹುಚ್ಚ. ಶಾಸ್ತ್ರೋಕ್ತವಾಗಿ ಹೋಗಬೇಕು. ನೋಡಪ್ಪಾ ನಿನಿಗೆ ಮೂರು ಬುದ್ವಂತ್ಕೆ ಮಾತ್ ಹೇಳಿಕೊಡ್ತೇನಿ. ಹಾಗಾದ್ರೆ ಮೂರ್ ಬುದ್ವಂತ್ಕೆ ಮಾತ್ ಹೇಳಿಕೊಡ್ತಾಳೆ ನಮ್ಮವ್ವಾಂದು ಹೋದ, ಬಟ್ಟೆ ಬರೆ ಸೆಳ್ಕಂದ್ ಬಂದ. ಎಲ್ಲಮ್ಮ ಹೇಳಮ್ಮ ನನಿಗೆ ಮೂರ ಬುದ್ವಂತ್ಕೆ ಮಾತ್ ಹೇಳ್ತೇನಿ ಅಂದಿದ್ಯಲ್ಲ ಅಂದ.

ದೂರದ ದೇಶದಲ್ಲಿ ಹೆಣ್ ತಂದಿರೋದು. ನಿಮ್ಮತ್ತೆ ನಿಮ್ಮಾವ ಬಂದು ಮಾತಾಡ್ಸಿದ್ರೆ ಬಾಯ್ತುಂಬ ಮಾತಾಡಪ್ಪ ಚೌಕಾಸೀಲಿ ಮಾತಾಡಬ್ಯಾಡ ? ಇನ್ನೊಂದು ಮಗು, ಆದ್ರೆ ನೀನು ಕಾಡದಾರೀಲಿ ಹೋಗಬ್ಯಾಡಪ್ಪಾ ಊರೂರ್ ಮ್ಯಾಲಾಸಿ ಹೋಗಪ್ಪ. ಆಮ್ಯಾಲೆ ಕತ್ಲೆ ಆದ ಪಕ್ಷದಲ್ಲಿ ದೀಪ ಎಲ್ಲಿ ಕಾಣ್ತದೊ ಮಗ ಅಲ್ಲಿ ತಂಗಿದ್‌ಬಿಡು ಅಂದಳು.

ಹೋದ. ಇನ್ನು ತಾಯಿ ಹೇಳಿದ್ಲಲ ಹಂಗೆ ಹೋದ. ಹೋಗ್ತಾಯಿರುವಾಗ ಎಷ್ಟೊ ಊರು ಸಿಕ್ಕುತ್ತೆ. ಹಿಂಗೇ ಹೋಗ್ವಾಗ ಒಂದೂರು. ಆ ಊರಿನ ಕಡೆಮನೆ ಹತ್ತಕ್ಹೋದೋನೆ ಏನ್ಮಾಡ್ತಾ ಇದಾನೆ ಮನೆಮ್ಯಾಕೆ ಹತ್ತತಾ ಇದಾನೆ. ಆ ಮನೆ ಯಜಮಾನ ಈಚೆ ಬಂದು ಅರೆ ಇವನ್ಯಾಕೆ ಹತ್ತತಾ ಇದಾನೆ. ''ಏ ಯಾಕ್ ಹತ್ತತಿಯಯ್ಯ?'' ''ಏ ಹೋಗಯ್ಯ ನಮ್ಮವ್ವ ಊರಿನ ಮ್ಯಾಲಾಸಿ ಹೋಗೊಂದಾಳೆ ,ಇವ್ನೊಳೆ ಬಂದ.'' ''ಓಹೊ ದಡ್ಡ. ಮನೆಮ್ಯಾಲೆ ಹತ್ತಿ ಹಾರಿ ನೆಗ್ದ್ ನೆಗ್ದ ಹಾರಿ ಹೋಗೊಂತಲ್ಲೊ ಹೇಳಿರೋದು. ದಾರೀಲಿ ನಡ್ಕಂಡ್ ಹೋಗೂಂತ ಬಾಪ್ಪಾ ಇಲ್ಲಿ ಹೋಗು, ಇಳ್ದ್‌ಬಿಟ್ಟ. ಹೊಂಟಬಿಟ್ಟ.

ಅತ್ತೆ ಊರಿಗೆ ಹೋಗಿದಾನೆ. ಅತ್ತೆಮನೆ ಮುಂದೆ ಒಂದ್ ಕೈಗಲ್ ಮಾರು ದೂರದಲ್ಲಿ ಹುಲ್ಲು ಕೊಪ್ಪಲು ನ್ಯಾರಕ್ಕೆ ಅಲ್ಲಿಗೆ ಬಂದ. ಅದ್ರು ಮ್ಯಾಲೆ ಮಕ್ಕಂಬುಟ. ಸರಿ ಇವ್ರು ಏನೋ ದೂರದ ಪ್ರದೇಶ ಹೆಚ್ಚು ಕಮ್ಮಿ ಆಗಿರ್ಬಕೊಂದು ಉಂಡು ಮಲಗಿದ್ರು. ಇವ್ನು ಬೆಳಗಿನವರ್‍ಗು ಕೂತ್‌ಬಿಟ್ಟ. ಇನ್ನು ಬೆಳಿಗ್ಗೆ ಕೋಳಿ ಕೂಗತ್ಲೆ ಎದ್ದು ಈಕೆ ಹೆಂಡ್ತಿ ಕೋಳಿ ಬಿಡಾನಂತ ಕೊಪ್ಲಿಗೆ ಹೋಗಿದಾಳೆ. ಇವ್ನು ಏನ್ ಕೂತುಬಿಟ್ಟಿದಾನೆ. ಯಾಕಿಲ್ಲಿ ಬಂದ್ ಕೂತಿದಾರೆ? ಹಾಗೇಂತ ಮನಿಗೆ ಬಂದ್ಲು. ಅಣ್ಣಂದ್ರಿದ್ರಲ್ಲ? ಅಣ್ಣ ನಿಮ್ಮ ಬಾವಾರು ಬಂದು ಯಾಕೊ ಕೊಪ್ಲಲ್ಲೆ ಕೂತಿದಾರೆ. ಹೋಗ್ರಣ್ಣ ಕರ್‍ಕಂಬರ್‍ರಿ. ಸರಿ ಬಂದ್ರು. ನಮ್ಮವ್ವ ಬಾಯ್ತುಂಬ ಮಾತಾಡ್ನು ಅಂದಿದ್ಲಲ್ಲ? ಬಾಯಿ ತುಂಬಾಂದ್ರೆ ಯಾವ್ದು ? ಕಡಬೂಂತ ಹೇಳ್ಬೇಕು ಅಂತ ಯೋಚ್ನೆ ಮಾಡ್ಕೆಂದ್ ಕುತಗಂಡ. ಮಾವ? ಬಂದು ''ಯಾವಾಗ ಬಂದ್ಯಪ್ಪ''? ''ಕಡಬು''ಅಂದ ಅಳಿಯಾರಿದ್ದೋರು, ಇಲ್ಯಾಕ್ ಕುಂತಿದಿ ಮಾವ, ''ಕಡಬು'' ಅಂದ. 'ಎಷ್ಟತ್ತಲ್ಲಿ ಬಂದೆ ಮಾವ,' ಕಡಬು'. ಓ ಇವನಿಗೇನೊ ಕಡಬಿನ ಪಿಚಾಚಿ ಹಿಡ್ದೆ ಬಿಟ್ಟಿದೇಂತೇಳಿ, ಆ ಕಡೆ ಒಬ್ರು ಈ ಕಡೆ ಒಬ್ರು ಕೈಕೊಟ್ಟಿದ್ರು, ಒಳಗೆ ತಗಂಡೋಗಿ ಕುಂದುರ್‍ಸಿದ್ರು. 'ಅಮ್ಮಾ ನಿಮ್ಮ ಅಳಿಮೈಯನಿಗೆ ಏನೋ ಕಡಬಿನ ಪಿಚಾಚಿ ಹಿಡ್ದ್ ಬಿಟ್ಟಿದೆ. ಒದೆಲ್ಡ್ ಕಡ್ಬು ಮಾಡ್ಯಾಕು. ನಾವು ಕೆಲ್ಸ ವಗ್ಗೈರೆ ಮುಗೆಸ್ಗಂದ್ ಬಂದ್ಬುಡ್ತೇವಿ ಅಂತ ಹೇಳಿಹೋದ್ರು. ಏಟಿಯಾದ್ರು ಅತ್ತೆಗೆ ಅಳಿಮೈಯಾಂದ್ರೆ ಆಸೆಯಲ್ಲಾ. ಆಗ್ಲೆ ಅಕ್ಕಿ ನೆನೆಹಾಕಿ ಒಂದಿಷ್ಟ್‌ಕಾಯಿ ತುರ್ದ್ಹಾಕಿ, ಹಿಂದ್ಗಡೆ ನೀರು ಸೇದಿ ಕೊಡಾನಾಂತ ಬಾವಿಹತ್ರ ಬಂದ್ಲು. ಇವನು ಸುಮ್ನರ ಕುತಗಂದ್ಲುಲ. ಒಳಕಲ್ ಮುಂದೆ ಕೂತಿದ್ನಲ್ಲ. ಒಂದಿಷ್ಟ್ ಅಕ್ಕಿ ತಕ್ಕಂದುದ್ದೆ ಬಾಯಿಗೆ ಹಕ್ಕಂಬುಟ. ಆಕೆ ಬಂದು ಕೊಟ್ಲೆ ಬಾಯಿ ಬಿಟ್‌ಬುಟ್ಟ. ಮತೆ ಹಂಗೆ ಮುಚ್ಗೆಂಬುಟ್ಟ. ಈ ಒಣಅಕ್ಕಿ ಅಲ್ಲೆ ಅಳ್ಳೆಕಂಬುಟ್ಟು, ಬಾಯಿಬಿಟ್ರೆ ಹೆಂಗ್ ಕಾಣ್ತವಲ ಅಂತೇಳಿ ಇವನು ಇನ್ನು ಬಂದಾಬಸ್ತಾಗಿ ಹಿಡ್ಕಂಬುಟ. ಒಣಅಕ್ಕಿ ಗದ್ದ ಹಿಡ್ಕಂಬುಟ್ಟುತು. ಯಮ್ಮೇನ್ಮಾಡಿಬಿಟ್ಲು, ಪಕ್ಕದ ಮನೇಲಿ

''ಯಕ್ಕ ನನ್ನ ಅಳಿಮ್ಮೈಯಂದ್ ಗದ್ದ ಹಿಡ್ಕಂಡದೆ ಕಣೆ. ನನ್ ಅಳಿಮ್ಮೈಯಂದ್ ಗದ್ದ ಹಿಡ್ಕಂಡತೆ ಕಣೆ ಅಂದ್ಲು. ಅಲ್ಲೊಬ್ಬ ಶಾಸ್ತ್ರಗಾರ. ಅಣ್ಣ ನನ್ ಅಳಿಮ್ಮೈಯನ ನೀನು ಮಾತಾಡ್ಸಿ ಬಿಟ್ರೆ ನಿನಿಗೆ ಮುವತ್ ರೂಪಾಯಿ ಕೊಟ್ ಬಿಡ್ತೆನಪ್ಪಾ ಅಂದು ಕರ್‍ಕಂದ್ ಬಂದ್ಲು.

ಬಂದ್ ನೋಡ್ದ. ಒಂದ್ ಸ್ವಲ್ಪ ಕಿಲಾಡಿಗಂಡೆ ಅವ್ನು. ''ಎಲ್ಲಿ ನೀವು ಕದಹಕ್ಕಂದ್ ಹೊರಟಬಿಡಿ ನೀವೆಲ್ಲ'' ಅಂದ. ಎಲ್ಲಾರ್‍ನು ಆಚೆ ಕಳಿಸಿಬಿಟ್ಟ. ''ಲೋ ಕೊಬರಿ ತುರ್‍ದ್ಕೊಡ್ಲಾ ? ನೀ ಯೇಳಾಕಿಲ್ಲಾಂದ್ರೆ ನಾನು ಹೋಗ್ತೀನ್ ನೋಡಪಾ. ನನಿಗೆ ನೀನು ಹೇಳಬ್ಯಾಡ. ನಿನಿಗೆ ನಾನು ಹೇಳೋದಿಲ್ಲ ಅಂದ. 'ಈ ಬರೆ ಅಕ್ಕಿ ತಿಂದುಕ್ಕೆ ನನಿಗೆ ಮುವತ್ ರೂಪಾಯಿ ಕೊಡ್ಬೇಕಾಗಿದೆ. ಹುಂ ನಿಂದ ನಾನ್ ಹೇಳಕಿಲ್ಲ. ನಂದ್ ನೀನು ಹೇಳಬ್ಯಾಡ'' ಅಂದ. ಓಹೊ ಆಗ್ಲಿ 'ಅಂದ್ರೆ ನಿಮ್ಮತ್ತೆ ನಿಮ್ಮಾವ ಬಂದು ಕಂಡ್‌ಗಿಂಡ್ ಮಾತಾಡ್ಸಿದ್ರೆ ಜೋರಾಗಿ ಮಾತಾಡ್ತಿಯಲ್ಲ? ''ಓಹ್ ಜೋರಾಗಿ ಮಾತಾಡ್ತೇನಿ''. ಸರಿ ಆ ಮಂತ್ರ ಅಂದ ಈ ಮಂತ್ರ ಅಂದ. ಕದತಗದ. ಮಾತಾಡ್ಸಿದ್ರು. ಚನ್ನಾಗೆ ಮಾತಾಡ್ದ. ಚನ್ನಾಗಿ ಮಾತಾಡಿದಮ್ಯಾಲೆ, ಇವ್ನಿಗೆ ಮುವತ್ ರೂಪಾಯಿ ಕೊಟ್ ಕಳಿಸಿಬಿಟ್ರು. ಇನ್ನ ಆ ಮುದ್ಕಿ ಮಾಡ್ಲಾರ್‍ದ್ದಂತೇಳಿ ಶಾಸ್ತ್ರ ಸಂಬಂಧ ಮುಗಿಸಿಬಿಟ್ಟು ಕಳಿಸಿದ್ಲು ಬೆಳಗ್ಗೆ ಗಂಡಹೆಂಡ್ತೇರ್ ಇಬ್ರಾಳ್ನು. ಇವತ್ತಿನ್ ದಿವಸ ಒಂದ್ ಹೆಣ್ ಮಗುವನ್ನು ಗಂಡನ ಮನಿಗೆ ಕಳ್ಸದೊಂದ್ರೆ ಸುಮ್ನೆ ಆತ? ಇನ್ನು ಆಗಂದೇಲೆ ಕಳಿಸ್ಬೇಕು. ಆಗ ಅದು ಇದು ಅಡ್ಗೆ ಉಪ್ಪಾರ ಮಾಡಿ, ವಣ ಕಜ್ಜಾಯ ಮಾಡಿ ಜನ ಕಳ್ಸತ್ಗೆ ಹನ್ನೆಲ್ಡ್‌ಗಂಟೆ ಆಗೋಯ್ತು. ಮಗಳ ಶೃಂಗಾರ ಮಾಡಿದ್ರು. ಅವಾಗ ಅತ್ತೆ ಏನ್ಮಾಡಿದ್ಲು? ಅಳಿಮ್ಮೈನಿಗೆ ಪ್ರೀತಿಗೋಸ್ಕರವಾಗಿ ತಿನ್ಲಿಂತೇಳಿ, ಇಷ್ಟ್ ವಡೆ ಕೊಟ್ಲಂತೆ. ಆಮ್ಯಾಲೆ ಇಬ್ರುನ್ನು ಕಳ್ಸದ್ರು.

ಇವ್ನು ತಿಂತಾ, ಇವನಿಗೇನಾತು? ಹೆಣ್ತಿಮ್ಯಾಲೆ ಆಸೆ ಬರ್‍ಲಿಲ್ಲ. ವಡೆ ಕೊಟ್ಟಿದ್ಲಲ ಅತ್ತೆ ಅದ ತಿಂದ್ಕಂತ ಹೊಂಟ್‌ಬಿಟ್ಟ. ಆಕೆ ಹೆಂಡ್ತಿ ಹಿಂದಗಡೆ ಓಡ್ತಾ ಓಡ್ತಾ ಹೊಂಟ್ಲು. ಹಣೆಮ್ಯಾಲೆ ಕುಂಕ್ಮ ಇಟ್ಟಿದ್ಲಾ? ಅದು ಬಿಸಿಲಿಗೆ ಬೆವತುಬಿಟ್ಟು ಮುಖತುಂಬ ಆಯ್ತು. ಓಡ್ತಾ ಓಡ್ತಾ ಅರ್ಧ ದಾರಿಗೆ ತೀರೊಯ್ತು ವಡೆ. ಹಿಂದುಕ್ ತಿರುಗಿ ನೋಡ್ದ, ಮುಖ ತುಂಬ ಆಯ್ತಾ? ಅವ್ನು ಓಹೋ ನಮ್ಮಾವ ನನ್ನಿಂದ್‌ಗೂಟ್ಲೆ ಯಾವ್ದೋ ಪಿಚಾಚಿ ಕಳಿಸಿಬಿಟ್ಟಿದಾನೆಂದು ಹೊಡಿತಾನೆ ಓಟ.

ಅಲ್ಲೊಬ್ಬ ಸಾಬ್ರವನು ಕುದ್ರೆಮ್ಯಾಲೆ ಕುತಗಂದ್ ಹೋಗ್ತುದ್ದ. ಲೇ ಸಾಬ್ರೆ ನಿಲ್ಲು ಅಂದ. ''ಏನಪ್ಪ?'' ''ಇಗೋ ನೋಡು. ಕುದ್ರೆ ನನಿಗೆ ಕೊಡು, ಅಗೋ ಅಲ್ಲಿ ಬರ್‍ತಾಯಿದೆಯಲ್ಲ ಪಿಚಾಚಿ, ಅದ್ನ ಕರ್‍ಕಂದ್ ಹೊಂಟೋಗು.'' ಕುದ್ರೆ ಇವ್ನಿಗೆ ಕೊಟ್ ಬಿಟ್ಟ. ಆ ಹೆಣ್‌ಮಗಳ ಕರಕಂದ್ ಹೊಂಟ. ''ಲೋ ಅಣ್ಣಾ ಹ್ಯಾಗೋ ಹತ್ತದು ?'' ''ಲೋ ಒಂದಿಷ್ಟು ದೂರ ಹಿಂದ್ಗಡೆ ನಡಕಂಡೋಗಿ ನೆಗಿಯೋ ಆಚೆ. ಒಷ್ಟ್ ದೂರ ಹಿಡಕಂಡೋಗಿ

ಹಿಂದಗಡೆ ನೆಗಿಯಾಕ್ ಹೋದ. ಪಟ್ಟಂತ ಒದೀತು. ಅಯ್ಯೊ ಕೊಟ್ನಲ್ಲಪ್ಪ ನನಿಗೆ ಏಟು. ಹಾಗೇಂತೇಳಿ ಮುಂದುಕೊಂಟ.

ಅಲ್ಲೊಬ್ಬ ಠಗರಿನೋನಿದ್ದ. ಲೋ ಮಗ ಈ ಕುದ್ರೆ ನೀನೆ ತಗೊ, ಆ ಠಗರು ನನಿಗೆ ಕೊಟ್‌ಬಿಟು. ನಾನೂರು ರೂಪಾಯಿ ಕುದ್ರೆಗು ನಲ್ವತ್ ರೂಪಾಯಿ ಠಗರಿಗು ಒಂದೆಯಾ ? ಠಗರ ಅವ್ನಿಗೆ ಕೊಟ್ಬಿಟ್ಟ, ಕುದ್ರೆ ಇವ್ನು ಹಿಡ್ಕಂಡ. ''ಹ್ಯಾಗೊ ಮಗ ಕರೆಯೋದು ? '' ಅಣ್ಣಾ ದಿಣ್ಣೆಮ್ಯಾಲೆ ಠಗರು ನಿಲ್ಸು. ಹಳ್ಳದಲ್ಲಿ ನೀನಿಂತಗಂಡು ನಡೀಮಗ ಅನ್ನು. ಹಂಗೆ ಅಂದ. ಅಂದುದ್ದೆ ಸೈ ಗುದ್ದಿಬಿಡ್ತು.

ಮುಂದುಕೊಲ್ಟ. ಅಲ್ಲೊಬ್ಬ ಹಲಸಿನ ಹಣ್ ಮಾರ್ಕಂದ್ ಬರ್ತ್ತಾಯಿದ್ದ. ''ಲೋ ಅಣ್ಣಾ, ಈ ಠಗರ ನೀ ತೆಗೋ, ಆ ಹಲಸಿನ ಹಣ್ಣು ನನಿಗೆ ಕೊಡು ಅಂದ. ನಾಲ್ಕಾಣೆ ಹಲಸಿನ ಹಣ್ಣಿಗು ನಲವತ್ತು ರೂಪಾಯಿ ಠಗರಿಗು ಒಂದೆಯ ? ಹಲಸ್ನಣ್ ಇವ್ನಿಗೆ ಕೊಟ್ಟ. ಠಗರ ಅವ್ನು ಮಡಿಕ್ಕಂಡ. ಹ್ಯಾಗೋ ಹಲಸ್ನಣ್ ಹೊತ್ಕನದು ? '' ಇನ್ನೊಂದು ಸ್ವಲ್ಪ ತೊಟ್ ಮುರ್ದು ತಲೆ ಮ್ಯಾಲೆ ಮಡಿಕ್ಕ ಮಗ ಅಂದ. ತೊಟ್ ಮುರ್ದು ತಲೆಮ್ಯಾಲೆ ಮಡಿಕ್ಕಂಡ. ಅಂಟಲ್ವೆ? ಅಂಟಸ್ಕಂದ್‌ಬುಡ್ತು.

ಊರಿಗೆ ಬಂದ. ನೆನಿಬಾರ್ದೋನು ಇದ್ನಲ್ಲ? 'ಲೋ ಅಣ್ಣಾ ನನ್ ತಲೆನ ಚೌರ ಮಾಡಿಬಿಡೊ. ಹಲಸ್ನಣ್ಣ ನೀ ತಗಳೋ. ತಲೆನೆಲ್ಲ ಚೌರ ಮಾಡಿಬಿಟ್ಟ. ಹಲಸ್ನಣ್ಣ ಇವ್ನು ತಗಂದ.

ಮನಿಗೆ ಬಂದ. ''ಏನಪ್ಪಾ?'' ''ಏನವ್ವಾ? ಹೀಗಿಗಾಗೋಯ್ತು ಕಣವ್ವಾ''? ಲೋ, ಇಂತ ಕೆಲ್ಸ ಮಾಡಿಬಿಟ್ಟೆನೋ. ನಾನೇನ್ ಮಾಡ್ಲೊ? ದೂರದ ಪ್ರದೇಶದಲ್ಲಿ ಹೆಣ್‌ತಂದು ಲಗ್ನ ಮಾಡಿದ್ರೆ ಇಂತ ಕೆಲ್ಸ ಮಾಡಿಬಿಟ್ಟೆಲ್ಲ. ಆಗಲಿ ಬಾಯಿಲ್ಲಿ. ಈಗೆಲ್ಲ ಕೆಲಸದ ಕಾಲ. ಯಾರು ಸೌದೆ ಸೊಪ್ಪು ಹೊಡಿಯಾಕ್ ಬಂದುಲ್ಲ. ಇಲ್ಲೆ ಹತ್ತಿರದಲ್ಲೋಗಿ ಒಂದ್ ಹೆಣ್ ನೋಡ್ಕೆಂದ್ ಬರ್ತೇನಿ. ನಮ್ಮ ದೊಡ್ಡದಾದ ಆಲಮರಕ್ಕೋಗಿ ಒಂದ್ ಕೊನೆ ಕಡ್ಕಾಂಬಾಪ್ಪಾಂತೇಳಿ ಮಗನಿಗೆ ಹೇಳಿಬಿಟ್ಟು, ಊಟುಕ್ ಕೊಟ್ಟು ಊಟ ಮಾಡ್ಸಿ, ಅವುನ್ನ ಮರ ಕಡಿಯಾಕ್ ಕಳ್ಸಿ, ಈಯಮ್ಮ ಹೆಣ್ ನೋಡ್ಕೆಂಬರಾಕ ಹೊರ್ಟ್ಹೋದ್ಲು.

ಇವ್ನೇನ್ ಮಾಡಿಬಿಟ್ಟ. ಮರದಮೇಲೆ ಮ್ಯಾಲಕ್ ಹತ್ತಿ ಬುಡ ಕಡಿತಾಯಿದ್ದ. ಎಲ್ಲಾರು ಕೆಳಗೆ ನಿತಗಂದೆ ಬುಡಕಡುದ್ರೆ, ಇವ್ನು ಮರದ ಮ್ಯಾಲೆ ನಿತಗಂದ್ ಬುಡ ಕಡಿತಾಯಿದ್ದ. ಕಡಿತಾಯಿದ್ರೆ ಅದೆ ಊರಿನೋರು ಮೂರುಜನ ಹೋಗ್ತಾ ''ನೋಡು ಈ ದಡ್ಡ ಸೂಳೆಮಗನ್ನ ಮರದಮ್ಯಾಲೆ ನಿತಗಂಡ್ ಬುಡ ಕಡಿತಾನಲ್ಲ ಸಾಯಾಕಿಲ್ವ?' ಇದು ಕೇಳ್ತಲ್ಲ ಬಂದುದ್ದೆ ಮೂರ್ ಜನಾನು ಅಡ್ಡಹಾಕ್ದ. ಏನೋ ಏಕೋ ? ಏನು ಇಲ್ಲಿ ನಾ ಸಾಯ್ತೇನಿ

ಅಂದ್ರಲ್ಲ. ಯಾವಾಗ ಸಾಯ್ತೀನಿ ಹೇಳಿಬಿಟ್ಬೋಗಿ'. 'ಏ ಹುಚ್ಚ ನಾವೇನು ಬ್ರಹ್ಮಾಂತ ತಿಳ್ಕಂಬುಟ್ಟಿನೊ ? ದಡ್ಡ, ಮರದ ಮೇಲೆ ನಿತಗಂದ್ ಬುಡ ಕಡಿತಾರೆನೋ ? ' ಅದೆಲ್ಲಾ ಆಗಾಕಿಲ್ಲ. ನಾನ್ಯಾವಾಗ ಸಾಯ್ತೀನಿ ಹೇಳಿಬಿಟ್ಬೋಗ್ರಿ. ಇವ್ರು ಯಾವ್ದೊ ಒಂದು ಕಾರ್ಯಾಂತಕ್ಕಾಗಿ ಅರ್ಜೆಂಟ್ ಹೊಂಟುದ್ರು. 'ಲೋ ಹೋಗೋ ನಿನ್ನ ಮೂಗು ಚೊಟ್ಟಾದ್ದಿನ ಸಾಯ್ತಿ' ಅಂದ್ರು . ಬಂದ್ಬುಟ್ಟ. ಶಿವಕ್ಕ ನನ್ ಮೂಗು ಚೊಟ್ಟಾಗೈತೆನೊ ನೋಡು. ನಂಜಣ್ಣ ನನ್ ಮೂಗು ಚೊಟ್ಟಾಗಿದೆಯೇನೊ ನೋಡು. ಅಲ್ಲೊಬ್ಬ ಸಿಟ್‌ಬಂದು ಹುಂ ಕಣೊ ಚೊಟ್ಟಾಗೆತೆ ಅಂದ್ಬುಟ್ಟ. ಬಂದುದ್ದೆ ಕದಹಾಕಿತ್ತಲ್ಲ? ಲೇ ಕದ ನಮ್ ತಾಯಿ ಬಂದ ಕೂಟ್ಲೆ, ನಿನ್ ಮಗನ ಮೂಗು ಚೊಟ್ಟಾಗೆದೆ ಅಂತ ಹೇಳಿಬಿಡು. ನಿನ್ನ ಮಗ ಕಾಡಿಗೆ ಸಾಯಕೋದಾಂತ ಹೇಳಿಬಿಡಲೆ ಕದಾಂತ ಹೇಳ್ದ. ಕಾಡಿಗೋಗಿ ಆಳುದ್ದ ಗುಂಡಿ ತಕ್ಕಂಡ್ ಹುಣ್ಕೊಂಡ.

ಆ ಕಾಡ್ಗೆ ಜೇನು ಬಿಚ್ಕೊದಿಕ್ಕೆ ಇಬ್ರಾಳ್ ಬಂದುದ್ರು. ಒಂದು ಮೂರಗಡಿಗೆ ಜೇನು ಬಿಚ್ಚಿದಾರೆ. ಆಲೆ ಪಶ್ಚಿಮಾಂಬುಧಿಯಲ್ಲಿ ಮುಳುಗೋ ಟೈಮು. ಮೂರ್ಗಡ್ಗೆ ಬಿಚ್ಚಿಬಿಟ್ರಲ್ಲ. ಇನ್ನೊಂದ್ ಗಡಿಗೆ ಹೊತ್ಕೊಳ್ಳೋರಿದ್ರೆ ಕೂಲಿಕೊಟ್ ಕರ್ಕೆಂದ್ ಹೊಂಟೋದೆವಲ್ಲ ಅಂತ ಬಂದುದಾರೆ. ಇವ್ನು ಗುಂಡಿ ಹೊಡ್ಕೆಂಡ್ ಹೊತ್ಕೊಂಡಿದಾನೆ. 'ಲೋ ಯಾಕೋ ಹೂತ್ಕೋಂದೀಯ ?' 'ಲೇ ಹೋಗಯ್ಯ, ಸಾಯಾಕ್ಕೆ ಹೂತ್ಕೊಂಡಿದೇನಿ', 'ಎಲ ಇವ್ನ ಏನಂದೆ ಸಾಯಾಕೆ, ಏ ಅಣ್ಣ ಇಲ್ಲೆ ಹತ್ರ ಊರು ನಮ್ದು. ಮೂರ್‌ಗಡಿಗೆ ಜೇನು ಇಳ್ಸಿದೇವಿ. ನೀನೊಂದ್ ಗಡಿಗೆ ಹೊತ್ಕಂದ್ ಬರ್ಬೇಕಲ್ಲ? ಎಷ್ಟೆ ದುಡ್ದ್ ಕೇಳಿದ್ರು ಕೊಡ್ತೇವಿ'. 'ಎಷ್ಟ ಕೊಡ್ತೀರಿ?' 'ಎರಡಾಣೆ ಕೊಡ್ತೇವಿ'. 'ಕೊಡಿ ಮತ್ತೆ'. ಎರಡಾಣೆ ಇಸ್ಕಂಡಿದಾನೆ. ಒಂದು ಗಡಿಗೆ ಜೇನು ಹೊತ್ಕೊಂಡಿದಾನೆ. ಅವ್ರು ಮುಂದೆ ಹೋಗ್ತಾ ಅವ್ರೆ. ಹಿಂದೆ ಹೋಗ್ತಾ ಎಡಗೈಲಿ ಗಡಿಗೆ ಹಿಡ್ಕಂಡು, ಬಲಗೈಲಿ ಎರಡಾಣಿ ಹಿಡ್ಕಂಡು, ಇವ್ರು ಎರಡಾಣಿ ಕೊಟ್ಟವ್ರೆ ಇದರಲ್ಲೊಂದು ಕಗರು ತರ್ತೇನಿ, ಅದುನ್ ಸಾಕ್ತೇನಿ, ಅದು ಇಷ್ಟಪ್ಪ ಆಗ್ತದೆ, ಅಂದ. ಎರಡೂ ಕೈಬಿಟ್ಟ. ಅದು ದೊಪ್ಪೆಂತ ಬಿದ್ದು ಒಡ್ದೋಯ್ತು. ಇನ್ನೇನ್ ಮಾಡ್ತಾರೆ ಅವ್ರು? ಒಂದೊಂದ್ ಒದೆ ಕೊಟ್‌ಬುಟ್ ಹೋದ್ರು. ಅದೇ ಟೈಮ್ನಲ್ಲಿ ಇಬ್ರಾಳು ಕಳ್ತನಕ್ಕೆ ಬರ್ತಾ ಅವ್ರೆ. ಇವ್ನು ಸ್ವಲ್ಪ ಆಳು ಬಲವಾಗಿದ್ದ. 'ಅಣ್ಣಾ ಇವನ್ನ ನಮ್ಮ ಜೊತೆಗೆ ಕರ್ಕಂದೋದ್ರೆ ಬಾರಾದ್ದ ಹೊರುಸ್ಬೋದಲ್ಲಣ್ಣ ಅಂತೇಳಿಬಿಟ್ಟು ಮಾತಾಡ್ಕಂಡ್ ಬರ್ತಾಯಿದ್ರು. ಇವ್ನಿಗೆ ಕೇಳಿಬಿಡ್ತು. ಅವ್ರು 'ಏನಣ್ಣ ಕಳ್ತಾನಕ್ ಬರ್ತೀಯ?, 'ಓ ಬರ್ತೇನಿ'.

ಸರಿ ಹೋದ್ರು. ಒಂದ್ ಮನಿಗೆ ನುಗ್ಗಿಬಿಟ್ರು. ಅವ್ರೆಲ್ಲ ಪೆಟ್ಗೆಗಿಟ್ಗೆ ನೋಡಿದ್ರೆ ಇವ್ನೇನ್ ಮಾಡ್ದ? ರಾಗಿಕಲ್ಲು ಎತ್ತಿದ. ಅದೇನಂತ ಬಾರ ಇರ್ಲಿಲ್ಲ. ಹಸಿಕಲ್ಲು ಎತ್ತಿದ, ಭಾರಾಗಿತ್ತು. ಇವ್ರು ಹೊತ್ಕಂಡ್ ಕೆಂಬಾರ್ರಗುಂಡಿಗೆ ಹಾಕಿದ್ರು. ಇವ್ನು ಹಸಿಕಲ್ ಹೊತ್ಕಂಡ್ ಬಂದ್ ಗುಂಡಿಗೆ ಹಾಕ್ದ. ಅಯ್ಯೊ ನಿನ್ ಓಸ್ ಅಡ್ಗ ಇದ್ಯಾಕ್ಲ ಈ ಹಸಿಕಲ್ ಹೊತ್ಕಂದ್ ಬಂದಿದ್ದೀಯ ? ನಿವೇನಪ್ಪ ಮಾತಾಡ್ಕೆಂದ್ ಬಂದಿದ್ದು? ಬಾರಾದ್ ಹೊರಾಕ್ ಸರಿಗವ್ನೆ ಅಂತಲ್ವೇನಪ್ಪಾ ? ರಾಗಿಕಲ್ ಎತ್ತಿದೆ ಬಾರಾಗಿರ್ಲಿಲ್ಲ. ಹಸಿಕಲ್ ಎತ್ತಿದೆ ಬಾರಾಗಿತ್ತಪ್ಪ.

ಎತ್ಕಂದ್ ತಗಂದ್ ಬಂದೆ. ಅಯ್ಯೊ ದಡ್ಡ ಹಾಗಲ್ಲ ಕಣೋ. ಬಾರವಾದ ಪದಾರ್ಥವಾಗಿರತಕ್ಕಂತ ಕಬ್ಬಿಣದ ಪೆಟ್ಟಿಗೆ ಇಂತದು ತರಬೇಕು. ಓಹೋ ಹಾಗೋ ನಡ್ರಿ ಇನ್ನೊಂದು ಊರಿಗೆ ಹೋಗಿ ಕಳ್ತನ ಮಾಡ್ಕೆಂಡೆ ಸುತ ತಗಂಡೇ ಬರಬೇಕು.

ಇನ್ನೊಂದೂರ್ನಲ್ಲಿ ಅವತ್ತಿನ ದಿವಸ ಹಬ್ಬ. ಒಬ್ಳು ಮುದುಕಿ ಮನೇಲಿ ಒಲೆಮ್ಯಾಲೆ ಬೇಯ್ತಾಯಿದೆ. 'ನಾವು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡ್ಕೆಂಡ್ ಬಂದ್ಬಿಡ್ತೆವಿ ಹಾಗೇಂತೇಳಿ ಹೊರ್ಹೋಗಿ ಬಿಟ್ಟಿದಾರೆ ಮನೆಯೋರು. ಈ ಮುದ್ಕಿಗೆ ಹಂಗೆ ನಿದ್ದೆ ಬಂದಿದೆ. ಮಲಗಿ ಬಿಟ್ಟಿದೆ. ಸರಿ ಒಲೆಮ್ಯಾಲೆ ಪಾಯಸ ಕುದಿತಾ ಐತೆ. ಇವರು ಮೂರ್ ಜನಾನು ಅದೆ ಮನೆಗೆ ನುಗ್ಗಿದ್ರು. ಇವ್ರೆಲ್ಲ ಪೆಟ್ಗೆಗಿಟ್ಗೆ ನೋಡ್ತಾಯಿದ್ರೆ, ಇವ್ನು ಪಾಯಸ ಕುದಿತಾ ಇದ್ದುದ್ ನೋಡಿ ಏ ಬರ್ರೊ ಇಲ್ಲಿ. ಪಾಯಸ ಕುಡದ್‌ಬಿಟ್ ಕಳ್ತನ ಮಾಡ್ಕಂದ್ ಹೋಗಾನ. ಆಗ್ಲಪ್ಪಾಂದ್ಕಂಡ್ ಬಂದ್ ಕುಂತ್ಕಂದ್ರು. ಅವರಿಗು ಎಲೆಹಾಕ್ದ. ತನಿಗು ಒಂದು ಎಲೆ ಹಕ್ಕೆಂದ. ಸರಿ ಅವನಿಗು ಒಂದ್ ಸೌಟ್ ಹಾಕ್ದ, ತನಿಗು ಒಂದ್ ಸೌಟ್ ಹಕ್ಕೆಂದ, ಪಾಪ ಎಷ್ಟು ಅಸ್ವಾಗಿ ಮನಿಗಿದಾಳೋ ಮುದ್ಕೀಂತ ಎತ್ತಿ ಅವಜ್ಜಿ ಬೆನ್ನಿನ ಮ್ಯಾಲೆ ಕವುಚಿಬಿಟ್ಟ. ಸುಡೊ ಪಾಯಸಲ್ವೆ ?ಯಪ್ಪಾಂದ್ಲು. ಆ ಮೂಲೆಗೆ ಒಬ್ಬನೋದ. ಈ ಮೂಲೆಗೆ ಒಬ್ಬನೋದ. ಸರಿ ಅತ್ಲೋರು ಇತ್ಲೋರೆಲ್ಲ ಬಂದ್ ತುಂಬ್ಕಂಡ್ರು. ಏ... ಏನಜ್ಜಿ ಏನಜ್ಜಿ ಅಂದ್ರು. ಅಪ್ಪಾ ಹಾಗೆ ಪಾಯಸ ಕುದುಸ್ಕೊಂಡ್ ಮನಗಿದ್ದೆ. ಯಾರೋ ಎತ್ತಿ ಬೆನ್ನಿನಮ್ಯಾಲೆ ಬಿಟ್‌ಬಿಟ್ರು. ಆ ಭಗವಂತನಿಗೆ ಗೊತ್ ಕಣಪ್ಪಾಂತ ಕೈ ಮುಗದ್ಲಂತೆ. ಇವನು ಅದೆಗತೆ ಕುಂತುದ್ನಲ್ಲ. ಏ ಹಾಕಿ ಬಿಡ್ತೇನೋಡು. ನನ್ನೊಬ್ಬನ್ನೆ ತೋರುಸ್ತಿಯಾ ?ಅಂದ. 'ಅವಾಗ ಅವರಿಬ್ರಾಳ್ನ ತಗಂದೋಗಿ ಸ್ಟೇಷನ್ನಿಗೆ ಬಿಟ್‌ಬಿಟ್ರು. ಇವನ್ನ ಸುದ್ದ ದಡ್ಡಾಂತ ಬಿಟ್‌ಬಿಟ್ರಂತೆ.

ಹೇಳಿದವರು : **ತಿರುಮಲಯ್ಯ,** 55 ವರ್ಷ, ಒಕ್ಕಲಿಗ ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು.

## ೩೬. ಗಂಡ ಹೆಂಡತಿ

ಒಂದೂರಲ್ಲಿ ಒಬ್ಬ ಗಂಡ ಎಂಡ್ತಿ ಇಬ್ರು ಆಳಿದ್ರು. ಇರ್‍ತಲೂವೆ ಅವಳೇನು ಮಾಡಿದ್ಲು? ''ಏನು ಮಾಡಿಲ್ಲವಲ್ರೀ'' ಅಂತ ಗಂಡನ್ನ ಕೇಳಿದ್ಲು. ಗಂಡ ಏನ್ ಮಾಡ್ದ? ವೋಗಿ ಅಕ್ಕಿ, ಬೇಳೆ, ಬೆಲ್ಲ ಎಲ್ಲ ತಗೋಬಂದ. ಮನೇಗೆ ತಗಂಬರ್‍ತಲೂವೆ ಅವಳೇನು ಮಾಡಿದ್ಲು? ತಿಂಗ್ಳಾದ್ರೂ ಏನೂ ಅಡಿಗೆ ಮಾಡ್ಲೇ ಇಲ್ಲ. ಎಲ್ಲ ತಗೊಂಬಂದಿದ್ರು ಅಡಿಗೆ ಮಾಡ್ಲೆ ಇಲ್ಲ. ಸುಮ್ನೆ ಯಾವ್ದೋ ತರಕಾರೀಲಿ ಅಡಿಗೆ ಮಾಡ್ದಂಗೆ ಮಾಡೋದು. ಅವ್ನೇನು

ಮಾಡ್ದ?' ನಾನಿರೋಕಿಲ್ಲ, ಸಂತೆಗೋಗ್ತೀನಿ. ನಂಗೆ ಬುತ್ತಿ ಮಾಡಿ ಕಟ್ಟು. ಅಂತ ಗಂಡ ಕೇಳ್ದ. ಗಂಡ ಕೇಳೊಹೊತ್ಗೆ ಇವ್ಳೇನು ಮಾಡಿದ್ಲು? ಅನ್ನ ಮಾಡಿ, ಚಪಾತಿ ಮಾಡಿ, ಬುತ್ತಿ ಕಟ್ಟಿದ್ಲು.

ಮನೆ ಹಿಂದೆ ಒಂದು ಬೇವಿನಮರ, ಆ ಬೇವಿನ ಮರದಾಗೇ ಬುತ್ತಿ ಸಹಿತ ಕುತ್ಕೊಂಬಿಟ್ಟ. ಅವ್ನು ಕೂತ್ಕೊಂತ್ಲೂವೇ ಒಬ್ಬ ಗೌಡತಾತ ಅಂತ ಅವಯ್ಯ ಗೌಡತಾತ ಬಂದು ಇವ್ರು ಮನೇಲಿ ಮಲ್ಗಿಕೊಂಡ. ಮಲಕೋತ್ಲೂನೂ ಇವ್ಳೇನು ಮಾಡಿದ್ಲು? ವಡೆ ಕಜ್ಜಾಯ ಬೋಂಡ ಅಂತದ್ದು ಇಂತದ್ದು ಎಲ್ಲಾ ಮಾಡ್ಬಿಟ್ಟು ಒಂದು ಗಡಿಗೇಗೆ ತುಂಬಿ, ಮಡಗಿ ತಾತನ್ನ ಎಬ್ಬಿಸಿ ತಾನು ತಿನ್ನೋವ ಅಂತ್ಲೂವೇ ನೀರು ಹೊತ್ಕೊಬರಕೆ ಹೋದ್ಲು.

ಹೊತ್ಕೊಬರೂತ್ಲೂವೆ ಗಂಡ ಬಂದು ಏನ್ ಮಾಡ್ದ? ಕಾದಎಣ್ಣೆ ಇರ್ತದಲ್ಲ, ಅದನ್ನ ತಗೋಬಂದು ಮೂಗ್‌ಗೆ ಬಾಯಿಗೆ ಬಿಟ್ಬಿಟ್ಟ. ಯಾರಿಗೆ ? ಆ ಗೌಡತಾತಂಗೆ. ಆ ಗೌಡತಾತ ಸತ್ತೋಗ್ಬಿಟ್ಟ. ಸತ್ತೋಗುವೊತ್ಗೆ ಏನ್ ಮಾಡಿದ್ನು? ಒಳಗೆ ಅಳ್ತಾ ಇದ್ನು.

ಗಂಡ ಮನೆಗೆ ಬಂದ. ಅವನು ಇವನ್ನ ಎಬ್ಬಿಸಿ ಕುಂಡ್ರಿಸ್ಬಿಟ್ಟು ಆ ಕೈಗೊಂದು, ಈ ಕೈಗೊಂದು ವಡೆ ಕೊಟ್ಬಿಟ್ಟ, ಒಂದು ಒಬ್ಬಟ್ಟು ಬಾಯ್ಗೆ ಇಟ್ಬಿಟ್ಟ. ಯಾರ್ಗೆ ? ಆ ಗೌಡತಾತಂಗೆ. ಎಣ್ಣೆ ಬಿಟ್ಟಿದ್ನಲ್ಲ ಅವಯ್ಯಂಗೆ. ಎಣ್ಣೆ ಬಿಡೂತ್ಲೂವೇ ಇವ್ನು ಏನ್ ಮಾಡಿದ್ಲು? ಬಂದವ್ಳೇ ಅಯ್ಯೊಯ್ಯೊ ನಿನಗಾಗೇ ಮಾಡಿದ್ದೆ ಆಗ್ಲೆ ತಿಂತಾ ಕುಂತಿದ್ದೀಯಲ್ಲಾಪ್ಪ ಅಂತ. ಅವ್ನು ಜೀವದಾಗಿದ್ರೆ ಅಲ್ವ ಮಾತಾಡೋದು ? ಕಾದ ಎಣ್ಣೆ ಬಿಡಿಸ್ಕೊಂಡಿದ್ದೋನು ಅಂಗೇಯಾ ತಿಂಡಿ ತಿನ್ತಿದ್ದಾ. ಬಂದ್ ಇಂಗ್ ಮುಟ್ಟಿದ್ಲು. ತಟಕ್ಕನೆ ಉಂಡ್ಯೋಬಿಟ್ಟ. ಉಂಡ್ಕೋತ್ಲೂವೆ ಒಲೆ ಮುಂದ್ಕೋಗಿ ಅಳ್ತಿದ್ಲು.

ಅಳ್ತಿರ್ಲೂವೇ ಇವ್ನು ಕಟ್ಟಿಗೆಗೆ ಹೋಗಿದ್ನಲ್ಲ ? ಗಂಡ ಬಂದು ಲೇ ನೀರು ಕೊಡೆ ಅಂತ ಕೇಳ್ದಾ. ಕೇಳೊವೊತ್ಗೆ ಇವಳು ಏನಂದ್ಲೂ ಕೊಡ್ತೀನಿ ಅಂತ ನೀರು ತಕ್ಕೊಂಬಂದ್ಲು. ಕೊಟ್ಲು. ಇದ್ಯಾಕೇ ಸೊರಕ ಪೊರಕ ಅಂತಿಯಾ, ಅಂತ ಹೆಂಡ್ತೀನ ಕೇಳ್ದಾ. ಹೆಂಡ್ತಿ ಏನಂದ್ಲು. ಅಯ್ಯೋ ಯಾರೋ ಗೌಡತಾತ ನಮ್ಮನೆಗೆ ಬಂದಿದ್ದ. ಸತ್ತೋಗ್ಬಿಟ್ಟವನೆ ಕಣ್ರೆ ಅಂತ ಗಂಡಂಗೆ ಹೇಳಿದ್ಲು. ಅದಕ್ಕೆ ಅವ್ನೇನ್ ಅಂದ, ಸತ್ತೋದ್ರೆ ಪೋಯ್ತಾನೆ ಬಾರೆ ಅದಕ್ಕಾಗಿ ಅಳ್ತೀಯಾ. ಅಂತನೇ ಒಳಗೆ ಬಂದು ನಿಮ್ಮ ಅತ್ತೆ ನಿಮ್ಮ ಮಾವನ ಕಾಲದ ಪೆಟ್ಟಿಗೆ ಇಲ್ವೇನೆ ತಕ್ಕೊಂಬಾ ಅಂದ. ಪೆಟ್ಟಿಗೆ ತಕ್ಕೊಂಬಂದ್ಲು. ತಗೊಂಬರ್ತೂಲೂವೆ ಇವ್ರು ಏನ್ ಮಾಡಿದ್ರು? ಒಂದು ಪೆಟ್ಟಿಗೆಗೆಲ್ಲ ಅವನ್ನ ತುಂಬ್ಸಿಬಿಟ್ರು. ಅವ್ನು ಸತ್ತೋಗಿರ್ತನಲ್ಲ. ಅವನ್ನ ತುಂಬ್ಬಿಟ್ರು. ತುಂಬ್ಬಿಟ್ಟು ದಾರ ಕಟ್ಟಿಬಿಟ್ರು. ತಗೊಂಡೋಗಿ ದೇವ್ರು ರೂಮ್‌ನಲ್ಲಿ ಮಡ್ಗಿಬಿಟ್ರು.

ಅವತ್ತು ಏನಪ್ಪ ಅಂದ್ರೆ, ಕಳ್ರುಗಳು ಇವ್ರು ಮನೇಗ್ ನುಗ್ಗೋ ಪ್ರಯತ್ನ ಪಟ್ಟಿದ್ರು. ಇವ್ನೇನು ಮಾಡ್ದ? ಕಳ್ರು ಇದ್ದಿದ್ದು ನೋಡಿದ್ನಲ್ಲ? ಇವ್ನು "ಏಯ್ ದೇವ್ರು ಒಡವೆ ಇದೇ, ಜೋಪಾನವಾಗಿ ಮಲ್ಕೊಳಿ" ಅಂತ ಹೇಳಿದ. ಗಂಡ ಒಂದು ಮಂಚದ ಮ್ಯಾಲೆ, ಹೆಂಡ್ತಿ

ಒಂದ್ ಮಂಚದ ಮಾಲೆ ಮಲಿಕ್ಕೊಂಡ್ರು. ಮಲಿಕೋತ್ಲೂವೇ ಇವ್ರು ಏನ್ ಮಾಡಿದ್ರು? ಒಷ್ಟೊತ್ತು ಇದ್ದವರು ಬಂದಿದ್ದು. ಪೆಟ್ಗೆ ಹೊತ್ಕಂಡು ಹೋಗ್ಬಿಟ್ರು ಕಳ್ರು. ಐದು ಜನ ಜೊತೆಯಾಗಿ ಬಂದಿದ್ರು. ಅವ್ರು ಐದು ಜನಾನೂ ಹೊತ್ಕೊಂಡು ಹೋಗ್ಬಿಟ್ರು. ಹೊತ್ಕೊಂಡು ವೊಗೊಂಡು ವೊಗೊಂಡು ವೋಗಿ ಒಂದು ಬಾವಿಗೋದ್ರು. ಅವ್ರಲ್ಲಿ ಒಬ್ಬ ಯಜಮಾನ ಇದ್ದ. ಅದರೊಳಗೆ ಯಜಮಾನ ಏನಂದ ? ಮತ್ತೆ ಎಲ್ಲೂ ಇಳ್ಸಬೇಡ್ರಿ ಕಣ್ರಪ್ಪ. ದೇವ್ರ ಒಡವೆ ಐತಂತೆ. ವೋಗಿ ತುರುವಕೆರೆ ಸಂತೇಲಿ ಅಣ್ಣುಕಾಯಿ ತನ್ರಪ್ಪ ಅಂತ ಹೇಳಿದ್ರು. ಅಣ್ಣು ಕಾಯಿ ತನ್ರಪ್ಪಾ ಅಂತ್ಲೂವೇ ಇವ್ರು ಏನ್ ಮಾಡಿದ್ರು? ಅಣ್ಣುಕಾಯಿ ತರಾಕ್ ವೋಗ್ಬಿಟ್ರು. ಆಯಪ್ಪವರು ನಾಕು ಜನಾನೂವೆ.

ಈ ತಾತ ಇದ್ನಲ್ಲ ತಾತ ಇದನ್ನು ಪೆಟ್ಟಿಗೆ ತಗೊಂಬಿಡೋಣ ಅವ್ರು ಬರೋವೊತ್ಗೆ ಅಂತ ವೋದಾ ಅಲ್ಲಿಗೆ. ಅಲ್ಲಿಗೋಯ್ತುಲೂವೇ ಅಲ್ಲಿ ಸತ್ತ ಎಣ ಹಲ್ಲುಗಿರಕ್ಕೊಂಡಿತ್ತು. ಸತ್ ಎಣ ಅಲ್ಕಿರಿಕ್ಕೊಂಡಿದ್ರೆ ಇವ್ನು ಏನ್ಮಾಡ್ದ? ಅಂಗೇ ಕಟ್ಬಿಟ್ಟು ಬಂದ್ಬಿಟ್ಟ. ಒಂದಷ್ಟು ದೂರ ಕುಂತಿದ್ದ. ಇವ್ರು ಏನ್ಮಾಡಿದ್ರು? ಒಂದ್ ಐವತ್ತು ರೂಪಾಯಿ ಹಣ್ಣುಕಾಯಿ ತಗೊಂಬಂದ್ರು. ಹಣ್ಣುಕಾಯಿ ತಗೊಂಬರೋವತ್ಗೆ ಆಮೇಲೆ ಪೂಜೆ ಮಾಡಿದ್ರು, ಗಂಧದಕಡ್ಡಿ ಬೆಳಗ್‌ಬಿಟ್ರು. ಬೆಳಗ್ದವ್ರೇ ವೋಗಿ ಕುಂತ್ಕೊಂಡು ಮತ್ತೆ ನಂಗೇನೂ ಬ್ಯಾಡಿ ಕಣ್ರಪ್ಪ. ನನಗೆ ಬರೀ ಹಣ್ಣು ಕಾಯಿ ಕೊಡ್ರಪ್ಪ. ನಮ್ಮಲ್ಲಿರೋದೆ ಸಾಕು ನಂಗೆ. ನೀವು ನಾಕ್‌ಜನಾನೇ ಹಂಚಿಕೊಳ್ಳ್ರಪ್ಪ. ನಿಮಗೆ ಕಳ್ಳತನ ಕಲ್ಸಾನಂತ ನಾನ್ ಬಂದಿದ್ದೆ; ಅಂತ ಹೇಳ್ದಾ. ಆಗಂತ ತಾತ ಹೇಳ್ತಾಲೇ ಇವ್ರು ಏನ್ಮಾಡಿದ್ರು? ಬಿಚ್ಚಿ ನೋಡ್ತಾರೆ, ಎಣ. ಲೇ ಲೇ ಲೇ ಇದೇನು ಹಿಂಗ್ ಆಗ್ಬಿಡ್ತಲ್ಲ. ಏನ್ಮಾಡೋಣ ನಾವು. ತಡೀ ಇವತ್ತು ಏನಾರ ಮಾಡಿ ಅವಳನ್ನೇ ವೊತ್ಕೊಂಡು ಬಂದ್ಬಿಡೋಣ ಅಂತ ಬಂದ್ರು.

ಬರ್ತಾಲೂವೆ ಮಂಚ ಮಂಚವೇ ಹೊತ್ಕೊಂಡ್ರು. ಮಂಚವೇ ಹೊತ್ಕೊಂಡ್ರು ವೊಗೊಂಡು ವೊಗೊಂಡು ಓಯ್ತಾ ಇದ್ರು. ವೋಯ್ತಾ ಇರ್ತಾಲೂವೆ ಒಂದು ಅಲದಮರ, ಒಂದು ಮಾವಿನಮರ, ಒಂದು ಹಿಪ್ಪೆಮರ. ಮೂರ್ಮರ ಇರ್ತಲೇಯಾ ಆ ಮರತಕ ವೋಯ್ತಾಲೂವೆ ಇವ್ಳೇನು ಮಾಡಿದ್ಲು, ಮಂಚದ ಮ್ಯಾಲೆ ಇದ್ದವ್ಳು, ಆಲದ ಮರದ ಬೇರು ಹಿಡ್ಕೊಂಡು ಮ್ಯಾಕ್ ನೆಗ್ಗೊಂಬಿಟ್ಲು. ತಾಂಡುಹೋದ್ರು. ಕೆಳಕಾಗಿದ್ರು. ಮಂಚದ ಮ್ಯಾಲೆ ಇಲ್ಲೆ ಇಲ್ಲ. ಅವ್ಳು ವೋಗ್ಬಿಟ್ಟವ್ಳೆ. ಆಮೇಲೆ ಏನ್ಮಾಡಿದ್ರು ? ಇನ್ನೊಂದ್ಸಲಿಗೆ ಬರ್ಲೀ ಏನಾರಮಾಡಿ ಈವತ್ತು ಏನಾರಾಗ್ಲಿ ಇನ್ನೂ ಅವ್ಳು ಮನೆಗೆ ನುಗ್ಬೇಕು ನಡ್ರಿ ಅಂತ ಬರ್ತಾ ಇದ್ರು. ಬರ್ತಾ ಇರ್ತಾಲೂವೆ ಇವ್ರೇನು ಅಂದ್ರು? ಮತ್ತೆ ''ಏನ್ಬೇಡ ನಡೀರಿ ಮಾವಿನ ಮರದಲ್ಲಿ ಅಣ್ಣುಪಣ್ಣು ಕಿತ್ಕೊಂಡು ಇವತ್ತು ಹೋಗೊಣ ಅಂತಾವ, ಮರಕ್ ಬರ್ತಾ ಇದ್ರು. ಇವ್ಳೇನ್ ಅಂದ್ಲು 'ಏಯ್ ಮತ್ತೇ ಅಂಗಲ್ಲ ನೀನು ನೋಡಿದ್ರೆ ಈ ಮರಕ್ಕೆ ಅತ್ತಿದ್ದೀಯಾ. ಈ ಮರದಾಗೇ ಅವರೊಟ್ಟಿಗೆ ಹೇಳಾಕಾಗ್ದೂ. ನೀನು ನೀನೊಬ್ಬನೆ ಬಾ ಈ ಮರಕ್ಕೆ ಅಂತ ಹೇಳಿದ್ಲು. ಮರಕ್ಕೆ ಹತ್ಕೊಂಡಿದ್ವಲ್ಲ ಅವ್ಳು. ಅದಕ್ಕೆ ಅವನೇನಂದ, ಮತ್ತೆ

ಇದರೊಳಗಡೆ ನೋಡು ಮೂಗ್‌ಚೌಡಿ ಅದೆ, ಒಬ್ರೂ ಈ ಮರಕ್ ಹತ್‌ಬೇಡಿ ಕಣ್ರಪ್ಪ ಅಂತ ಹೇಳ್ದಾ. ಆಮೇಲೆ ಅವಳೇನು ಮಾಡಿದ್ಲು? ಇವ್ರೆಲ್ಗೆ ಇಬ್ರೂ ಆ ಮರದಾಗಿದ್ರು, ಇವ್ರು ಆಳಗೊಂದೊಂದು ಮರಕ್ ಅತ್ಕೊಂಬಿಟ್ರು. ಅತ್ಕೊಂಡ್ ಏನಂದ್ರು 'ಅಲ್ಲಕಣಪ್ಪ ನೀನು ಇಂಗೇ ಇದ್ರೆ ಆಗ್ತದ. ನೀವು ಅಣ್ಣು ಕಿತ್ಕೊಂಡು ತಿನ್ನೀ ನಾನ್ ಮರ್ದ್ದಾಗ್ ಇದ್ದೀನಿ.

ನೀವು ಈ ಮರಕ್ಕೆ ಬರಬ್ಯಾಡ್ರಿ. ಈ ಮರದಾಗೆ ಚೌಡಿ ಅವ್ಳೆ ಅಂತ ಹೇಳಿದ್ನಲ್ಲ ? ಇವ್ನ ಬಂದ ಇಳ್ದ. ಆಮೇಲೆ ಇವ್ರು ಏನ್ಮಾಡ್ಬಿಟ್ರು? ಒಷ್ಟುದೂರ ಬಂದವ್ರೇ. ಮತ್ತೆ ನಾನೇ ಗಂಡ ನೀನೇ ಹೆಂಡ್ರಾಗೋಗು ಅಂತ ಹೇಳ್ದಾ. ಅವ್ನು ಅದಕ್ ಏನಂದ? ಇವ್ನು ನನ್ನ ನಾಲಿಗೆ ನಿನಗೆ ಕೊಡ್ತೀನಿ, ನಿನ್ನ ನಾಲಿಗೆ ನನ್ಗೆ ಕೊಡು ಅಂತ ಕೇಳ್ದಾ, ಇವ್ನು. ಯಾರನ್ನ ? ಅವಯ್ಯನ. ಮರಕ್ ಅತ್ತಿದ್ನಲ್ಲ ಅವ್ನ . ಅವ್ನ ಇವ್ನು ಕೇಳಿದ್ಲು. ಮರಕ್ಕೆ ಅತ್ಕೊಂಡಿದ್ನಲ್ಲ ಅವ್ನು. ಆಮೇಲೆ ಅವಾಗೇನಂದ. ಲೇ ಅಂಗಲ್ಲ ಗಂಡ ಹೆಂಡ್ರು ಆಗೋದು, ನಿನ್ನ ನಾಲ್ಗೆ ನನಗ್ ಕೊಡು ನಾನ್ ಚೀಪ್ತೀನಿ, ನನ್ನ ನಾಲ್ಗೆ ನೀನು ಚೀಪು. ಆವಾಗ್ಲೇ ನಾವು ಗಂಡ ಹೆಂಡ್ತಿ ಆಯ್ತೀವಿ, ಅಂತ ಹೇಳಿದ್ದು. ಅದಕ್ಕೆ ಇವ್ನು ಏನ್ಮಾಡಿದ ? ನಾಲಿಗೆ ಅವುಳಿಗೆ ಕೊಟ್ಟ. ಅವನು ಎಲ್ಲೋ ಒಂದ್ ಸ್ವಲ್ಪ ಚೀಪ್ಕೊಂಡ ಅವಳ್ ನಾಲ್ಗೇಯಾ. ಆಮೇಲೆ ಇವ್ನೇನ ಮಾಡ್ದ ನಾಲ್ಗೆನೆಲ್ಲ ಎಬ್ಬಿಕೊಟ್ಟ. ಕಟಕನೇ ಕತ್ತರಿಸ್ಕೊಂಬಟ್ಟುಳು. ಕಡ್ಕೊಂಬಿಟ್ಲು ನಾಲ್ಗೆಯಾ. ಕಡ್ಕೊಂಬಿಟ್ಲು ಏನಂದ್ಲು ಮೂಗ ಚೌಡಿ ಅದೇ ಅಂತ ಹೇಳಿದ್ನಲ್ಲ ಇವ್ನು ಅದಕ್ಕೆ. ಇವ್ರೇನು ಮಾಡಿದ್ರು? ಈ ಕಡೆ ಮರ್ದ್ದಾಗಿದ್ದವ್ರು, ಇವ್ನ ಯಾವಾಗ ನಾಲ್ಗೆ ಕತ್ತರಿಸಿಕೊಂಡು ಕೆಳ್ಗೆ ಬಿದ್ದೋದ್ನಲ್ಲ, ಬಿದ್ದೊತ್ಲೆಯಾ ನಾಲಗೆ ಇಲ್ವಲ್ಲ ವ್ಯಾಯಾಯಾ ಅಂತಿದ್ನಲ್ಲ, ಕೆಳಕ್ ಬಿದ್ದೊದ್ನಲ್ಲ, ಮೂಗ ಚೌಡಿ ಹಿಡ್ಕೊಂಡ್‌ಬಿಡ್ತು ಅಂತ ಓಟ ಕಿತ್ಬಿಟ್ರು.

ಮೂಗ್‌ಚೌಡಿ ಅದೇ ಅಂತ ಹೇಳಿದ್ನಲ್ಲ ಇವ್ನು? ಅದಕ್ ಇವ್ರು ಓಟ ಓಡ್ಬಿಟ್ರು. ಆ ಮರದ ತಾವಿಂದ ಅಮ್ಯಾಕ್ಕೆ ವೊಗೊಂದ್ ವೊಗೊಂದ್ ವೋಗ್ಬಿಟ್ರು. ಅಮ್ಯಾಕೆ ಇವನ ನಾಲ್ಗೆ ಕತ್ತರಿಸ್ಕೊಂಡಿದ್ದಳಲ್ಲ? ಇವ್ನು ವೋಗಿ ಗಂಡನತಾವ ಬಾಳ್ಕೊಂಡ್ಲು.

ಹೇಳಿದವರು : **ಅಕ್ಕಯ್ಯಮ್ಮ**

## ೩೭. ಚಾಲೋಕು ಹುಡುಗಿ

ಒಂದು ಹುಡ್ಗಿ ಜೋಳದ ಹೊಲ ಕಾಯ್ಲಿಕ್ಕೆ ಹೋಗಿದ್ದು ಮನೆಗೆ ಬತ್ತಿದ್ಲು. ಒಂದು ಹುಡ್ಗ ಹಾದೀಲಿ ಬತ್ತಿದ್ದ. ಅವ್ಳನ್ನು ನೋಡಿ ಹುಡ್ಗ 'ಏಳ್ಳು ಎಲೆ ಆಗ್ವಾಗ ನೀನೆಲ್ಲಿ ಹೋಗಿದ್ದಮ್ಮಿ'' ಅಂದ. ಅದಕ್ಕೆ ಹುಡ್ಗಿ 'ಸುತ್ತು ಕಡ್ಡಿ ತುಂಬೋರ ತಬ್ಬುತ್ತಿದ್ದೆ. ನೀನೆಲ್ಲಿ ಹೋಗಿದ್ದೆ, ಅಂದ್ಲು. ಇವರ್ಮನೆ ಹೆಣ್ಣ ತಂದೆತರ್ಬೇಕು ಅದ್ಕೊಂಡು ಸಾಯಂಕಾಲ ಅವರ್ಮನೆ ಹೆಣ್ಣಿಗೆ ಹೋದ್ರು.. ಅವರಪ್ಪ, ಅವರವ್ವ, ಅವನು, ಮೂರು ಜನವೆ.

ಹುಡ್ಗಿಯರವ್ವ ಸಂತೆಗೋಗಿದ್ಲು. ಅವರಪ್ಪ ಸೋಗೆ ಕಡ್ಕೊಂಡು ಬರಲು ಹೋಗಿದ್ದ. ಇವ್ರು ಹೋಗಿ ನಿಮ್ಮಪ್ಪ ಎಲ್ಹೋದ ಅಂದ್ರು. ಅದ್ಕೆ ಆ ಹುಡ್ಗಿ 'ನಮ್ಮಪ್ಪ ಭೂಮಿ ತುಂಡ್ಗೆ ಚಾಪೆ ಹಾಕೋಕೋಗವ್ನೆ' ಅಂದ್ಲು. ನಿಮ್ಮವ್ವ ಎಲ್ಹೋದ್ಲು ಅಂತ ಕೇಳ್ದಾಗ, ನಮ್ಮವ್ವ ತಲೆ ಕೆಚ್ಚಿ ಒಲೆಮ್ಯಾಲಾಕಿ ಸಂತೆಗೆ ಹೋಗವ್ಳೆ. ಹೊತ್ತಿದ್ರೆ ಬತ್ತಾಳೆ. ಸಾಯಂಕಾಲ ಆದ್ರೆ ಬರಲ್ಲ ಅಂದ್ಲು.

ಎಷ್ಟೊಂದು ಉತ್ರ ಹೇಳ್ತಾವ್ಳೆ. ಈ ಹೆಣ್ಣನ್ನೆ ತರಬೇಕು ಅಂದ್ಕೊಂಡು ಅವರಪ್ಪ ಅವರವ್ವ ಇಲ್ಲದಕ್ಕೆ ನಾಳೆ ಬರ್ತೀವಿ ಅಂದುಕೊಂಡು ಬತ್ತಾ ಇದ್ರು. ಅವರು ಬರ್‍ವಾಗ ಆ ಹುಡ್ಗಿ ಆ ಹುಡುಗನ್ಗೆ ಅಂದ್ಲು. 'ಲೇ ನಿನ್ಗೆ ಹುಟ್ಟಿದೋನ ಕೈಯಲ್ಲಿ ನಿನ್ಗೆರಡು ಕಟ್ಟುಹಾಕಿಸ್ತೀನಿ, ಅಂದ್ಲು.

ನಾನು ಅವಳ ಸಂಗಮ್ಮಾಡಿದ್ರೆ ತಾನೆ ಅವ್ಳು ನನ್ಗೆ ಕಟ್ಟಾಕ್ಸೋದು ? ಅವಳ ಸಂಗ ಮಾಡೋದು ಬ್ಯಾಡ. ಮದ್ವೆ ಆಗೋದು ಬ್ಯಾಡಾ ಅಂತ ಸುಮ್ನೆ ಮನೇಲಿ ಇದ್ದುಬಿಟ್ಟ.

ಇವ್ಳೇನು ಮಾಡಿದ್ಲು ? ಮರಾಠಿಗರ ಹೆಂಗಸರ ವೇಷಹಾಕ್ಕೊಂಡು ಹೋಗಿ, ಅವರ ಮನೆ ಮುಂದೆ ಗುಡಿಸಲು ಹಾಕ್ಕೊಂಡು ನಾಟ್ಕ ಆಡ್ತಿದ್ಲು. ಈ ಹುಡುನ್ಗೆ ಅವಳ ಮ್ಯಾಲೆ ಪಿರೀತಿ ಬಿತ್ತು. ಆಮೇಲೆ ಅವಳು ಅವನ್ಗೆ ಗರ್ಭಿಣಿ ಆಗಿ ಏಳು ತಿಂಗಳಾದ ಮ್ಯಾಲೆ ಮನೆಗೆ ಬಂದ್ಲು.

ಮನೆಗೆ ಬಂದಾದ ಮೇಲೆ ಅವರಪ್ಪ ಅವರವ್ವ ಇಷ್ಟು ದಿನ ತನ್ಕ ಚಂದಾಗಿದ್ದೆ. ಈಗ ಹಿಂಗಾಗಿ ಬಂದಿದ್ದೀಯ. ಗಂಡ ಇಲ್ದೆ ಗರ್ಭಿಣಿ ಆಗಿದ್ದೀಯಲ್ಲ ಅಂದಿದ್ದಕ್ಕೆ "ನೀವೇನೂ ಹೆದರ್ಕ್ಕೋಬ್ಯಾಡಿ. ನಾನು ಗಂಡ ಇದ್ದೆ ಗರ್ಭಿಣಿ ಆಗಿರೋದು" ಅಂತ ಧೈರ್ಯ ಹೇಳಿದ್ಲು.

ಹಿಂಗೆ ಇರ್ಬೇಕಾದ್ರೆ ಅವಳ್ಗೆ ಒಂದು ಗಂಡು ಮಗ ಆಯ್ತು. ಅವನ್ನ ಸ್ಕೂಲಿಗೆ ಓದೋಕೆ ಸೇರಿಸಿದ್ರು. ಹನ್ನೆರ್ಡು ವರ್ಷದ ಮ್ಯಾಲೆ ಅವರಮ್ಮನ್ನ ನಮ್ಮ ತಂದೆ ಯಾರಮ್ಮ ಅಂತ ಕೇಳ್ದ. ಅದ್ಕೆ ಅವನ ತಾಯಿ ಹಿಂಗೆ ಹೇಳಿದ್ಲು.

ಮಗ ಆ ಹೊತ್ತು ರಾತ್ರಿ ಹೋದ. ತಂದೆ ಮಂಚದ ಮೇಲೆ ಮಲಗಿದ್ದ. ಹೋದೋನೆ ತಂದೆಗೆ ಎರಡು ಕಟ್ಟಾಕ್ಬುಟ್ಟು, ಮಂಚದಕಾಲು ಕಿತ್ಕೊಂಡು ಓಡಿ ಬತ್ತಿದ್ದ. ಆಗ ಕಳ್ಳ ಅಂತ ಊರೋರೆಲ್ಲ ಅವ್ನ ಹಿಡ್ಕೊಂಡ್ರು; ಆಗ ಅವನು ಕೆಂಗಣ್ಣನ ಮಗ, ಅಂತ ಗೊತ್ತಾಯ್ತು.

ಆಮೇಲೆ ಪಟ್ಣ ಕುಟ್ಟಿ , ಪಟ್ಣತಾರಿಸಿ, ಅವರಿಬ್ಬರನ್ನು ಕರೆಸಿ, ಅವರ್ಗೆ ಮದ್ವೆ ಮಾಡಿದ್ರು.

ಹೇಳಿದವರು : **ಅಕ್ಕಯ್ಯಮ್ಮ.**

# ೩೮. ಆಮೆ ಕೊಕ್ಕರೆ

ಒಂದು ಕೆರೆ ಒಳಗೆ ಒಂದು ಆಮೆ, ಎರಡು ಕೊಕ್ಕರೆ ಜೊತೆಯಾಗಿದ್ವು. ಆಮೇಲೆ ಜೊತೆಯಾಗಿರುತ್ಲೇಯಾ ಕೆರೆನೀರು ಒಣಗೋಗ್ತಾ ಬಂದ್ಬಿಡ್ತು. ಕೆರೆ ನೀರು ಒಣಗೋದಂಗೆ ಒಣಗ್ತಾ ಬಂತು. ಆಮೇಲೆ ಈ ಕೊಕ್ಕರೆ ಏನೋ ಹಾರಿ ಒಂಟೋಗಿಬಿಡ್ತವೆ, ಈವಾಗ ಮಲ್ಲಸಂದ್ರದ ಕೆರೆಗೋ ಎಲ್ಲಿಗೋ. ಇನ್ನು ಈ ಆಮೆನಾ ಕರ್ಕೊಂಡೋಗ್‌ಬಿಡ್ತಾರೆ. ಆಗಾಕಿಲ್ಲ. ಕೊಕ್ಕರೆ ಏನಂತ ಯೋಚನ್ನೆ ಮಾಡ್ದೋ, ಮಾತಾಡ್ಕೊಂಡೋ. ಲೇ ಯಣ್ಣ ಕೆರೆ ನೀರು ಹತ್ರ ಬಂದ್ಬಿಡ್ತು. ಪಾಪ ನಾವು ಮೂರು ಜನಾನೂ ಜೊತೆಲಿದ್ದೋ ಒಂದೇ ತವ. ಈವಾಗ ಕೆರೆನೀರು ಮುಗಿತಾ ಬಂದ್ಬಿಡ್ತಲ್ಲ. ನಾವೇನೋ ಹೋಗ್‌ಬಿಡ್ತೀವಿ ಹಾರಿ. ಆಮೆ ಅಣ್ಣನ್ನ ಎಂಗ್ ಕರ್ಕೊಂಡೋಗಿ ಬಿಡಾಣ ಅಂತ ಯೋಚ್ನೆಮಾಡ್ದೋ. ಲೇ ಮತ್ತೆ ಯಣ್ಣ ಈಗ ಅವನನ್ನು ಬಿಟ್ಟೋಗಾಕಾಗಕ್ಕಿಲ್ಲ. ಇಷ್ಟದಿನ ಜೊತಿಲಿದ್ದೋ. ನಾವು ಈಗ ಓಗಿದ್ದತಕ್ಕೆ ಅವನ್ನ ಜೋತಿಲೀ ಕರ್ಕೊಂಡೋಗೋಣ ಬಿಡೋ ಅಂತ ಏನ್ಮಾಡ್ಬಿಟ್ಟೋ ಈ ಕೊಕ್ಕರೆಗಳು ಆಮೆಣ್ಣ ಮತ್ತೇ ಈಗ ನಾವಿಬ್ರೂ ಇಂಗೆ ರೆಕ್ಕ ಕೊಟ್ಕೊಂಬಿಡ್ತೀವಿ. ಈ ಎರಡು ರೆಕ್ಕೆನೂ ಇಬ್ರಾಳೂನೇ. ನೀನು ರೆಕ್ಕೆ ಮೇಲೆ ನಡಕ್‌ದಾಗೆ ಸೇರ್ಕೊಂಬಿಟ್ಟು, ಇಂಗೇ ತಬ್ಕೋಂಡು, ನಮ್ಮನ್ನ ಹಿಡ್ಕೊಂಬಿಡೋ. ಮಲ್ಲಸಂದ್ರದ ಕೆರೆಗೆ ಕರಕಂಡು ಹೋಯ್ತೀವಿ ಅಂತ ಹೇಳ್ಬಿಟ್ಟೋ. ಆಮೇಲೆ ಹೇಳ್ತಾಲೂವೇ ಆಯ್ತು ಕಣಕ್ಕ ಅಂತು. ಅವಾಗ ಎರಡೂ ರೆಕ್ಕೆ ಕೊಟ್ಕೊಂಬಿಟ್ಟೋ. ಅದನ್ನ ನಡುಕದಾಗೇ ಕುಂಡ್ರಿಸಿಕೊಂಡು ಹೊತ್ಕೊಂಡು ಒಯ್ತಿದ್ದೋ.

ಆಮೆಯಾ ಇವೆರಡು ಕುಂಡ್ರಿಸ್ಕಂಡು ಹೋಯ್ತಿರುವಾಗ, ಈ ನರಿ 'ಆ' ಅಂತ ಆಕಳಿಸ್ತು, ಮ್ಯಾಕ್ ನೋಡ್ಕೊಂಡು. 'ಆ' ಅಂತ ಆಕಳಿಸ್ತಲೇಯಾ ಇದೇನಂತು, ನರಿ ಅಕ್ಕಳಿಸ್ಕಂಡು ಮ್ಯಾಕ್ ನೋಡ್ಬಿಡ್ತಲ್ಲ ? ಆಮೆಯೂ ಆಚೆ ಕಡೆ ನೋಡ್ತು. ಓಗೋದೇನೋ ಸರಿ ಕೊಕ್ಕರಮಾವದೀರು. ನಡುಕಲಲ್ಲಿ ನ್ಯಾತಡೋದು ಏನು ? ಅಂತ ಅಂತು. ಅದು ಈ ಕೊಕ್ರಿಗೆ ನಗುಬಂದ್ಬಿಡ್ತು. ನಕ್ಕಿಬಿಟ್ಟೋ ಇವು. ಬಿಟ್‌ಬಿಟ್ಟೋ. ಆಮೆ ಕೆಳಗೆ ಬಿದ್‌ಬಿಡ್ತು. ಆಮೇಲೆ ಇದೇನು ಮಾಡ್ತು? ನರಿ ಕೆಳಕ್ ಕುಂತಿತ್ತಲ್ಲ? ಪುಸಕ್ಕನೆ, ಕಸಕ್ಕನೆ, ಬಾಯ್ಲೀ ಹಾಕ್ಕೊಂಬಿಡ್ತು. ಕಚ್ಕೋಂಬಿಡ್ತು ಆಮೇನಾ. ಕಚ್ಚೋಂಬಿಟ್ಟು, ಅಂಗು ಕಡೀತದೇ ಇಂಗೂ ಕಡಿತದೆ. ಇವಕ್ಕೆ ಹಿಡ್ಕೋಳ್ಳಕ್ಕೆ ಆಗ್ಲಿಲ್ಲ. ಹೋಗ್ಬಿಟ್ಟೊ ಕೆರೆಗೆ.

ಈ ನರಿ ಏನ್ ಮಾಡ್ಬಿಡ್ತು ? ಅತ್ಲಾಗೂ ಕಡಿತದೇ ಇತ್ಲಾಗೂ ಕಡಿತದೆ. ಆಮೆ ನಾಟೆ ಗಟ್ಟಿ ಅಲ್ವ ? ಇದಕ್ಕೆ ಹಲ್ಲು ಹಲ್ಗಿಗೆ ಅರೀಲಿಲ್ಲ. ಆಮೇಲೆ ಆಮೆ ಏನು ಪ್ಲಾನ್ ಹುಡಿಕ್‌ಬಿಡ್ತು ? ಮತ್ತೆ ನರಿಮಾವ ನಾನು ನಿನ್ನ ಹಲ್ಲುಗೇ ಅರಿತಿಲ್ಲ. ನಾನು ಸಣ್ಣಗ್ ಕಡಿದ್ರೇ ತಾನೇ ನಿನ್ನ ಹಲ್ಲಿಗೇ ಸಿಕ್ಕಾನ ? ಅರಿದಾನ ? ಮತ್ತೇ ಈಗ ಕೆರೆತಕ್ಕೆ ತಗೊಂಡು ನಡೀ. ಆ ಕೆರೆತಕ್ಕ ತೊಗೊಂಡೋಗ್ಬಿಟ್ಟು ನೀರಿನೊಳಕ್ಕೆ ಮಡಿಕ್ಕಂಡು ನನ್ನ ನೆನೆಸ್ಕೊಂಬಿಡು. ಅವಾಗ ಚೆನ್ನಾಗಿ ನೆಂದು ಬೀಡ್ತೀನೀ. ಅವಾಗ ನೀನು ತಿಂದು ಬಿಡೀವಂತ ಅಂತ ಹೇಳಿತು, ಈ

ಆಮೆ ನರಿಗೆ. ಹೂಂ. ಆಯ್ತು ಕಣೋ ಅಂತ್ಲಾವ, ಕಚ್ಕೊಂಬಿಟ್ಟದೆಯಾ ತಗೊಂಡೋಗಿ ಕೆರೆತಕ್ಕೆ, ಆ ಮಲ್ಲಸಂದ್ರದ ಕೆರೆತಕ್ಕೆ, ಈ ಕೊಕ್ರೆಗಳಿತ್ತಲ್ಲ ಆ ಕೆರೆಗೆ, ಹೋಯ್ತು. ಹೋಯ್ತಲೆಯಾ ನೀರೊಳಕ್ಕೆ ಮಡಿಕ್ಕೊಂಬಿಟ್ಟದ್ದೆ ನಿಂತ್ಕೊಂಬಿಡ್ತು ನರಿ. ಆಮೆ ಏನು ಪ್ಲಾನ್ ಹುಡಿಕ್ಬಿಡ್ತು ? ಮತ್ತೇ ನರೀ ಮಾವ ನಾನು ಸುತ್ಲು ನೆಂದುಬಿಟ್ಟಿದ್ದೀನಿ ಕಣೋ. ನಿನ ಪಾದಾದಡಿ ಒಂದುಚೂರು ನಾನು ನೆಂದಿಲ್ಲ. ಒಂದು ದಪ ನೆಂದ್ಬಿಡ್ತೀನಿ, ತಿಂದು ಬಿಡಿವಂತೆ. ಆಗ್ಲೀ ಅಂತ ನರಿ ಆಮೇನ ಬಿಟ್ಟುಬಿಡ್ತು.

ಇದು ಒಳಗೆ ನುಸುಳ್ಕೊಂಬಿಡ್ತು. ನೆಲದಲ್ಲಿ ಅಮ್ಮಿಕೊಂಡಿತ್ತು ಇದು. ಅಮ್ಮಿಕ್ಕೊಂಡು ನೀರಿನೊಳಕ್ಕೆ ಮಡಿಕ್ಕೆಂಡು, ಇದರ ಪಾದದಡಿ ನೆಂದಿಲ್ಲ ಅಂತ ಹೇಳ್ಲತಲ್ಲ ಇದು ? ಬಿಡ್ತಲ್ಲ? ನೆಂದುಬಿಡ್ತದೇ, ತಿಂದುಬಿಡೋಣ ಅಂತಾವ, ಇದು ಬಿಟ್ಟುಬಿಡ್ತಲ್ಲ? ವೋಗಿಬಿಡ್ತು. ನೀರಿನೊಳಕ್ಕೆ ಅಲ್ಲಿ ನೀರೊಳಗೆ, ಅದು ಸೇರ್ಕೊತಾ ನೀರೆಲ್ಲ ಗದರಾಯ್ತು. ಒಂಪ್ತು ಆಗ ಕೊಕ್ಕರಿಗಳಿತ್ತಲ್ಲ ? ಆಗ ಈ ಕೊಕ್ಕರೆಗಳ ತಕ್ ಹೋಯ್ತು. ಅಲ್ಲ ಎಂಗ ಮಾಡ್ಕೋ ಬಂಧ್ಬಿಟ್ಟಲ್ಲೋ ಅಂದೋ. ಇಂಗೆ ನಾನು ಇಂಗೆಂಗೆ ಪ್ಲಾನ್‌ಮಾಡ್ದೆ. ಆ ಕೆರೆತಕ್ಕ ತಗೊಂಡು ನಡಿ, ಚೆನ್ನಾಗಿ ನೆಂದುಬಿಡ್ತೀನಿ ತಿಂದ್ಬಿಡಿವಂತೆ ಅಂತ ಎಳ್ದೆ. ಅವಾಗ ಅದು ತಗೊಂಬಂದು ಬಿಡ್ತು ನರಿಮಾವ. ಅವಾಗ ನಾನು ಇಂಗೆ ಪ್ಲಾನ್ ಹೇಳ್ಬಿಟ್ಟೆ. ನಿನ್ನ ಪಾದದಡಿ ನೆಂದಿಲ್ಲ ಅಂತ ಹೇಳ್ದಿ. ಬಿಡ್ತು. ಇತ್ತಾಕಡೇ ಬಂದ್ಬಿಟ್ಟೆ ಅಂತ ಹೇಳ್ತು. ಅವಾಗ ಕೊಕ್ಕರೇನೂ ಆಮೆನೂವೇ ಕೆರೆ ಒಳಗೆ ಉಳಿಕ್ಕೆಂಡುವು.

## ೩೯. ಪೂಜಾರಿ ಪುಟ್ಟಕ್ಕ

ಒಂದಾನೊಂದು ಗ್ರಾಮದಲ್ಲಿ ಪೂಜಾರಿ ಪುಟ್ಟಣ್ಣ ಪುಟ್ಟಕ್ಕ ಅಂತ ಗಂಡಹೆಂಡತೀರಿದ್ರು. ಪುಟ್ಟಕ್ಕ ಒಂದಿಷ್ಟು ಹುಳ್ಳಗ ಬೆಳ್ಳಗ ರೂಪುರೇಖೆ ಆಗಿದ್ಲು. ಅವಳ ರೂಪುರೇಖೆ ನೋಡುಬುಟ್ಟೊ ಆ ಊರ ಗೌಡ್ರು ಪುಟ್ಟಕ್ಕನ ಮನೆಗೆ ಪಾಟಾಗಿದ್ರು. ಹಿಂಗಿರುವಾಗ ಗೌಡಮಾವಾರ ಮ್ಯಾಲೆ ಪುಟ್ಟಣ್ಣ ಏನೂ ಮಾತಾಡುವಂಗಿರಲಿಲ್ಲ. ಬಂದರ ಬತ್ತಾರೆ ಮಾತಾಡಕೊಂಡೋಯ್ತಾರೆ ಅಂತಿದ್ದ. ಆದ್ರು ಮನಸ್ನಾಗೆ ತುಂಬ ಆಕ್ರೋಶಿತ್ತು. ಹಿಂಗೊಂದ ದಿನ ಪುಟ್ಟಣ್ಣ ಉಪ್ಪು ಮೆಣಸನಕಾಯ್ಗೆ ಅಂತ ತುಂಕೂರು ಸಂತೆಗೊರಟ. ಹೆಣ್ಮಕ್ಕಳ ಮನ್ಸು ಬಾಳ ಸೂಕ್ಷ್ಮ. ಗೌಡ ಮಾವವ್ರು ಇಷ್ಟ ದಿನ ಮನೆಗೆ ಬಂದವರಲ್ಲ. ಒಂದಿನವೂ ಅಪರೂಪದ ಅಡಗೆ ಮಾಡಕಾಗಲಿಲ್ಲವಲ್ಲ ಅಂತೇಳಿ ಪುಟ್ಟಕ್ಕ ಅಂದಾಜ ಮಾಡಿ ಸಂತಿಗ್ಹೋಯ್ತೀರಲ್ಲ ಸಾಮಾನು ತಕ್ಕಂಡು, ಅದರ ಜತೇಲಿ ಒಂದು ಸೇರ ಗೋಧಿ ತಕ್ಕಂಬನ್ನಿ ಅಂದ್ಲು. ಇದ್ಯಾಕೊ ಅಪರೂಪಕ್ಕೆ ಗೋಧಿ ತರೇಳತಾಳೆ ಅಂತೇಳಿ ಸಂತುಗ ಹೋದ. ಸಾಮಾನೆಲ್ಲ ತಕ್ಕಂಡ. ಒಂದು ಸೇರು ಗೋಧೀನು ತಕ್ಕಂಡ. ಬಂದು ಪುಟ್ಟಕ್ಕನ ಮುಂದಕೆ ಕೊಟ್ಟ. ಪುಟ್ಟಕ್ಕ ಗೋಧಿ ಜ್ವಾಪಾನ ಮಾಡಿಟ್ಲು. ಒಂದು ವಾರ ನೋಡಿದ. ಎರಡವಾರ ನೋಡಿದ. ಗೋಧೀಲೇನು ಅಡಗೂಟ ಮಾಡಲೇ ಇಲ್ಲ. ಯಾಕ ಮಾಡಲಿಲ್ಲ

ಅಂದ್ರೆ ಪುಟ್ಟಣ್ಣ ಮನೆಬುಟ್ಟು ಹೋದಮ್ಯಾಲೆ ಗೌಡ ಮಾವಾರಿಗೆ ಕರಿಗಡಬು ಮಾಡಿ ತುಂಬಾನ ಅಂತ ಗೋಧಿ ಈಚುಗ ತಗೀಲೆ ಇಲ್ಲ. ಈ ಗೋಧಿ ಬಂಡವಾಳ ಏನೂಂತ ಗೊತ್ತಾಗಲಿಲ್ಲವಲ್ಲ, ನಾನು ಮನೆ ಬುಟ್ಟೋದರೆ ಗೊತ್ತಾದದೇನೊ, ನೋಡುವ ಅಂದಬುಟ್ಟು ಪುಟ್ಟಣ್ಣ ಹೆಡತಿಗೆ ಲೇ ಅಂದ. ಸುಬ್ರಮಣ್ಯದಲ್ಲಿ ಕ್ವಾಣನ ಯಾಪಾರ ಚೆನ್ನಾಗಿ ನಡೀತಾದೆ. ನಾನು ಕ್ವಾಣನ ಯಾಪಾರಕೊಯ್ತೀನಿ. ರೊಟ್ಟಿ ಬುತ್ತಿ ಮಾಡಕೊಡು ಅಂದ. ಸದ್ಯ ಇವ್ನು ಮನೆ ಬುಟ್ಟೋದರೆ ಸಾಕು ಅಂತಿದ್ದ ಪುಟ್ಟಕ್ಕ ಆಗಲೇ ರೊಟ್ ಬುತ್ತಿ ಮಾಡಿ ಗಂಟು ಕಟ್ಟಿಕೊಟ್‌ಬುಟ್ಲು. ರೊಟ್‌ಬುತ್ತಿ ಹೆಗುಲಗ್ಹಾಕೊಂಡು ಹೆಂಡತೀಗೆ ಬುದ್ಧಿ ಹೇಳುತಾವ್ನೆ ಲೇ, ಸುಬ್ರಮಣ್ಯಕ್ಹೋದರ ಬರೋದು ಒಂದು ತಿಂಗಳು, ಎರಡ ತಿಂಗಳು, ಮೂರು ತಿಂಗಳಾಗಬೊದು. ಮನೇ ಕಡೆ ಜ್ವಾಪಾನ ಕಣೆ ಅಂದ. ಬುಡ್‌ಬುಡ್ರಿ, ನಾನು ಹೆದ್ರಗಿದ್ರಾಕಿಲ್ಲ.

ಪುಟ್ಟಣ್ಣ ಊರಾಡ ಹೋಗಿ ಬಳಸಕೊಂಡ್ ಬಂದು, ಮನೆ ಹಿಂದೆ ಒಂದು ದೊಡ್ಡ ಬೇವುನ ಮರವಿತ್ತು. ಅದ ಹತ್ತಿ ಕೂತಕೊಂಡ. ಪುಟ್ಟಣ್ಣ ಮನೆಬುಟ್ಟು ಹೋದೇಟಿಗೆ ಪುಟ್ಟಕ್ಕ ಗೋಧಿ ತಗದು ಕಲ್ಲಮಣ್ಣ ಏಂಗಡಿಸಿ ಸಣ್ಣಗೆ ಹಿಟ್ಟ ಮಾಡಿ ತೊಗರಿ ಬ್ಯಾಳೆಗೆ ಬೆಲ್ಲ ಹಾಕಿ ಬೇಯ್ಸಬುಟ್ಟು ಚೆನ್ನಾಗಿ ತಿರಿವಾಕಿ, ದೊಡ್ಡದೊಂದು ಎಣ್ಣೆ ಬಾಂಡಲಿ ಒಲೆಮ್ಯಾಲಿಟ್ಟು, ಒಂದೆರಡ ಧಡಿಯ ಎಣ್ಣೆ ಹೂದು ಪುಟ್ಟಕ್ಕ ಕರಿಗಡಬು ಬೇಯಿಸತಾ ಕುಂತವಳೆ. ಪುಟ್ಟಣ್ಣ ಬೇವುನ ಮರದಮ್ಯಾಲೆ ಕುಂತಕೊಂಡು ಎಣ್ಣೆ ಕಂಟನೆಲ್ಲ ಕುಡೀತಾ ಅವ್ನೆ.

ಗೌಡಮಾವ ಬಂದು ಕ್ವಾಣೆ ಬಾಗುಲಗ ಬಗ್ಗಿ ನೋಡದ. ಪುಟ್ಟಕ್ಕ ಕರಗಡಬ ಬೇಯಸತ ಕುಂತಿದ್ಲು. ಎಲಲೆ ಈಗ ಮಾತಾಡುಸಬುಟ್ರೆ ಕೆಲ್ಸ ಕೆಟ್ಟೋಗಬುಡತದೆ ಅಂತೇಳಿ ನಡಮನೆಗೆ ಬಂದು ಮಂಚದ ಮ್ಯಾಲ ಹಂಗೆ ಉಳ್ಳಕಂಡ. ಸೊಗಸಾದ ನಿದ್ದೆ ಬಂದಬುಡತು. ಪುಟ್ಟಕ್ಕ ಕರಗಡಬನೆಲ್ಲ ಬೇಸಬುಟ್ಟು ಈಚುಗ ಬಂದು ನೋಡುದ್ಲು. ಗೌಡಮಾವ ಮಂಚುದ ಮ್ಯಾಲ ಮನೀಕಂಡು ಗೊರ್ರಂತ ಗೊರಕೆ ಹೊಡಿತಾವ್ನೆ. ಪುಟ್ಟಕ್ಕ ಅರಿವಿರೂ ಹೆಂಗ್ಸು. ಈಗ ಮಾತಾಡುಸಬುಟ್ರೆ ನಿದ್ರೆ ಭಂಗವಾಗಬುಡತದೆ. ಇವರ್ಹಿಂಗೆ ಮನಗಿರಲಿ. ಒಂದ ತೂಕ ಸೀನೀರ ಹೊತ್ಕೊಂಡ ಬಂದಬುಡಾನ ಅಂತೇಳಿ ಅರಬಿ ಎತ್ಕೊಂಡು ಸೀನೀರ ಬಾವಿಗೆ ಹೊಂಟೋದ್ಲು.

ಬೇವುನ ಮರದ ಮ್ಯಾಲ ಕೂತಿದ್ದ ಪುಟ್ಟಣ್ಣ ಕ್ಯಳಾಕ ಇಳದ. ಮನಿ ಒಳಾಕ ಬಂದು ನೋಡತಾನೆ. ಗೌಡಮಾವ ಮೂಗ ಮ್ಯಾಕ ಮಾಡಕೊಂಡು ಗೊರ್ರಂತಾವ್ನೆ; ಒಳಾಕ ಹೋಗಿ ನೋಡಿದ. ಬಾಂಡಲಿ ತುಂಬ ಎಣ್ಣೆ ಮಳ್ಳತ್ತಿತ್ತು. ಮದಲೆ ತುಂಬಾ ಆಕ್ರೋಶಿತ್ತಲ್ಲ. ಅವ್ನ ಮನೇಲಿ ದೊಡ್ಡದೊಂದು ಕಬ್ಬಿಣದ ಚವಟಿತ್ತಂತೆ. ಆ ಚೌಟಲ್ಲಿ ಮಳ್ಳತಿದ್ದ ಎಣ್ಣೆ ತುಂಬಕೊಂಡ ಬಂದು ಮನಗಿದ್ದ ಗೌಡಮಾವ್ನ ಮೂಗುನ ಎರಡ ಚೊಳ್ಳೆಗು ಬುಟ್ಟ. ಬುಟ್ಟೇಟಗೇನೆ ಚರ್ರಂತ ಪಟಕ್ಕೆಂದು ಸಟಕ್ಕೆಂದು ಮೂಲಂಗಿ ಗೆಡ್ಡಾಗಿ ಹೋಗಬುಟ್ಟ. ಮಂಚದಿಂದ ಕ್ಯಳಾಕೆಳುದಬುಟ್ಟು ಬಾಯಿಗೆರಡ ಕರಗಡಬ ತುರುಕಿ ಎದುರು ಗ್ವಾಡಗೆ ಒರಗುಸಬುಟ್ಟು ಬೇವುನ ಮರ ಹತ್ತಿ ಕುಂತಕೊಂಡ.

ನೀರಗ್ಹೋಗಿದ್ದ ಪುಟ್ಟಕ್ಕ ಎರಡು ಕೊಡಾನು ಥಳ ಥಳ ಅಂತ ಬೆಳೀಕೊಂಡು ಬೆಡಗಿನಿಂದ ಬಂದ್ಲು. ಈ ಸರದಾರ ಎದುರು ಗ್ವಾಡೇಲಿ ಕುಂತಬುಟ್ಟವ್ನೆ. ಪುಟ್ಟಕ್ಕ ಕೊಡ ತಗಂಡು ಕ್ವಾಣೆಗೋಗಬೇಕಾದ್ರೆ ಏನ ಹೇಳತಾಳೆ? ಛೇ, ಛೇ, ಏನ ಗಂಡಸ್ರೋ ನಾನು ಬಂದು ಇಕ್ಕತಿರಲಿಲ್ವ? ಅಷ್ಟೊತ್ಗೆ ಅವಸರವಾಗಿ ತುರೀಕೊಂತ ಕುಂತಬುಟ್ರಲ್ಲ? ಅಂದಬುಟ್ಟು ಕ್ವಾಣೆಗ್ಹೋಗಿ ಕೊಡ ಮಡಗಬುಟ್ಟು ಈಚೆಗೆ ಬಂದು ಗೌಡಮಾವುನ್ನ ಮುಟ್ಟಿ ಹೀಗಂದ್ಲು. ಗೌಡಮಾವ ಕಮಾನ ಗಾಡಿಯಂಗೆ ಉಳ್‌ಕೊಂಡುಬುಟ್ಟ. ಪುಟ್ಟಕ್ಕ ನೋಡುದ್ಲು. ಅಯ್ಯೋ ಶಿವನೆ ಗೌಡಮಾವ ಹೋಗೇಬುಟ್ನಲ್ಲ ಅಂತೇಳಿ ಅಳೂಕ ಹತ್ತಕೊಂಡ್ಲು. ಬೇವುನ ಮರದ ಮ್ಯಾಲಿದ್ದ ಪುಟ್ಟಣ್ಣ ಇಳುದ. ಕೈಕಾಲುಗ ನೀರ ತಗಾಬಾರೆ ನಾನು ಸುಬ್ರಮಣ್ಯದಿಂದ ಬಂದೆ ಅಂದ. ಪುಟ್ಟಕ್ಕೇನಮಾಡತಾಳೆ? ಎಡಗೈಲಿ ಗೊಣ್ಣೇನು ಒರುಸಕೋಂತ ಬಲಗೈಲಿ ನೀರಕೊಟ್ಟುಳು. ಕೈಕಾಲ ಮೊಕ ತೊಳಕೊಂಡ ಬಂದ ಪುಟ್ಟಣ್ಣ ಗೌಡಮಾವನ ಕಡೆ ನೋಡ್ನೇ ಇಲ್ಲ. ವಾರೆಮುಖ ಹಾಕೊಂಡು ರೊಟ್ಟಿಬುತ್ತಿಕಟ್ಟುದ್ದ ಗಣೆಮ್ಯಾಲಾಕಿ, ನಿನ್ನ ಮಾತ ಕೇಳಬೇಕಾಗಿತ್ತು ಕಣೆ. ಸುಬ್ರಮಣ್ಯ ಅನ್ನೋದು ಭಾಳ ದೂರ. ನಡೆದು ನಡೆದು ಕಾಲೆಲ್ಲ ಒಡದ್ಹೋಗಬುಡತು ಕಣೆ ಅಂತೇಳಿ ಈ ಕಡೆ ತಿರಿಕೊಂಡ, ಗೌಡಮಾವ ಹುಂಡಕೊಂಡಿರೋದ ನೋಡ್‌ಬುಟ್ಟ. ಇದೇನೆ ಮನೆಹಾಳಿ ಗ್ರಾಮದ ಪಟೇಲ್ರು ನಂ ಮನೇಲಿ ಹೋಗವರೆ ಅಂದ್ರೆ ನಂ ಮನೆ ಮಠ ಉಳುದಾತ ಅಂದ. ಸೀನೀರ ತರೋಕ್ಹೋಗಿದ್ದೆ, ಕರಿಗಡಬ ತುರೀಕೊಂಡು ಹುಂಡಕೊಂಡವ್ರೆ ಅಂದ್ಲು. ಸುಮ್ನಿರು, ಗಲಾಟೆ ಮಾಡಬ್ಯಾಡ. ಇವ್ನ ರುಣ ಇಲ್ಲದಂಗ ಮಾಡುವ. ಅಟ್ಟುಕ ಹತ್ತಿ ಜಾಕಾಯಿ ಪೆಟ್ಗೆ ಉಳ್ಳಸು ಅಂದ. ಪುಟ್ಟಕ್ಕ ಪೆಟ್ಗೆ ಇಳುಸುದ್ಲು. ಗೌಡ ಮಾವನ ದುಂಡಗ ಮಾಡಿ ಪೆಟ್ಗೆ ಒಳಗೆ ಮಡಗಿದ. ನೂಲ್ಹುರಿ ಹಗ್ಗ ತಗಂಡು ಪೆಟ್ಗೆಗ ಬಿಗೇಬೇಕಾದ್ರೆ ಏನಂತಾನೆ? ಲೇ, ದೇವ್ರ ಒಡವೆ, ಎಲ್ಲಾ ಒಡವೇನು ಒಂದು ಪೆಟಗೇಗೆ ತುಂಬಿದೀನಿ. ಮತ್ತೇ ನಾನು ಸುಬ್ರಮಣ್ಯಕ ಹೋಯ್ತೀನಿ. ಜೋಪಾನವಾಗಿ ಕಾಯ್ಕೆಂಡಿರು ಅಂತ ಕೂಗ್ಹೇಳದ.

ಮಳೋಗಿ ಬರ ಬಂದುಬುಟ್ಟು ಆರು ಜನ ಕಳ್ರು ಪುಟ್ಟಣ್ಣನ ಮನೇಲಿ ದೇವ್ರ ಒಡವೆ ಅವೆ. ನುಲುಬಿ ಬಾಚಿಕೊಂಡ್ಹೋಗೋಣ ಅಂತ ಗ್ವಾಡೆ ಹಿಂದೆಗಾಡೆ ಬಂದು ನಿಂತವ್ರೆ. ಇವ್ನೂ ಕೂಗ್ಹೇಳತಾನೆ. ಅವರೇನಂತಾರೆ? ಇವ್ನು ಹೋಗಬುಡತಾನೆ. ನಾವು ಒಳೀಕ ನುಗ್ಗಿ ಪೆಟ್ಗ ಹೊತ್ಕೊಂಡ್ಹೋಗುವ ಅಂದುಬುಟ್ಟು ಆರ ಜನ ಕಳ್ರು ಹಿಂದಗಡೆ ಗೋಡೆಗೆ ಕನ್ನ ಇಕ್ಕಿ ಒಳುಗ ನುಗ್ಗುದ್ರು. ತಡವರಸಿ ನೋಡುದ್ರು. ಕೈಗೆ ಪೆಟ್ಗೆ ಸಿಕ್ತು. ಆರು ಜನಾನು ಉಳ್ಳಾಡುಸಿ ನೋಡತಾರೆ. ಅಲುಗಾಡೊಲ್ಲದು. ಲೇ ಎಲ್ಲಾ ಒಡವೇನು ಒಂದೇ ಪೆಟ್ಟಗೇಗೆ ತುಂಬವ್ನೆ ಹೊತ್ಕೊಳಿ ಮತ್ತೆ ಕಾಡಿಗ್ಹೋಗನ ಅಂದ್ರು.

ಐದು ಜನ ಹುಡುಗ್ರು ಒಬ್ಬ ಯಜಮಾನ. ಐದ ಹುಡುಗ್ರು ಹೊತ್ಕೊಂಡ್ಹೋಯ್ತರೆ. ದೇವ್ರ ಒಡವೆ ದೊಡ್ಹೋವಿರುತಾವೆ. ಐದು ಹುಡುಗರಗು ಮೋಸಮಾಡಿ ದೊಡ್ಡದೊಂದ ಒಡವೆ ಹೊಡಕೊಂಡು ಬುಡೋಣ ಅಂತೇಳಿ ಯಜಮಾನ ಸಾಯೋ ಮುದುಕ ಯೋಚ್ನೆ ಮಾಡಿದ. ಹಳ್ಳದ ತಾವ ಪೆಟ್ಗೆ ಇಳುಕಬುಟ್ಟು ಯಜಮಾನುನ ಕರುದ್ರು. ಬಾರಪ ಅಜ್ಜ

ಎಲ್ರುಗು ಒಡವೆ ಭಾಗ ಮಾಡಕೊಡು. ಈವಜ್ಜ ಮೋಸಮಾಡಬೇಕು ಅಂತ ಮಾಡಿದ್ನಲ್ಲ. ಅಯ್ಯ ನನ್ನ ಮಕ್ಕಳರ ನಾನಿಷ್ಟು ದಿನ ಕಳ್ಳತನ ಮಾಡಿವ್ನಿ, ದೇವ್ರ ಒಡವೆ ಒಂದಿನಾನು ಕದ್ದಿಲ್ಲ. ದೇವ್ರ ಒಡವೆ ಭಾಗ ಮಾಡಕಳಾದು ಹಿಂಗಲ್ಲ ಕಣ್ರಲ. ಹಣ್ಣುಕಾಯಿ ಮಾಡಬೇಕು; ಕರಪುರ ಗಂಧದ ಕಡ್ಡಿ ಹಚ್ಚಿ ಅಡ್ಡಬಿದ್ದು ದೇವ್ರ ಒಡವೆ ಹಂಚಿಕೊಬೇಕು. ನಿವೋಗಿ ಹಣ್ಣುಕಾಯಿ ಊದುನಕಡ್ಡಿ ತಕಂಡ ಬಂದಬುಡಿ. ನೀವು ಬರೋಗಂಟ ನಾನಿಲ್ಲೇ ಕಾಯ್ಕಂಡಿರತೀನಿ ಅಂದ ಆವಜ್ಜ. ಐದು ಹುಡುಗ್ರು ಹೋಗಬುಟ್ರು.

ಈವಜ್ಜ ನಾಕಮಾರು ದೂರ ಮನಗಿದ್ದವನು ನ್ಯಟ್ಟುಗೆ ಪೆಟ್ಗೆ ತಾವು ಎದ್ದು ಬಂದ. ಪೆಟ್ಟುಗ್ಗೆ ಸುತ್ತಿದ್ದ ಹಗ್ಗಾನೆಲ್ಲಾ ಹರದ. ಒಂದು ದೇವರೊಡವೆ ಹೊಡಕೊಂಡು ಬುಡಾನ ಅಂತ ಪೆಟ್ಗೆ ಬಾಗಿಲು ಹಿಂಗೆ ಎತ್ತಿದ. ಅದರ ತುಂಬ ಮನಗ್ಯೆತೆ ದೇವರು! ಈವಜ್ಜನಿಗೆ ಸಿಟ್ಟು ಬಂತು. ಸಿಡಾರನೆ ಬಾಗಿಲು ಮುಚ್ಚಿದ್ದೇ ಹಗ್ಗ ಕಟ್ಟಬುಟ್ಟು ನಾಕ್‌ಮಾರ ದೂರ ಹೋಗಿ ಮನೀಕಂಡ. ಐದು ಹುಡುಗ್ರು ಹಣ್ಣುಕಾಯಿ ಊದುನಕಡ್ಡಿ ಎಲ್ಲಾನು ತಂದಬಿಟ್ಟು ಈವಜ್ಜಾನ ಕೂಗತಾರೆ. ಮನ್ಗಿದ್ದೋನು ಮ್ಯಾಕೇಳದೇನೆ ಅಯ್ಯೋ ನಂದೆಲ್ಲ ಮುಗೀತು. ನೀವು ಬಾಳೋರು ಬದುಕೋರು ನೀವು ಪೂಜುರಲೆ ಅಂದ. ಹುಡುಗ್ರು ಹಣ್ಣುಕಾಯಿ ಪೂಜುದ್ರು. ಬಾರಜ್ಜ ಮತ್ತೆ ದೇವ್ರ ಒಡವೆ ಭಾಗ ಮಾಡಕೊಡು ಅಂತ ಕೂಗತಾವ್ರೆ. ಅಯ್ಯೋ ನಾನಿನ್ನಾವ ಸಂಪತ್ತುಗ ಭಾಗ ತಗೊಳ್ಳಪ್ಪ. ಮುಂದುಕ ಬಾಳೋರು ಬದುಕೋರು ನೀವು, ದೇವ್ರ ಒಡವೇನೆಲ್ಲ ನೀವೆ ತಗಂಡು ಹಣ್ಣುಕಾಯಿ ಮಾತ್ರ ನನಗೆ ಕೊಟ್ಟ ಬುಡಿ ಅಂದ. ಹುಡುಗರಿಗೆ ಒಳ್ಳೆ ಪಾಡಾಯ್ತು. ಕಂಬಳಿ ತಗಂಡು ಹಣ್ಣುಕಾಯ್ನೆಲ್ಲ ಗಂಟಕಟ್ಟಿ ಅಜ್ಜನ ತಲೆಮ್ಯಾಲೆ ಹೊರುಸುದ್ರು. ಅಜ್ಜ, ನಾನಿದ್ದಂಗೆ ಪೆಟ್ಗೆ ಬಿಚ್ಚನೋಡಿದ್ರೆ ನನ್ನ ಸುಂಕೆ ಬುಟ್ಟಾರೆ. ಒದ್ದು ಹಣ್ಣುಕಾಯ್ನೆಲ್ಲ ಗುಂಜಕೋತಾರೆ ಅಂತೇಳಿ ಲೇ ಹುಡುಗರ ನಾನು ಕಣ್ಣಿಗ ಮರೆಯಾಗಿ ಹೋಗೋಗಂಟ ಪೆಟ್ಗೆ ಬಿಚ್ಚಬ್ಯಾಡಿ ಅಂತೇಳಿ ಕಣ್ಣಗ ಮರೆಯಾಗಿ ಹೊಂಟೋದ. ಇತ್ಲಾಗೆ ಈ ಹುಡುಗರು ಹಗ್ಗಾನೆಲ್ಲ ಬಿಚ್ಚಿದ್ರು, ಪೆಟ್ಗೆ ಬಾಗಲು ಹಿಂಗ ತಗುದ್ರೂ, ಗಬ್ಬಂತು ವಾಸ್ನೆ. ಅಯ್ಯೋ ಇವ್ನು ಮನೆ ಕಾಯೋಗ ಹಣ್ಣಕಾಯ್ನೆಲ್ಲ ಅವ್ನು ತಿಂತಾನೆ. ಈ ಹೆಣಾನೆಲ್ಲ ನಾವು ಹೊರಬೇಕಲ್ಲ ಅಂತೇಳಿ ಪೆಟ್ಗೇನ ತಗೋಂಡ್ಹೋಗಿ ದೊಡ್ಡದೊಂದು ಕೊರಕುಲಗೆ ಒಗುದಬುಟ್ರು. ಪೂಜಾರಿ ಪುಟ್ಟಕ್ಕ ನಮಗೆ ಹೇಗೆ ಮೋಸಮಾಡವಳೆ, ಅವಳೀಗ ಮಂಚದ ಮ್ಯಾಲ ಮನಗಿರತಾಳ ಅವಳ ಸಮೇತ ಹೊತ್ಗಂಡ ಬಂದುಬುಟ್ಟು ಇದೇ ಕೊರಕುಲಗ ಅವಳನ್ನು ಒಗುದುಬಿಡೂನ ಬನ್ರೊಲೆ ಅಂತೇಳಿ ಐದು ಹುಡುಗ್ರು ತಿರಗ ಹೋದ್ರೂ.

ಪುಟ್ಟಕ್ಕ ಮಂಚದ ಮ್ಯಾಲೆ ಮನಗವಳೆ. ಅವಳ ಬೆರಕೇನೆ ಮಂಚ ಹೊತ್ಕೊಂಡ್ರು. ಪುಟ್ಟಕ್ಕನಿಗೆ ನಿದ್ರೆ ಬಂದಬುಟ್ಟಿದೆ. ಬಯಲ್ಲಾಗೆ ಹೊತ್ಕಂಡು, ಹೋಗುವಾಗ ಶೀತಾಯ್ತು. ಥಟ್ಟನ ಕಣ್ಣಬಿಟ್ಟ ನೋಡುದ್ಲು. ಹೊತ್ಕಂಡು ಹೋಯ್ತವ್ರೆ. ಈಗೇನ ಮಾಡಾನ ಅಂತ ಯೋಚ್ನೆ ಮಾಡತಿರುವಾಗ ಹುಡುಗರು ದೊಡ್ಡದೊಂದು ಆಲದ ಮರದ ತಾಕೆ ಮಂಚ ಹೊತ್ಕಂಡ ಬಂದ್ರು. ಇವಳು ಆಲುದ ಮರದ ಬಿಳಲು ಹಿಡಕಂಡು ಮ್ಯಾಕ ಹತ್ಕಂಡಬುಟ್ಲು.

ಆ ಐದು ಹುಡುಗರೂವೆ ಬರೆ ಮಂಚ ತಕ್ಕೊಂಡ್ಹೋಗಿ ಗೌಡಮಾವನ್ನ ಒಗದಿದ್ದ ಕೊರಕಲಗೆ ಒಗುದಬುಟ್ಟು ಹಿಂದುಕ ಬತ್ತಾವೆ. ಪುಟ್ಟಕ್ಕ ಐದು ಹುಡುಗರಗು ಮೋಸ ಮಾಡಬುಟ್ಟು, ಬಾರೆ ಮ್ಯಾಲೆ ಕಸಿಮಾವನ ತೋಪ್ಯತೆ. ಆ ತೋಪಗಹೋಗಿ ಒಸಿ ಮಾವಿನಕಾಯಿ ಕುಯ್ಕಂಡ ಹೋಗಬುಡೂವ ಅಂತ ತೋಪುಗ ಬಂದು ಮಾವುನ ಮರಕ ಹತ್ತುದ್ಲು, ಈ ಹುಡುಗರಗೆ ಗೊತ್ತಿಲ್ಲ. ಅವ್ರು ಅದೇ ತೋಪುಗ ಬಂದು ಮಾವುನ ಕಾಯಿ ಕೀಳೂಕೆ ಎಲ್ಲರೂ ಒಂದೊಂದು ಮರ ಹತ್ತುದ್ರು. ಅವರಲ್ಲೊಬ್ಬ ಪುಟ್ಟಕ್ಕ ಹತ್ತಿದ್ದ ಮರಕೆ ಹತ್ತದೋನು ಯಾರು ಕುಂತಿರೋರು ಎಂದ. ಮುಂಡೆಗಂಡ್ರ ಕೈಗೆ ಸಿಕಬುಟ್ಟೆ ಅಂತೇಳಿ, ನಾನು ಪೂಜಾರಿ ಪುಟ್ಟಕ್ಕ. ಮಾತಾಡಬ್ಯಾಡ ಸುಮ್ನಿರು. ನಾನು ನೀನು ಗಂಡಹೆಂಡತಿರಾಗಾಣ. ಆ ನಾಕ ಜನಕು ಹೇಳಿ ಬರ್ರೋಗು. ಲೇ ನಾನು ಹತ್ತು ಮರುಕ ನೀವು ಹತ್ತಬ್ಯಾಡಿ. ಅದರಲ್ಲಿ ಮಾರಿ ಐತೆ ಚೌಡಿ ಐತೆ ಅಂತೇಳಿ ಬಂದಬುಡು ಅಂದ್ಲು. ಅದರಂತೆ ಇವನ್ಹೋಗಿ ಹೇಳಿ ಬಂದಬುಟ್ಟ. ನಾವಿಬ್ರು ಗಂಡ ಹೆಂಡತಿರಾಗಾಮ ಆ ನಡಿ ಮತ್ತೆ ಅಂದ. ಮೊದಲೇ ಪೂಜಾರಿ ಪುಟ್ಟಕ್ಕ. ಅವಳ ನಾಲಿಗೆ ತಗದು ಇವ್ನ ತುಟಿಗೆ ತೋರಿ ಹಿಂದುಕ ತಗಂಡ ಬುಟ್ಲು. ಈ ಸರಿ ನಿನ್ನ ನಾಲಗೆ ಕೊಡು ಅಂದ್ಲು. ಇವ್ನು ಮೊಳದುದ್ದ ನಾಲಗೆ ಹಿರುದುದ್ಲೇ ಪುಟ್ಟಕ್ಕನ ಬಾಯ್ಗೆ ಪಟಪಟ ಅಂತ ಕೊಟ್ಟೇಟಿಗೆ ನಡನಾಲಗೆ ಹಿಡಕೊಂಡು ಪಟಾರ್ನೆ ಒದ್ದಬುಟ್ಲು. ಒದ್ದೇಟಿಗೆ ಬಿದ್ಹೋದ. ಮಾತಾಡೂಕೆ ನಾಲಗಿಲ್ವಲ್ಲ? ಬಜಜಜ ಅಂದ. ಅಪ್ಪಾ, ಮೂಕ ಚೌಡಿ ಬತ್ತು ಅಂತ ಅವತ್ತು ಮಾವುನಕಾಯಿ ಉದುರಸಕೊಂಡು ಓಡ್ಹೋದೋರು ಈವತ್ತುನವರಗು ಬರಲಿಲ್ಲ.

ಹೇಳಿದವರು : **ಕರಪಾಲ ಸಿದ್ಧಯ್ಯ**

## ೪೦. ಮೂಗಂಡುಗ ಎಳ್ಳಿನ ಕಥೆ

ಒಂದೂರಿನಲ್ಲಿ ಒಬ್ಬ ಗೌಡ. ಆ ಗೌಡ ವ್ಯವಸಾಯ ಮಾಡ್ತಾ ಇದ್ದ. ಮೂರ್ ಖಂಡಗ ಎಳ್ ಬೆಳಿತಿದ್ದ. ಅವನ ಹೆಂಡ್ತಿ ಏನ್ ಮಾಡಿಬಿಟ್ಲು? ಮೂರ್ ಖಂಡ್‌ಗ ಎಳ್ ಬೆಳದು ಒಂದು ವಾಡೆಗೆ ತುಂಬಿದ್ದ. ಪಕ್ಕದ ಮನೇಲಿ ಒಂದು ಪಲ್ಲ ಬೆಳಿತ್ತಿದ್ದರು. ಪಕ್ಕದ ಮನೇವ್ರು ಏನ್ ಮಾಡಿ ಬಿಟ್ರು? ಒಂದ್ ಸ್ವಲ್ಪ ಎಳ್ಳು ಉರಿದು, ಒಂದಿಷ್ಟು ಬೆಲ್ಲ ಹಾಕಿ, ಒಂದು ಸ್ವಲ್ಪ ಕೊಬ್ಬರಿ ಹಾಕಿ, ಒಂದ್ ತರ ಚಿಗಳಿ ಉಂಡೆ ಮಾಡ್‌ಬಿಟ್ಟು, ನೀರ್‌ಗೋಗತಾ ಇದೀಯಮ್ಮ ಅಂತ ಈಯಮ್ಮಂಗೆ ಎಳ್ಳುಂಡೆ ಕೊಟ್ಲು. ಈಯಮ್ಮ ಅದು ತಿಂದಬಿಟ್ಲು. ಇವಳು ರುಚಿ ಬಂದು ಏನ್ ತಾಯಿ, ಯಾತರ ಮಾಡಿದ್ಯಲ್ಲ ಅಂತ ಕೇಳಿದ್ಲು. ಏನಮ್ಮ ಒಂದ್‌ಸೇರು ಎಳ್ಳು ಬೆಲ್ಲ ಹಾಕಿ, ಎಳೇ ಕೊಬ್ಬರಿ ಹಾಕಿ ,ಈತರ ಮಾಡ್ದೆ ಕಣೆ. ಚೆನ್ನಾಗಿರ್ತದೆ. ನೀನು ಅಂಗೆ ಮಾಡು. ಮೂರ್ ಖಂಡ್ಗ ಬೆಳಿತೀರಲ್ಲ ನಿಮ್ಮನೆಗೆ, ಅಂತ ಆಯಮ್ಮ ಅಂದ್ಲು.

ಈ ಯಮ್ಮ ಏನ್ ಮಾಡಿಬಿಟ್ಲು? ಒಂದೆರಡು ಸೇರು ಎಳ್ಳು ಉರಿದ್‌ಬಿಟ್ಟು ಏಳ್ಳುಂಡೆ ಮಾಡಿ ತಿಂದ್‌ಬಿಟ್ಲು. ಚೆನ್ನಾಗಿ ರುಚಿಯಾಗಬಿಡ್ತು. ಈ ನೆರೆಮನ್ಯೋಳು ಏನ್ ಮಾಡಿಬಿಟ್ಲು? ಪಕ್ಕದ ಮನೆಯವಳು ಇರ್‍ತಾಳಲ್ಲ ಅವಳು, ಅಂಗಡಿ ಸೌದೆ ಒಲೆಗೆ ಇಡೋಳು. ಅಂಗಡಿ ಸೌದೆ ಒಲೇಲಿ ಚಟಚಟ ಅನ್ನುತ್ತೆ; ಅವಳೇನ್ ತಿಳ್ಕೊಂಬಿಟ್ಲು? ದಿವ್ಸ ಇವ್ಳು ಎಳ್ಳೇ ಉರಿತಾಳೇ ದಿವ್ಸಾನೂ ಇಂಗೇ ಮಾಡ್ತಾಳೆ, ಅಂತ ದಿವ್ಸಾನೂ ಒಂದೊಂದು ಸೇರು ಉಂಡೆ ಮಾಡ್ಕೊಂಡು ತಿನ್ನಾಕ್ ಶುರುಮಾಡಿಕ್ಕೊಂಬಿಟ್ಲು. ಮೂರ್ ಕಂಡಗ ಏಳ್ಳು ಖಾಲಿಯಾಗ್ತ ಬಂತು. ಖಾಲಿಯಾಗ್ತಾ ಬಂದಾಗ ಇನ್ನೇನ್ ಮಾಡೋದು ? ಬೀಜದ ಕಾಲ ಬಂತಲ್ಲ? ಮೂರು ಖಂಡ್ಗ ಎಲ್ಲಾ ತಿಂದಾಕ್‌ಬಿಟ್ಲು. ಈಗ ಗಂಡ ಕೇಳಿದ್ರೆ ಏನ್ ಮಾಡೋದು ಅಂತ ಹೇಳಿಬಿಟ್ಟು, ಪಕ್ಕದ ಮನೆ ಅಕ್ಕಾನ ಕೇಳಿದ್ಲು. ಅಕ್ಕ ಇಂಗೆ ಮೂರು ಖಂಡ್ಗ ಎಳ್ಳೆಲ್ಲಾ ತಿಂದ್‌ಬಿಟ್ಟೆ. ಈವಾಗ ಬೀಜಕ್ಕೆ ಕೇಳಿದ್ರೆ ನಮ್ ಗೌಡ ಏನ್ ಹೇಳೋದು? ಇಂಗ್ ಆಗ್‌ಬಿಟ್ಟದೆ ಕಣಕ್ಕ, ಒಂದ್ ನಾಕ್ ಸೇರು ಎಳ್ ಕೊಡು ಅಂದ್ಲು. ಇಲ್ಲಿ ಅದಕ್ಯಾವ ಲೆಕ್ಕ?ನಿನ್ ಗಂಡ ಕೇಳ್ದಾಗ ಒಂದ್ ಪ್ಲಾನ್‌ಮಾಡು. ಮೈಗೆಲ್ಲ ಸೀರೆನ ದಬ್ಬೆತರ ಕಟ್ಕೊಂಬಿಡು. ಮಖಾ ಎಲ್ಲಾ ಸ್ವಲ್ಪ ಸುಣ್ಣ ಪಣ್ಣ ಬಡ್ಕೊಂಡಂಗೆ ಬಳ್ಕೊಂಬಿಡು. ದಪ್ಪದಾಗೆ ಪೇಟ ಕಟ್ಕಂಡ್ಹಂಗೆ ಕಟ್ಕೊಂಬಿಟ್ಟು, ನೀನ್ ಹೋಗುಬಿಡು. ಅಳ್ಳದಿಂದ ಆಚೆ ಹೊಲ ಐತೆ. ಮ್ಯಾಕ್ ವೊಂಟ್‌ಬಿಡು. ಏನು ಏನು ಅಂತ ಬೆದರ್‍ತಾರೆ. ಅವಾಗ ನಾನ್ ಕಣೋ ನಾನೆ ಈ ಕಡೆಯಿಂದ ಬಂದಿದ್ದೀನಿ. ನಿನ್ ಎತ್ತ ನುಂಗಲೋ ? ನಿನ್ ಮನೇಗ್ ಎಂಡ್ರು ನುಂಗ್ಲೋ ? ಇಲ್ಲಂತಾದ್ರೇ ನಿನ್ ಮನೇಲಿರೋ ಮೂರ್ ಪಲ್ಲ ಎಳ್ಳು ತಿನ್ಲೋ ನಾನ್ ಅಂತ ಹೇಳು. ಆಮೇಲೆ ಅವನು ಏನಂತಾನೆ? ಇಲ್ಲ ತಾಯಿ ನನ್ ಮನೇಲಿ ನನ್ನ ಎತ್ತನೂ ತಿನ್‌ಬೇಡ. ನನ್ ಎಂಡ್ರುನೂ ತಿನ್‌ಬೇಡ, ನನ್ನ ಮನೇಲಿ ಮೂರ್ ಪಲ್ಲ ಎಳ್ಳವೇ. ಅವನ್ನೇ ತಿಂದ್‌ಬಿಡು ತಾಯಿ ಅಂತ ಹೇಳ್ತಾನೆ. ಅವಾಗ್ ನೀನ್ ಜತನ್ ಆಗ್ತೀಯಾ. ನೀನ್ ಈತರ ಮಾಡಿಬಿಡು. ನಿಂಗ್ ಎಳ್ಳು ಯಾರ್ ಕೊಡ್ತಾರೆ ಅಂತ ಹೇಳಿದ್ಲು'' ಆ ಪಕ್ಕದ ಮನೆ ಅಕ್ಕ.

ಆಯಮ್ಮ ಬಂದುಬಿಟ್ಟು ಏನ್ ಮಾಡಿಬಿಟ್ಲು ? ಸೀರೆ ಪಾರೆ ಎಲ್ಲಾ ಸುತ್ಕೊಂಬಿಟ್ಲು. ಮೈ ತುಂಬಾ ಸುತ್ಕೊಂಬಿಟ್ಟಿದ್ದೇ ಮುಖಕ್ಕೆಲ್ಲಾ ಸಣ್ಣ ಗಂಜಿ ಸೊಪ್ಪು ಅದು ಇದು ಎಲ್ಲಾ ಇಟ್ಕೊಂಬಿಟ್ಲು. ಆ ತಲೇ ಎಲ್ಲ ಕೆದರ್‍ಕೋಬಿಟ್ಲು. ಆಮೇಲೆ ಕೈಗೆ ಬಾಯ್ಗೆ ಅಂತವೆಂತವೆಲ್ಲಾ ತಗಲ್ಕಾಂಬಿಟ್ಲು. ಒಂಟ್‌ಬಿಟ್ಲು. ಹಳ್ಳತಾವ ಹೊಲ. ಏಯ್ ಏನೋ ನಿನ್ ನುಂಗ್ಲೋ, ನಿನ್ ಎತ್ತ ನುಂಗ್ಲೋ , ನಿನ್ ಹೆಂಡ್ತಿ ನುಂಗ್ಲೋ, ನಿನ್ ಮನೇಲಿರೋ ಮೂರ್ ಪಲ್ಲಎಳ್ ನುಂಗ್ಲೋ ' ಅಂದ್ಲು. 'ಅಯ್ಯೋ ಏನ್ ಕಥೇ ದೇವ್ರೇ ಇದು ? ಯಾವ್ದೋ ಸೇರಕಿ ಬಂದ್‌ಬಿಟ್ಟು ನಮ್ಮನೆ ಎಲ್ಲ ತೋರಕ್ಕೊಂಡು, ಚಕ್‌ಮಾಡಿಕ್ಕೊಂಡು ಬಂದ್ ಬಿಟ್ಟದೆ. ಮನೇಲಿ ಮೂರು ಪಲ್ಲ ಎಳ್ಳು ಇರೋದು ಇದಕ್ಕೆಂಗೆ ಗೊತ್ತು ? ದೇವ್ರೆ ಸರಿ. ಇಲ್ಲ ನನ್ ಹೆಂಡ್ತಿ ತಿನ್ತದೆ, ನನ್ ಎತ್ ನುಂಗ್ತದೆ. ಸರಿ. 'ತಾಯಿ ನನ್ನೂ ನುಂಗ್‌ಬೇಡ, ನನ್ ಹೆಂಡ್ತೀನೂ ನುಂಗ್ ಬೇಡ, ನನ್ ಎತ್ತು ಸಾಯ್ಸಬೇಡ, ನೀನು ವೋಗಿ ಆ ಮೂರ್ ಪಲ್ಲ ಎಳ್ಳೂನೂ ತಿಂದ್‌ಬಿಟ್ಟು ಹೋಗ್‌ಬಿಡವ್ವ, ನಿನಗೆ ಕೈ ಮುಗಿತೀನಿ' ಅಂತ ಹೇಳಿ ತೀರ್ಮಾನ ಆಯ್ತು. ಅವನು ಆ ತರ ಮಾಡ್ದ.

ಈಯಮ್ಮ ಅಲ್ಲಾಸಿ, ಇಲ್ಲಾಸಿ, ಮನೆಗೆ ಬಂದ್‌ಬಿಟ್ಲು. ಗಂಡ ಬರೋದ್‌ರೊಳ್ಗೆ ದಿರಸ್ ಎಲ್ಲ ತೆಗೆದುಹಾಕಿಬಿಟ್ಲು. ಬೇರೆ ಸೀರೆ ಉಟ್ಕೊಂಡು ಅಚ್ಚುಕಟ್ಟಾಗಿ ಇದ್‌ಬಿಟ್ಲು. ಅವಿ ಎಂತ ಕೆಲಸ ಮಾಡಿಬಿಟ್ರಿ? ನನ್ ಒಬ್ಳೇ ಬಿಟ್‌ಹೋಗಿಬಿಟ್ರಿ ? ಯಾತ್ರದೋ ಅದು? ಎಲ್ಲಿತ್ತೋ ಕಾಣೆ . ನಂಗ್ ಭಯ ಆಗ್‌ಬಿಡ್ತು. 'ನಿನ್ ತಿಂದ್ ಬಿಡ್ತೀನಿ, ಇಲ್ದಿದ್ರೆ ನಿಮ್ ಮನೆ ಎಳ್ ತಿನ್ತೀನಿ ಅಂತು. ನಮ್ ಗೌಡ್ರಿಲ್ಲ, ನಮ್ ಗೌಡ್ರು ಹೊಲದ ತವ ಅವ್ರೇ ಅಂದೆ; ವೋತೀನಿ ಅಲ್ಲೇ ಅವ್ನ ಅಪ್ಪಣೆ ತಕ್ಕೊಂಬತ್ತೀನಿ. ನಿನ್ ತಿಂತೀನಿ, ಇಲ್ಲಾ ಎಳ್ ತಿಂತೀನಿ ಅಂತು. ನಾನು ಹೆದರ್‌ಕ್ಕೊಂಡು ಕೈ ಮುಕ್ಕೊಂಡ್ ಇದ್ದೆ. ಅದು ತಿರ್ಗ್ಗಾ ವಾಪಸ್ಸು ಬಂದುಬಿಟ್ಟು ಮೂರು ಪಲ್ಲ ಎಳ್ಳು ತಿಂದ್‌ಬಿಟ್ಟು ವೊಂಟೋಗಬಿಡ್ತು, ಅಂತ ಅತ್ಕೊಂಡು ನಿಂತಿದ್ಲು.

ಆಮೇಲೆ ಅವ್ನು 'ಅಯ್ಯೋ ಬಿಡೇ ನಿನ್ ಜನ್ಮ ಉಳೀತಲ್ಲ. ನನ್ ಎತ್ ಉಳ್ಕೊಂಡೋ ನಾನೆ ಉಳ್ಕೊಂಡೇ, ಮೂರು ಪಲ್ಲ ಎಳ್ಳು ಎಲ್ಲಾನ ಆಳಾಗೋಗ್ಲಿ' ಒಂದು ಸೇರು ಎಲ್ಲನಾ ತಂದು ಬಾಗ್ಲಲ್ಲಿ ಬಡಿದ್ರಾಯ್ತು. ನೀನು ನಾನು ಉಳಿಕ್ಕೊಂಡೆವಲ್ಲ, ಅಷ್ಟೇ ಸಾಕು ಕಣೆ, ಬಿಡೆ ಅಂತ ಹೇಳಿದ ಆ ಪುಣ್ಯಾತ್ಮ. ಅವರ್ ಗಂಡನೂ ಅವಳೂ ಸುಖವಾಗಿ ಬಾಳ್ಕೊಂಡಿದ್ರು.

ಹೇಳಿದವರು : **ಕೆಂಪಮ್ಮ**, ಮುಗಲೂರು, ಹಿರೇಕೆರೆ ತಾಲ್ಲೂಕು.

# ೪೧. ಕುಟುಕಪ್ಪ ಲೊಟಕಪ್ಪನ ಕಥೆ

ಒಂದಜ್ಜಿ ಒಂದ್ ಹಸು ಸಾಕಿತ್ತು. ಹಸು ಕದ್ದು ಹೊಡ್‌ಕೊಂಡ್ ಹೋಗಾಕೆ ಮೂರು ಜನ ಕಳ್ಳರು ಬರ್ತಾರೆ. ಆ ಮೇಲೆ ಹಸು ತಿನ್‌ಬೇಕು ಅಂತ ಒಂದು ಹುಲಿ ಬಂದಿರ್ತದೆ. ಅವಾಗ ಮಳೆ ಬಂದ್‌ಬಿಡ್ತದೆ. ಅವಜ್ಜಿ ದನ ಆಚೆ ಬಿಡಕ್ಕಾಗ್ಲಿಲ್ಲ ಅಂತ ಹೇಳಿ ಈ ಮಳೆ ಬಿಡ್ಲಿಲ್ಲವಲ್ಲ 'ಕುಟ್ಗಪ್ಪ ಲೊಟ್ಗಪ್ಪ' ಅಂತ ಈಚೆಗೂ ಆಚೆಗೂ ತಿರುಗ್ತಾ ಇರ್ತಾಳೆ. ಅದಕ್ಕೆ ಹುಲಿ ಏನ್ ಮಾಡ್‌ಬಿಡುತ್ತೆ? ಬೆಪ್ಪಾಗಿ ನಿತ್ಕೊಂಡುಬಿಡುತ್ತೆ. ನಾನ್ ತಿನ್ನಾಕ್ ಬಂದಿರೋದು ಹಸು. ಕುಟ್ಗಪ್ಪ ಲೊಟ್ಗಪ್ಪ ಅಂದ್ರೆ ಇನ್ನೇನು ? ಅಂತ ಹುಲಿ ನಿಂತಾಗ, ಕಳ್ಳರು ಸುಮ್ನೆ ನಿಂತ್ಕೋತ್ತಾರೆ. ಅಜ್ಜಿ ಮಲಗ್ಲಿಲ್ಲವಲ್ಲ ಅಂತ ಹೇಳಿ.

ಸರಿಯಾದ ಮಧ್ಯ ರಾತ್ರೀಲಿ ಹಸು ಬಿಟ್‌ಬಿಡ್ತಾರೆ ಕಳ್ಳರು. ಹುಲಿ ಒಡ್ಕೊಂಡು ವೊಂಟೋಗ್ ಬಿಡ್ತದೆ. ವೋಗ್ತಾ ಇರ್ತದೆ. ವೋಗ್ತಾ ಇರೋ ಟೈಮ್‌ನಲ್ಲಿ ಬೆಳಗಾಗ್ತ ಇರ್ತದೆ. ಆಗ ನೋಡ್ತದೆ. ಒಬ್ಬ ಮ್ಯಾಲೆ ಕುಂತವ್ನೆ. ಒಬ್ಬ ಹಿಂದ್‌ಕಡೆ ಬಡೀತಾ ಇರ್ತಾನೆ, ಮುಂದೆ ಎಳೀತಾ ಇರ್ತಾನೆ. ಹುಲಿ ಈ ಮನಸ್ರು ಮ್ಯಾಲೆ ಬಿಳ್ಲಿಲ್ಲ. ಆಗ ಏನೋ ಒಂತಾರ ಭಯ

ಆಗ್‌ಬಿಡ್ತದೆ. ಅದಕ್ಕೆ ಅದು 'ಕುಟ್ಗಪ್ಪ ಲೊಟ್ಗಪ್ಪ' ಅಂತ ಭಯ ಬಂದು ಸುಮ್ನೆ ನೋಡ್ತಾ ಇರ್ತದೆ. ಅದು ವೋಗ್ತಾ ಇರಬೇಕಾದ್ರೆ ಇವ್ರು ಬೆದ್ರ್‌ಬಿಡ್ತಾರೆ. ಹುಲಿ ಅಂದ್ರೆ ಮನಸ್ಸಿಗೆ ಭಯ ಬಂದು ಮ್ಯಾಲ್‌ಗಡೆ ಕುಂತಿದ್ದವ್ರು ಕೈಗೆ ಸಿಕ್ಕಿದ ಕೊಂಬೆ ಹಿಡ್ಕಂಡು ಮರ ಹತ್ತಿಬಿಡ್ತಾನೆ. ಮುಂದಗಡೆ ಕುಂತಿದ್ದವ್ನು ವೋಡೋಗಿ ದೇವಸ್ಥಾನ ಸೇರ್ಕೋತ್ತಾನೆ. ಹಿಂದುಗಡೆ ಇದ್ದವ್ನು ಓಡೋಗ್‌ಬಿಡ್ತಾನೆ. ಅವಾಗ ಹುಲಿ ಕುಟ್ಗಪ್ಪ ಲೊಟ್ಗಪ ಅಂತ ಓಡ್ತಾ ಇರ್ತದೆ. ಅಷ್ಟೊತ್ತಿಗೆ ಒಂದು ಕರಡಿ ಬರ್ತದೆ. 'ಏನೋ ಹುಲಿರಾಜ ನೀನ್ ನೋಡಿದ್ರೆ ಹುಲಿರಾಜ, ಕುಟ್ಗಪ್ಪ ಲೊಟ್ಗಪ್ಪ ಅಂತ ಓಡ್ತಾಇದ್ದೀಯಲ್ಲ ಏನ್ ಕಾರಣ?' ಅಂತ ಕೇಳುತ್ತೆ.

''ಅಯ್ಯೋ ನಾನ್ ಒಂದಜ್ಜಿ ಮನೇಲಿ ಹಸಾ ತಿನ್ನೋಣ ಅಂತ ವೋಗಿದ್ದೆ. ಅಲ್ಲಿ ಮೂರ ಜನ ಸೇರ್ಕೊಬಿಟ್ಟು ಕುಟ್ಗಪ್ಪ ಲೊಟ್ಗಪ್ಪ ಅನ್ನೋರು. ನಾನ್ ನೋಡಿದ್ರೆ ಹುಲಿರಾಜ. ಆದ್ರೆ ಅವರ ಕೈಯಿಂದ ಬಿಡಿಸ್ಕೊಳೋದುಕಷ್ಟ ಆಯ್ತು'' ಅಂತು. 'ಅವ್ರು ಯಾರು ಇರ್‌ಬೋದು ತೋರ್‍ಸು, ಅಂತ ಕರಡಿ ಕರ್ಕೊಂಡೋಗೂತ್ಲುವೇ ಅದ್ ಏನ್ ಮಾಡುತ್ತೆ ಮರದ ಮ್ಯಾಲೆ ಇರ್ತಾನಲ್ಲ ಅವನತ್ರ ವೋಗುತ್ತೆ. ಕರಡಿ ಏನ್ ಮಾಡುತ್ತೆ? ಅವನ್ನ ನಾನು ಹತ್ತಿ ಒದ್ದುಬಿಟ್ಟು ಉರುಳ್ಸಿಬಿಡ್ತೀನಿ, ನೀನ್ ತಿಂದುಬಿಡು ಅನ್ನುತ್ತೆ. ಇದು ಹಿಂದ್ ಮುಂದ್ಲಾಗಿ ಹತ್ತುತ್ತೆ. ಆಗ ಮರದ ಮ್ಯಾಲಿದ್ದ ಕಳ್ಳ ಏನ್ ಮಾಡ್ತಾನೆ? ಝೂಡ್ಸಿ ಹಿಂದುಗಡೆಯಿಂದ ಹತ್ತತ್ತಾ ಇದ್ದ ಕರಡೀನ ಒದೀತಾನೆ. ಕರಡಿ ಕೆಳಗೆ ಬೀಳ್ತದೆ. ಅವಾಗ ಕರಡೀನೂ ಹುಲಿ ಜೊತೇಲಿ ಓಡ್‌ಹೋಗ್ತಾ ಇರ್ತದೆ, 'ಕುಟ್ಗಪ್ಪ ಲೊಟ್ಗಪ್ಪ' ಅಂತ ಹೇಳಿ. ಅಷ್ಟೊತ್ತಿಗೆ ಒಂದ್ ನರಿ ಬರ್ತದೆ.

'ಏನ್ ಹುಲಿರಾಯ ಕರಡಿರಾಜ ಇಬ್ಬರೂ ಹೋಗ್ತಾ ಇದ್ದೀರಲ್ಲ?' ಏನ್ ಸಮಾಚಾರ ನನಗೆ ಹೇಳಲ್ವ ?' ಅಂತ ನರಿ ಕೇಳ್ದಾಗ, ನಾನ್‌ಗೆ ಈತರ ಆಗ್ಬುಡ್ತು. ಕುಟ್ಗಪ್ಪ ಲೊಟ್ಗಪ್ಪ ಅಂತ ಸೇರ್ಕೊಂಡು ಹುಲಿರಾಜಂಗೆ ಈ ತರ ಕಷ್ಟಕೊಟ್‌ಬಿಟ್ರು. ಅವನು ಸಿಕ್ಕಿದ್ರೆ ಈತರ ಮರದ ಮ್ಯಾಲಿಂದ ಅವುನ್ ಒದ್ದು ನನ್ ಕೆಳಗೆ ಕೆಡಗಿದ ಅಂತ ಹೇಳಿ ಅಳುತ್ತೆ.

ಇನ್ನೊಬ್ಬು ಇದಾನ ಅಂತ ಹುಲಿ ಕರ್ಕೊಂಡು ಹೊಗುತ್ತೆ. ಈ ದೇವಸ್ಥಾನದೊಳಗಿದ್ದಾನೆ ಅನ್ನುತ್ತೆ ಹುಲಿ. ಒಬ್ ಮನುಷ. ಅದೇನ್ ಮಾಡುತ್ತೆ. ನರಿ ಪ್ಲಾನ್‌ಮಾಡಿ 'ನಾನ್ ಈ ಬಾಲ್ದಾಗೆ ತಿವ್ದು ಎತ್ತುತೀನಿ ಅವ್ನ. ನೀವಿಬ್ಬರೂ ಜಾಗ್ರತೆ ಕಾಯ್ತಾ ಇರಿ, ಅಂತ ಅನ್ನುತ್ತೆ ನರಿ. ಅವಾಗ ಸೊಂದೀಲಿ ಬಾಲ ತೂರುತ್ತೆ. ಅವಾಗ ಏನ್ ಮಾಡ್ತಾನೆ ಒಳಗಡೆ ಇದ್ದ ಮನುಷ್ಯ? ಬಾಲ ಹಿಂದಕ್ ಬಿಡೋದು ಮುಂದಕ್ ಬಿಡೋದ್ ಮಾಡ್ತಾ ಇರ್ತಾನೆ.

ಇದು ನರೀದು ಪ್ಲಾನು. ಮರ್‍ಯಾದೆ ಹೋಗುತ್ತಲ್ಲ ಅಂತ ಹೇಳಿ, ಈ ಹುಲಿರಾಜ ಕರಡಿ ರಾಜನ ಅತ್ರ 'ಈಗ ತೆಗೆದು ಎಸೆದು ಬಿಡ್ತೀನಿ ಅವನ್ನ ಬಿಟ್ಟೀರಾ' ಅಂತು. ಅವಾಗ ಅವನು

ಬಾಲ ಬಿಡ್ತಾನೆ. ಬಿಟ್‌ಬಿಟ್ವಾಗ ಓಡಿಬಿಡುತ್ತೆ ಆಗ ನರಿ. 'ಹಿಂಗುಂಜ ಮುಂಗುಂಜ' ಅಂತ ಓಡ್ತಾ ಇರ್ತದೆ. ಅವಾಗ ಮತ್ತೆ ಎಲ್ಲರೂ ವಾಪಸ್ಸು ಬರ್ತಾರೆ. ಎಲ್ಲಾ ಓಡೋಗ್ತವೆ. ಇವರಿಬ್ರೂ ವಾಪಸ್ಸು ಬರ್ತಾರೆ.

ಹೇಳಿದವರು : **ಪರಮೇಶಿ,** ಹಿರೇಡೊಂಕೇಹಳ್ಳಿ, ತುರುವೇಕೆರೆ ತಾಲ್ಲೂಕು.

# ೪೨. ದಡ್ಡ ಹುಡುಗಿ

ಒಂದೂರ್‍ನಾಗೆ ಗಂಡ ಹೆಂಡ್ತಿ ಇಬ್ರೂ ಇದ್ರಂತೆ. ಅವರ್‍ಗೊಂದು ಹೆಣ್‌ಮಗು ಹುಟ್ತಂತೆ. ಆಯಮ್ಮ ವೋಟಾಗಿ ಈಟಾಗಿ ಬೆಳೆದು ಹನ್ನೆರಡು ವರ್ಷ ತುಂಬ್ತು, ಮೈನೆರೀದ್ಲು. ಅವಳು ಒಂದು ತರ ದಡ್ಡಿ. ಅಂದ್ರೆ, ತಲೇ ಬಾಚಕ್ ಬರೋಲ್ಲ. ಒಂದ್ ನವೀನಿಲ್ಲ, ನೋಟಿಲ್ಲ; ಏನೋ ಒಂದು ತರ ದಡ್ಡಿ ಅಯಮ್ಮ. ಯಾರ್ ಬಂದ್ರು ಪಕ್ಕದ ಮನೆ ಹುಡ್ಗುರು ಚೆನ್ನಾಗಿದ್ರು. ಅವರ್‍ಗೆ ಎಣ್ ಮಾಡ್ಕೊಂಡು ಹೋಗವ್ರು. ಇದಕ್ ಬಂದ್ರೆ ಇಂಗ್ ಆಯ್ತಲ್ಲ. ತಪ್ರ ತಪ್ರನ್ನಂಗೆ ಬೇಡ ಅಂತ ವೋಗೊವ್ರು. ಈಗಿನ ಕಾಲಕ್ಕೆ ಅಚ್ಚುಕಟ್ಟಾಗಿ ಇರಬೇಕು ತಾನೆ? ಆಮೇಲೆ ಪಕ್ಕದ ಮನೆ ಅಜ್ಜೀನ, ನೋಡಜ್ಜಿ ನಿಮ್ ಮನೆಗಳಿಗೆ ಹೆಣ್ಣಿಗ್ ಬರ್ತಾರೆ. ನಮ್ಮ ಮಗ ಇಂಗೆ ನಿಂತುಬಿಡ್ತು. ಯಾರೂ ಬರೋದಿಲ್ಲ. ಯಾರ್ ಬಂದ್ರೂ ಇದು ಒಂದ್ ತರ ಹುಡುಗಿ ತಪ್ರು ತಪ್ರು. ಇದ್ ಬೇಡ ನಮ್ಗೆ ಅಂತ ಹೋಗ್ತಾರೆ, ಏನ್ ಮಾಡೋಣ ಅಜ್ಜಿ ಅಂತ ಕೇಳಿದ್ರು.

ಆವಾಗ ಅವಜ್ಜಿ ಆ ಹುಡ್ಗೀಗೆ 'ಸೀಮೆ ಎಣ್ಣೆಯೋ ಇಲ್ಲ ಕಡ್ಲೆಕಾಯಿ ಎಣ್ಣೆಯೋ ಎಂತಾದಾದ್ರೂ ಎಣ್ಣೆ ಹಾಕಿ ತಲೆಬಾಚಿ ಒಂದಿಷ್ಟು ಅಡಿಕೆ ಎಲೆ ಬಾಯಿಗೆ ಕೊಡ್ರಿ. ಅದಕ್ ಒಂದಿಷ್ಟು ತಲೇಗಿಲೇ ಬಾಚಿಬಿಟ್ಟು, ಅವ್ರು ಬತ್ತರಲ್ಲ ನೆಂಟ್ರು, ಅವಾಗ ಒಂದಿಷ್ಟು ಚಚ್ ಬಿಟ್ಟು ಎಲೆ ಅಡಿಕೆಯಾ ಅವರು ಬಂದಾಗ ಕೊಡ್ರಿ. ಅವರು ಬರ್ತಾರೆ. ಬಂದು ಕುತ್ಕೋತಾರೆ. ನೋಡ್ತಾರೆ. ಆಗ ನಿಮ್ಮಲ್ಲಿ ಇದ್ದಿದ್ದು ಮಾಡಿಟ್ಟುಬಿಡ್ರಿ. ಹೆಣ್ ಮಾಡಿಕೊಡ್ರಿ. ಹೆಣ್ ಮಾಡ್ಕೊಂಡು ಹೋಗ್ತಾರೆ ಅಂತ ಹೇಳಿದ್ರು. ಮೂರು ಜನ ಬಂದ್ರು ಹೆಣ್ಣಿಗೆ ಅಂತ. ಇವರು ತಲೇಗಿಲೇ ಬಾಚಿದ್ರು. ಆ ಹುಡ್ಗಿಗೆ ಸೀರೆಗೀರೆ ಉಡಿಸಿದ್ರು. ಉಡಿಸಿ ಕುಂಡ್ರಿಸಿದ್ರು. ನಡ್‌ಮನೇಲಿ ಕುಂಡ್ರಿಸಿದ್ರು. ಬಂದ್ರು ತಿಂದ್ರು. ಹೆಣ್ ತಕ್ಕೊಂಡೋಗೋರು ಬಂದ್ರೆ ಈ ಹುಡ್ಗಿ ಏನಂತು? ಎಲೆ ಅಡ್ಕೆ ಚಚ್ಚಿ ಕೊಟ್ಟಿದ್ರಲ್ಲ ಕೈಗೆ, ಯವ್ವಾ ಅಂತು. ಅವ್ರು ಒಳಗ ಬೀಗರಿಗೆ ಅಡಿಗೆಗಿಡಿಗೆ ಮಾಡಬೇಕಲ್ಲ ? ನೆಂಟ್ರಿಗೆ ಮಾಡ್ತಿದ್ದರು. ಆಮೇಲೆ 'ಯವ್ವಾ' ಅಂತ ಅನ್ನೋವೊತ್ಗೆ ಅವರಮ್ಮ ಏನಮ್ಮ ಅಂತ ಅಂದ್ಲು. 'ಯವ್ವಾ' ಬಾಗ್ಲಿಗೆಬಂದ್ರು ಬಾಯ್ಲ ಹಾಕ್ಕೊಳ್ಳಾ ? ಎಲೆ ಅಡಿಕೆ ಚಚ್ಚಿ ಕೊಟ್ಟಿದ್ರಲ್ಲ ಅದರ ಕೈಗೆ ? ಅಂಗ್ ಅಂತು. ಇದರ

ಮನೆಕಾಯೋಗ, ಅವರ ಮುಂದೆ ಇಂಗ್ ಅಂದ್‌ಬ್ರಿಟ್ಟಿಲ್ಲ, ಬಾಯಿಗೆ ಹಾಕ್ಕೊಳೆ ಅಂತ ಅವರಮ್ಮ ತಿಳ್‌ಕೊಂಡು ಸುಮ್ಕಕಿದ್ಲು.

ಆಮೇಲಿಂದ ಇವ್ರು ನೆಂಟ್ರು ಬಂದಿದ್ರಲ್ಲ ? ನೀರು ಕೊಟ್ರು. ಕೈಕಾಲಿಗೆ ಕೊಟ್ ಬಂದ್ರೆ 'ಯವ್ವಾ' ಬಾಗ್ಲಿಗೆ ಬಂದ್ರು ಬಾಯ್ಗೆ ಹಾಕ್ಕೊಳಾ ಅಂತು. ಏನಪ್ಪಾ ದೇವ್ರೇ ಹಿಂಗನ್ನುತ್ತೆ ಅಂತ ಅಂಗೂ ಬಂದ್ರು ಅನುಮಾನದಾಗೇನೇ. ಚಾಪೆಗೀಪೆ ಹಾಕಿದ್ರು, ಕೂತ್ಕೊಂಡುರು. 'ಯವ್ವಾ' ಕುಂತವ್ರೆ ಆಗಿಯೋನ ಅಂತು. 'ಬಾಗ್ಲಿಗೆ ಬಂದ್ರೆ ಬಾಯ್ಗೆ ಹಾಕೋಳ ಅಂತು. ಕುಂತಿದ್ರೆ ಆಗಿಯೋಣ ಅನ್ನುತ್ತೆ. ಇದೇನಪ್ಪ ಗತಿ ಅಂದವರೇ ಅವರು ಕೂತ್‌ಕ್ಕೊಣಕ್ಕೆ ಅವರ ಜೀವ ಹೋತಾ ಐತೆ. ಇಂಗ್ ಅಂದ್‌ಬಿಟ್ಟಿಲ್ಲ? ನಮ್ಮನ್ನ ಏನ್ ಮಾಡುತ್ತೆ. ಮೊದ್ಲೆ ಇಂತ ಹುಡ್ಗಿ, ಏನ್ ಬುದ್ಧಿ ಇಲ್ಲ. ಇದು ನಮ್ಮನ್ನು ನುಂಗ್ ಬಿಡುತ್ತೆ ಅಂಥ, ಹೇಳಿದವ್ರೆ ಎದ್ದು ಹೊರಟ್ರಂತೆ.

'ಯವ್ವಾ ಅವರು ವೋಗ್ತಾವರೆ ನುಂಗ್‌ಕೊಳ್ಳ ?' ಅಂತ ಕೇಳಿದ್ಲು. ಅವರು ಪಂಚೆನೂ ಎಡಕೈಲಿ ಹಿಡ್‌ಕ್ಕೊಂಡು ವೋಡ್ತಾರಂತೆ. ಇವರು ರೀ ಬನ್ರೀ ಅಂತ ಇವ್ರು ಗಂಡ ಹೆಂಡತಿ ಓಡ್ತಾರಂತೆ.

ಅದೇ ರಾತ್ರಿನಾಗೆ ಕುರಿ ಒಡೆಯೋ ಕಳ್ಳರು ಮೂರು ಜನ ಕುರಿಗಳ ಕಳ್ಳತನ ಮಾಡಕ್ ಕಾಯ್ತಾ ಇದ್ರು. ಮುಂದೆ ಇವ್ರು ಓಡಿದ್ರಲ್ಲ? ನಮ್ಮನ್ನ ಓಡಿಸಿಕೊಂಡು ಬರ್‍ತಾವ್ರೆ, ಉಳಿಸ್ತಾರ ಅಂತ ಅವ್ರು ಮುಂದೆ, ಇವರ್ ಹಿಂದ್ ಓಡಿಬಿಟ್ರಂತೆ. ಓಡಿ ಅವರು ಎತ್ತಾಗೋದ್ರೋ, ಇವರು ಎತ್ತಾಗೋರ್‍ರೋ ಗೊತ್ತಿಲ್ಲ. ಅಷ್ಟೇ ನನಗೆ ಬರೋದು.

ಹೇಳಿದವರು : **ಲಕ್ಷ್ಮಮ್ಮ.** ದಂಡಿನಶಿವರ.

## ೪೩. ದಾಸಯ್ಯ

ಒಂದೂರಿನಲ್ಲಿ ಒಬ್ಬ ಇದ್ದ. ಇವ್ರು ಮದುವೆ ಮಾಡಿದ್ರು. ಯಾರಿಗೆ ? ತಮ್ಮ ಮಗನಿಗೆ. ಪಕ್ಕದ ಊರಿಂದ ಹೆಣ್ ತಗೊಂಬಂದಿ ಮದ್ವೆ ಮಾಡಿದ್ರು. ಅವ್ರು ಯಾರು ? ದಾಸಯ್ಯ. ಇವರ್ ಯಾರು ? ಹೆಣ್ಣೋರು ಜೋಗಯ್ಯ. ಒಂದಲ್ಲ ಒಂದಿವಸ ಇವ್ರ ದೇವ್ರ ಮಾಡ್ಬೇಕಾಗ್ ಬಂತು. ಯಾರು ? ಹೆಂಡ್ತಿ ಕಡೆಯವ್ರು. ಜೋಗಯ್ಯನ ಕಡೆಯವುರು. ಸರೀ ಮನೆಗಿನೆ ಸಾರಿಸ್ಕೊಳೆ ಇವತ್ತು ದೇವ್ರು ಮಾಡೊಣ ಅಂತ ಹೆಂಡ್ತಿಗೆ ಹೇಳ್ಬಿಟ್ಟು ಸರಿ ಹೋದ. ಮನೆಗಾಗೋ ಸಾಮಾನು ತರಾಕೆ. ತಕ್ಕೊಬರ್‍ತಾನೆ. ಹೆಂಡ್ತಿಗೆ, ಮನೆ ಸಾರಿಸ್ಕೊಂಡಿದ್ದೀಯಾ ? ಆಯ್ತೇ ಅಂತ ಕೇಳ್ದಾ. ಹೂ ಆಯ್ತು. ಮತ್ತೇ ದಾಸಯ್ಯಂಗೆ ಹೇಳ್ಬಿಟ್ಟು ಬಂದ್ಬಿಡ್ತೀನಿ, ಜೋಗಯ್ಯನ್ನ ಕರ್‍ಕೋ ಬರ್‍ತೀನಿ. ನಾವು ದೇವ್ರು ಮಾಡೋಣ ಅಂತ ಹೇಳ್ದಾ. ಅಗಲೀ ಅಂದ್ಬಿಟ್ಟು, ಏನ್ ಮಾಡಿದ್ಲು ? ಹೆಂಡ್ತಿ ಬಾಳ ಬುದ್ಧಿ ಓಡಿಸಿ, ಯೋಚಿಸಿ, ಓಹೋ ಹೋ

ನಮ್ಮಪ್ಪನ ಮನೇದೇವ್ರು ಮಾಡ್ಬೇಕು ಅಂತ ಇದ್ರೇ ಅವ್ರು ಅವರಪ್ಪನ ಮನೇದೇವ್ರು ಮಾಡ್ಬೇಕು ಅಂತಾನಲ್ಲ ? ಇವಳೇನು ಮಾಡಿದ್ಲು? ಬುದ್ಧಿ ಓಡಿಸಿದ್ಲು. ಒಂದು ದೊಣ್ಣೆಗೆ ನೀರಾಕಿ ತೊಳೆದು, ವಿಭೂತಿ ಇಕ್ಕಿ, ನಡ್‌ಮನೇ ಒಳ್ಗೆ ಮಡಗಿದ್ಲು. ಗಂಡ ಏನ್ ಮಾಡ್ದ ? ವೋಗಿ ದಾಸಯ್ಯಂಗೆ ಹೇಳ್ಬಿಟ್ಟು, ಅವನ ಕೆಲ್ಸಕ್ಕೆ ಅವನೂ ಹೊರಟೋದ.

ದಾಸಯ್ಯ ಬಂದ. ಕಾಲಿಗ್ ನೀರ್‌ಕೊಟ್ಲು. ಮಾತಾಡ್ಯಾದಾನೇ ಹೋದ್ಲು. ''ಏನವ್ವ ಎಲ್ಲಿಗೋದ್ರು ಯಜಮಾನ್ರು ?'' ಅಂತ ಕೇಳ್ದಾ. ಅಪ್ಪ ಈ ದೊಣ್ಣೆ ಒಳಗೆ ಮೂರು ಏಟು ಹೊಡೆದ್‌ಬಿಟ್ಟು ಅಮ್ಯಾಲೆ ಮಾತಾಡು ಅಂದ್ರಪ್ಪ ಅಂದ್ಲು. ಇವನೇನು ಮಾಡ್ದ ? ಮೆಲ್ಲಗೆ ಈಚೆಗೆ ಬಂದ. ಆಮೇಲೆ ಇನ್ ಸ್ವಲ್ಪ ಹೆಜ್ಜೆ ಹಾಕ್ದ. ಆಮೇಲೆ ಓಡ್ದ. ಆಮೇಲೆ ಓಡ್ತಾ ಓಡ್ತಾ ಗಂಟೆ ಟಪ್ ಟಪ್ ಅಂತಿತ್ತು. ಏನಪ್ಪ ಗಂಟೆ ಶಬ್ದ ಆಯ್ತದೆ ಅಂದ್ಬಿಟ್ಟದ್ದೆ ಅಯಮ್ಮನ ಗಂಡ ಬಂದ. ''ಏನೇ ದಾಸಪ್ಪ ಬಂದ್ನ?'' ಅಂತ ಕೇಳಿದ. ಹೌದುಕಣ್ರಿ ಬಂದ. ಸರಿ ಏನಂದ ? ನೋಡ್ರಿ ಈ ದೊಣ್ಣೆ ಕೇಳ್ದಾ. ಕೋಡೋಕ್ ಹೋದ್ರೆ ವೊಂಟೇ ವೋದ. ಈ ದೊಣ್ಣೆ ಬೇಕಂತೆ ಕಣ್ರೀ ಅಂದ್ಲು. ಕೊಡೆ ಅಂದಿದ್ದೇ ಗಂಡ ಏನ್ಮಾಡ್ದ? ಆ ದೊಣ್ಣೆ ಎತ್ಕೊಂಡಿದ್ದೆ ''ದಾಸಪ್ಪ ದೊಣ್ಣೆ ದೊಣ್ಣೆ ಕ್ವಾ'' ಅಂತ ಓಡ್ದ. ಅವ್ನು ಮುಂದೆ ಓಡ್ತಾನೆ ಇವ್ನು ಹಿಂದೆ ಓಡ್ತಾನೆ. ಅವ್ನು ಮುಂದೆ ಓಡ್ತಾನೆ, ಇವ್ನು ಹಿಂದೆ ಓಡ್ತಾನೆ. ಅಯ್ಯೊಯ್ಯೋ ನನ್ನನ್ನ ಹೊಡಿಯಾಕೆ ಬರ್ತಾನಲ್ಲ ಇವ್ನು. ದೊಣ್ಣೆ ಕ್ವಾ ದಾಸಪ್ಪ ದೊಣ್ಣೆ ಕ್ವಾ ದಾಸಪ್ಪ ಅಂತ ಇವ್ನು ಓಡ್ತಾನೆ. ಓಡ್ತಾನೆ ಇರ್ತಾನೆ. ಸರೀ ಸಿಕ್ಲಿಲ್ಲ. ಸರೀ ಸಿಕ್ಕದಲೇ ಇರ್ತ್ತಾಲೂವೆ ಮನೆಗೆ ಬರ್ತಾನೆ. ಮನೇಗ್ ಬರ್ತ್ತಾಲೂವೇ ಬರೋವೊತ್ಗೆ ಇವ್ವು ಚುಂಚನಗಿರೀಲಿ ಚುಂಚಪ್ಪನ ಪೂಜೆ ಮಾಡಿ, ಎಡೆ ಇಕ್ಕಿ, ತೀರ್ಥ ಪ್ರಸಾದವ ಗಂಡಂಗೆ ಕೊಟ್ಲು. ಸರೀ ಅಲ್ಲಿಗೇ ದೇವ್ರ ಹಬ್ಬ ಮುಗೀತು.

ಹೇಳಿದವರು : **ಹುಚ್ಚಮ್ಮ**, ಸೂಳೆಕೆರೆ.

# ೪೪. ಮುದುಕ ಯಜಮಾನನ ಚಪಲ

ಒಬ್ಬ ಯಜಮಾನ. ನನ್ನಂತ ಮುದ್ಕ. ಏನ್ಮಾಡಿದ್ದ ? ಊಟ ಮಾಡಿದ್ದ. ಒಂದ್ ಜಗಲಿ ಮ್ಯಾಲೋಗಿ ಮಲಗ್ತಾಯಿದ್ದಾ. ಆಗ ಏನಪ್ಪಾಂದ್ರೆ ಹೆಣ್ಮಕ್ಕೆಲ್ಲ ಅಲ್ಲಾಸಿ ನೀರಿಗ್ಹೋಗೊರು. ಆ ದಾರಿವಳಿಗೆ ಕುತಗಂದ ಈ ಮುದ್ಕ. 'ಪುಟ್ಟಪ್ಪ ಅವಳ್ಯಾರು ?' 'ಆ ಬೆಟ್ಯಾನ ಹೆಂಡ್ತಿ'. 'ಇವಳು ?' 'ಆ ಬೋರೇಗೌಡನ ಸೊಸೆ' ಅಂದ. ಅಲ್ಲಿ ಸುಮ್ನಾದ.

ಆಮ್ಯಾಲೆ ಮತ್ತೊಂದಿವ್ಸ ಒಂದ್ ಹತ್ತದ್ನೈದ್ ಹೆಣ್ಮಕ್ಕಳ ಜೊತೆವಳಗೆ ಒಂದ್ ಹೆಣ್ ಹುಡ್ಗಿ ಬರ್ತಾಐತೆ. ಲಕ್ಷಣವಾಗಿ ಸೀರೆಗೀರೆ ಉಟ್ಕಂಡು ಬರ್ತಾಯಿತ್ತು. ಅವಳ್ನ ನೋಡಿದ ಈ

ಮುದ್ಕ ''ಪುಟ್ಟಪ್ಪ ಅವಳ್ಯಾರು'' ಅಂದ. 'ಅವಳು ನಮ್ಮೂರಾಗೆ ಜಿಡ್ ಯಾಪಾರ ಮಾಡ್ತಾರಲ್ಲ ಸೆಟ್ರು, ಅವ್ರೆಂಡ್ತಿ ಕಣ್‌ಗೌಡ'. 'ಓಹೋ ಹಾಗೋ'. ಹಂಗೆ ನೆಪ್ ಮಾಡ್ಕಂದ. ಇದೇ ಮನಸ್ನಾಗಿಟ್ಕಂಡ. ಊಟ ಮಾಡ್ಕೆಂದ. ಆ ಸಂದೀಲಿ ಬಂದ್ ಹೋಗೊನಂಗೆ ಹೋದನು. ನುಚ್ಕಲ್ ಆಯ್ಕೊಂಡ. ತನ್ ಕಾಲ್ದಸೀಲಿ ಕಲ್ ಮಡಿಕ್ಕೆಂಡ್ ಕುಂತಿದಾನೆ. ಇವ್ರು ಮಾಮೂಲಾಗೆ ಹೆಣ್ಮಕ್ಳು ನೀರಿಗೆ ಬರ್‍ತಾರೆ. ಆವಾಗ ಆ ಹುಡ್ಗಿನು ಬರ್ತಾಳೆ. ಇವ್ನಿದ್ದೋನು ಆ ಹುಡ್ಗಿ ಹತ್ರ ಹೋಗಿ ತಲೆಮ್ಯಾಲೆ ಒಂದ್ ಸಣ್ಣ ಕಲ್ಲಿಡ್ತಾನೆ. ಆ ಹುಡ್ಗಿ ತಿರುಗಿ ನೋಡಿ ಏನೋ ಯಜಮಾನ ಹೋಗ್ಲಿ ಬಿಡೂಂತಂದು ಸುಮ್ಮನೆ ಹೋಗ್ತಾಳೆ. ಮತ್ತೆ ಅಲ್ಲಿಂದ ಬರುವಾಗ ತಲೆಮ್ಯಾಲೆ ಪಟ್ನೆ ಕಲ್ಲಿಡಿದು. ಹಿಂಗೇ ಕಲ್ ಇಟ್ಟು ಇಟ್ಟು ಅದೆ ಆಯ್ತು ಅವುಂದು. ಆರ್ತಿಂಗ್ಳು ಆರುವರ್ಷ ಅದೇ ಆಯ್ತು. ಅದೇ ರೂಢಿಯಾಗೋಯ್ತು ಆ ಯಜಮಾನುಗೆ.

ಒಂದಾನೊಂದಿನ ಆ ಹುಡ್ಗಿ ತನ್ನ ಗಂಡಗೆ 'ಮಾರಾಯ, ಮಾರಾಯ' ಈ ಊರಿಗೆ ಬಂದು ಬೇಕಾದೋಸ್ಟು ದಿನಆಯ್ತು. ಬೇರೆ ಊರಿಗೆ ಹೊರಡೋಗಾನ ನಡಿ' ಅಂದಳು. 'ಅದ್ಯಾಕ್ಕೇ?' 'ಅಲ್ಲ ನಡೀರಿಂದ್ರ.' ಇಲ್ಲ... ಇಲ್ಲ... ಅವನೂ ಸಂಶಯದಿಂದ ಅದೇನ ಅಂದ?' 'ಏನೂ ಇಲ್ಲಾಂದ್ರೆ... ಆ ಯಜಮಾನ ಜಗಲಿ ಮ್ಯಾಲೆ ಕುತಗಂತಾನಲ್ಲ ಅವನು ಕೂತಿದ್ರೆ, ನಾ ಹೆಣ್ಮಕ್ಳು ಜೊತೆ ನೀರಿಗೆ ಹೊಯ್ತಾಯಿರ್ಬೇಕರೆ ಬಂದು ಪಟ್ಣೆ ತಲೆ ಮ್ಯಾಲೊಂದ್ ಕಲ್ಲಿಡೋದು, ನಾನು ತಲೆ ಸವರ್ಕಂಡ್ ಬರೋದು. ಸಾಲದ್ಕೆ ಯಜಮಾನ ಇವ್ನಿಗೇನವ್ವ ಮಾತೇಳ್ಳಿ ಅಂದುಬುಟ್ಟು ಹಂಗೆ ಬರ್ತಾಯಿದ್ದೆ. ಅತ್ಲಿಂದ ಬರ್‍ವಾಗ ತಿರಗ ತಲೆಮ್ಯಾಲೆ ಪಟ್ನೆ ಕಲ್ಲಿಡೋದು. ಇದೇ ರೂಢಿಯಾಗೋಯ್ತು.

'ಲೇ.. ಲೇ.. ಹಂಗಾರೆ ಒಂದ್ ಕೆಲ್ಸಮಾಡು'. ಆ ಅಯ್ಯನ್ಗೆ ನಿನಮ್ಯಾಗೆ ಎಲ್ಲೊ ಮನಸಾಗೆದೆ. ಒಂದ್ ಕೆಲ್ಸಮಾಡು. ನಾಳೆ ಎಂದಿನಂತೆ ಹೋಗು. ಹೋದಾಗ ಅವ್ನು ಕಲ್ಲಿಟ್ರೆ ತಿರುಗಿಬಿಟ್ಟು - ಯಜಮಾನ್ರೆ ನಿಮಿಗೇನ್ ಸಾಲ್ದಾಗೇತಿ ? ನಿಮ್ಮ ವಯಸ್ಸಿಗೆ ಬೆಲೆ ಬ್ಯಾಡ್ವೆ ? ಹಂಗೆ ನನ್ನ ಮ್ಯಾಗೆ ವಿಶ್ವಾಸಯಿಟ್ಟು ಮಾತಾಡಿಸ್ಬೇಕು ಅಂತಿದ್ರೆ, ನಾಳೆ ನಮ್ಮ ಯಜಮಾನ್ರು ಎಲ್ಲೊ ಹೋಗ್ತಾರೆ. ಬರೋದು ಒಂದ್‌ವಾರ ಆಯ್ತದೆ. ಅಷ್ಟ್ರಲ್ಲಿ ಬರೋದಾದ್ರೆ, ನನ್‌ಕೂಡ ಮಾತಾಡ್ಬಹುದು ಅನ್ನು. ಆಸಿದ್ರೆ ಬನ್ನಿ. ಬರೋದಾದ್ರೆ ನಾಳೆ ಎಲ್ಡ್ ಗಂಟೆ ಮ್ಯಾಲೆ ನಮ್ಮನಿಗೆ ಬನ್ನಿ. ಅವಾಗ ಏನಿದ್ರು ನಿಮ್ಮ ನಮ್ಮ ಮಾತಾಗ್ಲಿ ಬೇಕಾರೆ, ಅಂದ್ಬುಟ್ಟು ಬಂದ್ಬುಡು ಅಂದ. ಹಂಗೇಮಾಡ್ತೇನಿ ಅಂದ್ಲು. ತಿರುಗ ಮರ್ದಿನ ಗಂಡ ಹೇಳಿಕೊಟ್ಟಂಗೆ ಅವ್ನಿಗೆ ಹೇಳಿ ಬಂದ್ಲು. ಅವ್ನು ಅತ್ ಹಂಗಾರೆ ಅಂದು ಕುಷಿಯಾಗಿ ಹೋದ. ಈಕಿ ಮನಿಗ್ಬಂದು, ಹಿಂಗ್ ಹೇಳ್‌ಬುಟ್ ಬಂದುದೇನಿ ಅಂದ್ಲು. ಗಂಡಗೆ 'ಹಾಗಿದ್ದಮ್ಯಾಲೆ ಗೌಡ ಬಾಳ ಆಸ್ಯಾಗವ್ನೆ. ಹೋಗು ಆ ಗೌಡ್ನ ಅಂಗಿಡಿಲಿ ಎಲ್ಡ್ ಗೋಲ್ ತಕಂಬಾ. ಆ ಗೋಲ್ ತಕಂದ್ ಬಂದು ಕಡಾಯಕಾಕು. ನಾಕ್ ತಂಬಿಗೆ ನೀರು ಹೊಯ್ಕಿ. ಆ ಗೌಡ ಆ ಟೈಮ್ನಾಗೆ ಬಂದೇ ಬರ್‍ತಾನೆ. ಬಂದ್ರೆ ದಾವಣಗೆರೆಗೋದಂಗ್ ಹೊಂಡೋಯ್ತೇನಿ ಅಷ್ಟೊತ್ಗೆ. ನೀನು

ಉರಿಹಾಕು. ಅವನು ಬಂದ್ ಕೊಡ್ಲೆ ಕುರ್ಚಿ ಹಾಕು. ಏ ಏನು ಬ್ಯಾಡ ಅಂತನೆ. ಇಲ್ಲ ಇಲ್ಲ ಕುತ್ಕಳಿ, ಅದ್ಯಾಕೆ ಅನ್ಮಾನ? ಕುತ್ಗಳಿ ಅಂದು ಕುಂದುರಿಸಿ ಉರಿಹಾಕಿ ನೀರುಕಾಯ್ಸು. ನೀರ್ ಕಾಯಿಸ್ಬಿಟ್ಟು ನೀರ್ ಹಾಕ್ತೇನಿ ನಿನಿಗೆ ಅನ್ನು. ಏನುಬ್ಯಾಡ, ನೀರ್ ಹಾಕುದೇನು ಬ್ಯಾಡ ಅಂತಾನೆ. ಅಯ್ಯಯ್ಯ ನೀರ್‌ಹಾಕದೆ ಅದೆಂತ ಸ್ನಾನ ಏಳ್ರಿ ಏಳಿ ನಿಮಿಗ್ಯಾಕೆ ಅನುಮಾನ. ಮನಿಯಾಗೆ ಯಾರು ಇಲ್ಲ. ಹಕ್ಕೆಯೇಳಿ ನೀರ ಅನ್ನು. ಆಗ ಕುಂತ್ಕತಾನೆ. ನೀರ್ ಹಾಕ್ತಾಯಿರು. ಅಷ್ಟೊತ್ಗೆ ನಾನು ಬಂದು 'ಏ ಬಸ್ ಮಿಸ್ಸಾಯ್ತು. ಬಾಗಲು ತಗಿಯೇ ಅಂತೇನಿ' ಆಗೇನ್ಮಾಡ್ತಾನೆ ಆ ಯಜಮಾನ ? ಮಿರುಗುಟ್ತಾನೆ. ಅವಾಗ ತಿರುವಲೆ ಬಾಗ್ಲು ತಗ್ದ್‌ಬಿಡು.

ಆ ತಿರುವಲೆ ಬಾಗಲಲ್ಲಿ ಏನಪ್ಪ ಮಾಡಿದ್ರೂಂದ್ರೆ ಅಲ್ಲಿ ನೂಲಿರಾಟೆ ನೂಲಿತ್ತು. ನುಸಿಯಲ್ಲಿ ಗುಡ್ಡೆ ಒಟ್ಟಿ ಆ ಮೂಲೆವಳಗೆ ಗುಡ್ಡೆಹಾಕಿದ್ರು. ಆ ಗುಡ್ಡೆ ಸ್ವಲ್ಪ ಸರಿಸಿಬುಡು ಅದ್ರೊಳಾಕೆ ಇವುನ್ನ ನೂಕಿ ಸೇರ್ಸಿಬುಟ್ಟುಬುಡು. ಅಮ್ಯಾಗೆ ಅಷ್ಟೊತ್ಗೆ ನಾನು ಬಂದು ಬಾಗಿಲು ತಟ್‌ತೀನಿ. ಬಂದು ಬಾಗ್ಲು ತಗಿಯಂತ ಹೇಳಿದ್ದ.

ಅದರಂತೆ ಬಂದ ಗೌಡ. ಕರದೂ ಕುಂದಿರಿಸಿದಳು. ಕುಂದ್ರಿಸಿ - 'ಹಾಕ್ಕಳಿ ಸ್ವಾಮಿ ನೀರ'ಅಂದಳು. 'ಹ್ಹಾ.. ಹಿ.. ಏನು ಬೇಡ'. 'ಇಲ್ಲ... ಇಲ್ಲ... ಹಾಕ್ಕಳಿ ಯಾಕೆ ಅನುಮಾನ'? ಆಮ್ಯಾಲೆ ನಾಕ್ಕೈದು ಚಂಬು ನೀರ್‌ಹಾಕ್ಕೊಂಡ. 'ಏ ಬಾಗಲು ತಗೆಯೇ ಬಸ್ ಮಿಸ್ಸಾಯ್ತು ಬಾಗಲು ತಗಿಯೇ' ಅಂತ ಬಂದ ಗಂಡ. ಆವಾಗ ಯಜಮಾನನಿಗೆ 'ಬನ್ನಿ ಹೆದ್ರುಕ್‌ಬ್ಯಾಡಿ ಬನ್ನಿ' ಅಂದು ನುಸಿಯಲ್ಲಿ ತಗ್ದು ಒಳಾಗೆ ಕುಂದುರ್‍ಸಿಬುಟ್ಟು ಎಲ್ಲ ಮುಚ್ಚಿಬುಟ್ಟಳು. ಆಗ ಗಂಡನಿಗೋಗಿ ಬಾಗಿಲು ತಗದಳು. ಗಂಡಗೆ ಊಟುಕ್ಕೆ ಇಕ್ಕಿದ್ಲು. ಸುಮಾರು ಎರಡು ಗಂಟೆ ಟೈಮಾಯ್ತೇನೊ. ಅಂಗ್ಹಿಗೋದ. ಎಲ್ಡ್ ಸರಪಣಿ ತಕ್ಕಂಡ್ ಬಂದ. ಬಂದ್ ದೊಣ್ಣೆ ತಕ್ಕಂದ. ಆ ಯಜಮಾನಿಗೆ ಮುಚ್ಚಿದ್ನೆಲ್ಲ ತಗದ. ಅಷ್ಟಾಗೆ ಏನಾಗೇತಪ ಇವನಗತಿ ? ಗೋಂದು ಅರಳೆ ಅಂಟ್ಗೆಂದು ಮುಖ ಮುಸಿಡಿ ಏನೂ ಗುರ್ತೆ ಸಿಗದಾಗಿದ್ದ. ಆಮ್ಯಾಲೆ ಎರಡೂಕೈಗೆ, ಎರಡೂ ಕಾಲ್ಗೆ ಸರಪಣಿ ಹಾಕ್ಕೊಂದ್ ಎಳಕಂದ. ಏ ಕೋಳ ಹಾಕಿರದು ಬಿಳಿ ಕರಡಿ, ಬಾಗಲು ತಗಿಯೇ ಅಂದ. ಬಾಗಲು ತಗದ್ಲೂ. ಹೊರೀಕೆ ತಂದ. ಗ್ರಾಮದ ಜನರೆಲ್ಲ ಮುತ್ಗೆಂಡ್ರು. ಅಮ್ಮ ನನ್ ಕರಡಿಗೆ ಸ್ವಲ್ಪ ಅನ್ನ ಕೊಡಮ್ಮ ಅಂದ. 'ಅಯ್ಯಾ ಎಲ್ಲಿಂದ ತರಾನಪ್ಪ ಇಲ್ಲ' ಅಂದಳು . ಕೊಡಮ್ಮ ತಂಗಳದ್ದು - ಪಂಗಳದ್ದು ಇದ್ರೆ ಕೊಡಮ್ಮ. ಹಿಂಗೆ ಸುತ್ತಾಡ್ತಾ ಯಜಮಾನನ ಹೆಂಡ್ತಿ ಮನೆತಾಕೆ ಹಿಡ್ಕಂಡ್‌ಹೋದ. ಯಜಮಾನ ಹೆಂಡ್ತಿ ನೋಡಾಕ್ ಬಂದ್ಲೊ.

'ಏ ಯಜಮಾನನ ಹೆಂಡ್ತಿ ಕಾಲಿಗೆ ನಮಸ್ಕಾರ ಮಾಡು' ಅಂತ ಹೆಂಡ್ತಿ ಕಾಲಿಗೆ ನಮಸ್ಕಾರ ಮಾಡ್ಸಿದ. ಗಣಗಣ ತಿರಿಗಿಸ್ದ. ಸಂಜೆ ಆಯ್ತು. ತನ್ ಮನೆತಾಕ್ ಹಿಡ್ಕಂಡ್ ಬಂದು, 'ಯಜಮಾನ ನಿನಿಗೆ ಹೆಣ್ ಬೇಕ ? ಅಂದ. ಯಜಮಾನ ತುಟಿ ಪಿಟುಕ್ ಅನ್ನಿಲ್ಲ.

ಸಾಯಿಸಿಬಿಡ್ಕೋದಿತ್ತು, ಈ ಯಜಮಾನನ್ನ. ಆದ್ರೆ ಮುದುಕ ಯಜಮಾನ ಬದುಕ್ಕೊ ಅಂದು ಬಿಟ್‌ಬಿಟ್ಟ.

ಈ ಬೀದಿಲೋದ್ರೆ ಜನ ನೋಡಿ ನಗ್ತಾರೆ, ಅಂದ್ಬುಟ್ಟು ಸಂದಿವಳಗಾಸಿ ಹೋಗಿ ನುಗ್ಗಿಬಿಟ್ಟ ತನ್‌ಮನೆಗೆ. ಅವಾಗ ಯಜಮಾನನ ಹೆಂಡ್ತಿ ನೋಡಿ 'ಕಲ್ಡಿ ಬಂತವಲ್ಲಪೋ' ಅಂತ ಕೂಗೊಂಡ್ಲು. ಏನೇ ಆದದ್ದಾಗೋಯ್ತು. ನಿನ್ ದಮ್ಮಯ್ಯಂತೇನಿ ಸುಮ್ಮನಿರೆ ಅಂದು ಸುಮ್ಮನೆ ಮಾಡ್ದ.

ಹೇಳಿದವರು : **ಕೆಂಪೇಗೌಡ**, ಯಾಚೇನಹಳ್ಳಿ, ಟಿ.ನರಸೀಪುರ, ತಾಲ್ಲೂಕು, ಮೈಸೂರು ಜಿಲ್ಲೆ.

# ೪೫. ಪಿಂ ಪಿಸ್ಗ

ಒಬ್ಬ ರೈತ ಒಂದ್ ಹಂಗಾಮಿ ಜಮೀನು ಮಾಡಿಕೊಂಡ. ಜಮೀನು ಒಳ್ಳೆ ಕೆಬ್ಬೆಕಳ. ಚನ್ನಾಗಿ ಹದಮಾಡ್ದ. ಹದಾದಕೂಡಲೆ ಅದಕೆ ಜ್ವಾಳ ಬಿತ್ತಿದ. ಬೆಳೆ ಚನ್ನಾಗಿ ಬಂದ್ಬುಡ್ತು. ಆ ಬೆಳೆ ಬಂದ ಸಂತೋಷನೋಡಿ ಸುತ್ತ ಬೇಲಿ ಹಾಕ್ದ . ಗಿಡನೆಲ್ಲ ಕಡಿದು ಸುತ್ತ ಬೇಲಿ ಹಾಕ್ದ. ಗಿಡನೆಲ್ಲ ಕಡದು ಏನು ಆಯಡೆ ಗೊದ್ದ ಹಾವು ಪ್ರಾಣಿ ನುಸಿಬಾಡ್ದು ಹಂಗ್ಮಾಡ್ದ. ಆ ಬೆಳೆವಳಗೆ ಅಡ್ಡಾಕೋತ ಹೋಗದು, ಚಿಗಟಗಿಗಟ ಇದ್ರೆ ಚುಚ್ಚದು, ಹುಳಪಳ ಏನಾದ್ರು ಇದ್ರೆ ಚಿವುಟ್ತಾ ಹೀಗೆ ಮಾಡ್ತಾಯಿದ್ದ. ಇದನ್ನು ಹಾಗೆ ನೋಡ್ದ ಸ್ವಾಮಿ. ಅಯ್ಯ ಮುಂಡೆಮಗನೆ ಇವನಾಸೆ ಎಷ್ಟಿರಬೋದು ನೋಡಮ ಹಾಗೆ ಅನ್ಬುಟ್ಟವರು ದಾಸಯ್ನಾಗಿ ಹಿಂದ್ಗಡಿಂದ ಬಂದು 'ಅಯ್ಯ ಎರಡಕ್ಕಿ ಕೊಡು ಅಂದ'. ' ಏ ಏನೊ ಯಾರ್ ನೀನು? ಎಲ್ಲಾಸ್ಗ್‌ಬಂದೆ ? ಯಾಕ್ ಅಕ್ಕಿ ಕೊಡ್ಬೆಕು?ಅಂದ. ಅಷ್ಟಲ್ಲಿ ಸ್ವಾಮಿ ಒಂದ್ ಕಾಗೆ ಸೃಷ್ಟಿಮಾಡಿಬಿಟ್ಟ. ಕಾಗೆ ಮೇಲೋಗ್ತ ಅದೆ, ಅದಕಂಡು ಹಲೋಂತ ಬಡಕೊಂಡ, ಇದೇನಯ್ಯ ಈಗ್ತಾನೆ ಚನಾಗಿದ್ದೆ, ಮಲ್ಲಾಗ್ರ ಬಂದಂಗಾಡ್ತಿಯ. 'ಏ ನಿನ್ ಕೇಳಿ ನೋಡ್ದೋರು ಯಾರು?'

'ಅಯ್ಯ ಒಂದು ಮಂತ್ರ ಕಲಿಸಿಕೋಡ್ತೇನಿ' ಎರ್ಡಕ್ಕಿ ಕೊಡು ಮತ್ತೆ. ಆ ಕಾಗೆ ಸತ್ತೋಗವಂತ ಮಂತ್ರ ಕಲಿಸಿ ಕೊಡ್ತಿಯ? ಹೌದು ಕಲಿಸಿ ಕೋಡ್ತೇನಿ, ಅಂದ.

'ಏ ಸತ್ತೋಗವಂತ ಮಂತ್ರ ಕಲಿಸಿ ಕೊಡ್ತಿಯ?

'ಹೌದು. ಅಂದು ಅಲ್ಲೆ ಇನ್ನೊಂದು ಕಾಗೆ ಸಿದ್ಧಮಾಡಿಬಿಟ್ಟ. 'ಅಲ್ಲೋಗೊ ಕಾಗೆ ಪಿಂ ಪಿಸ್ಗ ಅನ್ನು ಅದು ಸತ್ತೋಗತ್ತದೆ' ಅಂದ್ರು ಸ್ವಾಮಿ. 'ಅಲ್ಲೋಗೊ ಕಾಗೆ ಪಿಂಪಿಸ್ಗ' ಅಂದಬುಟ್ಟ. ಕಾಗೆ ಸತ್ ಬಿದ್ದೋಯ್ತು. 'ಚೆನ್ನಗೈತೆ ಕಾಣಯ, ಅಂದುಬುಟ್ಟು ಹಿಂದುಕ್ಕೆ ತಿರುಗಿ ನೋಡ್ದ. ದಾಸಯ್ಯ ಇಲ್ಲ. ತತ್ ಇವರಮ್ಮನ ಕ್ವಾಯ. ಎಲ್ಡಕ್ಕಿ ಉಳಕಂಬುಂಟ್ಟುವು.... ಇರಲಿ. ಇದು ಹೆಂಗಿರಬೋದು ಈ ಮಂತ್ರ? ಆ ಹಕ್ಕಿ ಈ ಅಮಚೆಗೊದ್ದ, ಹುಳ ಹಾವು, ಇರುವೆಗಿರುವೆ ಎಲ್ಲ ಪಿಂಪಿಸ್ಗ - ಅಂದ. ಎಲ್ಲ ಸತ್ತೋದುವು. ಹೊಲದಾಗೆಲ್ಲ ಅಡ್ಡಾಡಿಕೋತ ಹೋಗ್ತಾನೆ. ಹುಳ ಹುಪ್ಪಡಿ ಕಂಡ್ರೆ ಪಿಂಪಿಸ್ಗ ಅಂತಾನೆ. ಇದೇ ಕಲ್ತುಬುಟ್ಟ.

ಜ್ವಾಳ ಚೆನ್ನಾಗಿ ಬೆಳ್ದು ನಿಂತು. ಕಿತ್ತು ಮೆದೆಹಾಕ್ದ. ತಂದು ಮನೆಗೆ ತುಂಬ್ಕೆಂಡ. ಕಂದಾಯಕೊಟ್ಟಿಲ್ಲ ಏನೂಯಿಲ್ಲ. ಮಳೆ ಹೊಯ್ದ್‌ಬಿಡ್ತು. ಏರ್‌ಕಟ್ಗೆಂದ್ ಹೊಲಕ್ ಹೊಂಟೋದ. ಹೊಲಕೋದ್ರೇ ಅಮಲದಾರ್ರು, ಶ್ಯಾನಬೋಗರು ಅವರು ಬಂದ್ಬುಟ್ರು ಎಲ್ಲ ಮಾರಿಗುಡಿತಾವ ಬಂದ್ರು. ತೋಟಿ ಕರದ್ರು - 'ಎಲ್ಲೊ ಆ ಗೌಡ್ನ ಕಂದಾಯಯೆಲ್ಲೊ? 'ಸ್ವಾಮಿ ಅವ್ನಿಲ್ಲ.' 'ಕರ್ಕಂಬಾ ಹೋಗಿ'. ತೋಟಿ ಬಂದ. ಇವ್ನ ಮನಿಗೆ ಬಂದು-

'ಅಮ್ಮಾ ನಿಮ್ಮ ಯಜಮಾನ್ರೆಲ್ಲಮ್ಮ?' 'ಆರ್ಬುಟ್ಗಂದ್ ಹೋಗ್ಯಾರೆ ಕಣ್ರಿ'. 'ಕಂದಾಯ ಕೊಡ್ಲಿಕ್ ಗತಿಯಿಲ್ಲ. ಹೆಂಗಮ್ಮ ಹೊಂಟೋದ ? ಹೋಗಿ ಏರ್ ಬಿಟಗಂದ್ - ಬಂದ್‌ಬಿಡ್ತೇನಿ' ಅಂದ್ಬುಟ್ಟದ್ನೆ ತೋಟಿ ಹೋದ ಹೊಲತ್ತಾವ್ಕೆ. ಇವ್ನು ಉಳ್ತಾ ಅವ್ನೆ. ತೋಟಿ ಹೋದೋನೆ ಏನ್ಮಾಡ್ದ ? - 'ಯೋ ಕಂದಾಯ ಕೊಡ್ಲುಲ್ಲ ಯಾಕಯ್ಯ? ಕಟಿಗೆಂಬಾರಯ್ಯ ಏರ ಮನಿಗೆ. ಅಮಲ್ದಾರ್ರು ಬಂದಾರೆ. ಬಾರಯ್ಯ, ಅಂದ. ಇವನ್ಗೆ ಕೋಪ ಹತ್ತು. 'ಏ ಪಿಂಪಿಸ್ಗ ಅಂದ. ತೋಟಿ ಏರಿಮ್ಯಾಲೆ ಸತ್ ಮನಿಕ್ಕೆಂದ. ಈಗ ಇನ್ಯಾರು ಇವುನ್ನ ಕೇಳೋರು?

ಇಲ್ಲಿ ಈ ಗ್ರಾಮದ ಪಟೇಲ ಏನ್ಮಾಡ್ದ ? ಆ ಗೌಡ್ನ ಗದ್ದೆ ತಾಕ್ ಹೋದ. ತೋಟಿ ಇನ್ನು ಬರ್ಲಿಲ್ಲವಲಾ ಅಂದ್ಬುಟ್ಟು, ಅಲ್ಲೋದ್ರೆ ತೋಟಿ ಸತ್ತು ಮಲಗವನೆ. ಅದುನ್ನ್ ನೋಡಿ ಪಟೇಲನಿಗೆ ಕೋಪತ್ತು. ಬೋಳಿ ಮಗನೆ ಸೂಳೆಮಗನೆ ನಿನಿಗೆ ಸರಿಯಾಗಿ ಮಾಡ್ತೇನಿ. ಹಾಗಂದ್ಬುಟ್ಟು ಜೋರಾಗಿ ಗದ್ಲ ಮಾಡಿಬುಟ್ಟ. ಪಿಂ ಪಿಸ್ಗ ಅಂದ. ಅವನು ಸತ್ ಮನಿಕ್ಕೆಂದ. ಇನ್ನ ಅವನ್ನ ಹಿಡಿಯೋರ್ಯಾರು ?

ಈಗ ಶ್ಯಾನುಬೋಗಿದ್ದೋನು ಗೌಡ್ರು ಗದ್ದೆತಾಕ್ ಹೋದೋರು ಇನ್ನು ಬರ್ಲಿಲ್ಲ. ನೋಡಮ ಹಾಗೆಂದ್ಬಿಟ್ಟು ತಾನು ಹೊಲುದತಾಕೆ ಹೋದ. ಹೋದ್ರೆ ಅಲ್ಲಿ ತೋಟಿ ಪಟೇಲ ಇಬ್ರು ಸತ್‌ಬಿದ್ದವ್ರೆ. ಅದುನ್ನೋಡಿ ಶ್ಯಾಮಬೋಗ ಹೆಚ್ಚು ಕಮ್ಮಿ ಬೈದು ಗಟ್ಟಿಯಾಗಿ ಕೂಗಿಬಿಟ್ಟ. ಇವನು 'ನೀ ಪಿಸ್ಗ' ಅಂದ. ಅವನು ಸತ್ ಮನಿಕ್ಕೆಂದ.

ಅಮಲ್ದಾರ ಕುದುರೆ ಬಿಟಗಂಡಿದ್ನಲ್ಲ ? ತೋಟಿ ಪಟೇಲ ಶ್ಯಾಮಬೋಗ ಎಲ್ಲ ಅವನ ಹೊಲತಾಕೆ ಹೋದೋರು ತಿರ್ಗಿ ಬರ್ಲೆಯಿಲ್ಲ. ಕುದ್ರಿಗೆ ನೀರು ಕುಡಿಸ್ಗೆಂದ್ ಹಂಗೆ ನೋಡ್ಕೆಂದ್ ಬಂದ್ಬಿಡಮ ಅಂದು ಕುದ್ರೆ ಬಿಟಗಂದ್ ಹೋದ. ಹೋಗಿ ನೋಡ್ತಾನೆ, ಇವ್ರು ಮೂರ್ ಜನವು ಸತ್‌ಮಲಗವ್ರೆ! ಇವ್ನು ಉಳ್ತಾನೆ ಅವ್ನೆ ದೊರೆಯಂಗೆ. ಅಮಲ್ದಾರ ನೋಡಿಬುಟ್ಟು. ಬೋಳಿಮಗನೆ ಜೈಲ್ ಕಾಣಿಸ್ತೀನಿ, ಅಂತವನೆ ಇಂತವನೆ ಅಂತ ಕೂಗಾಡ್ತ ಕುಪ್ಪಳಿಸಿಬಿಟ್ಟ, ಕದುರೆ ಮ್ಯಾಲೆ ಕುತಗಂಡು. ನಿನ್ ಕುದ್ರೆ, ನೀನು ಪಿಂಪಿಸ್ಗ ಅಂದ. ಇಬ್ರು ಮನಿಕ್ಕೆಂದ್ರು. ಇನ್ ಇವನ್ನ ಕೇಳೋರ್ಯಾರು ? ಯಾರು ಇಲ್ಲ.

ಅವ್ನ ಹೆಂಡ್ತಿಗೆ ಐದಾರ್ ಮಕ್ಳು. 'ಅಯ್ಯೊ ತೋಟಿ ಕರಿಯಾಕ್ ಹೋದ. ಅವುರ್ನ ಕರಕಂಡ್ ಬಂದಾನೆನೋಂತ ಸುಮ್ನಾದೆ. ಅವ್ರು ಬಂದ್ರೆ ಬೈಯ್ತಾರೆ ಊಟ ತಕಂಡೋಗಿ ಕೊಟ್‌ಬುಡಮ' ಅಂದು ಹಿಟ್ ಅಡಕಿದ್ಲು. ಹಿಟ್ ಅಡಕಿ ಹೊತ್ಗ ಹೋದ್ಲು. ಸಣ್ಣ ಮಗ ಇತ್ತಲ್ಲ? ಅದು ಹಿಡ್ಕಂಬುಡ್ತು. ಹಾಲುಕೊಡ್ತಾ ಕುತಗಂದ್ಲೂ. ಇವ್ನೇನ್ ಮಾಡ್ದ? ಆಗ್ಲೆ ಏರ್ ಬಿಟಗಂಡ್ ಬಂದ್ಬಿಟ್ಟ. ಬಂದಿದ್ದೆ -

'ಏ ಯಾಕ್ ತರ್ಲಿಲ್ಲೆ ಹಿಟ್ಟಾ ?' ಅಂತ ಕೇಳಿದ. ಆ ತೋಟಿಗ ಬಂದವನೆ, ಕಂದಾಯ ಗಿಂದಾಯ ಕೊಡಬೇಕು. ಎಲ್ಲೋಗವ್ರೆ ? ಕರಕಂದ್ ಬರ್ತಿನಿ ಅಂತ ಹೋದ. ನೀವೆ ಬರ್ತೀರೀಂತ ಸುಮ್ನಾದೆ. ಹಂಗೂ ಹೊತ್ಕಂದ್ ಹೊಂಟೆ. ಈ ಮಗ ಹಿಡ್ಕಂತು ಅಂದಳು. ಮಗ ಹಿಡ್ಕಂತ? ನೀ ಪಿಸ್ಗ ಅಂದ. ಅವಳು ಸತ್ ಮನಿಕ್ಕೆಂದಳು. ಇನ್ನು ಮಕ್ಕಳು ಸುಮ್ಕಿದ್ದಾವ ? 'ಕಲ್ಲೊ' ಅಂತ ಅತ್‌ಬುಟ್ಟು ತಲೆ ಚಿಟ್ ಹಿಡ್ದ್‌ಬಿಡ್ತು. 'ನೀವೆಲ್ಲ ಪಿಸ್ಗ' ಅಂದ್ಬುಟ್ಟ. ಎಲ್ಲ ಸತ್ ಮನಿಕ್ಕೆಂದ್ರು. ನಾನು ಬೇರೆ ಬೇರೆಯೋರಿಗೆ ಹಿಂಗಂದ್ರೆ ಸಾಯ್ತಾರೇಂತ ತಾನೆ ಹೇಳಿದ್ದು. ನನಿಗೇನ್ ಅಲ್ವಲಾ ನೋಡಮ ತಡಿ 'ನನಿಗೆ ನನಿಗೆ ಪಿಸ್ಗ' ಅಂದ. ಅವನು ಹೊರಟ್ಹೋದ.

ತೋಟಿಗನ ಹೇಂಡ್ತಿ ನನ್ನಗಂಡ ಗೌಡ್ನ ಹೊಲದ ತಾವ್ಕೆ ಹೋದೋನು ಬರ್ಲೇಲ್ವಲಾ ಹಿಟ್ಟುಣ್ಣಾಕೆ. ಯಾಕ್ ಬರ್ಲಿಲ್ಲ ನೋಡಮ ಅಂದು ಹೊಲದತಾವ್ಕೆ ಹೋದ್ಲು. ಅಲ್ಲೋಗಿ ನೋಡ್ತಾಳೆ. ತನಗಂಡ, ಪಟೇಲ, ಅಮಲ್ದಾರ ಎಲ್ಲ ಸತ್ ಬಿದ್ದುದಾರೆ. ಏನ್ ಬಡಕಂತಾಳೆ. ಆಮೇಕೆ 'ಅವ್ನಟ್ಟಿಗೆ ಹೋಗಬ್ಯಾಡಿ ಪಿಸ್ಗಂದ್ರೆ ಎಲ್ಲ ಸತ್ತೇಹೊಯ್ತಾರೆ' ಅಂದ್ಬುಟ್ಲು. ಅವ್ನ ಹಟ್ಟಿಗೆ ನೀರಿಗೆ ಯಾರು ಬರ್ಲಿಲ್ಲ. ದನಕರ ಬುಡೋರುಯಿಲ್ಲ. ಅವಾಗ ಕಾಗೆ ಮುಟ್ತು. ಆಗ ಜನಮನ ಬಂದ್ರು.

ಹೇಳಿದವರು : **ಕೆಂಪೇಗೌಡ**, ಯಾಚೇನಹಳ್ಳಿ.

# ೪೬. ಕಿವುಡರ ಕಥೆ

ಊರುಹಿಂದೆ ಹೊಲ. ಅವ್ರು ಬೇಸಾಯ ಹೂಡ್ಕೊಂಡು ಹೋಗಿದ್ರು. ಅವ್ರ ಹೆಂಡ್ತೀನೂ ಕಿವುಡಿ, ಅವ್ರು ಮಗಳೂನು ಕಿವುಡಿ. ಅವ್ರಮ್ಮನೂ ಕಿವುಡಿ. ಅವ್ರು ಕಿವುಡ್ರೆ. ನಾಲ್ಕು ಜನನೂ ಬರೀ ಕಿವುಡ್ರೆ. ಅಲ್ಲಿ ಅವಾಗಿನ್ನ ಬೇಸಾಯ ಮಾಡಕೆ ಹೋರಿ ತಕ್ಕೊಂಡು ಹೋಗಿದ್ರು.

ಆ ಕಡೆಯಿಂದ ಬೇರೊಂದು ದಾರಿಯಿಂದ ಯಾರೋ ಬರ್‍ತಿದ್ರು. ಅವ್ರು ಎಷ್ಟು ಕೊಟ್ಯಪ್ಪ ಎತ್ಗೆ ಅಂಬ್ತ ಕೇಳಿದರು. ಯಪ್ಪಾ ನಾಲ್ಕು ಸೇರು ಜ್ವಾಳಾ ಹಾಕಿದ್ದೆ, ನಲ್ವತ್ತು ಪಲ್ಲ ಆಗೇದೆ ಅಂದ. ಅವ್ರುಗೆ ಕಿವಿ ಕೇಳ್ಸುಲಿಲವಲ್ಲ ? ಅವ್ರು ಅದಕೆ ಹೇಳಿದ್ರು: ಅಯ್ಯೊ ಅಯಪ್ಗ ಏನೂ ಕೇಳಿಲಿಲ್ವೇನೊ ಬಿಡು ಹೋಗ್ಲಿ ಅಂತ ಹೇಳಿದ್ರು. ಆಯಮ್ಮ ಮುದ್ದೆ ಹೊತ್ಕೊಂಡು ಬಂತು; ಅವ್ರ ಹೆಂಗ್ಸು. ಆ ಕಡೆಯಿಂದ ಹೋಗ್ತ ಇರೋರು ಇದ್ಕೆ ಎಷ್ಟು ಸೇರು ಜ್ವಾಳ ಹಾಕಿದ್ರೀಯಂತ ಕೇಳಿದ್ರು. ನಾನೆ ನಾಲ್ಕು ಸೇರು ಹಾಕಿದೀನಿ, ನಲ್ವತ್ ಪಲ್ಲ ಆಗದೆ ಅಂತ ಹೇಳ್ದೆ ಕಣೇ ಅಂತ ಅಯಪ್ಪ ಹೇಳ್ದ. ಅದ್ಕೆ ಅಯಮ್ಮ ಏನಂತು: ಅಯ್ಯೋ ವಾಲೆನಾದ್ರೂ ಮಾಡ್ಸುರೀ, ಕಾಸುನ್ಸರನಾದ್ರೂ ಮಾಡುಸ್ರಿ ಅಂತ ಅಯಮ್ಮ ಹೇಳಿದ್ಲು. ಮನಿಗೋಯ್ತು ಆಯಮ್ಮ.

ಮಗ್ಳತ್ರ ಹೋಗಿ ನಿಮ್ಮಪ್ಪ ವಾಲೇನೂ, ಕಾಸಿನ್ಸರನೂ ಮಾಡುಸ್ತಾರಂತೆ ಕಣಮ್ಮ ನಂಗೆ ಅಂತಂತೆ. ಅಯ್ಯೋ ಹುಡುಗ್ಗಾದ್ರು ಕೊಡು, ಮುದ್ಕಾಗಾದ್ರು ಕೊಡವ್ವ ಅಂಥ ಅಯಮ್ಮ ಹೇಳ್ಬಿಡ್ತು. ಆ ಹುಡ್ಗಿನೂ ಕಿವುಡಿ; ಮಗಳು. ಆಮೇಲೆ ತಿರಗ ಆಯಮ್ಮ ಹೋಗಿ ಅಜ್ಜಿ ಹತ್ರಕ್ಕೆ ಅಜ್ಜಿ ನನ ಮದ್ವೆ ಮಾಡ್ತರಂತೆ ಕಣಜ್ಜೀ ಅಪ್ಪ ಅಮ್ಮ ಅಂತು. ಅಯ್ಯೋ ಹಳ್ಸದ್‌ನಾದ್ರೂ ಕೊಡವ್ವ, ಬಿಸೀದ್‌ನಾದ್ರೂ ಕೊಡವ್ವ ಅಂತ ಹೇಳ್ತಂತೆ.

ಹೇಳಿದವರು : **ಆಲಮ್ಮ**, ದಂಡಿನಶಿವರ.

# ೪೭. ಮೂರು ಜನ ಹೆಂಡರು

ಒಂದೂರಲ್ಲಿ ಬಡವ. ಅವ್ನಿಗೆ ಮೂರ್‍ಜನ ಹೆಂಡ್ತೇರು. ಮಳೆಯಿಲ್ಲ. ಅವಾಗ ಊರಾಗೊಂದ್ ಹಬ್ಬಬಂತು. ಬಂಧುಬಳಗದೋರೆಲ್ಲ ಬರೋರಿದ್ರು. ಇವ್ನೇನ್ ಮಾಡ್ಯಾನು ? ಕಾಸಿಲ್ಲ. ಕಾಸಿಲ್ಲುದ್ಕೆಯ ಅಲ್ಲಿ ಇಲ್ಲಿ ಒಂದಿಷ್ಟು ಸಾಲಮಾಡ್ದ. ಸಾಲಮಾಡ್ಕೊಂದ್ ಬಂದು ಮೂರ್‌ಜನ ಹೆಂಡ್ತೇರಿಗೂ ಏನೇನ್ ತರಾನೆ ನಿಮಿಗೇಂತ ಕೇಳ್ದ. ನನಿಗೆ ಏನು ಬ್ಯಾಡ ಕಾಲುಂಗ್ರ ತಕಂಬಾ ಅಂದ್ಲು. ಹಂಗನ್ನತ್ಲುವಾ ಹೋದ. ಕಾಲುಂಗ್ರ ತಗಂದು ಬಂದ.

ಹಬ್ಬುದ್ದಿನ ಬಂತು. ಇವ್ರಾಗೆ ತಿಸ್ರಾಮುಸ್ರಾ ಸುರ್‍ವಾತು. ಕಿರಿಯೋಳು ಎದ್ದು ಕ್ವಾಣೆಗೀಣೆ ಕಸಗುಡುಸಾಕೆ ನಿಂತಗಂದ್ಲು. ನಡುಕ್ಲೋಳು ಆಚೆಗೀಚೆಗೆ ತಿರುಗಾಕ್ ನಿಂತಗಂದ್ಲು. ಹಿರೇಳು ಏನ್ಮಾಡಿದ್ಲು ? ಕ್ವಾಣೇಲಿದ್ಲು. ನೆಂಟ್ರು ಬರೋ ಸಮಯ. ವಳಗೆ ವಲೆನೆ ಹೊಚ್ಚಿಲ್ಲ. ಅಡ್ಗೆನು ಮಾಡ್ಲಿಲ್ಲ. ನೆಂಟ್ರು ಬರೋ ಹೊತ್ತಾಯ್ತಲ್ಲ ? ನೆಂಟ್ರು ಬಂದ್ರು. ಕಸಗುಡುಸ್ತುದ್ಲಲ ಇವಳೇನ್ಮಾಡಿದ್ಲು ? ಈಗ ಬಂದ್ರೇನವ್ವಾ ತಾಯಿ ಅಂದ್ಲು. ನಡುಕ್ಲೋಳು ಈಗ ಬಂದ್ರೇನವ್ವಾ ಅಂದ್ಲು. ಅವ್ಳು ಕ್ವಾಣ್ಯಾಗಿದ್ಲಲ್ಲ? ಅವ್ಳು ಹೊರಿಕೆ ಬಂದು ''ಎದ್ ಬಂದ್ರಾ ಅಕ್ಕಾ, ಈಚೆ ಬಂದ್ಬುಡಿ, ಎದ್ ಬಂದ್ರಾ ಅಕ್ಕಾ, ಈಚೆ ಬಂದ್ಬುಡಿ. ಇತ್ತ ಬಾರಕ್ಕ'' ಅಂತ ಅವ್ಳು ಕರದ್ಲು.

ಬಂದ ನೆಂಟ್ರು ಹಂಗ್ ನೋಡ್ತಾರೆ ಹಿಂಗ್ ನೋಡ್ತಾರೆ. ಒಳಾಗೆ ಬಗ್ಗಿ ನೋಡ್ತಾರೆ. ವಲೆನು ಹೊಚ್ಚಿಲ್ಲ ಮತಾನು ಪೂಜಿಲ್ಲ. ಕಾಯ್ನು ಒಡಿದಿಲ್ಲ. ಆರ್ತೀನು ಬೆಳಗಿಲ್ಲ. ಬಂದ್ ನೆಂಟ್ರೆಲ್ಲ ಮಖಮಖ ನೋಡ್ಕೆಂದು, ಸರಿ ಇವುರ್ದು ನ್ಯಾಯ ಅಂದು ಓಡಿದ್ರು ಕಿತ್ಕಂಡು.

ಹೇಳಿದವರು : **ಸೋಬಾನೆ** ಚಿಕ್ಕಮ್ಮ, 70 ವರ್ಷ, ಒಕ್ಕಲಿಗರು. ಹೆರಗನಹಳ್ಳಿ, ಬಿಂಡಿಗನವಿಲೆ ಹೋಬಳಿ, ನಾಗಮಂಗಲ ತಾಲ್ಲೂಕು.

# ೪೮. ಎಲ್ಲರೂ ಕಿವುಡರು

ಒಂದ್ನೂರಲ್ಲಿ ಕಿವುಡ ಕಿವುಡ್ರೆ ಇರ್‍ತಾರೆ. ಮನೇಲಿ ಗಂಡ, ಹೆಂಡ್ತಿ, ಮಕ್ಳು, ಅಜ್ಜಿ ಇದ್ರು. ಸರಿ ಇವ್ನು ಹೊಲದತ್ರ ಹೋಗಿ ನೋಡ್ತಾಯಿದಾನೆ. ಅಲ್ಲಿಗೊಬ್ಬ ದಾರಿಕಾರ ಬಂದಿದಾನೆ. ದಾರಿ ಪಕ್ಕದಲ್ಲೇ ಹೊಲ. ಅವನು -

''ಅಣ್ಣ ಯಾರಪ್ಪಾ? ಅಣ್ಣ ಮಾವಿನಕೆರೆಗೆ ದಾರಿ ಎಲ್ಲಾಸಿ ಹೋಗ್ತದಣ್ಣ?'' ಹಾಗಂತ ಕೂಗ್ದಾಗ, ಇವನೇನ್ಮಾಡ್ದ ? ''ಅಪ್ಪಾ.... ಇನ್ನೇನಿಲ್ಲ. ಈ ವರ್ಷ ಬೆಳೆ ಮಾಡಿದೀವಿ. ಬಹಳ ಚೆನ್ನಾಗಿದೆ. ಎಷ್ಟಾಗ್ತದೆ ಅನ್ನದು ಗೊತ್ತಿಲ್ಲ ''ಅಂದ.

ಅಯ್ಯ ನಿನ್ ''ಹೊಲ ಕೆಳ್ಳುಲ್ಲ ಮಾರಾಯ. ದಾರಿ ದಾರಿ ಎಲ್ಲಾಸಿ ಹೋಗುತ್ತೆ ? ಅಂತ ಕೇಳಿದೆ.'' ''ಏನೋ ಒಂದ್ ಐದಾರ್ ಪಲ್ಲ ಆಗಬಹುದು. ನಾನೀಗ್ಲೆ ಹ್ಯಾಗೇಳ್ಲಿ''? ''ಅಲ್ಲಪ್ಪ ನಾನು ದಾರಿಕೇಳ್ದೆ. ನಿನ್ನ ಹೊಲ ಕೇಳಲಿಲ್ಲ. ದಾರಿ... ಮಾವಿನಕೆರೆಗೆ ಎಲ್ಲಾಸಿ ಹೋಗಬೇಕಪ್ಪ ದಾರಿ ?''

''ಏನೋ ಒಂದ್ ಐದಾರ ಪಲ್ಲ ಆಗ್ಬೋದಪ್ಪ. ಕೋಯ್ತೀವಿ, ಬಡಿತೀವಿ.''

ಸರಿ ಮನಿಗೆ ಬಂದ್ಬುಟ್ಟ. ''ಏನೇ ನಮ್ಮಪ್ಪ ಆ ದಾರಿ ಪಕ್ಕದಲ್ಲೇ ಹೊಲ ಮಾಡ್ಬೇಕಾಗಿತ್ತೇ ? ಯಾರೇ ಹೋಗಿ ಬಂದ್ರೂ ಕೇಳ್ತಾ ಇರೂದೆ. ಎಷ್ಟು ಪಲ್ಲ ಆಗುತ್ತಪ್ಪ? ಏನಾಗುತ್ತೆ ? ಹಾಗೆ ಹಿಗೇಂತ ಕೇಳ್ತಾಯಿದಾರಲ್ಲ ?'' ಹಾಗೇಂತ ಹೆಂಡ್ತಿ ಕೈಲಿ ಅಂದಾಗ ಹೆಂಡ್ತಿ ಏನ್ಮಾಡಿದ್ಲು?.

''ಅಯ್ಯೋ ನನ್ನ್ಯಾಕ್ರಿ ಕೇಳ್ತೀರಿ ? ಕಾಸಿನಸರ ಕೊಟ್ರೂ ಹಾಕ್ಕಂತೇನಿ. ಚೈನ್‌ಸರ ಕೊಟ್ರೂ ಹಾಕ್ಕಂತೇನಿ'' ಹಾಗಂದು ಮಗಳತ್ರ ಓಡೋಗಿ ಬಿಟ್ಟು -

''ಅಮ್ಮಾ ನಿಮ್ಮ ತಂದೆ ಅವ್ರಿಗೆ ತಿರ್ಮಾನ ಹೇಳ್ಬಿಟ್ಟೆ ಕಣಮ್ಮ. ಕಾಸಿನಸರ ಕೊಟ್ರೂ ಹಕ್ಕಂತೇನಿ, ಚೈನಸರ ಕೊಟ್ರೂ ಹಕ್ಕತೇನೀಂತ ತೀರ್ಮಾನ ಹೇಳಿಬಿಟ್ಟೆ ಕಣಮ್ಮಾ''ಅಂತ ಮಗಳತ್ರ ಬಂದು ಅಂದಾಗ -

'ಅಯ್ಯೋ ಅವ್ವಾ ನನ್ನೇನ್ ಕೇಳಾಕ್ ಬಂದ್ರಿ ? ಮುದುಕನಿಗೆ ಕೊಟ್ರೂ ಮದುವೆ ಆಯ್ತೇನಿ, ಹುಡುಗನಿಗೆ ಕೊಟ್ರೂ ಮದುವೆ ಆಯ್ತೇನಿ''ಅಂದಳು.

ಸರಿ ಅಲ್ಲಿಂದ ಅವ್ರ ಅಜ್ಜಿ ಕುಂತಿದ್ಲಲ್ಲ ? ಆ ಅಜ್ಜಿ ಹತ್ರುಕೆ ಓಡೋಗಿಬಿಟ್ಟುಳು ಮಗಳು. ಓಡೋಗಿದ್ದೆ ''ಅಜ್ಜಿ ಅಜ್ಜಿ ಅಮ್ಮಾರಿಗೆ ತೀರ್ಮಾನ ಹೇಳಿಬಿಟ್ಟೆ ಕಣಜ್ಜಿ''. 'ಏನಂತ ಹೇಳ್ದೆ ತಾಯಿ''? ''ಅಜ್ಜಿ ನಾನು, ಮುದುಕನಿಗೆ ಕೊಟ್ರೂ ಆಯ್ತೇನಿ, ಹುಡುಗನಿಗೆ ಕೊಟ್ರೂ ಆಯ್ತೇನಿ ಅಂತ ಹೇಳ್ಬಿಟ್ಟೆ ಕಣಜ್ಜಿ. ಅಮ್ಮನಿಗೆ ತೀರ್ಮಾನ ಹೇಳಿಬಿಟ್ಟುದೇನಿ''.

''ಅಯ್ಯೋ ನನ್ನವ್ವ ನನ್ನೇನ್ ಕೇಳಾಕ್ ಬಂದೆವ್ವ ? ಕೂತಿರೋಳ್ನ ? ನೀವು ತಂಗ್ಳು ಕೊಟ್ರೂ ಉಣ್ತೇನಿ, ಬಿಸೀದ್ ಕೊಟ್ರೂ ಉಣ್ತೇನಿ''. ಹಿಂಗೆ ಒಂದೇ ಮನೇಲಿ ಕಿವುಡ ಕಿವುಡ್ರೆ ಇದ್ರು.

ಹೇಳಿದವರು : **ತಿರುಮಲಯ್ಯ,** 55ವರ್ಷ, ಒಕ್ಕಲಿಗ , ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು.

# ೪೯. ಭಗವಂತ

ಒಬ್ಬ ದೊಡ್ಡ ಸಾವಕಾರ ಹೊಸದಾಗಿ ದೊಡ್ಡದಾಗಿ ಮನೆ ಕಟ್ಟಿರೋನು, ಅರ್ಧ ಭಾಗವನ್ನು ಬ್ರಾಮುಂಡ್ರಿಗೆ ಬಾಡಿಗೆಗೆ ಕೆಟ್‌ಬಿಟ್ಟಿರೋನು. ಇನ್ನರ್ಧ ಭಾಗದಲ್ಲಿ ತಾವಿದ್ಕಂಡು ಯಾವಾಗ್ಲೂ ಕೋರ್ಟ್ ವ್ಯವಹಾರ ಮಾಡ್ತಿರೋನು. ಕೋರ್ಟ್ ವ್ಯವಹಾರ ಮಾಡ್ತಾಯಿದ್ರೆ ಎಲ್ಲರೂ ಆರಂಭ ಕೆಲ್ಸ ಮಾಡ್ಕೊಂಡಿದ್ರು. ಅವರವರ ಉತ್ಪತ್ತಿಯನ್ನು ಬೆಳ್ಕತಾ ಇದ್ರು. ಇವನು ಬಂದ್ ನೋಡ್ದ. ನಾನು ಈ ಕೋರ್ಟ್ ವ್ಯವಹಾರನೆ ತಿರಕ್ಕಂಡೆ. ಹಿಂಗಾಗಿ ಹೋಯ್ತಲ್ಲ ? ನಾನು ಅದೊಂದು ಕೆಲ್ಸ ಮಾಡ್ಲಿಲ್ಲ. ದಿನಸಿ ಬೆಳಿಲಿಲ್ಲ ಅಂದ್ಕಂಡು ಹಾಗೇ ಮನಿಗೆ ಬಂದೋನು ''ಏನೆ ? ಎಲ್ರೂ ಆರಂಭ ಮಾಡದು. ನಾವು ಹಿಂಗೆ ಇರದು. ಹಿಂಗಾದರೆ ಹಿಂಗೆ ಅಂದ. ನಾನೇನ್ರಿ ಮಾಡಕಾಗುತ್ತೆ ? ಅಂತ ಕೇಳಿದಳು. 'ಹಾಗಾದ್ರೆ ನಿನಿಗೊಂದ್ ಬುದ್ವಂತ್ಕೆ ಹೇಳ್ತೀನಿ ಮಾಡ್ತೀಯ?' ಅಂದ. 'ಅದೇನೇಳ್ರಿ ಮಾಡ್ತೇನಿ?' ಅಂದಳು, 'ಏನಿಲ್ಲ ನೋಡು ಕೋಳಿ ಕೂಗತ್ಗೆ ಆರು ಕಟ್ಗಂಡ್ ನಾನು ಹೋಗ್ತೇನಿ. ಅಷ್ಟತ್ಗೆ ನೀನು ಎಲ್ಡ್ ರೊಟ್ಟಿ ಹಕ್ಕೊಂದ್ ತಗಂದ್ ಬಂದ್ಬಿಡು. ನೀನು ಬರೋದ್ರೊಳಗಾಗಿ ಒಂತುಂಡು, ಹೊಲ ಹೊಡ್ದಿರ್ತೇನಿ. ಆಗ ನೀ ಎತ್ತಿಡ್ಕಂಡೆ ಮನಿಗೆ ಬಾ. ಇತ್ಕಡೆ ಹೊಲ ಉತ್ತಂಗೂ ಆಗುತ್ತೆ' ಅಂದ. 'ಹೂಂ ಆಗಲ್ರಿ', ಅಂದಳು.

ಸರಿ ಇವನು ಆರು ಕಟ್ಟಿಕೊಂಡು ಹೋಗಿದಾನೆ. ಈಯಮ್ಮ ಚಾಪೆ ಎತ್ತಿ ಕಸಗುಡ್ಸಿ ಬೂದಿ ತುಂಬಿ ಆಚೆ ಹಾಕಿ. ನೀರ್ ತಗಂಡೋಗಿ ಹಾಗ್ ಮಾಡಿ ಹೀಗ್ಮಾಡಿ, ಆಚೆಗೋಗಿ ಈಚೆಗೋಗಿ, ರೊಟ್ಟಿ ಹಾಕೊದ್ರೊಳಗಾಗಿ, ಎಂಟ್ ಗಂಟೆಆಗಿಹೋಗಿಬಿಡ್ತು. ಎಂಟ್‌ಗಂಟೆ ಆದ್ರೆ ಆಗ ಮೋಟ್ರಲ್ಲ. ನಡ್ಕಂಡೆ ಹೋಗ್ಬೇಕು. ಇವಳು ರೊಟ್ಟಿ ತರ್ಲೇ ಇಲ್ಲ ಅಂದುದ್ದು, ಆರು ಬಿಟ್ಕಂಡೆ ಬಂದ್ಬಿಟ್ಟ. ಎಷ್ಟೆ ಆದ್ರು ಸಿಟ್ಟಲ್ವೆ ? ರೊಟ್ಟಿ ತರ್ಲಿಲ್ಲ ಅಂದುಬುಟ್ಟ ಹೆಂಡ್ತಿ ಹಿಡ್ಕಂಡ್ ದಡಾದಡ್ನೆ ನಾಕೈದ್ ಏಟ್ ಹೊಡ್ದ್‌ಬಿಟ್ಟ. ಈಗ್ಲು ನಮ್ಮ ಅಕ್ಕಾ ತಂಗೇರು ಕಟ್ಟಿರತಕ್ಕಂತ ಶಾಸ್ತ್ರದಂತೆ ಆ ಗಂಡ ಹೆಂಡರು ಮುನಿಸ್ಕೊಂಡಾಗ ಶಿಶುವು ತೀರೊಯ್ತು ಅಂದಂಗೆ. ಆಗ ಇನ್ನೊಂದು ಗಳಿಗೆ ಅಲೆಲೆ ಗಿಲಿಗಿಲಿ ಅಂತ ಮುದ್ದಾಡ್ತಾರೆ. ಮುದ್ದಾಡತ್ಲು ಇನ್ನು ಪಕ್ಕದ ಮನೇಲಿ ಇದ್ಲಲ್ಲ ? ಬ್ರಾಮುಣನ ಹೆಂಡ್ತಿ. ಈವಯ್ಯ ಈಗ ಹೆಂಡ್ತಿನ ಹಿಡ್ಕಂಡ್ ದಡ್‌ಬಡ್ನೆ ಹೊಡ್ದ್‌ಬಿಟ್ಟ. ಈಗಾಗ್ಲೆ ಗಂಡಾಹೆಂಡ್ರು ಗಿಲಿಗಿಲಿ ಮುದ್ದಾಡ್ತವುರಲ್ಲ? ತಡಿ ಅಂತ ನನ ಗಂಡಂತಾಕು ನಾನು ಹೊಡಿಸ್ಗೊಂತೇನಿ ಅಂದು ಕೊಂಡುಳು. ಇವುನು ಯಾವುದೊ ಒಂದ್ ಮದುವೆ ಕಾರ್ಯಕ್ಕೆ ಹೋಗಿದ್ದ. ಬಂದಾಬಸ್ತಾಗಿ ಬೀಗ ಹಾಕಿ ಬಿಟ್ಲು. ಬೀಗ ಹಾಕಿ ಮನಿಗಿಬಿಟ್ಟುದಾಳೆ.

ಹನ್ನೆರ್ಡ್‌ಗಂಟೆ ಬಿಸ್ಲು. ಬಂದಿದಾನಲ್ಲ ''ಲೇ ಕದತೆಗಿಯೇ'' ಅಂದ. ಹೆಂಡ್ತಿ ಮುದ್ದಾಡ್ಬೇಕು ಅನಿಸಿತ್ತು. ಆಕೆ ಯಾಕೆ ತಗಿಲಿ ? ಯಾಕೆ ಬಿಡ್ಲಿ ? ಹಾಗೇಂತ ಅಂದಳು.

ಇವನು ಹೇಳಿ ಸಾಕಾದ, ಕೇಳಿ ಸಾಕಾದ. ತಗಿಲಿಲ್ಲ. ಇವನಿಗು ಸಿಟ್ಬತ್ತಿತ್ತಾ ? ತಿರುಗಿನಿಂದ ದಡಾದಡ್ನೆ ಒದ್ದ. ಹಾಂ ಹಾಂ... ಅಂದ್ಲು ಈಕೆ. ಏನಲೇ ಯಾಕೆ ಹೀಗೆ ಅಂದ. ಏನೂ ಇಲ್ಲ. ನನಿಗೆ ಮಕ್ಳಿಲ್ಲ. ಏನೂ ಇಲ್ಲ ಅಂದಳು. ಏನ್ಮಾಡನ? ಅಂದ. ಕಾಡಿಗೋಗಿ ತಪಸ್ ಮಾಡಾನ. ಭಗವಂತನ ಕೇಳ್ಕಂಡ್ರೆ ಮಕ್ಳ ಫಲ ಸಿಗುತ್ತೆ ಅಂದಳು. ನಡಿ ಹೋಗಾನ ಅಂತ ಹೊರಟರು.

ಕಾಡಿಗೋದ್ರು ತಪಸ್ ಮಾಡಿದ್ರು. ಭಗವಂತ ಪ್ರತ್ಯಕ್ಷವಾಗಿ ಒಂದ್ ಗಂಡು ಮಗು ಸಂತಾನವನ್ನು ಕೊಟ್ನಂತೆ. ಕೊಡತ್ಲು ಈಕೆ ಬಿಮ್ಮನ್ಸಿಯಾಗಿ ನವಮಾಸಗಳು ತುಂಬಿಬಂದು ಗಂಡುಮಗುವಿನ ಜನನವಾಯ್ತು. ಭಗವಂತನ ವರದಲ್ಲಿ ಹುಟ್ಟಿದ್ರಿಂದ ಇವ್ನಿಗೂ ಭಗವಂತಾಂತ ಹೆಸರಿಟ್ರು. ಯಾರಿಗೆ ? ಈ ಮಗುಗೆ. ಐದು ವರ್ಷವು ಆಯ್ತು. ಇಲ್ಲೆ ಕಬ್ಬಲಿ ಹತ್ರ ಐತೆ ಸ್ಕೂಲು. ಓದಾಕ್ ಹಾಕಾನ ಅಂದ ಗಂಡ. ಬ್ಯಾಡಿ. ಬೆಳ್ಳೂರು ಅಲ್ಲು ಬ್ಯಾಡಿ, ಮೈಸೂರು ಅಲ್ಲು ಬ್ಯಾಡಿ, ಬೆಂಗಳೂರು ಅಲ್ಲು ಬ್ಯಾಡಿ ಅಂದಳು, ಹಾಗಾದ್ರೆ ಮಗ ಓದೋದೆಲ್ಲಿ ಅಂತ ಕೇಳಿದ. ಹಾಗಲ್ಲ ಓದೋದು ಬ್ಯಾಡಾಂತ ಅಲ್ಲ. ಇಲ್ಲೆ ಹತ್ರುದಲ್ಲೆ ಓದಾಕ್ ಹಾಕಿದ್ರೆ ಅವ್ವುನ್ ನೋಡ್ಬೇಕು, ಅಪ್ಪನ್ ನೋಡ್ಬೇಕೂಂತ ಬಂದ್ಬಿಡ್ತಾನೆ. ದೂರಪ್ರದೇಶಕ್ಕೆ ಬಿಟ್ಬು ಬನ್ನಿ. ಸುಖವಾಗಿ ಓದಿಕೊಂಡಿರ್ತಾನೆ ಅಂದಳು.

ಏನ್ಮಾಡ್ಲಿಕ್ಕಾಗುತ್ತೇಂದು ಬೊಂಬಾಯಿಗೆ ಕರಕಂದ್ ಹೋದ್ನಂತೆ ಮಗನ್ನ. ಅಲ್ಲೊಂದ್ ಸ್ಕೂಲಿಗೆ ಸೇರ್ಸಿಬಿಟ್ಟು, ಒಂದ್ ಹೋಟ್ಲಿಗೆ ಊಟಕ್ಕೆ ನೇಮ್ಕ ಮಾಡಿಬಿಟ್ಟು, ಒಂತಿಂಗ್ಳಿಗೆ ಇಷ್ಟ್ ರೂಪಾಯಿ ಕೊಡ್ತೇನಿ, ನನ್ ಮಗನಿಗೆ ಸ್ಲೇಟು ಪುಸ್ತಕ ಎಲ್ಲ ಕೊಡ್ಬೇಕೂಂತ ತೀರ್ಮಾನ ಮಾಡ್ಕೆಂದ್ ಬಂದ್ಬಿಟ್ಟಿದಾನೆ.

ಹೀಗೆ ಓದಿಕೊಂಡಿರೋವತ್ಗೆ ಒಂದಾನೊಂದಿವ್ಸ ಸ್ಕೂಲು ಬಿಟ್ಬಾಗ ಒಬ್ಬ ಯಜಮಾನ್ರು ಏನ್ಮಾಡಿದಾರೆ? ನೀವು ಬಂನ್ರಪ್ಪ. ಏನು ಓತ್ತಾ ಇದೀರ ? ಏನ್ ಬರಿತಾಯಿದೀರ ? ಅಂದಾಗ ಅಯ್ಯೊ ಬಿಡು ತಾತ ಭಗವಂತ ಕೊಡ್ಬೇಕು ನಾವು ಓದ್ಬೇಕು, ಅದೇನ್ ನಮ್ಮಿಬ್ಯಾ? ಅಂದರು. ಇವ್ನಿದ್ನಲ ಈ ಹುಡುಗ ಭಗವಂತ ಇವ್ನು ಇದ್ನ ಕೇಳ್ಕೆಂಬುಟ್ಟು, ನಾನು ಕೊಡೊದಿಕ್ಕೆ ನಾನ್ಯಾಕೆ ಓದ್ಬೇಕೂ ಅಂದು ಪುಸ್ತಕ ಒಬ್ಬನಿಗೆ ಕೊಟ್ಟ. ಸಿಲೇಟು ಒಬ್ಬನಿಗೆ ಕೊಟ್‌ಬಿಟ್ಟ. ಆ ಪಟ್ಣದಲ್ಲೆಲ್ಲ ತಿರುಗಿ ಬಂದು ಹೊಟ್ಲಲ್ಲಿ ಊಟ ಮಾಡದು. ಸುಮ್ನಗಿರುದು. ಇತ್ಕಡೆ ತಂದೆ ನನ್ನ ಮಗ ಓತ್ತಾನೇಂತ ಹೊಲಮನೆ ಆಸ್ತಿಪಾಸ್ತಿ ವಡವೆ ವಸ್ತ್ರ ಎಲ್ಲ ಮಾರಿ ಮಾರಿ ಕಳ್ಸಾಕ್ ಸುರುಮಾಡ್ದ. ಇವ್ನು ತಿಂದ್ ಊದಿ ಊದಿ ಒಂದಂಕಣದಗಲ ಬೆಳೆದುಬಿಟ್ಟ. ಕಷ್ಟಪಟ್ ಓದ್ಲಿಲ್ಲ. ಅಲ್ಲಿಗೆ ಇವುನದೆಲ್ಲ ತಿರೋಗಿಬಿಡ್ತು. ಆ ಹೊಟ್ಲೋನು ಏನಪಾ ಈ ತಿಂಗಳು ನಿಮ್ಮ ತಂದೆ ದುಡ್ಡೆ ಕಳ್ಸಿಲ್ಲ ಅಂದರು. ಸರಿ ಹಾಗಾದ್ರೆ ನಾನೆ ಹೋಗಿ ಇಸ್ಗಂಡ್ ಬರ್ತೇನಿ ಅಂತ ಹೊರಟ.

ಮನೇಲಿ ತಂದೆ ಇದ್ದಿಲ್ಲ. ತಾಯಿ ಇದ್ಲು. ಬಂದ. ಬಂದ ತಕ್ಷಣ ಯಪ್ಪಾ ಬಂದೇ ನೋಂತ ತಬ್ಕಂದ್ ಮುತ್ ಕೊಡಾಕ್ ಹೋದ್ಲು. ಈ ಕಡೆ ಕೈ ಎಟಕಲಿಲ್ಲ. ಈ ಕಡೆನು ಕೈ ಎಟಕಲಿಲ್ವಂತೆ. ಅಷ್ಟು ದಪ್ಪ ಆಗಿದಾನೆ. ಕುರ್ಚಿಮ್ಯಾಲೆ ಕುಂದುರ್ಸಿದ್ರೆ ಕುರ್ಚಿ ಮುರ್ದೋಗುತ್ತೋ ಏನೋ ಅಂದು ಮಂಚದ ಮ್ಯಾಲೆ ಕುಂದುರ್ಸಿದ್ರು. ಅಷ್ಟೊತ್ಗೆ ಬ್ರಾಹ್ಮಣ ಬಂದ. ಬಗ್ಗಿ ನೋಡ್ದ. ಇಷ್ಟು ದಪ್ಪಾಗಿರೋನು ನನ್ನ ಮಗನ ಅಂದು, ಮಗು ಯಾವಾಗ ಬಂದೆಪ್ಪ ಅಂತ ಕೇಳಿದ. ಈಗ ಬಂದೆ ಅಪ್ಪಾ ಅಂದ. 'ಎಲ್ಲಿಗಂಟ ಓದಿದೆಪ್ಪ ಮಗು?'' ''ನನ್ಹೆಸ್ರು ಏನಂತ ಕಟ್ಟಿದಿಯಪ್ಪ?'' ನಿನ್ನ ಹೆಸ್ರು ಭಗವಂತ. ಹುಡುಗ್ರೆಲ್ಲ ಭಗವಂತ ಕೊಡ್ಬೇಕು ನಾವು ಓದಬೇಕು ಅಂತಿದ್ದುರು. ನಾನು ಓದಿಲ್ಲ. ನಾನ್ಯಾಕಪ್ಪ ಓದ್ಲಿ ? ಅಯ್ಯೋ ಭಗವಂತ ನಿನಗೋಸ್ಕರವಾಗಿ ಹೊಲಮನೆ ಆಸ್ತಿ ವಡವೆನೆಲ್ಲ ಕಳಕೊಂಡೊ. ಗಂಡಹೆಂಡ್ತಿ ಒಂದ್ ಪಾವಕ್ಕಿ ಹಂಚ್ಗೇಂದ್ ಉಣ್ಣೋದೆ ಕಷ್ಟಕೆ ಬಂತೆ ? ಇವ್ನಿಗೆ ಎಲ್ಲಿ ಹೊಂದಿಸ್ಲಪ್ಪಾ ಸೇರ್ ಪಾವಕ್ಕಿ ಅನ್ನವಾ... ? ಇವುನು ಓದದಿದ್ರೆ ಅಷ್ಟೇಹೋಯ್ತು. ಏನ ಮಗ ಒಂದೂರ್ನಲ್ಲಿ ನಿಮ್ಮ ಸೋದರಮಾವ ಇದಾರೆ ಗಣೇಶಭಟ್ಟಾಂತೇಳಿ, ಅವರ ಹತ್ತಿರ ವಿದ್ಯಾನಾದ್ರು ಕಲ್ತಕ ಹೋಗು ಅಂದ.

ಸೋದರಮಾವನ ಮನಿಗೆ ಹೋದ. ಮಂಧ್ಲಿಗೆ ಅದು ಹಾಕಿ ಕುಂದ್ರಿಸಿದ್ರು.''ಏನಪ್ಪಾ ಬಂದಿದ್ದು ಇಷ್ಟುದೂರ ?'' ಅದೆಮಾವ ನಿನ್ ವಿದ್ಯಾ ಕಲಿಬೇಕೂಂತ ಬಂದೀನಿ ಮಾವ. ಅಯ್ಯೊ ನನ್ನ ವಿದ್ಯಾ ಕಳ್ಳವಿದ್ಯಾ, ಚೋರವಿದ್ಯಾ. ಓ ಅದ್ನೆ ಕಲಿಯಾಕ್ ಬಂದೀನಿ ಮಾವ. ಆಗ ಮಾವ್ನು ಬಾಮೆದ್ನು ಇಬ್ರು ಕಳ್ತನಕ್ ನುಗ್ಗಿದ್ರು. ಅದೇ ಊರ್ನಲ್ಲಿ ಒಬ್ಬ ಜೋಯಿಸ್ರು ಮನೆ. ಜೋಯಿಸ್ರು ಯಾವಗ್ಲೂ ಒಂದೆಲ್ಡ್ ಗಂಟೆಕಾಲ ಹರಿಕಥೆ ಪುರಾಣ ಹೇಳೋದು ಅಭ್ಯಾಸ. ಆವಾಗ ಜೋಯಿಸ ಏನ್ ಮಾಡಿದ್ರು? ಗಂಡ ಹೆಂಡ್ತಿ ಇಬ್ರೆ. ಸ್ವಲ್ಪ ಅನ್ಕೂಲವಾಗಿರೋರು. ಹೆಂಡ್ತಿಗೆ ಹೇಳ್ದ: 'ನೋಡೆ ನಾನೊಂದ್ ಎಲ್ಡ್ ಗಂಟೆ ಗುಡಿಗೆ ಹೋಗಿ ಹರಿಕಥೆ ಮಾಡಿ ಬರ್ತೇನಿ. ನೀನು ಅಷ್ಟೊತ್ಗೆ ಹಾಲ್ಕೀರ್ ಮಾಡಿಡೆ,' ಆಗಲಿ ಅಂದ್ಲು. ಅವರು ಹೋದ್ರು. ಈಕೆ ಯಾಲಕ್ಕಿ ಸುಂಟಿ ಹಾಕಿ, ಹಾಲಕೀರ ಮಾಡಿ, ಒಲೆಮ್ಯಾಲೆ ಮುಚ್ಚಿಟ್ಳು. ಇನ್ನು ಗಂಡ ಬರೊವರ್ಗು ಇರ್ಬೇಕಲ್ಲ ? ಹಾಗೆ ಗದ್ದುಕ್ ಕೈಕೊಟ್ಗಂದ್ ನಿತಗಂದ್ ಬಿಟ್ಟಿದ್ದಾಳೆ.

ಸರಿ. ಇವರಿಬ್ರಾಳು ಅದೇ ಮನೆ ನುಗ್ಗಿದ್ದಾರೆ. ನುಗ್ಗತ್ಲೆ ಮುಚ್ಗೆ ತಗ್ದು ನೋಡಿದಾನೆ, ಗಮುಗಮ ಅಂತಂತೆ. ಮಾವಾ ಅಂದ. 'ಏನಪ್ಪ? ಏನೋ' ಅಂದ್ರು. ಏನಾದ್ರು ಬಾಯಿಗೆ ಬರಕಿಲ್ವಲಾ. ಅವಾಗ ಅದ್ರಾಗೆ ಕೈಯಿಟ್ಟು ಬಾಯಿಗೆ ಸವರಿದ್ನಂತೆ. ಓ ಬಾರಿ ರುಚಿಯಾಗಿದೆ ಕಣಯ್ಯ ಅಂದು ಕುಂತಕಂದ್ ಬಿಟ್ರು. ಸರಿ ಮಡ್ಕೆ ತಳಾನು ಬಿಡ್ಲುಲ್ಲ. ಎಲ್ಲ ತಿಂದಾಕಿಬಿಟ್ರು. ಅಷ್ಟತ್ಗೆ ಜೋಯಿಸ್ರು ಬಂದ್ರು. ಲೇ ಕತ್ತಗಿಯೇ ಅಂದ್ರು. ಬಂದ್ಬುಟ್ನಲ್ಲ ಏನ್ಮಾಡದು ? ಏನು ಮಾಡಾದ ಮಾವ ? ನನ್ ತಲೆಮ್ಯಾಲೆ ಪೆಟ್ಗೆನ್ ಹೊರ್ಸು. ಅವನು ಜಗಳಾಡಿದ್ರೆ ನಾನು ಹೊತ್ಗೊಂದ್ ಹೋಗ್ತೇನೆ. ಹುಚ್ಚ, ಆಗ ನಾನು ಒಬ್ಬ ಸಿಗಹಕ್ಕೆನಲ್ವೇನೊ? ಬಾಯಿಲ್ಲಿಅಂದು ಭಗವಂತನ್ನ ಅಟ್ಟದ ಮ್ಯಾಲೆ ಕುಂದುರ್ಸಿ, ಈ ಗಣೇಶಭಟ್ಟ ಮಂಚದ

ಅಡಿಗೆ ಸೇರಿಕೆಂದ್‌ಬಿಟ್ಟ. "ಲೇ ಕತ್ತಗೀಯೇ". ಆಗ ಎದ್ದು ಕದ ತೆಗೆದ್ಲು. ನೀರ್‌ಗೀರ್ ಕೊಟ್ಲು. ಹಾಂ ತಗಂಬಾರೆ ಆ ಕೀರಾ ಅಂದ. ಹೋಗಿ ನೋಡ್ತಾಳೆ. ಪಾತ್ರೆ ತಳದಲ್ಲಿ ಒಂಚೂರಿಲ್ಲ. ಎಲ್ಲ ತಿಂದಾಕಿಬಿಟ್ಟಿದಾರೆ. ಮಾಡಿರತಕ್ಕಂಥ ಪದಾರ್ಥ ಇಲ್ಲದಮ್ಯಾಲೆ ಇವಳಿಗೂ ಬಯಲ್ವೆ ? ಬಾಕ್ಲಿಗೆ ಬಂದ್ ನಿಂತಗಂಡ್ಲು. 'ಹಾಂ ತಗಂದ್ ಬಾರೆ ಕೀರಾ'. ಹೂಂ ಕೀರು ಇಲ್ಲ. ತಗಂಡ್ ಬಾರೇಂತೀನಿ. ಹೂಹುಂ ಕೀರು ಇಲ್ವೇ ಇಲ್ಲ ಅಂದ್ಲು. ನನಗೆ ಮಾಡಿದ್ದ ರುಚಿಯಾಗಿದೇಂತ ಎಲ್ಲ ತಾನೆ ತಿಂದಾಕಿ ಬಿಟ್ಟಿದಾಳಲ್ಲಂತಾ ಹೆಣ್ತಿಗೆ ಹಿಡ್ಕಂಡ ದಡಾದಡ್ನೆ ನಾಕ್ ಹೊಡ್ದ. ಇವಳು ನಿರಪರಾಧಿ; ಒಂಚೂರು ತಿಂದೋಳಲ್ಲ. "ಅಯ್ಯೊ ಭಗವಂತ ನನ ಗಂಡನಿಗೇನಾರ ಮೋಸ ಮಾಡಿ ನಾನು ಹಾಗೆ ತಿಂದುದ್ರೆ ಮ್ಯಾಲಿರೊ ಭಗವಂತ ನೋಡ್ಲೋ ದೇವ್ರ" ಅಂದ್ಲು. ಹುಂ ನಾನೆಯ ಅಂದ ಇವ್ನ. ಲೋ ನಿನ್ಯಾರೋ ? ನಾನು ಭಗವಂತ. ಕೀರು ತಿಂದೋರು ಯಾರೋ ? ನಮ್ಮಾವ್ನ ನಾನುವೆ. ನಿಮ್ಮ ಮಾವ ಯಾರೋ? ಗಣೇಶಭಟ್ಟ .ಎಲ್ಲವ್ನೊ ? ನಿನ್ನ ಮಂಚದ ಅಡಿಗವ್ನೆ. ಅಪ್ಪಾ ಬರೋದಿಲ್ಲ. ಈಗ ಬಂದಿದ್ದು ತಪ್ಪಾಯ್ತುಂತ ಹೇಳಿ ಹೋದ.

ಹೇಳಿದವರು : **ತಿರುಮಲಯ್ಯ,** ಹೆರಗನಹಳ್ಳಿ.

# ೫೦. ಉಪಾಯ

ಒಂದೂರಲ್ಲಿ ಒಬ್ಬ ದೊರೆ ಇದ್ನಂತೆ. ದೊರೆಗೆ ಇಬ್ಬರು ಹೆಣ್ ಮಕ್ಕಳಿದ್ರಂತೆ. ಕೆಲವಾರು ದಿವಸ ದೊರೆತನ ಮಾಡಬಿಟ್ಟು ಒಳ್ಳೆ ವಯಸ್ಸಿನ ಕಾಲದಾಗೆ ದೊರೆ ತೀರ್ಕೊಂಬಿಟ್ನಂತೆ. ದೊರೆ ತೀರ್ಕೊಂಡ್ರೆ ಇನ್ನ ದೊರೆಸಾನಿ ಒಬ್ಬಳೇ ಆದಳು. ಇಬ್ರು ಹೆಣ್‌ಮಕ್ಳು. ನಮ್ಮ ಇಲಾಖೆ ನೋಡ್ಕೋಳ್ಳೋರು ಯಾರು ಇಲ್ಲ ಅಂತ ದೊರೆಸಾನಿ ಚಿಂತೆ ಮಾಡ್ತಾ ಇದ್ಲು. ಚಿಂತೆ ಮಾಡ್ತ ಇರ್ಲಾಗಿ, ಇನ್ನೊಂದು ಪಟ್ಣದ ದೊರೆ ಬಂದು ನಿನ್ ಪಟ್ಣ, ನಿನ್ ದೇಶ ನಾನ್ ನೋಡ್ಕೋತಿನಮ್ಮ, ನೀನೇನು ದಿಗ್ಲು ಬೀಳಬೇಡ ಅಂತ ಅಂದ್ನಂತೆ ದೊರೆ. ದೊರೆ ಅಂದಾಗ ದೊರೆಸಾನಿ ಧೈರ್ಯ ಮಾಡಕ್ಕೊಂಡ್ಲು. ಏನಂತ ? ಆಯ್ತು ನಮ್ ಪಟ್ನದಾಗೆ ಗಂಡಸ್ರಿಲ್ಲ, ನಮ್ ಅಣ್ಣ ತಮ್ಮದಿರಂಗೆ ನಮ್ಮನ ನೋಡ್ಕೋತಾನೆ. ನಮಗೂ ಒಬ್ಬ ಅಣ್ಣ ಇದ್ದಂಗೆ ಅಂತ ದೊರೆಸಾನಿ ನಂಬಿಕೆ ಇಟ್‌ಕೊಂಡ್ಲು.

ಇನ್ನು ಬೇರೆ ಪಟ್ಣದ ದೊರೆ ಏನ್ ಆಲೋಚನೆ ಮಾಡಿಕೊಂಡವ್ನೆ? 'ದೊರೆ ಸತ್ತೋದ, ಈ ದೊರೆಸಾನಿನ ನಾನು ಮೋಹಿಸ್ಕೋಬೇಕು' ಅಂತ. ಈ ದೊರೆ ಈ ಪಟ್ಣಕ್ ಬಂದು ದೊರೆಸಾನಿಗೆ ಈ ತರ ಹೇಳ್ತಾ ಅವ್ನೆ. ಹೇಳುವಾಗ "ಏನಮ್ಮಾ ನಾನ್ ಈ ತರ ನಿನ್ನನ್ನ

ಮೋಹಿಸಬೇಕು ಅಂತ ಬಂದಿದ್ದೀನಿ ಎಂಗೆ?'' ಅಂದ. ಅಣ್ಣ ಇನ್ನ ಮೂರ್ ದಿವ್ಸಕ್ ಬಾ ಹೋಗು ಅಂತ ಅಂದ್ಲು. ಯಾರು ? ದೊರೆಸಾನಿ. ಅನ್ನೋವೊತ್ಗೆ ಬೇಕಾದ್ದು ಬೇಡವಾದ್ದು ಎಲ್ಲ ಕಟ್ಕೊಂಡು ದೊರೆ ಬಂದ್ನಂತೆ. ಇಂಗೇ ಮಂಚ ಹಾಕ್ಸಿದ್ಲಂತೆ. ಮಂಚದ ಮ್ಯಾಲೆ ಇನ್ನೊಂದ್ ಪಟ್ಣದಿಂದ ದೊರೆ ಬರೋ ಹೊತ್ಗೆ ದೊರೆಸಾನಿ ಮಲಗಿದ್ಲಂತೆ.

ಮಲಗಿದ್ ಹೊತ್ನಾಗೇ ದೊರೆ ಬಂದು 'ದೊರೆಸಾನಿ' ಅಂದ. ಹೂಂ ಬರ್ರಿ ಅಂದಳು. ಬಂದು ಅಯಪ್ಪ ತಲೆಅಡೀಕೆ ಕೂತ್ಕೊಂಡ್ನಂತೆ. ಯಾರು? ಆ ದೊರೆ. ಕೂತ್ಕೊಂಡ್ರೆ '' ಅಣ್ಣ ನನ್ನ ತಲೆ ಅಡೀಲಿ ಕೂತ್ಕೊಂಡಿದಿಯಾ ಮ್ಯಾಲೆ ಎದ್ದೇಳಪ್ಪಾ'' ಅಂತ ಅಂದ್ಲಂತೆ. ಅನ್ನೋವತ್ಗೆ ದೊರೆಸಾನಿ ಅಣ್ಣ ಅಂದ್‌ಬಿಟ್ಲಲ್ಲ. ಈ ದೊರೆಸಾನಿ, ನಾನ್ ಮೋಹಿಸೋದು ಯಾವಾಗ ಅಂತ ಅಂದುಬಿಟ್ಟು, ಎದ್ದು ಮಗ್ಲಾಗೇ ಕೂತ್ಕೊಂಡ. ಏಕೆ ಕೂತ್ಕೊಂಡಿದಿಯಾ ಒಳಗ್ ಎದ್ದೋಗಪ್ಪಾ ಅಂದ್ಲಂತೆ. ಏನಪ್ಪ ಇದು ಕಥೆ ಇಂಗಾಯ್ತು ದೊಡ್ಡಪ್ಪ ಅಂದಬಿಟ್ಲು. ಮೋಹಿಸೋದು ಇನ್ಯಾವಾಗ ? ಇದ್ ಸರಿಯಲ್ಲ ಅಂದಬಿಟ್ ಕಾಲಡಿ ಕೂತ್ಕೊಂಬಿಟ್ನಂತೆ. 'ಅಪ್ಪ ನನ್ ಕಾಲಡಿ ಯಾಕ್ ಕೂತ್ಕೊಂಡಿದಿಯಾ? ಈ ಕರ್ಮ ನಾನ್ ಎಷ್ಟು ದಿವ್ಸ ಅಂತ ತಿರ್‍ಸೋದು'' ಅಂತ ಅಂದ್ಲು. ಚಿಂತಕ್ರಾಂತನಾಗಿಹೋಗ್‌ಬಿಟ್ನಂತೆ ದೊರೆ. ಆವಾಗ ದೊರೆಸಾನಿ ಎದ್ದು ಓಡಾಡುತ್ತಿದ್ಲಂತೆ. ಆಗ ದೊರೆ ಚಿಂತೆ ಮಾಡ್ಕೊಂಡು ಇವಳ ಮಂಚ ಅತ್ತದ್ ಹ್ಯಾಗೆ? ನಾನ್ ಮೂರು ತಿಂಗ್ಳು ಪಟ್ಣ ವಿಚಾರೆಲ್ಲ ನೊಡ್ಕೊಂಡ್ರು ನನಗೆ ಇಂತ ಕೆಲಸ ಕೊಟ್‌ಬಿಟ್ಟಳಲ್ಲ ? ನಾನು ಏನು ಮಾಡೋದು ? ಇಂಥ ದೊರೆಯಾಗಿ ಹುಟ್ಟಿ ಈ ದೇಶದಾಗ್ ಇದ್ದು ಸುಖವಿಲ್ಲ. ಎತ್ತಾದ್ರು ಹೋಗ್‌ಬಿಡಬೇಕು ಅಂತ ದೊರೆ ಹೋಗತ್ತಿದ್ನಂತೆ.

ದೊರೆ ಹೋಗತಾ ಇದ್ರೆ, ಚುಂಚನಗಿರಿ ಬೆಟ್ಟಂತ, ಬೆಟ್ಟದ ಮ್ಯಾಲೆ ಒಬ್ಬ ತಾತ ಕುರಿ ಮೇಯಿಸ್ಕೊಂಡಿದ್ನಂತೆ. ತಾತ ಕುರಿ ಮೇಯಿಸಿಕೊಂಡು ತಲೆ ಬಗ್ಗಿಸಿಕೊಂಡ್ ಕುಂತಿದ್ರೆ ಈಯಪ್ಪ ಬಿರಿಬಿರಿ ನಡೀತಿದ್ನಂತೆ. ಆಗ ಏಕಯ್ಯ ದೇಶದ ಸಂಚಾರ ಮಾಡೋ ದೊರೆ ನಿನ್ನೇನ್ ಇಂಗ್ ವೋತಿಯಾ ? ಅಂತ ಕೂಗಿದಾಗ ''ಹೋಗಯ್ಯ ನಿನ್ ದೇಶ ಏನು ? ನಿನ್ನ ಪಟ್ಣ ಏನು? ? ನನ್ನ ಚಿಂತೆ ನಾನು ಮಾಡ್ಕೊಂಡು ಹೋಗ್ತೀನಿ'' ಅಂದ. ''ಬಾರಯ್ಯ ಏನ್ ಕೇಳಿದ್ರು ನಾನೇಳ್ತೀನಿ '' ಅಂತ ತಾತ ಕೂಗಿದ್ನಂತೆ. ಕುರಿ ಮೇಯಿಸೋ ತಾತ ಕೂಗಿದ್ರೆ ಇಂಗಿಂಗ್ ಸಮಾಚಾರ. ಇಂಗೆ ಮೂರ್ ತಿಂಗಳಿಂದ ಪಟ್ಣದಾಗೆ ದೊರೆಸಾನಿ ನಾನೆ ನಿಗಾ ನೋಡ್ಕೊಂಡು ಪಟ್ಣದಾಗ ಆಡಳಿತ ನೋಡ್ಕೊಂಡಿದ್ದು, ಈವತ್ತು ಅವಳ ಮಂಚ ಅತ್ತೋದಕ್ ವೋಗಿದ್ರೆ ಮಗ್ಲಲ್ಲಿ ಕೂತ್‌ಕೊಂಡ್ರೆ ಅಣ್ಣ ಅಂತಾಳೆ, ತಳದಡಿ ಕೂತ್ಕೊಂಡ್ರೆ ಅಪ್ಪ ಅಂತಾಳೆ, ಕಾಲಡಿ ಕೂತ್ಕೊಂಡ್ರೆ ಏನೋ ಅಪ್ಪ ಅಣ್ಣ ಅಂದ್ ಬಿಟ್ಲು. ಮಂಚ ಅತ್ತಾಕೆ ನನ್ನಿಂದಾಗ್ಲಿಲ್ಲ. ಏನ್ ಮಾಡ್‌ಬೇಕ್ ತಾತ ? ಅಂತ ಅದ್ನಂತೆ.

ತಾತ ಏನ್ ಮಾಡ್ದ ? ಎರಡು ಕೈ ಎತ್ತಿ ಇಂಗ್ ತೋರ್‍ಸಿದ್ನಂತೆ. ಇದೆಷ್ಟು ಅಂತ

ಅಂದ್ನಂತೆ. ಹತ್ತು ತಾತ ಅಂದ್ನಂತೆ. ಅವಳೆದ್ರಾಗೇ ಹೋಗಿ ಈವತ್ತು ಮಂಚ ರೆಡಿಮಾಡು, ಮತೆ ಬತ್ತೀನಿ ನಾನು ಅಂತನ್ನು ದೊರೆಸಾನಿಗೆ. ಅವಳು ಮಂಚ ರೆಡಿಮಾಡ್ತಾಳೆ. ಮಾಮೂಲಾಗಿ ಹೋಗ್ ಕೂತ್ಕೊಂಡಿದ್ದಂತೆ ಕಾಲಡಿ ಕೂತ್ಕೋ. ಅಪ್ಪಾ ಅಂತಾಳೆ "ಅಪ್ಪಾ ಗಿಪ್ಪಾ ಏನಿಲ್ಲ. ಇದೆಷ್ಟು ಹೇಳು" ಅಂತ ಅನ್ನು. ಹತ್ತು ಅಂತಾಳೆ. ಅವಾಗ ಹತ್ತಿದೀನ್ ನೋಡ್ ಮಂಚನಾ ಅಂತ ಹತ್ತೋಗಯ್ಯಾ" ಅಂತಾನೆ ದೊರೆಗೆ ಕುರಿ ಮೇಯ್ಸೋ ತಾತ.

ಹೇಳಿದವರು : **ಮುನಿಯಕ್ಕಯ್ಯ.** ಚೋಳೂರು, ದೊಡ್ಡಬಳ್ಳಾಪುರ ತಾಲ್ಲೂಕು.

## ೫೧. ಹೆಂಡತಿಯ ಒಗಟು

ಒಂದೂರಲ್ಲಿ ಒಂದು ಹೆಣ್ಣಿಗೂ ಗಂಡಿಗೂ ಮದ್ವೆ ಮಾಡಿದ್ರು. ಅವರಿಬ್ರುನ್ನು ಒಂದು ರಾತ್ರಿ ಪ್ರಸ್ತಕ್ಕೆ ಬಿಟ್ರು. ಪ್ರಸ್ತಕ್ಕೆ ಬಿಟ್ಟಾಗ ಆ ಹೆಣ್ಣು ಗಂಡನ್ಗೆ ಹೇಳಿದಳು; ಹಿಂದು ಬರ್ಬೇಡ, ಮುಂದು ಬರ್ಬೇಡ. ಮಧ್ಯದಲ್ಲೂ ಬರ್ಬೇಡ ಅಂತ. ಅದ್ಕೆ ಅವ ರಾತ್ರಿ ಎಲ್ಲ ಏನೂ ಮಾಡ್ಲಿಲ್ಲ.

ಬೆಳಿಗ್ಗೆ ಎದ್ದೋನೆ ಊರ ಕಡೆ ದಾರಿಹಿಡ್ಕೊಂಡು ಹೋಯ್ತಾಇದ್ದ. ದಾರೀಲಿ ಒಬ್ಬ ಮುದ್ಕಿ ಸಿಕ್ಕಿದ್ಲು. ಇವ್ನನ್ನ ನೋಡಿ ಎಲ್ಲೋಗಿದ್ದ ಮಗ ? ಬಾ ಇಲ್ಲಿ. ಯಾಕೆ ಸಪ್ಪಗಿದ್ದಿ? ಏನಾಯ್ತು ಅಂತ ಕೇಳಿದ್ಲು. ಬೇಜಾರೇಲಿ ಹೋಯ್ತಿದ್ದ ಇವ್ನು ಅಯ್ಯೋ ಹೋಗಮ್ಮ, ನಿನ್ಗೇನು ? ನೀನೇನು ಹಾರಿಸೋಳು ತೀರಿಸೋಳು ಅಂದ.

ಅದ್ಕೆ ಆ ಮುದ್ಕಿ ಹಾರ್ಸೋದಾದ್ರೆ ಹಾರ್ಸ್ತೀನಿ. ತೀರ್ಸೋದಾದ್ರೆ ತೀರಿಸ್ತೀನಿ. ಅದೇನು ಹೇಳು ಅಂದ್ಲು. ಈ ವರ್ಷ ನನ್ಗೆ ಮದ್ವೆ ಆಯ್ತು. ರಾತ್ರಿ ಪ್ರಸ್ತಕ್ಕೆ ಬಿಟ್ರು. ಆಗ ನನ್ನೆಂಡ್ರು ಮುಂದು ಬರ್ಬೇಡ, ಹಿಂದು ಬರ್ಬೇಡ, ಮಧ್ಯದಲ್ಲೂ ಬರ್ಬೇಡ ಅಂದ್ಲು. ನಾನು ಇನ್ನೆಂಗೆ ಮಾಡ್ಲಿ ? ಅದ್ಕೆ ವಾಪಸ್ಸು ಬಂದೆ ಅಂದ.

ಮುದ್ಕಿ ಒಂದು ಪ್ಲಾನು ಹೇಳ್ಕೊಡ್ತೀನಿ, ಹಂಗೆ ಮಾಡು ಅಂದಳು. ಆಳ್ಳಿ ಎಲೆ, ಆಲದ ಎಲೆ, ಎಂತೆಂತವೋ ಹತ್ತು ಎಲೆ ಕಿತ್ಕೋ. ತಿಂಡಿತೀರ್ಥ ಎಲ್ಲಾನು ತಕ್ಕೊಂಡೋಗಿ ಕೊಟ್ಟು, ಹಾಸ್ಗೆಮ್ಯಾಲೆ ಕುಂತ್ಕೊಂಡು ತಿಂದು ಅದು, ಇದು ಚೆನ್ನಾಗಿ ಮಾತಾಡ್ಕೊಂಡಿರ್ವಾಗ, ಕೊಳ್ಳೆ ದಾರೀಲಿ ಒಬ್ಬ ಮುದ್ಕಿ ಸಿಕ್ಕಿ ಹನ್ನೊಂದು ಎಲೆ ಅವೆ ಅಂತ ಕೊಟ್ಲು. ಎಷ್ಟಿದ್ದವು ಎಣಿಸು ಅನ್ನು. ಅವಳು ಒಂದು ಎರ್ಡು ಮೂರು ಹಿಂಗೆ ಹತ್ರರತನಕ ಎಣಿಸಿ ಹತ್ತು ಅಂತಾಳಲ್ಲ; ಆಗ ಅವಳ ಮ್ಯಾಲೆ ಹತ್ತುಬುಡು ಅಂದ್ಲು.

ಆ ಗಂಡು ಹಂಗೆ ಹತ್ತ್ರಲೆ ಕಿತ್ಕೊಂಡ್ಬಂದು, ತಿಂಡಿ ತೀರ್ಥ ಎಲ್ಲಾನು ತಿಂದು, ಊಟ ಎಲ್ಲ ಆಗಿ ಮಾತಾಡ್ತಾ ಕುಂತ್ಕೊಂಡಿರ್ಬ್ಯಾಗ ಎಲೆಕೊಟ್ಟು ಎಣಿಸುವಾಗ ಹತ್ತು ಅಂದ್ಲು. ಆಗ ಅವಳ ಮ್ಯಾಲೆ ಹತ್ತುಬಿಟ್ಟ.

ಹೇಳಿದವರು : **ತಿಮ್ಮಮ್ಮ**, ಮುದುಗೆರೆ, ಕುಣಿಗಲ್ ತಾಲ್ಲೂಕು.

# ೫೨. ತವರು ಮನೆಯ ಆಸೆ

ಒಬ್ಬ ಊರ್ನಲ್ಲಿ ಹೆಣ್ತಿಯನ್ನ ತನ್ನ ತವರೂರಿಗೆ ಕಳಿಸ್ದಂತೆ ಇಟ್ಕಂಡಿದ್ದ. ಆಕೆಯೇನ್ಮಾಡಿಬಿಟ್ಲು ? ಉಪಾಂತ್ರದಿಂದ ತನ್ನ ಗಂಡನಿಗೆ ಉಪದೇಶಮಾಡಿ ಕರಕಂದೋದ್ಲು ತವರುಮನಿಗೆ. ತವರ ಮನಿಗೆ ಕರಕಂದ್ ಹೋದಾಗ, ತವರಮನೆಯಲ್ಲಿ ಬಂದ. ಸ್ವಲ್ಪ ಕೋಪವೇ ಅಲ್ವೆ ? ಅಳಿಯನ ಮೇಲೆ. ಯಾಕೆ ಇಷ್ಟು ವರ್ಷ ಮಗಳ ಕರಕಂದ್ ಬರ್ಲಿಲ್ಲ? ಈಗ ಕರಕಂದ್ ಬಂದಿದಾನೆ ಹಾಗೇಂತ ಮಗಳಿಗೆ ವಳಗಡೆಗೆ ಒಳ್ಳೆ ತಿಂಡಿ ಪದಾರ್ಥ ಕೊಟ್ಟು ಅಳಿಮ್ಯನಿಗೆ ಅಂತದು ಇಂತದು ಕೊಟ್ರು. ಇವ್ನಿಗೆ ತಡಿಯಾಕ್ ಆಗ್ಲಿಲ್ಲ. ಸೋನೆ ಮಳೆ. ಈ ಕರೆಕಂಬ್ಳಿ ಹೊದ್ದಿರದು. ಸರಿ. ಅತ್ ಬಿಲ್‌ಕುಲ್ ಆಗದುಲ್ಲ, ಹೊರಟ್‌ಬಿಡು ಅಂತ ಹೊರಡಿಸೇಬಿಟ್ಟ.

ಅವಾಗ ಆಕೆ ಈಗ ಏನಾರಮಾಡಿ ತಪ್ಪಿಸ್ಗೆಂದ್ ತವ್ರಮನಿಗೆ ಹೋಗ್ಬೇಂಕೂತೇಳಿ ಏನ್ಮಾಡಿಬಿಟ್ಲು ? ಆಗೊಂದ್ ಅರ್ಥ ಹೇಳಿದ್ಲಂತೆ. ಅಲ್ರಿ ಇವತ್ತು ಕರೆತುಪ್ಪುದ್ದು ಹುಣಸೆ ಗಂಜಿ ಹಾಕಿದ್ಲು. ಕುರುಬ ನೇದಿದ್ದು. ಇದ್ರಾಗಿನ್ನು ಕರಕಂದೋಗೀಂದ್ರೆ ಕರಕಂದೋಗಿ, ಇಲ್ಲಾಂದ್ರೆ ಬಿಟ್ಬಿಟ್ ಹೋಗಿ. ಅಳಿಮ್ಯನಿಗೆ ತಂಗ್ಳ ಮುದ್ದೆ ರಾಗಿಹಿಟ್ಟು ಮಿದ್ದು ಕೊಟ್ಲು. ಮಾವನಿಗೆ, ಇವಳಿಗೆ ಹಾಲು ಅನ್ನ ಇಕ್ಕಿಕೊಟ್ಲು. ಕೇಳಿಸ್ಗೆಂದ್‌ಬಿಟ್ಟ. ಮೂರುವರ್ಷದಿಂದ ಈ ಮನಿಗೆ ಬರ್ದೆ ಇದ್ದುದ್ರಿಂದ ಇಷ್ಟು ಅಪರೂಪಕ್ಕೆಂತ ಬಂದ್ರೆ ಇಂತ ಕೆಲ್ಸ ಮಾಡಿದ್ಲಲ್ಲ? ಒಂದ್‌ಕಡಿಂದ ಉದ್ದುಕೆ ಬಿದ್ರು ಇರಾಕಿಲ್ಲ, ನಡಿ ಹೊರಡೂಂತ ಹೊಂಡಿಸಿಬಿಟ್ಟ.

ಅವ್ಳಿಗೆ ಹೋಗಾಕೆ ಮನ್ಸಿಲ್ಲ. ಕರ್ಕಂದ್ ಬಂದ, ಮಧ್ಯದಾರಿಗೆ ಬಂದ್ರು. ಮಳೆಯಾಯ್ತು. ಮರ್ದಡೇಲಿ ನಿಂತ್ಕಂದ್ರು. ಕರೆಕುರಿ ತುಪ್ಪುದ ಕಂಬ್ಳಿ ಹೊದ್ದಿದ್ರು - ಆಳಿಗೊಂದೊಂದ. ಅವಾಗ ಅವ್ಳಿಗೆ ಅಪ್ಪನ ಮನೆಕಡೆ ಆಸೆ ಎಳಿತ್ತಿತ್ತಲ್ಲ ? ಕರೆಕುರಿ ತುಪ್ಪುದ್ದು ಕುರುಬ್ರು ನ್ಯಾದುದ್ದು ಹುಣುಸೆ ಗಂಜಿ ಹಾಕಿದ್ದು ; ಇದರ ಅರ್ಥ ಹೇಳಿಬಿಟ್ಳು, ನನ್ನ ಕರ್ಕಂಡೋಗೋದಿದ್ರೆ ನನ್ನ ನಿಮ್ಮೂರಿಗೆ ಕರ್ಕಂಡೋಗಿ, ಕರಕಂದ್

ಹೋಗಾದಾಯಿದ್ರೆ, ನಿಮ್ಮೂರಿಗೆ ನೀವು ಹೋಗಿ, ನಮ್ಮೂರಿಗೆ ನಾ ಹೊಯ್ತೀನಿ ಅಂದ್ಲು. ಲಕ್ಷಣವಾಗಿ ಕರಕದೋಗಿ ಬಿಟ್ಬಿಟ್ ಬಂದ. ಆಮ್ಯಾಲೆ ಹೇಳ್ದ; ಚಳಿಗಾಲದಲ್ಲಿ ಸಂಪಿಗೆ ಮಳೆಗಾಲದಲ್ಲಿ ಮಲ್ಲಿಗೆ, ಬ್ಯಾಸ್ಗ್ಯಾಗೆ ಹಾಸ್ಗೆ, ನಡಿಯಲೆ ಮನಿಗೋಗಾನ ಅಂದ.

ಹೇಳಿದವರು : **ತಿರುಮಲಯ್ಯ**, ಹೆರಗನಹಳ್ಳಿ.

# ೫೩. ಹರಿಗೋಲು ಕಥೆ

ಇವರು ಜಾತಿಯಲ್ಲಿ ಲಿಂಗಾಯಿತ್ರು. ಅಕ್ಕತಂಗಿಯರು ಆರು ಜನ. ಬರೀ ಹೆಣ್ಣು ಮಕ್ಕಳೇ ಹುಟ್ಟಿದ್ರು. ಆರುಜನದ ಹಿಂದೆ ಒಬ್ಬ ಗಂಡು ಮಗ ಹುಟ್ಟಿದ. ಆ ಮಗನ್ನ ಏನು ಮಾಡಿದ್ರು ಅಂದ್ರೆ, ಈ ಊರ್ಯದಲ್ಲಿ ಹುಟ್ಟಿದ ಮಗನ್ನ ನಾವ್ ಮನೇ ಒಳ್ಗಿಟ್ಕಬಾರ್ದು ಅಂತ್ಹೇಳಿಬಿಟ್ಟು, ಈ ಮಗಾನ ಕಣ್ಕಟ್ಟಿ ಕಾಡಿಗ್ ಬಿಟ್‌ಬಿಟ್ರು. ಕಾಡಿಗೆ ಬಿಟ್‌ಮೇಲೆ, ಆ ರಾತ್ರೆ ಹಸ್ತೆ ಚಿತ್ತೆ ಮಳೆ ಉಯ್ದುಬಿಡ್ತು, ಕಪಿಲಿ ಕಾವೇರಿ ಹರದ್‌ಬಿಡ್ತು. ಈ ತೊಟ್ಲು ಕೊಚ್ಕೊಂಡ್ ಓಗ್ಬಿಡ್ತಲ್ಲ? ಬೆಸ್ತರವನ ಬಲೀಗ್ ಸಿಕ್ಕೋಯ್ತು. ಕಣ್‌ಕಟ್ಟಿ ಕಾಡೀಗ್ ಬಟ್ಟಿದ್ರಲ್ಲ, ಆ ಮಗೀನ್ ತೊಟ್ಲು. ''ಓ ದೊಡ್ಡದೊಂದ್ ಮೀನು ಸಿಕ್ತು'' ಅಂತಾ ಎತ್‌ಕಂಡು ಹೋದ. ಆ ತೊಟ್ಲಾಗ್ ಮಗುವಿದೆ. ಆ ಮಗೂ ಎತ್ಕಂಡ್ಹೋಗ್ ಸಾಕ್ಕಂಬಿಟ್ಟ. ಈ ಮಗಾ ಅಷ್ಟಾಯ್ತು ಇಷ್ಟಾಯ್ತು ಎಂಟೊಂಬತ್ತು ವರ್ಷದ ಹುಡುಗನಾದ. ಹನ್ನೆರಡು ವರ್ಷ ತುಂಬಿತು. ''ತಂದೆ ಮಾಡ್ತಕ್ಕಂತ ಕಸುಬು'' ಮಕ್ಕಳಿಗೂ ಅಂತ್ಹೇಳ್ಬುಟ್ಟು ತೆಗದುಕಂಡ್ಹೋಗಿ ಹರಿಗೋಲು ನಡ್ಸಾಕ್ ಕಾವಲಿಟ್‌ಬಿಟ್ಟ.

ಇವನಿಗೆ ಅಕ್ಕತಂಗೇರು ಆರ್ ಜನ ಇದ್ರಲ್ಲ. (ಅವರ) ತಂದೆ ಹೇಳ್ತಾ ಇದ್ರು. ''ಅಮ್ಮಾ ನಮಗೆ ಆರ್ ಜನಾ ಬರೀ ಹೆಣ್ಣು ಮಕ್ಕ್ಳೇ ಹುಟ್ಟಿದ್ರಿ. ನಿಮ್ಮ ಹಿಂದೆ ಒಬ್ಬ ಗಂಡುಮಗ ಹುಟ್ಟಿದ. ಅವನನ್ನು ಅವತ್ತಿನ ರಾತ್ರೀನೇ ನಾವು ಕಣ್ಣುಕಟ್ಟಿ ಕಾಡೀಗ್ ಬಿಟ್‌ಬಿಟ್ವೋ. ಊರ್ಯದಲ್ಲಿ ಹುಟ್ಟಿದ ಮಗ ಅಂದ್ರೆ ಆರ್ ಜನ ಹೆಣ್ಣುಗಳ ಹಿಂದೆ ಒಬ್ಬ ಗಂಡ್ಹುಟ್ಟಬಾರ್ದು, ಮೂರು ಜನ ಗಂಡಿನ ಹಿಂದೆ ಹೆಣ್ಣು ಹುಟ್ಟ ಬಾರ್ದು ಅಂತ ಶಾಸ್ತ್ರ''. ಹಾಗ್ಹುಟ್ಟಿದ್ರೆ ನಮಗೆ ಬಡ್ತನ ಬರ್ತದೆ ಅಂತ ಕಣ್ಕಟ್ಟಿ ಕಾಡಿಗೆ ಬಿಟ್‌ಬಿಟ್ರು. ಅಗೋ ನೋಡು ಇಂಥಾ ಕಾಲ್ದಲ್ಲಿ ಬೆಸ್ತರವನು ಸಾಕ್ಕಂಡಿದಾನೆ. ''ಹರಿಗೋಲು ನಡಸ್ತಾ ಇದಾನೆ ಅಂತ ಹೇಳ್ತಾ ಇದ್ರು''. ಅದು ಈ ಮಕ್ಳಿಗೆ ನೆನಪಿತ್ತು.

ಇವನು ಹರಿಗೋಲು ನಡೆಸೋನು ಒಬ್ಬೊಬ್ನನ್ನೇ ಆಚೆಗ್ ಕರ್‍ಕಂಡೋಗಿ ಬಿಟ್‌ಬಿಟ್ಟ. ಈ ಚಿಕ್ಕವ್ಳು ಬಾಳ ಸುಂದರವಾಗಿದ್ಲು. ನಡು ಸಮುದ್ರದ ಮ್ಯಾಲಿಡ್ಕಬಿಟ್ಟ. ಇಡ್ಕಂಬಿಟ್ರೇ, ಇವನು ಹುಟ್ಟಿದ್ದೂ, ಇವ್ನ ಬೆಳದಿದ್ದೆಲ್ಲ ಈಯಮ್ಮ ಹೇಳ್ತಳೆ. 'ನಾವೂ ಎಲ್ಲಾ ಜೊತೇಲ್ಹುಟ್ಟೋರು. ಒಬ್ಬ ತಾಯಿ ಮಕ್ಕಳು. ಇದು ನನ್ನ ಭ್ರಮೆ ಮಾಡಬೇಡಪ್ಪಾ' ಅಂತ್ಹೇಳಿ ಈತನಿಗೆ ಹೇಳ್ತಾಳೆ.

ಆದರೆ ನೀನು ಲಿಂಗಾಯಿತರೋಳು. ನಾನು ಬೆಸ್ತರವನು. 'ನಿನಗೂ ನನಗೂ ಹೆಂಗ್ ವರ್‍ಸೆ ?' ಅಂತ ಇವ್ನು ಹೇಳ್ತಾನೆ.

''ಅಲ್ಲಪ್ಪ ನಿನ್ನನ್ ಕಣಿಕಟ್ಟಿ ಕಾಡಿಗೆ ಬಿಟ್‌ಬಿಟ್ರು. ಕಾಡಿಗ್ ಬಿಟ್‌ಮೇಲೆ, ನೀನು ಬ್ಯಾರೆ ಜಾತಿಗೆ ಸೇರ್‍ಕಂಡೆ. ನಾನು ಲಿಂಗಾಯಿತರ ಹೊಟ್ಟೇಲ್ ಹುಟ್ಟೋಳೆ, ನೀನೂ ಹುಟ್ಟಿದೋನೆ. ಇದ್ ಮಾತ್ರಾ ಬೇಡ. ನನ್ನ ಮೇಲೆ ಅಷ್ಟು ಭ್ರಮೆ ನಿನಗಿದ್ದರೆ ನನಗಿನ್ನ ರೂಪವಾದ ಚೆಲುವೆ ತಂದು, ನನ್ನ ಮೈಮೇಲಿರತಕ್ಕಂಥಾ ಒಡವೆ ಆಭರಣಾನೆಲ್ಲ ಆಕೆಗಿಟ್ಟು ನಿನಗೆ ಲಗ್ನ ಮಾಡ್ತೀನಿ.'' ''ನೀನೇ ನನಗ್ ಬೇಕು. ನಿನ್ನಂಥಾ ವಸ್ತು ಬಿಟ್ರೆ ಇನ್ ಬೇರೆ ಯಾವ ವಸ್ತುವೂ ನನಿಗ್ ಸಿಕ್ಕೋದಿಲ್ಲ. ನಿನ್ನನ್ನೇ ಲಗ್ನವಾಗ್ಬೇಕು''.

ಇಬ್ಬರಿಗೂ ಚರ್ಚೆ ಬಿದ್ದು, ಎಷ್ಟೋ ಹೇಳ್ತಳೆ ಈಯಮ್ಮ. ಇವನು ಕೇಳೋದಿಲ್ಲ. ಇವನು ಹುಟ್ಟಿದ ಜೀವ ನಕ್ಷತ್ರವೆಲ್ಲಾ ಯೇಳ್ತಳೆ. ಏನ್ಹೇಳಿದ್ರೂ ಕೇಳೋದಿಲ್ಲ. ಆಗ ಇಂಥ ಅಣ್ಣನಿಗೆ ನಾನು ಸೆರಗ್ಹಾಸೋದಕ್ಕೆ ಬದಲು, ಈ ನೀರ್‍ನಲ್ಲಿ ನಾನ್ಹೊರಟ್ಹೋಗ್ ಬಿಟ್ರೆ, ನನಗ್ ಒಂದ್ ಮುಕ್ತಿ ಸೇರ್‍ತು. ನಾನಿರಬಾರ್‍ದು'' ಎಂದುಕೊಂಡು ಈಯಮ್ಮ ಆಭರಣನೆಲ್ಲ ಒಂದ್ ಸೀರೆಗಂಟಿಗೆ ಕಟ್‌ಬಿಟ್ಳು, ಆಚೆಗೆಸದ್‌ಬಿಟ್ಳು, ಯಾರಾನಾ ಬಡವರು ತಗದ್‌ಕಂಡ್ಹೋಗ್ಲಿ, ನಾನ್ ಪ್ರಾಣಹತ್ಯವಾಗಿ ಹೊಲ್ಟೋಗ್ತೀನಲ್ಲ'' ಅಂತ್ಹೇಳ್ಬಿಟ್ಟು, ಸಮುದ್ರಕೆ ದುಮಕ್‌ಬಿಟ್ಳು.

ಆಗ ಗಂಗಮ್ಮ ''ಓಹ್ ಇವಳಂಥ ಪತಿವ್ರತೆ ಇಲ್ಲ. ಅವನು ಎಷ್ಟು ವಿಧವಾಗಿ ಭ್ರಮಿಸಿ ಕೇಳಿದ್ರೂ ಈಯಮ್ಮ ಮನಗೊಡ್ಲಿಲ್ಲ. ಈಯಮ್ಮ ಸತ್ಯವಂತೆ. ಇವಳ್ನ ಉಳಿಸ್ಕೊಡಬೇಕು'' ಅಂತ ಸಮುದ್ರವನ್ನು ತಡೆಗಟ್ಕಂಡು, ಆತ್ಲ ನೀರತ್ತೇ, ಇತ್ಲ ನೀರಿತ್ತೇ, ಭಾಗವಾಗಿ ಈಯಮ್ಮನಿಗೆ ದಾರಿ ಬಿಟ್‌ಬಿಡ್ತು. ದಾರಿ ಬಿಟ್ಟಾಗ, ಇವ್ನ್ ಯೋಚ್ನೆ ಮಾಡ್ಕಂಡ. ಇವ್ಳೆ ಹೊರಟ್ ಹೋಗ್ತಾಳಲ್ಲ, ಏನಾದ್ರೂ ಮಾಡಿ ಇವಳನ್ನ ಲಗ್ನಮಾಡ್ಕಳ್ಳೇ ಬೇಕು ಅಂತ ಯೇಳಿ, ಅವನೂ ಧುಮುಕ್‌ಬಿಟ್ಟ.

ಆ ಸೀರೆ ಕೊನೆ ಅವನಿಗೆ ಸಿಕ್ಕಿತು. ಮ್ಯಾಲಕ್ಕೆಳಕಂಡ್ಳು. ''ಆದರೂ ನಿನ್ನಂಥ ಪತಿವ್ರತೆ ನನಗೆಲ್ಲೂ ಸಿಕ್ಕುವುದಿಲ್ಲ. ನೀನೇ ಹೆಂಡತಿ, ನಾನೇ ಗಂಡನು'' ಎಂಬುವುದಾಗಿ ತಿರಸ್ಕರಿಸಿ ಮಾತಾಡಿದ. ಆಗ ಆಯಮ್ಮ ''ಅಯ್ಯೊ ಪಾಪೀ, ನಾನು ಇಷ್ಟು ತರವಾಗಿ ನಿನ್ನ ಬೇಡಿಕಂಡೆ. ನಿನ್ನ ಜೀವನ ಚರಿತ್ರೆಯೆಲ್ಲ ನಾನು ಯೇಳಿದೆ. ಆಗಲೂ ನೀನು ಕೇಳಬಾರದಾಗಿತ್ತಾ ? ಪಾಪಿ

ನನ್ನೇ ಲಗ್ನವಾಗಬೇಕು ಅಂತ ಯೇಳಿ-ನೀನು ಹಠವನ್ನು ಹಿಡಿದು ಛಲವನ್ನು ಮಾಡಿದೆ. ಪಾಪಿಯಾಗಿರತಕ್ಕಂಥಾ ನೀನು ಇರಬಾರದು. ಅಕ್ಕತಂಗಿಯರಿಗೆ ಆಸೆಬಿದ್ದವನು ನೀನು ಭೂಮಿ ಮೇಲೆ ತಿರುಗಲೇಬೇಡ. ಈ ಹೊಳೇ ದಿಂಡೇ ಮೇಲೆ ಸುಣ್ಣದ ಗೂಡಾಗು'' ಅಂತ್ಹೇಳಿಬಿಟ್ಟು ಶಾಪವನ್ನು ನೀಡಿದಳು. 'ಅಕ್ಕ ತಂಗಿ ಕೊಟ್ಟ ಶಾಪ ಅಟ್ಟಾಡ್ಕಂಡ್ ಹೋಯ್ತು'' ಅಂತ ಹೇಳೋ ಹಂಗೆ, ಈಯಮ್ಮ ಹೇಳಿದ ಮಾತ್ರದಲ್ಲಿ ಸುಣ್ಣದ ಗೂಡಾಗ್‌ಬಿಟ್ಟ.

ಆಗ ಈಯಮ್ಮ ''ಪಾಪಿ, ನನ್ನ ಭ್ರಮಿಸಿಬಿಟ್ಟ. ನನ್ನ ಕೆಡಿಸಿ ಹೋಗ್ಬಿಟ್ಟ'' ಅಂತ ಹೇಳಿ, ಗಂಗಮ್ನಲ್ಲಿ ಒಂದು ಭಾಷೆಕೊಟ್ಟಳು. ನಮ್ಮಣ್ಣ ಸುಣ್ಣವಾಗಲಿ, ನಾನು ನಾಗವಳಿಯಾಗ್ತೀನಿ. ನನ್ನ ಗಂಡ ಅಡಿಕೆ ಮರವಾಗಲಿ. ಮೂವರೂ ಒಬ್ಬರ ಬಾಯಲ್ಲಿ ಕರಗಿ ಕಲಿಯುಗದಲ್ಲಿ, ಅವರ ಬಾಯಲ್ಲಿ ನಮ್ಮ ಐಭೋಗ ಕಳದ್ಹೋಗಲಿ ಎಂದು ಶಾಪವನ್ನು ಕೊಟ್ಟಳು. ಆ ಶಾಪವನ್ನು ಕೊಟ್ಟು, ಈಯಮ್ಮ, ಮದಗದ ಏರೀಕೆಳಗೆ ಎಳೇಗೌಡರ ತ್ವಾಟದಲ್ಲಿ ಈಯಮ್ಮ ನಾಗವಳಿಯಾಗುತ್ತತ್ತಿಯಾದಳು. ತನ್ನ ಗಂಡನಾಗಿರತಕ್ಕಂತಾವ್ನು ಅಡಿಕೆ ಮರವಾದ. ಈ ತಮ್ಮನಾಗಿರ್ತಕ್ಕಂಥಾವ್ನು ಸುಣ್ಣದ ಗೂಡಾಗಿ, ನರಲೋಕದಲ್ಲಿ (ಜನರ) ಬಾಯಲ್ಲಿ ಕರಗಿ, ಅವರ ಬಾಯಲ್ಲಿ ಇವರ ಐಭೋಗವನ್ನು ತೀರಿಸ್ತಾ ಇದಾರೆ. ಇದು ಒಂದು ಹರಿಗೋಲಿನ ಮ್ಯಾಗಳ ಕತೆ.

ಹೇಳಿದವರು : **ಚೌಡಿಕೆ ಸುಬ್ಬಯ್ಯ.**

# ೫೪. ಶಟವಿ ಕಥೆ

ಹಣೆಬರಹ ಬರೆಯುವಲ್ಲಿ ಬ್ರಹ್ಮನಂತೆ ಶಟವಿಯೂ ಕೂಡ. ಬ್ರಹ್ಮ ಹೇಳಿದಂತೆ ಶಟವಿ ಬರೆಯುತ್ತಾಳೆಂದು ಹೇಳುತ್ತಾರೆ. ಇನ್ನೂ ಕೆಲವರು ಶಟವಿ ಹೇಳುತ್ತಾಳೆ ಬ್ರಹ್ಮ ಬರೆಯುತ್ತಾನೆ ಎಂದೂ ಹೇಳುತ್ತಾರೆ.

ಕೂಸು ಹುಟ್ಟಿದ ಐದು ದಿವಸಕ್ಕೆ ರಾತ್ರಿ ಮರದಲ್ಲಿ ಹೊಟ್ಟುಹಾಕಿ ಕೂಸಿನ ಹತ್ತಿರದಲ್ಲಿ ಇಟ್ಟು ಎಲ್ಲ ಮಲಗಿಕೊಳ್ಳುತ್ತಾರೆ. ಬಾಣಂತಿಯು ಮಲಗುತ್ತಾಳೆ. ಬೆಳಗ್ಗೆ ಮುಂಜಾನೆ ಎದ್ದು ನೋಡಿದಾಗ ಅದರಲ್ಲಿ ಹೆಜ್ಜೆಗಳಿರುತ್ತಾವಂತೆ. ಆ ಹೆಜ್ಜೆಗಳನ್ನು ನೋಡಿ ಶಟವಿ ಇಲಿಯಾಗಿ ಬಂದು ಬರೆದಳು, ಬೆಕ್ಕಾಗಿ ಬಂದು ಬರೆದಳು ಎಂದ ಹೇಳುತ್ತಾರಂತೆ.

ಶಟವಿಯ ಕುರಿತು ದೇವಸ್ಥಾನಗಳಿಲ್ಲ. ಈ ಶಟಕವ್ವನ ಪೂಜೆಯನ್ನು ಕೂಸು ಹುಟ್ಟಿದ ದಿನ, ಇಲ್ಲ ಹುಟ್ಟಿದ ಐದು ದಿನಕ್ಕೆ, ಇಲ್ಲ ಹದಿಮೂರು ದಿನಕ್ಕೆ, ಇಲ್ಲವೇ ತಿಂಗಳಿಗೊಮ್ಮೆ ಇವುಗಳಲ್ಲಿ ಯಾವುದಾದರೊಂದು ದಿನ ಮಾಡುತ್ತಾರೆ. ಹಾಗೆ ಮಾಡುವಾಗ ಗೋಡೆಯ ಮೇಲೆ ಮನುಷ್ಯಾಕೃತಿಯಂತೆ, ಇದು ಕೂಸು ಹುಟ್ಟಿದ ಐದು ದಿನಕ್ಕೆ ಮಾಡುವುದು. ನಂತರ ಸೂಲಗಿತ್ತಿ ಬಂದು ಆಕಿಗಾಗಿ ಇಟ್ಟಿದ್ದ ಅಡಿಗೆಸಾಮಾನು ಇತ್ಯಾದಿಗಳನ್ನು ತೆಗೆದುಕೊಂಡು ದೀಪಹಚ್ಚಿ ಹೋಗತಾಳ. ಆಕಿ ದಾಟಿ ಹೋಗೊ ಮುಂದೆ ಬಾಗಲಲ್ಲಿ ಯಾರು ಇರಕೂಡದು. ಆಕಿ ದೀಪ ಆರಿಸಿ ಹೋಗ್ತಾಳೆ. ಇದಕು ಮೊದಲು ತೊಟ್ಟಿಲ ಬಳಿ ತಂಬಿಗೆ ತುಂಬಿ ಇಟ್ಟು ಅದನ್ನು ತೊಟ್ಟಿಲನ್ನು ಪೂಜುತ್ತಾರೆ. ಈ ಭಾಗದಲ್ಲಿ ಯಾರು ಹಡಿತಾರೊ ಅವರ ಮನೇಲಿ ಎಲ್ಲಾ ಜಾತಿಯಲ್ಲೂ ಇದೆ. ಇದನ್ನು ಶಟಕವ್ವನ ಪೂಜೆ ಅಂತಾರ್ರಿ.

ಪೂಜೆ ಎಂದೇ ಮಾಡಲಿ, ಆದರೆ ಹಣೆ ಬರೆಯಲು ಬರುವುದು ಹುಟ್ಟಿದ ಐದನೇ ದಿನ ರಾತ್ರಿ ಎಂದೆ ನಂಬುತ್ತಾರೆ. ಅಂದು ರಾತ್ರಿ ಯಾರೂ ಬಾಗಲಿಗೆ ತಲಿಕೊಟ್ಟು ಮನಗುವುದಿಲ್ಲ. ಬಾಗಲು ಮುಚ್ಚಿರುತ್ತಾರಂತೆ. ಯಾರಾದರೂ ಅಂದು ಬಾಗಲಿಗೆ ತಲೆಹಾಕಿ ಮಲಗ ಹೋದರೆ ಶಟವಿ ಭರಮ ರಾತ್ರಿ ಬಂದು ಹೋಕಾರ ದಾರಿಬಿಟ್ಟು ಮಲಗ್ರಿ ಅನ್ನುತ್ತಾರಂತೆ. ಅವರು ಬಂದು ಬರೆದು ಹೋಗುವುದನ್ನು ನೋಡಬಾರದಂತೆ, ಆದರೆ ಒಮ್ಮೆ ನೋಡಿದ್ದರಂತೆ ಒಬ್ಬರು.

ಒಬ್ಬಾಕಿ ಎಲ್ಲಾರಂಗ ತೌವರಮನಿಯಾಗ ಬಂದು ಹಡದ್ಲು. ಆಕಿಗೆ ಒಬ್ಬ ತಮ್ಮ ಇದ್ದ. ಆ ಶಟವಿ ಪೂಜೆದಿನ ಬಾಗಲಿಗೆ ತಲೆ ಹಾಕಿ ಮಲಗಿದ್ದ. ''ತಮ್ಮ ಇವತ್ತು ದಾರಿಮ್ಯಾಲ ಮಕ್ಕೊ ಬ್ಯಾಡಪ್ಪ, ದಾರಿಬಿಟ್ಟು ಚಾಚುಕ್ಕೆ ಮಕ್ಕೊ'' ಅಂದ್ಲು ಅವ್ವವ್ವ. 'ಯಾಕವ್ವಾ ?' ಅಂದ. ''ಇವತ್ತು ಮಕ್ಕಬ್ಯಾಡಪ್ಪ ಅಲ್ಲಿ''. ನಿಮ್ಮ ಅಕ್ಕನ ಮಗಳು ಹಣಿಬರಹಾನ ಶಟಕವ್ವ ಭರಮಣ್ಣ ಬಂದು ಬರಿತಾರೆ. ''ದಾರಿಮ್ಯಾಲೆ ಮಲಗಬ್ಯಾಡ'' ಅಂದ್ರಂತೆ. ''ಹುಂ ಹಂಗೆ ಆಗ್ಲಿ'' ಅಂದು ಬಾಗಲ ಮುಚ್ಚಿಕೊಂಡು ಹೊಸಲಿಗೆ ತಲೆಕೊಟ್ಟು ಮಲಗಿಬಿಟ್ಟ, ನೋಡಬೇಕು ಅದೇನೂಂತ.

ಅವಾಗ ರಾತ್ರಿ ಹನ್ನೆಲ್ಡುಗಂಟೆ ಹೊತ್ತಿಗೆ ಶಟವಿ ಬ್ರಹ್ಮ ಬಂದ್ರು. ಬಂದು ನಿಂತು ಏಳ್ತಾನೇನೋಂತ ನೋಡಿದ್ರು ಏಳ್ಳಿಲ್ಲ. ಆಮ್ಯಾಲೆ ''ಏಳೋ ತಮ್ಮ ದಾರಿಬಿಡು'' ಅಂದ್ರಂತೆ. ಅವಾಗ ಸರದು ಹಿಂದುಕ್ ಮಕ್ಕೊಂಡ. ಒಳಗೆ ಹೋಗಿ ಆ ಹೆಣ್ ಮಗುನ ಹಣೆ ಬರದ್ರು. ಶಟವಿ ಹೇಳಾಕಿ ಬ್ರಹ್ಮ ಬರಿಯುವವ. ಏನಂತ ಬರದ್ರಪಾಂದ್ರೆ 'ಈಕಿ ಲಗ್ನಾಗಿ ಎಂಟ್‌ಮಕ್ಕಳ ಹಡಿಬೇಕು. ಎಂಟ್‌ಮಕ್ಕ ಹಡದು ಮಕ್ಕಳ ಲಗ್ನದಾಗ ಕೊಂಬು ಊದಲು ಸಿಂಗ್ಯಾ ಬರ್ತಾನೆ. ಆ ಕೊಂಬಿನ ಸಿಂಗಾನ ಕೂಡ ಬೆಳಗಾಗದ್ರಾಗೆ ಈಕಿ ಓಡಿ ಹೋಗಬೇಕು, ಅಂತ. ಇದನ್ನೆಲ್ಲ ಇವ್ನು ಎಚ್ಚರಾಗೆ ಇದ್ದು ಕೇಳಿಕೆಂಡ. 'ಆಹಾ ಹಿಂಗಾ ಖರೆ ನಮ್ಮವ್ವ ಹೇಳಿದ್ದು' ಅಂದ್ಕಂಡ. 'ಆ ಹುಡಗಿನ ನಾನೆ ಲಗ್ನ ಆಗಬೇಕು. ಈಗಿನ್ನು ಸಣ್ಣಹುಡುಗಿ. ಇದು

ದೊಡ್ಡೋಕಿ ಆಗತ್ಲೆ, ನನಗೆ ಬಾಳ ವಯಸ್ಸಾದ್ರು ಸರಿ. ಲಗ್ನ ಆಗಿ ಮುಂದೆ ಇಕಿದೇನ್ ಸುಳ್ಳು ಆಗತದೋ ಖರೆ ಆಗತದೊ ನೋಡ್ಬಕು'' ಅಂತ ಮನಸ್ನಾಗೆ ಅಂದ್ಕಂಡ. ಯಾರಿಗೂ ಹೇಳಿಲ್ಲ.

ಆಮ್ಯಾಲೆ ಇವ್ನು ''ನಾನು ಅದೆ ಹುಡ್ಗೀನ ಸೈ ಮದುವಿ ಆಗೋದು'' ಅಂತ ಹೇಳ್ದ. ತಮ್ಮ ಬ್ಯಾಡಪ್ಪ ನಿನಿಗೇನು ಮನಕಾಂಡ ಮಂದಿ ಕೊಡ್ತಾರ ಹೆಣ್ಣ. ಅಕ್ಕನ ಮಗಳಾದ್ರೆ ಇನ್ನು ಸಣ್ಣೋಳು. ಅವ್ರೆಲ್ಲ ಅಂದ್ರು ಕೇಳ್ಳಿಲ್ಲ. ನಾನು ''ಅದ ಹುಡ್ಗೀನ ಸೈ'' ಅಂದು ಅದುನ್ನೆ ಲಗ್ನಾದ.

ಆಮ್ಯಾಲೆ ಆಕಿ ಎಂಟು ಗಂಡುಹುಡುಗರನ್ನೆ ಹಡದ್ಲು. ಎಂಟು ಒಂದಕಿಂತ ಒಂದು ಅವಳಿಜವಳಿ ಹುಟ್ಟಿದಾಂಗ. ಋಗ ಜೋಕಾಗಿದ್ದ ಮನೆತನ. ಎಂಟು ಮಕ್ಕಳದ್ದು ಒಮ್ಮಿಗೆ ಲಗ್ನ ಮಾಡಿದ. ಕೊಂಬಿನ ಸಿಂಗ್ಯಾ ಬಂದಾ, ಲಗ್ನದಾಗ. ಮತ್ತೆ ಇವ್ನಿಗೆ ಗೊತ್ತಲ್ಲ? ಇನ್ನ ಹ್ಯಾಂಗ ಮಾಡಬೇಕು? ಇಕಿದು ತಪ್ಪಸಬೇಕು ಅಂತೇಳಿ ಯೋಚನೆ ಮಾಡಿದ.

ಆ ಕೊಂಬಿನ ಸಿಂಗ್ಯಾಂದು ಊಟಗೀಟ ಎಲ್ಲ ಆತು. ಆದಮ್ಯಾಲ ತನ್ನ ಕೊಂಬು ಕೋಟು ಎಲ್ಲ ತಗದು ಗೂಟಕ್ಕೆ ಸಿಗಸಿ ಮಲಗಿದ. ಕೊಂಬಿನೋರು ಅಂದರೆ ಬಾರ್ನೋರು ಬಡಿಯೋರು ಬರ್ತಾರಲ, ಅದರಾಗ ಇಂವ ಕೊಂಬು ಊದೋನು. ಇತ್ಲಾಗೆ ಇವ್ನಿಗಿ ನಿದ್ದಿಲ್ಲ. ರಾತ್ರಿ ಹನ್ನೆಲ್ಡ್ ಗಂಟೆಗೆ ಹೋಗ್ತಾಳಂಥ ಗೊತ್ತಿತ್ತಲ್ಲ? ಅದಕ್ಕೆ ಇವ್ನೆ ಆ ಸಿಂಗ್ಯಾ ತಗದು ಸಿಗಸಿದ ಬಟ್ಟಿಕೊಂಬು ಎಲ್ಲ ಹಕ್ಕೆಂದು, ಆ ಕೊಂಬಿನ ಸಿಂಗ್ಯಾನ ಮಗ್ಗಲಿಗೆ ಮಲಗಿದ. ಆವಾಗಾಕಿ ಯಾವಾಗ ಇವನ್ನ ಎಬ್ಬುಸ್ಕೊಳ್ಳಿ, ಯಾವಾಗ ಹೋಗ್ಲಿ, 'ಎಲ್ಲ ಸಂಪಾಗಿ ಜನ ಯಾವಾಗ ಮಲಗೀತು ಅಂತ ಕಾದಿದ್ಲ? ಹೊರೀಕೆ ಬಂದ್ಲು. ಬಂದು ನೋಡಿದ್ಲು ಎಲ್ಲಾ ಕಡೆ. ಇವನು ಕೊಂಬು ಹೆಗಲಿಗೆ ಹಕ್ಕೆಂದು ಮಲಗಿದ್ದ. ಇವನ್ನ ಮುಟ್ಟಿ ತಿವುದು ಎಬ್ಬುರ್ಸ್ಸಿದ್ಲು. 'ಹಾಂ'. ಮುಖ ಬೇರೆಕಡೆ ತಿರುಗಿಸಿ ''ಏಳ್ ಇನ್ನ ಹೋಗಾನ ನಡಿ' ಅಂದ್ಲು. ಹೊಂಟ್ರು. ಹಿಂದಾದ್ರೆ ಮುಖ ನೋಡಿ ಗುರುತು ಹಿಡದಾಳು ಅಂದು ಮುಂದೆ ಮುಂದಾಗಿ ಹೊಂಟ. ಆಕೆ ಹಿಂದ್ ಹಿಂದೆ.

ಗಂಡ ಮುಂದಾಗಿ ಹೋದ. ಹೋದ ಹೋದ ಒಂದೆಲ್ಡ್ ಹರದಾರಿ ಮೂರು ಹರದಾರಿ ಹೋದ. ಅದ್ರಾಗೆ ಬೆಳಕರಿಯಾಂಗಾತು. ಇವನು ನಾನ ಸಿಂಗ್ಯಾಂತ ಕರಕೊಂಡು ಬಂದಾನ. ಬೆಳಗಾದಿಂದ ''ಬಾ ಇನ್ನ ಗೆದ್ದೀವಲ'' ಅಂದ. ಅಕಿ 'ಇನ್ನ ಆತು ಇನ್ಯಾರ ನಮ್ಮನ್ನ ಹಿಡಿಯಾಕ್ ಬರ್ತಾರ ಬಾ'' ಅಂತಂದು ಹೊಳ್ಳಿ ನೋಡಿದ್ರೆ ಗಂಡ. ''ಇನ್ಯಾಂಗ ಮಾಡಲಿ ಶಿವ ಶಿವಾ ಗಂಡನ ಕೈಯಾಗ ಸಿಕ್ಕೆ. ಗಂಡ ಮೋಸ ಮಾಡ್ದ. ಕೊಂಬಿನ ಸಿಂಗ್ಯಾನ ವೇಷಹಾಕಿದ್ದು ನನಗಿ ತಿಳಿಲಿಲ್ಲ'' ಅಂತೇಳಿ, ಅಳಲು ಆರಂಭಿಸಿದೊ. ಅವಾಗ ಅವನು ''ಅಳಬ್ಯಾಡ ಇದು ನಿನ್ನ ಹಣಿ ಬರ್ಧಾಗೆ ಬರ್ದಿತ್ತು. ಸೊಕ್ಕಿಲೆ ಉಕ್ಕಿಲೆ ನೀ ಮಾಡಿಲ್ಲ. ನಾ ಅದುನ್ನ ಕೇಳ್ದಿದ್ರೆ

ಸೊಕ್ಕಿಲೆ ಮಾಡಿದಾಳೆ ಅನಸ್ತಿತ್ತು. ನಾ ಕೇಳಿದ್ನಲ್ಲ? ಇದು ಪತಿವ್ರತ ಹಾನಿ ಮಾಡಗೊಡಬಾರ್ದು, ಅಂತೇಳಿ ನಾನ ಲಗ್ನಾಗಿ, ಇಷ್ಟೆಲ್ಲ ಆಗಿ ಸಿಂಗ್ಯಾನ ಡ್ರಸ್ ಹಕ್ಕೆಂದ್ ಬಂದೆ. ನಡಿ ನಡಿ ಮನಿಗೆ ಅಂತಂದು ಕರಕಂಡ್ ಬಂದು ಗಂಡಹೆಂಡ್ರು ಚನ್ನಾಗಿರ್ತಾರೆ.

ಶಟವಿ ಪೂಜೆಯಲ್ಲಿ ಶಟವಿಯ ಚಿತ್ರವನ್ನು ಈ ರೀತಿಯಾಗಿ ಕುಂಕುಮ ಅಥವಾ ವಿಭೂತಿಯಿಂದ ಬರೆಯುತ್ತಾರೆ. ಐದು ದಿವಸಕ್ಕೆ ತೊಟ್ಲು ಇರ್ಲಿಲ್ಲಾಂದ್ರೆ ಆ ಮಾಸ ಹೊಳ್ಳಿದ ನೋಡೆ ಬಳಿಯ ಗೋಡೆಯ ಮೇಲೆ ಬರೆಯುತ್ತಾರೆ. ಬರೆದು ಪೂಜೆ ನೈವೇದ್ಯ ಹಿಡಿಯುತ್ತಾರೆ. ಇನ್ನ ತೊಟ್ಲ ಕಟ್ಟಿದ್ರೆ ಅದಕ್ಕೆ ಕುಂಕುಮ ಅದು ಹಚ್ಚಿ, ಅಲ್ಲೆ ಚರಿಗಿ ತುಂಬಿಟ್ಟು ಅದರ ಮೇಲೊಂದು ಬಟ್ಟಲಿಟ್ಟು, ಅದರಮ್ಯಾಲೆ ಚಪಾತಿಯಂತ ಗೋದಿಯ ದಮ್ಮು ಮಾಡಿ, ಅದರಲ್ಲಿ ಕುಳಿ ಮಾಡಿ, ಬತ್ತಿ ಹಾಕಿ ದೀಪ ಹಚ್ಚುತ್ತಾರೆ. ಆ ತಂಬಿಗೆ ಕೆಳಗೆ ಜೋಳ ಹಾಕಿರುತ್ತಾರೆ. ಇದನ್ನು ಮುತ್ತ್ಯದೇರು ಸೋದರತ್ತೆದಿರು ಮಗು ಹುಟ್ಟಿದ ಹದಿಮೂರು ದಿನಕ್ಕೆ ತೊಟ್ಟಿಲಿಗೆ ಹಾಕುವಾಗ ಪೂಜೆ ಮಾಡುತ್ತಾರೆ.

ಹೇಳಿದವರು : **ನೀಲಮ್ಮ**, ಚೇಲೂರು.

## ೫೫. ಮೈದಾಳ ರಾಮಯ್ಯ

ಶಿವನು ನಿಮ್ಗೆ ಎಲ್ಲಿ ಸಿಗ್ತಾನೆ? ಈ ಗ್ರಾಮದಲ್ಲಿ ಜನಗಳ ಒಂದು ಕುಂದು ನುಡಿನ್ನ ಕೂಡ ಕೇಳಕ್ಕ ಸಾಧ್ಯ ಇಲ್ಲ. ಮಾದೇವಿ ನಾವು ಧರೇ ಒಳಗೆ ಇರೋದಿಕ್ಕೆ ಬದಲಾಗಿ ಯಾವ್ದಾದ್ರು ಒಂದಿಷ್ಟು ವಿಷನಾದ್ರೂ ಕುಡ್ದು ಪ್ರಾಣನ ಬಿಡೋದು ಲೇಸು; ಅಂತೇಳಿ ಸೋಮಯ್ಯ ತನ್ನ ಮಡದಿಗೆ ಯೇಳಿಕೊಂಡಾ.

'ಸ್ವಾಮಿ ತಮ್ಮ ಮನಸ್ಸಿಗೆ ಹಾಗ್ ಬಂದ್ಮೇಲೇ ನಾವ್ ವಿಷ ಕುಡ್ದು ಪ್ರಾಣ ಬಿಡೋದ್ ಲೇಸು' ಅಂತ ಹೇಳಿ ಮಾದೇವನ್ನು ಕೂಡ ತನ್ನ ಪತಿಗೇಳ್‌ಕೊಂಡ್ಲು. ಸೋಮಯ್ಯ ಯೋಚ್ನೇ ಮಾಡ್ದ. '' ಮಾದೇವಿ ನಾವೇನೋ ವಿಷ ಕುಡ್ದು ಪ್ರಾಣ ಬಿಡೋದು ಲೇಸು ಅಂತೇಳಿ ನಮ್ಮ ಮನೋಭಾವವನ್ನು ಮಾಡ್ಕೊಂಡೋ. ಆದ್ರೂ ಕೂಡಾ ಈ ಗಳಿಗೆ ಒಳಗೆ ನಮಗೆ ವಿಷ ತರೋಕ್ಕೂ ಕೂಡ ನಮ್ಮ ಕೈನಲ್ಲಿ ಒಂದು ಕಾಸಾದ್ರೂ ಇಲ್ಲವಲ್ಲ ಅಂತೇಳಿ ಸೋಮಯ್ಯ ತನ್ನ ಮಡದೀಗೆ ಯೇಳ್ದಾ.

''ಸ್ವಾಮಿ ಅದಕ್ಕಾಗೀ ಚಿಂತೆ ಮಾಡಬೇಡಿ. ನೀವು ನನ್ನ ಮನೆ ಖರ್ಚಿಗಾಗಿ ಕೊಡ್ತಾ ಇದ್ರಲ್ಲ, ಆ ಹಣದಲ್ಲಿ ಒಂದ್ ಹಣವನ್ನ ನನ್ನ ಮುತ್ತಿನ ಸೆರಗಿನಲ್ಲಿ ಗಂಟಾಕಿ ಮಡಗಿದ್ದೀನಿ.

ತೆಗೆದುಕೊಳ್ಳಿ ಸ್ವಾಮಿ'' ಅಂತೇಳಿ ತನ್ನ ಮುತ್ತಿನ ಸೆಂರಗಿನಲ್ಲಿದ್ದಂಥ ಒಂದು ಹಣವನ್ನು ಬಿಚ್ಚಿ ತನ್ನ ಪತಿ ಕೈಲಿ ಕೊಟ್ಲು. ಆವಾಗ ಸೋಮಯ್ಯ ಆ ಹಣವನ್ನು ತೆಗೆದುಕೊಂಡು ಅಂಗಡಿ ಸಾಲಿಗೆ ಬಂದ. ಒಂದು ಕಾಸು ವಿಷ ತಗೊಂಡು ಮನೆಗೆ ಬಂದ.

ಮನೆಗೆ ಬಂದು ತನ್ನ ಮಡದಿ ಕೈನಲ್ಲಿ ಕೊಟ್ಟ. ಮಾದೇವಿ ಇದೋ ವಿಷವನ್ನ ತಕ್ಕೊಂಡು ಬಂದಿದ್ದೀನಿ. ತೆಗೆದುಕೋ. ವಿಷವೇನೊ ತಂದ್ಕೊಟ್ರಿ ಸರಿ; ಈ ವಿಷದ ಗಂಜಿಯನ್ನು ಕಾಯಿಸ್ಬೇಕು ಅಂತ ಹೇಳಿದ್ರೇ ನಮಗೆ ಒಂದು ಹೊಸದಾದಂಥ ಮಡಿಕೆ ಬೇಕು. ಅವಾಗ ಮಾದೇವಿ ಹಾಗೇ ಆಗ್ಲಿ. ಆ ಒಂದು ಪುಟ್ಟದಾದಂತಹ ಒಂದು ಹೊಸದಾದಂತಹ ಒಂದು ಬಾಂಡು ಬೇಕಲ್ಲ, ಅಂತ ಅಂದ್ಲು. ಬಾಂಡು ಅಂತ ಹೇಳಿದ್ರೇ ಒಂದು ಮಡಿಕೆಯನ್ನ ತೆಗೆದುಕೊಂಡು ಬರ್ತೀನಿ ಅಂತ ಹೇಳಿ ಕುಂಬಾರರ ಬೀದಿಗೋಗ್ಬಿಟ್ಟು, ಒಂದು ಮಡಿಕೆನ್ನ ತೆಗೊಂಬಂದು ಕೊಟ್ಟ. ಅವಾಗ ಮಾದೇವಿ, ಆ ಮಡಿಕೆಯನ್ನ ಈಸ್ಕೊಂಡು ತನ್ನ ಪತಿಗೆ ಹೇಳ್ತಾ ಇದ್ದಾಳೆ; ಸ್ವಾಮಿ ವಿಷನೂ ತಂದ್ಕೊಟ್ರಿ. ಒಂದು ಮಡಿಕೆಯನ್ನೂ ಕೂಡ ತಂದ್ಕೊಟ್ರಿ ನಾವು ಈ ವಿಷವನ್ನು ಕಾಯ್ಸಿ ಕುಡಿಯೋಣಾ ಅಂತ ಹೇಳಿದ್ರೆ ಇಂಥ ಹಾಡು ಹಗಲೊತ್ತಿನಲ್ಲಿ ನಾವು ವಿಷ ಕುಡಿಯೋದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ನಮ್ಮ ಪರಿಚಯದವದು ಆಗ್ಲೀ ನಮ್ಮ ಅಕ್ಕಪಕ್ಕದ ನೆರೆಹೊರೆಯವ್ರು ಹೆಣ್ಣುಮಕ್ಕಳೇ ಆಗ್ಲೀ ಸತಿಪತಿಗಳೀರ್ವರೂ ಕೂಡ ವಿಷ ಕುಡ್ದು ಪ್ರಾಣ ಬಿಟ್ಟಿದ್ದಾರೆ ಅಂತ ಹೇಳಿ ನಾವು ವಿಷ ಕುಡಿಯೋದನ್ನ ತಪ್ಪಿಸಿಬಿಡ್ತಾರೆ.

ಆದ್ದರಿಂದ ಎಲ್ರೂ ಕೂಡ ಊಟ ತಿಂಡಿ ಮುಗಿಸ್ಕೊಂಡು ನಿಶ್ಯಬ್ದವಾಗಿ ಮಲಗಿರೋಂಥ ನಿಶ್‌ರಾತ್ರಿ ಟೈಮಲ್ಲಿ ನಾವು ವಿಷವನ್ನ ಕಾಯ್ಸಿ ಕುಡಿದು ಪ್ರಾಣ ಬಿಡೋಣ ಸ್ವಾಮಿ ಅಂತ ಅಂದ್ಲು. ಅಂದಾಗ ಸೋಮಪ್ಪನೂ ಕೂಡ ಮಾದೇವಿ ನಿನ್ನ ಮನಸ್ಸಿಗೆ ಯಾವ ರೀತಿಯಾಗಿ ಬರ್ತದೋ ಹಾಗೇ ವಿಷದ ಗಂಜಿಯನ್ನ ಕಾಯ್ಸು ಅಂತ ಹೇಳಿ ಆ ಸೋಮಪ್ಪ ಮಡದಿಗೆ ಹೇಳ್ಕೊಂಡ. ಅವಾಗ ಮಾದೇವಿ ಕೂಡ ತನ್ನ ಪತಿದೇವನ ಮಾತನ್ನ ಕೇಳ್ಕೊಂಡು, ಬೇಕಾದಂಥ ದುಃಖದಲ್ಲಿ ನಿಶ್ಯಬ್ದರಾತ್ರಿ ಒಳಗೇ ಒಲೇಮೇಲೆ ಆ ಬಾಂಡವನ್ನು ಇಟ್ಟು, ಅಳತೆ ನೀರನ್ನ ಹೂದು ಒಂದಷ್ಟು ಅಂದ್ರೆ ಒಂದು ಪಾವಷ್ಟು ಅಕ್ಕಿನಾ ಹಾಕಿ ಅಕ್ಕಿ ಗಂಜಿಯನ್ನು ಕಾಯ್ಸಿ ತನ್ನ ಪತಿ ತಂದು ಕೊಟ್ಟಂಥ ವಿಷವನ್ನು ಆ ಗಂಜಿಯಲ್ಲಿ ಬೆರೆಸ್ಕೊಂಡ್ಲು. ಬೆರೆಸ್ಕೊಂಡು ಬಟ್ಲುಗೆ ಬಿಟ್ಟು ಆರಾಕಿದ್ದಾಳೆ. ಸ್ವಲ್ಪ ಹೊತ್ತು ಆರ್ಲೀ ಅಂತ. ಅವಾಗ ಸತಿಪತಿಗಳು ಅಂತ ಹೇಳಿದ್ರೆ ಅಷ್ಟೆ ಸದ್ಭಕ್ತಿಯಿಂದ ಅಷ್ಟೇ ಪ್ರೀತಿ ವಾತ್ಸಲ್ಯಗಳಿಂದ ಇದ್ದರಂತೆ. ಆವಾಗ ಮಾದೇವಮ್ಮನಿಗೆ ಬೇಕಾದಂಥ ಎಲ್ಲೂ ಇಲ್ಲದಂಥ ದುಃಖ ಬಂತಂತೆ ಕೂಡ. ಪ್ರಾಣ ಬಿಡೊಂಥ ಸಂದರ್ಭ ಬಂತಲ್ಲ ಶಿವನೇ ಅಂತ ಯೇಳಿ ತನ್ನ ಪತಿದೇವನ ಕೊರಳನ್ನ ತಬ್ಕೊಂಡು ಮಾದೇವಿ ಬೇಕಾದಂಥ ದುಃಖವನ್ನು ಮಾಡಿದ್ಲಂತೆ. ಅಂದಾಗ ಸೋಮಪ್ಪನೂ ಕೂಡ ತನ್ನ ಮಡದಿ ಕೊರಳನ್ನು ತಬ್ಕೊಂಡು ದುಃಖ ಮಾಡ್ಬೇಕಾಗಿದ್ರೇ ಈ ಶಿವಶರಣರ ಕಣ್ಣೀರು ಪರಮೇಶ್ವರನಾಗಿರೋ ಅಂಥ ಶಿವನಿಗೂ ಹಾಗೂ ಪರಶಿವನ ಮಡದಿಯಾಗಿರತಕ್ಕಂಥ ಗೌರಮ್ಮನಿಗೂ ಕೂಡ ಅರಿವಾಯ್ತಂತೆ.

ಅರಿವಾದಾಗ ಆ ಪರಶಿವನ ಮಡದೀಯಾಗಿರತಕ್ಕಂಥ ಗೌರಮ್ಮ ಕೇಳ್ಕೊಂಡ್ಲಂತೆ ತನ್ನ ಪತಿಯನ್ನ. ಸ್ವಾಮಿ ನೀವು ಇಡೀ ಜಗತ್ತಿನ ಇರಾಎಂಭತ್ತು ಕೋಟಿ ಜೀವರಾಶಿಗೆ ಅನ್ನ ಸಂತರ್ಪಣೆಯನ್ನ ಮಾಡ್ತಿದ್ದೀರಿ ಹಾಗೂ ಕೂಡ ನೀವು ಇಡೀ ಜಗತ್ತಿನ ಮಾನವರೆಲ್ಲರಿಗೂ ಕೂಡಾ ಸಲಹುವಂಥ ಭಾರನೂ ನಿಮ್ದೇ ಆಗಿದೆ. ಒಬ್ರ ಕಣ್ಣಿಗೆ ಸುಣ್ಣ, ಒಬ್ರ ಕಣ್ಣಿಗೆ ಬೆಣ್ಣೆ ಅನ್ನುವ ಹಾಗೇ ಮಾಡೀದ್ದೀರಲ್ಲ ಯಾಕೆ ಸ್ವಾಮೀ ಅಂತ ಕೇಳ್ಕೊಂಡ್ಲು.

''ಏನು ಮಡದಿ ಪಾರ್ವತಿ ಹೇಳ್ತಾ ಇದ್ದೀಯಲ್ಲಾ ಅಂದ್ರು''. ಸ್ವಾಮಿ ನೋಡಿ ಜಗತ್ತಿನಲ್ಲಿ ಶಿವಶರಣ್ರು ಸತ್ಪುರುಷ್ರು, ನಿಮ್ಮನ್ನೇ ನಂಬಿ ಕಾಲ ಕಳೆಯವಂಥ ಭಕ್ತರು ಕೂಡಾ ಇದ್ದಾರೆ. ಹಾಗಿದ್ರೂ ಕೂಡ ಸತಿಪತಿಗಳೀರ್ವರೂ ಕೂಡ ಒಬ್ರು ಕೊರಳನ್ನ ಒಬ್ರು ತಬ್ಕೊಂಡು ದುಃಖ ಮಾಡಿದಂಥ ಕಣ್ಣೀರು ನಮ್ಮ ಕೈಲಾಸಕ್ಕೆ ಅರಿವಾಗಿದೆ. ನೋಡಿ ಸ್ವಾಮಿ ಇನ್ನರಗಳಿಗೆಯೊಳಗೋಗಿ ಅವ್ರಿಗೆ ಪ್ರಾಣವನ್ನುಳಿಸಿ ಅವ್ರಿಗೆ ಒಂದು ಸಂತಾನವನ್ನು ಕೊಡಿ. ಇಲ್ಲಂಥ ಹೇಳಿದ್ರೆ ನಮ್ಮ ಎಸ್ರು ಹೇಳ್ಕೊಂಡು ವಿಷ ಕುಡ್ದು ಪ್ರಾಣ ಬಿಟ್ಟು ಬಿಡ್ತಾರಲ್ಲ ಸ್ವಾಮಿ, ಅಂತೇಳಿ ಆ ಗೌರಮ್ಮನಾದಂಥ ತಾಯೀ ತನ್ನ ಪತಿಗೆ ಹೇಳ್ಕೊಂಡ್ಲು. ಅವಾಗ ಪರಮೇಶ್ವರನಾದಂಥ ಶಿವನೂ ಯೋಚ್ನೆಮಾಡಿದ್ರು. ನಿಜ ಪಾರ್ವತಿ ನೀನು ಹೇಳಿದಂಥ ಮಾತು ಸತ್ಯ ಅಂಥ ಹೇಳಿ ಪರಮೇಶ್ವರನಾಗಿರತಕ್ಕಂಥ ಶಿವನೂ ಆ ಶಿವಶರಣರ ಒಂದು ಸತ್ಯಗೋಸ್ಕರವಾಗಿ ಸದ್ಭಕ್ತಿಗೋಸ್ಕರವಾಗಿ ತನ್ನ ಕೈಲಾಸದಲ್ಲಿದ್ದಂಥ ಒಂದು ಗಿಳಿಯನ್ನ ತಾವು ಹಿಡ್ದು ಅದನ್ನ ಸುಟ್ಟು ಭಸ್ಮ ಮಾಡಿ, ಆ ಭಸ್ಮವನ್ನು ತೆಗೆದುಕೊಂಡು ಆ ನಿಶ್‌ರಾತ್ರಿ ಒಳಗೆ ಕೈಲಾಸಬಿಟ್ಟು ಭೂಲೋಕಕ್ಕೆ ಬಂದ್ರು.

ಆ ಶಿವಶರಣರ ಮನೆ ಬಾಗಿಲಲಿ ನಿಂತ್ಕೊಂಡು ಆ ಶಿವಶರಣರನ್ನ ಸತ್ಯಪರೀಕ್ಷೆ ಮಾಡೀ ಅಂತ ಹೇಳಿದ್ರೆ ಕ್ವಾರಣ್ಯದ ರೂಪಿನಲ್ಲಿ ಕ್ವಾರಣ್ಯವನ್ನ ಸಾರಿ ಆ ಸತಿಪತಿಗಳೀರ್ವರೂ ಕೂಡ ವಿಷದ ಬಾಟಲಿಯನ್ನೆತ್ತಿ ಕುಡಿಯುವಂಥ ಸಂದರ್ಭದಲ್ಲಿ ಬಾಗಿಲಲ್ಲಿ ನಿತ್ಕೊಂಡು ಸಾಧುಜಂಗಮರಂತೆ, ಕ್ವಾರಣ್ಯವನ್ನು ಸಾರಿದಾಗ 'ಶಿವ ಶಿವಾ ಯಾರೋ ಇಂಥ ನಿಷ್‌ರಾತ್ರಿಯೊಳಗೆ ಬಂದು ನಮ್ಮ ಮನೆಬಾಗಿಲಲ್ಲಿ ಕ್ವಾರಣ್ಯ ಸಾರ್ತ ಇದ್ದಾರಲ್ಲ ಅಂತ ಯೋಳಿ ಸತಿಪತಿಗಳೀರ್ವರೂ ಕೂಡಾ ಕುಡಿತಾ ಇದ್ದಂಥ ವಿಷದ ಬಾಂಡಾನ್ನ ಕೆಳಗೆ ಮಡಗಿ ಓಡಿ ಬಂದು ಮಾದೇವಮ್ಮ 'ಸ್ವಾಮಿ ತಾವು ಯಾರು ? ಇಂಥ ನಿಷರಾತ್ರಿಯೊಳಗೆ ಬಂದು ನಮ್ಮನೆಯಲ್ಲಿ ಅನ್ನವನ್ನ ಬೇಡ್ತಾ ಇದ್ದೀರಲ್ಲ. ನಮ್ಮ ಮನೆಯಲ್ಲಿ ಅನ್ನ ದೊರೆಯುವುದಿಲ್ಲ. ಮುಂದಿನ ಮನೇಲಾದ್ರೂ ಕೂಡಾ ಹೋಗಿ ಬೇಡಿ ಸ್ವಾಮಿ ಅಂತ ಹೇಳಿ ಮಾದೇವಮ್ಮ ಹೇಳ್ದಾಗ, ಅಮ್ಮ ತಾಯಿ ಇಂಥ ನಿಷ್‌ರಾತ್ರಿ ಒಳಗೆ ಮತ್ತೊಬ್ರು ಮನೆಯೊಳಗೆ ನಾನು ಅನ್ನ ಬೇಡಕ್ಕೆ ಬಂದವನಲ್ಲ. ಶರಣರ ಮನೆ ಪ್ರಸಾದವಾಗ್ಬೇಕು ಅಂತ ಯೇಳಿ ಬಂದವ್ನು ತಾಯೀ ಅಂತ ಹೇಳಿ ಸ್ವಾಮಿ ಪರಮೇಶ್ವರನಾಗಿರುವಂತವ್ರು, ಸಾಧು ಜಂಗಮರಂತೆ ರೂಪ ತಾಳ್ಕೊಂಡು ನಿಂತಿರ್ಬೇಕಾದ್ರೆ ಮಾದೇವಮ್ಮ ನೋಡ್ಬಿಟ್ಟು ಪಾಪ ಹೀಗೆ ಯಾರೋ ಸಾಧುಗಳು ಬಂದು ಕೇಳ್ತಾ ಇದ್ದಾರಲ್ಲ ಸ್ವಾಮಿ ಅಂತ ಹೇಳಿ ತನ್ನ ಪತಿಯನ್ನು ಕೇಳ್ಕೊಂಡ್ಲು.

ಅವಾಗ ಸೋಮಪ್ಪ ಹೇಳ್ತಾ ಇದ್ದಾನೆ. ಮಾದೇವಿ ನಾವು ಸತ್ಯದಿಂದ ಆ ಭಗವಂತನ ಭಕ್ತಿವಂತರಾಗಿ ಕಾಲಕಳೀತಾ ಇರ್ತ್ತಕ್ಕಂಥವ್ರು. ಸಾಧುಗಳೇ ಆಗಲಿ ಸಂನ್ಯಾಸಿಗಳೇ ಆಗಲೀ ಯಾರೇ ಆದ್ರೂ ಕೂಡಾ ನಾವು ಅವರಿಗೆ ಹುಸಿಯ ನುಡಿಗಳನ್ನಾಡಬಾರ್ದು. ಸತ್ಯದ ನುಡಿಯವ್ನ ಹೇಳ್ಬಿಡು. ಮಾದೇವಿ ನಮ್ಮ ಮನೆಯಲ್ಲಿ ಅನ್ನವಿಲ್ಲ ಸ್ವಾಮಿ. ವಿಷದ ಗಂಜಿ ಕಾಯಿಸ್ಕೊಂಡಿದ್ದೀನಿ. ನಾವಿಬ್ರು ಕುಡಿಯಕ್ಕೋಸ್ಕರವಾಗಿ ಅಂತ ಹೇಳಿ ಸತ್ಯದ ನುಡಿಯನ್ನ ಹೇಳು ಅಂತ ಹೇಳಿ ಸೋಮಪ್ಪ ಹೇಳ್ದಾ.

ಅವಾಗ ಮಾದೇವಮ್ಮ ಬಂದು ಸ್ವಾಮಿ ನಮ್ಮ ಮನೆಯಲ್ಲಿ ಅನ್ನವಿಲ್ಲ. ನಾವು ಸತಿಪತಿಗಳು ವಿಷ ಕುಡಿಯಕ್ಕೋಸ್ಕರವಾಗಿ ವಿಷದ ಗಂಜಿಯನ್ನ ಕಾಯಿಸ್ಕೊಂಡಿದ್ದೀವಿ. ಅದನ್ನ ಮತ್ತೊಬ್ರಿಗೆ ನೀಡೋದು ಸಾಧ್ಯವಿಲ್ಲ ಅಂತ ಹೇಳಿ ಆ ಸಾಧು ಜಂಗಮ ರೂಪದಲ್ಲಿರುವಂಥ ಪರಶಿವನಿಗೆ ಹೇಳ್ದಾಗ, ಅಮ್ಮ ತಾಯಿ ಶರಣರ ಬಾಯಲ್ಲಿ ವಿಷ ಅಂತ ಬರಬಾರ್ದು ಕಣಮ್ಮ. ಈ ಹಸಿದಿರುವಂಥ ಟೈಂನಲ್ಲಿ ನೀನು ವಿಷ ಕೊಟ್ಬಿಡು, ನಮಗೆ ಅಮೃತವಾಗ್ತೈತಮ್ಮ ಅಂತ ಹೇಳಿ ಆ ಸ್ವಾಮಿಯವ್ರು ಶಿವಶರಣೆಯಾದಂಥ ಮಾದೇವಮ್ಮನವರಿಗೆ ಹೇಳಿದ್ರು.

'ಅಯ್ಯೊಯ್ಯೋ ಪಾಪ ಎಷ್ಟು ಹಸಿದು ಬಂದಿದ್ದಾರೋ ಹೀಗೆ ಹೇಳ್ತಾರಲ್ಲ ಅಂತೇಳಿ ತನ್ನ ಪತಿಯನ್ನ ಕೇಳ್ಕೊಂಡ್ಳು "ಏನ್ ಸ್ವಾಮಿ ಹೀಗೆ ಹೇಳ್ತಾ ಇದ್ದಾರಲ್ಲ. ಸಾಧುಗಳು ?" "ಮಾದೇವಿ ಹಸಿದಿರುವಂಥ ವೇಳಾದಲ್ಲಿ ವಿಷಕೊಟ್ರು ಕೂಡಾ ನಮಗೆ ಅಮೃತವಾಗ್ತದೆ, ಅಂತ ಅಂದ್ಮೇಲೆ ನಾವು ವಿಷ ಕುಡಿಯೋದೇ ಬೇಡ. ಆ ಸಾಧುಗಳಿಗೆ ಕೊಟ್ಬಿಡು" ಅಂತ ಹೇಳಿ ಸೋಮಪ್ಪ ಹೇಳಿದ್ರು. ಅವಾಗ ಮಾದೇವಮ್ಮ ಆ ವಿಷದ ಬಟ್ಲನ್ನ ತಂದು ಆ ಶಿವನ ಕೈಲಿದ್ದಂಥ ಅಕ್ಷಯ ಪಾತ್ರೆಗೆ ಆ ವಿಷನೆಲ್ಲಾ ಎರದ್ಲಂತೆ. ಅವಾಗ ಸ್ವಾಮಿ ಅವರನ್ನ ಪರಿಶೋಧನೆ ಮಾಡೋದಿಕ್ಕಾಗಿ ಆ ವಿಷವೆಲ್ಲ ಕೂಡ ಕುಡಿಬೇಕಾಗಿದ್ರೂವೆ, ನೋಡಮ್ಮ ಆ ಬಟ್ಟಲಿನಲ್ಲಿ ಏನಾದ್ರೂ ಅಲ್ಪಸ್ವಲ್ಪ ಉಳಿದಿದ್ದಾತೂ ? ಅದಕ್ಕೆ ಸ್ವಲ್ಪ ನೀರು ಬಿಟ್ಟು ಆ ಬಟ್ಟಲನ್ನ ತೊಳೆದ್ಲು. ಆ ಅಕ್ಷಯ ಪಾತ್ರೆಗೆರೆದಾಗ, ಪರಮೇಶ್ವರನಾದಂಥ ಶಿವನು ಆ ಅಕ್ಷಯ ಪಾತ್ರೆಯನ್ನು ವಿಷ ಇದ್ದಂಥದನ್ನ, ಎತ್ತಿ ಗಟಗಟನೇ ಕುಡಿದು ಹಾಗೇ ಮೂರ್ಛೆ ಹೋಗ್ಬಿಟ್ಟ. ಅಯ್ಯೊ ಪಾಪವೇ ಇದೇನು ? ವಿಷ ಕೊಟ್ರು ಅಮೃತವಾಯ್ತದೆ ಅಂತ ಹೇಳಿ ಸಾಧುಗಳು ಕುಡಿದುಬಿಟ್ಟು ತಕ್ಷಣದಲ್ಲಿ ಪ್ರಾಣಬಿಟ್ಬಿಟ್ರಲ್ಲಾ ಅಂತ ಹೇಳಿ ಸತಿಪತಿಗಳೀರ್ವರೂ ಕೂಡಾ ಓಡೋಗಿ ಆ ಶಿವನನ್ನ ತಬ್ಕೊಂಡು ದುಃಖ ಮಾಡ್ತಾರೆ ಯಾಕೆ ಅಂತ ಹೇಳಿದ್ರೆ, ಗ್ರಾಮದವ್ರು ಇದೇನು ಪಾಪ ? ಯಾರೋ ಸಾಧುಗಳು ಊಟಕ್ಕೆ ಬಂದಿದ್ರೋ ದಾನಕ್ಕೆ ಬಂದಿದ್ರೋ ಬಿಕ್ಷಕ್ಕೆ ಬಂದಿದ್ರೋ ಅಂತವ್ರಿಗೆ ವಿಷ ಕೊಟ್ಟು ಪ್ರಾಣ ತೆಗೆದ್ಬಿಟ್ಟವ್ರಲ್ಲ, ಅಂತೇಳಿ ನಮಗೆ ಕೆಟ್ಟ ಅಪವಾದ ಬರ್ತದಲ್ಲ ಅಂತೇಳಿ ಆ ಶಿವನನ್ನ ತಬ್ಕೊಂಡು ದುಃಖ ಮಾಡೋವಾಗ ಪರಮೇಶ್ವರನಾದಂಥ ಶಿವನಿಗೆ ಭಾಳ ಆನಂದ ವಾಯ್ತಂತೆ. ಪಾಪ ಇಂಥ ಭಕ್ತಾದಿ ಭಕ್ತರನ್ನ ನಾನು ಕಳೆದುಕೊಳ್ತಾ ಇದ್ದನಲ್ಲ ಅಂಥ ಹೇಳಿ

ಆ ಮೋರ್ಚದಿಂದ ಹಾಗೇ ತಿಳಿದಂತವರಾಗಿ 'ಅಯ್ಯಾ ಸೋಮಪ್ಪ ಮಾದೇವಮ್ಮ ದುಃಖ ಮಾಡ್ಬೇಡಿ ನೀವು ಯಾತಕ್ಕೋಸ್ಕರವಾಗಿ ವಿಷ ಕುಡಿತಾ ಇದ್ರೀ ಏನೂ ಅನ್ನೋದು ನನಗೆ ಚೆನ್ನಾಗಿ ಅರಿವಾಗಿದೆ. ಆದ್ರೂ ಕೂಡ ನೀವು ದುಃಖ ಪಡಬೇಕಾದ್ದಿಲ್ಲ. ನಿಮಗೆ ಸಂತಾನವಿಲ್ಲದಕ್ಕೋಸ್ಕರವಾಗಿ ತಾನೆ ನೀವು ದುಃಖ ಪಡ್ತಾ ಇದ್ದದ್ದು ? ನೋಡಪ್ಪ ನನ್ನಲ್ಲಿ ಒಂದಷ್ಟು ಭಸ್ಮ ಇದೆ. ಅದನ್ನ ಕೊಡ್ತೀನಿ. ಇದನ್ನ ನೀವು ಸ್ನಾನ ಮಡಿ ಮಾಡ್ಕೊಂಡು ಮಿಂದು, ಮಡಿ ಉಟ್ಕೊಂಡು, ಪರಮೇಶ್ವರನನ್ನ ನಿಮ್ಮ ಮನದಲ್ಲಿ ನೆನಸ್ಕೊಂಡು, ಈ ನಾನು ಕೊಡುವಂಥ ಒಂದು ಭಸ್ಮವನ್ನ ನಿಮ್ಮ ಹೃದಯಕ್ಕೆ ಸಲ್ಲಿಸಿ. ಆನಂತರವಾಗಿ ನಿಮಗೆ ಒಂದು ಸಂತಾನ ದೊರೆಯಬಹುದ್ದು ಅಂತೇಳಿ ಪರಮೇಶ್ವರ ಮಾದೇವಮ್ಮನ ಕೈಲಿ ಕೊಟ್ರು. ಕೊಟ್ಟು ಅವರಿಗೆ ಆಶೀರ್ವಾದವನ್ನು ಮಾಡೀ ನಿಮಗೆ ಯಾವಾಗ ಏನಾರೂ ಇಂಥ ಕಷ್ಟಗಳು ಬಂದಾಗ, ಆ ಪರಶಿವನನ್ನ ನಿಮ್ಮ ಮನಸ್ನಲ್ಲಿ ನೆನಸ್ಕೊಳ್ಳಿ ಅಂತೇಳಿ ಅವರಿಗೆ ಆಶೀರ್ವಾದ ಮಾಡಿ ಸ್ವಲ್ಪ ದೂರ ಹೋದರಂತೆ. ಹಾಗೇ ಹೊರಟು ಇವ್ರು ಕಣ್ಣಿಗೆ ಮಾಯವಾದರು.

ಅವಾಗ ಸತ್ಯವಂತೆ ಮಾದೇವಮ್ಮ ಸ್ನಾನ ಮಡಿ ಮಾಡ್ಕೊಂಡು, ಪತಿದೇವ್ರ ಪಾದ ಪೂಜೆ ಮಾಡೀ ಆ ಶಿವನು ಕೊಟ್ಟಂಥ ಪ್ರಸಾದವನ್ನ ತನ್ನ ಹೃದಯಕ್ಕೆ ಸಲ್ಲಿಸಿದಾಗ, ಶಿವನ ಆಶೀರ್ವಾದದಿಂದ ಒಂದೆರಡು ದಿನಗಳು ತುಂಬಿ ನಾಲ್ಕೈದು ದಿನ ತುಂಬಾದ ಮೇಲೆ ಒಂದ್ವಾರ ತುಂಬ್ತು. ಮತ್ತೇ ಎರಡುವಾರ ತುಂಬ್ತು. ಮೂರುವಾರ ತುಂಬ್ತು. ನಾಲ್ಕನೇ ವಾರ ತುಂಬಿದ ಮೇಲೆ, ಅಂದಮೇಲೆ ಒಂದುತಿಂಗಳು ತುಂಬಿದ ಮೇಲೆ, ಎರಡು ಎರಡು ತಿಂಗ್ಳು ಮೂರು ತಿಂಗ್ಳು ನಾಲ್ಕು ತಿಂಗ್ಳು ಐದು ತಿಂಗ್ಳು ಏಳನೇ ತಿಂಗ್ಳು ತುಂಬಿದ ಮೇಲೆ ಕೂಡ ಮಾದೇವಮ್ಮ ಗರ್ಭವತಿ ಆದ್ಲು.

ಏಳುತಿಂಗಳಿಗೆ ಅಂದ್ರೇ ಹಿಂದಿನಕಾಲದಲ್ಲಿ ಹೆಣುಮಕ್ಳು ಪಾಪ ಗರ್ಭಿಣಿಯರಾದ್ರೂ ಅಂದ್ರೇ ಏನಾದ್ರೂ ಒಂದಷ್ಟು ಬವಕೇ ಪಟ್ಕೊತಾ ಇದ್ರು. ಏನು ಭಾವಕೇ ತಳ್ಕೋತಿದ್ರು ಅಂದ್ರೆ, ಕೆಲವರಿಗೆಲ್ಲ ಸಿಹಿಯಾದ ಊಟ ಹಪ್ಪಳ ಉಪ್ಪಿನಕಾಯಿ ಹಿಂಗೆಲ್ಲ ಭವಿಸ್ಕೋತ್ತಾರೆ. ಕೆಲವು ಸಿಹಿತಿಂಡಿಗಳನ್ನು ಭಾವಿಸ್ಕೊತಾರೇ. ಆ ಬವಕೆ ಕಳ್ಕೋತಾರೆ. ಹಾಗೇ ಮಾದೇವಮ್ಮನು ಕೂಡಾ ಪಾಪ ಬಡತನದಲ್ಲಿದ್ದು, ಸತ್ಯದಲ್ಲಿ ಕಾಲ ಕಳತಿದ್ರು ಕೂಡ ಅವಳು ಹಾಗೇ ಅವಳ ಮನಸ್ಸಿಗೆ ಬಂದಂಥ ತಿಂಡಿಗಳನ್ನು ತಿಂದು ಹಾಗೆ ಬವಕೆ ಕಳ್ಕೊಂಡ್ಲು. ಹಾಗೇ ಏಳೆಂಟು ತಿಂಗ್ಳು ತುಂಬಿದೋ. ನವನಾರೊಂಭತ್ತು ತಿಂಗ್ಳು ತುಂಬಿ ಸತ್ಯವಂತೆ ಆದಂಥ ಮಾದೇವಮ್ಮನಲ್ಲಿ ಸೋಮಯ್ಯ ಅಕ್ಕಪಕ್ಕದ ನೆರೆಯವ್ರನ್ನ ಅಂದ್ರೆ ಹಿರಿಯವ್ರು ಹೆಣ್ಣುಮಕ್ಕಳನ್ನ ಕರೆದು ತನ್ನ ಮಡದಿ ಬಳಿ ಬಿಟ್ಟಾಗ ಆ ಗರ್ಭಬಾಧೆಯನ್ನ ಕಳಕೊಂಡು ಅವಳ ಗರ್ಭದಲ್ಲಿ ಶಿವನ ಆಶೀರ್ವಾದದಿಂದ ಒಂದು ಮಗು ಸಂತಾನವಾಗುತ್ತೆ.

ಅವಾಗ ಸೋಮಪ್ಪ ಆ ಮಗು ಏನೂ ಅಂತ ಕೇಳ್ದಾಗ ಗಂಡುಮಗು ಅಂತೇಳಿ ಅಕ್ಕಪಕ್ಕದಲ್ಲಿದ್ದವ್ರು ಹೇಳ್ತಾರೆ. ಶಿವ್ನು ನಮಗೆ ಏನೋ ಒಂದು ಸಂತಾನವನ್ನ ಕೊಟ್ನಲ್ಲ

ಅಂತ ಹೇಳಿ ಆ ಮಗುವನ್ನು ಎಚ್ಚರದಲ್ಲಿ ಸಾಕೀ ಸಲಹುತ್ತಾ ಬಂದ್ರು. ಮತ್ತೆ ಆ ಮಗುವನ್ನ ಹನ್ನೆರಡುದಿನ ತುಂಬಿದ ಮೇಲೆ ತನ್ನ ಕುಲಬಾಂಧವರನ್ನ ಕರೆದು ಹಾಗೂ ಕೂಡ ತನ್ನ ಬ್ರಾಹ್ಮಣ ಕುಲೋತ್ತಮರನ್ನ ಕರೆದು ಆ ಕಂದನಿಗೆ ಒಳ್ಳೆಗಳಿಗೆ ನಕ್ಷತ್ರದಲ್ಲಿ ಹುಟ್ಟಿರುವಂಥ ಒಂದು ಗಳಿಗೆ ಹಾಗೂ ಕೂಡ ಶಿವನ ವರಬಲದಲ್ಲಿ ಹುಟ್ಟಿರೊತಕ್ಕಂಥವ್ನು ಅಂತೇಳಿ ಆ ಕಂದನಿಗೆ ಕೆಲವಾರು ಮಂದಿಗೆ ಅನ್ನ ಸಂತರ್ಪಣೆಯನ್ನ ಮಾಡಿ ಮತ್ತು ಹೆಣ್ಣುಮಕ್ಕಳಿಗೆಲ್ಲ ಅರಿಶಿನ ಕುಂಕುಮ ಕೊಟ್ರು. ಮತ್ತೆ ಅರಿಶಿನ ಕುಂಕುಮವನ್ನ ಕೊಟ್ಟು ಆ ಕಂದನಿಗೆ ಭಕ್ತಿವಂತ ಮೈದಾಳರಾಮಯ್ಯ ಅಂತೇಳಿ ನಾಮಕರಣವನ್ನ ಮಾಡಿ ಆ ಕಂದನಿಗೆ ಎಣ್ಣುಮಕ್ಕಳಿಂದ ಕೆಲವಾರು ಜೋಗುಳ ಪದಗಳನ್ನ ಹಾಡುಗಳನ್ನು ಹಾಡ್ಸಿ, ಆ ಮಗುವನ್ನು ಸಾಕೀಸಲಹುತ್ತಾ ಬಂದ್ರು. ಸಾಕೀ ಸಲಹುತ್ತಾ ಬಂದ ಮೇಲೆ ಸತಿಪತಿಗಳೀರ್ವರು ಕೂಡಾ ಎಚ್ಚಾಳದಲ್ಲಿ ಆ ಕಂದನಿಗೆ ಸುಮಾರು ಅಂತ ಹೇಳಿದ್ರೆ ಒಂದೇಳು ವರ್ಷ ತುಂಬ್ತು.

ಅವಾಗ ಸೋಮಪ್ಪ ಏನ್ಮಾಡಿದ್ದಾನೆ ? ಮಾದೇವಿ ನಮಗೆ ಶಿವನು ಸಂತಾನವನ್ನೇನೋ ಕೊಟ್ಟ. ಆ ಮಗನೂ ಕೂಡ ನಮಗೆ ಒಳ್ಳೆ ಸುಪುತ್ರ ಜನಿಸಿದ್ದಾಯ್ತು. ಏಳುವರ್ಷ ಭಕ್ತಿ ಆಗಿದೆ. ಅವನನ್ನು ಗುರುಮಠಕ್ಕೆ ಸೇರಿಸ್ಬಿಟ್ರೇ ಒಂದ್‌ನಾಲ್ಕು ಅಕ್ಷರಗಳನ್ನು ಕಲಿತ್ಕೊಂಡ್ರೇ ಒಳ್ಳೆ ವಿದ್ಯಾವಂತನಾಗ್ತಾನೆ, ಬುದ್ಧಿಶಾಲಿಯಾಗ್ತಾನೆ ಹಾಗೂ ನಮ್ಮೆಸ್ರನ್ನ ಕೊಂಡಾಡ್ತಾನೆ, ಅಂತೇಳಿ ಸೋಮಪ್ಪ ಮಡದಿಗೆ ತಿಳಿಸಿ ಅಂಗಡಿ ಸಾಲಿಗೆ ಬಂದು ಅವನಿಗೆ ಬೇಕಾದಂಥ ಸ್ಲೇಟು ಬಳಪ ಪುಸ್ತಕವನ್ನ ತೆಗೆದುಕೊಂಡು ಬಂದು ಮತ್ತೆ ಹಾಗೇ ಅಣ್ಣುಕಾಯಿ, ಕಡ್ಡಿಕರ್ಪೂರಗಳನ್ನು ತಂದು ಸರಸ್ವತಿ ಪೂಜೆಯನ್ನ ಮಾಡೀ ಆ ಕಂದನಿಗೆ ಸ್ಲೇಟು, ಬಳಪ, ಪುಸ್ತಕ ಇವುಗಳನ್ನೆಲ್ಲ ಕೊಟ್ಟು ಅವನನ್ನ ಗುರುಮಠಕ್ಕೆ ಕರ್ಕೊಂಡು ಬರ್ತಾನೆ.

ಗುರುಮಠಕ್ಕೆ ಕರ್ಕೊಂಬಂದು ಅವನನ್ನ ಗುರುಮಠದಲ್ಲಿ ಬಿಟ್ಟು ಗುರುಗಳಿಗೆ-ತಿಳಿಸಿ ಸ್ವಾಮಿ ನನಗೆ ಅಪರೂಪಕ್ಕೆ ಭಗವಂತನು ಒಂದು ಕಂದನ್ನ ಕೊಟ್ಟಿದ್ದಾನೆ. ಈ ಮಗನಿಗೆ ನೀವು ವಿದ್ಯಾ ಕಲಿಸಿಕೊಡಬೇಕು ಅಂತೇಳಿ ಗುರುಗಳ್ನ ಕೇಳ್ಕೊಂಡಾಗ ಆ ಗುರುಗಳೂ ಕೂಡಾ ಅಯ್ಯಾ ಸೋಮಪ್ಪ ನೂರಾರು ಹುಡುಗರಿಗೆ ವಿದ್ಯೆ ಕಲಿಸ್ತಾ ಇದ್ದೀನಿ. ನಿನ್ನ ಮಗನಿಗೆ ಕಲಿಸೋದಿಲ್ಲೇನಪ್ಪಾ ? ಬಿಟ್ಹೋಗು ಅಂತೇಳಿ ಆ ಕಂದನ್ನ ಗುರುಮಠದಲ್ಲಿ ಇರಿಸ್ಕೊಂಡು ಸೋಮಯ್ಯನನ್ನ ಕಳಿಸ್ತಾ ಇದ್ದಾರೆ.

ಸೋಮಯ್ಯ ಬರ್ಬೇಕಾಗಿದ್ರೆ, ಬರುವಂಥ ದಾರಿ ಒಳಗೆ, ಸ್ವಲ್ಪಹೊತ್ತು ವಿಶ್ರಮಿಸಿ ಕೊಳ್ಳೋಣ ಅಂತೇಳಿ ಒಂದು ಆಲದಮರ ಸಿಕ್ಕತ್ತೆ, ಆಲದಮರದ ಅಡೆಲ್ಲಿ ಸ್ವಲ್ಪ ಹೊತ್ತು ಕುಳಿತ್ಕೋತಾನೆ. ಅಂದ್ರೇ ಆ ಗಳಿಗೆಯಲ್ಲಿ ಅವನಿಗೆ ಮೃತ್ಯು ಅನ್ನೋದು ಕಾದಿರುತ್ತೆ. ಪರಮೇಶ್ವರನ ಆಶೀರ್ವಾದವಿದ್ರೂ ಕೂಡ ಆ ಅಡವಿಯ ಅರಣ್ಯದಲ್ಲಿ ಸ್ವಲ್ಪ ಮರದಡಿಯಲ್ಲಿ ಕುಳಿತುಕೊಂಡಿರಬೇಕಾದ್ರೆ ಇವನಿಗಂತೂ ತೂಗುನಿದ್ರೆ ಬರುತ್ತೆ . ಸ್ವಲ್ಪ ಹೊತ್ತು ಹಾಗೇ ಅದರ ಮೇಲೆ ಒರಗಿರ್ತಾನೆ. ಅಲ್ಲಿ ಒಂದು ಕಾಳಿಂಗಸರ್ಪ ಬಂದು ಅವನನ್ನ

ಕಚ್ಚಿಬಿಡುತ್ತೆ. ಕಚ್ಚಿಬಿಟ್ಟಾಗ ಸೋಮಯ್ಯ ಆ ಕಾಳಿಂಗ ಸರ್ಪದ ವಿಷದಲ್ಲೇನೆ ಅವನೂ ಒದ್ದಾಡಿ ಅಲ್ಲೇ ಅವನು ಪ್ರಾಣ ಬಿಟ್ಟುಬಿಡ್ತಾನೆ. ಅವಾಗ ಅಕ್ಕಪಕ್ಕದಲ್ಲಿ ದನಕರುಗಳನ್ನ ಮೇಯ್ಸುತಿದ್ದಂಥ ಹುಡುಗ್ರು ಅಥವಾ ಯಾರೋ ತಿಳಿದವ್ರು ಬಂದು, ಅಯ್ಯೊ ಪಾಪ ಸೋಮಯ್ಯ ಗುರುಮಠಕ್ಕೆ ಹೋಗಿದ್ನೇನೋ. ಬರುವಂಥ ದಾರಿಯೊಳಗೆ ಪಾಪ ಕಾಳಿಂಗಸರ್ಪದಿಂದ ಮೃತಪಟ್ಟುಬಿಟ್ಟಿದ್ದಾನಲ್ಲ ಅಂತೇಳಿ ಹುಡುಗರಿಗೆ ಹೇಳಿ ಅವನ ಮಡದಿಗಾದ್ರೂ ತಿಳಿಸ್ರಪ್ಪಾ ಅಂತೇಳಿ ಹುಡುಗರಿಗೆ ಹೇಳಿ ಕಳಿಸಿದಾಗ ಹುಡುಗ್ರೆಲ್ಲಾ ಓಡಿ ಬರ್‍ತಾರೆ. ಅಮ್ಮ ಅಮ್ಮ ಹೀಗೆ ನಿನ್ನ ಪತಿ ಬರುವಂಥ ದಾರೀಲಿ ಹಾಗೆ ಮೂರ್ಛೆ ಹೋಗ್ಬಿಟ್ಟಿದ್ದಾರೆ. ಏನಂಥ ಗೊತ್ತಾಗ್ಲಿಲ್ಲ ಅಂತೇಳಿ, ಯಾಕೆಂದ್ರೆ ನಿಜವಾದ ಮಾತೇಳಿದ್ರೆ ಆ ಹೆಣ್ಣುಮಗ್ಳು ಪಾಪ ಏನಾಗ್ತಾಳೋ ಅಂತೇಳಿ ಹೇಳಿದಾಗ ಮಾದೇವಮ್ಮ ಬೇಗನೆ ಓಡಿಬರ್‍ತಾಳೆ. ಓಡಿಬಂದು ತನ್ನ ಪತಿಯನ್ನ ನೋಡುವಷ್ಟರೊಳಗಾಗಿ ಅವನು ಪ್ರಾಣ ಬಿಟ್ಟುಬಿಡುತ್ತಾನೆ. ಅವಾಗ ಮಾದೇವಮ್ಮ 'ಶಿವಾ ಶಿವಾ ಈಗಲೀಗ ನನ್ನ ಮಾಂಗಲ್ಯಭಾಗ್ಯ ಇಲ್ಲಿಗೇ ಮುಗಿದೋಯ್ತು. ನನ್ನ ಮುತ್ತೈದೆಸ್ಥಾನ ಮುಗಿದೈತಲ್ಲೋ ಶಿವನೆ ಅಂತೇಳಿ ಆ ಪತಿಯನ್ನು ತಬ್ಬಿಕೊಂಡು ಬೇಕಾದಂಥ ದುಃಖವನ್ನ ಮಾಡ್ತಾ ಕುಳಿತಿರ್‍ತಾಳೆ. ಅವಳ ದುಃಖವನ್ನ ನೋಡ್ತಾ ಅಕ್ಕಪಕ್ಕದಲ್ಲಿದ್ದಂಥ ಮಕ್ಕಳು ನೋಡಿ ಸಮಾಧಾನಗೊಳಿಸಬೇಕಾದ್ರೆ ಅಯ್ಯಾ ಹುಡುಗ್ರೇ ನನಗೋಸ್ಕರವಾಗಿ ಇಷ್ಟೊಂದು ಸಹಾಯ ಮಾಡಿದ್ದೀರಿ. ನನ ಕಂದ ಗುರುಮಠಕ್ಕೆ ವಿದ್ಯಾಭ್ಯಾಸಕ್ಕೆ ಹೋಗವ್ನೆ. ಅವನಿಗೂ ಸ್ವಲ್ಪ ನನ್ನ ಪತಿದೇವನ ಸಾವಿನ ಸುದ್ದಿಯನ್ನ ತಿಳಿಸಿಬಿಡ್ರಪ್ಪಾ ಅಂತೇಳಿ ಮಾದೇವಮ್ಮ ಆ ಹುಡುಗ್ರನ್ನ ಕೇಳ್ಕೊತ್ತಾಳೆ.

ಆವಾಗ ಹುಡುಗ್ರು ಇಂಥ ಕಷ್ಟಕಾಲದಲ್ಲಿ ನಾವು ಹೋಗಿ ಪಾಪ ಅವರ ಕಂದನಿಗೆ ತಿಳಿಸ್ಲಿಲ್ಲ ಅಂತ ಅಂದ್ಮೇಲೆ, ಏನು ಸಾರ್ಥಕ ಅಂತೇಳಿ ಹುಡುಗ್ರೆಲ್ಲಾ ಮಾತಾಡ್ಕೊಂಡು ಓಡೋಗಿ ಆ ಕಂದನಾಗಿರತಕ್ಕಂಥ ಮೈದಾಳ ರಾಮಯ್ಯನಿಗೆ ತಿಳಿಸ್ತಾರೆ. ಗುರುಗಳಿಗೆ ತಿಳಿಸ್ತಾರೆ. ಅವಾಗ ಸ್ವಾಮಿ ನಮ್ಮ ತಂದೆ ಹೋಗ್ತಾ ಇರ್ಬೇಕಾದ್ರೆ ದಾರಿ ಒಳಗೆ ಕಾಳಿಂಗಸರ್ಪದಿಂದ ಮೃತಪಟ್ಟಿದ್ದಾರಂತೆ. ನಾನು ನನ್ನ ತಂದೆಯನ್ನ ನೋಡ್ಕೊಂಡು, ನನ್ನ ತಂದೆ ಸಾವನ್ನ ಮುಗಿಸ್ಕೊಂಡು, ಅಂದ್ರೇ ಉತ್ತರಕ್ರಿಯಾದಿ ಮುಗಿದ್ಮೇಲೆ, ನಾನು ಗುರುಮಠಕ್ಕೆ ಬರ್‍ತೀನಿ ಸ್ವಾಮಿ ಅಂತೇಳಿ, ಗುರುಗಳನ್ನು ಕೇಳ್ಕೊಂಡು ಅವನು ಓಡಿ ಬಂದು ತನ್ನ ತಂದೆಯ ಎದೆಯ ಮೇಲೆ ಬಿದ್ದು ಒದ್ದಾಡಿ ಬೇಕಾದಂಥ ದುಃಖವನ್ನ ಮಾಡೀ ತಾಯಿ ಕೊರಳನ್ನ ತಬ್ಕೊಂಡು ದುಃಖವನ್ನು ಮಾಡುವಾಗ ತಾಯಿಮಗ ಇಬ್ರೂ ಕೂಡ ದುಃಖ ಮಾಡ್ಕೊಂಡು ಮಗು ಇಲ್ಲಿಗೆ ನೀನು ತಂದೆಯನ್ನ ಕಳಕಂಡೆ. ನನ್ನ ಪತಿಯನ್ನ ನಾನು ಕಳಕೊಂಡೆ. ನಿಮ್ಮ ತಂದೆ ನಮ್ಮಿಬ್ಬರನ್ನ ಈ ಜಗತ್ತಿನಲ್ಲಿ ಬಿಟ್ಟು ಹೊರಟ್ಬಿಟ್ರು ಅಂತೇಳಿ ಒಬ್ಬರಿಗೊಬ್ರು ಸಮಾಧಾನವನ್ನು ತಂದ್ಕೊಂಡು ಹಾಗೇ ಮನೆಗೆ ಬರ್ಬೇಕಾದ್ರೆ ಕಂದನಿಗೆ ಹೇಳ್ತಾ ಇದ್ದಾಳೆ. ಮಗು ಮೈದಾಳರಾಮ ನಿಮ್ಮ ತಂದೆ ಇದೂವರೆಗೂ ಕೂಡ ನನಗೆ ಯಾವ ಕಷ್ಟಗಳನ್ನು ಕೊಟ್ಟವರಲ್ಲ ಹಾಗೂ ಕೂಡ ನಾವು ಬಡತನದಲ್ಲಿ ಕಾಲವನ್ನು ಕಳೆದವರು. ನಮ್ಮಲ್ಲಿ ಇವತ್ತಿನ ದಿವಸ ನಿಮ್ಮ ತಂದೆ ಶವನ ಒಪ್ಪ ಮಾಡೋಣ ಅಂದ್ರು ನಮ್ಮಲ್ಲಿ

ಹಣವಿಲ್ಲ. ಈ ಗ್ರಾಮದ ದೊಡ್ಡ ಗೌಡ್ರಿಗಾದ್ರೂ ಕೂಡ ಹೇಳಿ ಈ ನಮ್ಮನೆನಾದ್ರೂ ಕೂಡ ಅವ್ರಿಗೆ ಬಿಟ್ಟುಕೊಟ್ಟು, ಅವರಿಂದ ಸ್ವಲ್ಪ ಹಣವನ್ನು ಪಡಕೊಂಡು ನಿಮ್ಮ ತಂದೆಯ ಶವವನ್ನ ಒಪ್ಪ ಮಾಡಿ ಹನ್ನೊಂದನೆ ದಿವ್ಸಕ್ಕೆ ಉತ್ತರ ಕ್ರಿಯಾದಿ ಮಾಡೋಣ ಕಂದ ಅಂತೇಳಿ ಕಂದನಿಗೆ ಸಮಾಧಾನ ಮಾಡಿ ಕರ್‍ಕೊಂಬಂದ್ಲು.

ಊರಿನ ಮುಖ್ಯಸ್ಥರಾಗಿರತಕ್ಕಂಥ ದೊಡ್ಡಗೌಡರಿಗೆ ತಿಳಿಸಿ 'ಸ್ವಾಮಿ ಹೀಗಾಗಿದೆ ನನ್ನ ಪರಿಸ್ಥಿತಿ. ಒಂದಷ್ಟು ಅಣ ಕೊಟ್ರೆ ನನ್ನ ಪತಿದೇವನ ಶವವನ್ನ ಒಪ್ಪಮಾಡಿ ಹನ್ನೊಂದನೇ ದಿನಕ್ಕೆ ಉತ್ತರಕ್ರಿಯದಿ ಮಾಡ್ತೀನಿ' ಅಂತೇಳಿ ಕೇಳ್ಕೊಂಡಾಗ ಆ ದಯಾಳು ಆಗಿರತಕ್ಕಂಥ ಗೌಡ್ರು 'ಅಮ್ಮಾ ಅದಕ್ಕಾಗಿ ಚಿಂತೆ ಪಡೆಬೇಡ' ಅಂತೇಳಿ ಒಂದಷ್ಟು ಹಣವನ್ನು ಕೊಟ್ಟು ಆ ತಾಯಿಗೆ ಸಹಕರಿಸಿ ಆ ಸತ್ಯವಂತೆಯಾದಂತಹ ಮಾದೇವಮ್ಮ ತನ್ನ ಕುಲದವ್ರುನ್ನ ಜೊತೆಯಲ್ಲಿ ಕರ್‍ಕೊಂಡು ಶ್ರೀಗಂಧದ ಸೌದೆಯನ್ನ ತಂದು, ಆ ತನ್ನ ಪತಿದೇವನ ಶವವನ್ನ ಸ್ಮಶಾನದಲ್ಲಿ ಸುಟ್ಟು ಭಸ್ಮಮಾಡಿ ಹಾಗೇ ಬೇಕಾದಂತಹ ದುಃಖದಲ್ಲಿ ತಾಯಿ ಮಗ ಈರ್ವರು ಕೂಡ ಹನ್ನೊಂದನೇ ದಿನಕ್ಕೆ ಬೇಕಾದಂಥ ಉತ್ತರಕ್ರಿಯಾದಿಗೆ ಬೇಕಾದಂಥ ಸೌಲಭ್ಯಗಳು, ಅಂದ್ರೆ ಬೇಕಾದಂಥ ಸಾಮಗ್ರಿಗಳನ್ನೆಲ್ಲ ಹದಮಾಡ್ಕೊಂಡು ಮತ್ತೇ ಕಂದನ ಕೈಲಿ ಗಡಿಗೆಯನ್ನು ಹಿಡಿಸ್ಕೊಂಡು, ಕುಲದವ್ರುನ್ನ ಕರ್‍ಕೊಂಡು ಸ್ಮಶಾನಕ್ಕೆ ಬಂದ್ಲು.

ಮಸಣಕ್ಕೆ ಬಂದು ತನ್ನ ಕುಲದವ್ರನ್ನ ಕೇಳ್ಕೊತ್ತಾ ಇದ್ದಾಳೆ. 'ಸ್ವಾಮಿ ನನ್ನ ಪತಿ ತೀರೋಗಿ ಇಂದಿಗೇ ಹನ್ನೊಂದನೆ ದಿನ ಆಯ್ತು. ಅವ್ರಿಗೆ ಸಂಸ್ಕಾರ ಮಾಡಬೇಕು ಅಂದಾಗ ಅಮ್ಮಾ ನೀನೇಳೊ ಮಾತು ನಿಜವೇ ಆದ್ರೂ ಕೂಡ ನಮ್ಮ ಕುಲದ ಕಸುಬು ಏನೂಂತ ಹೇಳಿದ್ರೇ ನೀನು ಮಂಡೇ ಬೋಳ ಮಾಡಿಸ್ಕೊಂಡು ನಿನ್ನ ಪತಿಗೆ ಸಂಸ್ಕಾರ ಮಾಡ್ಬೇಕಾದ್ದು ಧರ್ಮ ಅಂದಾಗ ಕಂದ ಹೇಳ್ತಾನೆ ಮೈದಾಳ ರಾಮಯ್ಯ ಸ್ವಾಮಿ, ನೀವು ನಮ್ಮ ತಾಯಿಗೆ ಹೇಳ್ತಾ ಇರುವಂಥ ಮಾತು ಸಹಜ ಆದ್ರೂ ಕೂಡ ನಾನು ನಮ್ಮ ತಂದೆಗೆ ಮಗನಾಗಿಲ್ಲದೆ ಇದ್ದ ಪಕ್ಷದಲ್ಲಿ ನಮ್ಮ ತಾಯಿ ಮಂಡೆಬೋಳ ಮಾಡಿಸ್ಕೊಂಡು ಉತ್ತರಕ್ರಿಯಾದಿ ಮಾಡ್ಬೇಕಾದ್ದು ನಿಜ. ಆದ್ರೂ ಕೂಡ ನಮ್ಮ ತಂದೆಗೆ ನಾನು ಮಗನಾಗಿದ್ದೇನಲ್ಲ ನನ್ನ ಮಂಡೆ ಬೋಳ ಮಾಡಿಸ್ಕೊಂಡು ನಮ್ಮ ತಂದೆಗೆ ಸಂಸ್ಕಾರ ಮಾಡಿದ್ರೇ ಏನಾಯ್ತದೆ ಸ್ವಾಮಿ ? ಅಂದಾಗ

'ಅಯ್ಯಾ ನೀನು ಇನ್ನ ಚಿಕ್ಕವನು, ತಿಳುವಳಿಕೆ ಸಾಲ್ದು. ಆದ್ದರಿಂದ ನಿಮ್ಮ ತಾಯಿಯೇ ನಿಮ್ಮ ತಂದೆಗೆ ಸಂಸ್ಕಾರವನ್ನು ಮಾಡ್ಬೇಕು ಕಣಪ್ಪ' ಅಂದ್ರು. ಅಂದಾಗ ಸ್ವಾಮಿ ಕೇಳಿ ಹೇಳ್ತೀನಿ. ನೀವು ಹೇಳೋ ಮಾತು ನಿಜಾನೇ ಏನೇ ಆದ್ರೂ ಕೂಡ ನಮ್ಮ ತಂದೆಗೆ ನಾನೇ ಮಂಡೆ ಬೋಳ ಮಾಡಿಸ್ಕೊಂಡು ಸಂಸ್ಕಾರವನ್ನ ಮಾಡಬೇಕೆ ಹೊರತು ನಮ್ಮ ತಾಯಿ ಮಾಡ್ಬೇಕಾದ್ದಿಲ್ಲ ಅಂದ. ಅಂದಾಗ ಆ ಕುಲಬಾಂಧವರಿಗೆಲ್ಲ ಒಂದು ತರ ಕೋಪ ಬಂತು. ಕೋಪ ಬಂದಾಗ, ವನ ಮೀರಿದಂಥ ಪಕ್ಷಿ, ಮಾತು ಮೀರಿದಂಥ ಮನುಷ್ಯ ನಮಗೆ

ತರವಲ್ಲ. ಆದ್ದರಿಂದ ಇವನನ್ನ ಇವರ ತಾಯಿಯನ್ನು ನಾವು ಊರಿಂದ ಹೊರಗಡೆ ಇರಿಸಬೇಕು. ಇವ್ರಿಗೆ ಬೆಂಕಿ, ಬಿಸಿನೀರುಗಳನ್ನು ಕೊಡಬಾರ್ದು. ನಮ್ಮ ಕುಲದ ಅಂಕೆಯಲ್ಲಿ ಇಡಬಾರದು ಅಂತೇಳಿ ಗ್ರಾಮದವರೆಲ್ಲರೂ ಕೂಡ ಮಾತನಾಡಿಕೊಂಡು ಅವ್ರನ್ನ ಸ್ಮಶಾನದಲ್ಲಿ ಬಿಟ್ಟು ಹೊರಟುಬಿಟ್ರು.

ಅಂದಾಗ ಕಂದ ಧೈರ್ಯವನ್ನು ಮಾಡಿ 'ಅಮ್ಮ ಚಿಂತೆ ಪಡಿಬೇಡ ಅಂತೇಳಿ ತಾನು ಮಂಡೆ ಬೋಳವನ್ನು ಮಾಡಿಸ್ಕೊಂಡು ತಾಯಿ ಬಳಿಗೆ ಬಂದು ತಾಯಿಗೆ ಧೈರ್ಯವನ್ನ ಹೇಳಿ, ತಂದೆಗೆ ಸಂಸ್ಕಾರವನ್ನು ಮಾಡಿ, ತಲೆಕೊಳ್ಳಿ ಗಂಗೆಯನ್ನ ಎದೆದು ಆ ತಾಯಿ ಮಾದೇವಮ್ಮನು ಕೂಡ ನನ ಕಂದ ಇರುವುದಕ್ಕೋಸ್ಕರವಾಗಿ ತಂದೆಗೆ ಸಂಸ್ಕಾರವನ್ನ ಮಾಡಿದ್ನಲ್ಲ ಅಂತೇಳಿ ಆ ಕಂದನ ತಬ್ಕೊಂಡು ಬೇಕಾದಂಥ ದುಃಖದಲ್ಲಿ ತನ್ನ ಪತಿಯ ಸಂಸ್ಕಾರವನ್ನ ಮಾಡಿ ಕಂದನಿಗೆ ಧೈರ್ಯವನ್ನ ಹೇಳ್ಕೊಂಡು ಊರಿಗೆ ಬಂದ್ಲು. ಊರಿಗೆ ಬಂದಿರ್ಬೇಕಾದ್ರೇ ಗ್ರಾಮದವರೆಲ್ರೂ ಕೂಡ ಹೀಗೆ ಊರಿಂದ ಹೊರಗಿರ್ಬೇಕು. ನಮ್ಮ ಕುಲದಂಕೆಯಲ್ಲಿ ಇರಬಾರದು. ಇವ್ರಿಗೇ ಬೆಂಕಿ ಬಿಸಿನೀರನ್ನ ಕೊಡಬಾರ್ದು ಅಂತ ಕೂಡ ಇಂದಿನ ಒಂದು ಕಾನೂನುಬದ್ಧವಾಗಿ, ಹಿರಿಯವರಿಂದ ತಿಳುವಳಿಕೆ ಬಂದ ಮಾತಿನಿಂದ ಹೇಳಿದ್ದಾರೆ. ಆದ್ರೂ ಕೂಡ ಗೌಡ್ರಲ್ಲಿ ನಾವು ನಮ್ಮ ಮನೆನಾದ್ರೂ ಇಟ್ಟುಕೊಂಡು ನಮಗೆ ಹಣಕೊಡಿ ಅಂತ ಕೇಳ್ಕೊಂಡಿದ್ದೀವಿ. ನಾವು ಸತ್ಯವನ್ನ ಬಿಟ್ಟು ಅಸತ್ಯದಲ್ಲಿ ನಡೆಯಬಾರ್ದು ಅಂತೇಳಿ ಮತ್ತೊಮ್ಮೆ ಹೋಗಿ ಗೌಡ್ರನ್ನ ಕೇಳ್ಕೊಂಡ್ಲಂತೆ ಮಾದೇವಮ್ಮ. ''ಸ್ವಾಮಿ ನಾವು ಹುಸಿಯಾದು ಅಂದ್ರೆ ನಮಗೆ ತರವಲ್ಲ. ಆದ್ದರಿಂದ ಗ್ರಾಮದವರೆಲ್ರೂ ಕೂಡ ಹೀಗೆ ನಮ್ಮನ್ನ ಊರಿನಿಂದ ಹೊರ್ಗ ಇರ್ಬೇಕು ಅಂತ ಹೇಳ್ಬಿಟ್ಟಿದ್ದಾರೆ. ನಿಮ್ಮ ಊರುಮುಂದ್ಲ ಹೊಲದಲ್ಲಾದ್ರೂ ಕೂಡ ಸ್ವಲ್ಪ ಸ್ಥಳಾವಕಾಶ ಮಾಡಿಕೊಟ್ರೆ ಒಂದು ಸೊಪ್ಪುನಗುಡ್ಲು ಹಾಕ್ಕೊಂಡು ನನ ಕಂದನನ್ನ ಸಲಹುತ್ತಾ ಮಾನ್ನೆವರೆ ಮನೇಲಿ ಶಿವ ತಿರುಪೇನಾದ್ರೂ ಮಾಡಿ, ಕಾಲವನ್ನು ಕಳಿತೀನಿ ಸ್ವಾಮಿ'' ಅಂದಳು.

''ಅಮ್ಮಾ ಚಿಂತೆ ಪಡಬೇಡ ಹೋಗು ತಾಯಿ, ಹಾಗೇನೆ ಒಂದು ಸೊಪ್ಪುನ ಗುಡ್ಲು ಹಾಕ್ಕೊಂಡು, ನಿನ್ನ ಮಗವನ್ನ ಸಾಕಿ ಸಲಹೋಗಮ್ಮ, ಅಂತೇಳಿ ಆ ಊರಿನ ಮುಖ್ಯಸ್ಥರಾಗಿರತಕ್ಕಂಥ ಗೌಡ್ರು ಆ ತಾಯಿಗೆ ಸಹಕಾರವನ್ನ ಕೊಟ್ಟಾಗ, ಒಂದಷ್ಟು ಲಕ್ಕಿ ಸೊಪ್ಪನ್ನು ತಂದು ಒಂದು ಸೊಪ್ಪಿನಗುಡ್ಲು ಹಾಕ್ಕೊಂಡು, ಮುತ್ತುಗದ ಹಾಳೆ ಒಳಗೆ ಕದವನ್ನ ಮಾಡ್ಕೊಂಡ್ರು. ಮಾನ್ನೆವರ ಮನೆ ಒಳಗೆ ತನ್ನ ಸೆರಗನ್ನು ಒಡ್ಡಿ ಶಿವ ತಿರುಪೆಯನ್ನು ಮಾಡಿ ಆ ಕಂದನನ್ನ ಸಾಕಿ ಸಲಹುತ್ತಾ ಬಂದ್ಲು. ಹಾಗೂ ಕೂಡ ಕಂದನಿಗೆ ಆದಷ್ಟು ಬುದ್ಧಿ ತಿಳುವಳಿಕೆಗಳನ್ನ ಹೇಳಿದ್ಲು. 'ಅಪ್ಪಾ ನಾನೀರೊವರ್ಗೆ ನನ್ನನ್ನ ತಾಯಿ ಅಂಥ ಹೇಳಿ ನೀನು ಗಮನಿಸಿ ಎಚ್ಚಾಳದಿಂದ ನಮ್ಮ ತಾಯಿ ಇದ್ದಾಳೆ ಅನ್ನೋ ಧೈರ್ಯ ನಿನಗಿರುತ್ತೆ. ಇದುವರೆಗೂ ನಿಮ್ಮ ತಂದೆ ಇದ್ರು. ನಿಮ್ಮ ತಂದೆ ಧೈರ್ಯದ ಮೇಲೆ ನಾವು ಕಾಲ ಕಳೀತಾ ಇದ್ವಿವಿ. ಈಗ ತಂದೇನೂ ಕಳಕೊಂಡೆ. ಆದ್ರೂ ಕೂಡ ವಿದ್ಯವನ್ನು ಕಳ್ಕೊಬಾರ್ದು ಕಂದ. ನಾನು ಮಾನ್ನೆವ್ರ ಮನೆ ಒಳಗೆ ಶಿವ ತಿರುಪೆಯನ್ನಾದ್ರೂ ಮಾಡಿ, ಹಾಳೆನಾದ್ರೂ ಹೊಲ್ದು ,

ಕೂಲಿನಾಲಿಗಳನ್ನಾದ್ರೂ ಮಾಡಿ ನಿನ್ನ ವಿದ್ಯಾವಂತನಾಗಿ ಮಾಡ್ಬೇಕು ಅಂತೇಳಿ ನನಗೆ ಆಸೆ ಇದೆ ಕಂದ. ನೀನುಗುರುಮಠಕ್ಕೆ ಹೋಗಿ, ನಾಲ್ಕು ಅಕ್ಷರ ಕಲಿತ್ಕೋಳಪ್ಪ ಅಂತ ಕಂದನಿಗೆ ಧೈರ್ಯ ಹೇಳಿ ಆ ಕಂದನಾಗಿರತಕ್ಕಂಥ ಭಕ್ತಿವಂತ ಮೈದಾಳರಾಮಯ್ಯನನ್ನ ಗುರುಮಠಕ್ಕೆ ಕಳಿಸಿಕೊಟ್ಳು.

'ಕಂದ ಗುರುಮಠಕ್ಕೆ ಬಂದ. ಹುಡುಗ್ರ ಜೊತೆ ಒಳಗೇ ವಿದ್ಯಾಭ್ಯಾಸವನ್ನು ಕಲೀಬೇಕಾಗಿದ್ರೆ ಹುಡುಗ್ರೂ ಕೂಡ ಅವನನ್ನ ಅಷ್ಟೇ ಪ್ರೀತಿಯಾಗಿ ಕಂಡ್ಕೊಂಡಿದ್ರು. ಆದ್ರೂ ಒಂದಾನೊಂದು ದಿನ, ಗುರುಗಳು ಬಂದು ಮಕ್ಕಳನ್ನ ಕುಂಡ್ರಿಸ್ಕೊಂಡು ಪಾಠವನ್ನ ಹೇಳ್ಬೇಕಾಗಿದ್ರೆ, ಯಾರ್ಯಾರು ಬುದ್ಧಿವಂತರಾಗಿ ವಿದ್ಯೆಯನ್ನ ಕಲಿತಿದ್ದಾರೆ. ಅನ್ನೋದಿಕ್ಕೆ ಅವ್ರಿಗೆ ಅಕ್ಷರಗಳನ್ನು ಹೇಳ್ಕೊಡ್ತಾ ಇದ್ರು. ಹೇಳ್ತಾ ಇರಬೇಕಾಗಿದ್ರೆ ಹಿಂದಿನಿಂದ್ಲೂ ಕೂಡ ಮಕ್ಕಳಿಗೆ ಗುರುಗಳು ತಾಳಿನಿಂದ ಅಕ್ಷರಗಳನ್ನು ಹೇಳ್ಕೊಂಡು ಹೋಗ್ತಾ ಇದ್ರು. ಹಾಗೇ ಕಂದನಿಗೂ ಕೂಡ ಕಂದ ಭಕ್ತಿವಂಥ ಮೈದಾಳ ರಾಮಯ್ಯನನ್ನ ಕೇಳಿದ್ರೂ ಏನಪ್ಪಾ ನೀನು ಬುದ್ಧಿವಂತ, ಚೆನ್ನಾಗಿ ವಿದ್ಯೆ ಕಲಿತ್ಕೋಳಪ್ಪಾ ಅಂತೇಳಿ ಆ ಕಂದನಿಗೆ ಆಶೀರ್ವಾದವನ್ನ ಮಾಡ್ದಾಗ ಎಲ್ಲಾ ಹುಡುಗ್ರಿಗೂ ಕೂಡ ಇವ್ನು ಹೆಚ್ಚಾಗಿ ಬರೆಯೋದು ಓದೋದು ಹೀಗೆ ವಿದ್ಯೆ ಕಲಿತ್ಕೊಂಡು ಬರ್‍ತಾ ಇದ್ದ. ಈ ಹುಡುಗ್ರಿಗೆಲ್ಲಾ ಒಂದಥರ ಹೊಟ್ಟೆಕಿಚ್ಚು ಬಂದ್ಬಿಟ್ತು. ನಿನ್ನೆ ದಿವ್ಸ ಬಂದೋನು, ಈವತ್ತಿನ ದಿವ್ಸ ನಮಗಿಂಥ ಹೆಚ್ಚಾಗಿ ಓದು ಬರಹನೂ ಕಲಿತ್ಕೋತಾವ್ನೆ. ಮತ್ತೆ ನಮ್ಮ ಜೊತೆಯಲ್ಲಿ ಆಟಪಾಠಗಳಿಗೆ ಬಂದ್ರೆ ನಮ್ಮನ್ನೇ ಸೋಲಿಸ್ಬಿಟ್ಟು ಇವ್ನು ಗೆದ್ಕೊಕಾ ಇದ್ದಾನೆ. ಆದ್ದರಿಂದ ಗುರುಗಳು ಬಂದ್ಮೇಲೆ ಇವನಿಗೆ ಯಾವುದಾದ್ರು ಒಂದು ಚಾಡಿ ಹೇಳ್ಬಿಡೋಣ ಕಣೋ ಅಂತೇಳಿ ಹುಡುಗ್ರೆಲ್ಲಾ ಮಾತನಾಡ್ಕೊಂಡ್ರು.

ಏನಂತಾ ಚಾಡಿ ಹೇಳೋಣಯ್ಯ ? ನೋಡ್ರಯ್ಯ ಇವ್ರು ಬಂದು, ಗುರುಮಠಕ್ಕೆ ಬಂದಾಗ ಗುರುಗಳನ್ನು ನಮಸ್ಕಾರ ಮಾಡಿ ಕೇಳೋಕೆ ಬರ್‍ತಾನಲ್ಲ. ಬಂದಾಗ ಸ್ವಾಮಿ ನಮಗೆ ಹತ್ತುದಿನ ರಜಾಬೇಕು ಅಂತೇಳಿ ಕೇಳಿಕೊಳ್ಳೋವಾ. ಯಾಕ್ರಪ್ಪಾ ಅಂತ ಕೇಳ್ತಾರೆ. ನಾವು ವರುಷಕ್ಕೊಂದುಸಾರಿ, ಒಡಹುಟ್ಟಿನಬ್ಬ ಅಂತೇಳಿ ಅಂದ್ರೆ ಅಕ್ಕ ಭಾವನನ್ನ ಕರ್‍ಕೊಂಬಂದು ಗೌರಿಹಬ್ಬ ಅಂತೇಳಿ ನಾವು ಹಬ್ಬವನ್ನ ಮಾಡ್ತಾ ಇದ್ವಿ. ಆದಕ್ಕಾಗಿ ನಾವು ಅಮಾವಾಸ್ಸೆ ಬಂದ್ಬಿಡ್ತು. ಸಮದಿನಕ್ಕೆ ಒದಗಿಬಿಡ್ತು ಅಂತೇಳಿ ಗುರುಗಳನ್ನು ಕೇಳಿಕೊಳ್ಳೋಣ. ಅವಾಗ ನಮಗೆ ರಜ ಕೊಡ್ತಾರೆ. ಹಾಗೇ ನಮ್ಮನ್ನ ನೋಡಿ ಅವನೂ ಕೂಡ ರಜಾ ಕೇಳೋಕೆ ಬರ್‍ತಾನೆ. ರಜ ಕೇಳೋಕೆ ಬಂದಾಗ ಅವ್ನಿಗೆ ಅಕ್ಕ ತಂಗಿ ಭಾವ ಒಡಹುಟ್ಟು ಅನ್ನೋದೇನಾದ್ರೂ ಇದಿಯಾ ? ಇಲ್ಲ. ಅವಾಗ ಗುರುಗಳಿಗೆ ಏನಂತ ಹೇಳೋಣ ಸ್ವಾಮಿ ಇವ್ನಿಗೆ ಅಕ್ಕನೂ ಇಲ್ಲ ತಂಗಿಯೂ ಇಲ್ಲ. ಒಡಹುಟ್ಟೇ ಇವ್ನಿಗೆ ಇಲ್ಲ. ದಿಕ್ಕಿಲ್ಲದಂಥ ಪರದೇಶಿ ಮುಂಡೆಮಗ ಇವ್ನು. ಒಬ್ಬ ತಾಯಿಗೆ ಒಬ್ನೇ ಮಗ. ಇವನೋಗಿ ಯಾವಕ್ಕನ್ನ ಕರ್‍ಕೊಂಬಂದಾನು ? ಅದಕ್ಕಾಗಿ ಇವ್ನಿಗೆ ರಜಾ ಕೊಡ್ಬೇಡೀ ಸ್ವಾಮಿ ಅಂತೇಳಿ ಗುರುಗಳಿಗೆ ಚಾಡಿ ಹೇಳ್ಬಿಡೋಣ ಅಂತ ಹೇಳಿ ಹುಡುಗ್ರೆಲ್ಲಾ ಮಾತನಾಡಿಕೊಂಡಿದ್ರು.

ಅದೇ ಸಮಯಕ್ಕೆ ಸರಿಯಾಗಿ ಉಪಾಧ್ಯಾಯರು ಬಂದ್ರು. ಉಪಾದ್ಯಾಯರು ಬಂದಾಗ ಹುಡುಗ್ರೆಲ್ಲಾ ಸ್ವಾಮಿ ನಮಗೆ ಹತ್ತು ದಿನ ರಜಾ ಕೊಡ್ಬೇಕು ಅಂದ್ರು. ಯಾಕ್ರಯ್ಯ ನಿಮಗೆ ಹತ್ತುದಿನ ರಜ ? ಅಂತ ಕೇಳ್ಕೊಂಡ್ರು. ಅಂದಾಗ ನೋಡಿ ಸ್ವಾಮಿ ನಾವು ವರುಷಕ್ಕೊಂದು ಸಾರಿ ಅಕ್ಕಭಾವನನ್ನ ಕರ್ಕೊಂಬಂದು ಒಡಹುಟ್ಟಿನಬ್ಬ ಅಂತೇಳಿ ಗೌರಿಹಬ್ಬವನ್ನ ಮಾಡಬೇಕಾಗಿದೆ. ಅದಕ್ಕಾಗಿ ನಮಗೆ ಹತ್ತುದಿನ ರಜ ಬೇಕು ಅಂತೇಳಿ ಕೇಳಿದೀವಿ ಸ್ವಾಮಿ. ಹಾಗಾದ್ಮೇಲೆ ನೀವು ಅಕ್ಕ ಭಾವನನ್ನು ಕರ್ಕೊಬಂದು ಒಡಹುಟ್ಟಿನಬ್ಬ ಅಂತೇಳಿ ಗೌರಿಹಬ್ಬ ಮಾಡ್ಬೇಕಾಗಿದ್ರೆ ಗುರುಮಠಕ್ಕೆ ಬಂದು ಗುರುಪಾದಕ್ಕೆ ಶರಣು ಮಾಡೀ. ಸ್ವಾಮಿ ನನಗೂ ಕೂಡಾ ಹತ್ತುದಿನ ರಜ ಕೊಡ್ಬೇಕು ಅಂತ ಕೇಳ್ದಾ. ಅವಾಗ ಹುಡುಗ್ರೆಲ್ಲಾ ಮಾತನಾಡ್ಕೊಂಡೋ. ಸ್ವಾಮಿ ಇವ್ನಿಗೆ ಅಕ್ಕನೂ ಇಲ್ಲ ತಂಗಿಯೂ ಇಲ್ಲ, ಒಡಹುಟ್ಟ್ದೆಂತ ಇವನಿಗಿಲ್ಲ. ಇವನಿಗೆ ರಜೆ ಯಾಕೆ ಕೊಡ್ತೀರಾ ಸ್ವಾಮೀ ? ರಜವನ್ನ ಕೊಡ್ಬೇಡಿ ಅಂದ್ರು. ಯವಾಗ ಆ ಹುಡುಗ್ರೆಲ್ಲಾ ಹೇಳಿದ್ರೋ ಹಾಗೇ ದಿಕ್ಕಿಲ್ಲದಂಥ ಪರದೇಶಿ ಮುಂಡೆಮಗ, ಒಡಹುಟ್ಟಲ್ಲ ಇವ್ನಿಗೆ ಎಂದಾಗ ಆ ಹುಡುಗ್ರಾಡಿದಂಥ ಮಾತು ಇವ್ನಿಗೆ ಎದೆಗೆ ನಾಟ್ಕೊಂಡು ಬೇಕಾದಂಥ ದುಃಖದಲ್ಲಿ ನಿಂತ್ಕೊಂಡ. ಗುರುಗಳೂ ಕೂಡಾ ಹುಡುಗ್ರ ಮಾತು ಕಟ್ಕೊಂಡು ನೋಡಯ್ಯಾ ನಿನಗೆ ಅಕ್ಕ ಭಾವ ಇಲ್ದೆ ಹೋದ್ಮೇಲೆ ನಿನಗೆ ಯಾಕಪ್ಪಾ ರಜೆ ಬೇಕು ? ಹಾಗೇನಾದ್ರೂ ನಿನಗೆ ನಿಜವಾಗೂ ಅಕ್ಕ ಭಾವ ಇದ್ರೆ ನಿಮ್ಮ ಅಕ್ಕಯ್ಯನ ಹೆಸ್ರು ಹೇಳು, ನಿಮ್ಮ ಭಾವಯ್ಯನ ಹೆಸ್ರು ಹೇಳು. ಮಿಕ್ಕ ಬಾಂಧವರ ಹೆಸ್ರು ಹೇಳು. ನಿನಗೂ ಕೂಡ ಅವರಂತೆ ರಜವನ್ನ ಕೊಡ್ತೇನೆ ಅಂದ್ರು. ಅಂದಾಗ ಕಂದನಾದಂಥ ಭಕ್ತಿವಂಥ ಮ್ಮೆದಾಳರಾಮಯ್ಯನಿಗೆ ಬೇಕಾದಂಥ ದುಃಖ ಬತ್ತಂತೆ. ಶಿವ ಶಿವ ನನ್ನನ್ನ ಒಡಹುಟ್ಟಿಲ್ಲದಂಥ ಪರದೇಶಿ ಮುಂಡೇಮಗ ಅಂದ್ರಲ್ಲ ಅಂತೇಳಿ ಗುರುಗಳನ್ನು ಕೇಳ್ಕೊಂಡ್ರಂತೆ. ಸ್ವಾಮಿ ನೀವು ಹತ್ತು ದಿನ ರಜೆ ಕೊಡೋದು ಬೇಡಿ. ನಾನು ಹತ್ತುದಿನ ರಜಾ ಪಡ್ಕೋಳೋದು ಬೇಡಿ. ನಾನು ನಮ್ಮ ಮನೆಯಿಂದ ಗುರುಮಠಕ್ಕೆ ಬರ್ಬೇಕಾಗಿದ್ರೆ ಅಕ್ಷರದ ರೂಢಿಯೊಳಗೆ ನಮ್ಮ ತಾಯಿಯನ್ನ ಕೇಳೋದು ಮರ್ತು ಬಂದ್ಬಿಟ್ಟಿದ್ದೀನಿ. ಅದ್ರಿಂದ ನಾನು ಮನೆಗೋಗಿ ನಮ್ಮ ತಾಯಿಯನ್ನು ಕೇಳ್ಕೊಂಡು ಬಂದು, ನಮ್ಮಕ್ಕಯ್ಯನ ಹೆಸ್ರೇನು ? ನಮ್ಮ ಭಾವಯ್ಯನ ಹೆಸ್ರೇನು ? ನಮ್ಮ ಅಕ್ಕಯ್ಯನ ಕೊಟ್ಟಿರುವಂಥ ಊರು ಯಾವ್ದು ? ಅಂತೇಳಿ ನಮ್ಮ ತಾಯಿಗೆ ಕೇಳ್ಕೋಬಂದು ನಿಮಗೆ ಹೇಳ್ತೀನಿ ಸ್ವಾಮಿ. ಒಂದರ್ಧದಿನ ರಜಾ ಕೊಡಿ ಅಂದ್ರು. ಯಾರು ? ಮ್ಮೆದಾಳರಾಮಯ್ಯ.

ಅವಾಗ ಗುರುಗಳು ಹೇಳ್ತಾ ಇದ್ದಾರೆ: 'ಕೇಳಪ್ಪಾ ನಿನಗೆ ಅರ್ಧದಿನ ರಜ ಕೊಡೋದು ಬೇಡ. ನಿಮ್ಮ ತಾಯಿನಾ ಕೇಳ್ಕೊಬಂದು ನನಗೆ ಹೇಳೋದು ಬೇಡ. ಅನ್ಯರ ಹುಡುಗರಂತೆ ನೀನು ಹುಸಿಯಾಡತಕ್ಕಂಥವನಲ್ಲ. ಸತ್ಯದ ನುಡಿಗಳನ್ನು ಹೇಳತಕ್ಕಂಥವನು. ಆದ್ದರಿಂದ ನಿನಗೆ ಇಪ್ಪತ್ತಾರು ದಿನ ರಜೆ ಕೊಟ್ಟಿದ್ದೀನಿ ಹೋಗಯ್ಯ ಅಂದ್ರು. ಹಾಗೂ ಕೂಡ ಕಂದನಿಗೆ ಸಂತೋಷ ಬರಲಿಲ್ಲ. ಹುಡುಗ್ರು ಆಡಿದಂಥ ಮಾತು ಎದೆ ಒಳಗೆ ನಾಟಕೊಂಡಿದೆ. ಹುಡುಗ್ರೆಲ್ಲಾ ಚಾಡಿ ಹೇಳ್ಬಿಟ್ಟು ಮನೆಗೆ ಬಂದ್ರು. ಸತ್ಯವಂತೆಯಾದಂತಹ ಮಾದೇವಮ್ಮ

ಎಲ್ಲಾ ಹುಡುಗ್ರು ಕೂಡ ಗುರುಮಠದ್ದಿಂದ ಮನೆಗೆ ಬಂದವ್ರೆ, ನನ ಕಂದ ಬರಲಿಲ್ವಲ್ಲ ಅಂತೇಳಿ ಬೀದಿ ಒಳಗೆ ಹುಡುಕ್ಕೊಂಡು ಬರ್‍ತಾ ಇದ್ದಳು.

ಕಂದ ಮೈದಾಳರಾಮಯ್ಯ ಗುರುಮಠದಿಂದ ಆ ಹುಡುಗ್ರು ಆಡಿದಂಥ ಮಾತಿನಲ್ಲಿ ದುಃಖವಾಗಿ ಬರ್‍ತಾ ಇದ್ದಾನೆ. ಬರುವಂಥ ಮಗನನ್ನ ಓಡಿ ಬಂದು ಮಾದೇವಮ್ಮ ಅವನನ್ನು ಬಾಚಿ ಎತ್ತುಕೊಂಡು ಯಾಕಪ್ಪಾ ಕಂದ ಈ ರೀತಿಯಾಗಿ ದುಃಖಮಾಡ್ತಾ ಬರ್‍ತಾ ಇದ್ದೀಯಲ್ಲೋ. ನಿನ್ನನ್ನ ಹೊಡೆದವರು ಯಾರು ? ಇಲ್ಲ ಯಾರಾದ್ರೂ ಬೋದ್ರ ? ಇಲ್ಲ ಗುರುಗಳೇನಾದ್ರು ಹೊಡೆದ್ರೇನಪ್ಪ ? ನಿಜವಾದ ಮಾತೇಳು ಅಂದ್ಲು.

''ಅಮ್ಮ ನನ್ನನ್ನ ಯಾರೂ ಹೊಡೆದಿಲ್ಲ, ಯಾರೂ ಬೈದಿಲ್ಲ. ಆದ್ರೂ ಕೂಡ ಅನ್ಯರ ಮೇಲೆ ಅನ್ಯಾಯದ ಮಾತಾಡ್ತಾರ್ರು ತಾಯಿ. ನಾನು ಓದುವಂಥ ಮಠದೊಳಗೆ ನನ್ನ ಜೊತೆಯೊಳಗೆ ಓದುವಂಥ ಹುಡುಗ್ರಲ್ಲಿ ಕಾಮಣ್ಣ, ಭೀಮಣ್ಣ, ರೇವಣ್ಣ, ಶಂಕರ ಅಂತೇಳಿ ನನ್ನ ಜೊತೆ ಹುಡುಗ್ರೆಲ್ಲಾ ವನಗಿಂತ ಕುಂದಿನ ನುಡಿಯನ್ನು ನುಡಿದ್ರಮ್ಮ.

ಏನಂತ್ತಾ ಹೇಳಿದ್ರೋ ? ಅಮ್ಮ ಹತ್ತು ದಿನ ರಜೆ ಕೇಳ್ದೆ ಗುರುಗಳ್ನ. ಅವಾಗ ಹುಡುಗ್ರೆಲ್ಲಾ ಇವನಿಗೋ ಅಕ್ಕನೂ ಇಲ್ಲ, ತಂಗಿಯೂ ಇಲ್ಲ, ಒಡಹುಟ್ಟೇ ಇಲ್ಲ ಅಂತೇಳಿ ನನ್ನನ್ನು ದಿಕ್ಕಿಲ್ಲದಂಥ ಪರದೇಶಿ, ಮುಂಡೇಮಗ ಅಂಥ ಜರದುಬಿಟ್ರುಕಣಮ್ಮ. ಅದಕ್ಕಾಗಿ ನಾನು ಈ ರೀತಿಯಾಗಿ ದುಃಖ ಮಾಡ್ಕೊಂಡು ಬರ್‍ತಾ ಇದ್ದೆ ತಾಯಿ ಅಂದಾಗ

''ಕಂದ ಅದಕ್ಕಾಗಿ ನೀನು ದುಃಖಮಾಡ್ಬೇಡ ಬಾಪ್ಪ ಹೋಗ್ಲೀ'' ಅಂತೇಳಿ ಮಾದೇವಮ್ಮ ತನ್ನ ಕಂದನಿಗೆ ಸಮಾಧಾನವನ್ನೇಳುತ್ತಾ, ಅಯ್ಯಾ ನೀನು ತಂದಂಥ ಪೂರ್ವಾರ್ಜಿತದ ಪುಣ್ಯಫಲ ಕಂದ. ನಿನಗೆ ಅಕ್ಕನೂ ಇಲ್ಲ, ತಂಗಿಯೂ ಇಲ್ಲ, ಒಡಹುಟ್ಟೇ ನಿನಗಿಲ್ಲ ಕಣೋ ' ಅಂತ ಅಂದ್ಲು. 'ಏನಮ್ಮಾ ಹುಡುಗ್ರಾಡಿದಂಗೇ ನೀನೂ ಹೇಳ್ತಾ ಇದ್ದೀಯಲ್ಲ ? ನನಗೆ ಅಕ್ಕತಂಗಿ ಒಡಹುಟ್ಟು ಅನ್ನೋದು ಇಲ್ವೇ ಇಲ್ವ ತಾಯಿ?'

ಇಲ್ಲ ಕಣಪ್ಪಾ ಅಂತ ಅಂದ್ಲು. ಏನಮ್ಮಾ ಹಾಗಾದ್ಮೇಲೆ ಈ ಮಾತು ಸತ್ಯವೇ ತಾಯಿ ? ಸತ್ಯ ಕಣಪ್ಪ ಅಂತ ಅಂದ್ಲು. ಹೋಗ್ಲಿ ಬಿಡು. ನಾನು ಒಡಹುಟ್ಟಿಲ್ಲದವನಾದ್ರೂ ಚಿಂತೆ ಇಲ್ಲ. ನಿನ್ನ ಅಕ್ಕತಂಗೇರು ಮಕ್ಕಳಾದ್ರೂ ಇಲ್ವೇನಮ್ಮಾ ? ಅವರಾದ್ರೂ ಕೂಡ ನನಗೆ ಒಡಹುಟ್ಟು ಆಯ್ತರಲ್ಲ ? ಅವರನ್ನೆ ನಾನು ಹೋಗಿ ನಮ್ಮ ಅಕ್ಕ ಭಾವ ಅಂತ ಹೇಳಿ ಕರ್‍ಕೊಂಬರ್‍ತೀನಿ. ನಿನ್ನ ಅಕ್ಕತಂಗೇರ ಮಕ್ಕಳಾದ್ರೂ ಇದ್ರೆ ಹೇಳಮ್ಮಾ'' ಅಂದ.

ಸತ್ಯವಂತೆ ಮಾದೇವಮ್ಮ 'ಏನಪ್ಪಾ ನನ್ನ ಅಕ್ಕ ತಂಗೇರ ಒಡಹುಟ್ಟು ಅಂದ್ರೇ ನಿನಗೆ ಎಷ್ಟು ಹೆಚ್ಚಾಳವೋ ? ನನ್ನ ಅಕ್ಕ ತಂಗೇರ ಮಕ್ಳು ಕೇಳ್ತಾ ಇದ್ದೀಯಲ್ಲ ? ಕೇಳು ಕಂದ.

ನಿನ್ನ ಹಾಗೇ ನನಗೂ ಕೂಡ ಅಕ್ಕನೂ ಇಲ್ಲ ತಂಗೆಯೂ ಇಲ್ಲ. ಒಬ್ಳೇ ಮಗಳು. ನನಗೆ ಒಡಹುಟ್ಟು ಇಲ್ಲ ಕಣೋ, ನನಗೆ ಅಕ್ಕನ ಮಕ್ಕಳು ಇಲ್ಲ ಕಣೋ, ಅಂದ್ಲು.

ಹೋಗ್ಲೀಬಿಡಮ್ಮ. ಶಿವ ನಿನ್ನ ಹಣೇಲಿ, ನನ್ನ ಹಣೇಲಿ ಇಬ್ರೂ ಹಣೇಲಿ ಒಂದೇ ತರಾ ಬರ್ದುಬಿಟ್ಟಿದ್ದಾನೆ. ಆದ್ರೂ ಚಿಂತೆ ಇಲ್ಲ. ನಮ್ಮ ತಂದೆಗೆ ನೀನು ಲಗ್ನವಾಗಿ ಬಂದ್ಯಲ್ಲ ? ಆ ದಿನದಿಂದ ಕೂಡ ನೀನು ಯಾರು ಜೊತೆಯೂ ಕೂಡ ಸಂಗಡ, ಸ್ನೇಹ ಅನ್ನೋದೇನು ಮಾಡ್ಲಿಲ್ವ ? ಅವ್ರು ನಿನ್ನ ಸಂಗಡತ್ತೀರ ಮಕ್ಕಳಾದ್ರೂ ಇಲ್ವೇನಮ್ಮ ? ಅಂದ.

ಅಂದಾಗ ಸತ್ಯವಂತ ಮಾದೇವಮ್ಮ ಕಂದನಿಗೆ ಹೇಳ್ತಾ ಇದ್ದಾಳೆ : 'ನೋಡಪ್ಪಾ ನೀನು ಹುಟ್ಟೋಕೆ ಮೊದ್ಲೇ ಈ ಭೀಮವತಿ ಪಟ್ಣದ ಜನರೆಲ್ಲ ಕೂಡಾ ನಮ್ಮನ್ನ ಉಟ್ಟುಬಂಜೆ ದಟ್ಟಧರಣಿ. ಹೊಟ್ಟೇಲಿ ಮಕ್ಕಳಿಲ್ಲ, ಕಟ್ಟೇಲಿ ನೀರಿಲ್ಲ ಅಂತ ಹೇಳಿ ನಮ್ಮನ್ನು ಕುಂದುಗದ ನುಡಿ ನುಡಿತಿದ್ರು ಕಣೋ ಅಂದ್ಲು. ನಾನು ಕೂಡಾ ಯಾರು ಸಂಗಡ ಸ್ನೇಹ ಮಾಡ್ದವಳಲ್ಲ. ನನ್ನ ಸಂಗಡತ್ತೀರ ಮಕ್ಳು ಇಲ್ಲ ಕಣಪ್ಪಾ ಅಂತ ಅಂದ್ಲು. 'ಏನಮ್ಮಾ ಎಂಥಾ ಮಾತೇಳಿದೆ ತಾಯಿ ? ಕೊನೆ ಒಳಗೆ ಇಂಥಾ ಮಾತಾಡಬಹುದೇನಮ್ಮಾ ? ನಿನ್ನ ಸಂಗಡಗಿತ್ತೀರ ಮಕ್ಳೂ ಇಲ್ಲ ಅಂದ ಮೇಲೆ ಹುಡುಗ್ರು ಗುರುಮಠದಲ್ಲಿ ಆಡಿದ್ದೂ ಒಂದೇ ಆಯ್ತು.ನೀನ್ಹೇಳಿದ ಮಾತು ಒಂದೇ ಆಯ್ತಲ್ಲಮ್ಮ, ಅಂತೇಳಿದ. ಕಂದ ದುಃಖ ಪಡ್ಬೇಕಾಗಿದ್ರೆ ಸತ್ಯವಂತೆ ಆಗಿರತಕ್ಕಂಥ ಮಾದೇವಮ್ಮ ಕಂದ ಕೇಳು ಹೇಳ್ತೀನಿ. ಅಕ್ಕಪಕ್ಕ ಅಂತ ಹೇಳ್ಬಿಟ್ಟು ಹೆಚ್ಚಾಳ ಪಡ್ತಾ ಇದ್ದಿಯಲ್ಲೋ, ನಿನಗೆ ಅಕ್ಕನಿಂದ ಬರುತಕ್ಕಂಥ ಫಲ ವೇನಿರ್ತದಯ್ಯ ಅಂದ್ಲು. ಇದೂ ಅಲ್ದೇನೇ ಭಾವ ಭಾವ ಅಂತ ಭೋಮಾನ ಪಟ್ಟುಕೋತಾ ಇದ್ದೀಯಲ್ಲ ಆ ಭಾವನಿಂದ ಬರುವಂಥ ಭಾಗ್ಯವೇನಯ್ಯಾ ? ನೋಡಮ್ಮ ಅಕ್ಕ ಇದ್ರೇ ನಮ್ಮ ಭಾವಯ್ಯನ ಮನೆಗೆ ನಾನೋದಾಗ ನನ್ನ ಒಡಹುಟ್ಟು ತಮ್ಮ ಬಂದಿದ್ದಾನಂಥ ಹೇಳಿ ನಮ್ಮ ಅಕ್ಕಯ್ಯ ಹೆಚ್ಚಾಳದಲ್ಲಿ ನನ್ನ ಸಲಕರಣೆ ಮಾಡೀ ಕಳುಹುತಾಳೆ. ನಮ್ಮ ಭಾವ ನನ್ನನ್ನ ನನ್ನ ಮಡದಿ ಜೊತೆಯಲ್ಲಿ ಹುಟ್ಟಿರತಕ್ಕಂಥವ್ನು, ನನ್ನ ಬಾಮೈದ ಬಂದವ್ನೇ ಅಂತೇಳಿ ನನ್ನ ಭಾವದಿಂದ ಬಾವಣಿಸುತ್ತಾನೆ. ಅಕಸ್ಮಾತ್ತಾಗಿ ನನಗೆ ತಂಗೇ ಇದ್ಲು ಅಂತ ಹೋಗಿದ್ರೆ ನಾನು, ನಮ್ಮ ಅಣ್ಣಯ್ಯ ಬಂದವ್ನೇ ನನ್ನ ಒಡಹುಟ್ಟು ಅಂತೇಳಿ ಅವಳು ಹೆಚ್ಚಾಳದಲ್ಲಿ ನನ್ನ ಸಲುಹುತ್ತಾಳೆ. ಇವತ್ತಿಲ್ಲ ನಾಳೆ ಹೋಗಿವೆಯಂತೆ ಅಣ್ಣ ಅಂತೇಳಿ ನನ್ನ ಕಳಿಸ್ತಾ ಇದ್ಲು ಅಂದಾಗ ಸತ್ಯವಂತೆ ಆದಂಥ ಮಾದೇವಮ್ಮ ಸರಿಯಪ್ಪಾ, ನೀನು ಹೇಳೋ ಅಂಥ ಮಾತು ಸತ್ಯವೇ ಆದ್ರೂ ಕಂದ ನಿನಗೆ ಒಡಹುಟ್ಟಿಲ್ಲವಲ್ಲ ? ಇಲ್ದೇ ಹೋದ ಮೇಲೆ ಧರೇ ಒಳಗೆ ಇರಬಾರ್ದು. ನಾವು ಇಂಥ ಕುಂದಕ ನುಡಿಯನ್ನ ಕೇಳ್ಕೊಂಡು ನಾವು ಧರೆ ಒಳಗೆ ಇದ್ದೇನು ಬಂದ್ರೇನಮ್ಮ ? ಅಂತೇಳಿ ಕಂದ ಮೈದಾಳರಾಮಯ್ಯ ತಾಯಿಗೆ ಹೇಳಿದಾಗ, ಕೇಳು ಕಂದ ಇದ್ದಿದ್ರಾ ಇದ್ರು ಅಂತ ನಿನಗೆ ಒಡಹುಟ್ಟಿದ್ದಾರೆ ಅಂತ ನಾನು ಹೇಳ್ಬೊದಾಗಿತ್ತು. ಇಲ್ಲ ಕಣೋ ಅಂದ್ಲು.

ನೋಡಮ್ಮ ನನಗೆ ಒಡಹುಟ್ಟು ಇಲ್ದೆ ಹೋದ ಮೇಲೆ ನಾನು ಖಂಡಿತವಾಗಿ ಧರೇ ಮೇಲೆ ಇರತಕ್ಕಂಥವನಲ್ಲ. ನಾನು ಕತ್ನಾದ್ರೂ ಕುಯ್ಕೊಂಡು ಪ್ರಾಣ ಬಿಟ್ಬಿಡ್ತೀನಿ ಕಣಮ್ಮ

ಅಂದ. ಅಂದಾಗ ಸತ್ಯವಂತೆ ಮಾದೇವಮ್ಮನಿಗೆ ಬೇಕಾದಂಥ ದುಃಖವಾಯ್ತಂತೆ. ಒಬ್ಬ ಮಗ ಮಗನಲ್ಲ, ಒಂದು ಕಣ್ಣು ಕಣ್ಣಲ್ಲ ಅಂತೇಳಿ ನಾನು ಮಾನವರ ಮನೇಲಿ ಶಿವ ತಿರುಪೆ ಮಾಡಿ ಸಾಕಿ ಸಲಹೂದಕ್ಕೂವೇ ನನ್ನ ಕಂದ ಇಂಥ ಮಾತು ಹೇಳ್ತಾನಲ್ಲ ? ಅಂತೇಳಿ ಬೇಕಾದಂಥ ದುಃಖದಲ್ಲಿ ಆ ಕಂದನಿಗೆ ಸಮಾಧಾನವಾಗುವಂಥ ಮಾತನ್ನ ಹೇಳ್ಬೇಕಲ್ಲ ಅಂತೇಳಿ 'ಕೇಳು ಕಂದ ನಿಮ್ಮ ತಂದೆ ಸೋಮಯ್ಯ ತೀರ್ರೋಗಿಬಿಟ್ಟು, ನಾನು ಗಂಡ ಸತ್ತ ಮುಂಡೆಯಾಗಿದ್ರೂ ಕೂಡ ಮಾನ್ಯವರ ಮನೆಯಲ್ಲಿ ಶಿವತಿರುಪೆ ಮಾಡಿ ನಿನ್ನ ಸಾಕಿ ಸಲಹಿದ್ದೀನಿ ಕಂದ. ಹೀಗೆಲ್ಲ ನೀನು ಮಾತುಗಳನ್ನಾಡ್ಬಾರ್ದು ಕಣಪ್ಪ. ನನ್ನ ಮನಸ್ಸನ್ನ ನೋಯಿಸ್ಬಾರ್ದು ಅಂದ್ಲು.

ನೋಡಮ್ಮಾ ನೀನು ಏನೇ ಹೇಳಿದ್ರೂ ಕೂಡಾ ನಾನು ಕೇಳುವಂಥ ಮಗನಲ್ಲ. ನನಗೆ ಅಕ್ಕ ಭಾವ ಇಲ್ದೇ ಹೋದ್ಮೇಲೆ ಖಂಡಿತವಾಗಿ ನಾನು ಧರೇ ಮೇಲೆ ಇರತಕ್ಕವ್ನಲ್ಲ ಅಂದ.

ಅವಾಗ ಸತ್ಯವಂತೆ ಮಾದೇವಮ್ಮ ಕಂದನ ಒಂದು ಶಾಂತಿಗೋಸ್ಕರವಾಗಿ ಆ ಶಿವ ಪಾರ್ವತಿ ಪಾದವನ್ನ ನೆನಕೊಂಡು ಹೀಗಾದ್ರೂ ಇವ್ನು ನಂಬಿ ಇರ್ತಾನೇನೋ ಅಂತೇಳಿ 'ನೋಡು ಕಂದ ನಿನಗೆ ಅಕ್ಕಯ್ಯನೂ ಇದ್ದಾಳೆ, ಭಾವಜೀನೂ ಇದ್ದಾರೇ ಕಣೋ' ಅಂದ್ಲು.

ಅಮ್ಮ ಇದುವರೆಗೂ ಕೂಡಾ ನನಗೆ ಅಕ್ಕನೇ ಇಲ್ಲ, ತಂಗಿಯೇ ಇಲ್ಲ ಅಂದೆ. ಈವಾಗ ಅಕ್ಕಯ್ಯ ಇದ್ದಾಳೆ, ಭಾವಾಜೀ ಇದ್ದಾರೆ ಅಂದ್ಮೇಲೆ ನಮ್ಮಕ್ಕಯ್ಯನ ಹೆಸರೇನು ? ನಮ್ಮ ಭಾವಯ್ಯನ ಹೆಸ್ರೇನಮ್ಮ ? ಅದನ್ನು ಹೇಳ್ಕೊಡು. ತಾಯಿ ನಮ್ಮಕ್ಕಯ್ಯನ ಯಾವೂರ್ಗೆ ಕೊಟ್ಟು ಲಗ್ನ ಮಾಡಿದ್ದೀಯಾ ಅಂದ. ಅಂದಾಗ ಸತ್ಯವಂತೆ ಮಾದೇವಮ್ಮ ನೋಡು ಕಂದ ನಿಮ್ಮಕ್ಕನೋ ಗೌರಮ್ಮ, ನಿಮ್ಮ ಭಾವನೇ ಮಲ್ಲಯ್ಯ. ನಿಮ್ಮಕ್ಕಯ್ಯನ್ನ ಕೊಟ್ಟು ಕೈಲಾಸಕ್ಕೆ ಲಗ್ನ ಮಾಡಿದ್ದೀನಿ ಕಣೋ ಅಂದ್ಲು. 'ಏನಮ್ಮಾ ನಮ್ಮಕ್ಕಯ್ಯನ್ನ ಹೆಸ್ರು ಗೌರಮ್ಮ, ನಮ್ಮ ಭಾವಯ್ಯನ ಹೆಸ್ರು ಮಲ್ಲಯ್ಯ. ನಮ್ಮ ಭಾವಯ್ಯ ಕೈಲಾಸಕ್ಕೆ ಕೊಟ್ಟು ಲಗ್ನ ಮಾಡಿದ್ದೀನಿ ಅಂದ್ಮೇಲೆ ಕೇಳಮ್ಮ ಆ ಕೈಲಾಸ ಅನ್ನೋದು ಎಷ್ಟು ದೂರವಾಗ್ತದಮ್ಮಾ' ಅಂದ.

ಕೇಳು ಕಂದ ಒಂದು ಬೆಟ್ಟದ ದೂರ ಅಂದ್ರೆ ಹನ್ನೆರಡು ಮೈಲಿ ಹನ್ನೆರಡು ಮೈಲಿಗೊಂದು ಯೋಜನಾ ಕಂದ. ಅಂಥದ್ದು ಶತಕೋಟಿ ಯೋಜನಾ ಇದೇ ಕಣೋ. ಅಂಥ ಶತಕೋಟಿ ಯೋಜನ ಇರುವಂದ ಕೈಲಾಸಕ್ಕೆ ನೀನೋಗಿ ಬರುವದು ದಿಟವೇನಾಪ್ಪಾ? ಆ ಶಿವ ಗೌರಮ್ಮನನ್ನ ನೀನು ಕರ್ಕೊಂಬರ್ತಿಯೇನೋ ಅಂದ್ಲು.

'ಅಮ್ಮಾ ನೀನು ಅದಕ್ಕಾಗಿ ಚಿಂತೆ ಪಡಬೇಡ. ಆದ್ರೂ ಕೂಡಾ ನಮ್ಮಕ್ಕಯ್ಯನನ್ನ ಅಷ್ಟುದೂರ ಕೊಟ್ಟು ಲಗ್ನ ಮಾಡಿದ್ದೀಯಲ್ಲ ಕಾರಣವೇನಮ್ಮಾ ? ನಮ್ಮ ಊರು ಪಕ್ಕದಾಗ್ ಯಾವುದಾದ್ರೂ ಊರಿಲ್ವೆ ? ಹಳ್ಳಿ ಗ್ರಾಮಗಳಿರಲಿಲ್ವ ? ಪಟ್ಟಣಗಳಿರಿಲ್ಲಲ್ವೇನಮ್ಮಾ ?

'ಎಲ್ಲವೂ ಇದ್ದೊ ಕಣೋ ಕಂದ. ಆದ್ರೂ ಕೂಡ ಆವಾಗ, ನಿಮ್ಮ ತಂದೆಯಾದಂಥ ಸೋಮಯ್ಯಗೆ ಘೋರ ಬಡತನವಿತ್ತು. ಆವಾಗ ನಿಮ್ಮ ತಂದೆ ನಿಮ್ಮಕ್ಕಯ್ಯನ್ನ ಲಗ್ನ ಮಾಡ್ಬೇಕಾಗಿದ್ರೆ, ಹೆಣ್ಣಿನುದ್ದಕ್ಕೆ ಯಾರು ಹೊನ್ನು ಸುರಿತಾರೋ ಅಂಥವರಿಗೆ ನನ್ನ ಮಗಳಾದಂಥ ಶ್ರೀಗೌರಿಯನ್ನ ಕೊಟ್ಟು ಕನ್ಯಾದಾನ ಮಾಡ್ತೀನಿ ಅಂಥ ಡಂಗುರ ಮೂಲವಾಗಿ ಸಾರಿಸಿದ್ರು. ಅವಾಗ ನಿಮ್ಮ ಭಾವನಾದಂಥ ಮುಕ್ಕಣ್ಣ ಮಲ್ಲಪ್ಪನಾದಂತ ಪರಮೇಶ್ವರಾ ಆ ಹೊನ್ನನ್ನ ತಂದು ನಿಮ್ಮಕ್ಕನ ಉದ್ದಕ್ಕೆ ಸುರಿದು ನಿಮ್ಮಕ್ಕಯ್ಯನ ಲಗ್ನ ಮಾಡ್ಕೊಂಡು ಕೈಲಾಸಕ್ಕೆ ಕರ್ಕೊಂಡೋದ್ರು ಕಣಪ್ಪ' ಅಂದ್ಲು.

ಓಹೋ ನಮ್ಮಕ್ಕಯ್ಯನನ್ನ ಕೈಲಾಸಕ್ಕೆ ಕರ್ಕೊಂಡು ಹೋದ್ರೇನಮ್ಮಾ ? ಹಾಗಾದ್ಮೇಲೆ ಎಷ್ಟು ಹೊನ್ನು ಕೊಟ್ಟಿರ್ಬೋದಮ್ಮ ? ಸುಮಾರು ಅಂದ್ರೇ ಒಂದು ಮೂರು ಲಕ್ಷ ಹೊನ್ನಾಗ್ಬೋದು ಕಣೋ. ಹಾಗಾದ್ಮೇಲೆ ತಾಯೀ ಆ ಮೂರು ಲಕ್ಷ ಹೊನ್ನು ಕೊಡಮ್ಮ ಇಲ್ಲಿ. ತಕ್ಕೊಂಡೋಗಿ ನಮ್ಮ ಭಾವಯ್ಯನಿಗೆ ಕೊಟ್ಬಿಟ್ಟು ನಮ್ಮಕ್ಕಯ್ಯನ್ನ ಕರ್ಕೊಂಬಂದ್ಬಿಡ್ತೀನಿ ಅಂದ.

''ಏನಪ್ಪಾ ಮೈದಾಳ ರಾಮ ನಿಮ್ಮ ತಂದೆ ಸೋಮಯ್ಯ ತೀರೋದಾಗಿನಿಂದ ಲಕ್ಕಿಸೊಪ್ಪಿನ ಗುಡ್ಲೆ ಆಯ್ತು, ಮುತ್ತುಗದ ಹಾಳೆ ಕದವಾಯ್ತು, ಮಾನವರ ಮನೆ ಶಿವತಿರುಪೆ ಆಯ್ತಲ್ಲೋ. ನಿನಗಾದ್ರು ಮೂರುಲಕ್ಷ ಹೊನ್ನು ಎಲ್ಲಿ ಕೊಡ್ಲೋ'' ಅಂದ್ಲು.

ನೋಡಮ್ಮ ಅದಕ್ಕಾಗಿ ಚಿಂತೆಪಡಬೇಡ, ಬಿಡು ತಾಯೀ. ನಮ್ಮಕ್ಕಯ್ಯನನ್ನ ಕರ್ಕೊಂಬರಬೇಕಾಗಿದ್ರೆ, ಆ ಮೂರು ಲಕ್ಷ ಹೊನ್ನೂ ತೀರಿಸ್ಬಿಟ್ಟು, ನಮ್ಮಕ್ಕಯ್ಯನೂ ಕರ್ಕೊಂಡು ಬರ್ಬೇಕಾಗಿದ್ರೆ, ಇನ್ನು ಒಂದು ಲಕ್ಷ ಜೊತೇಲಿ ತಕ್ಕೊಂಡು ಬರ್ತೀನಿ ಅಂದ್ನಂತೆ.

'ಅದ್ಯಾಗೋ ಮೂರು ಲಕ್ಷ ಹೊನ್ನು ತೀರಿಸ್ತೀಯಾ ನೀನು ? ಇನ್ನು ಒಂದು ಲಕ್ಷ ಹೊನ್ನು ಜೊತೇಲೀ ತಕ್ಕೊಂಡು ಅಕ್ಕಯ್ಯನ ಯಾವ ರೀತಿಯಾಗಿ ಕರ್ಕೊಂಬರ್ತೀಯಪ್ಪಾ ಅಂದ್ಲು. ನೋಡಮ್ಮಾ ನಮ್ಮ ಭಾವಯ್ಯ ನಮ್ಮಕ್ಕಯ್ಯನ್ನ ಕರ್ಕೊಂಡು ಕೈಲಾಸಗಿರಿಗೆ ಹೋದಾ ಅಂತ ಹೇಳಿದಿಯಲ್ಲ; ನಮ್ಮಕ್ಕಯ್ಯ ಕೂತಿರುವಂಥ ಸ್ಥಳಕ್ಕೇನಾರ ಭಾವಯ್ಯ ಊಟ ತಂದ್ಹಾಕ್ತಾನೇನಮ್ಮ ? ಅವನ ಬಾಗಿಲು ಕಸ ಹೊಡೆದಿಲ್ವ ? ಅದೂ ಅಲ್ದೇನೇ ಆ ಬಾಗಲಲ್ಲಿ ಗೋಮೂತ್ರವನ್ನು ಬಿಟ್ಟು ಚಿಕ್ಕಿರಂಗೋಲಿಯನ್ನ ಬಿಟ್ಟಿಲ್ಲವಾ ? ಇದಕ್ಕೊಂದು ಲಕ್ಷ ವಜಾ ತಾಯಿ. ನಮ್ಮ ಭಾವಯ್ಯ ಎಲ್ಲಾದ್ರೂ ಹೊರಗಡೆ ಇಂದ ಬಂದ ಮೇಲೆ, ಅವನ ಕೈಕಾಲಿಗೆ ನೀರು ಕೊಟ್ಟು, ಊಟ ತಟ್ಟೆ ಕೊಟ್ಟು ಊಟ ಬಡಿಸ್ತಿಲವ ? ಅವನು ಊಟ ಮಾಡಿದಂಥ ಎಂಜಲು ನೀರು ತಕ್ಕೊಂಡೋಗಿ ಹೊರಗಡೆ ಚೆಲ್ಲಿಲ್ವ ? ಇದಕ್ಕೆ ಒಂದು ಲಕ್ಷ ವಜಾ ಆಗ್ಲಿಲ್ವೇನಮ್ಮ ?

ಮತ್ತೆ ನಮ್ಮ ಅಕ್ಕ ಭಾವ ಈರ್ವರು ಕೂಡಾ ಊಟ ತಿಂಡಿ ಮುಗಿದ ಮೇಲೆ, ಹೆಬ್ಬಾಳದಲ್ಲಿ ಪಟ್ಟೇಮಂಚದ ಮೇಲೆ ಕೂತುಕೊಂಡು ನಗುನಗುತ್ತಾ ಎಲೆ ಅಡಿಕೆ ತಾಂಬೂಲ ಕೊಡ್ಲಿಲ್ವೇನಮ್ಮ ? ಇದೊಂದು ಲಕ್ಷ ವಜಾ ಆಗಿಲ್ವೇ ತಾಯೀ ? ಹೀಗೇ ಮೂರು ಲಕ್ಷ ಹೊನ್ನು ತೀರಿಸ್ಬಿಟ್ಟು, ನಮ್ಮಕ್ಕಯ್ಯನ್ನ ಕರ್ಕೊಂಡು ಬರ್ತಾ ಇರ್ಬೇಕಾದ್ರೆ, ನಮ್ಮ ಭಾವಯ್ಯ ಸುಮ್ನಿದ್ರೇನೋ ಪರವಾಗಿಲ್ಲ. ಹಾಗೇನಾದ್ರೂ ಇರದೆ ಬಂದು ತಡೆದು ನಿಲ್ಸಿ ನಮ್ಮನ್ನ ಮಾತಾಡ್ಸಿದ್ದೇ ಉಂಟಾದ್ರೆ ಅವನ ರಟ್ಟೆ ಹಿಡಕೊಂಡು ಕುಲದೇವ್ರ ಮುಂದೇ ಕರ್ಕೊಂಡೋಗೀ ನ್ಯಾಯ ಪಂಚಾಯ್ತಿ ಮಾಡ್ಸಿ, ಅವನಿಗೊಂದು ಲಕ್ಷ ಹೊನ್ನನ್ನ ತಪ್ಪು ಮಡಗಿಸಿ, ಅದೇ ತಪ್ಪಿನ ಹೊನ್ನನ್ನ ತಕ್ಕೊಂಡು ನಮ್ಮಕ್ಕಯ್ಯನೂ ಕರ್ಕೊಂಡು ಬರ್ತೀನಿ ಬಿಡಮ್ಮಾ ಅಂದ.

ಅಂದಾಗ ಸತ್ಯವಂತೆ ಮಾದೇವಮ್ಮ 'ನನ ಕಂದ ಹೀಗೆ ಹೇಳ್ತಾ ಇದ್ದಾನಲ್ಲ? ಇವನೂ ಕೈಲಾಸಕ್ಕೆ ಹೋಗೋದು ದಿಟವೇ ? ಆ ಶಿವ ಗೌರಮ್ಮನನ್ನ ಒಡಹುಟ್ಟಾಗಿ ಈ ಭೂಲೋಕಕ್ಕೆ ಕರ್ಕೊಂಡು ಬಂದು ಒಡಹುಟ್ಟನಬ್ಬ ಅಂತೇಳಿ ಗೌರಿ ಹಬ್ಬ ಮಾಡೋದು ನಿಜವೆ ? ಅಂತೇಳಿ ಹಾಗೂ ಕೂಡಾ ಇವ್ನು ಕೈಲಾಸಕ್ಕೆ ಹೋಗ್ದೆ ಇರ್ಲೀ ಅಂತೇಳಿ ಆ ತಾಯಿ ಸತ್ಯವಂತೆ ಮಾದೇವಮ್ಮ ಕಂದನಿಗೆ ಹೇಳ್ತಾ ಇದ್ದಾಳೆ :

'ಕಂದ ಕೈಲಾಸ ಅಂದ್ರೇ ಅಷ್ಟು ಸಾಮಾನ್ಯದ ಮಾತಲ್ಲ ಕಣೋ'. ಹಾಗಂದ್ರೆ ಏನಮ್ಮಾ? ಕೈಲಾಸದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರು ಇದ್ದಾರೆ ಕಣಪ್ಪಾ. ಎದೆ ಮೇಲೆ ಲಿಂಗ ಕಟ್ಟಿದವ್ರನ್ನ ಮಾತ್ರ ಕೈಲಾಸಕ್ಕೆ ಬಿಡ್ತಾರೆ. ಇಲ್ದೆ ಹೋದ್ರೆ ಬಿಡೋದಿಲ್ಲ ಕಣೋ ಅಂದ್ಲು.

''ಏನಮ್ಮಾ ಲಿಂಗವಿದ್ರೆ ಮಾತ್ರ ಕೈಲಾಸಕ್ಕೆ ಬಿಡ್ತಾರೆ, ಇಲ್ದೆ ಹೋದ್ರೆ ಬಿಡೋದಿಲ್ಲ ಅಂತ ಹೇಳ್ತಾ ಇದ್ದೀಯಲ್ಲ ? ಹಾಗಾದ್ಮೇಲೆ ಲಿಂಗವಿರ್ದಿದ್ದ ಮೇಲೆ ಬಿಡೋದಿಲ್ವೆ ತಾಯೀ?'' 'ಇಲ್ಲ ಕಣಪ್ಪಾ. ಲಿಂಗವಿಲ್ಲದಿದ್ದ ಮೇಲೆ ಬೈ ಜನ ಅಂತೇಳಿ, ಹಿಂದಕ್ಕೆ ತಳ್ಳಿ ಬಿಡ್ತಾರೆ ಕಣೋ' ಅಂದಾಗ ಕಂದ '' ಏನಮ್ಮಾ ಆ ಲಿಂಗ ಅಂದ್ರೇ ಅದು ಎಂತಾದ್ದಮ್ಮ ?'' ''ಏನಪ್ಪಾ ಲಿಂಗ ಅಂದ್ರೇ ಎಂತಾದ್ದು ಅಂತ ಅಂದ್ರೆ, ಕೇಳಿದ್ರೆ ಯಾವ ಲಿಂಗ ಅಂತ ಹೇಳಿಕ್ಕೆ ಆದೀತು ಕಂದ ?'' ಅಂದಾಗ ಕಂದ ಭಕ್ತಿವಂತ ಮೈದಾಳ ರಾಮಯ್ಯ,'ನೋಡಮ್ಮ ಎದೆ ಮೇಲೆ ಕರಡಿಕೆಯಲ್ಲಿ ಕಟ್ಟಿಕೊಳ್ತಾರಲ್ಲ ಆ ಕರಡಿಕೆ ಒಳಗೆ ಲಿಂಗ ಏನು ಇದೆ ಅನ್ನೋದನ್ನ ಅರ್ಥ ಮಾಡೋದಿಕ್ಕೆ ಸಾಧ್ಯವೇ ತಾಯೀ ? ಆದ್ದರಿಂದ ಅದು ಅಂಥ ಲಿಂಗಗಳಲ್ಲ ಅಂತ ಹೇಳ್ದಾ. ತನ್ನ ಒಂದು ಎದೆಯನ್ನ ಕತ್ತಿಯಿಂದ ಬಗೆದು ಆತ್ಮಲಿಂಗವನ್ನ ತೋರಿದ. ಆ ಸತ್ಯವಂತೆಯ, ಮಾದೇವಮ್ಮನ ಶಾಂತಿಯನ್ನ ಪಡಕೊಂಡನು. ಅವನ ಸತ್ಯಕ್ಕೋಸ್ಕರವಾಗಿ ಪರಮೇಶ್ವರನಾದಂತಹ ಶಿವನು ಅವನಿಗೆ ಆಶೀರ್ವಾದವನ್ನ ಮಾಡಿ ಪ್ರಾಣದಾನವನ್ನ ಮಾಡಿದನು. ಆಮೇಲೆ ಆ ಕಂದ ಭಕ್ತಿವಂತ ಮೈದಾಳ ರಾಮಯ್ಯ ತಾನು ಕೈಲಾಸಕ್ಕೋಗಿ,

ಅಕ್ಕ ಭಾವನನ್ನ ಕರ್‍ಕೊಂಡು ಬರ್‍ಬೇಕಾಗಿದ್ರೆ 'ಅಮ್ಮಾ ಕೇಳು ಹೇಳ್ತೀನಿ. ನಾನು ಈ ಭೂಲೋಕವನ್ನು ಬಿಟ್ಟು ಕೈಲಾಸಕ್ಕೋಗಿ ಆ ಶಿವ ಗೌರಮ್ಮನಾಗಿರತಕ್ಕಂಥ ನಮ್ಮ ಅಕ್ಕ ಭಾವನನ್ನ ಕರ್‍ಕಂಬರ್‍ಬೇಕಾದ್ರೇ ಬರಿಕೈನಲ್ಲಿ ಹೋಗಕ್ಕೆ ಸಾಧ್ಯವಿಲ್ಲ. ನನಗೇನಾದ್ರೂ ಒಂದಷ್ಟು ಬುತ್ತಿ ಕಟ್ಟಿಕೊಟ್ರೆ ನಾನು ಆ ಬುತ್ತಿಯನ್ನು ತೆಗೆದುಕೊಂಡು ಹೋಗಿ ನಮ್ಮ ಅಕ್ಕ ಭಾವನನ್ನು ಕರ್‍ಕೊಂಬರ್‍ತೀನಿ ಅಂದನು.

ಆವಾಗ ಮಾದೇವಮ್ಮ ತನ್ನ ಕಂದನ ಮಾತನ್ನ ಕೇಳಿ ಮಾನ್ನೆವರ ಮನೆಯೊಳಗೆಲ್ಲ ಶಿವ ತಿರುಪೆಯನ್ನ ಮಾಡಿ, ಅವಲಕ್ಕಿ ಬುತ್ತಿಯನ್ನು, ಹಾಲು ಅನ್ನದ ಬುತ್ತಿಯನ್ನು, ಕಜ್ಜಾಯದ ಬುತ್ತಿಯನ್ನ ಕಟ್ಟಿ, ಮಗನ ಕೈಲೀ ಕೊಟ್ಟು ಅವನಿಗೆ ಅಶೀರ್ವಾದವನ್ನು ಮಾಡಿ ಕಳುಹಿಸಿದಳು. ತಾಯಿಯ ಆಶೀರ್ವಾದವನ್ನ ಪಡಕೊಂಡು ಕಂದ ಭಕ್ತಿವಂತ ಮೈದಾಳರಾಮಯ್ಯ ಬೇಕಾದಂಥ ಅಡವಿ ಅರಣ್ಯಗಳು, ಬೆಟ್ಟ ಗುಡ್ಡಗಳನ್ನು ಹತ್ತಿ ಇಳಿದು ಮತ್ತೆ ತಾಯಿ ಹೇಳಿದಂಥ ಮಾರ್ಗಗಳನ್ನು ತಳಕೊಂಡು, ಆ ಬೆಟ್ಟಗುಡ್ಡಗಳಲ್ಲಿ ಬೇಕಾದಷ್ಟು ಕಷ್ಟದಲ್ಲಿ ತನ್ನ ದೇಹವನ್ನ ತ್ಯಾಗ ಮಾಡೀ ಮೈ ಕೈಯೆಲ್ಲಾ ಕಿತ್ತೋದ್ರೂ ಕೂಡಾ ಆ ಬೆಟ್ಟ ಗುಡ್ಡಗಳಲ್ಲಿ ಮತ್ತೆ ಆ ಅಡವಿ ಅರಣ್ಯದಲ್ಲಿ ಅವನನ್ನ ಸತ್ಯಪರೀಕ್ಷೆ ಮಾಡಿ ಪರಶಿವನಾದಂತಹ ಪರಮೇಶ್ವರನೂ ಕೈಲಾಸಕ್ಕೆ ಬರ್‍ಬೇಕಾದ್ರೆ ಆ ಕೈಲಾಸದಲ್ಲಿ ಶಿವಶರಣರಿದ್ದಾರೆ. ಎದೆ ಮೇಲೆ ಲಿಂಗ ಕಟ್ಟಿದವರು ಇದ್ದಾರೆ. ಲಿಂಗವಿದ್ದವರಿಗೆ ಮಾತ್ರ ಕೈಲಾಸಕ್ಕೆ ಬಿಡ್ತಾರೆ. ಇಲ್ಲದೆ ಹೋದ್ರೆ ಬಿಡೋದಿಲ್ಲ ಅಂತೇಳಿ ನಮ್ಮ ತಾಯೀ ಹೇಳಿದ್ಲು. ಈ ಮಾತು ಸತ್ಯನಾ ಇಲ್ಲವಾ ಅಂತೇಳಿ ನಾನು ಪರಿಶೊಧನೆ ಮಾಡ್ಕೊಂಡು ಹೋಗ್ಬೇಕಲ್ಲ ಅಂತೇಳಿ ಅವನು ಕೈಲಾಸದ ಕಡೆ ಬಾಗಿಲಿಗೆ ಬಂದಾಗ, ಆ ತಾಯಿ ಹೇಳಿದ ಮಾತಿನಂತೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರೂ ಕೂಡ ಯಾರೋ ಬಡವೀ ಕಂದ ಬರ್‍ತಾ ಇದ್ದಾನೆ ಅಂತೇಳಿ ಶಿವಶರಣರೆಲ್ರೂ ಕೂಡಾ ಬಂದು ಅವನನ್ನ ತಡೆದು ನಿಲ್ಲಿಸ್ಕೊಂಡಾಗ ಯಾಕ್ರಪ್ಪಾ ನನ್ನನ್ನ ತಡೀತಾ ಇದ್ದೀರಲ್ಲ ಎಂದಾಗ, ಅಯ್ಯೊ ಎದೇ ಮೇಲೆ ನಿನಗೆ ಲಿಂಗವಿದ್ದರೆ ಮಾತ್ರ ನಿನ್ನನ್ನು ಕೈಲಾಸಕ್ಕೆ ಬಿಡ್ತೀವಿ. ಇಲ್ಲದೆ ಹೋದ್ರೆ ಬಿಡಾಕೆ ಸಾಧ್ಯವಿಲ್ಲ ಕಣಪ್ಪ ಅಂತ ಅಂದ್ರು.

ಏನ್ರಪ್ಪಾ ಎದೆ ಮೇಲೆ ಲಿಂಗವಿದ್ರೇ ಮಾತ್ರ ಕೈಲಾಸಕ್ಕೆ ಬಿಡ್ತೀರ. ಇಲ್ಲದೆ ಹೋದ್ರೆ ಬಿಡೋದಿಲ್ವೆ ? ಇಲ್ಲ ಕಣಪ್ಪಾ. ಬೈಜನ ಅಂತ ಕಳಸಿಬಿಡ್ತೀವಿ ಅಂದ್ರು. ಅಂದಾಗ ನಮ್ಮ ತಾಯಿ ಹೇಳಿದ ಮಾತು ಸತ್ಯವಾಯ್ತು ಅಂತೇಳಿ ತನ್ನ ಆತ್ಮಲಿಂಗವನ್ನು ತೋರಿ ಆ ಶಿವಶರಣರಿಗೆ ಶಾಂತಿ ಸಮಾಧಾನವನ್ನು ಕೊಟ್ಟು, ಪರಶಿವನಿಂದ ಆಶೀರ್ವಾದವನ್ನ ಪಡಕೊಂಡು, ಆ ಶಿವಶರಣರ ಜೊತೆ ಒಳಗೆ ಕೈಲಾಸವನ್ನ ಸೇರಿ, ಗೌರಮ್ಮನನ್ನ ಕರೆದುಕೊಂಡು ತನ್ನ ಭಾವ ಇದ್ದಂತಹ ಗುರುಮಠಕ್ಕೆ ಬಂದು, ಆ ಭಾವಯ್ಯನಿಂದ ಆಶೀರ್ವಾದವನ್ನ ಪಡಕೊಂಡು ಮತ್ತೆ ಹಿಂದೆ ನಡೆದಂಥಾ ಕತೆಯನ್ನೆಲ್ಲಾ ಕೂಡ ತನ್ನ ಅಕ್ಕ ಭಾವನಿಗೆ ತಿಳಿಸಿ ಅವ್ರನ್ನ ಕೈಲಾಸದಿಂದ ಕರ್‍ಕೊಂಡು ಬಂದು ಬೂಲೋಕದಲ್ಲಿ ಗೌರಿಹಬ್ಬವನ್ನು ಮಾಡಿ ತನ್ನ ವಂದನೆಗಳನ್ನು ಅರ್ಪಿಸಿ, ತಾಯಿ ಮಾದೇವಮ್ಮನ ಆತ್ಮಕ್ಕೆ ಬೂಲೋಕದಲ್ಲಿ ಗೌರಿಹಬ್ಬ ಅಂತಹೇಳಿ ಭಕ್ತಿವಂತ ಮೈದಾಳರಾಮಯ್ಯನಿಂದ

ವರ್ಷಕ್ಕೊಂದು ಸಾರಿ ಗೌರಿಹಬ್ಬವನ್ನು ಶಿವಶರಣರೂ ಭಕ್ತಾದಿ ಭಕ್ತರೆಲ್ಲರೂ ಕೂಡಾ ಆ ಒಡಹುಟ್ಟು ಆಗಿರತಕ್ಕಂಥ ಗೌರಿಹಬ್ಬವನ್ನ ಮಾಡೀ ಹೆಚ್ಚಾಳದಲ್ಲಿದ್ದಾರೆ. ಆ ಶಿವಶರಣರ ಒಂದು ವಚನವನ್ನ ನಾವು ನಮ್ಮ ಗುರುಗಳು ಹೇಳ್ಕೊಟ್ಟಂಥ ಕಥೆಯನ್ನ ತಮ್ಮ ಮುಂದೆ ಹೇಳಿದ್ದೀನಿ. ಇಲ್ಲಿಗೆ ಆ ಭಕ್ತಿವಂತ ಮೈದಾಳ ರಾಮಯ್ಯನ ಕಥೆ ಪೂರ್ತಿಯಾಗಿ ಮುಗಿದು ಬಂದಿದೆ.

# ೫೬. ಹಾರುವರಿಗೆಲ್ಲ ಬರೆ

ಸರ್ಜಪ್ಪನ ದರ್ಬಾರೇ ದರ್ಬಾರು. ಈ ಕೆಂಗಲ್‌ನಾಯಕ, ನಾಗ್ರಮರಿ ಇವುರ್‍ನೆಲ್ಲ ಚಚ್ಚಿಹಾಕಿ ಬಿಟ್ಟು, ದರ್ಬಾರ ಮಾಡ್ಕೊಂಡಿದ್ದ. ಆಮ್ಯಾಲೆ ಈ ಹಾರೋರೆಲ್ಲ ಸೇರಿಕೊಂಡು ಏನ್ಮಾಡಿದ್ರು? ಬೇಲೂರು ಗುಡಿವಳಗೆ ಈ ಸರ್ಜಪ್ಪನಿಗೆ ಕಾಯಿಲೆ ಬಂತು. ಸರ್ಜಪ್ಪ ಸತ್ತೋಗಿ ಬಿಟ್ಟ. ಸತೋಗಿ ಬಿಡುತ್ಲೇಯ, ಈ ಕೆಂಗಲ್‌ನಾಯಕ ನಾಗ್ರಮರೀದೆ ಆಯ್ತುತಾನೆ ರಾಜ್ಯ?

ಆಮ್ಯಾಲೆ ಈ ಹಾರ್‍ವ್ರೂರಿಗೆ, ಏನಾಯ್ತು? ಈ ಸರ್ಜಪ್ಪ ಸತ್ತೋದ ಮ್ಯಾಲೆ, ನಮ್ಮುನ್ ಕೇಳೋರ್‍ಯಾರು ? ನಮಿಗೆ ಹೇಳೋರ್‍ಯಾರು ಅಂತ ಹೇಳಿ, ಕಗ್ಗವಾಗಿ ಒಂದ್ ಚಾವಡೀಲಿ ಹಾಲ್ ತಂದಕಂದ್, ಹಾಲ್ ಕಾಸ್ಗಂದ್, ಬೇಕಾದಂತ ತಿಂಡಿ ತಿಂದ್ಕಂಡ್ ಹಾಲೂರು ನಮ್ದಾಯ್ತು, ಬೇಲೂರು ಸಮ್ದಾಯ್ತು, ಬೆಂಗಳೂರು ನಮ್ದಾಯ್ತು ಇನ್ ಕೇಳೊರ್‍ಯಾರು, ಹೇಳೊರ್‍ಯಾರು ನಾವಾಡಿದ್ದೆ ಆಟ ಹೂಡಿದ್ದೆ ಲಗ್ಗೆಅಂದ್ಕಂಡ್ ಕಕಾಯಿಸ್ಕೊಂಡ್ ಮಾಡ್ತಾಯಿದ್ರು.

ಈ ಕೆಂಗಲ್‌ನಾಯಕ ನಾಗಮರಿನು ಈಟೇ ಸ್ವರ ಇವ್ರಿಲ್ಲಿ ಕೇಳ್ಕಂದುದ್ರು. ಆಗ್ಲೆ ನಿಮ್ದಾಗಿ ಬಿಡ್ತ ದರ್ಬಾರು ಅಂದುದ್ದು ಹಾರುವರ್‍ನ ಎಲ್ಲಾರ್‍ನು ಕೂಡ್ಕಂಡಿದ್ದು ಇಂತೊದೊಂದ್ ಚಾವಡಿ ವಳೀಕೆ, ಕೊಂಡಹಾಕಿ ಎಲ್ಲಾರನ್ನು ಕೂಡಿಕೊಂಡು, ಹಾರ್‍ವ್ರೂರಿಗೆಲ್ಲ ಇಲ್ಲಾಸ್ ಇಲ್ಲಾಸೊಂದ್ ಬರಕೊಟ್ಟ. ಇದು ಹಿಂದಲ ಕಾಲದ ಕತೆ.

ಹೇಳಿದವರು : **ಸೋಬಾನೆ ಚಿಕ್ಕಮ್ಮ**. ಹೆರಗನಹಳ್ಳಿ, ನಾಗಮಂಗಲ ತಾಲ್ಲೂಕು.

# ಅನುಬಂಧ

## ಅರ್ಥಕೋಶ

ಅಂಗುಳ ಸ್ಥಾನ - ಅಂಗಳ, ಬಯಲು.
ಅಂತವರ್ಗ್ಗೂ - ಆವರೆಗೂ.
ಅಕ್ಕಸ್ತಿ - ಅಕ್ಷತೆ.
ಆಕ್ಸೆ ಬಡ್ಯಾಗೆ - ಊರ ಹೆಬ್ಬಾಗಿಲ ಬಳಿ.
ಅಡಗೂಟ - ಅಡುಗೆ ಊಟ.
ಅಡೇಮ್ಯಾಲೆ - ಅಡಿಗೆಯ ಮೇಲೆ, ಅಡಿಗೆ ಮಾಡುವ ಒಲೆಯ ಮೇಲೆ.
ಅಡ್ಡೊಲ್ಲಿ - ಅಡ್ಡವಲ್ಲಿ, ಅಡ್ಡವಸ್ತ್ರ, ಹೆಗಲಮೇಲೆ ಹಾಕಿಕೊಳ್ಳುವ ಅಡ್ಡ ವಸ್ತ್ರ.
ಅತ್ತೆ - ಅಗತೆ.
ಅದುಕ್ - ?
ಅದೆಗತೆ - ಅಡಗಿಕೊಂಡು.
ಅಪಟಿಗಂತು - ಆ ಬಾರಿಯಂತು.
ಅಪ್ಪರ - ಅಪಾರ, ಬಹಳ.
ಅಪ್ಪಾಸಿನ್ -?
ಅಮ್ಮಿಕೊಂಡು - ಅದುಮಿಕೊಂಡು.
ಅಮೃತ ಕಲಶ - ಹೃದಯದಲ್ಲಿ ಇದೆಯೆಂದು ನಂಬಿದ ಕಲಶ. ಒಂದು ಜನಪದ ಕವಿಸಮಯ.
ಅರಿದಿರ್ಲಿಲ್ಲ - ತೀರ್ಮಾನವಾಗಿರಲಿಲ್ಲ.
ಅಲ್ಲಾಸಿ - ಆ ಕಡೆಯಿಂದ.
ಅಸವಲ್ಲದವಳು - ಹಸವಲ್ಲದವಳು, ಕೊಳಕು ಹೆಂಗಸು, ಕೆಟ್ಟಸ್ವಭಾವದವಳು.
ಅಸ್ಲಹೊಲ - ಬೆಳೆ ಬೆಳೆದಿರುವ ಹೊಲ, ಹೊಲದಲ್ಲಿ ಬೆಳೆದಿರುವ ಬೆಳೆ.
ಆಕ್ಲಾಸ (ಹಾಕ್ಲಸ)- ಆಕಲಾಸ, ತಮಾಷೆ, ಸರಸ.
ಆಚೆಕಡೆಗೆ - ಮಲವಿಸರ್ಜನೆಗೆ.
ಆರಂದ - ದಟ್ಟವಾದ.
ಇಕ್ಕಜ್ಜಿ - ನೀಡಜ್ಜಿ.
ಇಡುವಕ್ಕಿ - ಇಡಿಯಾಗಿ.
ಇಪಟಿಗೆ - ಈಪಟಿಗೆ, ಈ ಬಾರಿಗೆ.
ಇಗ್ನು - ವಿಘ್ನ.
ಇಬ್ಬಾರು - ಇಬ್ಬರು.
ಇರವೆಂಬತ್ತು - ಇರ್ + ಎಂಬತ್ತು, ಎರಡೆಂಬತ್ತು
ಈಡು - ಹೊಂದು, ಹೊಂದಿಕೆಯಾಗುವ (ಕೈಬಳೆ).
ಈತವಲ್ಲಿಂದ - ಈ ತಾವಿನಿಂದ.

ಉಕ್ಕು - ಕಾಯ್ದು ಮೇಲಕ್ಕೆ ಬರು.

ಉಣ್ಣಲ್ಲಕಣೇಂತ - ಊಟಮಾಡುವುದಿಲ್ಲವೆಂದು.

ಉತ್ತರಾಸ - ಉತ್ತರಾಸು, ಬಾಗಿಲ ಚೌಕಟ್ಟಿನ ಒಳಗಡೆಗೆ ಮುಂಚಾಚಿದ ಮೇಲುಭಾಗ.

ಉಪಾಂತ್ರ - ಉಪಾಯ.

ಉಸೂರಂತ - ನೋವಿನಿಂದ ಕೊರಗುತ್ತ, ನಿಟ್ಟುಸಿರು ಬಿಡುತ್ತಾ.

ಊರಾಡು - ಊರು ಸುತ್ತು.

ತುಶಾಂತಿ - ಋತುಮತಿ, ಕನ್ನೆ ಮೈನೆರೆಯುವುದು.

ಎತ್ತಾನ ಕಡಿಯೋಣ -?

ಎರಕನದು - ಋತುಮತಿ, ಬಸುರಿ ಬಾಣಂತಿ ಮೊದಲಾದವರಿಗೆ ನೀರುಹಾಕಿ ಸ್ನಾನ ಮಾಡಿಸುವುದು.

ಏಸು - ಎಷ್ಟು.

ಏಡಿಗಾಯಿ - ಏಡಿಕಾಯಿ, ಎಕ್ಕಿನಳ್ಳಿ, ಹೆಗ್ಗೇನಳ್ಳಿ.

ಒಂಚುತ್ತ - ಹೊಂಚುತ್ತಾ.

ಒಂದೀಟ್ - ಒಂದಿಷ್ಟು.

ಒಂದಾಟ್ಕೆ - ಒಂದು ಆಟಕ್ಕೆ.

ಒಂದೇಳ್ಳಿವೆ - ಒಟ್ಟಿಗೆ?

ಒಡಕನಮುಟ - ಒಡೆಯುವವರೆಗು.

ಒಡೆಯೋ - ಒಡೆಯುವ, ಕದಿಯುವ.

ಒಷ್ಟರ್ನು - ಅಷ್ಟು ಜನರನ್ನು.

ಓದಕ - ಓದಬೇಕ.

ಓದಲುದ್ರೆ - ಓದದೆ ಇದ್ದರೆ.

ಓಸ್ - ಉಸಿರು.

ಕಡೇಗಣ್ಣಲ್ಲಿ - ತಿರಸ್ಕಾರದಲ್ಲಿ.

ಕಣ್ಣಿಗೆ ನೆಟ್ಟಿದ್ದು - ಕಣ್ಣಿಗೆ ಆಕರ್ಷಕವಾಗಿ ಕಂಡಿದ್ದು.

ಕರಿಗ್ಯಾಲ ಲೌಡಿ - ಕರಿಕಾಲಿನ ಲೌಡಿ, ಒಂದು ಬೈಗುಳಪದ.

ಕರುದ್ಲು - ಎಣ್ಣೆಯಲ್ಲಿ ಬೇಯಿಸಿದಳು.

ಕಲ್ಕಂಬುಟ್ಲು - ಕಲಿತುಕೊಂಡಳು.

ಕಾರ್ಯ - ಪ್ರಸ್ತ, ಶೋಬನ.

ಕಿರಿಗಂಚಿ - ಮದುವೆಯ ಮಾರನೆಯ ದಿನ ಮಾಡುವ ಶಾಸ್ತ್ರ, ಮದುವೆ ಗಂಡನ್ನು ಮಾವನ ಮನೆಗೆ ಕಳುಹಿಸುವ ಶಾಸ್ತ್ರ.

ಕುಂತ್ಲಂತೇನಿ - ಕುಳಿತುಕೊಳ್ಳುತ್ತೇನೆ.

ಕುತಾ - ಕುದಿ, ಅಸೂಯೆ.

ಕುಳಿವಿಟ್ಟು - ಕಣ್ಣಿಟ್ಟು, ಹೀಗೆ ಮಾಡಬೇಕೆಂದು ನಿರ್ಧರಿಸಿ, ಯೋಚಿಸಿ, ಲೆಕ್ಕಹಾಕಿ.

ಕೂಕೊಂಡ - ಕುಳಿತುಕೊಂಡ.

ಕೂತಿತವ್ಲೆ - ಕುಳಿತಿದ್ದಕಡೆಯೇ.

ಕೈಯಾಳ - ಕೈಯಾರ, ಕೈಯಲ್ಲಿ.

ಕೊಂಕ - ಕೊಂಕು, ಸೊಟ್ಟಾಗಿ, ವಕ್ರವಾಗಿ.

ಕೊಂಬು - ಒಂದು ವಾದ್ಯ.
ಕೊರಕು - ಗಲೀಜು, ಕಸ.
ಕೊಳ್ಳರ್ದು - ಕೊರಳಿಗೆ ಕಟ್ಟಿದ್ದನ್ನು ಬಿಚ್ಚಿ.
ಕೋರೆ - ಕ್ವಾರಿ, ಬಂಡೆ.
ಖರೆ - ನಿಜ.
ಗಂಗಮ್ಮನ ಮಾಡಿಸು - ಗಂಗೆಪೂಜೆ ಮಾಡಿಸು.
ಗಂಡ್ ಕತ್ತರಿ - ಗಂಡುಗತ್ತರಿ, ದೈಹಿಕ ಹಿಂಸೆಯ ಹರಕೆ ಸಲ್ಲಿಸಲು ಬಳಸುವ ಆಯುಧ.
ಗಂಡಗಾತ್ರ -?
ಗಣಸು - ಗಂಡಸು.
ಗದರಾಯ್ತು - ಕಲಕಿತು ?
ಗಿಂಜಾಡು - ಬಾಯಿ ಅಗಲ ಮಾಡು, ಹಲ್ಲುಗಿಂಜು.
ಗಿಡ - ಕಾಡು.
ಗುಂಜುಕೋತಾರೆ - ಕಿತ್ತುಕೊಳ್ಳುತ್ತಾರೆ.
ಚಂಚರಣೆ - ಸಂಚರಣೆ , ಸಂಚಾರ.
ಚಂದ್ರಕಾಂತ - ಚಂದ್ರಾಯುಧ?
ಚಂದಾಯ್ಕೆ - ಚಂದ್ರಾಯುಧಕ್ಕೆ.
ಚವಟ (ಚೌಟು) - ಸೌಟು.
ಚಿಟ್ನಾಕುಟ್ನಾ - ಒಂದು ಬೈಗುಳ ಪದ.
ಜನಕಲ್ಲಾದ್ಲು - ಹಡೆದಳು. ಜನ್ಮವಿತ್ತಳು.
ಜಿಂಕ್ಪು - ಜಿಗಿಟು.
ತಗನಾನ - ತೆಗೆದುಕೊಳ್ಳೋಣ.
ತರ್ಲ್ದಿದ್ರೆ - ತರದೇ ಇದ್ದರೆ, ಕರೆದುಕೊಂಡು ಬರದೇ ಇದ್ದರೆ.
ತಿಳಿಗ್ -?
ತಿರುವಲೆ ಬಾಗ್ಲು - ತಿರುಗಾಡುವ ಬಾಗಿಲು, ಮನೆಯ ಮುಂಬಾಗಿಲು?
ತಿಳಿಯಂಗಾಗಮುಂಟ - ತಿಳಿಯುವಂತಾಗುವವರೆಗು.
ತಾಂಡು ಹೋದ್ರು - ತೆಗೆದುಕೊಂಡು ಹೋದರು.
ತಾಂಡೋಗಿ - ತೆಗೆದುಕೊಂಡುಹೋಗಿ.
ತ್ವಾಳೆ ಮ್ವಾತೆ - ತಾಳೆ ಮರದ ಮೋತೆ, ಹೂವು.
ದಮ್ಮು - ಮಿದಿದ ಗೋಧಿ ಹಿಟ್ಟು.
ದಂಡುದಳ - ಸೈನ್ಯ.
ದಾರಿ ಮೂರ್ತ - ಧಾರೆ ಮುಹೂರ್ತ ? ಅನುಗ್ರಹಿಸು.
ದಾವಣಿ - ಸಾಲಾಗಿ ದನಕರುಗಳನ್ನು ಕಟ್ಟುವ ಹಗ್ಗ.
ದಾಳಿದಂಡು - ಸೈನ್ಯ.
ದಿಸ್ವಟ್ಗೆ - ದಿವಸಕ್ಕೆ.
ದೊಡ್ನಾಕೆ - ದೊಡ್ಡದಾಗಿ, ಮೈನೆರೆದಾಕೆ .
ದೋರು - ಬಿಲ.

ನನ್ಹೇಳ್ಕೆಂತೆ - ನಾನು ಹೇಳಿದ ಹಾಗೆ.
ನರಿನಾತ - ದುರ್ನಾತ.
ನವನಾರು - ಒಂಬತ್ತು ತಿಂಗಳು, ನವಮಾಸ.
ನವೀನಿಲ್ಲ - ನಾವೀನ್ಯವಿಲ್ಲ.
ನಾಟೆ - ಚಿಪ್ಪು.
ನ್ಯಾಸ್ತ್ರಕ್ಕೆ - ?
ನಿಡಿ - ಸಾರು, ತಿಳಿ.
ನಿಸ್ತ್ರಕಾಗಿ - ಅವಸರವಾಗಿ, ಒತ್ತಡವಾಗಿ, ಸುಸ್ತಾಗಿ, ನಿಶ್ಯಕ್ತಿಯಾಗಿ.
ನೀರ್ದ್ಕಾಕ (ನೀರ್ದಾಕ)- ಮಲಮೂತ್ರ ವಿಸರ್ಜನೆಗೆ .
ನೀರುನಿಲ್ಲು - ಗರ್ಭವತಿಯಾಗು.
ನುಸಿಯಲ್ಲಿ -?
ನೆಟ್ಟದ್ದ - ಕಣ್ಣಿಗೆ ಬಿದ್ದಿದ್ದ.
ನೆನಿಬಾರ್ದ್ದೋನ್ - ನೆನೆಯಬಾರದವನು, ಕ್ಷೌರಿಕ.
ನೆಲಹತ್ತಿ - ಬಡವರಾಗಿ.
ನೇವ - ಲೇಪ, ಸವರು.
ನೊಸಿಕೊಂಡು - ನುಸಿಕೊಂಡು, ನುಸುಳಿಕೊಂಡು.
ನೋಟಿಲ್ಲ - ನೋಡಲು ಅಂದವಾಗಿಲ್ಲ.
ಪಗಡಿ - ಪಗಡೆ.
ಪಟ್ಣಕುಟ್ಟಿ ಪಟ್ಣ ಸಾರಿಸಿ - ಪಟ್ಟಣವನ್ನು ಶೃಂಗಾರ ಮಾಡಿ.
ಪಟ್ಕಾಯಿಸು - ಬದಲಾಯಿಸು.
ಪತಿಕಂಡು - ಪ್ರತ್ಯಕ್ಷ ಕಂಡು.
ಪಾಟಾಗಿದ್ರು - ಅಭ್ಯಾಸವಾಗಿದ್ದರು.
ಪ್ರಾಕರ್ಣಿ - ಪಾಕಡ, ಕಿಲಾಡಿ.
ಪಿರ್ಯಾದಿ - ದೂರು.
ಪಿಚಾಚಿ - ಪಿಶಾಚಿ.
ಪುಣ್ಯಮಾಡಿಸಿ - ಶುದ್ಧಗೊಳಿಸಿ.
ಪೂರ್ವಿಕವಾದ - ಹಿರಿಯದಾದ.
ಬಂಟೋಯ್ತದೆ - ಆರಿಹೋಗುತ್ತದೆ.
ಬಂದಾಸ - ತೊಂದರೆ , ಕಿರುಕುಳ.
ಬಜಾಸ್ತಿ - ಬಹಳ.
ಬಟ್ಟೆಬಿಟ್ಲು - ಬಟ್ಟೆ ಬದಲಿಸಿದಳು.
ಬಡ್ಡೆ - ಬುಡ.
ಬದಿ - ಪಕ್ಕ.
ಬರಸಿಡ್ಲು - ಕೇಡು.
ಬರ್ಲ್ಲದೊಪ್ಕೆ - ಬರದೆ ಇರುವವರಿಗೆ, ವಿಧ್ಯೆಹತ್ತದಿರುವವರಿಗೆ.
ಬಳ್ಕಂಡು - ಬಳಿದುಕೊಂಡು, ಸೆಗಣಿ ನೀರಿನಿಂದ ಸಾರಿಸಿ.

ಬಳಲಿ - ನೊಂದು, ಬಹಳ ನಡೆದುದರಿಂದಾಗುವ ಆಯಾಸ.

ಬಾಣಂತಿ ಬಳೆ - ಬಾಣಂತಿ ತೊಟ್ಟುಕೊಳ್ಳುವ ಬಳೆ.

ಬಾರಿಕರ - ನಾನಾ ರೀತಿಯಲ್ಲಿ.

ಬಾರೆ - ಬೋರೆ, ಎತ್ತರವಾದ ಸ್ಥಳ.

ಬಿಲ್ಡಿಂಗ್ - ಮನೆ.

ಬೆಂಕಿ ಇಕ್ಕು - ಬೆಂಕಿ ಹಚ್ಚು, ಬೆಂಕಿಯಿಡು.

ಬೆಂಕ್ಸಿಗೆ - ಮನೆಯ ಮೇಲಿನ ಎರಡೂ ಸೂರುಗಳು ಕೂಡಿದ ಜಾಗ, ಬೆನ್ನು.

ಬೆಪಾಜಿ ಮರಿಯಾಗಿಬಿಟ್ಟಳು - ಕೊರಗಿಬಿಟ್ಟಳು.

ಬೈಜನ - ಹಿಂದುಳಿದ ಜನ, ಹರಿಜನ, ದಲಿತಜನ .

ಬೈಯಿಸ್ಗೆಂದೆ - ಬೈಯ್ಯಿಸಿಕೊಂಡೆ.

ಬೋಕಿ - ಮಡಕೆ.

ಭ್ರಮಿಸಿ - ಮೋಹಿಸಿ, ಆಸೆಪಟ್ಟು.

ಮಂಡೆಬಾರ - ಮಂಡೆಕ್ಷೌರ, ತಲೆಗೂದಲು ಬೋಳಿಸುವುದು, ತಲೆ ಬೋಳಿಸಿ ದೀಕ್ಷೆ ಸಂಸ್ಕಾರ ಮಾಡಿಸುವುದು. ಇದೊಂದು ಜನಪದ ಆಚರಣೆ.

ಮಂದಿಮಾರ್ಗ - ಮಂದಿ ಮಾರ್ಬಲ, ದೊಡ್ಡಸೈನ್ಯ .

ಮಕ್ಕಂದಿದ್ದ - ಮಲಗಿದ್ದ.

ಮಡ್ಲಕ್ಕಿ (ಮಡಿಲಕ್ಕಿ) - ಮಡಿಲಕ್ಕಿ, ಶುಭಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಉಡಿಗೆ ತುಂಬುವ ಅಕ್ಕಿ.

ಮನಕಾಂಡ ಮಂದಿ -?

ಮನ್ನಣೆ - ಮರ್ಯಾದೆ.

ಮರಗೋಟಿ (ಮರಗೋಪಿ) - ಮನುಷ್ಯಾಕಾರದ ಮರದ ಗೊಂಬೆ, ಮನುಷ್ಯನ ವೇಷ ಬದಲಾಯಿಸಿಕೊಳ್ಳಲು ಮಾಡಿದ ಮರದ ಸಾಧನ.

ಮರ್ ಜಾವ್ಳದ್ಕಡ್ಡಿ - ಮರಿಜವುಳಿ ಕಡ್ಡಿ, ಮರುಜೇವಣಿ ಕಡ್ಡಿ, ಸತ್ತವರನ್ನು ಮತ್ತೆ ಬದುಕಿಸುವುದೆಂದು ನಂಬಲಾದ ಒಂದು ಬಗೆಯ ಔಷದ ಸಸ್ಯ.

ಮರಿಗಂಚಿ - ಕಿರಿಗಂಚಿಯ ಮಾರನೆಯ ದಿನ ಮರಿಗಂಚಿ. ಕಜ್ಜಾಯದ ಶಾಸ್ತ್ರ, ಮದುವೆಯ ಒಂದು ಆಚರಣೆ.

ಮಲ್ನಾಡ - ಮಲೆನಾಡು.

ಮಾಡೊಂತ್ರಿ - ಮಾಡುವಿರಂತೆ.

ಮುಟುಕ್ಸು -?

ಮುರ್ದು ಹಕ್ಕೆಂದುದ್ದು - ಸೂಳೆಗಾರಿಕೆ ಮಾಡಿ ಅವರಿಂದ ದೋಚಿದ್ದು.

ಮೂಗಿಗೆ ಕವಡೆ ಕಟ್ಗೆಂದ್- ಎಡೆಬಿಡದೆ.

ಮೋರಿ - ಮೋರೆ, ಮುಖ.

ಮೋರ್ತಕ್ - ಮುಹೂರ್ತಕ್ಕೆ.

ಯಾತ್ರಿದಂಟು - ಸೊಪ್ಪಿನದಂಟು.

ರಾಚ್ಯುಪಲ್ಲವಾದ - ಕಣ್ಣಿಗೆ ಕೋರೈಸುವ, ಪ್ರಕಾಶಮಾನವಾದ.

ರಾಡ್ ಬಾಕ್ಲು - ರಾಡು ಬಾಗಿಲು, ಹೆಬ್ಬಾಗಿಲು.

ರಾಮಲಕ್ಷ್ಮಣನ ಕಣಜ -ಶ್ರೀರಾಮ ಲಕ್ಷ್ಮಣನ ಹೆಸರಿನ ಕಣಜ.

ರೈಟು -?
ಲಂಡ (ಲೆಂಡ) - ಧರ್ಮಶ್ರದ್ಧೆಯಿಲ್ಲದ, ಪಾಷಂಡಿ.
ಲಕುಡಿ - ದೊಣ್ಣೆ.
ಲೊಟುಕ್ಕೆಂದು - ತಿರಸ್ಕಾರದ ಮಾತಾಡಿ.
ವಜ್ರಕುಂಡಲ - ವಯಸ್ಸಾದ ಸರ್ಪದ ಕಿವಿಯಲ್ಲಿ ಬೆಳೆಯುವುದೆಂದು ನಂಬಿದ ವಜ್ರದ ಆಭರಣ, ಕಿವಿಯ ಆಭರಣ? ಇದೊಂದು ಜನಪದ ಕವಿಸಮಯ.
ವಜ್ಜಿ - ಅಜ್ಜಿ.
ವಡದಲೆ -?
ವಡ್ಲಾಗೆ - ಮಡಿಲಲ್ಲಿ.
ವಡ್ಚು - ವಡಚು, ಒಡಚು, ಒಡಪು, ಗೂಡಾರ್ಥದ ಮಾತು. ಒಡಪನ್ನು ಬಿಡಿಸು.
ವರ್ಗ್ಹೋಗ್ಬುಟ್ಟು - ಸತ್ತರೂ, ಸತ್ತುಹೋದರೂ.
ವಳ್ಳು - ಒರಳುಕಲ್ಲು.
ವಾಟ್ರಸು - ವಾತಂರಿಸು, ನಿಭಾಯಿಸು, ಸುಧಾರಿಸು.
ವೋಟಾಗಿ - ಅಷ್ಟಾಗಿ
ಶಾಪ ಇಡು - ಬೇಡಿದ್ದು ಕೈಗೂಡಲೆಂಬ ಹರಕೆ
ಶಿವಗೋಳು - ಭಾರಿಗೊಳು, ಶಿವನಿಗೆ ಮುಟ್ಟುವಂತಹ ಗೋಳು.
ಸಂಚಕಾರ (ಚೆಂಚಕಾರ) - ಹಾನಿ, ಕೇಡು.
ಸಲ್ಲಿಸಿದ್ಲು - ಸೇವನೆ ಮಾಡಿದಳು.
ಸವಿಸಿದ್ರೆ - ತಪಸ್ಸು ಮಾಡಿದ್ರೆ?
ಸಹಬಾಜೆ - ಪಕ್ಕ, ಜೊತೆ.
ಸ್ವಪ್ಪ - ಸ್ವಲ್ಪ.
ಸಾಯ್ಕಬಡ್ತು - ಸಾಕಿತು, ಸಾಕಿಕೊಂಡಿತು.
ಸಾಯಿಗೊನ್ಸಿ ಬಿಡಬೇಕು - ಸಾಯಿಸಿಬಿಡಬೇಕು.
ಸಾಲೆಗುಡೆ - ಸಾಲೆಗುಡಿ, ಸಾಲೆಮನೆ, ಪಾಠಶಾಲೆ.
ಸಿಕ್ಬೋಡಿ - ತಲೆಗೂದಲಿನ ಸಿಕ್ಕನ್ನು ಬಿಡಿಸು.
ಸೀತಿದ್ದೆ - ಸೀಟಿದ್ದ, ಒರೆಸಿದ್ದ.
ಸೀತೆಗೋಳ್ - ಕಡುದುಃಖ. ಸೀತೆ ಮಾಡಿದಂತಹ ಶೋಕ.
ಸುಳ್ಳಿ - ಸುರುಳಿ ಸುತ್ತಿ.
ಸೂಜಿತೋರ್ಕೆ - ಸೂಜಿಯ ಗಾತ್ರಕ್ಕೆ.
ಸೂತಕದ ಬಳೆ - ಜನನ ಮರಣ ಮೊದಲಾದ ಸೂತಕದ ಸಂದರ್ಭದಲ್ಲಿ ಧರಿಸುವ ಕೈಬಳೆ.
ಹಕ್ಕೆಂದು - ಹಾಕಿಕೊಂಡು.
ಹಗ್ನು - ಕೆಸರು.
ಹರದ - ಬಿಚ್ಚಿದ .
ಹರ್ದ್ಹೋಗ್ತಾವೆ - ಹರಿದು ಹೋಗುತ್ತವೆ.
ಹಲಿಗೆ - ಹಲಿಬೆ, ಹಲುಬೆ, ಉತ್ತಹೊಲವನ್ನು ಸಮಮಾಡುವ ಪಲವು ಹಲ್ಲುಗಳುಳ್ಳ ಮರದ ಒಂದು ಉಪಕರಣ.
ಹಸ - ಸ್ವಚ್ಛ.